ರಾಷ್ಟ್ರ ಜಾಗೃತಿಯ ದೈನಿಕ
ಹೊಸ ದಿಗಂತ
ಲೋಕಹಿತಂ ಮಮ ಕರಣೀಯಂ

ಹುಬ್ಬಳ್ಳಿ
ಶನಿವಾರ, 21 ಫೆಬ್ರವರಿ 2026
ಸಂಪುಟ 15, ಸಂಚಿಕೆ 334, ಪುಟಗಳು 14
■ ಹುಬ್ಬಳ್ಳಿ ■ ಬೆಂಗಳೂರು ■ ಮಂಗಳೂರು ■ ಶಿವಮೊಗ್ಗ
₹5
RNI No.KARKAN/2011/64413
hosadigantha.com
epaper.hosadigantha.com
Hosadigantha Digital



ಪ್ಯಾಕ್ಸ್‌ಸಿಲಿಕಾ ಮೈತ್ರಿಕೂಟ ಸೇರಿದ ಭಾರತ | ೦೭
ಭಾರತದ ಬುದ್ಧಿಮತ್ತೆ ವಿಶ್ವ ದರ್ಶನ | ೦೭
ಭಾರತದ ಎಐ ಕಿಡ್ ರೌಲ್ ಜಾನ್ ಅಜು | ೦೭

ಶುಭ ದಿನ
ಕಲಿಯುಗಾಬ್ದ 5127, ವಿಶ್ವಾವಸು ಸಂವತ್ಸರ, ಉತ್ತರಾಯಣ, ಶಿಶಿರ ಋತು, ಫಾಲ್ಗುಣ ಮಾಸ, ಶುಕ್ಲ ಪಕ್ಷ, ತಿಥಿ: ಚೌತಿ, ನಕ್ಷತ್ರ: ರೇವತಿ

ದಿನದ ಮಾತು
ಆಸೆ ಇಲ್ಲದವನು ಇಡೀ ವಿಶ್ವದಲ್ಲೇ ದೊಡ್ಡ ಶ್ರೀಮಂತ.
▲ಸ್ವಾಮಿ ಶಿವಾನಂದ

ವಿಶುದ್ಧ ಎಂದರೆ ಶುದ್ಧೀಕರಣ
ಪೂರ್ಣ ಪರಿಪೂರ್ಣ
• ಪೂರ್ಣಪ್ರಜ್ಞ ಬೇಳೂರು
• ಪುಟ ೬

ಕಿರುಸುದ್ದಿ

ಮ.ಪ್ರ: ದುರ್ಗಾ ದೇಗುಲ ಧ್ವಂಸಕ್ಕೆ ಯತ್ನ, ಹಿಂಸಾಚಾರ
• ಭೋಪಾಲ್: ಮಧ್ಯಪ್ರದೇಶದ ಜಬಲ್ಪುರ ಜಿಲ್ಲೆಯಲ್ಲಿ ಗುರುವಾರ ರಾತ್ರಿ ದುರ್ಗಾ ದೇವಾಲಯವನ್ನು ಕೆಲ ಮುಸ್ಲಿಮರು ಧ್ವಂಸಗೊಳಿಸಲು ಪ್ರಯತ್ನಿಸಿದ ಹಿನ್ನೆಲೆ ಕೋಮು ಉದ್ವಿಗ್ನತೆ ಭುಗಿಲೆದ್ದಿದ್ದು, ಎರಡೂ ಗುಂಪುಗಳ ಮಧ್ಯೆ ಜಟಾಪಟಿ ನಡೆದಿದೆ. ದೇವಸ್ಥಾನದಲ್ಲಿ ಪೂಜೆ ನಡೆಯುತ್ತಿದ್ದಾಗ ಮತಾಂಧ ಯುವಕನೊಬ್ಬ ದೇವಸ್ಥಾನದ ಗ್ರಿಲ್ ಮುರಿದಿದ್ದರಿಂದ ಪ್ರತಿಭಟನೆ ಆರಂಭವಾಗಿತ್ತು. ಶಸ್ತ್ರಸಜ್ಜಿತ ಕೆಲ ಮುಸ್ಲಿಮರ ಗುಂಪೊಂದು ಹಿಂಸಾಚಾರ ಆರಂಭಿಸಿದ್ದು, ಕಲ್ಲು ತೂರಾಟ ನಡೆಸಿದೆ. ದೇವಸ್ಥಾನವನ್ನು ಧ್ವಂಸಗೊಳಿಸಲು ಪ್ರಯತ್ನಿಸಿದ ಮುಸ್ಲಿಂ ಯುವಕನಿಗೆ ಥಳಿಸಲಾಗಿದೆ. ಘಟನೆಗೆ ಸಂಬಂಧಿಸಿದಂತೆ ಈಗಾಗಲೇ ಪೊಲೀಸರು 15 ಮಂದಿಯನ್ನು ಬಂಧಿಸಿದ್ದಾರೆ. ➡ಪುಟ ೪

12ರಿಂದ 15 ಪೈಸೆ ವಿದ್ಯುತ್ ದರ ಏರಿಕೆ?
• ಬೆಂಗಳೂರು: ಆರ್ಥಿಕ ನಷ್ಟವನ್ನು ಸರಿದೂಗಿಸಲು ಹೆಚ್ಚುವರಿ ದರ ಏರಿಕೆಗೆ ರಾಜ್ಯದ ವಿದ್ಯುತ್ ಸರಬರಾಜು ಕಂಪನಿಗಳು(ಎಸ್ಕಾಂ) ಕರ್ನಾಟಕ ವಿದ್ಯುತ್ ಸುಧಾರಣಾ ಆಯೋಗಕ್ಕೆ(ಕೆಇಆರ್‌ಸಿ) ಪ್ರಸ್ತಾವನೆ ಸಲ್ಲಿಸಿವೆ. ಪ್ರಸ್ತಾವನೆ ಒಪ್ಪಿಗೆಯಾದಲ್ಲಿ ಏಪ್ರಿಲ್ 1 ರಿಂದ ಯೂನಿಟ್‌ಗೆ 12 ರಿಂದ 15 ಪೈಸೆ ಹೆಚ್ಚುವರಿ ಶುಲ್ಕ ವಿಧಿಸುವ ಸಾಧ್ಯತೆ ಇದೆ.
• ಪುಟ ೫

ಪಶ್ಚಿಮ ಬಂಗಾಳ ಸರ್ಕಾರಕ್ಕೆ ಸುಪ್ರೀಂ ಕೋರ್ಟ್ ಪಾಠ
• ಹೊಸದಿಲ್ಲಿ: ಪಶ್ಚಿಮ ಬಂಗಾಳದಲ್ಲಿನ ಮತದಾರರ ಪಟ್ಟಿಯ ಶುದ್ಧೀಕರಣಕ್ಕೆ ಸಂಬಂಧಿಸಿದ ವಿಶೇಷ ತೀವ್ರ ಪರಿಶೀಲನೆ (ಎಸ್‌ಐಆರ್) ಕಾರ್ಯಕ್ಕೆ ನೆರವಾಗುವಂತೆ ನ್ಯಾಯಾಂಗ ಅಧಿಕಾರಿಗಳನ್ನು ನೇಮಿಸಲು ಕಲ್ಕತ್ತಾ ಹೈಕೋರ್ಟ್‌ಗೆ ಸುಪ್ರೀಂ ಕೋರ್ಟ್ ನಿರ್ದೇಶಿಸಿದೆ. ರಾಜ್ಯ ಸರ್ಕಾರ ಮತ್ತು ಚುನಾವಣಾ ಆಯೋಗದ ನಡುವೆ ಆರೋಪ– ಪ್ರತ್ಯಾರೋಪಗಳ ಮುಂದುವರಿದ ಬೆನ್ನಲ್ಲೇ ಅತ್ಯರೂಪವಾದ ನಿರ್ಧಾರ ತೆಗೆದುಕೊಂಡಿದೆ.
• ಪುಟ ೭

ಅಸ್ಸಾಂಗೆ ಕೈ ಅವಧಿಯಲ್ಲಿ ನುಸುಳುಕೋರರ ಪ್ರವೇಶ
• ಪುಟ ೭

ಲವ್ ಜಿಹಾದ್: ವಿವಾಹ ನೋಂದಣಿಗೆ ಹೊಸ ಕ್ರಮ
• ಪುಟ ೭

ಸ್ನೇಹಮಯಿ ಕೃಷ್ಣ ಬಂಧನ
• ಪುಟ ೫

ಸಾಮಾಜಿಕ ನ್ಯಾಯಕ್ಕೆ ಬದ್ಧ
• ಪುಟ ೪

ಎಐ ಶೃಂಗದಲ್ಲಿ ಯುವ ಕಾಂಗ್ರೆಸ್ ಅರೆಬೆತ್ತಲೆ ಪ್ರತಿಭಟನೆ
ನಾಚಿಕೆಗೇಡಿನ ಕೃತ್ಯ



ಒದ್ದು ಓಡಿಸಿದ ಜನ
ಎಐ ಶೃಂಗದಲ್ಲಿ ಭಾಗವಹಿಸಿದ್ದ ಕೆಲವರು ಮತ್ತು ಪ್ರತಿಭಟನಾಕಾರರ ನಡುವೆ ತೀವ್ರ ವಾಗ್ವಾದ ನಡೆದಿದ್ದು, ಪ್ರತಿಭಟನಾಕಾರರನ್ನು ಅಲ್ಲಿದ್ದವರು ಒದ್ದು ಓಡಿಸಿದ ಘಟನೆ ನಡೆದಿದೆ.

ಭಾರತದ ಪ್ರತಿಷ್ಠೆ ವಿರುದ್ಧ ಪಿತೂರಿ
ಯುವಕಾಂಗ್ರೆಸಿಗರ ಶರ್ಟ್‌ರಹಿತ ಪ್ರತಿಭಟನೆಗೆ ಛೀಮಾರಿ ಹಾಕಿರುವ ಐಟಿ ಸಚಿವ ಅಮಿತ್ ಮಾಳವೀಯ, ರಾಹುಲ್ ಮತ್ತು ಕಾಂಗ್ರೆಸ್ ಭಾರತದ ಜಾಗತಿಕ ಇಮೇಜ್ ವಿರುದ್ಧ ಷಡ್ಯಂತ್ರ ಬೆಸೆಯುತ್ತಿದ್ದಾರೆ. ➡ಪುಟ ೪

• ಹೊಸದಿಲ್ಲಿ: ಯುವ ಕಾಂಗ್ರೆಸ್(ಐವೈಸಿ) ಕಾರ್ಯಕರ್ತರ ಗುಂಪೊಂದು ಶುಕ್ರವಾರ ಎಐ ಇಂಪ್ಯಾಕ್ಟ್ ಸಮಿಟ್‌ನಲ್ಲಿ ಅರೆಬೆತ್ತಲೆ ಪ್ರತಿಭಟನೆ ನಡೆಸಿ, ಸರ್ಕಾರ ಹಾಗೂ ಭಾರತ–ಅಮೆರಿಕ ವ್ಯಾಪಾರ ಒಪ್ಪಂದದ ವಿರುದ್ಧ ಘೋಷಣೆಗಳಿರುವ ಟಿ–ಶರ್ಟ್‌ಗಳನ್ನು ಹಿಡಿದು ಪ್ರದರ್ಶನ ನಡೆಸಿದ್ದು, ಈ ಘಟನೆ ಕಾಂಗ್ರೆಸ್‌ನ ನಾಚಿಕೆಗೇಡಿನ ಕೃತ್ಯ ಎಂದು ಬಿಜೆಪಿ ಟೀಕಿಸಿದೆ. ಜಾಗತಿಕ ಮಟ್ಟದಲ್ಲಿ ಭಾರತದ ಗೌರವ ಹಾಳು ಮಾಡಲು ಈ ಗದ್ದಲ ಸೃಷ್ಟಿಸಲಾಗಿದೆ ಎಂದು ದೇಶವ್ಯಾಪಿ ಆಕ್ರೋಶ ವ್ಯಕ್ತವಾಗಿದೆ. ಪ್ರಕರಣ ಸಂಬಂಧ ಪೊಲೀಸರು ನಾಲ್ವರನ್ನು ಬಂಧಿಸಿದ್ದಾರೆ.

ವ್ಯಾಪಕ ಆಕ್ರೋಶ

ಭಾರತ ಮಂಟಪದ ಎಕ್ಸಿಬಿಷನ್ ಹಾಲ್ ನಂ. 5ರಲ್ಲಿ ಈ ಘಟನೆ ನಡೆದಿದೆ. ಪ್ರಧಾನಿ ನರೇಂದ್ರ ಮೋದಿ ಹಾಗೂ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರ ಚಿತ್ರಗಳಿರುವ ಹಾಗೂ ಕೆಲವು ಬರಹಗಳಿರುವ ಬಿಳಿ ಟಿ–ಶರ್ಟ್‌ಗಳನ್ನು ಧರಿಸಿ ಅಥವಾ ಹಿಡಿದುಕೊಂಡು ಕನಿಷ್ಠ 10 ಮಂದಿ ಹಾಲ್‌ನಲ್ಲಿ ಸಂಚರಿಸಿದ್ದು, ಕೆಲಕಾಲ ಗದ್ದಲದ ವಾತಾವರಣ ನಿರ್ಮಾಣವಾಯಿತು. ಕೆಲವೇ ನಿಮಿಷಗಳಲ್ಲಿ ಭದ್ರತಾ ಸಿಬ್ಬಂದಿ ಅವರನ್ನು ಹಾಲ್‌ನಿಂದ ಹೊರಗೆ ಕರೆದೊಯ್ದರು. ಘಟನೆಯ ನಂತರ, ದಿಲ್ಲಿ ಪೊಲೀಸರು ನಾಲ್ವರು ಐವೈಸಿ ಕಾರ್ಯಕರ್ತರನ್ನು ಬಂಧಿಸಿದ್ದಾರೆ. ಇದಕ್ಕೂ ಮೊದಲು ಸುಮಾರು 10 ಮಂದಿಯನ್ನು ವಶಕ್ಕೆ ಪಡೆಯಲಾಗಿತ್ತು.

ದೇಶದ್ರೋಹಿಗಳು: ರಾಹುಲ್‌ಗಾಂಧಿ ಮತ್ತು ಕಾಂಗ್ರೆಸ್ ಟಾಪ್‌ಲೆಸ್, ಬ್ರೈನ್‌ಲೆಸ್ ಮತ್ತು ಶೇಮ್‌ಲೆಸ್‌ಗಳು. ರಾಷ್ಟ್ರದ ದ್ರೋಹಿಗಳಿವರು. ರಾಷ್ಟ್ರವು ಪ್ರಗತಿಯಾಗುವುದನ್ನು ಈ ಮಂದಿ ಸಹಿಸುವುದಿಲ್ಲ. ಇಲ್ಲೀಗ ನಡೆದಿರುವ ಎಐ ಸಮ್ಮಿಟ್ ಬಿಜೆಪಿ ಶೃಂಗಸಭೆಯಲ್ಲ ಎಂಬುದನ್ನು ಅರ್ಥ ಮಾಡಿಕೊಳ್ಳುವಷ್ಟು ಬುದ್ಧಿಮತ್ತೆ ಕೂಡ ಕಾಂಗ್ರೆಸ್‌ಗಿಲ್ಲ ಎಂದು ಬಿಜೆಪಿ ಸಂಸದ ಸಂಬಿತ್ ಪಾತ್ರಾ ತರಾಟೆಗೆತ್ತಿಕೊಂಡಿದ್ದಾರೆ. ➡ಪುಟ ೪

250 ಬಿಲಿಯನ್ ಡಾಲರ್ ಹೂಡಿಕೆ ಭರವಸೆ: ವೈಷ್ಣವ್
- ಎಐ ಇಂಪ್ಯಾಕ್ಟ್ ಶೃಂಗಕ್ಕೆ ಭಾರೀ ಯಶಸ್ಸು
- ಶೃಂಗಸಭೆಗೆ 5 ಲಕ್ಷಕ್ಕೂ ಹೆಚ್ಚು ಮಂದಿ ಭೇಟಿ
- ದಿಲ್ಲಿ ಘೋಷಣೆಗೆ 70ಕ್ಕೂ ಅಧಿಕ ರಾಷ್ಟ್ರಗಳ ಸಹಿ

• ಹೊಸದಿಲ್ಲಿ: ಭಾರತದ ಎಐ ಇಂಪ್ಯಾಕ್ಟ್ ಶೃಂಗಸಭೆಯಲ್ಲಿ ಮೂಲಸೌಕರ್ಯ ಕ್ಷೇತ್ರಕ್ಕೆ 250 ಬಿಲಿಯನ್ ಡಾಲರ್‌ಗಿಂತ ಹೆಚ್ಚು ಹೂಡಿಕೆ ಭರವಸೆಗಳು ದೊರೆತಿವೆ ಎಂದು ಕೇಂದ್ರ ಮಾಹಿತಿ ತಂತ್ರಜ್ಞಾನ ಸಚಿವ ಅಶ್ವಿನಿ ವೈಷ್ಣವ್ ಹೇಳಿದ್ದಾರೆ. ಜತೆಗೆ, ಪ್ರಸ್ತಾವಿತ ದಿಲ್ಲಿ ಘೋಷಣೆಗೆ ಈಗಾಗಲೇ 70 ದೇಶಗಳು ಬೆಂಬಲ ಸೂಚಿಸಿವೆ ಎಂದು ಹೇಳಿರುವ ಅವರು, ಶೃಂಗಸಭೆ ಭಾರೀ ಯಶಸ್ಸು ಕಂಡಿದೆ ಎಂದಿದ್ದಾರೆ. ➡ಪುಟ ೪

ಎಐ ಶೃಂಗಸಭೆ ಅತ್ಯುತ್ತಮ: ತರೂರ್
• ಹೊಸದಿಲ್ಲಿ: ದಿಲ್ಲಿಯಲ್ಲಿ ನಡೆಯುತ್ತಿರುವ ಎಐ ಶೃಂಗಸಭೆಯಲ್ಲಿ ಆರಂಭದ ದಿನ ನಡೆದ ಕೆಲವು ಲೋಪಗಳನ್ನು ಬಳಸಿಕೊಂಡು ರಾಹುಲ್ ಗಾಂಧಿ, ಮಲ್ಲಿಕಾರ್ಜುನ ಖರ್ಗೆ ಮತ್ತಿತರ ಕಾಂಗ್ರೆಸ್ ನಾಯಕರು ಎಐ ಸಮ್ಮೇಳನವನ್ನು ಅಪಹಾಸ್ಯಗೈದರೆ, ಹಿರಿಯ ಕಾಂಗ್ರೆಸ್ ನಾಯಕ ಶಶಿ ತರೂರ್ ಈ ಶೃಂಗಸಭೆ ಅತ್ಯುತ್ತಮವಾಗಿ ನಡೆಯುತ್ತಿದೆ. ದೊಡ್ಡ ಕಾರ್ಯಕ್ರಮಗಳನ್ನು ಆಯೋಜಿಸುವಾಗ ಕೆಲವು ಲೋಪಗಳು ಸಹಜವಾದುದು ಎಂದಿದ್ದಾರೆ. ➡ಪುಟ ೪

ಶಿವಾಜಿ ಮೆರವಣಿಗೆ ಮೇಲೆ ಮಸೀದಿ ಕಡೆಯಿಂದ ಕಲ್ಲು
ಹಿಂದುಗಳ ಆಕ್ರೋಶ | ಬಾಗಲಕೋಟೆ ಪ್ರಕ್ಷುಬ್ಧ





• ಬಾಗಲಕೋಟೆ: ಛತ್ರಪತಿ ಶಿವಾಜಿ ಮಹಾರಾಜರ ಜಯಂತಿ ನಿಮಿತ್ತ ಗುರುವಾರ ರಾತ್ರಿ ಹಳೆ ಬಾಗಲಕೋಟೆಯಲ್ಲಿ ನಡೆದ ಮೆರವಣಿಗೆ ಸಂದರ್ಭದಲ್ಲಿ ಕಲ್ಲು ಹಾಗೂ ಚಪ್ಪಲಿ ತೂರಲಾಗಿದ್ದು, ಹಿಂದುಗಳಿಂದ ವ್ಯಾಪಕ ಆಕ್ರೋಶ ವ್ಯಕ್ತವಾಗಿದೆ. ಪ್ರಕರಣ ಸಂಬಂಧ ಪೊಲೀಸರು ಎಂಟು ಆರೋಪಿಗಳನ್ನು ಬಂಧಿಸಿ, ಭಾರೀ ಬಂದೋಬಸ್ತ್ ಮಾಡಿದ್ದರೂ ಬಾಗಲಕೋಟೆ ನಗರ ಅಕ್ಷರಶಃ ಬೂದಿ ಮುಚ್ಚಿದ ಕೆಂಡದಂತಿದೆ.

ಛತ್ರಪತಿ ಶಿವಾಜಿ ಮಹಾರಾಜರ ಜಯಂತಿ ನಿಮಿತ್ತ ಗುರುವಾರ ರಾತ್ರಿ ನಗರದ ಅಂಬಾಭವಾನಿ ದೇವಸ್ಥಾನದಿಂದ ಭವ್ಯ ಮೆರವಣಿಗೆ ಆಯೋಜಿಸಲಾಗಿತ್ತು. ಮೆರವಣಿಗೆ ಸಂಚರಿಸುವ ಸಂದರ್ಭದಲ್ಲಿ ಪಂಕಾ ಮಸೀದಿಯಲ್ಲಿ ಜಮಾಯಿಸಿದ್ದ ಜನರಿಂದ ಕಲ್ಲು ತೂರಾಟ ಹಾಗೂ ಚಪ್ಪಲಿ ಎಸೆತದಿಂದ ಬಾಗಲಕೋಟೆಯಲ್ಲಿ ಪ್ರಕ್ಷುಬ್ಧ ವಾತಾವರಣ ಸೃಷ್ಟಿಯಾಗಿದೆ. ಘಟನೆಗೆ ನಗರದಲ್ಲಿ ಅಷ್ಟೇ ಅಲ್ಲದೇ, ಜಿಲ್ಲೆ ಹಾಗೂ ರಾಜ್ಯದ ವಿವಿಧ ಭಾಗದಲ್ಲಿ ಹಿಂದು ಸಂಘಟನೆಯವರು ಆಕ್ರೋಶ ಹೊರ ಹಾಕಿದ್ದು, ವ್ಯಾಪಕವಾಗಿ ಖಂಡಿಸಿದ್ದಾರೆ. ➡ಪುಟ ೪

ಬಾಗಲಕೋಟೆ, ಮುಧೋಳ ಬಂದ್
ಬಾಗಲಕೋಟೆ ನಗರ ಹಾಗೂ ಮುಧೋಳದಲ್ಲಿ ಅಂಗಡಿ ಮುಂಗಟ್ಟುಗಳನ್ನು ಬಂದ್ ಮಾಡಲಾಗಿತ್ತು. ಕಲ್ಲು ತೂರಾಟ ಘಟನೆ ನಡೆದ ಹಿನ್ನೆಲೆಯಲ್ಲಿ ಬಾಗಲಕೋಟೆ ಎಸಿ 3 ದಿನ ಕಲಂ 163ರ ಅನ್ವಯ ನಿಷೇಧಾಜ್ಞೆ ಜಾರಿ ಮಾಡಿ ಆದೇಶ ಹೊರಡಿಸಿದ್ದಾರೆ.

ಎಂಟು ಜನರ ಬಂಧನ
ಹಳೆ ಬಾಗಲಕೋಟೆ ನಗರದಲ್ಲಿ ಛತ್ರಪತಿ ಶಿವಾಜಿ ಮಹಾರಾಜರ ಜಯಂತಿ ಅಂಗವಾಗಿ ನಡೆಯುತ್ತಿದ್ದ ಭವ್ಯ ಶೋಭಾಯಾತ್ರೆಯಲ್ಲಿ ಕಲ್ಲು ತೂರಾಟ ಹಾಗೂ ಚಪ್ಪಲಿ ಎಸೆತ ಪ್ರಕರಣಕ್ಕೆ ಸಂಬಂಧಿಸಿದಂತೆ ಎಂಟು ಜನರನ್ನು ಪೊಲೀಸರು ಬಂಧಿಸಿದ್ದಾರೆ. ➡ಪುಟ ೪

ಕಠಿಣ ಕ್ರಮಕ್ಕೆ ಸಿಎಂ ಆದೇಶ
• ಬೆಂಗಳೂರು: ಬಾಗಲಕೋಟೆಯಲ್ಲಿ ನಡೆದ ಕಲ್ಲುತೂರಾಟ ಘಟನೆಯು ಸಮಾಜದ ಶಾಂತಿ, ಸೌಹಾರ್ದತೆಗೆ ಮಾರಕ. ಇದನ್ನು ನಾನು ಮತ್ತು ನಮ್ಮ ಸರ್ಕಾರ ಬಲವಾಗಿ ಖಂಡಿಸುತ್ತದೆ. ಘಟನೆಯ ಬಗ್ಗೆ ಹಿರಿಯ ಪೊಲೀಸ್ ಅಧಿಕಾರಿಗಳ ಬಳಿ ಚರ್ಚಿಸಿದ್ದು, ನಿಷ್ಪಕ್ಷಪಾತ ತನಿಖೆ ನಡೆಸಿ, ದುಷ್ಕೃತ್ಯ ಎಸಗಿದ ಪುಂಡರಿಗೆ ಕಾನೂನಿನ ಮೂಲಕ ತಕ್ಕ ಉತ್ತರ ನೀಡುವಂತೆ ಮುಖ್ಯಮಂತ್ರಿ ಸಿದ್ದರಾಮಯ್ಯ ಸೂಚಿಸಿದ್ದಾರೆ. ➡ಪುಟ ೪



ಒದ್ದು ಒಳಗೆ ಹಾಕಿ: ಬಿಜೆಪಿ
• ಬೆಂಗಳೂರು: ಬಾಗಲಕೋಟೆಯಲ್ಲಿ ಶಿವಾಜಿ ಜಯಂತಿಯ ಸಂದರ್ಭದಲ್ಲಿ ಮೆರವಣಿಗೆ ಮೇಲೆ ಕಲ್ಲು ತೂರಾಟ ನಡೆಸಿದವರನ್ನು ಒದ್ದು ಒಳಗೆ ಹಾಕಿ ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಒತ್ತಾಯಿಸಿದರು. ➡ಪುಟ ೪

ಮಂಗಳೂರಿನಲ್ಲಿ ರಾಷ್ಟ್ರಮಟ್ಟದ 'ಸರಸ್ ಮೇಳ'ಕ್ಕೆ ಚಾಲನೆ
ಮಹಿಳಾ ಕೇಂದ್ರಿತ ಯೋಜನೆಗೆ ಒತ್ತು

• ಮಂಗಳೂರು: ರಾಜ್ಯ ಸರ್ಕಾರ ಪ್ರತಿ ವರ್ಷ ಗ್ರಾಮ ಪಂಚಾಯತ್ ಮಟ್ಟದ ಒಕ್ಕೂಟಗಳಿಗೆ ಸುತ್ತುನಿಧಿ ಬಂಡವಾಳ ಒದಗಿಸುತ್ತಿದ್ದು, ಮಂಗಳೂರಿಗೆ ಇದುವರೆಗೆ 70 ಕೋಟಿ ರೂ. ಒದಗಿಸಲಾಗಿದೆ ಎಂದು ವೈದ್ಯಕೀಯ ಶಿಕ್ಷಣ ಮತ್ತು ಕೌಶಲ್ಯಾಭಿವೃದ್ಧಿ ಸಚಿವ ಡಾ.ಶರಣ ಪ್ರಕಾಶ್ ಪಾಟೀಲ್ ಹೇಳಿದರು.

ಮಂಗಳೂರಿನ ಕರಾವಳಿ ಉತ್ಸವ ಮೈದಾನದಲ್ಲಿ ಫೆ.28 ರವರೆಗೆ ಹಮ್ಮಿಕೊಂಡಿರುವ ರಾಷ್ಟ್ರಮಟ್ಟದ 'ಸರಸ್ ಮೇಳ' ಸ್ವಸಹಾಯ ಗುಂಪಿನ ಮಹಿಳೆಯರ ಉತ್ಪನ್ನಗಳ ವಸ್ತು ಪ್ರದರ್ಶನ, ಮಾರಾಟ ಮೇಳದಲ್ಲಿ ಶುಕ್ರವಾರ ಪಾಲ್ಗೊಂಡು ಮಾತನಾಡಿದ ಅವರು, ಪ್ರತಿಯೊಂದು ಸಂಘಕ್ಕೆ 1.50 ಲಕ್ಷ ರೂ. ಬಂಡವಾಳ ನೀಡಲಾಗುತ್ತದೆ. ರಾಜ್ಯದಲ್ಲಿ 5000ಕ್ಕೂ ಅಧಿಕ ಗ್ರಾಮ ಪಂಚಾಯತ್ ಮಟ್ಟದ ಒಕ್ಕೂಟಗಳಿವೆ. ಒಕ್ಕೂಟಗಳಿಂದ ಹಲವು ಸವಲತ್ತುಗಳ ಮೂಲಕ ಸಬಲೀಕರಣಗೊಳಿಸುವ ಕಾರ್ಯ ನಡೆಯುತ್ತಿದೆ ಎಂದರು. ➡ಪುಟ ೪



ಏನೆಲ್ಲಾ ಇದೆ? ಒಡಿಶಾ, ಚಂಡೀಗಢ, ಕೇರಳ, ಅಸ್ಸಾಂ, ಪ.ಬಂಗಾಳ, ತೆಲಂಗಾಣ, ಆಂಧ್ರ, ಉತ್ತರ ಪ್ರದೇಶ ಸೇರಿದಂತೆ ವಿವಿಧ ರಾಜ್ಯಗಳು, ಕರ್ನಾಟಕದ ವಿವಿಧ ಜಿಲ್ಲೆಗಳ ಸ್ವಸಹಾಯ ಸಂಘಗಳ ಗುಂಪುಗಳ ಉತ್ಪನ್ನಗಳು ಪ್ರದರ್ಶನದಲ್ಲಿವೆ. ➡ಪುಟ ೪

ಪೇಜಾವರ ಮಠದ ಶ್ರೀ ವಿಶ್ವಪ್ರಸನ್ನ ತೀರ್ಥ ಶ್ರೀಪಾದರ ಆತಂಕ
ಹಿಂದುಗಳ ಮೇಲೆ ನಿಲ್ಲದ ದೌರ್ಜನ್ಯ

• ದಾವಣಗೆರೆ: ಬಾಂಗ್ಲಾದೇಶದಲ್ಲಿ ಹಿಂದುಗಳ ಮೇಲೆ ದಿನಂಪ್ರತಿ ದೌರ್ಜನ್ಯ ನಡೆಯುತ್ತಿದೆ. ಭಾರತದ ಹಿಂದುಗಳ ಸ್ಥಿತಿ ಕೂಡ ಇದಕ್ಕಿಂತ ಭಿನ್ನವಾಗಿ ಏನು ಇಲ್ಲ ಎಂದು ಪೇಜಾವರ ಮಠದ ಶ್ರೀ ವಿಶ್ವಪ್ರಸನ್ನ ತೀರ್ಥ ಶ್ರೀಪಾದರು ಆತಂಕ ವ್ಯಕ್ತಪಡಿಸಿದ್ದಾರೆ.



ನಗರದಲ್ಲಿ ಶುಕ್ರವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಬಾಂಗ್ಲಾದೇಶದಲ್ಲಿ ಹಿಂದುಗಳು ಹಿಂಸೆ, ಹಲ್ಲೆ, ಹತ್ಯೆಗಳಿಂದ ನಲುಗುತ್ತಿದ್ದಾರೆ. ಭಾರತದಲ್ಲೂ ಹಿಂದುಗಳ ಮೇಲೆ ದಾಳಿಯಾಗುತ್ತಿದೆ. ಕೇಂದ್ರ ಸರ್ಕಾರ ಹಿಂದುಗಳ ರಕ್ಷಣೆಗೆ ತ್ವರಿತ ಕ್ರಮ ಕೈಗೊಳ್ಳಬೇಕೆಂಬುದು ನಮ್ಮ ಆಶಯವಾಗಿದೆ. ಆದರೆ ಸರ್ಕಾರದೊಳಗಿನ ಸಮಸ್ಯೆ, ಒತ್ತಡಗಳು ಏನಿವೆಯೋ ಗೊತ್ತಿಲ್ಲ ಎಂದು ಅವರು ಸೂಚ್ಯವಾಗಿ ಹೇಳಿದರು.

ಕೇಂದ್ರ ಬದ್ಧತೆ ಪ್ರದರ್ಶಿಸಲಿ: ದೇಶಾದ್ಯಂತ ಗೋಹತ್ಯೆ ನಿಷೇಧಿಸುವಲ್ಲಿ ಕೇಂದ್ರ ಸರ್ಕಾರ ತನ್ನ ಬದ್ಧತೆ ತೋರಿಸಬೇಕು. ಗೋವು ಹಿಂದುಗಳ ಆರಾಧ್ಯದೈವವಾಗಿದ್ದು, ದೇಶದಲ್ಲಿ ಗೋಹತ್ಯೆ ನಿಷೇಧ ಆಗಬೇಕೆಂಬುದು ಪ್ರತಿಯೊಬ್ಬ ಹಿಂದುವಿನ ಆಶಯ. ಆದ್ದರಿಂದ ಗೋಹತ್ಯೆ ನಿಷೇಧಕ್ಕೆ ಸರ್ಕಾರ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಬೇಕೆಂದು ಆಗ್ರಹಿಸಿದರು. ➡ಪುಟ ೪

ವೇದಾಧ್ಯಯನ ಕೇಂದ್ರ ತೆರೆಯಲು ಕ್ರಮ: ಶ್ರೀ
ಮಕ್ಕಳಿಗೆ ಚಿಕ್ಕಂದಿನಲ್ಲೇ ಉತ್ತಮ ಸಂಸ್ಕಾರ, ಶಿಕ್ಷಣ ಸಿಗಬೇಕು. ಈ ದಿಸೆಯಲ್ಲಿ ರಾಜ್ಯದ ವಿವಿಧೆಡೆ ವೇದಾಧ್ಯಯನಕ್ಕೆ ಅನುಕೂಲ ಕಲ್ಪಿಸುವ ಉದ್ದೇಶವಿದೆ. ದಾವಣಗೆರೆ ಭಾಗದಲ್ಲೂ ಸೂಕ್ತ ಸ್ಥಳಾವಕಾಶ ಸಿಕ್ಕರೆ ವೇದಾಧ್ಯಯನ ಕೇಂದ್ರ ತೆರೆಯಲು ಕ್ರಮ ವಹಿಸಲಾಗುವುದು ಎಂದು ಪೇಜಾವರ ಶ್ರೀ ತಿಳಿಸಿದರು.

ಟ್ರಂಪ್ ಸುಂಕ ರದ್ದು
- ಸುಪ್ರೀಂ ಕೋರ್ಟ್‌ನಿಂದ ಮಹತ್ವದ ಆದೇಶ
- ತುರ್ತು ಪರಿಸ್ಥಿತಿ ಅಧಿಕಾರ ಬಳಕೆ ಸಲ್ಲದು
- ಭಾರತ, ಬ್ರೆಜಿಲ್ ಸೇರಿ ಎಲ್ಲ ದೇಶಗಳಿಗೆ ಲಾಭ ಸಾಧ್ಯತೆ

• ವಾಷಿಂಗ್ಟನ್: ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು ಏಕಪಕ್ಷೀಯವಾಗಿ ಹಲವಾರು ದೇಶಗಳ ಮೇಲೆ ವ್ಯಾಪಕ ಸುಂಕವನ್ನು ವಿಧಿಸುವ ಮೂಲಕ ಫೆಡರಲ್ ಕಾನೂನನ್ನು ಉಲ್ಲಂಘಿಸಿದ್ದಾರೆ ಎಂದು ಅಮೆರಿಕ ಸುಪ್ರೀಂ ಕೋರ್ಟ್ ಶುಕ್ರವಾರ ತೀರ್ಪು ನೀಡಿದೆ.

ಮುಖ್ಯ ನ್ಯಾ.ಜಾನ್ ರಾಬರ್ಟ್ಸ್ ಈ ವಿಷಯದ ಬಗ್ಗೆ ಬಹುಮತದ ತೀರ್ಪನ್ನು ಬರೆದರು. ಭಾರತ ಮತ್ತು ಬ್ರೆಜಿಲ್‌ನಂತಹ ಪ್ರಮುಖ ವ್ಯಾಪಾರ ಪಾಲುದಾರರ ಮೇಲೆ ಶೇ.50ರಷ್ಟು ಸುಂಕವನ್ನು ಹೆಚ್ಚಿಸಿದ ಕ್ರಮಗಳು ಕಾನೂನನ್ನು ಮೀರಿವೆ ಎಂದು ನ್ಯಾಯಾಲಯವು 6–3ರ ಬಹುಮತದಿಂದ ಒಪ್ಪಿಕೊಂಡಿತು. ➡ಪುಟ ೪



ನಂದಿನಿ ನಕಲಿ ತುಪ್ಪಕ್ಕೆ ಕಡಿವಾಣ ಹಾಕಲು ಕೆಎಂಎಫ್ ಕ್ರಮ
ತುಪ್ಪದ ಪ್ಯಾಕ್‌ಗೆ ಕ್ಯುಆರ್ ಕೋಡ್

• ಬೆಂಗಳೂರು: ನಂದಿನಿ ಹೆಸರಲ್ಲಿ ನಕಲಿ ತುಪ್ಪಕ್ಕೆ ಕಡಿವಾಣ ಹಾಕಲು ಮುಂದಾಗಿರುವ ಕರ್ನಾಟಕ ಹಾಲು ಒಕ್ಕೂಟ (ಕೆಎಂಎಫ್), ತುಪ್ಪದ ಪ್ಯಾಕ್‌ಗಳ ಮೇಲೆ ಕ್ಯುಆರ್ ಕೋಡ್ ಜಾರಿ ಮಾಡಲು ಸಿದ್ಧತೆ ನಡೆಸಿದೆ.

ನಂದಿನಿ ಉತ್ಪನ್ನಗಳು ಕನ್ನಡಿಗರ ಸ್ವಾಭಿಮಾನ, ಕನ್ನಡಿಗರ ಭಾವನೆಯಾಗಿದೆ. ಇತ್ತೀಚಿನ ದಿನಗಳಲ್ಲಿ ನಂದಿನಿ ಬ್ರ್ಯಾಂಡ್ ಹೆಸರಲ್ಲಿ ನಕಲಿ ಉತ್ಪನ್ನಗಳು ಮಾರುಕಟ್ಟೆಗೆ ಲಗ್ಗೆ ಇಟ್ಟಿವೆ. ಇದರಿಂದ ಎಚ್ಚೆತ್ತಿರುವ ಕೆಎಂಎಫ್ ಅಧಿಕಾರಿಗಳು ನಕಲಿ ಉತ್ಪನ್ನಗಳಿಗೆ ಕಡಿವಾಣ ಹಾಕಲು ಮುಂದಾಗಿದ್ದಾರೆ.



ಕೆಲವು ದಿನಗಳ ಹಿಂದೆ ನಂದಿನಿ ತುಪ್ಪದ ಬಗ್ಗೆ ಆರೋಪ ಸಹ ಕೇಳಿ ಬಂದಿತ್ತು. ಆದ್ದರಿಂದ ನಂದಿನಿ ಉತ್ಪನ್ನದ ಗುಣಮಟ್ಟ ಮತ್ತು ನಂಬಿಕೆಯನ್ನು ಉಳಿಸಿಕೊಳ್ಳಲು ಕೆಎಂಎಫ್ ಈಗ ನಂದಿನಿ ತುಪ್ಪದ ಪ್ಯಾಕೆಟ್ ಮೇಲೆ ಕ್ಯುಆರ್ ಕೋಡ್ ಜಾರಿ ಮಾಡಲು ಮುಂದಾಗಿದೆ. ಗ್ರಾಹಕರು ಕ್ಯುಆರ್ ಕೋಡ್ ಸ್ಕ್ಯಾನ್ ಮಾಡಿ, ಒಟಿಪಿ ಪರಿಶೀಲನೆ ಮೂಲಕ ಉತ್ಪನ್ನದ ಮೂಲ, ಉತ್ಪಾದನಾ ದಿನಾಂಕ ಮತ್ತು ದೃಢೀಕರಣದ ಬಗ್ಗೆ ಸ್ಪಷ್ಟ ಮಾಹಿತಿ ಪಡೆದುಕೊಳ್ಳಬಹುದಾಗಿದೆ. ➡ಪುಟ ೪

ಕ್ಯುಆರ್ ಕೋಡ್‌ನಲ್ಲಿ ಒದಗಿಸಲಾದ ವಿವರಗಳು
- ಉತ್ಪಾದನಾ ಸ್ಥಳ
- ಉತ್ಪಾದನಾ ದಿನಾಂಕ
- ಮಾರುಕಟ್ಟೆ ಬಿಡುಗಡೆ ದಿನಾಂಕ
- ಮಾರುಕಟ್ಟೆ ಗುರುತಿನ ಕೋಡ್

ಹೇಗೆ ಕೆಲಸ ಮಾಡುತ್ತದೆ?
ಪ್ರತಿಯೊಂದು ತುಪ್ಪದ ಪ್ಯಾಕೆಟ್ ಮತ್ತು ಬಾಟಲಿ ಮೇಲೆ ವಿಶಿಷ್ಟವಾದ ಕ್ಯುಆರ್ ಕೋಡ್ ಮುದ್ರಿಸಲಾಗುವುದು. ಗ್ರಾಹಕರು ಉತ್ಪನ್ನದ ಸತ್ಯಾಸತ್ಯತೆ ಪರಿಶೀಲಿಸಲು ತಮ್ಮ ಸ್ಮಾರ್ಟ್‌ಫೋನ್ ಮೂಲಕ ಕ್ಯುಆರ್ ಕೋಡ್ ಸ್ಕ್ಯಾನ್ ಮಾಡಬಹುದು. ಸ್ಕ್ಯಾನ್ ಮಾಡಿದ ನಂತರ ಗ್ರಾಹಕರು ಪರದೆ ಮೇಲೆ ಪ್ರದರ್ಶಿಸಲಾದ ನಿರ್ದಿಷ್ಟ ಸಂಖ್ಯೆ ನಮೂದಿಸಬೇಕು. ಸಂಖ್ಯೆ ಸಲ್ಲಿಸಿದ ನಂತರ ಫೋನ್‌ಗೆ ಒಟಿಪಿ ಕಳುಹಿಸಲಾಗುತ್ತದೆ. ➡ಪುಟ ೪

ಸಂಗೊಳ್ಳಿ ರಾಯಣ್ಣ ಪ್ರತಿಮೆಗೆ ಅಪಮಾನ
• ಬೆಳಗಾವಿ: ಯಾರೋ ಕಿಡಿಗೇಡಿಗಳು ಮಚ್ಚೆ ಗ್ರಾಮದಲ್ಲಿರುವ ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ಅವರ ಪ್ರತಿಮೆಗೆ ಯಾವುದೋ ಪದಾರ್ಥ ಹಚ್ಚಿ ಅಪಮಾನ ಮಾಡಿರುವ ಘಟನೆ ಗುರುವಾರ ತಡರಾತ್ರಿ ನಡೆದಿದೆ.



ಕೂಡಲೇ ಘಟನಾ ಸ್ಥಳಕ್ಕೆ ದೌಡಾಯಿಸಿದ ಪೊಲೀಸರು ಪರಿಶೀಲನೆ ನಡೆಸಿದ್ದಾರೆ. ಮಚ್ಚೆ ಗ್ರಾಮದಲ್ಲಿ ಬಿಗುವಿನ ವಾತಾವರಣ ನಿರ್ಮಾಣವಾಗಿದೆ. ಪ್ರತಿಮೆ ಮೇಲಿದ್ದ ಪದಾರ್ಥದ ಮಾದರಿಯನ್ನು ಸಂಗ್ರಹಿಸಿ ಫೊರೆನ್ಸಿಕ್ ಪರೀಕ್ಷೆಗೆ ಕಳುಹಿಸಲಾಗಿದೆ. ಸ್ಥಳದ ಸಮೀಪದಲ್ಲೇ ಸುಮಾರು 10 ಮೀಟರ್ ದೂರದಲ್ಲಿ ಸಿಸಿ ಟಿವಿ ಕ್ಯಾಮೆರಾ ಇರುವುದರಿಂದ ಅದರ ದೃಶ್ಯಾವಳಿಗಳನ್ನು ಪೊಲೀಸರು ಪರಿಶೀಲನೆ ನಡೆಸಿದ್ದಾರೆ. ಈ ಕೃತ್ಯದ ಬಗ್ಗೆ ದೂರುದಾರರನ್ನು ವಿಚಾರಣೆಗೊಳಪಡಿಸಲಾಗಿದೆ. ➡ಪುಟ ೪

ಬೆಳ್ಳಿ ಬಂಗಾರ (ಬೆಂಗಳೂರು) ಬೆಳ್ಳಿ: **2,70,000**(2,70,000) ಅಪರಂಜಿ ಚಿನ್ನ: **1,57,370**(1,56,490) ಆಭರಣ ಚಿನ್ನ: **1,44,250**(1,43,450) ಚಿನ್ನ 10 ಗ್ರಾಂ.ಗೆ, ಬೆಳ್ಳಿ 1 ಕೆ.ಜಿಗೆ, ರೂ.ಗಳಲ್ಲಿ (ಆವರಣದಲ್ಲಿ ಹಿಂದಿನ ದಿನದ ದರ) | **ಷೇರು ಸೂಚ್ಯಂಕ** ಬಿಎಸ್‌ಇ **82,814**(316↑) ಎನ್‌ಎಸ್‌ಇ **25,571**(116↑) | $1 = ₹90.68

ಕಿರುಸುದ್ದಿ

ವಿದ್ಯುತ್ ಗ್ರಾಹಕರ ಸಭೆ

ಧಾರವಾಡ: ಹೆಸ್ಕಾಂ ಗ್ರಾಹಕರ ಕುಂದುಕೊರತೆಗಳ ಸಭೆ ಫೆ.21ರ ಮಧ್ಯಾಹ್ನ 3ಕ್ಕೆ ನಗರದ ವಿಜಯಾ ರಸ್ತೆಯ ಹೆಸ್ಕಾಂನ ಶಹರ ಉಪ ವಿಭಾಗ-2 ಕಚೇರಿಯಲ್ಲಿ ಸಹಾಯಕ ಕಾರ್ಯನಿರ್ವಾಹಕ ಎಂಜಿನೀಯರ್ ದೇವರಾಜ ಹೆಗಡೆ ಅಧ್ಯಕ್ಷತೆಯಲ್ಲಿ ಜರುಗಲಿದೆ ಎಂದು ಹೆಸ್ಕಾಂನ ಉಪ ವಿಭಾಗ-2 ರ ಸಹಾಯಕ ಕಾರ್ಯನಿರ್ವಾಹಕ ಎಂಜಿನಿಯರ್ (ವಿ) ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಇಂದು ಕಲೋತ್ಸವ

ಹುಬ್ಬಳ್ಳಿ: ಕರ್ನಾಟಕ ರಾಜ್ಯ ಅಲೆಮಾರಿ ಮತ್ತು ಅರೆ ಅಲೆಮಾರಿ ಜನಾಂಗಗಳ ಒಕ್ಕೂಟದ ವತಿಯಿಂದ ಅಲೆಮಾರಿ ಸಾಹಿತ್ಯ, ಸಾಂಸ್ಕೃತಿಕ ಕಲೋತ್ಸವ ಕಾರ್ಯಕ್ರಮವನ್ನು ಫೆ.21 ರಂದು ಬೆಳಗ್ಗೆ 9 ರಿಂದ ಸಂಜೆ 5 ರವರೆಗೆ ದೇಶಪಾಂಡೆ ನಗರದ ಸವಾಯಿ ಗಂಧರ್ವ ಸಭಾಂಗಣದಲ್ಲಿ ಹಮ್ಮಿಕೊಳ್ಳಲಾಗಿದೆ ಎಂದು ಒಕ್ಕೂಟದ ಗೌರಾವಾಧ್ಯಕ್ಷ ಕೆ.ರವೀಂದ್ರ ಶೆಟ್ಟಿ ಉಳಿದೊಟ್ಟು ಹೇಳಿದರು.

ನಗರದಲ್ಲಿ ಶುಕ್ರವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಕಾರ್ಯಕ್ರಮದ ಉದ್ಘಾಟನಾ ಸಮಾರಂಭದಲ್ಲಿ ಕೂಡಲಸಂಗಮದ ಬಸವ ಮೃತ್ಯುಂಜಯ ಸ್ವಾಮೀಜಿ, ಕಡತಾಳ ಈಡಿಗ ಮಠದ ಪ್ರಣವಾನಂದ ಸ್ವಾಮೀಜಿ, ಹುಬ್ಬಳ್ಳಿಯ ಅಮ್ಮ ಆರೂಢ ಗುರು ಪೀಠ ಯೋಗಾಶ್ರಮದ ರಾಘವೇಂದ್ರ ಗುರೂಜಿ, ವಿಜಯಪುರ ರಾವ್ಳ ದೊಂದಿಬಾ ಕಾಳೆ ಗುರೂಜಿ ಸಾನ್ನಿಧ್ಯ ವಹಿಸುವರು. ವಿಧಾನ ಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ, ಕೇಂದ್ರ ಸಚಿವ ಪ್ರಹ್ಲಾದ ಜೋಶಿ, ಸಚಿವ ಸಂತೋಷ ಲಾಡ್ ಸೇರಿದಂತೆ ಮೊದಲಾದವರು ಆಗಮಿಸಲಿದ್ದಾರೆ. ಸಂಜೆ 5.30ಕ್ಕೆ ಸಮಾರೋಪ ಸಮಾರಂಭ ನಡೆಯಲಿದೆ ಎಂದರು.

ಅಂದು ನಡೆಯುವ ಕಾರ್ಯಕ್ರಮದಲ್ಲಿ ಪ್ರತಿಭಾ ಪುರಸ್ಕಾರ, ಸಾಧಕರಿಗೆ ಸನ್ಮಾನ, ವಿಚಾರಗೋಷ್ಠಿ, ಅಲೆಮಾರಿ ಜನರು ಎದುರಿಸುತ್ತಿರುವ ಸಮಸ್ಯೆಗಳ ಬಗ್ಗೆ ಚರ್ಚಿಸಿ, ನಿರ್ಣಯ ಮಂಡಿಸಿ ಸರ್ಕಾರಕ್ಕೆ ವರದಿ ಸಲ್ಲಿಸಲಾಗುವುದು ಎಂದರು. ರಾಘವೇಂದ್ರ ಗುರೂಜಿ, ಶಿವಾಜಿ ಮರ್ಧುಕರ, ದಶರಥ ವಾಲಿ, ಮೂಕಾಂಬಿಕಾ ದಾಸ್, ಹರೀಶ ಜಂಗ್ಲಿ ಇದ್ದರು.

ಎಸ್‌ಎಲ್‌ಪಿ ಸಲ್ಲಿಸಿ

ಹುಬ್ಬಳ್ಳಿ: ಬೈಕ್ ಟ್ಯಾಕ್ಸಿಗೆ ಯಾವುದೇ ಸ್ಪಷ್ಟ ಹಾಗೂ ನೇರ ಅನುಮತಿ ಇಲ್ಲದಿದ್ದರೂ ಹೈಕೋರ್ಟ್ ಅವರಿಗೆ ಅನುಕೂಲವಾಗುವಂತೆ ತೀರ್ಪು ನೀಡಿದ್ದು, ಇದರ ವಿರುದ್ಧ ಕೇಂದ್ರ ಸರ್ಕಾರ ಸುಪ್ರೀಂ ಕೋರ್ಟ್‌ನಲ್ಲಿ ಎಸ್ ಎಲ್‌ಪಿ (ಸ್ಪೆಷಲ್ ಲೀವ್ ಪಿಟಿಶನ್) ಸಲ್ಲಿಸಬೇಕು ಎಂದು ಇಂಡಿಯನ್ ಮೆಕಲ್ ಡ್ರೈವರ್ ಟ್ರೇಡ್ ಯೂನಿಯನ್ ಹಾಗೂ ಸ್ನೇಹ ಜೀವಿ ಚಾಲಕರ ಟ್ರೇಡ್ ಯೂನಿಯನ್ ಹಾಗೂ ಟೌನರ್ ಫೌಂಡೇಶನ್ ಆಗ್ರಹಿಸಿವೆ. ನಗರದಲ್ಲಿ ಗುರುವಾರ ಸುದ್ದಿಗೋಷ್ಠಿಯಲ್ಲಿ ಸ್ನೇಹ ಜೀವಿ ಚಾಲಕರ ಟ್ರೇಡ್ ಯೂನಿಯನ್ ರಾಜ್ಯಾಧ್ಯಕ್ಷ ಎನ್.ಜಿ. ಸಂತೋಷ ಕುಮಾರ ಮಾತನಾಡಿ, ಮೋಟಾರ್ ವಾಹನಗಳ ಕಾಯ್ದೆ 1988ರ ಅಡಿ ಬೈಕ್ ಟ್ಯಾಕ್ಸಿಗೆ ಅನುಮತಿ ಇಲ್ಲ. ಅಪಘಾತಗಳ ಅಂಕಿ-ಅಂಶಗಳ ಪ್ರಕಾರ ಬೈಕ್ ಅಪಘಾತಗಳ ಸಂಖ್ಯೆ ಹೆಚ್ಚಿವೆ. ಬೈಕ್ ಟ್ಯಾಕ್ಸಿಗಳು ಪರವಾನಗಿ ಪಡೆಯುವುದು ಮೂಲಭೂತ ಹಕ್ಕು ಅಲ್ಲ ಎಂದು ಸುಪ್ರೀಂ ಕೋರ್ಟ್ ಹಲವು ತೀರ್ಪುಗಳಲ್ಲಿ ಸ್ಪಷ್ಟಪಡಿಸಿದೆ. ರಾಜ್ಯ ಸರ್ಕಾರಕ್ಕೆ ಸಾರ್ವಜನಿಕರ ಹಿತಾಸಕ್ತಿಗಾಗಿ ಸಾರಿಗೆ ವ್ಯವಸ್ಥೆ ನಿಯಂತ್ರಿಸಲು ಸಂಪೂರ್ಣ ಅಧಿಕಾರವಿದೆ. ಆಟೋ ರಿಕ್ಷಾ ಚಾಲಕರಿಗೆ ಜೀವನಕ್ಕೆ ಹೊಡೆತ ಬೀಳಲಿದ್ದು, ಇದನ್ನು ನಂಬಿ ಜೀವನ ನಡೆಸುವ 25 ಲಕ್ಷಕ್ಕೂ ಹೆಚ್ಚು ಚಾಲಕ ಕುಟುಂಬಗಳು ಆರ್ಥಿಕ ಸಂಕಷ್ಟ ಎದುರಿಸಲಿವೆ. ಕೇಂದ್ರ ಸರ್ಕಾರ ಸಮಸ್ಯೆ ಪರಿಹರಿಸಬೇಕು ಎಂದು ಆಗ್ರಹಿಸಿದರು.

ಕೃತಿ ಬಿಡುಗಡೆ ಇಂದು

ಹುಬ್ಬಳ್ಳಿ: ಮೂಲತಃ ಹುಬ್ಬಳ್ಳಿಯ ಸದ್ಯ ಯುಎಇ ಶಾರ್ಜಾದಲ್ಲಿ ನೆಲೆಸಿರುವ ಉದ್ಯಮಿ ಡಾ. ಆಲ್ಪೆಡ್ ಮಿರಾಂಡಾ ಅವರ ಪ್ರವಾಸ ಕಥನವಾದ ದಿ ಜರ್ನಿ ಗೋಸ್ ಆನ್. ಕೇಶ್ವಾಪುರದ ವುಡ್ ಲ್ಯಾಂಡ್ ಹೋಟೆಲ್‌ನಲ್ಲಿ ಫೆ.21ರಂದು ಸಂಜೆ 7ಕ್ಕೆ ಲೋಕಾರ್ಪಣೆಯಾಗಲಿದೆ ಎಂದು ಅಪ್ಪಾಸಾಹೇಬ್ ಕಟ್ಟಿ ತಿಳಿಸಿದರು. ನಗರದಲ್ಲಿ ಶುಕ್ರವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ನೇಪಾಳದ ಲೇಖಕ ಡಾ. ಮಿತ್ರ ಬಂಧು ಪೌಡೆಲ್ ಕೃತಿಯನ್ನು ಬಿಡುಗಡೆ ಮಾಡಿ ಈ ಕುರಿತು ಮಾತನಾಡುವರು ಎಂದರು. ಕೃತಿಕಾರ ಡಾ. ಆಲ್ಪೆಡ್ ಮಿರಾಂಡಾ ಮಾತನಾಡಿದರು. ಒಸ್ಬೋರ್ನ್ ಜೋಸೆಫ್, ಸತೀಶ ಡಬೀರ್, ರಾಜೇಂದ್ರ ಜೈನ್ ಇದ್ದರು.

ವಿನಾಯ ಪಾಳಾರಗೆ ಪಿಎಚ್‌ಡಿ

ಧಾರವಾಡ: ಗಣಿತಶಾಸ್ತ್ರ ವಿಭಾಗದ ಸಂಶೋಧನಾ ವಿದ್ಯಾರ್ಥಿ ವಿನಾಯಕ ಪಾಳಾರ ಮಂಡಿಸಿದ ಎ ಸ್ಟಡಿ ಆಫ್ ವೆವ್ಲೆಟ್ ಆ್ಯಂಡ್ ಇಟ್ಸ್ ಅಪ್ಲಿಕೇಷನ್ಸ್ ಟು ಸಾಲ್ವ್ ನ್ಯೂನೋಫ್ಲುಯಿಡ್ ಪ್ರಾಬ್ಲೆಮ್ಸ್ ಪ್ರೌಢ ಪ್ರಬಂಧಕ್ಕೆ ಕರ್ನಾಟಕ ವಿಶ್ವವಿದ್ಯಾಲಯದ ಪಿಎಚ್‌ಡಿ ಪದವಿ ಪ್ರದಾನಿಸಿದೆ. ಇವರಿಗೆ ಪ್ರಾಧ್ಯಾಪಕ ಪ್ರೊ. ಎಸ್.ಸಿ.ಶಿರಾಳಶೆಟ್ಟಿ ಮಾರ್ಗದರ್ಶಕರಾಗಿದ್ದರು.



ನಿಂಗನಗೌಡ ಪಾಟೀಲ ನಿಧನ

ಧಾರವಾಡ: ತಾಲೂಕಿನ ನುಗ್ಗಿಕೇರಿ ಗ್ರಾಮದ ನಿವಾಸಿ ಮತ್ತು ಬಿಜೆಪಿ ಮುಖಂಡ ನಿಂಗನಗೌಡ ಭೀಮನಗೌಡ ಪಾಟೀಲ(62) ಗುರುವಾರ ನಿಧನರಾದರು. ಇವರಿಗೆ ಪತ್ನಿ, ಇಬ್ಬರು ಪುತ್ರರು ಹಾಗೂ ಅಪಾರ ಬಳಗವಿದೆ.





ಧಾರವಾಡ: ಸ್ಥಳೀಯ ಮಾಳಮಡ್ಡಿಯ ಆಶೀರ್ವಾದ ಮತ್ತು ಶ್ರೀನಿವಾಸ ಏಜೆನ್ಸಿಯ ಪರಶುರಾಮ ಮುತ್ತಳ್ಳಿ ಅವರು ಉಚಿತ ಕೊಡಮಾಡಿದ ಐಎಸ್ಐ ಗುರುತಿನ ಹೆಲ್ಮೆಟ್ ಸಂಚಾರಿ ಠಾಣೆಯ ಪಿಎಸ್ಐ ವೀರೇಶ ಬಳ್ಳಾರಿ ವಿತರಿಸಿದರು. ಉಪನಗರ ಠಾಣೆಯ ಪಿಎಸ್ಐ ಮಹೇಶ ಕುರ್ತಕೋಟಿ, ಪಾಲಿಕೆ ಸದಸ್ಯ ತುಳಸಪ್ಪ ಪೂಜಾರ ಮತ್ತು ಸಿಬ್ಬಂದಿ ಇದ್ದರು.

ಸತ್ಯಸಾಯಿ ಏಕತಾ ಓಟ, ಸೈಕಲ್ ಸವಾರಿ ನಾಳೆ

ಧಾರವಾಡ: ಸತ್ಯಸಾಯಿ ಬಾಬಾರ ಜನ್ಮ ಶತಮಾನೋತ್ಸವ ವರ್ಷಾಚರಣೆ ಹಿನ್ನೆಲೆ ಸತ್ಯಸಾಯಿ ಏಕತಾ ಓಟ ಮತ್ತು ಸೈಕಲ್ ಸವಾರಿ(ಮ್ಯಾರಾಥಾನ್) ಫೆ.22ರಂದು ಹಮ್ಮಿಕೊಂಡಿದ್ದಾಗಿ ಸತ್ಯಸಾಯಿ ಸೇವಾ ಸಂಸ್ಥೆಗಳ ಅಧ್ಯಕ್ಷ ನಾಗರಾಜ ಧಾರವಾಡಕರ ತಿಳಿಸಿದರು.

ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ಅವರು ಮಾತನಾಡಿ, ಅಂದು ಬೆಳಗ್ಗೆ 6ಕ್ಕೆ ನಗರದ ಸಾಯಿ ಚರಣ ಕ್ಯಾಪಸ್‌ನಲ್ಲಿ ಚಾಲನೆ ದೊರೆಯಲಿದ್ದು, ಜಿಲ್ಲಾಧಿಕಾರಿ ಸ್ನೇಹಲ್ ಆರ್., ಜಿಲ್ಲಾ ಗ್ರಾಹಕ ಆಯೋಗದ ಅಧ್ಯಕ್ಷ ಈಶಪ್ಪ ಭೂತೆ ಪಾಲ್ಗೊಳ್ಳಲಿದ್ದಾರೆ. ಸತ್ಯಸಾಯಿ ಸೇವಾ ಸಂಸ್ಥೆ ಕರ್ನಾಟಕ ಉತ್ತರದ ಅಧ್ಯಕ್ಷ ಎಂ.ಪದ್ಮನಾಭ ಪೈ, ಸತ್ಯಸಾಯಿ ಟ್ರಸ್ಟ್ ಸಂಚಾಲಕ ವಾಸುಕಿ ಭಾಗವಹಿಸಲಿದ್ದಾರೆ ಎಂದರು. ಮ್ಯಾರಾಥಾನದಲ್ಲಿ ಧಾರವಾಡ ಜಿಲ್ಲಾ ಸತ್ಯಸಾಯಿ ಸಂಸ್ಥೆಯ, ಸಮಿತಿಗಳಾದ ಹುಬ್ಬಳ್ಳಿ, ಧಾರವಾಡ, ಅಣ್ಣಿಗೇರಿ, ಮಜ್ಜಿಗುಡ್ಡ, ಕಡಪಟ್ಟಿ, ಹಳಿಯಾಳ, ಛಬ್ಬಿ, ಬೊಮ್ಮಸಮುದ್ರ, ನವನಗರ, ಉಮಚಗಿ ಹಾಗೂ ಮಣಕವಾಡ ಸಮಿತಿ ಭಕ್ತಾದಿಗಳು ಪಾಲ್ಗೊಳ್ಳಲಿದ್ದಾರೆ ಎಂದರು. ಏಕತೆ ಸಾರುವ ಮಾನವೀಯ ಮೌಲ್ಯಗಳನ್ನು ಅರಿವು ಮೂಡಿಸುವ ಈ ರ್‍ಯಾಲಿಯ ಮೂಲಕ ಜನ ಜಾಗೃತಿ ಮೂಡಿಸುತ್ತಿದೆ ಎಂದರು. ಸತ್ಯಸಾಯಿ ಏಕತಾ ಓಟದ 3 ಕಿ.ಮಿ ಓಟದಲ್ಲಿ 1215, 5 ಕಿ.ಮೀ. ಓಟದಲ್ಲಿ 264 ಜನ, 10 ಕಿ.ಮೀ ವಿಭಾಗದಲ್ಲಿ 161 ಹಾಗೂ 1640 ಸೈಕಲ್ ಸವಾರರು ಆನ್‌ಲೈನ್ ಶಿಬಿರಾರ್ಥಿಗಳು ಭಾಗವಹಿಸಲಿದ್ದು, ಇದನ್ನು ಬಿಟ್ಟು 2000-3000 ಜನರು ಪಾಲ್ಗೊಳ್ಳಲಿದ್ದಾರೆ ಎಂದರು.

ಸುದ್ದಿಗೋಷ್ಠಿಯಲ್ಲಿ ಡಾ.ರಾಜು ರೋಖಡೆ, ಶಿವಾನಂದ ಮಣಕವಾಡ, ತಿಮ್ಮಯ್ಯಾ ಮಿರಾಶಿ ಇದ್ದರು.



ಅಣ್ಣಿಗೇರಿ: ಬಿಜೆಪಿ ಮುಖಂಡ ದೇವರಾಜ್ ಬ. ದಾಡಿಬಾವಿ ನೇತೃತ್ವದಲ್ಲಿ ಅಣ್ಣಿಗೇರಿ ನಗರದಲ್ಲಿ ಅಣ್ಣಿಗೇರಿ ತಾಲೂಕು ಅಮೃತೇಶ್ವರ ಪ್ರೀಮಿಯರ್ ಲೀಗ್ ಕ್ರಿಕೆಟ್ ಅಂತಿಮ ಪಂದ್ಯ ನಡೆಯಿತು. ಶ್ರೀ ಅಮೃತೇಶ್ವರ ಕ್ರಿಕೆಟ್ ಕ್ಲಬ್ ಫೈನಲ್‌ನಲ್ಲಿ ಪ್ರಥಮ ಹಾಗೂ ಮೈಲಾರಲಿಂಗೇಶ್ವರ ಕ್ರಿಕೆಟ್ ಕ್ಲಬ್ ದ್ವಿತೀಯ ಸ್ಥಾನ ಪಡೆಯಿತು. ಈ ತಂಡಗಳಿಗೆ ಬಹುಮಾನ ಹಾಗೂ ಪಾರಿತೋಷಕ ವಿತರಿಸಲಾಯಿತು.

ಹೆಸ್ಕಾಂ ಕಾಮಗಾರಿ ಅಧಿಕಾರಿಗಳ ಸಭೆ | ಸಚಿವ ಸಂತೋಷ ಲಾಡ್ ಸೂಚನೆ

ರೈತರ ಪಂಪ್‌ಸೆಟ್‌ಗೆ ವಿದ್ಯುತ್ ಪೂರೈಸಿ



ಧಾರವಾಡ: ಜಿಲ್ಲೆಯ ಕೃಷಿ ಚಟುವಟಿಕೆಗಳಿಗೆ ತೊಂದರೆ ಆಗದಂತೆ ಹೆಸ್ಕಾಂ ಸಂಸ್ಥೆ ಕ್ರಮ ವಹಿಸಬೇಕು. ಸರ್ಕಾರದ ನಿಯಮದಂತೆ ರೈತರ ಪಂಪ್‌ಸೆಟ್‌ಗಳಿಗೆ ಏಳು ಗಂಟೆ ವಿದ್ಯುತ್ ಪೂರೈಸುವಂತೆ ಜಿಲ್ಲಾ ಉಸ್ತುವಾರಿ ಸಚಿವ ಸಂತೋಷ ಲಾಡ್ ಸೂಚಿಸಿದರು.

ನಗರದ ಜಿಲ್ಲಾಧಿಕಾರಿ ನೂತನ ಕಚೇರಿಯ ಭವನದಲ್ಲಿ ಶುಕ್ರವಾರ ಹೆಸ್ಕಾಂ ಸಂಸ್ಥೆಯ ವಿವಿಧ ಕಾಮಗಾರಿ ಪ್ರಗತಿ ಪರಿಶೀಲನೆ ಕುರಿತು ಹೆಸ್ಕಾಂ ಅಧಿಕಾರಿಗಳ ಸಭೆ ನಡೆಸಿದ ಅವರು, ರೈತರಿಗೆ ಅನುಕೂಲವಾಗುವಂತೆ ಹಗಲು-ರಾತ್ರಿ ವಿದ್ಯುತ್ ಪೂರೈಸುವಂತೆ ಆದೇಶಿಸಿದರು. ಹಿಂಗಾರು ಗೋಧಿ, ಬತ್ತ, ಕಬ್ಬು ಬೆಳೆಗೆ ನೀರಿನ ಅಗತ್ಯವಿದ್ದು, ರೈತರು ನೀರಾವರಿಗೆ ಕೊಳವೆಬಾವಿ ಹೆಚ್ಚು ಅವಲಂಬಿಸಿದ್ದಾರೆ. ಕಲಘಟಗಿ, ಅಳ್ನಾವರ, ಜಿಲ್ಲೆಯ ಇತರ ಭಾಗಗಳಲ್ಲಿ ವಿದ್ಯುತ್ ಪೂರೈಸದ ಕುರಿತು ರೈತರಿಂದ ದೂರುಗಳು ಬಂದಿವೆ ಎಂದರು.

ಹೆಸ್ಕಾಂ ಇಲಾಖೆ ಅಧಿಕಾರಿಗಳು ಶಿಫ್ಟ್ ಆಧಾರದಡಿ ವಿದ್ಯುತ್ ಪೂರೈಸಬೇಕು. ಈಗ ಬೇಸಿಗೆ ಕಾಲದಲ್ಲಿ ವಿಷ ಜಂತುಗಳ ಹಾವಳಿ ಹೆಚ್ಚಿದೆ. ಆದ್ದರಿಂದ ತೀರಾ ಮಧ್ಯರಾತ್ರಿ ವಿದ್ಯುತ್ ಪೂರೈಸುವುದು ರೈತರಿಗೆ ಬಹಳಷ್ಟು ತೊಂದರೆ ಉಂಟಾಗುತ್ತದೆ ಎಂದರು.

ಹೆಸ್ಕಾಂ ಅಧ್ಯಕ್ಷ ಸೈಯದ್ ಅಜ್ಜಂಪೀರ್ ಖಾದ್ರಿ, ಹೆಚ್ಚುವರಿ ಜಿಲ್ಲಾಧಿಕಾರಿ ಗೀತಾ ಸಿ.ಡಿ., ಜಿಪಂ ಸಿಇಒ ಭುವನೇಶ ಪಾಟೀಲ, ಹು-ಧಾ ಮಹಾನಗರ ಪೊಲೀಸ್ ಆಯುಕ್ತ ಎನ್. ಶಶಿಕುಮಾರ ಹಾಗೂ ಇತರರಿದ್ದರು.

- ನಿಗದಿ ಮತ್ತು ಅರಳಿಕಟ್ಟಿ ಕ್ರಾಸ್, ಬಮ್ಮಿಗಟ್ಟಿ ಸೇರಿ ಮೂರು ಗ್ರಾಮಗಳಿಗೆ ಹೊಸದಾಗಿ ವಿದ್ಯುತ್ ವಿತರಣಾ ಕೇಂದ್ರ ಸ್ಥಾಪನೆಗೆ ಸರ್ಕಾರದಿಂದ ಕ್ರಮ
- ಗುತ್ತಿಗೆದಾರರಿಂದ ಟೆಂಡರ್ ವಿಳಂಬದ ಕುರಿತು ಅಧಿಕಾರಿಗಳು ಸಚಿವರ ಗಮನ ಸೆಳೆದರು
- ತಕ್ಷಣವೇ ಸಚಿವ ಲಾಡ್, ಕೆಪಿಟಿಸಿಎಲ್ ವ್ಯವಸ್ಥಾಪಕ ನಿರ್ದೇಶಕ ವಿ. ರಾಮ್ ಪ್ರಸಾತ್ ಮನೋಹರ ಅವರಿಗೆ ಕರೆ ಮಾಡಿ, ಶೀಘ್ರ ಸಮಸ್ಯೆ ಬಗೆಹರಿಸಲು ಸೂಚನೆ

ರೈತನ ಕುಟುಂಬಕ್ಕೆ ಪರಿಹಾರ

2023ರ ಮಳೆಗಾಲದಲ್ಲಿ ಆಕಸ್ಮಿಕ ವಿದ್ಯುತ್ ತಂತಿ ತಗುಲಿ ಮೃತಪಟ್ಟ ಧಾರವಾಡ ತಾಲೂಕಿನ ಸಲಕಿನಕೊಪ್ಪ ಗ್ರಾಮದ ಮೃತ ರೈತ ಮಾರುತಿ ಕೊನಪ್ಪನವರ ಅವರ ಪತ್ನಿ ಮಲ್ಲವ್ವ ಅವರಿಗೆ ಸಚಿವ ಸಂತೋಷ ಲಾಡ್, ಹೆಸ್ಕಾಂ ಪರವಾಗಿ ರೂ.5 ಲಕ್ಷದ ಪರಿಹಾರ ಚೆಕ್ ವಿತರಿಸಿದರು.

> ಬೇಡಿಕೆಗಿಂತ ಹೆಚ್ಚು ವಿದ್ಯುತ್ ಲಭ್ಯವಿದೆ. ಹೆಸ್ಕಾಂ ಅಧಿಕಾರಿಗಳು ವಿದ್ಯುತ್ ವಿತರಣೆ ಬಗ್ಗೆ ಸರಿಯಾದ ಕ್ರಮ ವಹಿಸಬೇಕು. ಕಾಮಗಾರಿ ವೇಗ ಹೆಚ್ಚಿಸಿ, ಶೀಘ್ರ ಮುಗಿಸಬೇಕು.
> ■ ಸ್ನೇಹಲ್ ಆರ್., ಜಿಲ್ಲಾಧಿಕಾರಿ

ಏಳು ಗಂಟೆ ವಿದ್ಯುತ್ ಪೂರೈಸಿ

ಜಿಲ್ಲೆಯಲ್ಲಿ 67 ಕೃಷಿ ವಿದ್ಯುತ್ ಫೀಡರ್ ಗಳಿವೆ. ಇದರಲ್ಲಿ 41 ಫೀಡರ್‌ಗಳಿಗೆ ಬೆಳಗ್ಗೆ 7ರಿಂದ ಸಂಜೆ 4 ರವರೆಗೆ, 12 ಫೀಡರ್ ಗಳಿಗೆ ಸಂಜೆ 6ರಿಂದ ರಾತ್ರಿ 9ರವರೆಗೆ, ರಾತ್ರಿ 10ರಿಂದ ಮಧ್ಯರಾತ್ರಿ 10ರವರೆಗೆ ವಿದ್ಯುತ್ ಪೂರೈಸುವಂತೆ ಸಚಿವ ಸಂತೋಷ ಲಾಡ್ ಅಧಿಕಾರಿಗಳಿಗೆ ಸೂಚಿಸಿದರು. ಅಲ್ಲದೇ, ಇನ್ನುಳಿದ ಫೀಡರ್ ಗಳಿಗೆ ಬೆಳಗ್ಗೆ 6ರಿಂದ 10ರವರೆಗೆ, ಬೆಳಗ್ಗೆ 10 ರಿಂದ ಮಧ್ಯಾಹ್ನ 1ರವರೆಗೆ ಹೀಗೆ ನಿಗದಿತ ಅವಧಿಯಲ್ಲಿ ಒಟ್ಟು ಏಳು ಗಂಟೆಗಳು ಕೃಷಿ ಚಟುವಟಿಕೆಗಳ ಅನುಕೂಲಕ್ಕಾಗಿ ವಿದ್ಯುತ್ ಪೂರೈಸುವಂತೆ ಕಟ್ಟುನಿಟ್ಟಿಗೆ ಸೂಚನೆ ನೀಡಿದರು.



ಗ್ಯಾರಂಟಿ ಯೋಜನೆ ಅರ್ಹರಿಗೆ ತಲುಪಲಿ: ಲಾಡ್

ಕಲಘಟಗಿ: ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ನೇತೃತ್ವದಲ್ಲಿ ಪಂಚಗ್ಯಾರಂಟಿಗಳ ಸಮರ್ಥ ಜಾರಿಯಿಂದ ಸರ್ಕಾರ ಹೊಸ ದಾಖಲೆಗಳನ್ನು ನಿರ್ಮಿಸಿದೆ. ಸಾಮಾನ್ಯ ಜನರ ಬದುಕಿನಲ್ಲಿ ನೇರ ಬದಲಾವಣೆ ತರುವ ಉದ್ದೇಶದಿಂದ ಜಾರಿಗೊಂಡ ಈ ಯೋಜನೆಗಳು ಗ್ರಾಮೀಣ ಹಾಗೂ ನಗರ ಪ್ರದೇಶಗಳಲ್ಲೂ ವ್ಯಾಪಕ ಪರಿಣಾಮ ಬೀರಿವೆ ಎಂದು ಜಿಲ್ಲಾ ಉಸ್ತುವಾರಿ ಸಚಿವ ಸಂತೋಷ ಲಾಡ್ ಹೇಳಿದರು.

ಅವರು ಕಲಘಟಗಿ ಪಟ್ಟಣ ಪಂಚಾಯತಿ ಮುಂಭಾಗದಲ್ಲಿ ರಾಜ್ಯ ಸರ್ಕಾರದ ಪಂಚ ಗ್ಯಾರಂಟಿ ಯೋಜನೆಗಳ ಕ್ಷೇತ್ರ ಪ್ರಚಾರದ ಎಲ್‌ಇಡಿ ವಾಹನಕ್ಕೆ ಚಾಲನೆ ನೀಡಿ ಮಾತನಾಡಿ, ಪಂಚ ಗ್ಯಾರಂಟಿ ಯೋಜನೆಗಳ ಪ್ರಯೋಜನ ಪ್ರತಿಯೊಬ್ಬ ಅರ್ಹ ನಾಗರಿಕರಿಗೆ ತಲುಪಬೇಕು. ಧಾರವಾಡ ಜಿಲ್ಲೆಯಲ್ಲಿ ಶಕ್ತಿ ಯೋಜನೆಗೆ 727.78 ಕೋಟಿ ಬಿಡುಗಡೆಯಾಗಿದೆ. ಗೃಹಲಕ್ಷ್ಮಿ ಯೋಜನೆಗೆ 3,81,493 ಜನ ಫಲಾನುಭವಿಗಳಿದ್ದು, ರೂ. 1,740 ಕೋಟಿ ಹಣ ಜಮೆಯಾಗಿದೆ. ಗೃಹಜ್ಯೋತಿ ಯೋಜನೆಗೆ ರೂ. 639 ಕೋಟಿ ಅನುದಾನ ನೀಡಲಾಗಿದ್ದು, 5,16,948 ಫಲಾನುಭವಿಗಳು ಲಾಭ ಪಡೆದಿದ್ದಾರೆ. ಅನ್ನಭಾಗ್ಯ ಯೋಜನೆಗೆ ರೂ.358.29 ಕೋಟಿ ವೆಚ್ಚವಾಗಿದ್ದು, 3,62,516 ಫಲಾನುಭವಿಗಳು ಪ್ರಯೋಜನ ಪಡೆದಿದ್ದಾರೆ. ಯುವನಿಧಿ ಯೋಜನೆ ಅಡಿಯಲ್ಲಿ 7,920 ಫಲಾನುಭವಿಗಳಿಗೆ ರೂ.19.95 ಕೋಟಿ ಹಣ ಡಿಬಿಟಿ ಮೂಲಕ ಹಣ ಜಮೆಯಾಗಿದೆ. ಒಟ್ಟು ರೂ. 3485.02 ಕೋಟಿ ಮೊತ್ತವನ್ನು ಗ್ಯಾರಂಟಿ ಯೋಜನೆಗಳಡಿ ಜಿಲ್ಲೆಯಲ್ಲಿ ವೆಚ್ಚ ಮಾಡಲಾಗಿದೆ ಎಂದರು.

ಪಂಚ ಗ್ಯಾರಂಟಿ ಯೋಜನೆಗಳ ಪ್ರಚಾರಕ್ಕಾಗಿ ರೂಪುಗೊಂಡ ಕಲಾತಂಡಗಳೊಂದಿಗೆ ಸಚಿವ ಸಂತೋಷ ಲಾಡ್ ಅವರು ಸ್ವತಃ ಸಂಗೀತ ಹಾಡಿ, ತಾಳ ಬಾರಿಸಿ ಕಲಾವಿದರನ್ನು ಪ್ರೋತ್ಸಾಹಿಸಿದರು. ಕ್ಷೇತ್ರ ಪ್ರಚಾರ ವಾಹನದೊಂದಿಗೆ ಕುಂದಗೋಳ ತಾಲೂಕಿನ ಹರ್ಲಾಪೂರ ಗ್ರಾಮದ ಶ್ರೀ ಸ್ವಾಮಿ ವಿವೇಕಾನಂದ ಜಾನಪದ ಕಲಾತಂಡದ ನಾಯಕ ದಾವಲಸಾಬ ದೊಡ್ಡಮನಿ ಅವರ ನೇತೃತ್ವದಲ್ಲಿ ಪ್ರಕಾಶ ಮಡಿವಾಳರ, ರಮೇಶ ಸಜ್ಜನಾರ, ಗೂಳಪ್ಪ ದುರ್ಗಣ್ಣವರ, ನೌಶಾದ ಬೆಂತೂರ ಅವರು ಸರ್ಕಾರದ ಐದು ಗ್ಯಾರಂಟಿ ಯೋಜನೆಗಳ ಕುರಿತು ಜನಪದ ಹಾಡುಗಳು ಹಾಗೂ ಬೀದಿ ನಾಟಕಗಳ ಮುಖಾಂತರ ಜನರಲ್ಲಿ ಜಾಗೃತಿ ಕಾರ್ಯಕ್ರಮ ನಡೆಯಿತು. ಧಾರವಾಡ ಜಿಲ್ಲಾ ಗ್ಯಾರಂಟಿ ಯೋಜನೆಗಳ ಅಧ್ಯಕ್ಷ ಶಾನವ್ವಗೌಡ ಪಾಟೀಲ ಮಾತನಾಡಿದರು. ವಾರ್ತಾ ಇಲಾಖೆಯ ಪ್ರಭಾರ ಸಹಾಯಕ ನಿರ್ದೇಶಕ ಡಾ. ಸುರೇಶ ಹಿರೇಮಠ ಅವರು ಸ್ವಾಗತಿಸಿ, ಪ್ರಾಸ್ತಾವಿಸಿದರು. ವಾರ್ತಾ ಇಲಾಖೆಯ ಮನೋಜ ಮಸನಿ ವಂದಿಸಿದರು. ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಮಂಜುನಾಥಗೌಡ ಮುರಳ್ಳಿ, ಜಿಲ್ಲಾ ನಗರಾಭಿವೃದ್ಧಿ ಕೋಶದ ಯೋಜನಾ ನಿರ್ದೇಶಕ ಅಜೀಜ್ ದೇಸಾಯಿ, ತಹಶೀಲ್ದಾರ್ ಬಸವರಾಜ ಹೊಂಕಣನವರ, ತಾಪಂ ಕಾರ್ಯನಿರ್ವಾಹಕ ಅಧಿಕಾರಿ ಪಿ.ವೈ. ಸಾವಂತ, ಪಪಂ ಮುಖ್ಯಾಧಿಕಾರಿ ಚಂದ್ರಶೇಖರ ಬಿ., ಸಿಪಿಐ ಶ್ರೀಶೈಲ ಕೌಜಲಗಿ ಸೇರಿದಂತೆ ಇತರರಿದ್ದರು.



ಫೆ.23ರಿಂದ ವಿವಿಧ ಧಾರ್ಮಿಕ ಕಾರ್ಯಕ್ರಮ

ಕುಂದಗೋಳ: ತಾಲೂಕಿನ ಮುಳ್ಳೊಳ್ಳಿ ಗ್ರಾಮದ ಚನ್ನವೀರೇಶ್ವರ ವಿರಕ್ತಮಠದಲ್ಲಿ ಫೆಬ್ರವರಿ 23 ರಿಂದ ಮಾರ್ಚ್ 15 ರವರೆಗೆ ಬಸವ ಪುರಾಣ, ಮಹಾದ್ವಾರ ಉದ್ಘಾಟನೆ, ಸಾಮೂಹಿಕ ವಿವಾಹ, ವಿವಿಧ ಧಾರ್ಮಿಕ ಕಾರ್ಯಕ್ರಮಗಳು ಜರುಗಲಿವೆ ಎಂದು ಶ್ರೀಮಠದ ಪೀಠಾಧಿಪತಿ ಶಿವಯೋಗಿ ಸ್ವಾಮೀಜಿ ಹೇಳಿದರು.

ಅವರು ಶ್ರೀಮಠದಲ್ಲಿ ಶುಕ್ರವಾರ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಫೆ.23ರಂದು ಶಿರಹಟ್ಟಿ ಫಕೀರೇಶ್ವರ ಮಠದ ಶ್ರೀಗಳು ಬಸವ ಪುರಾಣ ಪ್ರವಚನ ಕಾರ್ಯಕ್ರಮವನ್ನು ಉದ್ಘಾಟಿಸಲಿದ್ದಾರೆ. ಧಾರ್ಮಿಕ ಉತ್ಸವದಲ್ಲಿ ಪ್ರತಿದಿನವೂ ನಾಡಿನ ಒಬ್ಬೊಬ್ಬ ಮಹಾನ್ ಮಠಾಧೀಶರಿಂದ ಆಶೀರ್ವಚನ ಜರುಗಲಿದೆ.

ಕೊಡಿಮಠದ ಶ್ರೀಗಳು, ಕೊಪ್ಪಳ ಗವಿಸಿದ್ದೇಶ್ವರ ಶ್ರೀಗಳು, ನಿಡಸೊಶಿಯ ಶ್ರೀಗಳು, ಹುಬ್ಬಳ್ಳಿಯ ಮೂರುಸಾವಿರ ಮಠದ ಶ್ರೀಗಳು, ಶಿರಗೇರಿ ಮಠದ ಶ್ರೀಗಳು, ಅನಂತಪುರ ಮಠದ ಶ್ರೀ, ಮನಸೂರಿನ ಶ್ರೀ ಸೇರಿದಂತೆ ಅನೇಕರು ಆಗಮಿಸುವರು. ಮಠದ ನೂತನ 'ಕರ್ತೃ ಶ್ರೀ ಚನ್ನವೀರೇಶ್ವರ ಮಹಾದ್ವಾರ', 'ಯಾತ್ರಿ ನಿವಾಸ' ಹಾಗೂ 'ನೂತನ ಪೂಜಾ ಮಂದಿರ'ಗಳ ಲೋಕಾರ್ಪಣೆ ನೆರವೇರಲಿದೆ. 1001 ಸುಮಂಗಲೆಯರಿಗೆ ಉಡಿ ತುಂಬುವ ಕಾರ್ಯಕ್ರಮ, ಆರೋಗ್ಯ ತಪಾಸಣೆ ಹಾಗೂ ರಕ್ತದಾನ ಶಿಬಿರಗಳನ್ನು ಹಮ್ಮಿಕೊಳ್ಳಲಾಗಿದೆ. ಪ್ರತಿನಿತ್ಯ ಸಂಜೆ 6.30ರಿಂದ ಹಂದಿಗುಂದದ ಶಿವಾನಂದ ಸ್ವಾಮೀಜಿಯಿಂದ ಬಸವ ಪುರಾಣ ಪ್ರವಚನ ನಡೆಯಲಿದೆ. ಸೋಮನಾಳದ ಶರಣ ಬಸವ ಗವಾಯಿಗಳಿಂದ ಸಂಗೀತ ಸೇವೆ ಇರಲಿದೆ. ಕೃಷಿ ತಜ್ಞರು, ವೀರ ಸೈನಿಕರು ಹಾಗೂ ಪ್ರತಿಭಾನ್ವಿತ ವಿದ್ಯಾರ್ಥಿಗಳಿಗೆ ಸನ್ಮಾನ ಮತ್ತು ಮಕ್ಕಳಿಂದ ಮಾತಾ-ಪಿತೃಗಳ ಪಾದಪೂಜೆ ಜರುಗಲಿದೆ ಎಂದರು.

ಮಾಜಿ ಶಾಸಕ ಎಂ. ಎಸ್. ಅಕ್ಕಿ ಮಾತನಾಡಿ, ಕಾರ್ಯಕ್ರಮಕ್ಕೆ ಕೇಂದ್ರ ಸಚಿವ ಪ್ರಹ್ಲಾದ ಜೋಶಿ, ಸಂಸದ ಜಗದೀಶ ಶೆಟ್ಟರ್, ರಾಜ್ಯದ ಸಚಿವರಾದ ಸಂತೋಷ ಲಾಡ್, ಎಚ್. ಕೆ. ಪಾಟೀಲ, ಎಂ. ಬಿ. ಪಾಟೀಲ, ಈಶ್ವರ ಖಂಡ್ರೆ ಹಾಗೂ ಎಂ. ಆರ್. ಪಾಟೀಲ ಸೇರಿದಂತೆ ಅನೇಕ ಮುಖಂಡರುಗಳು ಪಾಲ್ಗೊಳ್ಳಲಿದ್ದಾರೆ. ಮಾರ್ಚ್ 15 ರಂದು ಸಕಲ ಪೂಜ್ಯರ ಸಾನ್ನಿಧ್ಯದಲ್ಲಿ 25 ಜೋಡಿಗಳ ಉಚಿತ ಸಾಮೂಹಿಕ ವಿವಾಹಗಳನ್ನು ಹಮ್ಮಿಕೊಳ್ಳಲಾಗಿದೆ. ವಿವಾಹವಾಗುವವರು ನೋಂದಣಿಗೆ ವಯಸ್ಸಿನ ದೃಢೀಕರಣ, ಗ್ರಾಮ ಪಂಚಾಯತಿ ಅನುಮತಿ ಪತ್ರವನ್ನು ಕಡ್ಡಾಯವಾಗಿ ಸಲ್ಲಿಸಬೇಕು. ನೋಂದಣಿಗೆ ಮಾರ್ಚ್ 1 ಕೊನೆಯ ದಿನವಾಗಿದೆ. ಹೆಚ್ಚಿನ ಮಾಹಿತಿಗಾಗಿ 9741652871 ಅಥವಾ 9611735153 ಸಂಖ್ಯೆಗಳನ್ನು ಸಂಪರ್ಕಿಸಬಹುದು ಎಂದರು.

ಈ ಸಂದರ್ಭದಲ್ಲಿ ಕುಂದಗೋಳ ಕಲ್ಯಾಣಪುರ ಮಠದ ಅಭಿನವ ಬಸವಣ್ಣಜ್ಜ, ಶಂಕರಗೌಡ ನಿರಂಜನಗೌಡ್ರ, ಮಾಬಲೇಶ ಮಾದನೂರ, ಮುರಗೇಶ ಕುಸುಗಲ್, ಶಾಂತಯ್ಯ ಮಲಕಯ್ಯನವರ ಹಾಗೂ ಗ್ರಾಮದ ಭಕ್ತರಿದ್ದರು.



ಛತ್ರಪತಿ ಶಿವಾಜಿ ಮಹಾರಾಜರು ಸ್ವಾಭಿಮಾನದ ಪ್ರತೀಕ: ಭರತೇಶ್ ಜೈನರ

ಅಣ್ಣಿಗೇರಿ: ಛತ್ರಪತಿ ಶಿವಾಜಿ ಮಹಾರಾಜರು ಎಂದರೆ ಶಕ್ತಿಯ ಸಂಕೇತ ಹಾಗೂ ಸ್ವಾಭಿಮಾನದ ಪ್ರತೀಕ ಎಂದು ತಾಲೂಕು ಘಟಕದ ಕಾರ್ಯದರ್ಶಿ ಭರತೇಶ್ ಜೈನರ ಹೇಳಿದರು.

ನಗರದ ಶ್ರೀ ಅಮೃತೇಶ್ವರ ಮಹಾದ್ವಾರದ ಬಳಿ ವಿಶ್ವ ಹಿಂದೂ ಪರಿಷತ್ ತಾಲೂಕು ಘಟಕದ ವತಿಯಿಂದ ಆಯೋಜಿಸಿದ್ದ ಛತ್ರಪತಿ ಶಿವಾಜಿ ಮಹಾರಾಜರ ಜಯಂತಿ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಅವರು. ಛತ್ರಪತಿ ಶಿವಾಜಿ ಅಪ್ಪಟ ದೇಶಪ್ರೇಮಿಯಾಗಿದ್ದರು. ಶಿವಾಜಿ ಮಹಾರಾಜರ ಜೀವನ ಮೌಲ್ಯಗಳನ್ನು ಪ್ರತಿಯೊಬ್ಬರೂ ಜೀವನದಲ್ಲಿ ಅಳವಡಿಸಿಕೊಳ್ಳಬೇಕ ಎಂದರು.

13ನೇ ವರ್ಷದಲ್ಲಿ ಸ್ವರಾಜ್ಯ ಸ್ಥಾಪನೆಯ ಕನಸು ಕಂಡು ಮಾವಳಿಯರ, ರೈತರು, ಗುಡ್ಡಗಾಡು ಜನರ ಸಂಘಟನೆಯೊಂದಿಗೆ ಮೊಘಲರ ವಶದಲ್ಲಿರುವ ಕೋಟೆಗಳನ್ನು ವಶಪಡಿಸಿಕೊಂಡರು. ಇವರು ಸಮರ್ಥ ಆಡಳಿತಗಾರರಾಗಿದ್ದರು. ಗೆರಿಲ್ಲಾ ಯುದ್ಧ ನೀತಿ ಅನುಸರಿಸುತ್ತಿದ್ದರು. 1974ರಲ್ಲಿ ರಾಯಗಡದಲ್ಲಿ ಶಿವಾಜಿಯವರಿಗೆ ಪಟ್ಟಾಭಿಷೇಕವಾಯಿತು. ಅವರು ಛತ್ರಪತಿ ಎಂದು ಘೋಷಿಸಿಕೊಂಡರು. ಇದು ಕೇವಲ ಒಬ್ಬ ವ್ಯಕ್ತಿಯ ಪಟ್ಟಾಭಿಷೇಕವಾಗಿರಲಿಲ್ಲ, ಶತಮಾನಗಳ ಪರಕೀಯರ ಆಳ್ವಿಕೆಯ ನಂತರ ಹಿಂದೂ ಸಾಮ್ರಾಜ್ಯವೊಂದು ತಲೆ ಎತ್ತಿ ನಿಂತ ಐತಿಹಾಸಿಕ ಕ್ಷಣವಾಗಿತ್ತು ಎಂದು ಶಿವಾಜಿ ಮಹಾರಾಜರ ಶೌರ್ಯ ಪರಾಕ್ರಮ ಸೇರಿದಂತೆ ಜೀವನ ಸಾಧನೆ ಕುರಿತು ವಿವರಿಸಿದರು.



ಈ ಸಂದರ್ಭದಲ್ಲಿ ಬಾಬು ರಾವ್ ಗಾಯಕ್ವಾಡ, ಭರತೇಶ್ ಜೈನ್, ಮಹೇಶ್ ಸುನಗಾರ್, ಸಂಜು ನಾಗನಕೇರಿ, ರವಿ ದಳವಾಯಿ,ಕುಮಾರ್ ಲಕ್ಷ್ಮೇಶ್ವರ, ಎಲ್ಲಪ್ಪ ಪವಾಡಿ, ನಾಗು ಅರವಾಳಿ, ರವಿ ದಿಡ್ಡಿ, ಮಂಜು ನಾವಳ್ಳಿ, ವಿಶ್ವನಾಥ್ ಹಿರೇಮಠ, ಕುಮಾರ್ ಲಕ್ಷ್ಮೇಶ್ವರ, ಸುರೇಶ್ ಹಡಪದ್, ರವಿಕುಮಾರ್ ಯಳಮತ್ತಿ,ವಿಶ್ವ ಹಿಂದೂ ಪರಿಷತ್ ಬಜರಂಗದಳ ಕಾರ್ಯಕರ್ತರು ಮತ್ತು ಊರಿನ ಯುವಕರು ಇದ್ದರು.

ಅನ್ನದಾನ ಮಹಾಪುಣ್ಯದ ಕೆಲಸ

ನವಲಗುಂದ: ಅನ್ನದಾನ ಮಹಾ ಪುಣ್ಯದ ಕೆಲಸವಾಗಿದೆ. ಅದನ್ನು ಜೀವನದಲ್ಲಿ ಗುರಿಯಾಗಿಸಿಕೊಂಡು ಶ್ರೀಮಠದಲ್ಲಿ ವೀರಬಸವ ದೇವರು ಆರಂಭ ಮಾಡಿದ್ದು ಬಹಳ ಸಂತೋಷ ತಂದಿದೆ ಎಂದು ಶಿರಹಟ್ಟಿಯ ಫಕೀರೇಶ್ವರ ಮಠದ ಫಕೀರ ಸಿದ್ದರಾಮದೇವರು ಅಭಿಪ್ರಾಯ ವ್ಯಕ್ತಪಡಿಸಿದರು.

ಪಟ್ಟಣದ ಶ್ರೀ ಸಂಸ್ಥಾನ ಪಂಚಗ್ರಹ ಹಿರೇಮಠದಲ್ಲಿ ಶ್ರೀ ಸಿದ್ದೇಶ್ವರ ಪ್ರಸಾದ ನಿಲಯ ಉದ್ಘಾಟಿಸಿ ಮಾತನಾಡಿದರು.

ಮಣಕವಾಡ ಮಠದ ಅಭಿನವ ಮೃತ್ಯುಂಜಯ ಶ್ರೀಗಳು ಮಾತನಾಡಿ, ಈ ಸಮಾಜದಲ್ಲಿ ಸಾಮರಸ್ಯ ಹದಗೆಟ್ಟಾಗ ಶ್ರೀಮಠದ ಪೂಜ್ಯರು ಸರಿ ಮಾಡುವಂತಹ ಕೆಲಸ ಮಾಡುತ್ತಾರೆ. ಶಿರಹಟ್ಟಿಯ ಮಠದ ಅಜ್ಜನವರ ಆಶೀರ್ವಾದದಿಂದ ಭಾವೈಕ್ಯತೆಯ ಮಠವಾಗಿ ಪಂಚಗ್ರಹ ಹಿರೇಮಠ ಬೆಳೆಯುತ್ತದೆ ಎಂದರು.

ಅಣ್ಣಪ್ಪ ಬಾಗಿ ಮಾತನಾಡಿ, ಶಿರಹಟ್ಟಿಯ ಫಕ್ಕಿರೇಶ್ವರ ದೇವರ ಅನುಗ್ರಹ ವೀರಬಸವ ದೇವರ ಮೇಲೆ ಆಗಿದೆ ಅದಕ್ಕೆ ಇವತ್ತಿನ ಪ್ರಸಾದ ನಿಲಯವೇ ಸಾಕ್ಷಿ ಎಂದರು. ಜಯಕಾಂತ ನಿಡವಣಿ ಮಾತನಾಡಿ, ನಾವು ನಮ್ಮ ಸಂಪ್ರದಾಯವನ್ನು, ನಮ್ಮ ಸಂಸ್ಕೃತಿಯನ್ನು ಮರೆಯುತ್ತಿದ್ದೇವೆ. ಈ ಆಧುನಿಕತೆಯಲ್ಲಿ ನಾವು ಸಾಮರಸ್ಯ ಬದುಕು ಸಾಗಿಸಲು ಜಾತಿ ಭೇದ ಭಾವ ಮರೆತು ನಡೆದಾಗ ಮಾತ್ರ ಸಾಧ್ಯ ಎಂದರು. ವೆಂಕಣ್ಣ ಕರಡ್ಡಿ, ಶ್ರೀಶೈಲ ಮೂಲಿಮನಿ ಮಾತನಾಡಿದರು. ಶಿರಹಟ್ಟಿಯ ಫಕೀರೇಶ್ವರ ಮಠದ ಫಕೀರ ಸಿದ್ದರಾಮದೇವರ ಪಾದಪೂಜೆ ನಡೆಯಿತು, ನಂತರ ನೂತನ ಪ್ರಸಾದ ನಿಲಯಕ್ಕೆ ದೇಣಿಗೆ ನೀಡಿದ ಭಕ್ತರಿಗೆ ಪೂಜ್ಯರು ಸನ್ಮಾನಿಸಿದರು. ಪಂಚಗ್ರಹ ಹಿರೇಮಠದ ಹಿರಿಯ ಗುರುಗಳಾದ ಸಿದ್ದೇಶ್ವರ ಶಿವಾಚಾರ್ಯ ಸ್ವಾಮೀಜಿ, ವೀರಬಸವ ದೇವರು, ಸಿ.ಪಿ.ಐ ರವಿಕುಮಾರ ಕಪ್ಪತ್ತನವರ, ಬಂಗಾರೇಶ ಹಿರೇಮಠ, ಯಲ್ಲಪ್ಪ ಭೋವಿ, ವೀರಣ್ಣ ಪೂಜಾರ, ಶರ್ಮಾ ಹಿರೇಮಠ, ಮಹೇಶ ಹಳ್ಳದ ಸೇರಿದಂತೆ ಇತರರಿದ್ದರು.



ಛತ್ರಪತಿ ಶಿವಾಜಿ ಮಹಾರಾಜರ ಜನ್ಮದಿನೋತ್ಸವ



ಹುಬ್ಬಳ್ಳಿ: ಹುಬ್ಬಳ್ಳಿಯ ಮರಾಠಾ ಸಮಾಜದ ಮರಾಠಾ ಶ್ರೀ ಭಾರತಿ ಮಠ ಟ್ರಸ್ಟ್ ಸಮಿತಿ ಆಶ್ರಯದಲ್ಲಿ ಛತ್ರಪತಿ ಶಿವಾಜಿ ಮಹಾರಾಜರ 399 ಜನ್ಮದಿನೋತ್ಸವ ಅದ್ದೂರಿಯಾಗಿ ನಡೆಯಿತು. ಶಿವಾಜಿ ಚೌಕಿನಲ್ಲಿ ಧ್ವಜಾರೋಹಣ ಹಾಗೂ ವಿದ್ಯಾನಗರದಲ್ಲಿರುವ ಛತ್ರಪತಿ ಶಿವಾಜಿ ಮಹಾರಾಜರ ಕಂಚಿನ ಅಶ್ವಾರೂಢ ಮೂರ್ತಿಗೆ ಸಮಾಜದಿಂದ ಮಾಲಾರ್ಪಣೆ ಮಾಡಲಾಯಿತು. ಶಿವಾಜಿ ಮಹಾರಾಜರಿಗೆ ಸುಮಂಗಲಿಯರಿಂದ ತೊಟ್ಟಿಲೋತ್ಸವ ಹಾಗೂ ನಾಮಕರಣ ಕಾರ್ಯಕ್ರಮ ನಡೆಯಿತು. ಛತ್ರಪತಿ ಶಿವಾಜಿ ಮಹಾರಾಜರ ತೈಲಚಿತ್ರ ಹಾಗೂ ಉತ್ಸವ ಮೂರ್ತಿಯ ಭವ್ಯ ಮೆರವಣಿಗೆಗೆ ಸಮಾಜದ ಅಧ್ಯಕ್ಷ ಸುನೀಲ ಬಾಳಕೃಷ್ಣ ದಳವಿ, ಸಮಾಜದ ಹಿರಿಯರಾದ ರಾಮಚಂದ್ರ ಶಿಂಧೆ ಚಾಲನೆ ನೀಡಿದರು. ಸಮಿತಿಯ ಉಪಾಧ್ಯಕ್ಷ ಶಿವಕುಮಾರ್ ಶಿಂಧೆ, ಖಜಾಂಚಿ ಸಚಿನ್ ಕಾಮಕರ್, ಸಮಾಜದ ಧರ್ಮದರ್ಶಿಗಳಾದ ಬಸವಂತ ಶಿಂದೆ, ಮಂಜುನಾಥ ಮರಾಠೆ, ಶೈಲೇಶ್ ಹೊನ್ನಳ್ಳಿ, ಶಿವಾಜಿ ವೈದ್ಯ, ವಿನೋದ್ ಪಡತರೆ, ಅರವಿಂದ ಮಾನೆ, ಶಾಮರಾವ್ ಸಿಂಧೆ, ಅರುಣ್ ಶಿರ್ಕೆ, ಸಂತೋಷ್ ಸಂತೋಷ ಬೈರೆ, ಜ್ಯೋತಿಬಾ ಶಿಂಧೆ, ರಾಮ್ ಜಾಧವ್. ಸಂಭಾಜಿ ದಳವಿ. ಶಶಿಕಾಂತ್ ಗಾಯಕ್ವಾಡ್ ಹಾಗೂ ನಾರಾಯಣ ವೈದ್ಯ ಇದ್ದರು.

ಕಡಲೆ ಖರೀದಿ ಕೇಂದ್ರಕ್ಕೆ ಚಾಲನೆ

ಉಪ್ಪಿನಬೆಟಗೇರಿ: ಗ್ರಾಮದ ವಿವಿಧೋದ್ದೇಶ ಕೃಷಿ ಪ್ರಾಥಮಿಕ ಪತ್ತಿನ ಸಹಕಾರ ಸಂಘದಲ್ಲಿ ಕೇಂದ್ರ ಸರಕಾರದ ಮಹತ್ವಕಾಂಕ್ಷೆಯ ಬೆಂಬಲ ಬೆಲೆ ಯೋಜನೆಯಡಿ ಕಡಲೆ ಖರೀದಿ ಕೇಂದ್ರಕ್ಕೆ ಶುಕ್ರವಾರ ಸಂಘದ ಅಧ್ಯಕ್ಷ ರಾಮಲಿಂಗಪ್ಪ ನವಲಗುಂದ ಚಾಲನೆ ನೀಡಿದರು.

ನಂತರ ಅವರು ಮಾತನಾಡಿ, ಕಡಲೆ ಮಾರಾಟಕ್ಕೆ 950 ರೈತರು ಕೇಂದ್ರದಲ್ಲಿ ಹೆಸರು ನೋಂದಾಯಿತರಾಗಿದ್ದು ಸರ್ಕಾರ ಬೆಂಬಲ ಬೆಲೆ ಪ್ರತಿ ಕ್ವಿಂಟಲಗೆ 5875 ರೂ. ನಿಗದಿಪಡಿಸಿದೆ. ಆದರೆ ರೈತರು ಬೆಳೆದ ಉತ್ತಮ ಗುಣಮಟ್ಟದ ಕಡಲೆ ಕಾಳು ಬೆಳೆಯಬೇಕಾದರೆ ಸಾಕಷ್ಟು ಖರ್ಚುಮಾಡಿ ಕಷ್ಟ ಅನುಭವಿಸಿದ್ದಾರೆ. ಅವರಿಗೆ ಅನುಕೂಲವಾಗಲು ಸರ್ಕಾರ ಹೆಚ್ಚಿನ ಬೆಲೆ ನೀಡಿ ಎಂದರು. ಸಂಘದ ಉಪಾಧ್ಯಕ್ಷ ವೀರಣ್ಣಾ ಪರಾಂಡೆ ಮಾತನಾಡಿ, ಪ್ರಸ್ತುತ ಸಾಲಿನಲ್ಲಿ ಉತ್ತಮ ಹವಾಮಾನದಿಂದ ಗುಣಮಟ್ಟದ ಕಡಲೆ ಫಸಲು ಬಂದಿದೆ. ಆದರೆ ಸರ್ಕಾರ ಮಾತ್ರ ಕಡಿಮೆ ದರದಲ್ಲಿ ಖರೀದಿಸಿದೆ. ರೈತರಿಗೆ ಮಾರಾಟ ಮಾಡುವ ದರದಲ್ಲಿ ಅನ್ಯಾಯವಾಗಿದೆ ಎಂದರು. ನಿರ್ದೇಶಕ ಈರಣ್ಣಾ ಮಡಿವಾಳರ, ಚಂದ್ರನಾಥ ಅಷ್ಟಗಿ, ಶಂಕರ ಪೂಜಾರ, ಕಲ್ಲಯ್ಯ ವಿಭೂತಿಮಠ, ಸಂಘದ ಕಾರ್ಯದರ್ಶಿ ಕಲ್ಲಪ್ಪ ಕಿತ್ತೂರು, ಸಲೀಮ ಕತೀಬ, ಕಾಶಿ ದೊಡವಾಡ, ರತ್ನಾ ವಿಜಾಪುರ, ಯಲ್ಲಪ್ಪ ಅಷ್ಟಗಿ, ಮಂಜುನಾಥ ಬೆಳವಡಿ, ಸಂತೋಷ ಯಲಿಗಾರ, ಬಸಪ್ಪ ಗುಗ್ಗರಿ, ಪರಪ್ಪ ಹುಬ್ಬಳ್ಳಿ, ಶಿವರುದ್ರಪ್ಪ ಅಂಗಡಿ, ಮಲ್ಲೇಶಪ್ಪ ಛಬ್ಬಿ ಇತರರಿದ್ದರು.



ಶಿಕ್ಷಕರ ನೇಮಕಾತಿಗೆ ಎಬಿವಿಪಿ ಆಗ್ರಹ



ಹುಬ್ಬಳ್ಳಿ: ನಕಲಿ ಪಿಎಚ್‌ಡಿ ಅಭ್ಯರ್ಥಿಗಳ ವಿರುದ್ಧ ಕ್ರಮ ಕೈಗೊಳ್ಳಬೇಕು ಹಾಗೂ ತರಗತಿಗಳು ಸರಿಯಾಗಿ ನಡೆಯುವ ದೃಷ್ಟಿಯಿಂದ ಅಧ್ಯಾಪಕರ, ಶಿಕ್ಷಕರ ನೇಮಕಾತಿ ಮಾಡಬೇಕು ಎಂದು ಆಗ್ರಹಿಸಿ ನಗರದಲ್ಲಿ ಅಖಿಲ ಭಾರತೀಯ ವಿದ್ಯಾರ್ಥಿ ಪರಿಷತ್ ಕಾರ್ಯಕರ್ತರು ಹಾಗೂ ವಿದ್ಯಾರ್ಥಿಗಳು ವಿದ್ಯಾನಗರ ಕೆಎಂಸಿಆರ್‌ಐ ಆಸ್ಪತ್ರೆ ಎದುರು ಪ್ರತಿಭಟನೆ ನಡೆಸಿದರು.

ಎಬಿವಿಪಿಯ ಕೇಂದ್ರೀಯ ಕಾರ್ಯಸಮಿತಿ ಸದಸ್ಯ ಸಚಿನ ಕುಳಗೇರಿ ಮಾತನಾಡಿ, ರಾಜ್ಯದ ವಿವಿಧ ಸರ್ಕಾರಿ ಕಾಲೇಜುಗಳಲ್ಲಿ ನಕಲಿ ಪಿಎಚ್‌ಡಿ ಪದವಿ ಪಡೆದು ಕೆಲವರು ಉಪನ್ಯಾಸಕರಾಗಿ ಸೇವೆ ಸಲ್ಲಿಸುತ್ತಿದ್ದು, ಸರ್ಕಾರ ತಕ್ಷಣ ಇಂತಹವರ ವಿರುದ್ಧ ಅಗತ್ಯ ಕ್ರಮ ಕೈಗೊಳ್ಳಬೇಕು ಎಂದು ಆಗ್ರಹಿಸಿದರು. ಎಬಿವಿಪಿಯ ಜಿಲ್ಲಾ ಸಂಚಾಲಕ ಸಿದ್ಧಾರ್ಥ ಕೋರಿ ಮಾತನಾಡಿ, ರಾಜ್ಯದ ಬಹುತೇಕ ವಿಶ್ವವಿದ್ಯಾಲಯಗಳಲ್ಲಿ ಹಾಗೂ ಸರ್ಕಾರಿ ಕಾಲೇಜುಗಳಲ್ಲಿ ಅಧ್ಯಾಪಕರ ಹಾಗೂ ಶಿಕ್ಷಕರ ಹುದ್ದೆಗಳು ಖಾಲಿ ಇದ್ದು, ಇದರಿಂದ ತರಗತಿಗಳು ಸರಿಯಾದ ಸಮಯಕ್ಕೆ ನಡೆಯದೇ ಇರುವುದು ಹಾಗೂ ಪಠ್ಯಕ್ರಮಗಳು ಸರಿಯಾದ ಸಮಯಕ್ಕೆ ಮುಗಿಯದೆ ಇರುವುದು ವಿದ್ಯಾರ್ಥಿಗಳ ಭವಿಷ್ಯ ಅತಂತ್ರವಾಗಿದೆ ಎಂದರು. ಎಬಿವಿಪಿಯ ಪ್ರಾಂತ ಸಂಘಟನಾ ಕಾರ್ಯದರ್ಶಿ ವೆಂಕಟೇಶ ಡಾಂಗೆ, ತಿಲಕ ಕನಕಗಿರಿಮಠ, ಅನ್ಮೂಲ ಕಲಬುರಗಿ, ಅರ್ಥರ್ವಾ ಚವಾಣ್, ಶ್ರಾವಣಿ ಬಿದರಹಳ್ಳಿ, ಮೇಘನಾ ಹಿರೇಮಠ, ಕರಣ ಗಾಳಿ, ರಾಮು ಅಣ್ಣಿಗೇರಿ, ಪೃಥ್ವಿರಾಜ ಕಾಟಕರ ಇದ್ದರು.

ನಕಲಿ ಪಿಎಚ್‌ಡಿ ತಡೆಗೆ ಆಗ್ರಹ

ಧಾರವಾಡ: ರಾಜ್ಯದ ಅನುದಾನಿತ ಪದವಿ ಕಾಲೇಜುಗಳ ಖಾಲಿ ಹುದ್ದೆಗಳಿಗೆ ಕಾಯಂ ಶಿಕ್ಷಕರ ನೇಮಕ ಹಾಗೂ ನಕಲಿ ಪಿಎಚ್‌ಡಿ ಪದವೀಧರರ ಹಾವಳಿ ತಡೆಗೆ ಆಗ್ರಹಿಸಿ ಅಖಿಲ ಭಾರತೀಯ ವಿದ್ಯಾರ್ಥಿ ಪರಿಷತ್ ಕಾರ್ಯಕರ್ತರು ಶುಕ್ರವಾರ ಪ್ರತಿಭಟನೆ ನಡೆಸಿದರು.

ನೇತೃತ್ವ ವಹಿಸಿದ್ದ ಎಬಿವಿಪಿ ಧಾರವಾಡ ನಗರ ಕಾರ್ಯದರ್ಶಿ ಸಚಿನ್ ಕೋಟ್ಯಾಳ ಮಾತನಾಡಿ, ಕರ್ನಾಟಕದ ವಿವಿಧ ಅನುದಾನಿತ ಕಾಲೇಜುಗಳಲ್ಲಿ ನಕಲಿ ಪಿಎಚ್‌ಡಿ ದಾಖಲೆ ಸಲ್ಲಿಸಿ ಅತಿಥಿ ಉಪನ್ಯಾಸಕರು, ಉಪನ್ಯಾಸಕರು ಸೇವೆ ಸಲ್ಲಿಸುತ್ತಿರುವುದಾಗಿ ಆರೋಪಿಸಿದರು. ನಕಲಿ ಉಪನ್ಯಾಸಕರಿಂದ ಗುಣಮಟ್ಟದ ಬೋಧನೆ ಅಸಾಧ್ಯ. ಇದು ವಿದ್ಯಾರ್ಥಿಗಳ ಭವಿಷ್ಯಕ್ಕೆ ಮಾರಕವಾಗಲಿದೆ. ನಕಲಿ ಪಿಎಚ್‌ಡಿ ಉಪನ್ಯಾಸಕರು ಸಿಕ್ಕಬಿದ್ದ ನಂತರ ಹುದ್ದೆಗೆ ರಾಜೀನಾಮೆ ನೀಡುವುದರ ಮೂಲಕ ಪಾರಾಗುತ್ತಿದ್ದಾರೆ ಎಂದು ಆರೋಪುದರು.

ಕರ್ನಾಟಕ ಸೇರಿ ಅನ್ಯ ರಾಜ್ಯದಲ್ಲೂ ನಕಲಿ ಪಿಎಚ್‌ಡಿ ತಯಾರಿಸುವವರನ್ನು ಪತ್ತೆ ಮಾಡುವ ಮೂಲಕ ಅವರನ್ನು ಕಾನೂನು ಕುಣಿಗೆ ಒಳಪಡಿಸಬೇಕು. ರಾಜ್ಯದ 32 ವಿವಿಗಳಲ್ಲಿ ಖಾಲಿ ಇರುವ 9292 ಬೋಧಕ ಉದ್ದೆಗಳ ನೇಮಕಾತಿ ಮಾಡಿಕೊಳ್ಳಲು ಆಗ್ರಹಿಸಿದರು. ವಿವಿಗಳಿಗೆ ಸೂಕ್ತ ಅನುದಾನ ಬಿಡುಗಡೆ, ಖಾಲಿ ಹುದ್ದೆಗಳ ಭರ್ತಿ, ನಕಲಿ ಪಿಎಚ್‌ಡಿ ಪದವಿಗಳ ತಡೆಗೆ ಆಗ್ರಹಿಸಿ ಪ್ರಾದೇಶಿಕ ಆಯುಕ್ತರಿಗೆ ಮನವಿ ಸಲ್ಲಿಸಿದರು.



ಹೊಸ ದಿಗಂತ
ರಾಷ್ಟ್ರ ಜಾಗೃತಿಯ ದೈನಿಕ
ಶನಿವಾರ, 21 ಫೆಬ್ರವರಿ 2026, ಹುಬ್ಬಳ್ಳಿ







| ಬಡವ ಬಲ್ಲಿದನೆನ್ನದೆ ಜಾತ್ಯತೀತ ಹೋರಾಟ
| ನೊಂದವರ ಪಾಲಿನ ಬೆಳಕು

ಗಟ್ಟಿತನದ ದಿಟ್ಟ ಹೋರಾಟಗಾರ ಹಬೀಬ ಶಿಲೇದಾರ

ಜನರ ಸಂಕಷ್ಟಕ್ಕೆ ಸ್ಪಂದನೆ

ಜನರಿಗೆ ಸಂಕಷ್ಟಗಳು ಎದುರಾಗಿವೆ ಎಂದರೆ ಅವುಗಳ ಎದುರಿಗೆ ಹಬೀಬ ಶಿಲೇದಾರ ಇರುತ್ತಾರೆ. ಸರ್ಕಾರದ ಮಟ್ಟದಲ್ಲಾಗಲಿ, ಅಧಿಕಾರಿ ವರ್ಗದ ಮಟ್ಟದಲ್ಲಾಗಲಿ ಸಾರ್ವಜನಿಕರಿಗೆ ತೊಂದರೆಯಾಗಿದೆ ಎಂದರೆ ಅಲ್ಲಿ ಶಿಲೇದಾರ ಕಾಣುಸಿಗುತ್ತಾರೆ. ಅನ್ಯಾಯವಾಗುತ್ತಿದೆ ಎಂದು ಗಮನಕ್ಕೆ ಬಂದರೆ ಅಲ್ಲಿ ತನ್ನದೇ ಆದ ಯುವಕರ ಪಡೆಯೊಂದಿಗೆ ಅಲ್ಲಿ ಹಾಜರಿ ಹಬೀಬ ಶಿಲೇದಾರ ಇರುತ್ತಾರೆ. ಸಮಾಜದಲ್ಲಿ ಅನ್ಯಾಯ, ಅಕ್ರಮ, ದೌರ್ಜನ್ಯಗಳ ವಿರುದ್ಧ ಧ್ವನಿಯನ್ನು ಪ್ರಥಮವಾಗಿ ಎತ್ತುವ ವ್ಯಕ್ತಿ. ಜನರ ಸಮಸ್ಯೆಗಳನ್ನು ಸರ್ಕಾರದ, ಅಧಿಕಾರಿಗಳ ಗಮನಕ್ಕೆ ತಂದು ಪ್ರಾಮಾಣಿಕವಾಗಿ ಈಡೇರಿಸುವ ಕೆಲಸವನ್ನು ಮಾಡುತ್ತಿದ್ದಾರೆ.

ಶಾಲಾ ಹಂತದಲ್ಲಿಯೇ ಹೋರಾಟದ ಹಾದಿಯಲ್ಲಿ ಬೆಳೆದು ಬಂದ ಹಬೀಬ ಶಿಲೇದಾರ ಇವರು ಸಚಿವರಾದ ಸತೀಶ ಜಾರಕಿಹೊಳಿ ಇವರ ಗರಡಿಯಲ್ಲಿ ಬೆಳೆದವರು. ಇವರಿಗೆ ಅತ್ಯಾಪ್ತ ಶಿಷ್ಯನಾಗಿ ಸತೀಶ ಜಾರಕಿಹೊಳಿಯವರ ಅಭಿಮಾನಿ ಬಳಗದ ಪಡೆಯನ್ನೇ ಕಟ್ಟಿಕೊಂಡಿದ್ದಾರೆ.

ಅದರ ಮೂಲಕ ವಿವಿಧ ಹೋರಾಟಗಳಲ್ಲಿ ಭಾಗವಹಿಸಿ ಅನ್ಯಾಯದ ವಿರುದ್ಧ ಮೊದಲು ಧ್ವನಿ ಎತ್ತುವುದನ್ನು ರೂಢಿಸಿಕೊಂಡು ಬಂದಿರುವ ಹುಟ್ಟು ಹೋರಾಟಗಾರ ಹಬೀಬ ಶಿಲೇದಾರ ರೈತರಿಗೆ, ಕೂಲಿ ಕಾರ್ಮಿಕರಿಗೆ, ವಿದ್ಯಾರ್ಥಿಗಳಿಗೆ, ಜನಸಾಮಾನ್ಯರಿಗೆ ಆಗುತ್ತಿರುವ ತೊಂದರೆಯ ವಿರುದ್ಧವಾಗಿ ಹೋರಾಟದ ಕಹಳೆ ಮೊಳಗಿಸಿದ ಹೋರಾಟಗಾರ.

ಅಂಬಡಗಟ್ಟಿ ಗ್ರಾಮದಲ್ಲಿ ಸಾಮಾನ್ಯ ಕುಟುಂಬದಿಂದ ಬಂದ ಇವರು ಒಬ್ಬ ಗುತ್ತಿಗೆದಾರನಾಗಿ ನೂರಾರು ಕುಟುಂಬಗಳಿಗೆ ಉದ್ಯೋಗ ನೀಡಿ ಸ್ವಾವಲಂಬಿಯಾಗಿ ಜೀವನ ಸಾಗಿಸುತ್ತ ಸಾಮಾಜಿಕ ಅನ್ಯಾಯಗಳ ವಿರುದ್ಧ ಸತತ ಪರಿಶ್ರಮ, ಪ್ರಾಮಾಣಿಕತೆ ಮತ್ತು ದೃಢ ಸಂಕಲ್ಪದ ಮೂಲಕ ಸಮಾಜಕ್ಕೆ ಪ್ರೇರಣೆಯಾಗಿ ಹೋರಾಟದ ಮೂಲಕ ಸಾರ್ವಜನಿಕರಿಗೆ ನ್ಯಾಯ ದೊರಕಿಸಿಕೊಟ್ಟಿದ್ದಾರೆ.

ಅವರ ಹೋರಾಟದ ಹಾದಿ ಸದಾ ಕಲ್ಲು ಮುಳ್ಳುಗಳಿಂದ ಕೂಡಿರುತ್ತದೆ. ಅವೆಲ್ಲವನ್ನು ಮಟ್ಟಿ ನಿಂತು ಜನ ಸಾಮಾನ್ಯರು ಹಾಗೂ ಸಾರ್ವಜನಿಕರ ನ್ಯಾಯಕ್ಕಾಗಿ ನಿಸ್ವಾರ್ಥದಿಂದ ನಿತ್ಯ ಜನಪರವಾಗಿ ಹೋರಾಟ ಮಾಡಿದವರು ಹಬೀಬ ಶಿಲೇದಾರ. ಇಂತಹ ಹೋರಾಟಗಾರರನ್ನು ಜನತೆ ಸದಾ ಸ್ಮರಿಸುತ್ತಲೇ ಇರುತ್ತದೆ. ಇವರು ಅಚ್ಚಳಿಯದೇ ಜನಮಾನಸದಲ್ಲಿ ನಲೆಯೂರಿದ ವ್ಯಕ್ತಿಯಾಗಿದ್ದಾರೆ.

ಸಮಾಜದಲ್ಲಿ ಅಸಮಾನತೆ, ಭ್ರಷ್ಟಾಚಾರ, ಮತ್ತು ದಬ್ಬಾಳಿಕೆಯನ್ನು ವಿರೋಧಿಸಿ ಈ ಅನ್ಯಾಯದ ವಿರುದ್ಧ ಹೋರಾಟದಲ್ಲಿ ಮುಂಚೂಣಿಯಲ್ಲಿದ್ದು, ನ್ಯಾಯ ನಿಷ್ಠುರತೆಯಿಂದ ಬಾಳುತ್ತ ನೊಂದವರ ಪಾಲಿಗೆ ಬೆಳಕಾಗಿ ಬೆಳಗುತ್ತಿರುವ ಹಬೀಬ ಶಿಲೇದಾರ, ಕಾಂಗ್ರೆಸ್ ಕಾರ್ಯಕರ್ತರಿಗೆ, ಸಾಮಾನ್ಯ ಜನರಿಗೆ ಅನ್ಯಾಯವಾದಾಗ ಹೋರಾಟಕ್ಕೆ ಅಣಿಯಾಗುವರು.

ಕ್ಷೇತ್ರದ ಜನರ ಬಗ್ಗೆ ಕಾಳಜಿ ಹೊಂದಿರುವ ಶಿಲೇದಾರ ಯಾವುದೇ ಅಧಿಕಾರವನ್ನು ಬಯಸದೇ ನಿಸ್ವಾರ್ಥದಿಂದ ಕಾಂಗ್ರೆಸ್ ಪಕ್ಷದ ಒಬ್ಬ ಸಾಮಾನ್ಯ ಕಾರ್ಯಕರ್ತನಾಗಿ ಹಲವಾರು ಹೋರಾಟಗಳಲ್ಲಿ, ಅನೇಕ ಚುನಾವಣೆಗಳಲ್ಲಿ ಪಕ್ಷ ಸಂಘಟಿಸಿ ಹಗಲಿರುಳು ಪಕ್ಷದ ಗೆಲುವಿಗೆ ಹೋರಾಟ ಮಾಡುತ್ತಿರುತ್ತಾರೆ. ಕಾಂಗ್ರೆಸ್ ಪಕ್ಷ ಅಧಿಕಾರ ಸ್ಥಾನದಲ್ಲಿರದೇ ವಿರೋಧ ಪಕ್ಷದ ಸ್ಥಾನದಲ್ಲಿದ್ದಾಗ ಕ್ಷೇತ್ರದಲ್ಲಿರುವ ಒಬ್ಬ ಕಾಂಗ್ರೆಸ್ ಪಕ್ಷದ ಸಾಮಾನ್ಯ ಕಾರ್ಯಕರ್ತನಿಗೆ ಅನ್ಯಾಯವಾದಾಗ ಹಾಗೂ ಸರ್ಕಾರದ ವಿರುದ್ಧವಾಗಲಿ, ಯಾವುದೇ ಜನಪ್ರತಿನಿಧಿಯ ವಿರುದ್ಧವಾಗಲಿ ಹೋರಾಟದ ನೇತೃತ್ವವನ್ನು ವಹಿಸಿಕೊಂಡು ಹೋರಾಟದಲ್ಲಿ ಭಾಗವಹಿಸುವವರೇ ಹಬೀಬ ಶಿಲೇದಾರ. ಕಾಂಗ್ರೆಸ್ ಪಕ್ಷದ ಯಾವುದೇ ಹುದ್ದೆ ಸ್ವೀಕರಿಸದೇ ಕೇವಲ ಸಾಮಾನ್ಯ ಒಬ್ಬ ಕಾಂಗ್ರೆಸ್ ಕಾರ್ಯಕರ್ತನಾಗಿ ನಾಡಿನ ಜನತೆಗೆ, ಪಕ್ಷದ ಕಾರ್ಯಕರ್ತರಿಗೆ ಅನ್ಯಾಯವಾದಾಗ ಹೋರಾಟಕ್ಕೆ ಪುಟಿದೇಳುತ್ತಾರೆ.

ಕುಲವಳ್ಳಿ ಭಾಗದ ರೈತರಿಗಾಗಿ ಜೈಲು ಪಾಲು

ತಾಲೂಕಿನ ಕುಲವಳ್ಳಿ ಭಾಗದ 9 ಹಳ್ಳಿಗಳ ರೈತರು ಇನಾಂ ಜಮೀನನ್ನು ಹಲವಾರು ವರ್ಷಗಳಿಂದ ಉಳುಮೆ ಮಾಡುತ್ತ ಬಂದಿರುವ ಭೂಮಿಯನ್ನು ಹಿಂದೆ ಕಂದಾಯ ಸಚಿವರಾಗಿದ್ದ ಕಾಗೋಡು ತಿಮ್ಮಪ್ಪನವರು ಸ್ವತಃ ಕುಲವಳ್ಳಿಗೆ ಆಗಮಿಸಿ ಅಲ್ಲಿನ ರೈತರ ಪರಿಸ್ಥಿತಿ ವೀಕ್ಷಿಸಿ ಅಧಿಕಾರಿಗಳಿಗೆ ಉಳುಮೆ ಮಾಡುತ್ತಿರುವ ಜಮೀನಿನ ಪಿಟಿ ಶೀಟ್ ತಯಾರಿಸಲು ಸೂಚಿಸಲು ನೀಡಿದ್ದರ ಹಿನ್ನೆಲೆಯಲ್ಲಿ ರೈತರು ಉಳುಮೆ ಮಾಡುತ್ತಿರುವ ಜಮೀನನ್ನು ರೈತರ ಹೆಸರಿನಲ್ಲಿ ದಾಖಲು ಮಾಡಬೇಕೆಂದು ಬೃಹತ್ ಪ್ರಮಾಣದಲ್ಲಿ ಅಹೋರಾತ್ರಿ ಹೋರಾಟ ನಂತರ ರಸ್ತೆ ತಡೆ ಮುಂತಾದ ಹಲವಾರು ರೀತಿಯ ಹೋರಾಟಗಳಲ್ಲಿ ಸಂಪೂರ್ಣವಾಗಿ ಭಾಗವಹಿಸಿ ರೈತರ ಹೋರಾಟಕ್ಕೆ ಬೆನ್ನಲಬಾಗಿ ನಿಂತು ಹೋರಾಟ ಮಾಡಿದ ಅಪ್ರತಿಮ ಹೋರಾಟಗಾರ.

ಹೋರಾಟದ ಹಾದಿ ಮರೆಯುವಂತಿಲ್ಲ

ರೈತರ ಹಕ್ಕಿಗಾಗಿ ಹೋರಾಟದಲ್ಲಿ ಸಂಪೂರ್ಣವಾಗಿ ತೊಡಗಿಕೊಂಡಿರುವ ಶಿಲೇದಾರ ಇವರನ್ನು ರಸ್ತೆ ತಡೆ ನಡೆಸುತ್ತಿದ್ದಾಗ ಪೊಲೀಸರು ಬಂಧಿಸಿ ನ್ಯಾಯಾಂಗ ಬಂಧನಕ್ಕೆ ಒಳಪಡಿಸಿ ಕೆಲವು ದಿನಗಳವರೆಗೆ ಜೈಲು ಪಾಲಾಗಿದ್ದರು. ಇವರಿಗೆ ಯಾವುದೇ ಸಂವಿಧಾನಿಕ ಹುದ್ದೆಯಿಲ್ಲದಿದ್ದರೂ ಸಮಾಜಕ್ಕಾಗಿ, ರೈತರಿಗಾಗಿ ಇವರ ಹೋರಾಟದ ಹಾದಿಯನ್ನು ಮರೆಯುವಂತಿಲ್ಲ.



ಕೃಷಿ ಮಸೂದೆ ಹಿಂಪಡೆಯಲು ಹೋರಾಟ

ಕೇಂದ್ರ ಸರ್ಕಾರವು ರೈತರಿಗೆ ಮಾರಕವಾಗುವ ಕೃಷಿ ಮಸೂದೆಗಳನ್ನು ಜಾರಿಗೊಳಿಸಿದ್ದರ ಹಿನ್ನೆಲೆಯಲ್ಲಿ ಇವುಗಳನ್ನು ಹಿಂಪಡೆಯಬೇಕೆಂದು ದೆಹಲಿಯಲ್ಲಿ ರೈತರು ಪ್ರತಿಭಟನೆ ನಡೆಸಿದ್ದರು. ಇವರ ಬೆಂಬಲಾರ್ಥವಾಗಿ ಇಲ್ಲಿಯ ರೈತರೊಂದಿಗೆ ಕಿತ್ತೂರಿನ ರಾಷ್ಟ್ರೀಯ ಹೆದ್ದಾರಿ ಪಕ್ಕದ ಚನ್ನಮ್ಮಾಜಿ ವರ್ತುಳದಿಂದ ಪಟ್ಟಣದ ಮುಖ್ಯ ರಸ್ತೆಯ ಮೂಲಕ ಕೇಂದ್ರ ಸರ್ಕಾರದ ವಿರುದ್ಧ ಘೋಷಣೆಗಳನ್ನು ಕೂಗುತ್ತ ತಹಶೀಲ್ದಾರ್ ಕಚೇರಿಯವರೆಗೆ ಹೋಗಿ ಮನವಿ ಸಲ್ಲಿಸಿದ್ದರು.

ನಮ್ಮ ನಡೆ ಜನಸಾಮಾನ್ಯರ ಕಡೆ ಪಾದಯಾತ್ರೆ

ಹಳ್ಳಿಯ ಜನರ ಕನಿಷ್ಠ ಸಮಸ್ಯೆಗಳನ್ನು ಯಾರೂ ಕೇಳದ ಸಂದರ್ಭದಲ್ಲಿ ನಮ್ಮ ನಡೆ ಜನಸಾಮಾನ್ಯರ ಕಡೆ ಎಂಬ ಯೋಜನೆ ರೂಪಿಸಿಕೊಂಡು ರೈತರಿಗೆ ಬಿತ್ತನೆಯ ಬೀಜ, ಗೊಬ್ಬರ, ಕೃಷಿ ಉಪಕರಣಗಳಿಗೆ ದೊರಕುವ ಸೌಲಭ್ಯಗಳು ಸರಿಯಾಗಿ ಸಿಗುತ್ತಿರಲಿಲ್ಲ, ವಿದ್ಯಾರ್ಥಿಗಳಿಗೆ ಸಮರ್ಪಕ ಬಸ್ ಸೌಲಭ್ಯ, ಬಸ್ ಪಾಸ್ ಸರಿಯಾಗಿ ವಿತರಿಸದೇ ಇರುವುದು, ಬಿದ್ದ ಮನೆಗಳಿಗೆ ಪರಿಹಾರ ದೊರಕಿಸಲು, ಮನೆ ವಿತರಣೆಯಲ್ಲಿ ತಾರತಮ್ಯ, ಅರ್ಹ ಫಲಾನುಭವಿಗಳಿಗೆ ಪಿಂಚಣಿ ದೊರೆಯದೇ ಇರುವುದು ಸೇರಿದಂತೆ ಮುಂತಾದ ಇನ್ನೂ ಹಲವಾರು ಸಮಸ್ಯೆಗಳ ಕುರಿತು ಪ್ರಥಮ ಹಂತದಲ್ಲಿ ಕಡತನಾಳ, ತುರಮರಿ, ಕುಲಮನಟ್ಟಿ, ಸಮಟಗಿ, ಖೋದಾನಪೂರ, ಗುಡಿಕೊಟಬಾಗಿ, ಕಲಭಾವಿ, ಹಿರೇನಂದಿಹಳ್ಳಿ, ಚಿಕ್ಕನಂದಿಹಳ್ಳಿ, ಜಮಳೂರ, ಅವರಾದಿ, ಮಲ್ಲಾಪೂರ, ಎತ್ತಿನಕೇರಿ, ದೇಮಟ್ಟಿ ಎರಡನೆಯ ಹಂತದಲ್ಲಿ ಎಂ.ಕೆ.ಹುಬ್ಬಳ್ಳಿ, ವಿರಾಪೂರ, ಅಮರಾಪೂರ, ದಾಸ್ತಿಕೊಪ್ಪ, ಕಾದ್ರೊಳ್ಳಿ, ಹುಣಶೀಕಟ್ಟಿ, ತುರಮರಿ, ದೇವರಶೀಗಿಹಳ್ಳಿ, ಅಂಬಡಗಟ್ಟಿ, ಉಗರಖೋಡ, ಬಚ್ಚನಕೇರಿ, ಮೂರನೇ ಹಂತದಲ್ಲಿ ಬೈಲೂರ, ದೇಗುಲಹಳ್ಳಿ, ದೇಗಾಂವ, ಲಿಂಗದಳ್ಳಿ, ಬಸರಕೋಡ, ತಿಗಡೊಳ್ಳಿ, ಹೊನ್ನಾಪೂರ ಸೇರಿದಂತೆ ಇನ್ನೂ ನೂರಾರು ಹಳ್ಳಿಗಳಿಗೆ ತಮ್ಮ ಯುವ ಪಡೆಯೊಂದಿಗೆ ಭೇಟಿ ನೀಡಿ ಅವರ ಸಮಸ್ಯೆಯನ್ನು ಆಲಿಸಿ ಅವುಗಳಿಗೆ ಅಧಿಕಾರಿಗಳ ಮಟ್ಟದಲ್ಲಿ ಪಡೆಯಲು ದೊಡ್ಡಮಟ್ಟದ ಜನ ಸಾಮಾನ್ಯರೊಡನೆ ಸುಮಾರು 15ರಿಂದ 20 ಮೈಲಿ ದೂರದವರೆಗೆ ಎಲ್ಲ ಹಳ್ಳಿಗಳ ಜನರನ್ನು ಸೇರಿಸಿಕೊಂಡು ಪಾದಯಾತ್ರೆ ನಡೆಸಿದ್ದಾರೆ.

ರಾಷ್ಟ್ರೀಯ ಹೆದ್ದಾರೆ ಪಕ್ಕದ ಚನ್ನಮ್ಮಾಜಿ ವರ್ತುಳಕ್ಕೆ ಆಗಮಿಸಿ ಅಲ್ಲಿ ದೊಡ್ಡ ಮಟ್ಟದ ವೇದಿಕೆ ನಿರ್ಮಿಸಿ ಅಲ್ಲಿ ಎಲ್ಲ ಜನರ ಮೂಲಕ ಸಭೆಯನ್ನು ಮಾಡಿ ಅಲ್ಲಿಯೇ ಅಧಿಕಾರಿಗಳನ್ನು ಬರಮಾಡಿಕೊಂಡು ಅವರ ಮುಂದೆ ಸೇರಿದ ಸಾರ್ವಜನಿಕರ ಎಲ್ಲ ಸಮಸ್ಯೆಗಳನ್ನು ತಿಳಿಸಿ ಅವರಿಗೆ ಎಲ್ಲರಿಗೂ ಪರಿಹಾರದ ಯೋಜನೆ ರೂಪಿಸಿದ ಸತೀಶ ಜಾರಕಿಹೊಳಿಯವ ಪರಮ ಶಿಷ್ಯ ಶಿಲೇದಾರ.



ಭಾರತ್ ಜೋಡೊ ಪಾದಯಾತ್ರೆಯಲ್ಲಿಯೂ ಭಾಗಿ

ಕನ್ಯಾಕುಮಾರಿಯಿಂದ ಪ್ರಾರಂಭಗೊಂಡು ಕಾಶ್ಮೀರದವರೆಗೆ ಕಾಂಗ್ರೆಸ್ ಮುಖಂಡ ರಾಹುಲ್ ಗಾಂಧಿ ಅವರ ಭಾರತ್ ಜೋಡೊ ಪಾದಯಾತ್ರೆಯಲ್ಲಿ ಕಾಂಗ್ರೆಸ್ ಮುಖಂಡ, ಪ್ರಭಾವಿ ನಾಯಕ ಹಬೀಬ ಶಿಲೇದಾರ ಇವರು ತನ್ನ ನೂರಾರು ಬೆಂಬಲಿಗರೊಂದಿಗೆ ಬಳ್ಳಾರಿ ತಲುಪಿ ಅಲ್ಲಿ ಸಚಿವ ಸತೀಶ ಜಾರಕಿಹೊಳಿ ಅವರ ಗುಂಪಿನೊಂದಿಗೆ ಸೇರಿ ಹೆಜ್ಜೆ ಹಾಕಿ ಕಾಂಗ್ರೆಸ್ ಪಕ್ಷದ ಅಭಿಮಾನದ ಭಾಗವಾಗಿ ಐತಿಹಾಸಿಕ ಪಾದಯಾತ್ರೆಗೆ ಸಾಕ್ಷಿಯಾದರು ಮತ್ತು ಗಣ್ಯ ಮಾನ್ಯರ ಜೊತೆಗೆ ಮೇಕೆದಾಟು ಪಾದಯಾತ್ರೆಯಲ್ಲಿ ಭಾಗಿಯಾಗಿದ್ದರು.

- ಸತೀಶ ಜಾರಕಿಹೊಳಿ ಗರಡಿಯಲ್ಲಿ ಬೆಳೆದ ಶಿಷ್ಯ
- ಅನ್ಯಾಯದ ವಿರುದ್ಧ ಸದಾ ಹೋರಾಟ
- ಜನಮಾನಸದಲ್ಲಿ ಅಚ್ಚಳಿಯದೇ ನಲೆಯೂರಿದ ವ್ಯಕ್ತಿ
- ಸಮಾಜಕ್ಕೆ ಹೋರಾಟಗಳು ಪ್ರೇರಣೆ
- ಕ್ಷೇತ್ರದ ಜನರ ಬಗ್ಗೆ ಕಾಳಜಿ ಅನನ್ಯ
- ಪಕ್ಷ ಗುರುತಿಸಿದರೆ ಇನ್ನಷ್ಟು ಸೇವೆ ಮಾಡಲು ಸಾಧ್ಯ



ಸಾರ್ವಜನಿಕರ ಅಭಿಪ್ರಾಯ

ಹಬೀಬ ಶಿಲೇದಾರ ಒಬ್ಬ ಸಾಮಾನ್ಯ ಕಾಂಗ್ರೆಸ್ ಕಾರ್ಯಕರ್ತನಾಗಿ ಸಮಾಜಕ್ಕೆ ಹಲವಾರು ಸೇವೆಗಳು ಮತ್ತು ಅನ್ಯಾಯದ ವಿರುದ್ಧ ಹೋರಾಟ, ಪ್ರಕೃತಿ ವಿಕೋಪ, ಅತಿವೃಷ್ಟಿ, ಅನಾವೃಷ್ಟಿಯಲ್ಲಿ ಸಹಾಯ, ಬಡ ಮಕ್ಕಳಿಗೆ ಶಿಕ್ಷಣ ಕಲಿಸಲು ದತ್ತು ಪಡೆಯುವುದು, ಮತ್ತು ಶಿಕ್ಷಣ ವೆಚ್ಚ ಭರಿಸುವದು, ಪ್ರತಿಭಾ ಪುರಸ್ಕಾರ ನಡೆಸುವುದು, ಕ್ರೀಡೆಗಳಿಗೆ ಪ್ರೋತ್ಸಾಹ ನೀಡುವುದು, ಮಠ ಮಾನ್ಯಗಳಿಗೆ, ಗುಡಿ ಗುಂಡಾರಗಳಿಗೆ ಸಹಾಯ ಕಲ್ಪಿಸುಸುದು, ನೊಂದವರ ಧ್ವನಿಯಾಗಿ ನಿಲ್ಲುವ ಹಾಗೂ ಎಲ್ಲ ರಂಗಗಳಲ್ಲಿನ ಸಾಧಕರನ್ನು ಗುರುತಿಸಿ ಪ್ರೋತ್ಸಾಹಿಸುವುದು ಇವರ ಕಾಯಕದಲ್ಲಿನ ಸ್ವಲ್ಪ ಹಣವನ್ನು ಸಮಾಜ ಸೇವೆಗೆ ಬಳಸುತ್ತಿರುವ ಸಮಾಜ ಸೇವಕ ಇವರನ್ನು ಪಕ್ಷ ಗುರುತಿಸಿದರೆ ಇನ್ನಷ್ಟು ಸೇವೆ ಮಾಡಲು ಅನುಕೂಲವಾಗುವುದು ಎಂಬುದು ಸಾರ್ವಜನಿಕರ ಅಭಿಪ್ರಾಯ.

ಶಿಕ್ಷಕರ ನೇಮಿಸಲು ಹೋರಾಟ

ಅಂಬಡಗಟ್ಟಿ ಸರ್ಕಾರಿ ಕಿರಿಯ ಪ್ರಾಥಮಿಕ ಉರ್ದು ಶಾಲೆಗೆ ಶಿಕ್ಷಕರ ಕೊರತೆಯಾಗಿ ನಾಲ್ಕು ವರ್ಷವಾದರೂ ಶಿಕ್ಷಕರನ್ನು ನೇಮಿಸಿರಲಿಲ್ಲ. 40 ಮಕ್ಕಳು ಈ ಶಾಲೆಯಲ್ಲಿ ಕಲಿಕಯುತ್ತಿದ್ದರೂ ಒಬ್ಬ ಉರ್ದು ಶಿಕ್ಷಕರು ಸರಿಯಾಗಿ ಕಾರ್ಯ ನಿರ್ವಹಿಸುತ್ತಿರಲಿಲ್ಲ ಅದನ್ನು ಖಂಡಿಸಿ ಶಿಕ್ಷಕರನ್ನು ನೇಮಿಸಬೇಕೆಂದು ಶಾಲೆಗೆ ಬೀಗ ಹಾಕಿ ಶಿಕ್ಷಣ ಇಲಾಖೆಯ ಅಧಿಕಾರಿಗಳ ವಿರುದ್ಧ ಹೋರಾಟ ಮಾಡಿ ಶಿಕ್ಷಕರನ್ನು ನೇಮಿಸುವಂತೆ ಮಾಡಿದ್ದರು.

ಬೆಲೆ ಏರಿಕೆ ವಿರುದ್ಧ ಹೋರಾಟ

ಹಿಂದೆ ಕೋವಿಡ್ ಸಂದರ್ಭದಲ್ಲಿ ಬಿಜೆಪಿ ಸರ್ಕಾರದ ಅವಧಿಯಲ್ಲಿ ತೈಲ ಬೆಲೆ ಏರಿಕೆ, ಅಗತ್ಯ ದಿನ ಬಳಕೆಯ ವಸ್ತುಗಳ ಬೆಲೆ ಗಗನಕ್ಕೆ ಏರಿದ ಸಂದರ್ಭದಲ್ಲಿ ಕಿತ್ತೂರು ಕ್ಷೇತ್ರದ ಕಾಂಗ್ರೆಸ್ ಪಕ್ಷದ ಉಸ್ತುವಾರಿಗಳ ಹಾಗೂ ತಮ್ಮ ಅಭಿಮಾನಿಗಳ ಜೊತೆಗೆ ಕಿತ್ತೂರು ಕ್ಷೇತ್ರದಿಂದ ಕಾಂಗ್ರೆಸ್ ಪಕ್ಷದ ನೇತೃತ್ವ ವಹಿಸಿ ಬಿಜೆಪಿ ಸರ್ಕಾರವನ್ನು ಕಿತ್ತೊಗೆಯುವವರೆಗೂ ನಮ್ಮ ಹೋರಾಟ ನಿರಂತರವಾಗಿರುತ್ತದೆ ಎಂದು ಹೇಳುತ್ತ ಸಾಮಾನ್ಯ ಜನರಿಗೆ ಹೊರೆಯಾಗಬಾರದೆಂಬ ಒಂದೇ ಉದ್ದೇಶ ಇವರ ಹೋರಾಟಕ್ಕೆ ದಿಕ್ಸೂಚಿಯಾಗಿದೆ.

ಸರಾಯಿ ಅಂಗಡಿ ತೆರೆಯದಂತೆ ಹೋರಾಟ

ಅಂಬಡಗಟ್ಟಿ ಗ್ರಾಮದಲ್ಲಿ ಸರ್ಕಾರದ ಎಂಎಸ್ಐಎಲ್ ಮಳಿಗೆ ಪ್ರಾರಂಭಿಸದಂತೆ ತಮ್ಮ ಪಡೆಯೊಂದಿಗೆ ಬೆಳಗಾವಿಯ ಅಬಕಾರಿ ಇಲಾಖೆಯ ಮುಂದೆ ಪ್ರತಿಭಟನೆ ನಡೆಸಿ ಅಧಿಕಾರಿಗಳಿಗೆ ಮನವಿ ಸಲ್ಲಿಸಿದ್ದರು. ಸರಾಯಿ ಮಳಿಗೆ ಪ್ರಾರಂಭಿಸಿದರೆ ಯುವ ಪೀಳಿಗೆಯ ಮೇಲೆ ದುಷ್ಪರಿಣಾಮ ಬೀರಿ ಹಾಳಾಗುವುದನ್ನು ತಪ್ಪಿಸಲು ಪ್ರತಿಭಟನೆ ನಡೆಸಿದ್ದರು.





ಪಂಚಮಸಾಲಿ ಮೀಸಲಾತಿ ಹೋರಾಟಕ್ಕೆ ಬೆಂಬಲ

ಮುಸ್ಲಿಂ ಸಮಾಜದವರಾದರೂ ಇವರ ಸಾಮಾಜಿಕ ಕಳಕಳಿಯಿಂದ ಲಿಂಗಾಯತ ಪಂಚಮಸಾಲಿ ಸಮಾಜದವರು ತಮ್ಮ ಮೀಸಲಾತಿಗಾಗಿ ಹೋರಾಟ ಮಾಡುವ ಸಂದರ್ಭದಲ್ಲಿ ಹೋರಾಟಗಾರರಾದ ಹಬೀಬ ಶಿಲೇದಾರ ಇವರು ಈ ಹೋರಾಟದಲ್ಲಿ ಭಾಗವಹಿಸಿ ಹೋರಾಟದ ಎದೆಗಾರ ಎಂಬುದನ್ನು ತಿಳಿಸಿಕೊಟ್ಟವರು.



ವಿದ್ಯಾರ್ಥಿಗಳ ಬಸ್ಸಿಗಾಗಿ ಹೋರಾಟ

ಅಂಬಡಗಟ್ಟಿಯಿಂದ ಶಾಲಾ ಕಾಲೇಜಿನ ವಿದ್ಯಾರ್ಥಿಗಳು ಹಾಗೂ ಸಾರ್ವಜನಿಕರು ಕಿತ್ತೂರು, ಧಾರವಾಡ, ಬೆಳಗಾವಿ ಕಡೆಗೆ ಹೋಗುವುದು ತಂಬಾ ದುಸ್ತರವಾಗಿತ್ತು. ರಾಷ್ಟ್ರೀಯ ಹೆದ್ದಾರೆ ಪಕ್ಕದ ಅಂಬಡಗಟ್ಟಿ ಕ್ರಾಸ್‌ನಲ್ಲಿ ಕೆಎಸ್‌ಆರ್‌ಟಿಸಿಯ ಯಾವುದೇ ಬಸ್‌ಗಳ ನಿಲುಗಡೆ ಇರಲಿಲ್ಲ, ಇದರಿಂದ ತುಂಬಾ ತೊಂದರೆಯಾಗಿತ್ತು. ಅದಕ್ಕಾಗಿ ತಮ್ಮ ಪಡೆಯೊಂದಿಗೆ ಹಲವಾರು ಬಾರಿ ಹೋರಾಟ ಮಾಡಿ ಅಧಿಕಾರಿಗಳ ಮನವೊಲಿಸಿ ಅಲ್ಲಿ ಬಸ್ ನಿಲುಗಡೆ ಮಾಡುವಲ್ಲಿ ಯಶಸ್ಸು ಕಂಡರು. ಅಂಬಡಗಟ್ಟಿ ಗ್ರಾಮದ ಒಳಗಡೆ ಯಾವುದೇ ಬಸ್ಸಿನ ಸೌಲಭ್ಯವಿರಲಿಲ್ಲ ಅದನ್ನೂ ಕೂಡಾ ಹೋರಾಟದ ಪ್ರತಿಫಲವಾಗಿ ಗ್ರಾಮದ ಒಳಗಡೆ ಬಸ್ ಬರಲು ಪ್ರಾರಂಭಿಸಿತು.



ಕಬ್ಬಿನ ಬಿಲ್ ಕೊಡಿಸಲು ಹೋರಾಟ

ಎಂ.ಕೆ.ಹುಬ್ಬಳ್ಳಿಯ ಮಲಪ್ರಭಾ ಸಹಕಾರಿ ಸಕ್ಕರೆ ಕಾರ್ಖಾನೆಯ ಆಡಳಿತ ಮಂಡಳಿಯ ಹಿಂದಿನ ಅವಧಿಯಲ್ಲಿನ ರೈತರ ಕಬ್ಬಿನ ಬಿಲ್‌ನ್ನು ಬಾಕಿ ಉಳಿಸಿಕೊಂಡದ್ದರಿಂದ ರೈತರೊಂದಿಗೆ ಕಾರ್ಖಾನೆಯಲ್ಲಿ ಪ್ರತಿಭಟನೆ ನಡೆಸಿ ಆಡಳಿತ ಮಂಡಳಿಯ ಹಾಗೂ ಸರ್ಕಾರದ ಗಮನ ಸೆಳೆಯುವಲ್ಲಿ ಯಶಸ್ವಿ ಹೋರಾಟ ನಡೆಸಿ ರೈತರೊಂದಿಗೆ ನಾವಿದ್ದೇವೆ ಎಂಬದನ್ನು ತೋರಿಸಿಕೊಟ್ಟ ನಾಯಕ ಶಿಲೇದಾರ.

ಕೂಲಿ ಕಾರ್ಮಿಕರ ಸಂಬಳ ನೀಡುವಂತೆ ಹೋರಾಟ

ದೇವರಶೀಗಿಹಳ್ಳಿ ಹತ್ತಿರ ಕೆಪಿಟಿಸಿಎಲ್ ಇಲಾಖೆಯ ಕಾಮಗಾರಿಗಳನ್ನು ಕೂಲಿ ಕಾರ್ಮಿಕರು ಕೆಲಸ ನಿರ್ವಹಿಸಿದ್ದರು. ಅದರೆ, ಗುತ್ತಿಗೆದಾರನು ಇವರಿಗೆ ಸಂಬಳ ಕೊಡದೇ ಬೆಂಗಳೂರಿನ ಕಡೆಗೆ ಪಲಾಯನ ಮಾಡಿದ್ದಾನೆಂದು ಗಮನಕ್ಕೆ ಬಂದೊಡನೆ ಕಾರ್ಮಿಕರ ಮೂಲಕ ಪ್ರತಿಭಟನೆ ನಡೆಸಿ ತಹಶೀಲ್ದಾರ್ ಮೂಲಕ ಇವರಿಗೆ ನ್ಯಾಯ ದೊರಕಿಸಿಕೊಟ್ಟರು. ಇದು ಇವರ ಹೋರಾಟದ ಪ್ರತಿಫಲ.

ಶಿವಾಜಿ ಮೆರವಣಿಗೆ ಮೇಲೆ ಮಸೀದಿ ಕಡೆಯಿಂದ ಕಲ್ಲು

ಪುಟ ೧→ ಪಂಕಾ ಮಸೀದಿಯ ಸಮೀಪ ಮೆರವಣಿಗೆ ಶಾಂತ ರೀತಿಯಿಂದ ಹೊರಟಾಗ ಮಸೀದಿಯಲ್ಲಿದ್ದ ಕಿಡಿಗೇಡಿಗಳ ಗುಂಪು ಪೊಲೀಸ್ ಭದ್ರತೆ ಇದ್ದರೂ ಅದ್ಯಾವುದಕ್ಕೂ ಕ್ಯಾರೇ ಎನ್ನದೇ ಮೆರವಣಿಗೆಯಲ್ಲಿ ಪೊಲೀಸರ ಎದುರೇ ಕಲ್ಲು ತೂರಾಟ, ಚಪ್ಪಲಿ ಎಸೆದಿದ್ದಾರೆ. ಕಲ್ಲು ತೂರಾಟವಾಗುತ್ತಿದ್ದಂತೆ ಎಸ್ಪಿ ಸಿದ್ಧಾರ್ಥ ಗೋಯಲ್ ಅವರ ತಲೆಗೆ ಬಿದ್ದು ಗಾಯ ಕೂಡ ಆಗಿದೆ. ಸ್ಥಳದಲ್ಲೇ ಇದ್ದ ಹಿಂದುಗಳು ಮೆರವಣಿಗೆಯನ್ನು ಕೆಲವು ಸಮಯ ಸ್ಥಗಿತಗೊಳಿಸಿ ಆಕ್ರೋಶ ವ್ಯಕ್ತಪಡಿಸಿ ಕಲ್ಲು ತೂರಾಟ ನಡೆಸಿದವರನ್ನು ಬಂಧಿಸಬೇಕು ಎಂದು ಆಗ್ರಹಿಸಿದರು. ನಂತರ ಮೆರವಣಿಗೆ ಯಥಾ ಸ್ಥಿತಿಯಲ್ಲಿ ನಡೆಯಿತು.

ಆರೋಪಿಗಳ ಬಂಧನಕ್ಕೆ ಗಡುವು: ಶುಕ್ರವಾರ ಅಂಬಾಭವಾನಿ ದೇವಸ್ಥಾನ ಬಳಿ ಸೇರಿದ ಹಿಂದು ಸಂಘಟನೆಗಳ ಮುಖಂಡರು, ಕಾರ್ಯಕರ್ತರು, ಸಮಾಜದವರು ಎಲ್ಲಿ ಶಿವಾಜಿ ಮಹಾರಾಜರ ಮೆರವಣಿಗೆಗೆ ಅಪಮಾನ ಮಾಡಲಾಗಿದೆ ಅದೇ ಸ್ಥಳದಿಂದ ಮತ್ತೊಮ್ಮೆ ಮೆರವಣಿಗೆ ನಡೆಯಬೇಕು. ಇನ್ನೂ ಮಸೀದಿಯಲ್ಲಿ 8 ಜನರು ಇರಲಿಲ್ಲ 200 ಜನ ಪೂರ್ವ ನಿಯೋಜಿತದಿಂದಲೇ ಸೇರಿದ್ದಾರೆ. ಅಲ್ಲಿದ್ದ ಎಲ್ಲರೂ ಬಂಧನ ಆಗಬೇಕು. ಇನ್ನೂ ಮಸೀದಿಯ ಆಡಳಿತ ಮಂಡಳಿಯವರು, ಚೇರ್ಮನ್ ಅವರನ್ನು ಕೂಡ ಬಂಧಿಸಬೇಕು. ಶನಿವಾರ ಸಂಜೆ ವೇಳೆಗೆ ಬಂಧನವಾಗಬೇಕು ಎಂದು ಹಿಂದು ಸಂಘಟನೆ ಮುಖಂಡರು ಸಭೆಯಲ್ಲಿ ಗಡುವು ನೀಡಿ ಪೊಲೀಸರಿಗೆ ಎಚ್ಚರಿಕೆ ನೀಡಿದರು.

8 ಜನರ ಬಂಧನ

ಪುಟ ೧→ ತಮ್ಮ ಕಚೇರಿಯಲ್ಲಿ ಶುಕ್ರವಾರ ಬೆಳಗ್ಗೆ ಮಾಧ್ಯಮದವರಿಗೆ ಘಟನೆಯ ಕುರಿತು ಮಾಹಿತಿ ನೀಡಿದ ಎಸ್ಪಿ ಸಿದ್ಧಾರ್ಥ ಗೋಯಲ್, ಶಿವಾಜಿ ಮಹಾರಾಜರ ಜಯಂತಿ ನಿಮಿತ್ತ ಆಯೋಜಿಸಿದ್ದ ಮೆರವಣಿಗೆ ನಗರದ ಪಂಕಾ ಮಸೀದಿ ಬಳಿ ತೆರಳುತ್ತಿರುವಾಗ ಮಸೀದಿಯಿಂದ ಎರಡು ಕಲ್ಲು ಹಾಗೂ ಚಪ್ಪಲಿ ಎಸೆದಿರುವುದು ವಿಡಿಯೋ ಮೂಲಕ ತಿಳಿದುಬಂದಿದ್ದು, ತಕ್ಷಣ ಇದಕ್ಕೆ ಸಂಬಂಧಪಟ್ಟ 8 ಜನರನ್ನು ಬಂಧಿಸಿ ತನಿಖೆ ನಡೆಸಲಾಗುತ್ತಿದೆ ಎಂದರು. ಮೆರವಣಿಗೆಯ ಮೇಲೆ ಕಲ್ಲು ತೂರಾಟ ನಡೆಸಿದ ಪ್ರಮುಖ ಆರೋಪಿಯಾಗಿರುವ ನವನಗರದ ಸೆಕ್ಟರ್ ನಂ.10ರ ನಿವಾಸಿ ತನ್ವೀರ್ ಶಕೀಲ್ ಹವಾಲ್ದಾರ(28), ಪೆಂಡಾರಗಲ್ಲಿಯ ಮುಜ್ಜು ಉರ್ಫ್ ಮುಜಮಿಲ್ ರಾಜೇಸಾಬ್ ಕಮತಗಿ(23), ಸದ್ದಾಂ ರಾಜೇಸಾಬ್ ಕಮತಗಿ(22), ರಿಯಾನ್ ಮಹ್ಮದ ಶೇಖ್ (21), ವಸೀಮ್ ಅಲ್ಲಾಭಕ್ಷ ಶೇಖ್ (22) ಹಾಗೂ ನಗರದ ಶಂಕರಲಿಂಗ ಗುಡಿ ಹತ್ತಿರದ ನಿವಾಸಿ ಸರ್ಪರಾಜ ಇಕ್ಬಾಲಸಾಬ ಚಾವುಸ(33) ಎಂಬ ಎಂಟು ಜನರನ್ನು ಬಂಧಿಸಲಾಗಿದೆ ಎಂದು ಹೇಳಿದರು.


ಕಠಿಣ ಕ್ರಮಕ್ಕೆ ಸಿಎಂ ಸಿದ್ದರಾಮಯ್ಯ ಆದೇಶ

ಪುಟ ೧→ ಘಟನೆ ಕುರಿತು ಎಕ್ಸ್ ಪೋಸ್ಟ್ ಮಾಡಿರುವ ಸಿದ್ದರಾಮಯ್ಯ, ಈಗಾಗಲೇ ಪ್ರಕರಣ ಸಂಬಂಧ ಕೆಲವು ಆರೋಪಿಗಳನ್ನು ಬಂಧಿಸಿ, ವಿಚಾರಣೆಗೆ ಒಳಪಡಿಸಲಾಗುತ್ತಿದ್ದು, ಘಟನೆಗೆ ಕಾರಣರಾದ ಪ್ರತಿಯೊಬ್ಬರಿಗೂ ಶಿಕ್ಷೆ ನಿಶ್ಚಿತ. ನಾಡಿನ ಜನರಿಗೆ ಭಯಮುಕ್ತ ನೆಮ್ಮದಿಯ ಬದುಕು ನೀಡುವುದು ನಮ್ಮ ಮೊದಲ ಆದ್ಯತೆ. ಜನರ ಶಾಂತಿ - ನೆಮ್ಮದಿಗೆ ಭಂಗ ತರುವ ಯಾವುದೇ ವ್ಯಕ್ತಿ - ಶಕ್ತಿಗಳನ್ನು ನಾವು ಸಹಿಸುವುದಿಲ್ಲ. ಸಾರ್ವಜನಿಕರು ಯಾವುದೇ ಪ್ರಚೋದನೆಗಳಿಗೂ ಕಿವಿಗೊಡದೆ, ಸಂಯಮದಿಂದ ವರ್ತಿಸಿ. ಪೊಲೀಸ್ ಇಲಾಖೆ ತನ್ನ ಕರ್ತವ್ಯವನ್ನು ನಿಷ್ಪಕ್ಷಪಾತವಾಗಿ ಮಾಡಲಿದೆ ಎಂದು ಸಿಎಂ ತಿಳಿಸಿದ್ದಾರೆ.

ಒದ್ದು ಒಳಗೆ ಹಾಕಿ: ಬಿಜೆಪಿ

ಪುಟ ೧→ ಅವರು ಶುಕ್ರವಾರ ಮಾಧ್ಯಮಗಳ ಜತೆ ಮಾತನಾಡಿ, ಬಾಗಲಕೋಟೆಯಲ್ಲಿ ಕೆಲವು ದೇಶದ್ರೋಹಿಗಳು ಶಿವಾಜಿ ಮೆರವಣಿಗೆ ಮೇಲೆ ಕಲ್ಲು ತೂರಾಟ ನಡೆಸಿದ್ದಾರೆ. ಅವರು ಯಾರೆಂದು ಪೊಲೀಸರು ಪತ್ತೆ ಹಚ್ಚಿದ್ದಾರೆ. ಇಂಥ ದೇಶದ್ರೋಹಿಗಳನ್ನು ಒದ್ದು ಒಳಗೆ ಹಾಕಬೇಕೆಂದು ಮುಖ್ಯಮಂತ್ರಿಗಳಲ್ಲಿ ಹಾಗೂ ಗೃಹ ಸಚಿವರಲ್ಲಿ ಆಗ್ರಹಿಸುತ್ತೇನೆ ಎಂದರು. ಇಂಥ ಟಿಪ್ಪು, ಔರಂಗಜೇಬ್ ಮನಸ್ಥಿತಿ ಇರುವ ದೇಶದ್ರೋಹಿಗಳನ್ನು ಯಾವುದೇ ಕಾರಣಕ್ಕೆ ಕ್ಷಮಿಸಬಾರದು. ಇಂಥವರಿಗೆ ತಕ್ಕ ಪಾಠ ಕಲಿಸಬೇಕು ಎಂದು ವಿಜಯೇಂದ್ರ ಆಗ್ರಹಿಸಿದರು.

ರಾಮಬಾಣ



ಕಿಡಿ ನುಡಿ

•ವಾಸುದೇವರಾವ್ ಕಕ್ಕೆನೇಜಿ

ಪ್ರಧಾನಿ ನರೇಂದ್ರ ಮೋದಿ ದೇಶ ದ್ರೋಹಿ
- ನಸೀರ್ ಅಹ್ಮದ್

- ಅವರು ದ್ರೋಹ ಬಗೆದುದು ಯಾವ ದೇಶಕ್ಕೆ ಎಂಬುದನ್ನು ನೀವು ಸ್ಪಷ್ಟವಾಗಿ ಹೇಳಿದ್ದರೆ ಚೆನ್ನಾಗಿತ್ತು. ಭಾರತಕ್ಕಂತೂ ಅವರಿಂದ ಯಾವುದೇ ದ್ರೋಹವಾಗಿಲ್ಲ ಎಂಬುದು ನೀವೂ ಸೇರಿ ಸಮಸ್ತ ಭಾರತೀಯರಿಗೆ ತಿಳಿದಿದೆ!

ದಿನ ಭವಿಷ್ಯ

ಮೇಷ
ಕೆಲವು ಅನಿರೀಕ್ಷಿತ ಗುರಿ ಸಾಧಿಸಬೇಕಾಗುತ್ತದೆ. ಚಿಂತೆಗೆ ಕಾರಣವಿಲ್ಲ, ನಿಮ್ಮಿಂದ ಸುಲಭದಲ್ಲೆ ಸಾಧ್ಯವಾಗಲಿದೆ. ಬಂಧು ಭೇಟಿ. ಆರ್ಥಿಕ ಸ್ಥಿರತೆ.

ವೃಷಭ
ಬಾಕಿ ಉಳಿದ ಕಾರ್ಯ ಪೂರೈಸಿರಿ. ಸಂಜೆ ವೇಳೆ ಕುಟುಂಬ ಸದಸ್ಯರ ಜತೆ ಆತ್ಮೀಯ ಕಾಲಕ್ಷೇಪ. ಪ್ರೇಮಿಗಳ ಮಧ್ಯೆ ಒಡಕು ಉಂಟಾದೀತು.

ಮಿಥುನ
ಕೆಲವು ಪುಟ್ಟ ಬದಲಾವಣೆ ಮಾಡಿಕೊಳ್ಳಿ. ಆರೋಗ್ಯಪೂರ್ಣ ಮತ್ತು ಸಂತಸದ ಬದುಕು ಸಾಧ್ಯ. ದೊಡ್ಡ ಮಟ್ಟದ ವೆಚ್ಚಕ್ಕೆ ಕೈಹಾಕಬೇಡಿ.

ಕಟಕ
ಕೆಲಸದ ಒತ್ತಡದಿಂದ ಮುಕ್ತಿ. ನಿಮ್ಮ ಇಷ್ಟದ ಕಾರ್ಯ ನಡೆಸಲು ಅವಕಾಶ. ಧನಲಾಭ. ಅತಿ ಆಹಾರ ಸೇವನೆ ಜಡತ್ವಕ್ಕೆ ಕಾರಣವಾದೀತು.

ಸಿಂಹ
ಎಲ್ಲರು ಮೆಚ್ಚುವ ಸಾಧನೆ ನಿಮ್ಮದು. ಅಶಾಂತಿ ಪರಿಹಾರ. ಕಠಿಣ ಕಾರ್ಯ ಸುಲಭದಲ್ಲಿ ಪೂರ್ಣ. ಹೊಸ ಹೊಣೆಗಾರಿಕೆ ಈಗ ಹೊತ್ತುಕೊಳ್ಳದಿರಿ.

ಕನ್ಯಾ
ಮನಸ್ಸೇಕೋ ಉದಾಸ. ಎಲ್ಲರ ಜತೆ ಬೆರೆಯಲು ಮನಸ್ಸು ಬಾರದು. ಕಾರಣವಿಲ್ಲದ ಚಿಂತೆ. ಕೆಲವರಿಗೆ ಹೊಟ್ಟೆ ನೋವು ಕಾಡಬಹುದು.

ತುಲಾ
ಪ್ರಮುಖ ನಿರ್ಧಾರ ತಾಳಬೇಕಾದ ದಿನ. ಮನದಲ್ಲಿ ಶಾಂತತೆ ಕಾಯ್ದುಕೊಳ್ಳಿ. ಒತ್ತಡಗಳು ಪ್ರಭಾವಿಸದಂತೆ ನೋಡಿ. ದೈಹಿಕ ನೋವು ಸಂಭವ.

ವೃಶ್ಚಿಕ
ಪ್ರೀತಿಯ ಬದುಕು ಅಥವಾ ಕೌಟುಂಬಿಕ ಪರಿಸರ ಸಕಾರಾತ್ಮಕ ಬದಲಾವಣೆ ಕಾಣಲಿದೆ. ಸಮಸ್ಯೆ ನಿವಾರಣೆ. ಬಂಧುಗಳ ಸಹಕಾರ.

ಧನು
ಕೆಲ ವಿಚಾರಗಳಲ್ಲಿ ಗೊಂದಲದ ಮನಸ್ಥಿತಿ. ಸ್ಪಷ್ಟತೆ ಕಾಣದೆ ತೊಳಲಾಟ. ವಿವೇಕದಿಂದ ವರ್ತಿಸಿ, ಇತರರನ್ನು ನಿಯಂತ್ರಿಸಲು ಹೋಗದಿರಿ.

ಮಕರ
ವೃತ್ತಿಯಲ್ಲಿ ಹೆಚ್ಚು ಎಚ್ಚರದಿಂದಿರಿ. ಪ್ರತಿಕೂಲ ಸನ್ನಿವೇಶ ಎದುರಾದೀತು. ಇದರ ಮಧ್ಯೆಯೇ ಆರ್ಥಿಕ ಉನ್ನತಿ. ಮುಖ್ಯ ಯೋಜನೆ ಯಶಸ್ಸು.

ಕುಂಭ
ಇಂದು ನಿಮ್ಮ ಸುತ್ತಲಿನ ಪರಿಸರ ಗಂಭೀರ ಎನಿಸಲಿದೆ. ನೀವೂ ಅದಕ್ಕೆ ಹೊಂದಿಕೊಳ್ಳಿ. ಕೆಲಸದಲ್ಲಿ ಭಾರೀ ಒತ್ತಡ. ಇತರರ ಅಸಹಕಾರ ಎದುರಿಸುವಿರಿ.

ಮೀನ
ಏರುಪೇರಿನ ದಿನ. ಸಂತೋಷ, ಬೇಸರ ಎರಡೂ ಅನುಭವಿಸುವಿರಿ. ಪ್ರೀತಿಗೆ ಅಡ್ಡಿ. ಒತ್ತಡ ಕಳೆಯಲು ಸಂಗೀತ, ಅಧ್ಯಾತ್ಮ ನೆರವಾದೀತು.

ರಾಹುಕಾಲ: 9.00-10.30
ಗುಳಿಕಕಾಲ: 6.00-7.30

ಅದೃಷ್ಟ ಸಂಖ್ಯೆ 8,1,5,0

ಎಕ್ಸ್ ಖಾತೆಯಲ್ಲಿ ವಿಷಯ ಹಂಚಿಕೊಂಡ ಮುಖ್ಯಮಂತ್ರಿ ಸಿದ್ದರಾಮಯ್ಯ

ಸಾಮಾಜಿಕ ನ್ಯಾಯಕ್ಕೆ ಬದ್ಧ

•**ಬೆಂಗಳೂರು:** ಸಾಮಾಜಿಕ ನ್ಯಾಯ ಎನ್ನುವುದು ನನ್ನ ಪಾಲಿಗೆ ಒಂದು ಸಿದ್ಧಾಂತ ಅಲ್ಲ, ಅದು ಸರ್ವ ಸಮಾನತೆಯ ಗುರಿಯನ್ನು ತಲುಪಲು ನಾನು ಆರಿಸಿಕೊಂಡ ಬದುಕಿನ ಹಾದಿ. ಸಾಮಾನ್ಯವಾಗಿ ಸಾಮಾಜಿಕ ನ್ಯಾಯ ಎಂದರೆ ಯಾರಿಂದಲೋ ಕಿತ್ತು, ಇನ್ಯಾರಿಗೋ ಹಂಚುವ ಜನವಿರೋಧಿಯಾದ, ತಾರತಮ್ಯದ ನೀತಿ ಎಂಬಂತೆ ಬಿಂಬಿಸಲಾಗುತ್ತಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.

ಸಾಮಾಜಿಕ ಜಲತಾಣ ಟ್ವಿಟರ್‌ನಲ್ಲಿ ಹಲವಾರು ವಿಷಯಗಳನ್ನು ಹಂಚಿಕೊಂಡಿರುವ ಅವರು, ಸಂಪತ್ತು, ಅಧಿಕಾರ ಮತ್ತು ಅವಕಾಶಗಳು ಎಲ್ಲರಿಗೂ ಸಮಾನವಾಗಿ ಹಂಚಿಕೆಯಾಗಬೇಕು. ಅಭಿವೃದ್ಧಿಯ ಫಲವನ್ನು ಜಾತಿ, ಧರ್ಮ, ಪ್ರದೇಶಗಳ ಭೇದವಿಲ್ಲದೆ ಸರ್ವರಿಗೂ ಸಮಾನವಾಗಿ ಹಂಚಿಕೆಯಾಗಬೇಕೆನ್ನುವುದು ಸಂವಿಧಾನದ ಆಶಯವಾಗಿ ಹೊರಹೊಮ್ಮಿರುವ ಸಾಮಾಜಿಕ ನ್ಯಾಯದ ಪರಿಕಲ್ಪನೆ. ಇದೇ ನಿಜವಾದ ವೈಜ್ಞಾನಿಕವಾದ ಅಭಿವೃದ್ಧಿ ಮಾದರಿ ಎಂದಿದ್ದಾರೆ.

ಸಾಮಾಜಿಕ ನ್ಯಾಯದ ಮೂಲಕ ಸಮಸಮಾಜದ ನಿರ್ಮಾಣಕ್ಕೆ ಪ್ರಯತ್ನಿಸಿದ್ದ ಅಣ್ಣ ಬಸವಣ್ಣ, ಗ್ರಾಮ ಸ್ವರಾಜ್ಯದ ಕನಸು ಬಿತ್ತಿದ್ದ ಮಹಾತ್ಮ ಗಾಂಧಿ ಮತ್ತು ರಾಜಕೀಯ ಪ್ರಭುತ್ವದ ಜೊತೆ ಸಾಮಾಜಿಕ ಪ್ರಜಾಪ್ರಭುತ್ವ ಸ್ಥಾಪನೆಯಾಗಬೇಕೆಂದು ಪ್ರತಿಪಾದಿಸಿದ್ದ ಬಾಬಾಸಾಹೇಬ್ ಅಂಬೇಡ್ಕರ್ ಮತ್ತಿತರ ಮಾರ್ಗದರ್ಶಕರ ಚಿಂತನೆಗಳ ಸಾರದೊಂದಿಗೆ ಈ ಅಭಿವೃದ್ಧಿ ಮಾದರಿಯನ್ನು ರೂಪಿಸಿದ್ದೇನೆ. ಇದನ್ನು ನಾನು ಹೆಮ್ಮೆಯಿಂದ ಕರ್ನಾಟಕ ಮಾದರಿ ಎಂದಿದ್ದಾರೆ.

ನನ್ನ ರಾಜಕೀಯ ಜೀವನ ಕಠಿಣವಾಗಿತ್ತು: ನನ್ನ ನಾಲ್ಕು ದಶಕಗಳ ರಾಜಕೀಯ ಜೀವನ ಎಂದಿಗೂ ಹೂವಿನ ಹಾಸಿಗೆ ಆಗಿರಲಿಲ್ಲ, ಅದು ಕಲ್ಲು - ಮುಳ್ಳುಗಳ ಹಾದಿಯಾಗಿತ್ತು. ನನ್ನನ್ನು ರಾಜಕೀಯವಾಗಿ ಮುಗಿಸಲು ಹಲವಾರು ದೊಡ್ಡ ದೊಡ್ಡ ನಾಯಕರು ಹಲವಾರು ಬಗೆಯ ಕುಟಿಲ ಕಾರಸ್ತಾನಗಳನ್ನು ಮಾಡಿದ್ದಾರೆ. ಅವುಗಳನ್ನೆಲ್ಲವನ್ನೂ ಜನತೆಯ ಆಶೀರ್ವಾದದಿಂದ ಗೆದ್ದು ಬಂದಿದ್ದೇನೆ.

ಕುರಿಕಾಯುವವನು ಸಿಎಂ ಆದ ಎನ್ನುವ ಹೊಟ್ಟೆಕಿಚ್ಚು



ನನ್ನ ಮೇಲೆ ವಿರೋಧಿಗಳು ನಡೆಸುತ್ತಿರುವ ಬಹುತೇಕ ದಾಳಿಗಳು, ಮಾಡುತ್ತಿರುವ ಟೀಕೆ-ಆರೋಪಗಳಿಗೆ ನಾನು ಹುಟ್ಟಿದ ಜಾತಿಯೂ ಒಂದು ಕಾರಣ. ಕುರಿ ಕಾಯುತ್ತಾ ಇರಬೇಕಾದವನು ಮುಖ್ಯಮಂತ್ರಿ ಆಗಿ ಬಿಟ್ಟನಲ್ಲಾ, ಆರ್ಥಿಕ ತಜ್ಞರಿಗೆ ಸರಿಸಮನಾಗಿ ನಿಂತು ಸಾಲು ಸಾಲು ಬಜೆಟ್ ಮಂಡಿಸಿ ಶಹಬ್ಬಾಸ್ ಗಿರಿ ಗಳಿಸುತ್ತಿದ್ದಾನಲ್ಲಾ ಎನ್ನುವ ಅಸಹನೆ, ಅವರೊಳಗೆ ದ್ವೇಷ, ಅಸೂಯೆ ಕುದಿಯುತ್ತಿದೆ. ಇವನೊಬ್ಬನನ್ನು ರಾಜಕೀಯವಾಗಿ ಮುಗಿಸಿಬಿಟ್ಟರೆ ಅದರ ನಂತರ ನಮ್ಮೆಲ್ಲರ ಹಾದಿ ಸುಲಭವಾಗುತ್ತದೆ ಎನ್ನುವ ರಾಜಕೀಯ ದುರುದ್ದೇಶದ ಲೆಕ್ಕಾಚಾರ ಇವರ ಮನಸ್ಸಿನಲ್ಲಿದೆ.

ರಣರಂಗ ಬಿಟ್ಟು ಓಡಿಹೋಗುವ ಹೇಡಿಯಾಗಲಾರೆ

ಇದು ನನ್ನ ವಿರುದ್ಧ ನಡೆಯುತ್ತಿರುವ ಷಡ್ಯಂತ್ರಗಳಲ್ಲ, ಇದು ನನ್ನನ್ನು ನಂಬಿರುವ, ಪ್ರೀತಿಸುತ್ತಿರುವ, ನನಗೆ ನಿರಂತರವಾಗಿ ಆಶೀರ್ವಾದ ನೀಡಿ ಬೆಂಬಲಿಸುತ್ತಿರುವ ನಿಮ್ಮ ವಿರುದ್ಧ ನಡೆಯುತ್ತಿರುವ ಷಡ್ಯಂತ್ರ ಎನ್ನುವುದು ನನಗೆ ಚೆನ್ನಾಗಿ ಗೊತ್ತು. ಆದ್ದರಿಂದ ನನ್ನ ಉಸಿರು ಇರುವವರೆಗೆ ಈ ರಾಜಕೀಯ ಷಡ್ಯಂತ್ರ, ದ್ವೇಷ-ಅಸೂಯೆಯ ರಾಜಕಾರಣದ ವಿರುದ್ಧ ಹೋರಾಡುತ್ತೇನೆ. ಇದು ಸತ್ಯ, ನ್ಯಾಯ ಮತ್ತು ಧರ್ಮಕ್ಕಾಗಿ ನಡೆಯುತ್ತಿರುವ ಹೋರಾಟ. ನಿಮ್ಮೆಲ್ಲರ ಬೆಂಬಲದೊಂದಿಗೆ ಈ ಹೋರಾಟವನ್ನು ನನ್ನ ಉಸಿರು ಇರುವವರೆಗೆ ನಡೆಸುತ್ತೇನೆ, ರಣರಂಗವನ್ನು ಬಿಟ್ಟು ಓಡಿ ಹೋಗುವ ಹೇಡಿ ನಾನಾಗಲಾರೆ.

ಸಫಾರಿ ಪುನರಾರಂಭ

•**ಮೈಸೂರು:** ಮಾನವ-ಹುಲಿ ಸಂಘರ್ಷದ ಹಿನ್ನೆಲೆಯಲ್ಲಿ ಕಳೆದ ನವೆಂಬರ್ 7ರಂದು ಸ್ಥಗಿತಗೊಳಿಸಲಾಗಿದ್ದ ಸಫಾರಿಯನ್ನು ಫೆ.21ರಿಂದ ಷರತ್ತುಬದ್ಧವಾಗಿ ಪುನಾರಂಭಿಸಲು ನಿರ್ಧರಿಸಿದ್ದು, ಈ ಷರತ್ತುಗಳನ್ನು ಕಟ್ಟುನಿಟ್ಟಾಗಿ ಜಾರಿ ಮಾಡುವಂತೆ ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಸಚಿವ ಈಶ್ವರ ಖಂಡ್ರೆ ಅಧಿಕಾರಿಗಳಿಗೆ ಸ್ಪಷ್ಟ ಸೂಚನೆ ನೀಡಿದರು.



ಶುಕ್ರವಾರ ಮೈಸೂರಿನಲ್ಲಿ ಮೈಸೂರು, ಕೊಡಗು, ಚಾಮರಾಜನಗರ ವಿಭಾಗದ ಅಧಿಕಾರಿಗಳೊಂದಿಗೆ ಸಭೆ ನಡೆಸಿದ ಅವರು, ಬಹುತೇಕ ಶನಿವಾರದಿಂದ ಸಫಾರಿ ಆರಂಭಿಸಲು ಅಧಿಕೃತ ಆದೇಶ ಹೊರಡಿಸಲಾಗುವುದು. ಈ ಆದೇಶದಲ್ಲಿರುವ ಷರತ್ತುಗಳ ಉಲ್ಲಂಘನೆ ಆದರೆ, ಸಂಬಂಧಿತ ಅಧಿಕಾರಿಗಳನ್ನೇ ಹೊಣೆ ಮಾಡಲಾಗುವುದು ಎಂದು ಎಚ್ಚರಿಸಿದರು

ನ.7ಕ್ಕೆ ಮೊದಲು ಬಳಕೆಯಾಗುತ್ತಿದ್ದ ಸಫಾರಿ ವಾಹನಗಳಲ್ಲಿ ಶೇ.50ರಷ್ಟು ವಾಹನ ಮತ್ತು ಸಿಬ್ಬಂದಿಯನ್ನು ಮಾತ್ರವೇ ಬಳಕೆ ಮಾಡಬೇಕು. ಹೆಚ್ಚಾಗಿ ಬಸ್‌ಗಳ ಮೂಲಕ ಸಫಾರಿ ನಡೆಸಬೇಕು. ಅತ್ಯಂತ ಕಡಿಮೆ ಸಂಖ್ಯೆಯಲ್ಲಿ ಕ್ಯಾಂಪರ್ ಮತ್ತು ಜೀಪ್ ಬಳಕೆ ಮಾಡಬೇಕು. ಈ ಬಗ್ಗೆ ಸ್ಪಷ್ಟ ಆದೇಶ ಹೊರಡಿಸಲಾಗುವುದು ಎಂದರು.

ವನ್ಯಜೀವಿಗಳು ಕಾಡಿನಿಂದ ಹೊರಬರದಂತೆ ಕ್ರಮಕ್ಕೆ ಸೂಚನೆ: ಬಂಡಿಪುರ ಮತ್ತು ನಾಗರಹೊಳೆ ಅರಣ್ಯ ಪ್ರದೇಶದಲ್ಲಿ ಮಾನವ-ವನ್ಯಜೀವಿ ಸಂಘರ್ಷ ಇರುವ ಪ್ರದೇಶವನ್ನು ಗುರುತಿಸಬೇಕು. ಆ ಪ್ರದೇಶದಲ್ಲಿ ಗಸ್ತು ಹೆಚ್ಚಿಸಬೇಕು. ವನ್ಯಜೀವಿಗಳು ವಸತಿ ಪ್ರದೇಶಕ್ಕೆ ಬಾರದಂತೆ, ಜೀವಹಾನಿ, ಬೆಳೆ ಹಾನಿ ಮಾಡದಂತೆ ಎಚ್ಚರಿಕೆ ವಹಿಸಬೇಕು ಎಂದು ನಿರ್ದೇಶನ ನೀಡಿದರು.

ಬಂಡೀಪುರ ಅರಣ್ಯದ ಗಡಿಯಲ್ಲಿ 100 ಕಿ.ಲೋ.ಮೀಟರ್ ಅತ್ಯಂತಸೂಕ್ಷ್ಮ ಪ್ರದೇಶವಾಗಿದ್ದು, ಇಲ್ಲಿ 5 ಕಿ.ಮೀ.ಗೆ ಒಂದರಂತೆ 25 ಶಿಬಿರ ನಿರ್ಮಿಸಿ, ಪ್ರತಿ ಶಿಬಿರದಲ್ಲಿ ಸ್ಥಳೀಯರನ್ನು ಕಾಡಿನ ಮಿತ್ರ ಎಂದು ನೇಮಕ ಮಾಡಿಕೊಂಡು, ವನ್ಯಜೀವಿಗಳ ಚಲನವಲನದ ಬಗ್ಗೆ ನಿಗಾ ಇಡಬೇಕು. ಥರ್ಮಲ್ ಡ್ರೋನ್, ವಾಹನ ಇತ್ಯಾದಿ ಯಾವುದೇ ಸೌಲಭ್ಯ ಬೇಕಿದ್ದರೂ ಲಿಖಿತ ಮೂಲಕ ಪ್ರಸ್ತಾವನೆ ಸಲ್ಲಿಸಿ ಎಂದರು. ವನ್ಯಜೀವಿಗಳ ರಕ್ಷಣೆಯ ಜೊತೆಗೆ ಕಾಡಿನಂಚಿನಲ್ಲಿ ವಾಸಿಸುತ್ತಿರುವ ನಿವಾಸಿಗಳ ಜೀವ ರಕ್ಷಣೆಯೂ ಅರಣ್ಯ ಇಲಾಖೆಯ ಪ್ರಥಮ ಆದ್ಯತೆ ಆಗಿದೆ ಎಂದರು.

ತುಪ್ಪದ ಪ್ಯಾಕ್‌ಗೆ ಕ್ಯುಆರ್ ಕೋಡ್

ಪುಟ ೧→ ಇದರಿಂದಾಗಿ ಗ್ರಾಹಕರು ಉತ್ಪನ್ನದ ಸತ್ಯಾಸತ್ಯತೆಯನ್ನು ಮತ್ತು ಆಹಾರ ಸುರಕ್ಷತೆಯನ್ನು ಖಚಿತಪಡಿಸಿಕೊಳ್ಳಬಹುದೆಂದು ಕೆಎಂಎಫ್ ಗುಣಮಟ್ಟ ವಿಭಾಗದ ಮುಖ್ಯಸ್ಥ ವಿ.ಸಿ.ವೆಂಕಟೇಶ್ ತಿಳಿಸಿದ್ದಾರೆ.

ನಕಲಿ ವ್ಯಾಪಾರಿಗಳ ವಿರುದ್ಧ ಸಮರ: ಈ ಕ್ರಮವನ್ನು ಮೊದಲಿಗೆ ನಂದಿನಿ ತುಪ್ಪದ ಪ್ಯಾಕೆಟ್ ಮತ್ತು ಬಾಟಲಿಗಳ ಮೇಲೆ ಪರಿಚಯಿಸಲಾಗುವುದು. ಮುಂದಿನ ದಿನಗಳಲ್ಲಿ ಉಳಿದ ಉತ್ಪನ್ನದ ಮೇಲೆ ಕ್ಯುಆರ್ ಕೋಡ್ ಜಾರಿ ಮಾಡುವ ಚಿಂತನೆ ನಡೆಸಲಾಗುವುದು. ಕ್ಯುಆರ್ ಕೋಡ್ ಕ್ರಮವು ನಕಲಿ ವ್ಯಾಪಾರಿಗಳ ವಿರುದ್ಧ ಸಮರ ಹಾಗೂ ಗ್ರಾಹಕರ ವಿಶ್ವಾಸವನ್ನು ಮತ್ತಷ್ಟುಗಳಿಸುವ ಪ್ರಯತ್ನವಾಗಿದೆ ಎಂದು ಕೆಎಂಎಫ್ ತಿಳಿಸಿದೆ.

ಕ್ಯುಆರ್ ಕೋಡ್ ವ್ಯವಸ್ಥೆಯು ಅಂತಿಮ ಹಂತದ ಸಿದ್ಧತೆಯಲ್ಲಿದ್ದು, ಶೀಘ್ರದಲ್ಲೇ ಅಂದರೆ ಮಾರ್ಚ್ ತಿಂಗಳಲ್ಲಿ ಎಲ್ಲಾ ಒಕ್ಕೂಟಗಳಲ್ಲೂ ಜಾರಿ ಮಾಡಲಾಗುವುದು. ಪೂರ್ವಸಿದ್ಧತಾ ಕಾರ್ಯ ಮುಗಿದಿದ್ದು, ಎಲ್ಲಾ ಒಕ್ಕೂಟಗಳಲ್ಲಿ ಜಾರಿ ಮಾಡಲು ಬೇಕಾದ ತಾಂತ್ರಿಕ ವ್ಯವಸ್ಥೆಯನ್ನು ಮಾಡಲಾಗುತ್ತಿದೆ. ಬಳಿಕ ಪೂರ್ಣ ಪ್ರಮಾಣದಲ್ಲಿ ರಾಜ್ಯಾದ್ಯಂತ ಕ್ಯುಆರ್ ಕೋಡ್ ವ್ಯವಸ್ಥೆ ಜಾರಿ ಮಾಡಲಾಗುವುದು ಎಂದು ಕೆಎಂಎಫ್ ವ್ಯವಸ್ಥಾಪಕ ನಿರ್ದೇಶಕ ಬಿ.ಶಿವಸ್ವಾಮಿ ತಿಳಿಸಿದ್ದಾರೆ.

ಹೇಗೆ ಕೆಲಸ ಮಾಡುತ್ತದೆ?

ಪುಟ ೧→ ಒಟಿಪಿ ನಮೂದಿಸಿದಾಗ ಉತ್ಪನ್ನದ ಸಂಪೂರ್ಣ ಮಾಹಿತಿಯು ತಕ್ಷಣವೇ ಗೋಚರಿಸುತ್ತದೆ. ಇದು ಗ್ರಾಹಕರು ಖರೀದಿಸಿದ ತುಪ್ಪ ಅಸಲಿಯೋ ಅಥವಾ ನಕಲಿಯೋ ಎಂಬುದನ್ನು ಖಚಿತಪಡಿಸಲು ಸಹಾಯ ಮಾಡುತ್ತದೆ.

ಪಾರದರ್ಶಕ ವ್ಯವಸ್ಥೆ ಗ್ರಾಹಕರು ಖರೀದಿಸಿದ ತುಪ್ಪ ಅಸಲಿಯೋ, ನಕಲಿಯೋ ಎಂಬುದನ್ನು ಖಚಿತಪಡಿಸಲು ಸಹಾಯ ಮಾಡುತ್ತದೆ. ಪ್ರಸ್ತುತ, ಕಲಬೆರಕೆ, ನಕಲಿ ಮಾಡುವ ಹೆಚ್ಚಿನ ಅಪಾಯ ಪರಿಗಣಿಸಿ, ಕ್ಯುಆರ್ ಕೋಡ್ ವ್ಯವಸ್ಥೆ ಜಾರಿ.
■ ಬಿ.ಶಿವಸ್ವಾಮಿ, ಕೆಎಂಎಫ್ ಎಂಡಿ

ಕ್ಯುಆರ್ ಕೋಡ್ ಜಾರಿ ಮಾಡುವ ಸಂಬಂಧ ಪ್ರಯೋಗಾತ್ಮಕ ಹಂತ ಯಶಸ್ವಿಯಾಗಿದ್ದು, ಮಾರ್ಚ್ ತಿಂಗಳಿಂದ ಎಲ್ಲಾ ಒಕ್ಕೂಟಗಳಲ್ಲೂ ಜಾರಿ ಮಾಡಲಾಗುವುದು.
■ ವಿ.ಸಿ.ವೆಂಕಟೇಶ್, ಗುಣಮಟ್ಟ ವಿಭಾಗದ ಮುಖ್ಯಸ್ಥ

ಮಹಿಳಾ ಕೇಂದ್ರಿತ ಯೋಜನೆಗೆ ಒತ್ತು

ಪುಟ ೧→ **ಮಹಿಳಾ ಕೇಂದ್ರಿತ ಯೋಜನೆಗಳಿಗೆ ಒತ್ತು:** ರಾಜ್ಯ ಸರ್ಕಾರ ಮಹಿಳಾ ಕೇಂದ್ರೀಕೃತ ಯೋಜನೆಗಳ ಮೂಲಕ ಅವರ ಸ್ವಾಭಿಮಾನದ ಬದುಕಿಗೆ ನೆರವಾಗುತ್ತಿದೆ. ಹೆಣ್ಣು ಮಕ್ಕಳು ಯಾವುದೇ ಸವಲತ್ತಾಗಲಿ, ಹಣವನ್ನಾಗಲಿ ನೀಡಿದರೆ ಅದನ್ನು ಸ್ವಂತಕ್ಕೆ ಬಳಸುವುದಿಲ್ಲ, ಬದಲಾಗಿ ಅದನ್ನು ತಮ್ಮ ಕುಟುಂಬದ ಏಳಿಗೆಗೆ ಪೂರಕವಾಗಿ ವಿನಿಯೋಗಿಸುತ್ತಾರೆ. ಹಾಗಾಗಿಯೇ ಸರ್ಕಾರ ಮಹಿಳಾ ಕೇಂದ್ರಿತ ಯೋಜನೆಗಳಿಗೆ ಒತ್ತು ನೀಡಿದೆ ಎಂದರು.

ಅಕ್ಕ ಫುಡ್ ಮೇಳ ಬೆಂಗಳೂರಿನಲ್ಲಿ ನಡೆಸಲಾಗುತ್ತಿತ್ತು. ಈ ವರ್ಷ ಹೊರಗಡೆ ಮಾಡಬೇಕೆಂಬ ಇರಾದೆಯೊಂದಿಗೆ ಮಂಗಳೂರಿನಲ್ಲಿ ಆಯೋಜಿಸಲಾಗುತ್ತಿದೆ. ವಿವಿಧ ರಾಜ್ಯ ಹಾಗೂ ಜಿಲ್ಲೆಗಳ ಸ್ವಸಹಾಯ ಗುಂಪುಗಳ ವಿವಿಧ ಉತ್ಪನ್ನಗಳ 100ಕ್ಕೂ ಅಧಿಕ ಮಳಿಗೆಗಳು, ಅಕ್ಕ ಫುಡ್ ಕೋರ್ಟ್ ಕೂಡಾ ಇದೆ ಎಂದು ಸಚಿವರು ಹೇಳಿದರು.

ಮೇಳಕ್ಕೆ ಚಾಲನೆ ನೀಡಿ ಮಾತನಾಡಿದ ವಿಧಾನಸಭೆ ಅಧ್ಯಕ್ಷ ಯು.ಟಿ.ಖಾದರ್, ಗ್ರಾಮೀಣ ಮಹಿಳೆಯರಿಗೆ ಶಕ್ತಿ ತುಂಬುವ ಈ ಮೇಳ ವ್ಯಾಪಾರದ ವೇದಿಕೆ ಮಾತ್ರವಲ್ಲ, ಸ್ವಸಹಾಯ ಸಂಘಗಳ ಶಕ್ತಿ, ಸ್ವಾವಲಂಬನೆಯ ಶಕ್ತಿ ತೋರಿಸುವ ಕಾರ್ಯಕ್ರಮ ಎಂದರು.

ಶಾಸಕ ವೇದವ್ಯಾಸ ಕಾಮತ್ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು. ದ.ಕ. ಸಂಸದ ಕ್ಯಾ. ಬ್ರಿಜೇಶ್ ಚೌಟ, ಗೇರು ಅಭಿವೃದ್ಧಿ ನಿಗಮದ ಅಧ್ಯಕ್ಷೆ ಮಮತಾ ಗಟ್ಟಿ, ಮುಡಾ ಅಧ್ಯಕ್ಷ ಸದಾಶಿವ ಉಳ್ಳಾಲ್, ಕೊಂಕಣಿ ಅಕಾಡೆಮಿ ಅಧ್ಯಕ್ಷ ಸ್ಟ್ಯಾನಿ ಅಲ್ವಾರಿಸ್, ಕೌಶಲ್ಯಾಭಿವೃದ್ಧಿ ಇಲಾಖೆಯ ಕಾರ್ಯದರ್ಶಿ ಮನೋಜ್ ಕುಮಾರ್ ಮೀನ, ಎನ್‌ಆರ್‌ಎಲ್‌ಎಂ ಮಿಶನ್ ನಿರ್ದೇಶಕಿ ಜ್ಯೋತ್ಸ್ನಾ, ಜಿಲ್ಲಾಧಿಕಾರಿ ದರ್ಶನ್ ಎಚ್.ವಿ., ಜಿ.ಪಂ. ಸಿಇಒ ವಿನಾಯಕ ನರ್ವಾಡೆ ಮೊದಲಾದವರು ಉಪಸ್ಥಿತರಿದ್ದರು.

ಏನೆಲ್ಲಾ ಇದೆ?

ಪುಟ ೧→ ಸುಮಾರು 100ಕ್ಕೂ ಅಧಿಕ ಮಳಿಗೆಗಳಲ್ಲಿ ವಿವಿಧ ರೀತಿಯ ವಸ್ತುಗಳು ಪ್ರದರ್ಶನ ಮತ್ತು ಮಾರಾಟಕ್ಕಿವೆ. ಆಂಧ್ರಪ್ರದೇಶದ ಕಲಂಕಾರಿ ಸೀರೆ, ತೆಲಂಗಾಣದ ಕೊಚಂಪಳ್ಳಿ ಸೀರೆಗಳು, ಅಸ್ಸಾಂನ ಕಸೂತಿ ಸೀರೆ, ತ್ರಿಪುರಾ, ಪಶ್ಚಿಮ ಬಂಗಾಳದ ಹ್ಯಾಂಡ್‌ಲೂಮ್ಸ್, ಉತ್ತರ ಪ್ರದೇಶದ ಕೈಮಗ್ಗ ವಸ್ತುಗಳು ಹಾಗೂ ಇತರ ಗೃಹೋಪಯೋಗಿ ಮತ್ತು ಆಹಾರ ಉತ್ಪನ್ನಗಳ ಜತೆಗೆ ಕರ್ನಾಟಕದ ಚನ್ನಪಟ್ಟಣದ ಮರದ ಗೊಂಬೆಗಳು, ಕೊಪ್ಪಳದ ಕಿನ್ನಾಳ ಆಟದ ಸಾಮಗ್ರಿಗಳು, ಇಳಕಲ್ ಸೀರೆ, ನಾರಿನ ಉತ್ಪನ್ನದ ಬ್ಯಾಗ್‌ಗಳು ಪ್ರದರ್ಶನದಲ್ಲಿವೆ.

ಹಿಂದುಗಳ ಮೇಲೆ ನಿಲ್ಲದ ದೌರ್ಜನ್ಯ

ಪುಟ ೧→ ಗೋಹತ್ಯೆ ನಿಷೇಧವಾಗುವಲ್ಲಿ ಸರ್ಕಾರದ ಜವಾಬ್ದಾರಿಯೂ ಇದೆ, ಸಮಾಜದ ಜವಾಬ್ದಾರಿಯೂ ಇದೆ. ಪ್ರತಿ ಜಿಲ್ಲೆಗೊಂದು ಗೋಶಾಲೆ ತೆರೆಯಬೇಕು. ಅನ್ಯ ಉದ್ದೇಶಕ್ಕೆ ಬಳಕೆಯಾಗುತ್ತಿರುವ ಗೋಮಾಳಗಳ ಒತ್ತುವರಿ ತೆರವುಗೊಳಿಸಬೇಕು. ಗೋಸೇವೆ ಮಾಡುವವರಿಗೆ ಗೋಮಾಳಗಳ ನಿರ್ವಹಣೆ ಜವಾಬ್ದಾರಿ ವಹಿಸಬೇಕು ಎಂದು ಅವರು ಅಭಿಪ್ರಾಯಪಟ್ಟರು.

ಮಧ್ಯಪ್ರದೇಶ: ದುರ್ಗಾ ದೇಗುಲ ಧ್ವಂಸಕ್ಕೆ ಯತ್ನ, ಹಿಂಸಾಚಾರ

ಪುಟ ೧→ ಜಿಲ್ಲಾ ಪೊಲೀಸ್ ಮುಖ್ಯಸ್ಥರು, ಸರ್ಕಾರಿ ಅಧಿಕಾರಿಗಳು ಸೇರಿದಂತೆ ಹಿರಿಯ ಅಧಿಕಾರಿಗಳ ನೇತೃತ್ವದಲ್ಲಿ ಸ್ಥಳೀಯ ಪೊಲೀಸರು ತ್ವರಿತವಾಗಿ ನಿಯೋಜಿಸಿ ಶಾಂತಿ ಪುನಃ ಸ್ಥಾಪಿಸುವಲ್ಲಿ ಯಶಸ್ವಿಯಾದರು. ಪರಿಸ್ಥಿತಿಯನ್ನು ಹತೋಟಿಗೆ ತರಲು ಅಶ್ರುವಾಯು ಶೆಲ್‌ಗಳನ್ನು ಹಾರಿಸಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಪೂಜೆ ವೇಳೆ ಧ್ವನಿವರ್ಧಕದಲ್ಲಿ ಆಜಾನ್: ಮಾಧ್ಯಮಗಳ ಪ್ರಕಾರ, ದುರ್ಗಾ ದೇವಸ್ಥಾನದಲ್ಲಿ ಪೂಜೆ ನಡೆಯುತ್ತಿದ್ದ ವೇಳೆ ನೇರ ಮುಂಭಾಗದಲ್ಲಿರುವ ಮಸೀದಿಯಲ್ಲಿ ಧ್ವನಿವರ್ಧಕದಲ್ಲಿ ಆಜಾನ್ ಕೂಗಲಾಗಿದೆ. ಆರತಿ ವೇಳೆ ಧ್ವನಿವರ್ಧಕದಲ್ಲಿ ಆಜಾನ್ ಕೂಗಿದ್ದರಿಂದ ಹಿಂದುಗಳು ವಿರೋಧ ವ್ಯಕ್ತಪಡಿಸಿದ್ದರು. ಆಜಾದ್ ಚೌಕ್ ಪ್ರದೇಶ ಹಿಂದಿನಿಂದಲೂ ಸೂಕ್ಷ್ಮ ಪ್ರದೇಶವೆಂದು ಪರಿಗಣಿಸಲಾಗಿದೆ. ರಂಜಾನ್ ಆರಂಭವು ಈ ಪ್ರದೇಶದಲ್ಲಿ ಕೋಮು ಸಂವೇದನೆಗಳನ್ನು ಮತ್ತಷ್ಟು ಹೆಚ್ಚಿಸಿದೆ.

ರಾಯಣ್ಣ ಪ್ರತಿಮೆಗೆ ಅಪಮಾನ

ಪುಟ ೧→ ಘಟನೆಗೆ ಸಂಬಂಧಿಸಿದಂತೆ ಸಮಗ್ರ ತನಿಖೆ ಮುಂದುವರಿದಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಕ್ರಮಕೈಗೊಳ್ಳಲು ಸಚಿವರ ಸೂಚನೆ: ಮಚ್ಚೆ ಗ್ರಾಮದಲ್ಲಿರುವ ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ಪ್ರತಿಮೆಗೆ ಕಿಡಿಗೇಡಿಗಳು ಯಾವುದೋ ಪದಾರ್ಥ ಬಳಿದಿರುವುದುರಿಂದ ಸಾಕಷ್ಟು ವಿವಾದಕ್ಕೆ ತಿರುಗುವ ಸಾಧ್ಯತೆ ಇದ್ದು, ಈ ಪ್ರಕರಣಕ್ಕೆ ಸಂಬಂಧಿಸಿದ ಆರೋಪಿಗಳನ್ನು ಕೂಡಲೇ ಬಂಧಿಸಿ ಕ್ರಮ ಕೈಗೊಳ್ಳುವಂತೆ ಸಚಿವ ಸತೀಶ್ ಜಾರಕಿಹೊಳಿ ಪೊಲೀಸರಿಗೆ ಸೂಚಿಸಿದ್ದಾರೆ. ಮಾಧ್ಯಮಗಳೊಂದಿಗೆ ಮಾತನಾಡಿ, ಈ ಘಟನೆಗೆ ಸಂಬಂಧಿಸಿದಂತೆ ಸಿಸಿ ಟಿವಿ ದೃಶ್ಯಾವಳಿಗಳನ್ನು ಪೊಲೀಸರು ಪರಿಶೀಲನೆ ನಡೆಸಿದ್ದಾರೆ. ಘಟನೆ ಸಂಬಂಧ ತನಿಖೆ ಮುಂದುವರಿಸಲಾಗಿದೆ. ಗ್ರಾಮಸ್ಥರು ಯಾವುದೇ ರೀತಿ ಆತಂಕಕ್ಕೆ ಒಳಗಾಗುವುದು ಬೇಡ, ಗ್ರಾಮದಲ್ಲಿ ಶಾಂತಿ ಸುವ್ಯವಸ್ಥೆ ಕಾಪಾಡಿಕೊಳ್ಳಬೇಕು ಎಂದು ತಿಳಿಸಿದ್ದಾರೆ.

ಪ್ರಯಾಣ ದರ ಹೆಚ್ಚಿಸುವ ಪ್ರಸ್ತಾಪ ಇಲ್ಲ: ಸಚಿವ

•**ಬೆಂಗಳೂರು:** ಸಾರಿಗೆ ನಿಗಮಗಳ ಪ್ರಯಾಣ ದರವನ್ನು ಪ್ರಸ್ತುತ ಹೆಚ್ಚಿಸುವ ಯಾವುದೇ ಯೋಜನೆ ಇಲ್ಲ ಎಂದು ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ಹೇಳಿದ್ದಾರೆ. ಈ ಬಗ್ಗೆ ಸುದ್ದಿಗಾರರೊಂದಿಗೆ ಮಾತನಾಡಿ, ಪ್ರಸ್ತುತ ಪ್ರಯಾಣ ದರವನ್ನು ಹೆಚ್ಚಿಸುವ ಪ್ರಶ್ನೆಯೇ ಇಲ್ಲ, ಭವಿಷ್ಯದ ಪರಿಸ್ಥಿತಿಯನ್ನು ನೋಡಿ ನಿರ್ಧಾರ ತೆಗೆದುಕೊಳ್ಳಲಾಗುವುದು ಕಳೆದ ವರ್ಷ ಜನವರಿಯಲ್ಲಿ ಪ್ರಯಾಣ ದರವನ್ನು ಶೇ.15ರಷ್ಟು ಹೆಚ್ಚಿಸಲಾಗಿತ್ತು. ಪ್ರತಿ ವರ್ಷ ಪ್ರಯಾಣ ದರವನ್ನು ಪರಿಷ್ಕರಿಸುವ ಬಗ್ಗೆ ಚರ್ಚೆಗಳು ನಡೆಯುತ್ತಿವೆ ಎಂದು ಮಾಹಿತಿ ನೀಡಿದ್ದಾರೆ. ಜಲಮಂಡಳಿ, ವಿದ್ಯುತ್ ದರ ಮತ್ತು ಮೆಟ್ರೊ ಮಾದರಿಯಲ್ಲಿ ಬಸ್ ದರವನ್ನು ನಿಗದಿಪಡಿಸುವ ಬಗ್ಗೆ ಸರ್ಕಾರ ಪರಿಗಣಿಸುತ್ತಿದೆ ಎಂದರು.

ಟ್ರಂಪ್ ಸುಂಕ ರದ್ದು

ಪುಟ ೧→ ಸುಂಕವನ್ನು ವಿಧಿಸಲು ಅಂತಾರಾಷ್ಟ್ರೀಯ ತುರ್ತು ಆರ್ಥಿಕ ಅಧಿಕಾರ ಕಾಯ್ದೆಯು(ಐಇಇಪಿಎ) ಅಧ್ಯಕ್ಷರಿಗೆ ಅಧಿಕಾರ ನೀಡುವುದಿಲ್ಲ ಎಂದು ನಾವು ಭಾವಿಸುತ್ತೇವೆ ಎಂದು ರಾಬರ್ಟ್ಸ್ ತೀರ್ಪಿನಲ್ಲಿ ಬರೆದಿದ್ದಾರೆ. ಸುಂಕ ವಿಧಿಸುವ ಅಧಿಕಾರ ಕಾಂಗ್ರೆಸ್ ಗಷ್ಟೇ ಇದ್ದು, ಅಧ್ಯಕ್ಷ ಟ್ರಂಪ್‌ಗೆ ಇಲ್ಲ ಎಂದು ಮುಖ್ಯ ನ್ಯಾಯಮೂರ್ತಿ ಹೇಳಿದರು. ನ್ಯಾಯಮೂರ್ತಿಗಳಾದ ಆಮಿ ಕೋನಿ ಬ್ಯಾರೆಟ್, ನೀಲ್ ಗೋರ್ಸಚ್ ರಾಬರ್ಟ್ಸ್ ಮತ್ತು ಇನ್ನೂ ಮೂವರು ಒಪ್ಪಿಕೊಂಡರು. ನ್ಯಾಯಮೂರ್ತಿಗಳಾದ ಕ್ಲಾರೆನ್ಸ್ ಥಾಮಸ್, ಸ್ಯಾಮ್ಯುಯೆಲ್ ಅಲಿಟೊ ಮತ್ತು ಬ್ರೆಟ್ ಕವನಾಫ್ ವ್ಯತಿರಿಕ್ತ ತೀರ್ಪು ಬರೆದರು. 2025ರ ಏ.2ರಂದು ಟ್ರಂಪ್, ಕಾರ್ಯನಿರ್ವಾಹಕ ಆದೇಶದ ಮೂಲಕ ಈ ಸುಂಕ ನಿರ್ಧಾರಕ್ಕೆ ಸಹಿ ಹಾಕಿ, ವಿಮೋಚನಾ ದಿನ ಎಂದು ಕರೆದಿದ್ದರು. ಅಂದು ಅವರು ಜಗತ್ತಿನ ವಿವಿಧ ದೇಶಗಳ ಮೇಲೆ ಸುಂಕ ವಿಧಿಸಿದ್ದರು. ಟ್ರಂಪ್ ಅವರ ಕ್ರಮವು ಜಾಗತಿಕ ಮಾರುಕಟ್ಟೆಗಳನ್ನು ಬೆಚ್ಚಿಬೀಳಿಸಿತು. ಜತೆಗೆ ಸಾಂಪ್ರದಾಯಿಕ ಯುಎಸ್ ವ್ಯಾಪಾರ ಪಾಲುದಾರರನ್ನು ದೂರವಿಟ್ಟು, ಜಾಗತಿಕ ಆರ್ಥಿಕ ಅನಿಶ್ಚಿತತೆಗೆ ಕಾರಣವಾಯಿತು. ಟ್ರಂಪ್ ವಿರುದ್ಧ ಸುಪ್ರೀಂ ಕೋರ್ಟ್ ನೀಡಿರುವ ತೀರ್ಪಿನಿಂದಾಗಿ ಅಮೆರಿಕ, ಸುಂಕ ಸಂಗ್ರಹದಲ್ಲಿ 175 ಬಿಲಿಯನ್ ಡಾಲರ್ ಅನ್ನು ಮರುಪಾವತಿ ಮಾಡಬೇಕಾದ ಅಪಾಯವಿದೆ ಎಂದು ಅರ್ಥಶಾಸ್ತ್ರಜ್ಞರು ಹೇಳಿದ್ದಾರೆ.



ನಾಚಿಕೆಗೇಡಿನ ಕೃತ್ಯ

ಪುಟ ೧→ **ಜೆನ್ ಝಿಗಳು ಕ್ಷಮಿಸಲ್ಲ:** ಜೆನ್-ಝಿಗಳು ಕಾಂಗ್ರೆಸ್ ಪಕ್ಷವನ್ನು ಎಂದಿಗೂ ಕ್ಷಮಿಸಲ್ಲ ಎಂದು ಆಕ್ರೋಶ ವ್ಯಕ್ತಪಡಿಸಿರುವ ಸಂಬಿತ್ ಪಾತ್ರಾ, ನೀವು ನೆಹರೂ, ಎಡ್ವಿನಾ ಮತ್ತು ಹಾವು ಈ ಬಗ್ಗೆ ಗೂಗಲ್‌ನಲ್ಲಿ ಹುಡುಕಿಯಂತೆ. ಭಾರತವೊಂದು ಹಾವಾಡಿಗರ ರಾಷ್ಟ್ರವೆಂದು ಪಂಡಿತ್ ನೆಹರೂ, ಎಡ್ವಿನಾ ಮೌಂಟ್‌ಬ್ಯಾಟನ್ ಮತ್ತು ಬ್ರಿಟಿಷರ ಸಮಕ್ಷಮ ತಾಯ್ನಾಡನ್ನೇ ಅಣಕಿಸಿ ನಗುತ್ತಿರುವ ದೃಶ್ಯವನ್ನು ಕಾಣಬಹುದು ಎಂದಿದ್ದಾರೆ. ಅಂದು ನೆಹರೂ ಮಾಡಿರುವ ದೇಶ ವಿರೋಧಿ ಅಪಹಾಸ್ಯವನ್ನೇ ಇಂದು ರಾಹುಲ್ ಪುನರಾವರ್ತಿಸಿದ್ದಾರೆ ಎಂದು ಸಂಬಿತ್ ಪಾತ್ರಾ ಆರೋಪಿಸಿದ್ದಾರೆ.

ಭಾರತದ ಪ್ರತಿಷ್ಠೆ ವಿರುದ್ಧ ಪಿತೂರಿ

ಪುಟ ೧→ ತಂತ್ರಜ್ಞಾನ ರಂಗದಲ್ಲಿನ ತನ್ನ ಆವಿಷ್ಕಾರಗಳು, ನಾಯಕತ್ವವನ್ನು ಪ್ರದರ್ಶಿಸುವ ಪ್ರತಿಷ್ಠಿತ ಜಾಗತಿಕ ಎಐ ಸಮ್ಮಿಟ್‌ನ್ನು ಭಾರತ ಆಯೋಜಿಸಿರುವಾಗ ,ಕಾಂಗ್ರೆಸ್ ದೇಶದ ಘನತೆ ಮೀರಿ ಅಡೆತಡೆಯೊಡ್ಡೋ ಹೀನ ಹಾದಿ ಹಿಡಿದದ್ದು ತೀರಾ ಅಕ್ಷಮ್ಯವೆಂದು ಕಾಂಗ್ರೆಸಿಗರನ್ನು ತರಾಟೆಗೆತ್ತಿಕೊಂಡಿದ್ದಾರೆ. ಜಾಗತಿಕ ವೇದಿಕೆಯಲ್ಲಿ ಭಾರತವನ್ನು ಅಪಮಾನಿಸಲು ವ್ಯವಸ್ಥಿತವಾಗಿ ಎಸಗಿರುವ ಕೃತ್ಯವಿದು. ರಾಜಕೀಯವಾಗಿ ವಿರೋಧ ವ್ಯಕ್ತಪಡಿಸುವುದು ಪ್ರಜಾತಾಂತ್ರಿಕ ಹಕ್ಕು. ಆದರೆ ಭಾರತದ ಜಾಗತಿಕ ಪ್ರತಿಷ್ಠೆ ವಿರುದ್ಧ ಷಡ್ಯಂತ್ರ ಬೆಸೆಯೋದು ತೀರಾ ಹೇಯ ಎಂದು ಎಕ್ಸ್‌ಗೆ ಹಾಕಿರುವ ಪೋಸ್ಟ್‌ನಲ್ಲಿ ಟೀಕಿಸಿದ್ದಾರೆ.

250 ಬಿಲಿಯನ್ ಡಾಲರ್ ಹೂಡಿಕೆ ಭರವಸೆ: ವೈಷ್ಣವ್

ಪುಟ ೧→ ಶೃಂಗಸಭೆಯಲ್ಲಿ 5 ಲಕ್ಷಕ್ಕೂ ಹೆಚ್ಚು ಮಂದಿ ಭೇಟಿ ನೀಡಿದ್ದು, ದೇಶೀಯ ಹಾಗೂ ಜಾಗತಿಕ ಮಟ್ಟದಲ್ಲಿ ಭಾರತದ ಎಐ ಮುಂದಾಳತ್ವಕ್ಕೆ ಬಲವಾದ ಸ್ಪಂದನೆ ವ್ಯಕ್ತವಾಗಿದೆ. ಭಾರತದ ಎಐ ಪ್ರಯತ್ನಗಳತ್ತ ವಿಶ್ವದ ಗಮನ ಸೆಳೆಯಲು ಈ ಕಾರ್ಯಕ್ರಮ ಮಹತ್ವದ ವೇದಿಕೆಯಾಗಿದೆ ಎಂದು ಅವರು ಅಭಿಪ್ರಾಯಪಟ್ಟರು.



ಹೂಡಿಕೆ ಭರವಸೆಗಳ ಕುರಿತು ಮಾತನಾಡಿದ ವೈಷ್ಣವ್, ಮೂಲ ಸೌಕರ್ಯ ಕ್ಷೇತ್ರಕ್ಕೆ 250 ಬಿಲಿಯನ್ ಡಾಲರ್‌ಗಿಂತ ಹೆಚ್ಚು ಹಾಗೂ ವೆಂಚರ್ ಕ್ಯಾಪಿಟಲ್ ಮತ್ತು ಆಳ ತಂತ್ರಜ್ಞಾನ ಕ್ಷೇತ್ರಕ್ಕೆ ಸುಮಾರು 20 ಬಿಲಿಯನ್ ಡಾಲರ್ ಹೂಡಿಕೆ ಭರವಸೆ ದೊರೆತಿದೆ ಎಂದು ತಿಳಿಸಿದರು. ಈ ಅಂಕೆಗಳು ಮಹತ್ವದ್ದಾಗಿದ್ದರೂ, ಹೊಸ ಎಐ ಯುಗದಲ್ಲಿ ಭಾರತದ ಪಾತ್ರದ ಮೇಲೆ ವಿಶ್ವದ ವಿಶ್ವಾಸವೇ ಇನ್ನಷ್ಟು ಮಹತ್ವದ್ದು ಎಂದರು.

ದಿಲ್ಲಿ ಘೋಷಣೆಗೆ ವ್ಯಾಪಕ ಒಮ್ಮತ ವ್ಯಕ್ತವಾಗಿದ್ದು, ಶನಿವಾರ ಶೃಂಗಸಭೆ ಸಮಾರೋಪಗೊಳ್ಳುವ ಹೊತ್ತಿಗೆ ಸಹಿ ಮಾಡುವ ದೇಶಗಳ ಸಂಖ್ಯೆ 80 ದಾಟುವ ನಿರೀಕ್ಷೆಯಿದೆ ಎಂದು ವೈಷ್ಣವ್ ಹೇಳಿದರು. ಘೋಷಣೆಯ ಸಂಪೂರ್ಣ ವಿವರಗಳನ್ನು ಸಮಾರೋಪದ ಬಳಿಕ ಪಾರದರ್ಶಕವಾಗಿ ಹಂಚಿಕೊಳ್ಳಲಾಗುವುದು ಎಂದು ಅವರು ಸ್ಪಷ್ಟಪಡಿಸಿದರು. ಮೂಲಗಳ ಪ್ರಕಾರ, ಅಮೆರಿಕವೂ ಈ ಘೋಷಣೆಗೆ ಬೆಂಬಲ ಸೂಚಿಸಿದೆ.

ಐದು ಲಕ್ಷ ಮಂದಿ ಭೇಟಿ: ಐದು ಲಕ್ಷಕ್ಕೂ ಹೆಚ್ಚು ಮಂದಿ ಪ್ರದರ್ಶನದಲ್ಲಿ ಭಾಗವಹಿಸಿ ಜಾಗತಿಕ ತಜ್ಞರೊಂದಿಗೆ ಸಂವಾದ ನಡೆಸಿದರು. ವಿಶ್ವದ ಪ್ರಮುಖ ಎಐ ಸಂಸ್ಥೆಗಳು ದೊಡ್ಡ ಸಂಖ್ಯೆಯಲ್ಲಿ ಪಾಲ್ಗೊಂಡವು. ಅನೇಕ ನವೋದ್ಯಮಗಳಿಗೆ ತಮ್ಮ ಸಾಧನೆ ಪ್ರದರ್ಶಿಸುವ ಅವಕಾಶ ದೊರೆಯಿತು. ಚರ್ಚೆಗಳ ಗುಣಮಟ್ಟ ಅತ್ಯುತ್ತಮವಾಗಿತ್ತು ಎಂದು ಸಚಿವರು ಹೇಳಿದರು.

ಹಿಂದಿನ ಶೃಂಗಸಭೆಯಲ್ಲಿ ಅಂತಿಮ ಘೋಷಣೆಗೆ 60 ದೇಶಗಳು ಸಹಿ ಮಾಡಿದ್ದರೆ, ಈ ಬಾರಿ 70 ದೇಶಗಳ ಮೈಲಿಗಲ್ಲು ಈಗಾಗಲೇ ದಾಟಲಾಗಿದೆ ಎಂದು ಸಚಿವರು ಹೇಳಿದರು. ಮುಖ್ಯ ಎಐ ರಾಷ್ಟ್ರಗಳು ಈಗಾಗಲೇ ಬೆಂಬಲ ಸೂಚಿಸಿವೆ. ಯಾರೂ ಸಹಿ ಮಾಡಿಲ್ಲವೆಂದು ಊಹಾಪೋಹಗಳಿಗೆ ಅವಕಾಶವಿಲ್ಲ ಎಂದು ಅವರು ಸ್ಪಷ್ಟಪಡಿಸಿದರು.

ಎಐ ಶೃಂಗಸಭೆ ಅತ್ಯುತ್ತಮ: ತರೂರ್

ಪುಟ ೧→ ಆದರೆ ಇದೀಗ ಮುಂದುವರಿದ ಸಮ್ಮೇಳನ ಅತ್ಯಂತ ಒಳ್ಳೆಯ ರೀತಿಯಲ್ಲಿ ನಡೆದಿದೆ ಎಂದು ಅವರು ಶ್ಲಾಘಿಸಿದರು. ಈ ಮೂಲಕ ಭಾರತ ಸರ್ಕಾರ ಆಯೋಜಿಸಿದ 2ನೇ ಜಾಗತಿಕ ಎಐ ಶೃಂಗಸಭೆಯನ್ನು ಪ್ರಧಾನಿ ಮೋದಿಯವರ ಅವಹೇಳನಕ್ಕೆ ಬಳಸಿಕೊಂಡ ಕಾಂಗ್ರೆಸ್ ನಿಲುವಿಗೆ ತರೂರು ಮತ್ತೆ ತಮ್ಮ ಅಸಮ್ಮತಿ ವ್ಯಕ್ತಪಡಿಸಿದ್ದಾರೆ. ಈ ಶೃಂಗಸಭೆ ಅತ್ಯಂತ ಪ್ರೇರಣಾದಾಯಿಯಾಗಿ ನಡೆದಿದೆ. ವಿವಿಧ ದೇಶಗಳ ಅಧ್ಯಕ್ಷರುಗಳು, ಪ್ರಧಾನಿಗಳು, ವಿಶ್ವನಾಯಕರು, ಪ್ರಖ್ಯಾತ ಸಿಇಒಗಳು ಸೇರಿದಂತೆ ಜಾಗತಿಕ ಪ್ರಮುಖರು ಪಾಲ್ಗೊಂಡಿರುವ ಈ ಶೃಂಗಸಭೆ ಕೃತಕ ಬುದ್ಧಿಮತ್ತೆ ಅಭಿವೃದ್ಧಿಯಲ್ಲಿ ಹೊಸ ಸಮಗ್ರ ವಿಶ್ವವೊಂದನ್ನು ನಿರ್ಮಿಸುವ ಬಲವಾದ ಸಂದೇಶ ನೀಡಿರುವುದು ಸ್ವಾಗತಾರ್ಹ ಎಂದು ಶಶಿ ತರೂರ್ ಪ್ರತಿಕ್ರಿಯಿಸಿದ್ದಾರೆ. ಶೃಂಗಸಭೆಗೆ ಹೋಗಲು ತನಗೆ ಅವಕಾಶ ಸಿಗದಿದ್ದರೂ, ಅಲ್ಲಿ ನಾಳೆ ನಾನು ಮಾತನಾಡಲಿದ್ದೇನೆ. ಇಂತಹ ದೊಡ್ಡ ಕಾರ್ಯಕ್ರಮಗಳಲ್ಲಿ ಸಣ್ಣಪುಟ್ಟ ಲೋಪಗಳು ಸಹಜ ಎಂದು ಹೇಳಿದ್ದಾರೆ. ಯುದ್ಧಕ್ಕೆ ಮುಂದಾಗುತ್ತಿಲ್ಲ ಎಂದರೆ ದುರ್ಬಲರು ಎಂದಲ್ಲ: ಇದೇ ವೇಳೆ ಭಾರತದ ರಕ್ಷಣಾ ತಂತ್ರಗಾರಿಕೆ ಕುರಿತು ಮಾತನಾಡಿದ ಶಶಿ ತರೂರ್, ಯುದ್ಧಕ್ಕೆ ಮುಂದಾಗುತ್ತಿಲ್ಲ ಎಂದರೆ ದುರ್ಬಲರು ಎಂದಲ್ಲ. ಭಾರತಕ್ಕೆ ರಕ್ಷಣೆ ಮುಖ್ಯವಾದುದು. ನಾವು ಯುದ್ಧಕ್ಕೆ ಹೋಗಲು ಬಯಸುವುದರಿಂದಲ್ಲ, ಆದರೆ ಇತರರು ನಾವು ತುಂಬಾ ದುರ್ಬಲರು ಎಂದು ಭಾವಿಸಬಾರದು ಎಂಬ ಕಾರಣದಿಂದಾಗಿ ಅವರು ಯುದ್ಧಕ್ಕೆ ಹೋಗಲು ಪ್ರಚೋದಿಸಲ್ಪಡಬಹುದು. ಇದು ಅಕ್ಷರಶಃ ರಕ್ಷಣಾತ್ಮಕ ನಡೆಯಾಗಿದೆ. ನಾವು ಅದಕ್ಕಾಗಿ ಕೆಲಸ ಮಾಡುತ್ತಿದ್ದೇವೆ ಮತ್ತು ನಾನು ಈ ವಿಚಾರದಲ್ಲಿ ಸರ್ಕಾರವನ್ನು ಬೆಂಬಲಿಸುತ್ತೇನೆ ಎಂದು ಶಶಿತರೂರ್ ಹೇಳಿದರು.



ಮೆರವಣಿಗೆ ಮೇಲೆ ಕಲ್ಲು ತೂರಾಟ: ಸೂಕ್ತ ಕಾನೂನು ಕ್ರಮಕ್ಕೆ ಆಗ್ರಹ

•ಬೆಂಗಳೂರು: ಬಾಗಲಕೋಟೆಯಲ್ಲಿ ಛತ್ರಪತಿ ಶಿವಾಜಿ ಮಹಾರಾಜರ ಮೆರವಣಿಗೆ ಮೇಲೆ ಹಾಗೂ ಕಟೌಟ್ ಮೇಲೆ ಮುಸ್ಲಿಂ ಮತಾಂಧರು ಕಲ್ಲು ತೂರಾಟ ಮಾಡಿ ಅವಮಾನ ಮಾಡಿದ್ದಾರೆ. ಅವರ ವಿರುದ್ಧ ಗೂಂಡಾ ಕಾಯ್ದೆಯಡಿ ಕ್ರಮ ಕೈಗೊಳ್ಳಬೇಕೆಂದು ಪ್ರತಿಪಕ್ಷ ನಾಯಕ ಆರ್. ಅಶೋಕ ಆಗ್ರಹಿಸಿದರು.



ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಇವೆಲ್ಲವೂ ಪೂರ್ವ ನಿಯೋಜಿತ ಕೃತ್ಯವಾಗಿದೆ. ಈ ಹಿಂದೆ ಮಂಡ್ಯದಲ್ಲಿ ಗಣೇಶ ವಿಸರ್ಜನೆ ಮೆರವಣಿಗೆ ಮೇಲೆ ಕಲ್ಲು ತೂರಾಟ, ಶ್ರೀರಾಮನ ಫ್ಲೆಕ್ಸ್ ಹರಿದುಹಾಕಲಾಗಿತ್ತು. ಹೀಗೆ ಮೊದಲಿನಿಂದಲೂ ಮುಸ್ಲಿಂ ಮೂಲಭೂತವಾದಿಗಳು ದಾಳಿ ಮಾಡುತ್ತಿದ್ದಾರೆ. ಇಂತಹ ಮತಾಂಧರನ್ನು ಬಂಧಿಸಬಾರದು ಎಂದು ಕಾಂಗ್ರೆಸ್ ಸರ್ಕಾರ ಪೊಲೀಸರಿಗೆ ಸೂಚನೆ ನೀಡಿದೆ ಎಂದು ಆರೋಪಿಸಿದರು. ಕುಕ್ಕರ್ ಬಾಂಬ್ ಸ್ಫೋಟ ಮಾಡುವವರು ನಮ್ಮ ಬ್ರದರ್‌ಗಳು, ವಿಧಾನಸೌಧದಲ್ಲಿ ಪಾಕ್ ಪರ ಘೋಷಣೆ ಕೂಗಿದವರು ನಮ್ಮ ಬಂಧುಗಳು ಎಂದು ಕಾಂಗ್ರೆಸ್ ನಾಯಕರು ಹೇಳಿದ್ದಾರೆ. ಅವರ ವಿರುದ್ಧ ಪ್ರಕರಣ ದಾಖಲಿಸದಂತೆ ಪೊಲೀಸರಿಗೆ ಸೂಚಿಸಿದ್ದಾರೆ. ಆದ್ದರಿಂದಲೇ ಇಂತಹ ಘಟನೆಗಳು ಎಲ್ಲ ಜಿಲ್ಲೆಗಳಲ್ಲಿ ನಡೆಯುತ್ತಿವೆ ಎಂದರು.

ಮಾಧ್ಯಮಕ್ಕೆ ನಿರ್ಬಂಧ ಆದೇಶ ಹಿಂಪಡೆಯಲಿ

ವಿಧಾನಸೌಧದಲ್ಲಿ ಪಾಕಿಸ್ತಾನಕ್ಕೆ ಜೈಕಾರ ಹಾಕಿದಾಗ ಸರ್ಕಾರ ಸುಮ್ಮನಿತ್ತು. ಈಗ ವಿಧಾನಸೌಧದಲ್ಲಿ ಮಾಧ್ಯಮಗಳಿಗೆ ನಿರ್ಬಂಧ ಹೇರಲಾಗಿದೆ. ನನ್ನ ಕಚೇರಿಯಲ್ಲೂ ಸುದ್ದಿಗೋಷ್ಠಿ ನಡೆಸಲು ಸಾಧ್ಯವಿಲ್ಲದ ಸ್ಥಿತಿ ನಿರ್ಮಿಸಲಾಗಿದೆ. ಮಾಧ್ಯಮಗಳಿಂದ ಕಾನೂನು ಭಂಗವಾಗುತ್ತದೆ ಎಂದು ಹೇಳಲಾಗಿದೆ. ಸಚಿವ ಮಹದೇವಪ್ಪ ಅವರ ಪ್ರಕಾರ ನಾಯಿಗಳು ಕೂಡ ವಿಧಾನಸೌಧದಲ್ಲಿ ಓಡಾಡಬಹುದು, ಆದರೆ ಮಾಧ್ಯಮ ಪ್ರತಿನಿಧಿಗಳು ಅವರ ಕರ್ತವ್ಯ ನಿರ್ವಹಿಸಬಾರದೆ? ಎಂದು ಅಶೋಕ ಪ್ರಶ್ನಿಸಿದರು.

ಬಜೆಟ್ ಚರ್ಚೆ



ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ದಲಿತ ಸಂಘಟನೆಗಳ ಮುಖಂಡರುಗಳ ಜತೆಗೆ 2026-27ನೇ ಸಾಲಿನ ಬಜೆಟ್‌ಗೆ ಸಂಬಂಧಿಸಿದಂತೆ ವಿಧಾನಸೌಧದ ಸಮ್ಮೇಳನ ಸಭಾಂಗಣದಲ್ಲಿ ಚರ್ಚೆ ನಡೆಸಿದರು. ಸಮಾಜ ಕಲ್ಯಾಣ ಸಚಿವ ಎಚ್.ಸಿ.ಮಹದೇವಪ್ಪ ಮತ್ತು ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ ಅಂಜುಂ ಪರ್ವೇಜ್ ಹಾಗೂ ಆರ್ಥಿಕ ಇಲಾಖೆಯ ಅಧಿಕಾರಿಗಳು ಉಪಸ್ಥಿತರಿದ್ದರು.

ಸದ್ಯದಲ್ಲೇ ಎಂಆರ್‌ಐ, ಸಿಟಿ ಸ್ಕ್ಯಾನ್ ಪೂರೈಕೆ

•ಬೆಂಗಳೂರು: ಎಲ್ಲ ಸರ್ಕಾರಿ ಆಸ್ಪತ್ರೆಗಳಲ್ಲಿ ಎಂಆರ್‌ಐ ಗಳು ಹಾಗೂ ಮೂರು ಸಿಟಿ ಸ್ಕ್ಯಾನ್‌ಗಳಿಗೆ ಟೆಂಡರ್ ಕರೆಯಲಾಗಿದೆ. ಇಲಾಖೆ ವತಿಯಿಂದ ಸದ್ಯದಲ್ಲೇ ಯಂತ್ರ ಪೂರೈಕೆ ಮಾಡುತ್ತೇವೆ ಎಂದು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಸಚಿವ ದಿನೇಶ್ ಗುಂಡೂರಾವ್ ತಿಳಿಸಿದರು.



ವಿಧಾನಸೌಧದ ಕೆಂಗಲ್ ಗೇಟ್ ಬಳಿ ಸುದ್ದಿಗೋಷ್ಠಿ ನಡೆಸಿ ಮಾತನಾಡಿದ ಅವರು, ಕೃಷ್ಣಾ ಡಯಾಗ್ನೋಸ್ಟಿಕ್ ಕಂಪನಿ ವತಿಯಿಂದ ನಡೆಯುತ್ತಿದ್ದ ಸರ್ಕಾರಿ ಆಸ್ಪತ್ರೆಗಳಲ್ಲಿ ಎಂಆರ್‌ಐ ಮತ್ತು ಸಿಟಿ ಸ್ಕ್ಯಾನ್‌ಗಳು ಸ್ಥಗಿತ ವಿಚಾರದಲ್ಲಿ ವಿರೋಧ ಪಕ್ಷ ಸತ್ಯಕ್ಕೆ ದೂರವಾದ ವಿಚಾರ ಮಾತನಾಡಿದೆ. ದುಡ್ಡು ಕೊಟ್ಟಿಲ್ಲಾ ಎಂದು ಕಂಪನಿ ಪತ್ರ ಬರೆದಿದ್ದಕ್ಕೆ, ವಿಪಕ್ಷಗಳು ಇದನ್ನು ಬೇರೆ-ಬೇರೆ ರೀತಿ ಬಿಂಬಿಸುತ್ತಿದ್ದಾರೆ. ಅವರು ಟೀಕೆ ಮಾಡುತ್ತಿದ್ದಾರೆ ಎಂದು ನಾನು ಟೀಕೆ ಮಾಡುವುದಿಲ್ಲ, ಕೆಲಸ ಮಾಡುವುದು ನಮ್ಮ ಕರ್ತವ್ಯ. ಜನರಿಗೆ ಸಮಸ್ಯೆ ಆಗಬಾರದು ಎಂಬುದು ನಮ್ಮ ಉದ್ದೇಶವಾಗಿದೆ ಎಂದರು.

ಮೊದಲು ಇದಕ್ಕೊಂದು ವ್ಯವಸ್ಥೆಯೇ ಇರಲಿಲ್ಲ, ಕಂಪನಿಯವರು ಹೇಳಿದ್ದೇ ಲೆಕ್ಕ, ಇದಕ್ಕೊಂದು ವ್ಯವಸ್ಥೆ ನಿಯಮವನ್ನು ತಂದ ನಂತರ ಸ್ಕ್ಯಾನಿಂಗ್ ಪ್ರಮಾಣ ಗಣನೀಯವಾಗಿ ಕಡಿಮೆಯಾಗುತ್ತಾ ಬಂದಿದೆ. ಇದ್ಯಾವುದನ್ನು ತಿಳಿಯದೇ ವಿರೋಧ ಪಕ್ಷ, ಕಂಪನಿಯ ಪರವಾಗಿ ಮಾತನಾಡುತ್ತಿದೆ. ಕಂಪನಿಯವರು ಏನೇ ಹೇಳಲಿ. ನಮ್ಮ ಉದ್ದೇಶ ಜನರಿಗೆ ಸಮಸ್ಯೆಯಾಗಬಾರದು. ಸರ್ಕಾರದ ಹಣ ದುರುಪಯೋಗವಾಗಲು ಅವಕಾಶ 2019 ರಿಂದ ಹಿಂಬಾಕಿ ಹಣ 143 ಕೋಟಿ ರೂ. ಕೊಡಿ ಎಂದು ಕಂಪನಿ ಕೇಳಿದ್ದಾರೆ. ನಾವು ಅಷ್ಟು ಕೊಡಲು ಸಾಧ್ಯವಿಲ್ಲವೆಂದು ಏಕಪಕ್ಷೀಯವಾಗಿ ಹೇಳಿದ್ದೇವೆ ಎಂದರು. 2019 ರಿಂದ ಪ್ರತಿ ವರ್ಷ ಶೇ.5 ರಷ್ಟು ಹೆಚ್ಚುವರಿ ನೀಡಬೇಕು ಎಂದು ಹೇಳಿದ್ದಾರೆ.

ಕಿರುಸುದ್ದಿ

ಸ್ಥಳೀಯರ ಉದ್ಯೋಗಕ್ಕಾಗಿ ಮೇಳ ಆಯೋಜನೆ: ಬಿವೈವಿ

•ಶಿಕಾರಿಪುರ: ಶಿಕಾರಿಪುರ ತಾಲೂಕು ಜಿಲ್ಲಾ ಕೇಂದ್ರಕ್ಕೆ ಅಗತ್ಯವಿರುವ ಸಕಲ ಸೌಲಭ್ಯ ಹೊಂದಿದ್ದು, ಯಡಿಯೂರಪ್ಪನವರಿಗೆ ರಾಜಕೀಯವಾಗಿ ಜನ್ಮ ನೀಡಿದ ತಾಲೂಕಿನ ಪೋಷಕರ ಮಕ್ಕಳಿಗೆ ಉದ್ಯೋಗ ದೊರಕಿಸುವ ಮಹಾತ್ವಾಕಾಂಕ್ಷೆಯ ಮೇರೆಗೆ ಉದ್ಯೋಗ ಮೇಳವನ್ನು ಆಯೋಜಿಸಲಾಗಿದೆ ಎಂದು ಬಿಜೆಪಿ ರಾಜ್ಯಾಧ್ಯಕ್ಷ, ಶಾಸಕ ಬಿ.ವೈ.ವಿಜಯೇಂದ್ರ ತಿಳಿಸಿದರು.



ಪಟ್ಟಣದ ಸ್ವಾಮಿ ವಿವೇಕಾನಂದ ವಿದ್ಯಾಸಂಸ್ಥೆಯ ಆವರಣದಲ್ಲಿ ಮಾಜಿ ಸಿ.ಎಂ. ಯಡಿಯೂರಪ್ಪನವರ ಹುಟ್ಟುಹಬ್ಬದ ಅಂಗವಾಗಿ ಮೂಡಬಿದರೆ ಆಳ್ವಾಸ್ ಫೌಂಡೇಶನ್ ಟ್ರಸ್ಟ್ ಸಹಯೋಗ ದಲ್ಲಿ ಶುಕ್ರವಾರ ಆಯೋಜಿಸಿದ್ದ ಬೃಹತ್ ಉದ್ಯೋಗ ಮೇಳ 2026ಕ್ಕೆ ಚಾಲನೆ ನೀಡಿ ಮಾತನಾಡಿದರು.

ಮಾಜಿ ಸಿಎಂ ಯಡಿಯೂರಪ್ಪನವರಿಗೆ ರಾಜಕೀಯ ಜನ್ಮ ನೀಡಿದ ತಾಲೂಕಿನ ಯುವಕ- ಯುವತಿಯರಿಗೆ ಉದ್ಯೋಗ ದೊರಕಿಸಿಕೊಡುವ ಬಹು ಮಹತ್ವಾಕಾಂಕ್ಷೆಯ ಕನಸು ಇದೀಗ ನನಸಾಗಿದೆ. ಈ ದಿಸೆಯಲ್ಲಿ ಕಳೆದ 2-3 ತಿಂಗಳಿನಿಂದ ಸತತ ಶ್ರಮವಹಿಸಿ ಯಶಸ್ವಿಯಾಗಲು ಸಹಕರಿಸಿದ ಆಳ್ವಾಸ್ ಫೌಂಡೇಶನ್ ಟ್ರಸ್ಟಿ ವಿವೇಕ್ ಆಳ್ವಸಹಿತ ಪ್ರತಿಯೊಬ್ಬರಿಗೂ ಧನ್ಯವಾದ ಸಲ್ಲಿಸಿದರು.

ಚಂದ್ರಗ್ರಹಣ: ಧರ್ಮಸ್ಥಳದ ದರ್ಶನ ಸಮಯದಲ್ಲಿ ವ್ಯತ್ಯಯ

•ಉಜಿರೆ: ಮಾರ್ಚ್ 3ರಂದು ಮಂಗಳವಾರ ಅಪರಾಹ್ನ ಗಂಟೆ 3.19ರಿಂದ ಸಂಜೆ ಗಂಟೆ 6.48ರವರೆಗೆ ಚಂದ್ರಗ್ರಹಣ ಇರುವುದರಿಂದ ಮಂಗಳವಾರ ಮಧ್ಯಾಹ್ನ ಒಂದೂವರೆ ಗಂಟೆವರೆಗೆ ಮಾತ್ರ ಧರ್ಮಸ್ಥಳದಲ್ಲಿ ದೇವರ ದರ್ಶನಕ್ಕೆ ಅವಕಾಶವಿದೆ ಎಂದು ದೇವಸ್ಥಾನದ ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ. ರಾ.7.30ರ ನಂತರ ಚಂದ್ರಗ್ರಹಣ ಮುಕ್ತಾಯ ಬಳಿಕ ದೇವಸ್ಥಾನದ ಶುದ್ಧೀಕರಣ ಹಾಗೂ ಇತರ ಧಾರ್ಮಿಕ ವಿಧಿ-ವಿಧಾನಗಳು ಮುಗಿದ ನಂತರ ದೇವರ ದರ್ಶನಕ್ಕೆ ಅವಕಾಶವಿದೆ. ದೂರದ ಊರುಗಳಿಂದ ಬರುವ ಭಕ್ತರು ದರ್ಶನದ ಸಮಯ ವ್ಯತ್ಯಯ ಗಮನಿಸಿ ಸಹಕರಿಸುವಂತೆ ಕೋರಲಾಗಿದೆ. ಮಾಹಿತಿಗೆ 9945725511 ಸಂಪರ್ಕಿಸಿ.

ಪ್ರಸನ್ನಾನಂದ ಶ್ರೀಗಳ ಆರೋಗ್ಯ ಚೇತರಿಕೆ

•ಹರಿಹರ: ಲಘು ಹೃದಯಾಘಾತಕ್ಕೀಡಾಗಿದ್ದ ತಾಲೂಕಿನ ರಾಜನಹಳ್ಳಿಯ ಮಹರ್ಷಿ ವಾಲ್ಮೀಕಿ ಗುರುಪೀಠದ ಪ್ರಸನ್ನಾನಂದ ಶ್ರೀಗಳಿಗೆ ಸ್ಟಂಟ್ ಅಳವಡಿಕೆ ಮಾಡ ಲಾಗಿದ್ದು ಆರೋಗ್ಯದಲ್ಲಿ ಚೇತರಿಕೆ ಕಂಡುಬಂದಿದೆ. ವಿವಿಧ ಕಾರ್ಯಕ್ರಮಗಳಲ್ಲಿ ಭಾಗವಹಿಸಲು ಪ್ರವಾಸದಲ್ಲಿದ್ದ ಶ್ರೀಗಳು ರಾಯಚೂರು ಜಿಲ್ಲೆಯ ಹಟ್ಟಿ ಗ್ರಾಮದಲ್ಲಿ ಬುಧವಾರ ರಾತ್ರಿ ವಾಸ್ತವ್ಯವಾಗಿದ್ದಾಗ ಹೃದಯ ಸಂಬಂಧಿತ ಸಮಸ್ಯೆ ಕಾಣಿಸಿಕೊಂಡಿತು. ಅವರನ್ನು ರಾಯಚೂರಿನ ವಿ.ಜಿ. ಕುಲಕರ್ಣಿ ಆಸ್ಪತ್ರೆಗೆ ದಾಖಲಿಸಿ ಪ್ರಾಥಮಿಕ ಚಿಕಿತ್ಸೆ ನೀಡಿದ ನಂತರ ಮಧ್ಯರಾತ್ರಿ ಹೆಚ್ಚಿನ ಚಿಕಿತ್ಸೆಗಾಗಿ ಹೈದರಾಬಾದ್‌ನ ಅಪೋಲೋ ಆಸ್ಪತ್ರೆಗೆ ಸ್ಥಳಾಂತರಿಸಲಾಗಿತ್ತು. ಗುರುವಾರ ಬೆಳಗಿನ ಜಾವ ಸ್ಟಂಟ್ ಅಳವಡಿಕೆ ಮಾಡಲಾಗಿದೆ. ಶ್ರೀಗಳು ಈಗ ಚೇತರಿಸಿಕೊಂಡಿದ್ದು ವೈದ್ಯರ ಸಲಹೆ ಮೇರೆಗೆ ಮುಂದಿನ 2-3 ದಿನಗಳ ಕಾಲ ಆಸ್ಪತ್ರೆಯಲ್ಲಿ ವಿಶ್ರಾಂತಿ ಪಡೆಯಬೇಕಿದೆ. ನಂತರ ಅವರು ಮಠಕ್ಕೆ ಮರಳುವರು. ಭಕ್ತರು ಆತಂಕಪಡಬೇಕಿಲ್ಲ ಎಂದು ಮಠದ ಧರ್ಮದರ್ಶಿ ಕೆ.ಬಿ.ಮಂಜುನಾಥ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.



ಅಧಿಕಾರಿಗಳ ಸಭೆಯಲ್ಲಿ ಸಚಿವ ಕೃಷ್ಣಬೈರೇಗೌಡ ಹೇಳಿಕೆ

ಯುಎಲ್‌ಎಂಎಸ್ ಜಾರಿಗೆ ಬದ್ಧ

•ಬೆಂಗಳೂರು: ಭೂಮಿಗೆ ಸಂಬಂಧಿಸಿದ ಸರ್ಕಾರದ ಎಲ್ಲಾ ಸೇವೆಗಳನ್ನು ಒಂದೇ ವ್ಯವಸ್ಥೆಯಲ್ಲಿ ತರುವ ಮಹಾತ್ವಾಕಾಂಕ್ಷಿ ಯುಎಲ್‌ಎಂಎಸ್ (ಯುನಿಫೈಡ್ ಲ್ಯಾಂಡ್ ಮ್ಯಾನೇಜ್ಮೆಂಟ್ ಸಿಸ್ಟಮ್) ಯೋಜನೆಯ ಅನುಷ್ಠಾನಕ್ಕೆ ಸರ್ಕಾರ ದೃಢ ಹೆಜ್ಜೆಯನ್ನಿಟ್ಟಿದೆ.



ಇದಕ್ಕೆ ಸಂಬಂಧಿಸಿದ ಕಂದಾಯ, ನಗರಾಭಿವೃದ್ಧಿ, ನೋಂದಣಿ, ಲೋಕೋಪಯೋಗಿ, ನೀರಾವರಿ, ವಸತಿ, ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಮೊದಲಾದ ಇಲಾಖೆಗಳ ಹಿರಿಯ ಅಧಿಕಾರಿಗಳ ಸಭೆಯು ಕಂದಾಯ ಸಚಿವ ಕೃಷ್ಣ ಬೈರೇಗೌಡ ಅವರ ಅಧ್ಯಕ್ಷತೆಯಲ್ಲಿ ನಡೆಸಲಾಯಿತು.

ಯುಎಲ್‌ಎಂಎಸ್ ಗಣಕೀಕೃತ ಏಕ ವ್ಯವಸ್ಥೆಯಡಿ ಸರ್ವೆ, ಭೂ ಪರಿವರ್ತನೆ, ಬಡಾವಣೆ ಪ್ಲ್ಯಾನ್ ಮಂಜೂರು, ಮನೆ ಪ್ಲ್ಯಾನ್ ಮಂಜೂರು, ನಿವೇಶನ ಮಾರಾಟ, ಇ-ಖಾತಾಸೃಜನೆ(ಸ್ಥಳೀಯಸಂಸ್ಥೆಯಲ್ಲಿ), ಆಸ್ತಿ ತೆರಿಗೆ ಸಂಗ್ರಹ, ಭೂಸ್ವಾಧೀನ ಹಾಗೂ ಇನ್ನೂ ಅನೇಕ ಭೂ ಸಂಬಂಧಿತ ಚಟುವಟಿಕೆಗಳನ್ನು ಸರಾಗ, ಸುಲಭ, ಪಾರದರ್ಶಕ ಮತ್ತು ಜನಸ್ನೇಹಿಯಾದ ಒಂದೇ ಆನ್‌ಲೈನ್ ವ್ಯವಸ್ಥೆಗೆ ತರುವ ಯೋಜನೆ ಇದಾಗಿದೆ. ಇದರಿಂದ ಜನರಿಗೆ ಬೇರೆಬೇರೆ ಕಚೇರಿಗಳಿಗೆ ಅಲೆದಾಡುವುದನ್ನು ತಪ್ಪಿಸಿ ಭೂಮಿಗೆ ಸಂಬಂಧಿಸಿದ ಸೇವೆಗಳನ್ನು ಸರಳವಾಗಿ ಪಡೆದುಕೊಳ್ಳಬಹುದಾದ ಅತ್ಯಂತ ಪ್ರಮುಖ ಆಡಳಿತ ಸುಧಾರಣಾ ಕ್ರಮವಾಗಿದೆ.

ಪ್ರತ್ಯೇಕ ಅರ್ಜಿಗಳ ಅಗತ್ಯವಿಲ್ಲ: ಯುಎಲ್‌ಎಂಎಸ್ ಮುಖಾಂತರ ಭೂ ಮಾಲೀಕತ್ವದ ಮೂಲ ದಾಖಲೆ ಗಳನ್ನು ದೃಢಪಡಿಸುವುದು, ಸರ್ವೆ ನಕ್ಷೆಯನ್ನು ಡಿಜಿಟಲ್ ರೂಪದಲ್ಲಿ ಒದಗಿಸುವುದು, ಭೂ ಪರಿವರ್ತನೆ, ಬಡಾವಣೆಗಳ ಅನುಮೋದನೆ, ಕಟ್ಟಡ ನಕ್ಷೆ ಅನುಮೋದನೆ, ಖಾತೆ ಪಡೆಯುವುದು ಇತ್ಯಾದಿ ಪ್ರಕ್ರಿಯೆಗಳನ್ನು ಏಕೀಕೃತ ನೇರ ಆನ್‌ಲೈನ್ ವ್ಯವಸ್ಥೆಯಲ್ಲಿ ತರಲಾಗುವುದು. ಇದರಿಂದ ಭೂಮಿ ಬಡಾವಣೆ ನಿವೇಶನದ ದಾಖಲೆಗಳು ಒಂದೇ ಕಡೆ ದೊರೆಯುವಂತಾಗುತ್ತದೆ. ಒಂದು ಹಂತದಿಂದ ಮತ್ತೊಂದು ಹಂತಕ್ಕೆ ಸರಾಗವಾಗಿ, ವಿವಿಧ ಕಚೇರಿ ಅಥವಾ ಇಲಾಖೆಗಳಿಗೆ ಆನ್‌ಲೈನ್‌ನಲ್ಲಿ ಪ್ರತ್ಯೇಕ ಅರ್ಜಿಗಳನ್ನು ಸಲ್ಲಿಸುವ ಅವಶ್ಯಕತೆ ಇಲ್ಲದೆ, ಸ್ವಯಂಚಾಲಿತವಾಗಿ ಕಡತ ಸಾಗುವ ವ್ಯವಸ್ಥೆ ಇದಾಗಿದೆ ಎಂದರು.

ಅಧಿಕೃತ ಅಧಿಕಾರಿಯಿಂದ ಮೂಲ ದಾಖಲೆ

ಆನ್‌ಲೈನ್ ವ್ಯವಸ್ಥೆಯಲ್ಲಿ ಮೂಲ ದಾಖಲೆಗಳನ್ನು ನೇರವಾಗಿ ಅಧಿಕೃತ ಅಧಿಕಾರಿಯಿಂದ ಪಡೆಯಲಾಗುವುದು. ನಂಬಿಕಾರ್ಹ ಮೂಲ (ಅಧಿಕಾರಿ /ಪ್ರಾಧಿಕಾರ)ದ ಮೂಲಕ ದಾಖಲೆ ಪಡೆಯಲಾಗುವುದರಿಂದ ಅನುಮಾನಕ್ಕೆ ಅವಕಾಶವಿರುವುದಿಲ್ಲ. ಸರ್ವೆ ನಕ್ಷೆಯನ್ನು ಸಂಬಂಧಿಸಿದ ಅಧಿಕಾರಿ ನೇರವಾಗಿ ಒದಗಿಸಬೇಕಾಗುತ್ತದೆ. ದಾಖಲೆಗಳು ದೃಢೀಕೃತವಾದರೆ, ನಕಲಿ ಅಥವಾ ಅಕ್ರಮ ಇಲ್ಲವೇ ವ್ಯಾಜ್ಯಗಳು ತಗ್ಗಿದರೆ ಭ್ರಷ್ಟಾಚಾರವೂ ತಗ್ಗುತ್ತದೆ. ಸರಾಗವಾಗಿ ಭೂ ವ್ಯವಹಾರ ನಡೆಸಲು ಇದು ಸಹಕಾರಿಯಾದ ಹೆಜ್ಜೆಯಾಗಿದೆ.

ಆರು ತಿಂಗಳಲ್ಲಿ ಅನುಷ್ಠಾನ: ಸಚಿವ

ದೇಶದ ನ್ಯಾಯಾಲಯಗಳಲ್ಲಿರುವ ಶೇ.50ಕ್ಕೂ ಹೆಚ್ಚು ವ್ಯಾಜ್ಯಗಳು ಭೂಮಿ ಅಥವಾ ಮಾಲೀಕತ್ವ ಸಂಬಂಧಿಸಿದವು. ಈ ಭೂವ್ಯಾಜ್ಯಗಳಿಂದ ಮತ್ತು ಅನಿಶ್ಚಿತತೆಯಿಂದ ನಾವು ಭೂ ಗ್ಯಾರಂಟಿಯಡಿಗೆ ಸಾಗಲು ಯುಎಲ್‌ಎಂಎಸ್ ಪರಿಣಾಮಕಾರಿ ಮಾರ್ಗವಾಗಲಿದೆ. ಇದರಿಂದ ಜನಗಳ ಕೇಂದ್ರಿತ, ಜನಪರ ಆಡಳಿತ ಸುಧಾರಣೆ ಸಾಧ್ಯ. ಈ ಏಕೀಕೃತ ವ್ಯವಸ್ಥೆಯನ್ನು ಸಂಬಂಧಿಸಿದ ಎಲ್ಲಾ ಇಲಾಖೆಗಳು ಮುಂದಿನ 6 ತಿಂಗಳುಗಳಲ್ಲಿ ಅನುಷ್ಠಾನಕ್ಕೆ ತರಬೇಕೆಂದು ಕಂದಾಯ ಸಚಿವರು ಸೂಚಿಸಿದ್ದಾರೆ.

12ರಿಂದ 15 ಪೈಸೆ ವಿದ್ಯುತ್ ದರ ಏರಿಕೆ?

•ಬೆಂಗಳೂರು: ಆರ್ಥಿಕ ನಷ್ಟವನ್ನು ಸರಿದೂಗಿಸಲು ಹೆಚ್ಚುವರಿ ದರ ಏರಿಕೆಗೆ ರಾಜ್ಯದ ವಿದ್ಯುತ್ ಸರಬರಾಜು ಕಂಪನಿ (ಎಸ್ಕಾಂ)ಗಳು ಕರ್ನಾಟಕ ವಿದ್ಯುತ್ ಸುಧಾರಣಾ ಆಯೋಗ(ಕೆಇಆರ್‌ಸಿ)ಕ್ಕೆ ಪ್ರಸ್ತಾವನೆ ಸಲ್ಲಿಸಿವೆ. ಪ್ರಸಾವನೆ ಒಪ್ಪಿಗೆಯಾದಲ್ಲಿ ಏಪ್ರಿಲ್ 1 ರಿಂದ ಯೂನಿಟ್‌ಗೆ 12 ರಿಂದ 15 ಪೈಸೆ ಹೆಚ್ಚುವರಿ ಶುಲ್ಕ ವಿಧಿಸುವ ಸಾಧ್ಯತೆ ಇದೆ.



ಈಗಾಗಲೇ 2025-26, 2026-27 ಮತ್ತು 2027-28ನೇ ಆರ್ಥಿಕ ವರ್ಷಗಳಿಗೆ ಕೆಇಆರ್‌ಸಿ ದರ ನಿಗದಿ ಮಾಡಿತ್ತು. ಆದರೆ ಈಗ ಎದುರಾಗಿರುವ ಆರ್ಥಿಕ ನಷ್ಟವನ್ನು ಸರಿದೂಗಿಸಲು ಹೆಚ್ಚುವರಿ ದರ ಏರಿಕೆಗೆ ಕೆಇಆರ್‌ಸಿ ಎಸ್ಕಾಂಗಳ ಪ್ರಸ್ತಾವನೆ ಆಧಾರದಲ್ಲಿ ಚಿಂತನೆ ನಡೆಸಿದೆ. ಆದರೆ ಸಾರ್ವಜನಿಕರ ಅಭಿಪ್ರಾಯ ಸಂಗ್ರಹಿಸಿದ ನಂತರ ಬೆಲೆ ಹೆಚ್ಚಳದ ಬಗ್ಗೆ ನಿರ್ಧರಿಸಲಿದ್ದು, ಹೆಚ್ಚಳ ಮಾಡುವ ನಿರ್ಧಾರ ಮಾಡಿದಲ್ಲಿ ಏ.1ರಿಂದ ಜಾರಿಗೆ ಬರುವಂತೆ ಪರಿಷ್ಕೃತ ವಿದ್ಯುತ್ ದರ ಪ್ರಕಟವಾಗುವ ಸಾಧ್ಯತೆಯಿದೆ.

ನಿಗಮವಾರು ಪ್ರಸ್ತಾವಿತ ಬೇಡಿಕೆ

ನಿಗಮ	ಪ್ರಸ್ತಾವಿತ ದರ (ಪೈಸೆಗಳಲ್ಲಿ)
ಬೆಸ್ಕಾಂ	98
ಎಸ್ಕಾಂ	96
ಮೆಸ್ಕಾಂ	91
ಜೆಸ್ಕಾಂ	99
ಚೆಸ್ಕಾಂ	97

ಯೂನಿಟ್‌ಗೆ 12-15 ಪೈಸೆ ಹೆಚ್ಚಳ: ಒಟ್ಟಾರೆ ಪ್ರತಿ ಯೂನಿಟ್‌ಗೆ ಸರಾಸರಿ 12 ರಿಂದ 15 ಪೈಸೆ ಏರಿಕೆಯಾಗಬಹುದು. ರಾಜ್ಯದ ಐದು ಎಸ್ಕಾಂಗಳು ಸಲ್ಲಿಸಿರುವ ಪ್ರಸ್ತಾವನೆಯ ಪ್ರಕಾರ, 2026-27ಕ್ಕೆ ಸರಾಸರಿ 64 ಪೈಸೆಯಷ್ಟು ದರ ಏರಿಕೆ ಕೇಳಲಾಗಿದೆ. ಆದರೆ ಕೆಲವು ವರ್ಗಗಳಲ್ಲಿ ಇದು 67 ರಿಂದ 99 ಪೈಸೆಗಳವರೆಗೆ ಏರಿಕೆಯಾಗಬಹುದು ಎಂದು ಸೂಚನೆಗಳಿವೆ. ದಿನಬಳಕೆ ವಿದ್ಯುತ್‌ನಲ್ಲಿ ಅಲ್ಪಪ್ರಮಾಣದ ಏರಿಕೆಯಾಗಬಹುದು.

ಕೈಗಾರಿಕಾ, ವಾಣಿಜ್ಯ ವಲಯದಲ್ಲಿ ಬಳಸುವ ವಿದ್ಯುತ್ ದರದಲ್ಲೂ ಹೆಚ್ಚಳ ಸಾಧ್ಯತೆ ಇದೆ. ಫಿಕ್ಸೆಡ್ ದರದಲ್ಲೂ 10 ರಿಂದ 20 ರೂ. ವರೆಗೆ ಏರಿಕೆ ಸಾಧ್ಯತೆ ಇದೆ ಎಂದು ಹೇಳಲಾಗುತ್ತಿದೆ.

ಆದಾಯ ಕೊರತೆ: ರಾಜ್ಯದ ವಿದ್ಯುತ್ ಸರಬರಾಜು ಕಂಪನಿಗಳು ಆದಾಯ ಕೊರತೆ ಎದುರಿಸುತ್ತಿವೆ. ರಾಜ್ಯದ ಎಲ್ಲಾ ಎಸ್ಕಾಂಗಳು ಸೇರಿ ಅಂದಾಜು 4,500 ಕೋಟಿ ರೂ. ನಷ್ಟದಲ್ಲಿವೆ. ಇದರಲ್ಲಿ ಬೆಸ್ಕಾಂ ಒಂದರಲ್ಲೇ 2024-25ನೇ ಸಾಲಿನಲ್ಲಿ 2,800 ಕೋಟಿಗೂ ಹೆಚ್ಚು ನಷ್ಟ ಉಂಟಾಗಿದೆ.

ಶಂಕಿತ ಉಗ್ರನ ಪತ್ತೆಗೆ ಎನ್‌ಐಎ ಬಲೆ

•ಬೆಂಗಳೂರು: ಸಿಲಿಕಾನ್ ಸಿಟಿಯಲ್ಲಿ ವಿಧ್ವಂಸಕ ಕೃತ್ಯ ಎಸಗಲು ಸಂಚು ರೂಪಿಸಿದ್ದ ಲಷ್ಕರ್-ಎ-ತೊಯ್ಬಾ ಸಂಘಟನೆಯ ಶಂಕಿತ ಉಗ್ರ ಜುನೈದ್ ಅಹಮದ್ ಪತ್ತೆಗೆ ರಾಷ್ಟ್ರೀಯ ತನಿಖಾ ಸಂಸ್ಥೆ (ಎನ್‌ಐಎ) ಬಲೆ ಬೀಸಿದೆ. ತಲೆಮರೆಸಿಕೊಂಡಿರುವ ಈತನ ಬಗ್ಗೆ ಸುಳಿವು ನೀಡಿದವರಿಗೆ 5 ಲಕ್ಷ ರೂ. ನಗದು ಬಹುಮಾನ ನೀಡುವುದಾಗಿ ಎನ್‌ಐಎ ಅಧಿಕೃತವಾಗಿ ಘೋಷಿಸಿದೆ.

ಜುಲೈ 2023 ರಲ್ಲಿ ಬೆಂಗಳೂರು ಸಿಸಿಬಿ ಪೊಲೀಸರು ಹೆಬ್ಬಾಳ ಮತ್ತು ಆರ್.ಟಿ. ನಗರದಲ್ಲಿ ಕಾರ್ಯಾಚರಣೆ ನಡೆಸಿ ಐವರು ಶಂಕಿತರನ್ನು ಬಂಧಿಸಿದ್ದರು. ಇವರಿಂದ 4 ಸಜೀವ ಗ್ರೆನೇಡ್‌ಗಳು, 7 ಪಿಸ್ತೂಲುಗಳು ಹಾಗೂ 45 ರೌಂಡ್ಸ್ ಗುಂಡುಗಳನ್ನು ವಶಪಡಿಸಿಕೊಳ್ಳಲಾಗಿತ್ತು. ಈ ಇಡೀ ಭಯೋತ್ಪಾದನಾ ಮಾಡ್ಯೂಲನ್ ಸೂತ್ರಧಾರಿ ಜುನೈದ್ ಅಹಮದ್ ಎಂಬುದು ತನಿಖೆಯಲ್ಲಿ ದೃಢಪಟ್ಟಿದೆ.

ಜೈಲಿನಲ್ಲಿ ಶುರುವಾದ ಉಗ್ರ ಸಂಪರ್ಕ: 2017ರ ಕೊಲೆ ಪ್ರಕರಣವೊಂದರಲ್ಲಿ ಜೈಲು ಪಾಲಾಗಿದ್ದ ಜುನೈದ್‌ಗೆ, 2008ರ ಬೆಂಗಳೂರು ಸರಣಿ ಸ್ಫೋಟದ ಮಾಸ್ಟರ್‌ಮೈಂಡ್ ಟಿ.ನಸೀರ್ ಸಂಪರ್ಕ ಉಂಟಾಗಿತ್ತು. ಜೈಲಿನಲ್ಲೇ ಈತ ತೀವ್ರಗಾಮಿ ವಿಚಾರಗಳಿಗೆ ಮಾರುಹೋಗಿದ್ದು, ಬಿಡುಗಡೆಯಾದ ನಂತರ ವಿದೇಶಿ ಹ್ಯಾಂಡ್ಲರ್‌ಗಳ ಸೂಚನೆಯಂತೆ ಬೆಂಗಳೂರಿನಲ್ಲಿ ಸ್ಫೋಟ ನಡೆಸಲು ಸಂಚು ರೂಪಿಸಿದ್ದ ಎನ್ನಲಾಗಿದೆ.

ಕಳೆದ ನಾಲ್ಕು ವರ್ಷಗಳಿಂದ ತಲೆಮರೆಸಿಕೊಂಡಿರುವ ಜುನೈದ್, ಪೊಲೀಸರ ಕಣ್ಣು ತಪ್ಪಿಸಲು ಒಟ್ಟು 9 ಬೇರೆ ಬೇರೆ ಹೆಸರುಗಳನ್ನು ಬಳಸುತ್ತಿದ್ದಾನೆ. ಈ ಪ್ರಕರಣದ ಗಂಭೀರತೆಯನ್ನು ಪರಿಗಣಿಸಿ ಸಿಸಿಬಿಯಿಂದ ತನಿಖೆಯನ್ನು ಎನ್‌ಐಎ ವಹಿಸಿಕೊಂಡಿದೆ. ಸಾರ್ವಜನಿಕರಿಗೆ ಮಾಹಿತಿ ನೀಡಲು ನಗರದ ಪ್ರಮುಖ ಸ್ಥಳಗಳಲ್ಲಿ ಈತನ ಭಾವಚಿತ್ರವಿರುವ ಪೋಸ್ಟರ್‌ಗಳನ್ನು ಅಂಟಿಸಲಾಗಿದೆ. ಎನ್‌ಐಎಗೆ ಮಾಹಿತಿ ನೀಡಿದವರ ಹೆಸರನ್ನು ಗೌಪ್ಯವಾಗಿಡಲಾಗುವುದು ಎಂದು ತಿಳಿಸಿದೆ.

ಪರೀಕ್ಷಾ ಮೇಲ್ವಿಚಾರಕರ ಮೇಲೆ ವಿದ್ಯಾರ್ಥಿ ಹಲ್ಲೆ

•ಕಲಬುರಗಿ: ಪರೀಕ್ಷೆಯಲ್ಲಿ ನಕಲು ಮಾಡುತ್ತಿರುವುದನ್ನು ಪ್ರಶ್ನಿಸಿ ತಡೆದಿದಕ್ಕೆ ಪರೀಕ್ಷಾ ಮೇಲ್ವಿಚಾರಕರ ಮೇಲೆ ವಿದ್ಯಾರ್ಥಿಯಿಂದ ಹಲ್ಲೆ ಮಾಡಿರುವ ಘಟನೆ ನಗರದ ಡಾ.ಮಾಲಕರೆಡ್ಡಿ ಹೋಮಿಯೋಪಥಿಕ್ ಕಾಲೇಜ್‌ನಲ್ಲಿ ನಡೆದಿದೆ.

ಕಾಲೇಜಿನಲ್ಲಿ ಹೋಮಿಯೋಪಥಿಕ್ ಮಟೇರಿಯಾ ಮೆಡಿಕಾ ವಿಷಯದ ಇಂಟರ್ನಲ್ ಪರೀಕ್ಷೆ ವೇಳೆ ವಿದ್ಯಾರ್ಥಿ ಶಹಬಾಜ್ ಎಂಬಾತ ಮೊಬೈಲ್ ಬಳಸಿ ನಕಲು ಮಾಡಲು ಮುಂದಾಗಿದ್ದ. ಶಹಬಾಜ್ ನಕಲು ಮಾಡುತ್ತಿರುವುದನ್ನು ಸಹಾಯಕ ಪ್ರಾಧ್ಯಾಪಕ ಶಿವರಾಜಕುಮಾರ್ ಪ್ರಶ್ನಿಸಿ ಉತ್ತರ ಪತ್ರಿಕೆ ಪಡೆದು ಕ್ಲಾಸ್ ರೂಮ್‌ನಿಂದ ಹೊರ ಹೋಗುವಂತೆ ಹೇಳಿದಕ್ಕೆ ವಿದ್ಯಾರ್ಥಿ ಶಹಬಾಜ್ ಸಹಾಯಕ ಪ್ರಾಧ್ಯಾಪಕ ಶಿವರಾಜ್ ಕುಮಾರ್ ಮೇಲೆ ಹಲ್ಲೆ ಮಾಡಿದ್ದಾನೆ.

ಉಳಿದ ವಿದ್ಯಾರ್ಥಿಗಳು ಹಲ್ಲೆ ಮಾಡೋದನ್ನು ತಡೆದ ಬಳಿಕ ಪರೀಕ್ಷಾ ಕೊಠಡಿಯಿಂದ ಶಹಬಾಜ್ ತೆರಳಿದ್ದಾನೆ. ಹಲ್ಲೆ ಮಾಡುತ್ತಿರುವ ದೃಶ್ಯ ಸಿಸಿಟಿವಿಯಲ್ಲಿ ಸೆರೆಯಾಗಿದೆ.

ಕ್ವಿಂಟಾಲ್‌ಗಿಂತ ಹೆಚ್ಚು ತೂಕದ ಕಡಲಾಮೆ ರಕ್ಷಣೆ

•ಕಾರವಾರ: ಇಲ್ಲಿನ ಕೋಡಿಭಾಗ ಸಂತೋಷಿ ಮಾತಾ ದೇವಾಲಯದ ಸಮೀಪ ಕಾಳಿ ನದಿ ಸಂಗಮ ಪ್ರದೇಶದ ನಾಲೆಯೊಂದರ ಕಿರು ಸೇತುವೆಯ ಕೆಳಗೆ ನಿತ್ರಾಣ ಸ್ಥಿತಿಯಲ್ಲಿ ಸುಮಾರು ಒಂದು ಕ್ವಿಂಟಾಲ್‌ಗಿಂತ ಹೆಚ್ಚಿನ ತೂಕ ಇರುವ ಕಡಲಾಮೆಯೊಂದು ಕಂಡುಬಂದಿದ್ದು, ಅರಣ್ಯ ಇಲಾಖೆಯ ಸಾಗರ ಜೀವ ವಿಭಾಗದ ಅಧಿಕಾರಿಗಳು ಮತ್ತು ಸಿಬ್ಬಂದಿ ಭೇಟಿ ನೀಡಿ ಆಮೆ ರಕ್ಷಣೆಗೆ ಕ್ರಮ ಕೈಗೊಂಡಿದ್ದಾರೆ.



ಹಸಿರು ಕಡಲಾಮೆ ಗ್ರೀನ್ ಸೀ ಟರ್ಟಲ್ ಜಾತಿಗೆ ಸೇರಿರುವ ಸುಮಾರು 60 ವರ್ಷದ ಕಡಲಾಮೆ, 130 ಕಿಲೋ ಭಾರದ್ದಾಗಿದ್ದು, ಸಮುದ್ರದ ಉಬ್ಬರದ ಸಮಯದಲ್ಲಿ ಕಾಳಿ ನದಿ ಅಳಿವೆ ಪ್ರದೇಶ ಸೇರಿಕೊಂಡ ನೀರು ಇಳಿತದ ಸಂದರ್ಭದಲ್ಲಿ ಅಳಿವೆ ಪ್ರದೇಶದಲ್ಲಿ ಮೀನುಗಾರರ ಗಮನಕ್ಕೆ ಬಂದಿದ್ದು, ಅವರು ಕಡಲ ಜೀವಶಾಸ್ತ್ರ ಅಧ್ಯಯನ ಕೇಂದ್ರಕ್ಕೆ ಮಾಹಿತಿ ನೀಡಿದ್ದಾರೆ. ಕೇಂದ್ರದ ತಜ್ಞರು ಮತ್ತು ಅರಣ್ಯ ಇಲಾಖೆಯ ಸಿಬ್ಬಂದಿ ಸ್ಥಳಕ್ಕೆ ಆಗಮಿಸಿ ರಕ್ಷಣಾ ಕಾರ್ಯಾಚರಣೆ ನಡೆಸಿದರು.

ಪಶುವೈದ್ಯರು ಆಗಮಿಸಿ ಆಮೆಗೆ ಚಿಕಿತ್ಸೆ ನೀಡಿದ್ದು, ಅರಣ್ಯ ಇಲಾಖೆಯ ಸುಪರ್ದಿಯಲ್ಲಿರುವ ಕಡಲಾಮೆಗೆ ವಿಶೇಷ ತಜ್ಞರು ಚಿಕಿತ್ಸೆ ನೀಡಿ ಚೇತರಿಸಿಕೊಂಡ ನಂತರ ಸಮುದ್ರಕ್ಕೆ ಬಿಡಲಾಗುತ್ತದೆ ಎಂದು ತಿಳಿದುಬಂದಿದೆ. ಚೆಲೋನಿಯಾ ಮೈದಾಸ್ ಎಂದು ವೈಜ್ಞಾನಿಕ ಹೆಸರನ್ನು ಹೊಂದಿರುವ ಹಸಿರು ಕಡಲಾಮೆ ಪಶ್ಚಿಮ ಕರಾವಳಿಯಲ್ಲಿ ಕಂಡುಬರುವುದು ಅಪರೂಪ.

ಸ್ನೇಹಮಯಿ ಕೃಷ್ಣ ಬಂಧನ

•ಬೆಂಗಳೂರು: ನನ್ನದಲ್ಲದ ಧ್ವನಿಯನ್ನು ಮೈಸೂರಿನಲ್ಲಿ ನಕಲಿ ಆಡಿಯೋ ಸೃಷ್ಟಿಸಿ ಜಾಲತಾಣದಲ್ಲಿ ಹಾಕಿ ಅಪಪ್ರಚಾರ ಮಾಡಿದ್ದಾರೆಂದು ಆರೋಪಿಸಿ ಮುಡಾ ಮಾಜಿ ಆಯುಕ್ತ ಡಿ.ಬಿ. ನಟೇಶ್ ಸಿಸಿಬಿಗೆ ದೂರು ನೀಡಿದ್ದ ಹಿನ್ನೆಲೆಯಲ್ಲಿ ಸಾಮಾಜಿಕ ಕಾರ್ಯಕರ್ತ ಸ್ನೇಹಮಯಿ ಕೃಷ್ಣ ಸಿಸಿಬಿ ಅಧಿಕಾರಿಗಳು ಬಂಧಿಸಿದ್ದಾರೆ. ಅಲ್ಲದೇ ಸ್ನೇಹಮಯಿ ಕೃಷ್ಣ ಸರ್ಕಾರದ ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್ ವಿರುದ್ಧವೂ ಕೋಟ್ಯಂತರ ರೂಪಾಯಿ ಲಂಚ ಆರೋಪ ಮಾಡಿದ್ದರು.



ಮುಡಾ ಮಾಜಿ ಆಯುಕ್ತ ಡಿ.ಬಿ. ನಟೇಶ್ ಬಡ್ತಿ ಪಡೆಯಲು ಶಾಲಿನಿ ರಜನೀಶ್‌ಗೆ ಲಂಚ ನೀಡಿದ್ದಾರೆ ಎಂದು ಸ್ನೇಹಮಯಿ ಕೃಷ್ಣ ಗಂಭೀರ ಆರೋಪ ಮಾಡಿದ್ದರು. ಈ ಆರೋಪ ತೀವ್ರ ಸ್ವರೂಪ ಪಡೆದುಕೊಳ್ಳುತ್ತಿದ್ದಂತೆಯೇ ನಟೇಶ್ ದೂರು ನೀಡಿದ್ದು, ಈ ದೂರಿನ ಅನ್ವಯ ಸಿಸಿಬಿಯ ಸೈಬರ್ ಕ್ರೈಮ್ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದ್ದು, ಸಿಸಿಬಿ ಅಧಿಕಾರಿಗಳು ಸ್ನೇಹಮಯಿ ಕೃಷ್ಣನನ್ನು ಬಂಧಿಸಿ ವಿಚಾರಣೆಗೆ ಒಳಪಡಿಸಿದ್ದಾರೆ.

ಧ್ವನಿಯನ್ನು ಸೃಷ್ಟಿಸಿ ಸಾಮಾಜಿಕ ಜಾಲತಾಣದಲ್ಲಿ ಹಾಕಿ ಅಪಪ್ರಚಾರ ಮಾಡಿದ್ದ ಆರೋಪ ಮೇಲೆ ಮೊದಲು ಸ್ನೇಹಮಯಿ ಕೃಷ್ಣ ಅವರನ್ನು ಸಿಸಿಬಿ ವಶಕ್ಕೆ ಪಡೆದುಕೊಂಡು ತೀವ್ರ ವಿಚಾರಣೆಗೊಳಪಡಿಸಿದೆ. ಬಳಿಕ ಬಂಧನ ಮಾಡಿದೆ. ಮತ್ತೊಂದೆಡೆ ನ್ಯಾಯಾಲಯದಲ್ಲಿ ಸರ್ಚ್ ವಾರಂಟ್ ಪಡೆದು, ಸ್ನೇಹಮಯಿ ಕೃಷ್ಣ ಅವರ ಮೈಸೂರು ನಿವಾಸದ ಮೇಲೆ ಬೆಂಗಳೂರು ಸಿಸಿಬಿ ದಾಳಿ ಮಾಡಿ ಪರಿಶೀಲನೆ ನಡೆಸಿದ್ದಾರೆ.



ಸಿಎಂ ಸಿದ್ದರಾಮಯ್ಯನವರ ವಿರುದ್ಧ ಆರೋಪ ಮಾಡಿದರು ಎಂದು ಸ್ನೇಹಮಯಿ ಕೃಷ್ಣ ವಿರುದ್ಧ ರಾಜ್ಯ ಸರ್ಕಾರ ಸೇಡು ತೀರಿಸಿಕೊಳ್ಳಲು ಹೊರಟಿದೆ.
■ ಪ್ರಲ್ಹಾದ ಜೋಶಿ, ಕೇಂದ್ರ ಸಚಿವ

ಸಿಸಿಬಿ ಪೊಲೀಸರು ಸರ್ಚ್ ವಾರೆಂಟ್ ಪಡೆದು ನಮ್ಮ ಮನೆಯಲ್ಲಿ ತಪಾಸಣೆ ಮಾಡಿ, ಪೆನ್ ಡ್ರೈವ್, ಸ್ಕ್ಯಾನರ್, ದಾಖಲೆ, ಹಾರ್ಡ್‌ಡಿಸ್ಕ್ ವಶಕ್ಕೆ ಪಡೆದರು.
■ ವಿನೋದಾ, ಸ್ನೇಹಮಯಿ ಕೃಷ್ಣ ಪತ್ನಿ

ರಾಷ್ಟ್ರೀಯ ಹಿಂದು ಆರ್ಥಿಕ ಮಹಾಸಂಗಮಕ್ಕೆ ಸ್ವಾಮಿ ವಿಗ್ಯಾನಂದ ಚಾಲನೆ

ಆರ್ಥಿಕ ಪ್ರೋತ್ಸಾಹ ಎಚ್‌ಇಎಫ್ ಉದ್ದೇಶ

•ಹುಬ್ಬಳ್ಳಿ: ಹು-ಧಾ ಚಾಪ್ಟರ್‌ನಿಂದ ನಗರದ ಖಾಸಗಿ ಹೋಟೆಲ್‌ನಲ್ಲಿ ಆಯೋಜಿಸಿದ್ದ ರಾಷ್ಟ್ರೀಯ ಮಟ್ಟದ ಹಿಂದು ಆರ್ಥಿಕ ಮಹಾಸಂಗಮ-2026ಕ್ಕೆ ಶುಕ್ರವಾರ ಧರ್ಮಸ್ಥಳದ ಧರ್ಮಾಧಿಕಾರಿ ಡಾ.ಡಿ. ವೀರೇಂದ್ರ ಹೆಗ್ಗಡೆ ಹಾಗೂ ಹಿಂದು ಆರ್ಥಿಕ ಒಕ್ಕೂಟದ (ಎಚ್‌ಇಎಫ್) ಮುಖ್ಯಸ್ಥ ಸ್ವಾಮಿ ವಿಗ್ಯಾನಂದ ಚಾಲನೆ ನೀಡಿದರು.



ಕಾಶ್ಮೀರದಿಂದ ಹಿಡಿದು ಕನ್ಯಾ ಕುಮಾರಿವರೆಗೂ ಹಿಂದುಗಳ ಒಗ್ಗೂಡಿಸುವ ಮೂಲಕ ಆರ್ಥಿಕ ವಾಗಿ ಬಲಗೊಳ್ಳಬೇಕಿದೆ. ಹಿಂದು ಆರ್ಥಿಕ ಒಕ್ಕೂಟದಿಂದ ಸಂಘಟನೆ ಕಾರ್ಯ ನಡೆದಿದ್ದು, ಅದರ ಸಲಹೆ, ಸಹಾಯದಿಂದ ಉದ್ಯಮ ಬೆಳವಣಿಗೆ ಕಾಣಲಿದೆ.
■ ಡಾ.ವೀರೇಂದ್ರ ಹೆಗ್ಗಡೆ, ಧರ್ಮಸ್ಥಳದ ಧರ್ಮಾಧಿಕಾರಿ

ವಿವಿಧ ರಾಜ್ಯಗಳ ಹಾಗೂ ಕರ್ನಾಟಕದ 250ಕ್ಕೂ ಹೆಚ್ಚು ಉದ್ಯಮಿಗಳು ಹಾಗೂ ನವೋದ್ಯಮಿಗಳು ಸಮಾರಂಭದಲ್ಲಿ ಭಾಗವಹಿಸಿ ಸದುಪಯೋಗ ಪಡೆದುಕೊಂಡರು. ಹಿಂದು ಉದ್ಯಮಿಗಳ ಒಗ್ಗೂಡಿಸಲು, ಆರ್ಥಿಕವಾಗಿ ಪ್ರೋತ್ಸಾಹಿಸುವುದು ಹಿಂದು ಆರ್ಥಿಕ ಒಕ್ಕೂಟದ (ಎಚ್‌ಇಎಫ್) ಉದ್ದೇಶವಾಗಿದೆ.

ಈ ವೇಳೆ ಹಿಂದು ಆರ್ಥಿಕ ಒಕ್ಕೂಟದ (ಎಚ್‌ಇಎಫ್) ಮುಖ್ಯಸ್ಥ ಸ್ವಾಮಿ ವಿಗ್ಯಾನಂದಜಿ ಮಾತನಾಡಿ, ಹಿಂದು ನವೋದ್ಯಮಿಗಳಿಗೆ ಆರ್ಥಿಕವಾಗಿ ಬೆಳವಣಿಗೆ ಹೊಂದಲು, ಸಲಹೆ ಜೊತೆಗೆ ಮೂಲ ಸೌಕರ್ಯ ಒದಗಿಸುವುದು ಹಿಂದು ಆರ್ಥಿಕ ಒಕ್ಕೂಟದ ಮುಖ್ಯ ಗುರಿಯಾಗಿದೆ. 2030ರ ವೇಳೆಗೆ ಯುವಕರು ಉದ್ಯೋಗ ಹುಡುವುದಕ್ಕಿಂತ ಉದ್ಯೋಗ ಸೃಷ್ಟಿಯ ಸಂಸ್ಕೃತಿ ಬೆಳೆಸಿಕೊಂಡು ಇತರರಿಗೆ ಉದ್ಯೋಗ ನೀಡುವಂತಾಗಬೇಕು ಎಂದರು.

ಆರ್ಥಿಕ ತಜ್ಞ ಡಾ.ಆರ್.ವೈದ್ಯನಾಥನ್ ಮಾತನಾಡಿ, ಕೇಂದ್ರ ಸರ್ಕಾರದ ವ್ಯಾಪಾರ ಒಪ್ಪಂದಗಳು, ಜಿಎಸ್‌ಟಿ ದರ ಪರಿಷ್ಕರಣೆ ಮತ್ತು ಕೃಷಿ ಉತ್ಪಾದನೆಯಲ್ಲಿ ಹೆಚ್ಚಳವು ಜಿಡಿಪಿ ಪರಿಷ್ಕರಣೆಗೆ ಕಾರಣವಾಗಿದೆ. ದೇಶದಲ್ಲಿ ಜನರ ಖರೀದಿ ಸಾಮರ್ಥ್ಯ ಮತ್ತು ಸ್ಥಿರವಾದ ಹೂಡಿಕೆಯ ಪ್ರಮಾಣ ಹೆಚ್ಚಳವಾಗಿದೆ ಎಂದು ತಿಳಿಸಿದರು.

ಕಾಡಾನೆ ಸೆರೆ ವೇಳೆ ಸಾಕಾನೆ ಜೂ.ಅರ್ಜುನ ನಾಪತ್ತೆ | 1 ಗಂಟೆ ಕಾರ್ಯಾಚರಣೆ ಬಳಿಕ ಪತ್ತೆ

ಸಾಕಾನೆ ನಾಪತ್ತೆ: ಅರಣ್ಯ ಸಿಬ್ಬಂದಿ ಪೇಚು

•ಚಿಕ್ಕಮಗಳೂರು: ಕಾಡಾನೆ ಸೆರೆಗೆ ಹೋಗಿದ್ದ ಸಾಕಾನೆ ಜೂನಿಯರ್ ಅರ್ಜುನ ದಾರಿ ತಪ್ಪಿ ಅರಣ್ಯ ಸಿಬ್ಬಂದಿಯನ್ನು ಪೇಚಿಗೆ ಸಿಲುಕಿಸಿದ ಘಟನೆ ತಾಲೂಕಿನ ಹುಣಸೇಹಳ್ಳಿ ಅರಣ್ಯದಲ್ಲಿ ಶುಕ್ರವಾರ ನಡೆದಿದೆ.

ಉಪಟಳ ನೀಡುತ್ತಿದ್ದ ಕಾಡಾನೆಯನ್ನು ಹಿಡಿಯುವ ಕಾರ್ಯಾಚರಣೆ ವೇಳೆ ಕಾಡಾನೆಗೆ ಮದವೇರಿದ್ದ ಹಿನ್ನೆಲೆಯಲ್ಲಿ ಹಿಂದಿರುಗುವಾಗ ಜೂನಿಯರ್ ಅರ್ಜುನ ದಾರಿ ತಪ್ಪಿದ್ದಾನೆ. ಕಳೆದ 5 ದಿನಗಳ ಹಿಂದೆ ಕಾಫಿ ತೋಟದಲ್ಲಿ ಕಾರ್ಮಿಕನನ್ನು ಬಲಿ ಪಡೆದಿದ್ದ ಕಾಡಾನೆಯನ್ನು ಸೆರೆ ಹಿಡಿಯಲು ರಾಜ್ಯದ ವಿವಿಧ ಶಿಬಿರಗಳಿಂದ 7 ಸಾಕಾನೆಗಳು ಬಂದಿದ್ದವು. ನಿನ್ನೆಯಿಂದ ಕಾರ್ಯಾಚರಣೆ ಕೂಡ ಆರಂಭಗೊಂಡಿತ್ತು.

ಶುಕ್ರವಾರ ಸಾಕಾನೆ ಜೂನಿಯರ್ ಅರ್ಜುನನ ನೇತೃತ್ವದಲ್ಲಿ ಅರಣ್ಯ ಸಿಬ್ಬಂದಿ ಕಾಡಾನೆಗಾಗಿ ಹುಡುಕಾಟ ನಡೆಸುತ್ತಿದ್ದಾಗ ಮದವೇರಿದ್ದ ಕಾಡಾನೆ ಏಕಾಏಕಿ ದಾಳಿಗೆ ಮುಂದಾಗಿದೆ. ಈ ಕಾದಾಟದ ಸಂದರ್ಭದಲ್ಲಿ ಜೂನಿಯರ್ ಅರ್ಜುನ ಕಾಡಿನೊಳಗೆ ಓಡಿಹೋಗಿ ಒಂದು ಗಂಟೆ ಕಾಲ ನಾಪತ್ತೆಯಾಗಿದ್ದ.



ಅರಣ್ಯದಲ್ಲಿ ಸಾಕಾನೆಯೇ ಮಿಸ್ ಆಗಿದ್ದರಿಂದ ಅಧಿಕಾರಿಗಳು ಹಾಗೂ ಇ.ಟಿ.ಎಫ್ ಸಿಬ್ಬಂದಿ ಒಂದು ಗಂಟೆ ಕಾಲ ತೀವ್ರ ಹುಡುಕಾಟ ನಡೆಸಿ ಅರ್ಜುನನನ್ನು ಪತ್ತೆ ಹಚ್ಚಿದ್ದಾರೆ. ಒಂದೆಡೆ ಮದವೇರಿದ್ದ ಕಾಡಾನೆ ಭೀತಿ. ಮತ್ತೊಂದೆಡೆ ಕಾರ್ಯಾಚರಣೆಯ ಪ್ರಮುಖ ಆನೆಯೇ ನಾಪತ್ತೆಯಾದ ಕಾರಣ ಅರಣ್ಯಾಧಿಕಾರಿಗಳು ಮತ್ತು ಇಟಿಎಫ್ ಸಿಬ್ಬಂದಿ ಸಂಕಷ್ಟಕ್ಕೆ ಸಿಲುಕಿದ್ದರು. ಸುಮಾರು ಒಂದು ಗಂಟೆ ಕಾಲ ಅರಣ್ಯದಾದ್ಯಂತ ಹುಡುಕಾಡಿದ ಬಳಿಕ ಕೊನೆಗೂ ಜೂನಿಯರ್ ಅರ್ಜುನ ಪತ್ತೆಯಾಗಿದ್ದು ಅಧಿಕಾರಿಗಳು ನಿಟ್ಟುಸಿರು ಬಿಟ್ಟಿದ್ದಾರೆ.

ಸದ್ಯ ಆನೆಯನ್ನು ಸುರಕ್ಷಿತವಾಗಿ ಕಟ್ಟಿಹಾಕಲಾಗಿದ್ದು ಮದವೇರಿದ ಕಾಡಾನೆಯ ಉಗ್ರ ರೂಪದಿಂದಾಗಿ ಸದ್ಯಕ್ಕೆ ಕಾರ್ಯಾಚರಣೆಯನ್ನು ಸ್ಥಗಿತಗೊಳಿಸಿ ಸಿಬ್ಬಂದಿ ಹಿಂದಿರುಗಿದ್ದಾರೆ.

ಎಚ್ಚರಿಕೆಯ ಸೂಚನೆ

ಬಲಿಷ್ಠ ಗಂಡು ಕಾಡಾನೆಗೆ ಮದವೇರಿರುವುದರಿಂದ ಅರಣ್ಯಾಧಿಕಾರಿಗಳಿಗೆ ಕಾಡಾನೆ ಕಾರ್ಯಾಚರಣೆ ಸವಾಲಾಗಿ ಪರಿಣಮಿಸಿದೆ. ಸುತ್ತಮುತ್ತಲಿನ ಹಳ್ಳಿಗರು, ಕಾಫಿ ತೋಟದ ಕಾರ್ಮಿಕರು, ವಾಹನ ಸವಾರರು ಎಚ್ಚರಿಕೆಯಿಂದ ಇರುವಂತೆ ಅರಣ್ಯ ಇಲಾಖೆ ಸೂಚನೆ ನೀಡಿದೆ.

ಸಂಪಾದಕೀಯ

ಉಚಿತಗಳೆಷ್ಟು ವಿಹಿತ?

ಚುನಾವಣೆಯ ಸಂದರ್ಭದಲ್ಲಿ ರಾಜಕೀಯ ಪಕ್ಷಗಳು ಮತದಾರರಿಗೆ ಉಚಿತ ಕೊಡುಗೆಗಳನ್ನು ಘೋಷಿಸುವುದಕ್ಕೆ ತೀವ್ರ ಆಕ್ಷೇಪ ವ್ಯಕ್ತಪಡಿಸಿರುವ ಸರ್ವೋಚ್ಚ ನ್ಯಾಯಾಲಯವು, ಈ ಮೂಲಕ ಎಂತಹ ಪರಂಪರೆಯನ್ನು ಹುಟ್ಟು ಹಾಕುತ್ತಿದ್ದೀರಿ ಎಂದು ಖಾರವಾಗಿ ಪ್ರಶ್ನಿಸಿದೆ. ತಮಿಳುನಾಡು ಸರಕಾರವು ವರ್ಗಭೇದವಿಲ್ಲದೆ ಎಲ್ಲರಿಗೂ ಉಚಿತ ವಿದ್ಯುತ್ ನೀಡುವುದಾಗಿ ವಾಗ್ದಾನ ಮಾಡಿರುವುದನ್ನು ಅಲ್ಲಿನ ವಿದ್ಯುತ್ ವಿತರಣಾ ನಿಗಮವು ಪ್ರಶ್ನಿಸಿ ಸುಪ್ರೀಂ ಕೋರ್ಟಿಗೆ ಸಲ್ಲಿಸಿದ ಅರ್ಜಿಯ ವಿಚಾರಣೆ ನಡೆಸಿದ ಮೂವರು



ನ್ಯಾಯಾಧೀಶರನ್ನು ಒಳಗೊಂಡ ನ್ಯಾಯಪೀಠವು, ಸರಕಾರದ ಇಂತಹ ನಡೆಯನ್ನು ಖಂಡಿಸಿದೆ. ಕೇವಲ ತಮಿಳುನಾಡಿನಲ್ಲಷ್ಟೇ ಅಲ್ಲದೆ, ಇತ್ತೀಚಿನ ವರ್ಷಗಳಲ್ಲಿ ಹಲವಾರು ರಾಜ್ಯಗಳಲ್ಲಿ ಪ್ರತಿಯೊಂದು ಪಕ್ಷವೂ ಇಂತಹ ಉಚಿತಗಳನ್ನು ಘೋಷಿಸುವ ಕ್ರಮ ಅನುಸರಿಸುವುದು ಕೂಡಾ ನ್ಯಾಯಾಲಯದ ಕೆಂಗಣ್ಣಿಗೆ ಕಾರಣವಾಗಿದೆ. ಆರ್ಥಿಕವಾಗಿ ದುಸ್ಥಿತಿಯಲ್ಲಿರುವ ರಾಜ್ಯಗಳು ಕೂಡಾ ಇಂತಹ ಬಿಟ್ಟಿ ಕೊಡುಗೆಗಳನ್ನು ಘೋಷಿಸುತ್ತಿರುವುದರ ಕುರಿತು ತೀವ್ರ ಆಕ್ರೋಶ ಕಾರಿರುವ ನ್ಯಾಯಾಲಯವು, ಜನರಿಗೆ ಎಲ್ಲವನ್ನೂ ಉಚಿತವಾಗಿ ನೀಡಿದರೆ ಅವರು ಕೆಲಸ ಮಾಡುವ ಮನಸ್ಸು ಮಾಡಿಯಾರೆ ಎಂದು ಪ್ರಶ್ನಿಸಿದೆ.

ನ್ಯಾಯಾಲಯದ ಆಕ್ರೋಶ ಸಹಜವಾದುದೇ ಆಗಿದೆ. ಬಹುತೇಕ ನಾಗರಿಕರೂ ಇದೇ ಬಗೆಯ ಅಭಿಪ್ರಾಯ ಹೊಂದಿದ್ದಾರೆ. ರಾಜಕೀಯ ಪಕ್ಷಗಳು ಚುನಾವಣೆ ಬಂದಾಗ ಇಂತಹ ಓಲೈಕೆ ರಾಜಕಾರಣ ಮಾಡುವುದು ಇತ್ತೀಚಿನ ವರ್ಷಗಳಲ್ಲಿ ಮಾಮೂಲಾಗಿದೆ. ಅಧಿಕಾರಕ್ಕೆ ಬಂದ ಬಳಿಕ ಕಲ್ಯಾಣ ಕಾರ್ಯಕ್ರಮಗಳ ಮೂಲಕ ಜನರಿಗೆ ಒಳಿತು ಮಾಡುವುದಾಗಿ ಪ್ರಕಟಿಸುವುದನ್ನು ಒಪ್ಪಿಕೊಳ್ಳಬಹುದು. ಅದು ರಾಜಕೀಯ ಪಕ್ಷವೊಂದರ ಸಾಮರ್ಥ್ಯ, ಯೋಜನೆ, ದೂರದೃಷ್ಟಿಯ ಪ್ರದರ್ಶನವೂ ಆಗುತ್ತದೆ. ಆದರೆ ಯಾವುದೇ ಯೋಜನೆ ಹಾಕಿಕೊಳ್ಳದೆ, ದೂರದೃಷ್ಟಿಯಿಲ್ಲದೆ, ಬೇಕಾಬಿಟ್ಟಿ ಕೊಡುಗೆ ನೀಡುವುದರಿಂದ ರಾಜ್ಯವು ಭಾರೀ ಆರ್ಥಿಕ ಹೊರೆ ಅನುಭವಿಸಬೇಕಾಗುತ್ತದೆ. ಆ ಕಾರಣದಿಂದಾಗಿ ಇನ್ನಿತರ ಅಭಿವೃದ್ಧಿ ಕಾರ್ಯಗಳು ಮೂಲೆಗುಂಪಾಗುತ್ತವೆ. ಮೂಲಸೌಕರ್ಯಗಳು ಮಣ್ಣು ಪಾಲಾಗುತ್ತವೆ.

ಉಚಿತ ಕೊಡುಗೆಗಳನ್ನು ವಿರೋಧಿಸಿ ನ್ಯಾಯಾಲಯ ಇಂತಹ ಅಭಿಪ್ರಾಯ ವ್ಯಕ್ತಪಡಿಸಿರುವುದು ಇದೇ ಮೊದಲೇನಲ್ಲ. 2025 ಮತ್ತು 2022ರಲ್ಲಿಯೂ ಇದೇ ರೀತಿಯ ಆಕ್ಷೇಪ ವ್ಯಕ್ತಪಡಿಸಿತ್ತು. ದುರಂತವೆಂದರೆ ನ್ಯಾಯಾಲಯ ಕೂಡಾ ಇದನ್ನು ತಡೆಯಲು ಏನು ಕ್ರಮ ತೆಗೆದುಕೊಳ್ಳಬಹುದು ಎಂಬ ಮಾರ್ಗದರ್ಶಿ ಸೂತ್ರಗಳನ್ನು ಪ್ರಕಟಿಸುವ ಮನ ಮಾಡಿಲ್ಲ. ಅದನ್ನು ಸಂಸತ್ತು ಮತ್ತು ಚುನಾವಣಾ ಆಯೋಗಕ್ಕೆ ಬಿಟ್ಟಿದೆ. ಇನ್ನಾದರೂ 'ಅನುಚಿತ' ಉಚಿತ ಕೊಡುಗೆಗಳನ್ನು ಘೋಷಿಸುವ ಚಾಳಿಗೆ ಕಡಿವಾಣ ಬೀಳಬೇಕಾಗಿದೆ.

ವಿಶುದ್ಧ ಎಂದರೆ ಶುದ್ಧೀಕರಣ

ವಿಶುದ್ಧ ಚಕ್ರವು ನಿಮ್ಮ ಭಾವನೆಗಳನ್ನು ವ್ಯಕ್ತ ಪಡಿಸುವ ಸಾಧನ. ಭಾವನಾತ್ಮಕ ಅನುಭವಗಳನ್ನು ಪ್ರಜ್ಞಾಪೂರ್ವಕ ಸಂಗತಿಗಳನ್ನಾಗಿ ಪರಿವರ್ತಿಸುವ ಮೂಲಕ ನಿಮ್ಮನ್ನು ಅಭಿವ್ಯಕ್ತಗೊಳಿಸುತ್ತದೆ.

ಪೂರ್ಣ ಪರಿಪೂರ್ಣ
• ಪೂರ್ಣಪ್ರಜ್ಞ ಬೇಳೂರು
poornaprajnabelur@gmail.com



ವಿಶುದ್ಧ ಚಕ್ರವು ಚಕ್ರಗಳಿಂದ ಬರುವ ಶಕ್ತಿಯನ್ನು ಶುದ್ಧೀಕರಿಸಿ ಮೇಲಿನ ಚಕ್ರಗಳಿಗೆ ಕಳಿಸುತ್ತದೆ. ಚಯಾಪಚಯ ಕ್ರಿಯೆಯನ್ನು ಶುದ್ಧೀಕರಿಸುತ್ತದೆ ಮತ್ತು ಶಕ್ತಿಯ ಮಟ್ಟವನ್ನು ನಿಯಂತ್ರಿಸುತ್ತದೆ. ಹೃದಯ ಮತ್ತು ಮನಸ್ಸಿನ ನಡುವಿನ ಸೇತುವೆಯಂತೆ ಕಾರ್ಯ ನಿರ್ವಹಿಸುತ್ತದೆ.

ಸಾಮಾಜಿಕ ಬದಲಾವಣೆ: ಗೋಪಾಲಕೃಷ್ಣ ಗೋಖಲೆಯವರ ಒಂದು ಮಾತು ಇಡೀ ದಕ್ಷಿಣ ಭಾರತದಲ್ಲೇ ಗಣೇಶನ ಹಬ್ಬವನ್ನು ಆಚರಿಸುವಂತೆ ಮಾಡಿತು. ಲಾಲ್ ಬಹಾದ್ದೂರ್ ಶಾಸ್ತ್ರೀಜಿಗಳ ಒಂದು ಮಾತು ದೇಶದಾದ್ಯಂತ ಜನರನ್ನು ಸೋಮವಾರದ ಒಪ್ಪತ್ತು ಊಟಕ್ಕೆ ಶರಣಾಗುವಂತೆ ಮಾಡಿತು. ಹೀಗೆ ಒಂದು ಮಾತು, ಸಾಮಾಜಿಕವಾಗಿ ಒಗ್ಗೂಡಿಸಿತು. ಇನ್ನೊಂದು ಮಾತು, ಒಪ್ಪತ್ತು ಮಾಡುವ ಮೂಲಕ ಬಡವರಿಗೆ ಊಟವು ದೊರಕುವಂತೆ ಮಾಡಿತು. ಹೀಗೆ ವಿಶುದ್ಧ ಚಕ್ರದ ಸಹಾಯದಿಂದ ಸಾಮಾಜಿಕ ಬದಲಾವಣೆ ಶೀಘ್ರದಲ್ಲಿ ಆಗಲು ಕಾರಣವಾಯಿತು.

ವೈಯಕ್ತಿಕ ಬದಲಾವಣೆ: ಹೊಸ ಪದಗಳ ಕಲಿಕೆಯು ನಿಮ್ಮಲ್ಲಿ ಹೊಸ ಚೈತನ್ಯವನ್ನೇ ನೀಡುತ್ತದೆ. ಒಂದು ಪದಕ್ಕೆ ಹಲವು ಅರ್ಥಗಳಿವೆ. ಒಂದು ಪದದ ಹಿಂದೆ ಕತೆಗಳೇ ಇರುತ್ತವೆ. ಒಂದು ಪದದ ಹಿಂದೆ ವಿಷಾದವಿರಬಹುದು. ಒಂದು ಪದದ ಹಿಂದೆ ಒಂದು ಕಾದಂಬರಿಗೆ ಆಗುವಷ್ಟು ಸಂಗತಿಗಳು ಇರಬಹುದು. ಒಂದು ಪದ ಸಂಜೀವಿನಿಯೇ ಆಗಿರಬಹುದು. ಅಶ್ವತ್ಥಾಮ ಹತಃ ಕುಂಜರಃ ಎನ್ನುವ ಒಂದು ಮಾತು ದ್ರೋಣಾಚಾರ್ಯರ ತಲೆಯನ್ನೇ ಕತ್ತರಿಸಿ ಹಾಕಿತು. ಇವೆಲ್ಲಾ ಅರ್ಥವಾಗುವುದು ನಿಮ್ಮೊಳಗೇ ಒಂದು ಬದಲಾವಣೆ ಆದರೆ ಮಾತ್ರ.

ನೀವು ಈ ರೀತಿಯಲ್ಲೂ ಸಹಾ ವಿಶುದ್ಧ ಚಕ್ರವನ್ನು ಸಮತೋಲನ ಮಾಡಬಹುದು.

ವಿಶುದ್ಧ ಚಕ್ರವು ನಿಮ್ಮ ಗಂಟಲಿನಲ್ಲಿ ಇರುವ ಕಾರಣ ನಿಮ್ಮ ಧ್ವನಿಯನ್ನು ಮತ್ತು ಅದರ ತರಂಗಗಳನ್ನು ನಿಯಂತ್ರಿಸುತ್ತದೆ. ನಿಮಗೆ ತಿಳಿದಿರುವ ಹಾಗೇ ಪ್ರತಿಯೊಂದು ವಸ್ತುಗಳಿಗೂ ಅದರದೇ ಆದ ತರಂಗಗಳಿವೆ. ನೀವು ಅದನ್ನು ಘರ್ಷಣೆಗೆ ಒಳಪಡಿಸಿದಾಗ ಅದು ಹೊರಡಿಸುವ ಶಬ್ದಗಳನ್ನು ನೀವು ಧ್ವನಿ ತರಂಗ ಎನ್ನುತ್ತೀರಿ. ಪ್ರತಿಯೊಂದು ಖನಿಜಕ್ಕೂ, ಕಲ್ಲುಗಳಿಗೂ ಅದರದೇ ಆದ ತರಂಗವನ್ನು ಹೊಮ್ಮಿಸುವ ಶಕ್ತಿ ಇರುತ್ತದೆ. ಅದನ್ನು ನೀವು ಸೂಕ್ತವಾದ ರೀತಿಯಲ್ಲಿ ಬಳಸಿಕೊಳ್ಳಬೇಕು. ಅಕ್ವಾಮರಿನ್ ಎಂಬುದು ಸಮುದ್ರ ನೀಲಿ ಬಣ್ಣದ ಹರಳು, ಸೆಲೆಸ್ಟೈಟ್ ಸಹಾ ನೀಲಿ ಬಣ್ಣದ ಹರಳು, ವೈಢೂರ್ಯ ಬೆಕ್ಕಿನ ಕಣ್ಣಿನ ಬಣ್ಣದ್ದು. ಇವುಗಳನ್ನೆಲ್ಲಾ ನೀವು ಧರಿಸುವುದರ ಮೂಲಕ ವಿಶುದ್ಧ ಚಕ್ರವನ್ನು ಸಮತೋಲನ ಮಾಡಬಹುದು. ಇವು ಇರುವ ಹಾರವನ್ನಾಗಲೀ, ಅಥವಾ ಕೇವಲ ನೀಲಿ ಬಣ್ಣದ ಪದಕವಿರುವ ಸರವನ್ನಾದರೂ ನೀವು ಧರಿಸಬೇಕು.

ನೀಲಿಯೇ ಏಕೆ?

ವಿಶುದ್ಧ ಚಕ್ರವನ್ನು ಹದಿನಾರು ದಳಗಳಿರುವ ನೀಲಿಯ ಕಮಲದಿಂದ ಗುರುತಿಸಲಾಗುತ್ತದೆ. ಇದು ಸ್ಪಷ್ಟತೆ, ಸತ್ಯ ಮತ್ತು ಶಾಂತತೆಯ ಪ್ರತಿಬಿಂಬ. ಆಕಾಶ ತತ್ವವನ್ನು ಪ್ರತಿನಿಧಿಸುವ ಕಾರಣ ಅದು ನೀಲಿ. ಆಕಾಶವು ಸೂಕ್ಷ್ಮ ಮತ್ತು ವಿಸ್ತಾರ ಎರಡೂ ಗುಣಗಳನ್ನು ಹೊಂದಿದೆ. ರೂಪಕ್ಕಿಂತಾ ಚಲನೆ ಮತ್ತು ಅನುರಣನವನ್ನು ಅನುಮತಿಸುತ್ತದೆ. ನೀವು ಸಾವಧಾನದಿಂದ ಮಾತನಾಡುವುದು, ಜಪವನ್ನು ನಿರಂತರ ಮಾಡುವುದು, ಗುನುಗುವಿಕೆ ಹೀಗೆ ಇವೆಲ್ಲಾ ಕೇಂದ್ರ ಸಂಗತಿಗಳು. ತರಂಗವು ಅಡಚಣೆ ಇಲ್ಲದೇ ಚಲಿಸಲು ಮುಕ್ತವಾದ ಸ್ಥಳ ಬೇಕು. ಅದೇ ಆಕಾಶ.

ನೀವು ಕುತ್ತಿಗೆಯ ವ್ಯಾಯಾಮವನ್ನು ಸೂಕ್ತವಾದ ರೀತಿಯಲ್ಲಿ ಮಾಡಿದರೆ ವಿಶುದ್ಧ ಚಕ್ರದ ಸಮತೋಲನ ಸಾಧ್ಯ. ಕತ್ತನ್ನು ಹಿಗ್ಗಿಸುವುದು, ಹಲಾಸನವನ್ನು ಮಾಡುವುದು, ಕುತ್ತಿಗೆಯನ್ನು ಮೇಲೆ ಕೆಳಗೆ ಮಾಡುತ್ತಾ, ಅಡ್ಡಾದಿಡ್ಡಿ ತಿರುಗಿಸುತ್ತಾ ವ್ಯಾಯಾಮಗಳನ್ನು ಮಾಡುವುದು ಮುಖ್ಯ.

ಗಲ್ಲವನ್ನು ಎದೆಗೆ ಒತ್ತಿರಿ. ಎಡ ಕಿವಿಯನ್ನು ಎಡ ಭುಜಕ್ಕೆ ತಾಗಿಸಿ, ಬಲ ಕಿವಿಯನ್ನು ಬಲ ಭುಜಕ್ಕೆ ತಾಗಿಸಿ, ಮತ್ತು ಸ್ವಲ್ಪ ಹೊತ್ತು ಹಾಗೇ ಇಟ್ಟುಕೊಳ್ಳಿ. ಉಸಿರನ್ನು ಒಳಗೆ ಎಳೆದುಕೊಳ್ಳಿ ಮತ್ತು ಸುಮಾರು ಮೂವತ್ತು ಸೆಕೆಂಡುಗಳ ಕಾಲ ನಿಮ್ಮೊಳಗೆ ಆಗುತ್ತಿರುವ ಹಿಗ್ಗುವಿಕೆಯನ್ನು ಅನುಭವಿಸಿ. ಹೀಗೆ ಬೇರೆ ಬೇರೆ ರೀತಿಯಲ್ಲಿ ಚಟುವಟಿಕೆ ನಡೆಸಿ. ಹಿಗ್ಗುವಿಕೆ ಮತ್ತು ಕುಗ್ಗುವಿಕೆ ಎರಡೂ ವಿಧಾನಗಳನ್ನೂ ಪ್ರತ್ಯಕ್ಷವಾಗಿ ನೋಡಿಕೊಳ್ಳಬಹುದು.

ಮೂಗಿನ ಮೂಲಕವೇ ಉಸಿರಾಟದ ಕ್ರಮವನ್ನು ಅನುಸರಿಸಿ, ಇದರಿಂದಾಗಿ ನಿಮ್ಮ ಗಂಟಲು ಮತ್ತು ಒಣಗಿದ ಬಾಯಲ್ಲಿ ಉತ್ತೇಜನ ಉಂಟಾಗುತ್ತದೆ. ಈಗ ಜೋರಾಗಿ ಉಸಿರು ಬಿಡಲು ಶುರು ಮಾಡಿ. ಹುಶ್ ಹುಶ್ ಎನ್ನುವ ಶಬ್ದವನ್ನು ಮಾಡಿ. ನೀವು ಬಿಡುವ ಉಸಿರು ಸಿಂಹದ ಘರ್ಜನೆಯಂತೆ ಕೇಳಿಸುತ್ತದೆ. ಅದಕ್ಕೇ ಇದನ್ನು ಸಿಂಹದ ಉಸಿರಾಟ ಎನ್ನುತ್ತಾರೆ.

ವಿಶುದ್ಧ ಚಕ್ರವು ನಿಮ್ಮ ಭಾವನೆಗಳನ್ನು ವ್ಯಕ್ತಪಡಿಸುವ ಸಾಧನ. ಭಾವನಾತ್ಮಕ ಅನುಭವಗಳನ್ನು ಪ್ರಜ್ಞಾಪೂರ್ವಕ ಸಂಗತಿಗಳನ್ನಾಗಿ ಪರಿವರ್ತಿಸುವ ಮೂಲಕ ನಿಮ್ಮನ್ನು ಅಭಿವ್ಯಕ್ತಗೊಳಿಸುತ್ತದೆ.

ನೀವು ಆಡಬೇಕೆಂಬ ಮಾತುಗಳನ್ನು ಯಾವತ್ತೂ ನಿಗ್ರಹಿಸಬೇಡಿರಿ. ಅದರಲ್ಲೂ ಭಾವನಾತ್ಮಕವಾಗಿ ಆಡಿದ ಮಾತುಗಳು ಸತ್ಯವೇ ಆಗುತ್ತವೆ. ನಿಮಗೆ ಆಗಾಗ ಗಂಟಲು ನೋವು, ಕಿರಿಕಿರಿ, ಕಿಚ್‌ಕಿಚ್, ಬಿಗಿತ, ಒತ್ತಡ, ಹೊಟ್ಟೆಯಿಂದ ಏನೋ ಗಂಟಲಿನವರೆಗೆ ಬಂದು ಒತ್ತಿ ನಿಂತಂತೆ ಆಗುವುದು, ಧ್ವನಿ ಇದ್ದಕ್ಕಿದ್ದಂತೆ ಗೊರಗೊರ ಎನ್ನುವುದು, ಕುತ್ತಿಗೆ ನೋವು, ಭುಜದ ಸೆಳೆತ, ಭಾರವಾಗುವುದು, ದವಡೆ ಬಿಗಿಯುವುದು, ನುಂಗಲು ತೊಂದರೆಯಾಗುವುದು, ಉಸಿರಾಟದ ತೊಂದರೆಗಳು ಇವೆಲ್ಲಾ ದೈಹಿಕವಾಗಿ ವಿಶುದ್ಧ ಸರಿಯಾಗಿ ಕೆಲಸ ಮಾಡುತ್ತಿಲ್ಲ ಎಂದು ತೋರುವ ಲಕ್ಷಣಗಳು.

ನೀವು ಅತಿಯಾಗಿ ಮಾತನಾಡಲು ತೊಡಗಿದರೆ, ಇತರರು ಮಾತನಾಡುತ್ತಿದ್ದಾಗ ನೀವು ಮಾತನ್ನು ಶುರು ಮಾಡಿದರೆ, ಇನ್ನೊಬ್ಬರ ಸುದ್ದಿಯನ್ನು ಅತಿಯಾಗಿ ಹೇಳತೊಡಗಿದರೆ, ಕೆಟ್ಟದಾಗಿ ಬೈಯತೊಡಗಿದರೆ, ನಿಮ್ಮ ಬಗ್ಗೆ ಅತಿಯಾಗಿ ಹೇಳಿಕೊಳ್ಳತೊಡಗಿದರೆ, ಎಲ್ಲದಕ್ಕೂ ಸಂಬಂಧವಿಲ್ಲದ ಪ್ರತಿಕ್ರಿಯೆಗಳನ್ನು ನೀಡತೊಡಗಿದರೆ ಅದೆಲ್ಲಾ ಅಸಮತೋಲನದ ಚಿಹ್ನೆಗಳು.

ನೀವು ಆಗ ಮೌನದಿಂದ ಅಥವಾ ಬುದ್ಧಿವಂತಿಕೆಯ ಮಾತುಗಳಿಂದ ಸರಿಪಡಿಸಿಕೊಳ್ಳಲು ಆಗದು. ಒಪ್ಪಂದದ ಮೂಲಕ ಜನರನ್ನು ಆಕರ್ಷಿಸುವುದು, ಕಷ್ಟವಾದ ಆದರೆ ಅನಗತ್ಯವಾದ ಸಂಭಾಷಣೆಯನ್ನು ತಪ್ಪಿಸುವುದು. ಹೊಂದಿಕೊಳ್ಳುವುದು, ಭಾವನೆಗಳು ಸ್ಫೋಟವಾಗದಂತೆ ಆಗಾಗ ವ್ಯಕ್ತ ಪಡಿಸಿ ಹಗುರವಾಗುವುದು. ವಿಚಾರಗಳನ್ನು ಮತ್ತು ಸೃಜನಶೀಲ ಕೆಲಸಗಳನ್ನು ಮಾಡುವುದರ ಮೂಲಕ ಸಮತೋಲನ ಸಾಧ್ಯ.

ಆತ್ಮಾವಲೋಕನ ಮಾಡಿಕೊಳ್ಳಿ

ನೀವು ಆಡಬೇಕೆಂದಿರುವದನ್ನು ಯಾಕೆ ಆಡದೇ ಉಳಿದಿರಿ.

ನಿಮಗೆ ಗೊತ್ತಿಲ್ಲದಿರುವುದನ್ನು ಯಾಕೆ ಗೊತ್ತಿಲ್ಲ ಎಂದು ಹೇಳದೇ ಗೊತ್ತಿದೆ ಎಂದು ಹೇಳಿ ಸರಿಯಾದ ಮಾರ್ಗದರ್ಶನ ಮಾಡದೇ ಬಿಟ್ಟಿರಿ.

ಆಗುವುದಿಲ್ಲ, ಇಲ್ಲ ಎಂದು ಹೇಳಲು ಯಾಕೆ ಹಿಂಜರಿತ ಉಂಟಾಯಿತು.

ಯಾವುದಾದರೂ ಮಾತನ್ನು ಆಡಲು ಹೋದಾಗ ಗಂಟಲು ಕಟ್ಟಿದಂತೆ ಯಾಕಾಯಿತು.

ನೀವು ತುಂಬಾ ಮಾತನಾಡುತ್ತೀರಿ; ಯಾರೂ ಕೇಳಿಸಿಕೊಳ್ಳುತ್ತಲೇ ಇಲ್ಲ, ನೋಡುತ್ತಿಲ್ಲ, ಅವರಿಗೆ ಬೇಡ ಎನ್ನುವಂತೆ ವರ್ತಿಸುತ್ತಿದ್ದಾರೆ. ನಿರ್ಲಕ್ಷ್ಯ ಮಾಡುತ್ತಿದ್ದಾರೆ ಅಂದರೆ ನಿಮ್ಮ ಚಕ್ರವು ಸಮತೋಲನವನ್ನು ಕಳೆದುಕೊಂಡಿದೆ.

ಸರ್ವಾಂಗಾಸನ, ಮತ್ಸ್ಯಾಸನ, ಸಿಂಹಾಸನ, ಹಲಾಸನ, ಉಷ್ಟ್ರಾಸನಗಳು ಗಂಟಲಿನ ಸುತ್ತಮುತ್ತಲ ದೈಹಿಕ ಸಮಸ್ಯೆಗಳನ್ನು ನೇರಗೊಳಿಸುತ್ತದೆ.

ನನ್ನ ಧ್ವನಿ ತುಂಬಾ ಚನ್ನಾಗಿದೆ ಮತ್ತು ಮುಖ್ಯ. ನಾನು ಶಾಂತವಾಗಿ ಮಾತನಾಡುತ್ತೇನೆ. ನೇರ ಮತ್ತು ದಿಟ್ಟತನದಿಂದ ಮಾತನಾಡುತ್ತೇನೆ. ಪ್ರಾಮಾಣಿಕ ಮತ್ತು ದಯೆಯಿಂದ ಮಾತನಾಡುತ್ತೇನೆ. ಕೇಳುವುದು ನನ್ನ ಒಳ್ಳೆಯ ಗುಣ. ಹೀಗೆ ಒಂದು ಬಿಳಿ ಹಾಳೆಯ ಬರೆದು ನಿಮ್ಮ ಓದುವ ಸ್ಥಳದಲ್ಲಿ ಅಲ್ಲಲ್ಲಿ ತೂಗು ಹಾಕಿ.

ನಿಮ್ಮನ್ನು ನೀವೇ ನಿಯಂತ್ರಿಸಿಕೊಳ್ಳಿ

ಈ ಮೂರು ಪದಗಳ ವಾಕ್ಯದ ಆಚರಣೆ ಸುಲಭವಲ್ಲ. ನಿಮಗೆ ಹಿಂಜರಿಕೆ, ಸತ್ಯವನ್ನು ಹೇಳಲು ಭಯ. ಆತಂಕ.

ಇವುಗಳನ್ನು ಮೆಟ್ಟಿ ನಿಲ್ಲಲು; ಗಟ್ಟಿಯಾಗಿ ಓದಿ ಬರೆದು ಮಾಡಬೇಕು, ಇಲ್ಲ ಎಂದು ಹೇಳುವುದನ್ನು ಕಲಿಯಿರಿ. ನಿಮ್ಮ ಮಾತುಗಳನ್ನು ರೆಕಾರ್ಡ್ ಮಾಡಿ. ಯಾವುದೇ ರೀತಿಯ ಪ್ರತಿಕ್ರಿಯೆ ಇಲ್ಲದಂತೆ ಆಲಿಸಿ. ಯಾವುದೇ ಕಾರ್ಯಕ್ರಮವನ್ನು ಮಾಡುವಾಗ ನೀವೂ ಭಾಗವಹಿಸಿ. ಏಕಾಂತವಾಗಿದ್ದಾಗ ಹಾಡು ಹೇಳಿ. ಶವರ್ ಅಡಿಯಲ್ಲಿ ಬೇಕಾಬಿಟ್ಟಿ ಸ್ನಾನ ಮಾಡುತ್ತಾ ಹಾಡುಗಳನ್ನು ಹೇಳಿ. ಕಾರು ಹೋಗುತ್ತಿದ್ದಾಗ ದೊಡ್ಡದಾಗಿ ಕೂಗಿರಿ.

ಯಾವುದೇ ಸಂಗತಿಗಳನ್ನು ಕೇಳಬೇಕೆಂದರೆ, ಯಾವುದೇ ಅಡಚಣೆಗಳು ಇರಬಾರದು. ಅಗತ್ಯವಾದರೆ ಮೌನವಾಗಿರಿ. ಕೇಳಿದ್ದಕ್ಕೆ ಪ್ರತಿಕ್ರಿಯೆ ನೀಡಿ. ನಿಮ್ಮ ಅಭಿಪ್ರಾಯಗಳನ್ನು ಜೋಡಿಸಿಕೊಳ್ಳಿ, ಅಧಿಕಾರಿಗಳ ಎದುರೇ ಅವರ ತಪ್ಪುಗಳನ್ನು ಹೇಳಿ. ಯಾವುದನ್ನೂ ಪೂರ್ವ ಯೋಜಿಸಬೇಡಿ. ಎದೆಯಲ್ಲಿ ಕಂಪನವಾದರೆ, ಗಂಟಲಿನಲ್ಲಿ ನಡುಕ ಉಂಟಾದರೆ ಒಳ್ಳೆಯದೇ ತಿಳಿಯಿರಿ.

ಸಂವಹನವು ನಿಮ್ಮ ಮಾತುಗಳನ್ನು ಸಮತೋಲನಗೊಳಿಸುತ್ತದೆ. ಶುದ್ಧೀಕರಣ ಮಾಡುತ್ತದೆ. ನಿಮ್ಮೊಳಗಿನ ಶಕ್ತಿಯ ಕೇಂದ್ರ ಬಿಸಿಯಾಗುತ್ತದೆ. ನೀವು ಕಳೆದು ಹೋದ ವಿಸ್ತಾರವನ್ನು ವ್ಯಕ್ತಗೊಳಿಸುವಿರಿ, ಇಲ್ಲವೇ ಉತ್ಸಾಹ ಕಳೆದುಕೊಳ್ಳುತ್ತೀರಿ. ವಿಶುದ್ಧದಿಂದಾಗಿ ನಿಮ್ಮೊಳಗಿನ ಧ್ವನಿಯನ್ನು ಹುಡುಕಲು ಸಾಧ್ಯವಾಯಿತು. ನೀಲಿ ಏಕೆ ಬೇಕು ಎಂದು ತಿಳಿಯಿತು. ಕರ್ತವ್ಯವು ಎಲ್ಲದಕ್ಕಿಂತಾ ಮುಖ್ಯ.

ಮಾತೃಭಾಷೆ : ಒಂದು ಅವಲೋಕನ

ಡಾ. ಮೈತ್ರಿ ಭಟ್, ವಿಟ್ಲ



ಭಾಷೆ ನಮ್ಮ ಅಸ್ತಿತ್ವದ ಮೂಲ. ಭಾಷೆ ಕೇವಲ ಪದಗಳ ಸಮೂಹವಲ್ಲ; ಅದು ಆತ್ಮಗೌರವದ ಸಂಕೇತ. ಭಾಷಾ ವೈವಿಧ್ಯತೆಯೇ ಜಗತ್ತಿನ ಸೌಂದರ್ಯ. ಒಂದು ಹೂವಿನ ತೋಟವನ್ನು ಹೇಗೆ ನಾನಾ ಬಣ್ಣದ ಹೂವುಗಳು ಸುಂದರಗೊಳಿಸುತ್ತವೆಯೋ ಹಾಗೆಯೇ ನಾನಾ ಭಾಷೆಗಳು ಜಗತ್ತನ್ನು ಸುಂದರಗೊಳಿಸುತ್ತವೆ.

ಭಾಷೆ ಎಂದರೆ ಕೇವಲ ಸಂವಹನದ ಸಾಧನವಲ್ಲ. ಅದು ಒಂದು ಸಮುದಾಯದ ಇತಿಹಾಸ, ಸಂಸ್ಕೃತಿ, ಎಲ್ಲವೂ. ನಾವಾಡುವ ಪ್ರತಿಯೊಂದು ಪದವೂ ಒಂದು ಅನುಭವದ ಸಂಗ್ರಹ. ಪ್ರತಿಯೊಂದು ಮಾತೂ ಒಂದು ಕಾಲದ ಸಾಕ್ಷಿ. ಹೀಗಿರುವಾಗ ಭಾಷೆಯ ನಾಶವು ಕೇವಲ ಶಬ್ದಗಳ ನಾಶವಲ್ಲ; ಅದು ಒಂದು ಸಂಸ್ಕೃತಿಯ ಕುರುಹಿನ ಅಳಿವು. ಹೀಗೆ ಭಾಷೆಯ ಅಳಿವು ಎನ್ನುವುದು ಸಾಂಸ್ಕೃತಿಕ ವೈವಿಧ್ಯತೆಯೇ ಕಣ್ಮರೆಯಾಗುವ ಭೀತಿಯೂ ಹೌದು.

ಫೆಬ್ರುವರಿ 21 'ವಿಶ್ವ ಮಾತೃಭಾಷಾ ದಿನ'. ಬಹುಭಾಷೆ ಮತ್ತು ಬಹುಸಂಸ್ಕೃತಿಯ ಅಸ್ಮಿತೆಯನ್ನು ಉಳಿಸಲು ಈ ದಿನವನ್ನು ಆಚರಿಸಲಾಗುತ್ತದೆ. ವಿಶ್ವ ಮಾತೃಭಾಷಾ ದಿನದ ಹಿಂದೆ ಒಂದು ನೋವಿನ ಕಥೆ ಇದೆ. 1952ರಲ್ಲಿ ಬಾಂಗ್ಲಾ ದೇಶದ ವಿದ್ಯಾರ್ಥಿಗಳು ತಮ್ಮ ಭಾಷಾ ಹಕ್ಕಿಗಾಗಿ ಹೋರಾಡಿದಾಗ, ಅವರ ಹೃದಯದಲ್ಲಿ ಜ್ವಲಿಸಿದ್ದೇ ಮಾತೃಭಾಷೆಯ ಪ್ರೀತಿ. ಆ ಹೋರಾಟದಲ್ಲಿ ಹಲವರು ಪ್ರಾಣತ್ಯಾಗ ಮಾಡಿದರು. ಈ ದಿನವನ್ನು 1999ರಲ್ಲಿ ಯುನೆಸ್ಕೊ ವಿಶ್ವ ಮಾತೃಭಾಷಾ ದಿನ ಎಂದು ಘೋಷಿಸಿದ್ದು, ಭಾಷಾ ವೈವಿಧ್ಯತೆಯ ರಕ್ಷಣೆಗೆ ಜಾಗತಿಕ ಬದ್ಧತೆಯನ್ನು ಪ್ರತಿಪಾದಿಸುತ್ತದೆ.

ಭಾವಜೀವಿಯಾದ ಮನುಷ್ಯ ಸಾಮಾಜಿಕ ಜೀವಿಯೂ ಹೌದು. ಭಾವನೆಗಳನ್ನು ಹಂಚಿಕೊಳ್ಳಲು ಸಂವಹನ, ಸ್ಪಂದನ ಅಗತ್ಯ. ಇದಕ್ಕೆ ಚಂದದ ಸೇತುವೆಯೇ ಭಾಷೆ. ನಾವು ಎಷ್ಟೇ ಭಾಷೆ ಕಲಿತರೂ ಮೂಲ ಯೋಚನೆಗಳೆಲ್ಲ ರೂಪುಗೊಳ್ಳುವುದು, ಭಾವನೆಗಳು ಹುಟ್ಟಿ ಅವು ಮಾತಿನ ಅನುಭೂತಿಗೆ ನಿಲುಕುವುದೆಲ್ಲ ಮಾತೃಭಾಷೆಯಲ್ಲಿಯೇ. ಹಾಗಾಗಿ ತಾಯ್ನುಡಿ ಎನ್ನುವುದು ಹೃದಯದ ಭಾಷೆ.

ಮಾತೃಭಾಷೆಯೆಂದರೆ 'ತಾಯಿಯ ಭಾಷೆ' ಎನ್ನುವುದರ ಬದಲು ಮಗು ತನ್ನ ಬಾಲ್ಯದಲ್ಲಿ ತಂದೆ-ತಾಯಿ, ಮನೆಯವರಿಂದ ತನ್ನ ಆಪ್ತ ವಲಯದಲ್ಲಿ ರೂಢಿಸಿಕೊಳ್ಳುವ, ತಾನು ವಿಕಸನಗೊಂಡಂತೆ ತನ್ನೊಂದಿಗೆ ಬೆಳೆಯುತ್ತ ಹೋಗುವ ಭಾಷೆ ಅಥವಾ ಮಗು ತನ್ನ ಬಾಲ್ಯಾವಸ್ಥೆಯಲ್ಲಿ ಕಲಿಯುವ ಭಾಷೆ ಎಂದೂ ಅರ್ಥ ಮಾಡಿ ಕೊಳ್ಳಬಹುದು.

ಮಾತೃಭಾಷೆಯೆಂಬುದು ಕೇವಲ ಸಂಪರ್ಕ, ಸಂವಹನದ ಒಂದು ಸಾಧನವಷ್ಟೇ ಅಲ್ಲ. ಮಕ್ಕಳಿಗೆ ಮಾತೃಭಾಷೆ ಎಂದರೆ ತಾಯಿಯ ಹಾಲು ಇದ್ದ ಹಾಗೆ. ಅದು ಮಗುವಿನ ವೈಯಕ್ತಿಕ, ಸಾಮಾಜಿಕ ಹಾಗೂ ಸಾಂಸ್ಕೃತಿಕ ನೆಲೆಗಟ್ಟಿನ ಅವಿಭಾಜ್ಯ ಕುರುಹು. ಸಾಮಾಜಿಕ ನಡೆ-ನುಡಿಗಳ ಅಡಿಪಾಯ. ನೈತಿಕ ಹಾಗೂ ಭೌತಿಕ ವಿಕಸನಕ್ಕೆ ನಾಂದಿಯೂ ಆಗಿರುತ್ತದೆ.

ಮಕ್ಕಳ ತೊದಲು ನುಡಿ, ನಡೆ, ಅಭ್ಯಾಸಗಳು, ರೀತಿ-ನೀತಿ-ತತ್ವಗಳು, ನಂಬಿಕೆಗಳು ಮಾತೃಭಾಷೆಯಲ್ಲಿಯೇ ರೂಪುಗೊಳ್ಳುತ್ತಾ ಹೋಗುತ್ತವೆ. ಪುಟ್ಟ ಮಗುವೊಂದು ತನ್ನ ಸುತ್ತಲಿನ ಪ್ರಪಂಚವನ್ನು ಗ್ರಹಿಸುವುದು ತಾನು ಕಲಿತ ಮಾತೃಭಾಷೆಯಿಂದಲೇ ಆಗಿದೆ.

ಎಲ್ಲಾ ಭಾಷೆಯೂ ಸುಮಧುರವೇ. ಆದರೆ ಮಾತೃಭಾಷೆಯಲ್ಲಿ ಸ್ಪಷ್ಟವಾಗಿ ಓದು-ಬರೆಹ ಕಲಿತಾಗ ಬೇರೆ ಭಾಷೆಗಳ ಕಲಿಕೆ ಸುಗಮವಾಗುತ್ತದೆ. ಅದರೊಂದಿಗೆ ತಮ್ಮದೇ ಆದ ನೆಲ, ಜಲ, ನಾಡು, ಸಂಸ್ಕೃತಿ, ಆಚಾರ, ವಿಚಾರದ ಬಗ್ಗೆ ಜ್ಞಾನ ಹಾಗೂ ಹೆಮ್ಮೆಯೂ ಮೂಡುವಂತಾಗುತ್ತದೆ. ಆದುದರಿಂದ ಭಾಷೆಗಳು ಎಷ್ಟೇ ಇರಲಿ. ಹೃದಯದ ಭಾಷೆಗೆ ಆದ್ಯತೆ ಸಿಗಲಿ ಅಷ್ಟೇ.

ಇಂದಿನ ಜಾಗತೀಕರಣದ ಹೊಳಪಿನಲ್ಲಿ ಕೆಲವೇ ಭಾಷೆಗಳು ಜಗತ್ತಿನ ವೇದಿಕೆಯಲ್ಲಿ ಪ್ರಾಬಲ್ಯ ಸಾಧಿಸುತ್ತಿರುವಾಗ, ಅನೇಕ ಭಾಷೆಗಳು ನಿಧಾನವಾಗಿ ಮಂಕಾಗುತ್ತಿವೆ. 1900ರ ಭಾಷಾ ಗಣತಿಯ ಪ್ರಕಾರ ಪ್ರಪಂಚದಲ್ಲಿ ಆಗ ಹತ್ತು ಸಾವಿರ ಭಾಷೆಗಳಿದ್ದವು. ಆದರೆ 2000 ದ ವೇಳೆಗೆ 6700 ಭಾಷೆಗಳು ಮಾತ್ರ ಉಳಿದಿದ್ದವು; ಅಂದರೆ 3300 ಭಾಷೆಗಳು ಅಳಿದುಹೋಗಿವೆ. ಆ ಭಾಷೆಗಳಲ್ಲಿ ಮಾತನಾಡುವವರು ಒಬ್ಬರೂ ಇಲ್ಲ!

ಮಾನವನು ಜನಿಸಿದ ಕ್ಷಣದಿಂದಲೇ ಕೇಳುವ ನಾದ ಮಾತೃಭಾಷೆಯದು. ತಾಯಿಯ ಮೃದುವಾದ ಲಾಲಿ, ಮನೆಯವರ ಹೃದಯಸ್ಪರ್ಶಿ ಸಂಭಾಷಣೆ, ಬಾಲ್ಯದ ಆಟ-ಪಾಠ ಇವೆಲ್ಲವೂ ಮಾತೃಭಾಷೆಯ ನಿನಾದದಲ್ಲೇ ಅರಳುತ್ತವೆ. ಮಕ್ಕಳಿಗೆ ಮಾತೃಭಾಷೆಯಲ್ಲಿ ಶಿಕ್ಷಣ ನೀಡಿದಾಗ ಅವರ ಕಲಿಕೆ ಸ್ವಾಭಾವಿಕವಾಗುತ್ತದೆ. ತಮಗೆ ಪರಿಚಿತವಾದ ಭಾಷೆಯಲ್ಲಿ ವಿಷಯವನ್ನು ಅರ್ಥಮಾಡಿಕೊಳ್ಳುವಾಗ ಮಕ್ಕಳಲ್ಲಿ ಆತ್ಮವಿಶ್ವಾಸ ಮತ್ತು ಚಿಂತನಾಶಕ್ತಿ ಬೆಳೆಯುತ್ತದೆ. ಅನೇಕ ಅಧ್ಯಯನಗಳು ಮಾತೃಭಾಷಾ ಶಿಕ್ಷಣವು ಮಕ್ಕಳ ಬೌದ್ಧಿಕ ಬೆಳವಣಿಗೆಗೆ ಅತ್ಯುತ್ತಮವೆಂದು ಸಾರಿವೆ.

ಕನ್ನಡದ ನೆಲದಲ್ಲಿ ತುಳು, ಕೊಂಕಣಿ, ಮಲಯಾಳಂ, ತಮಿಳು, ತೆಲುಗು ಹೀಗೆ ನಾನಾ ಮಾತೃಭಾಷೆಗಳನ್ನಾಡುವ ಜನರಿದ್ದರೂ ಹೆಚ್ಚಿನವರ



ಇಂದು 'ವಿಶ್ವ ಮಾತೃಭಾಷಾ ದಿನ'. ಆತ್ಮಗೌರವದಿಂದ ಮಾತನಾಡುವ ಭಾಷೆ ಜೀವಂತವಾಗಿರುತ್ತದೆ. ಬಾಲ್ಯದಿಂದಲೇ ಮಕ್ಕಳಿಗೆ ಮಾತೃಭಾಷೆಯನ್ನು ಕಲಿಸುವುದರಿಂದ ಹಲವಾರು ಲಾಭಗಳೂ ಇವೆ.

ಮಾತೃಭಾಷೆ ಕನ್ನಡ. ಕನ್ನಡದಲ್ಲಿಯೂ ಮೈಸೂರು ಕನ್ನಡ, ಮಂಗಳೂರು ಕನ್ನಡ, ಹುಬ್ಬಳ್ಳಿ ಕನ್ನಡ, ಕುಂದಾಪುರ ಕನ್ನಡ, ಹವ್ಯಕ ಕನ್ನಡ, ಅರೆಗನ್ನಡ ಹೀಗೆ ಭಾಷೆ ಪ್ರತಿ 60 ಕಿ.ಮೀ.ಗೆ ತನ್ನ ಸ್ವರೂಪವನ್ನು ಬದಲಾಯಿಸಿಕೊಂಡಿದೆ.

ಆದರೆ ನಗರೀಕರಣದ ಒತ್ತಡ ಮತ್ತು ಆಂಗ್ಲಭಾಷೆಯ ಆಕರ್ಷಣೆ ನಡುವೆ ಹಲವಾರು ಪೋಷಕರು ಮಕ್ಕಳಿಗೆ ಮಾತೃಭಾಷೆಯನ್ನು ಕಲಿಸಲು ಹಿಂಜರಿಯುತ್ತಿದ್ದಾರೆ. ಜಾಗತಿಕ ಭಾಷೆ ಗಳನ್ನು ಕಲಿಯುವುದು ಅಗತ್ಯವೇ ಆಗಿದ್ದರೂ ಮಾತೃಭಾಷೆಯನ್ನು ಕಡೆಗಣಿಸುವುದು ಜ್ಞಾನಾಭಿವೃದ್ಧಿಯ ಪಥವಲ್ಲ. ಒಟ್ಟಿನಲ್ಲಿ, ಭಾಷೆಗಳ ಮಧ್ಯೆ ಸ್ಪರ್ಧೆಯ ಬದಲು ಕೊಡು-ಕೊಳ್ಳುವಿಕೆ ಇರಬೇಕು.

ಇಂದಿನ ಡಿಜಿಟಲ್ ಯುಗದಲ್ಲಿ ಕನ್ನಡ ಸೇರಿದಂತೆ ಅನೇಕ ಪ್ರಾದೇಶಿಕ ಭಾಷೆಗಳು ಹೊಸ ಸವಾಲುಗಳನ್ನು ಎದುರಿಸುತ್ತಿವೆ. ಸಾಮಾಜಿಕ ಜಾಲತಾಣಗಳಲ್ಲಿ ಆಂಗ್ಲಭಾಷೆಯ ಪ್ರಾಬಲ್ಯ, ನಗರ ಜೀವನದಲ್ಲಿ ಮಿಶ್ರಭಾಷೆಯ ಬಳಕೆ - ಇವು ಭಾಷೆಯ ಶುದ್ಧತೆ ಮತ್ತು ಬಳಕೆಗೆ ಸವಾಲು. ಆದರೂ ತಂತ್ರಜ್ಞಾನವನ್ನು ಸದುಪಯೋಗಪಡಿಸಿಕೊಂಡರೆ ಭಾಷೆಯ ಪುನರುಜ್ಜೀವನ ಸಾಧ್ಯ.

ಇಂಟರ್ನೆಟ್ ಮತ್ತು ಸಾಮಾಜಿಕ ಮಾಧ್ಯಮಗಳು ಭಾಷೆಗಳಿಗೆ ಹೊಸ ವೇದಿಕೆಯನ್ನು ಒದಗಿಸಿವೆ. ಬ್ಲಾಗ್‌ಗಳು, ಇ-ಪುಸ್ತಕಗಳು, ಪಾಡ್‌ಕಾಸ್ಟ್‌ಗಳು, ಯೂಟ್ಯೂಬ್ ಚಾನೆಲ್‌ಗಳು ಸ್ಥಳೀಯ ಭಾಷೆಗಳಲ್ಲಿ ವಿಷಯ ಸೃಷ್ಟಿಗೆ ಅವಕಾಶವನ್ನು ಒದಗಿಸುತ್ತಿವೆ. ಆದರೆ ಡಿಜಿಟಲ್ ಜಗತ್ತಿನಲ್ಲಿ ಕೆಲವು ಭಾಷೆಗಳ ಏಕಾಧಿಕಾರವು ಇತರೇ ಭಾಷೆಗಳ ಬಳಕೆಯನ್ನು ಕುಗ್ಗಿಸುತ್ತಿದೆ. ಈ ಸವಾಲನ್ನು ಎದುರಿಸಲು ಸರ್ಕಾರಗಳು, ಶಿಕ್ಷಣ ಸಂಸ್ಥೆಗಳು ಮತ್ತು ಸಮಾಜ ಒಟ್ಟಾಗಿ ಕೆಲಸ ಮಾಡಬೇಕು. ಭಾಷೆಯ ಡಿಜಿಟಲೀಕರಣ, ಶಬ್ದಕೋಶ ನಿರ್ಮಾಣ, ಆನ್‌ಲೈನ್ ಪಾಠಗಳು ಈ ಕಾಲದ ಅವಶ್ಯಕತೆಗಳು.

ವಿಶ್ವ ಮಾತೃಭಾಷಾ ದಿನವನ್ನು ಆಚರಿಸುವುದು, ಅದಕ್ಕಾಗಿ ಒಂದು ದಿನದ ಕಾರ್ಯಕ್ರಮಗಳು, ಭಾಷಣಗಳು, ಸಂಭ್ರಮಗಳಿಗಿಂತ ಮುಖ್ಯವಾದುದು ನಿತ್ಯ ಜೀವನದಲ್ಲಿ ಮಾತೃಭಾಷೆಯ ಬಳಕೆ. ಮನೆಯಲ್ಲಿ ಮಕ್ಕಳೊಂದಿಗೆ ಮಾತೃಭಾಷೆಯಲ್ಲಿ ಮಾತನಾಡುವುದು, ಸ್ಥಳೀಯ ಸಾಹಿತ್ಯವನ್ನು ಓದುವುದು, ಭಾಷೆಯ ಶುದ್ಧತೆಗೆ ಒತ್ತು ನೀಡುವುದೇ ನಿಜವಾದ ಗೌರವ.

ಭಾಷೆಯ ಪ್ರಗತಿಗೆ ಸರ್ಕಾರದ ನೀತಿಗಳು ಮಾತ್ರ ಸಾಲದು; ಜನರ ಮನೋಭಾವವೂ ಬದಲಾಗಬೇಕು. ಆತ್ಮಗೌರವದಿಂದ ಮಾತನಾಡುವ ಭಾಷೆ ಜೀವಂತವಾಗಿರುತ್ತದೆ. ಬಾಲ್ಯದಿಂದಲೇ ಮಕ್ಕಳಿಗೆ ಮಾತೃಭಾಷೆಯನ್ನು ಕಲಿಸುವುದರಿಂದ ಹಲವಾರು ಲಾಭಗಳೂ ಇವೆ ಎಂದು ಸಂಶೋಧನೆಗಳು ತೋರಿಸಿವೆ. ನಾವು ನಮ್ಮ ಮಾತೃಭಾಷೆಯನ್ನು ಉಳಿಸಿಕೊಂಡರೆ ನಮ್ಮ ಸಂಸ್ಕೃತಿ, ಇತಿಹಾಸ ಉಳಿಯುತ್ತದೆ.

ಜಾಗತಿಕ ಭಾಷೆ ಎನಿಸಿಕೊಂಡ ಇಂಗ್ಲಿಷ್‌ನೆಡೆಗಿನ ವ್ಯಾಮೋಹದಿಂದ ಮಾತೃಭಾಷೆಯನ್ನು ಸಮರ್ಪಕವಾಗಿ ಕಲಿಯುವ ವಾತಾವರಣವೇ ರೂಪುಗೊಳ್ಳುತ್ತಿಲ್ಲ. ಹೀಗಿರುವಾಗ ಮಕ್ಕಳಿಗೆ ಆರಂಭಿಕ ಹಂತದಲ್ಲಿಯೇ ಮಾತೃಭಾಷೆಯನ್ನು ಕಲಿಸೋಣ. ಶಾಲೆಯಲ್ಲಿ ಯಾವ ಮಾಧ್ಯಮದಲ್ಲಿ ಕಲಿತರೂ ಮನೆಯಲ್ಲಿ ಮಾತೃಭಾಷೆ ಬಳಸೋಣ. ಮಾತೃಭಾಷೆಯ ಜೊತೆಗೆ ಬೇರೆ ಭಾಷೆಗಳನ್ನು ಕಲಿಸಿದರೆ ಎರಡೂ ಭಾಷೆಗಳ ಮೇಲೆ ಹಿಡಿತ ಸಾಧಿಸಬಹುದು. ಜಾಗತಿಕವಾಗಿ ಯಾವುದೇ ಭಾಷೆ ಮನ್ನಣೆ ಗಳಿಸಿರಲಿ ಮಾತೃಭಾಷೆಯನ್ನು ಕಲಿಯೋಣ. ಮಾತೃಭಾಷೆ ಬಗ್ಗೆ ಅಭಿಮಾನ ವನ್ನು ಹೊಂದೋಣ. ಆ ಅಭಿಮಾನವೇ ಆತ್ಮವಿಶ್ವಾಸವಾಗಿ ರೂಪುಗೊಳ್ಳುತ್ತದೆ. ಇದು ಸಮಗ್ರ ವ್ಯಕ್ತಿತ್ವ ವಿಕಸನಕ್ಕೂ ಕಾರಣವಾಗುತ್ತದೆ.

ಕಾಮ ಮತ್ತು ಅಧ್ಯಾತ್ಮ

ನಾವು ಕಾಮದೊಂದಿಗೆ ಸತ್ಯ, ಪಾರದರ್ಶಕತೆ ಮತ್ತು ಜ್ಞಾನವನ್ನು ಜೋಡಿಸಬೇಕು.

ಒಳನೋಟ
• ಹೆ.ಬಾ. ಮಲ್ಯ



'ಕಾಮವನ್ನು ಅಧ್ಯಾತ್ಮ ದೃಷ್ಟಿಯಿಂದ ಅನುಭವಿಸಿ, ಅದನ್ನು ಉದಾತ್ತ ದೃಷ್ಟಿಯಿಂದ ನೋಡಿ, ಇಲ್ಲವಾದರೆ ಅದು ಮಾನವ ಸಮಾಜವನ್ನು ವಿನಾಶದತ್ತ ಕೊಂಡೊಯ್ಯುತ್ತದೆ'- ಇದು ಯೋಗ ಗುರು ಬಾಬಾ ರಾಮದೇವ್ ಅವರ ಸಂದೇಶ. ಅವರ ಹಿಂದಿನ ಒಂದು ಭಾಷಣ ಕಣ್ಣಿಗೆ ಬಿತ್ತು. ಇಂಡಿಯಾ ಟುಡೇ ನಿಯತಕಾಲಿಕ ಸಾಪ್ತಾಹಿಕ ಪತ್ರಿಕೆ ಏರ್ಪಡಿಸಿದ ''ಹೊಸದಶಕ-ಮಹಾನ್ ನಿರೀಕ್ಷೆಗಳು (New Decade- Great Expectations)'' ಎಂಬ ವಿಚಾರ ಗೋಷ್ಠಿಯಲ್ಲಿ ಅವರು ಲೈಂಗಿಕತೆ ಮತ್ತು ಅಧ್ಯಾತ್ಮ ಎಂಬ ವಿಷಯದ ಬಗ್ಗೆ ವ್ಯಕ್ತಪಡಿಸಿದ ಅಭಿಪ್ರಾಯಗಳನ್ನು ಪರಾಂಬರಿಸುವುದು ಸಾಮಾಜಿಕ ಸ್ವಾಸ್ಥ್ಯದ ದೃಷ್ಟಿಯಿಂದ ಸೂಕ್ತ ಎಂದೆನಿಸುತ್ತದೆ.

ಹಿಂದು ಧರ್ಮದಲ್ಲಿ ಕಾಮಕ್ಕೆ ಸೂಕ್ತ ಸ್ಥಾನ ನೀಡಲಾಗಿದೆ. ಧರ್ಮ, ಅರ್ಥ, ಕಾಮ, ಮೋಕ್ಷಗಳೆಂಬ ಚತುರ್ವಿಧ ಪುರುಷಾರ್ಥಗಳಲ್ಲಿ ಕಾಮಕ್ಕೆ ಯೋಗ್ಯ ಸ್ಥಾನ ನೀಡಲಾಗಿದೆ. ಅರ್ಥ, ಕಾಮಗಳು ಮನುಷ್ಯನ ಸಹಜ ಅಪೇಕ್ಷೆಗಳು. ಆದರೆ ಅವುಗಳು ಹುಚ್ಚುಹೊಳೆಯಂತೆ ಕೊಚ್ಚಿಕೊಂಡು ಹೋಗದೆ ಧರ್ಮ ಮತ್ತು ಮೋಕ್ಷಗಳೆಂಬ ಎರಡು ದಂಡೆಗಳ ನಡುವೆ ಸಹಜವಾಗಿ ಹರಿದಾಗಲೇ ಮಾನವನ ವ್ಯಕ್ತಿಗತ ಹಾಗೂ ಸಾಮಾಜಿಕ ಬಾಳು ಹಸನಾಗುತ್ತದೆ ಎಂಬುದು ಅವರ ಸಂದೇಶದ ಸಾರಾಂಶ. ಅವರ ಅಭಿಪ್ರಾಯಗಳನ್ನು ಅವರ ಮಾತುಗಳಲ್ಲೇ ಕೇಳಿದರೆ, ಓದಿದರೆ ಚೆನ್ನ.

''ಆರೋಗ್ಯ ಹಾಗೂ ಅಧ್ಯಾತ್ಮದ ಮೇಲೆ ಮಾತನಾಡುವಂತೆ ನನಗೆ ಸೂಚಿಸಬಹುದೆಂದುಕೊಂಡರೆ, ಕಾಮ ಹಾಗೂ ಅಧ್ಯಾತ್ಮದ ಮೇಲೆ ಮಾತನಾಡುವಂತೆ ಕೇಳಿಕೊಂಡಿದ್ದಾರೆ. ಬಾಬಾ ಓರ್ವ ವಿವಾದಾಸ್ಪದ ವ್ಯಕ್ತಿ ಎಂದು ಕೆಲವರು ಹೇಳುತ್ತಿರುತ್ತಾರೆ. ಆದರೆ ವಿವಾದಾಸ್ಪದ ವಿಷಯಗಳನ್ನೇ ಚರ್ಚೆಗಾಗಿ ನನ್ನ ಮುಂದಿಡುತ್ತಾರೆ.

ಸರಳವಾಗಿ ಹೇಳುವುದಾದರೆ ಸೃಷ್ಟಿ ಕಾಮದ ಪರಿಣಾಮ. ಪುರುಷ-ಪ್ರಕೃತಿಯ ಸಂಯೋಗದಿಂದ ಸೃಷ್ಟಿ. ನಾವೆಲ್ಲರೂ ಕಾಮದ ಫಲವಾಗಿ ಜನಿಸಿದ ಶಿಶುಗಳೇ. ನಮ್ಮಲ್ಲಿನ ಕಾಮವಾಸನೆಯನ್ನು ದೈವತ್ವಕ್ಕೇರಿಸಬೇಕು. ಕಾಮವಾಸನೆಯನ್ನು ಅಧ್ಯಾತ್ಮವಾಗಿ ಉದಾತ್ತೀಕರಿಸಬೇಕು. ಇಲ್ಲವಾದರೆ ಅದು ಅನಾಹುತಕಾರಿಯಾಗುವ ಸಂಭವವಿದೆ. ಈ ಜೀವನ ಹಾಗೂ ಜಗತ್ತು ದೃಷ್ಟಿ, ವಾಕ್, ಕೈ, ಕಾಲುಗಳು, ಮನಸ್ಸು ಇವೇ ಮುಂತಾದ ನಮ್ಮ ಇಂದ್ರಿಯಗಳು ಮಾಡುವ ಕರ್ಮಗಳ ಪರಿಣಾಮವಾಗಿದೆ. 'ಉಪಸ್ಥಿ' (ಜನನೇಂದ್ರಿಯ) ಇವುಗಳಲ್ಲೊಂದು. ಇದರ ನಿಯಂತ್ರಣವನ್ನೇ ಬ್ರಹ್ಮಚರ್ಯ ಎನ್ನುತ್ತಾರೆ. ಈ ಇಂದ್ರಿಯದ ಯೋಗ್ಯ ಉಪಯೋಗವೇ ಕಾಮ ಅಥವಾ ಸೆಕ್ಸ್. ನಮ್ಮ ಯಾವುದೇ ಇಂದ್ರಿಯಗಳು ಹಾಗೂ ಅಂಗಗಳು ನಿಷ್ಕ್ರಿಯ ಅಥವಾ ನಿರುಪಯೋಗಿ ಅಲ್ಲ. ಇಂದು ಕಾಮ ಅಥವಾ ಸೆಕ್ಸ್ ಒಂದು ವಿವಾದಕ್ಕೊಳಪಟ್ಟ ವಿಷಯವಾಗಿದೆ. ಹಾಗೆ ನೋಡಿದರೆ ಕಾಮ ವಿವಾದಾಸ್ಪದ ವಿಷಯವೇ ಅಲ್ಲ. ಅದನ್ನು ನೋಡುವ ದೃಷ್ಟಿ ಸರಿಯಾಗಿದ್ದರೆ, ಶುದ್ಧವಾಗಿದ್ದರೆ ಯಾವ ಸಮಸ್ಯೆಯೂ ಇಲ್ಲ. ಕಾಮಕ್ಕೆ ಅದರದೇ ಆದ ಮಿತಿಗಳಿವೆ ಹಾಗೂ ಅದರದೇ ಆದ ಘನತೆಯೂ ಇದೆ. ಕೆಲವರು ನನ್ನ ಬಾಯಿಯಿಂದ ಸೆಕ್ಸ್ ಎಬ ಪದವನ್ನು ಕೇಳಲಿಚ್ಛಿಸುವುದಿಲ್ಲವಾದ್ದರಿಂದ ನಾನು ಕಾಮ ಎಂಬ ಪದವನ್ನು ಬಳಸಲು ಇಚ್ಛಿಸುವೆ. ಜನರಲ್ಲಿನ ಈ ರೀತಿಯ ಭಾವನೆ ಕೂಡ ನಮ್ಮ ದೃಷ್ಟಿಕೋನದ ಪರಿಣಾಮವೇ ಆಗಿದೆ.

ಕಾಮಕ್ಕೆ ತಕ್ಕ ವಯಸ್ಸು ಎಂಬುದಿದೆ. ಮಿಕ್ಕೆಲ್ಲ ಇಂದ್ರಿಯಗಳೂ ಬಾಲ್ಯದಿಂದ ವೃದ್ಧಾಪ್ಯದವರೆಗೆ ಸಕ್ರಿಯವಾಗಿರುತ್ತವೆ. ಆದರೆ 25ನೇ ವಯಸ್ಸಿಗಿಂತ ಮುಂಚೆ ಕಾಮ ಸಹಜ ಎಂದೆನಿಸುವುದಿಲ್ಲ. 5 ವರ್ಷ ವಯಸ್ಸಿನ ಒಂದು ಮಗುವನ್ನು ನೀವು ಲೈಂಗಿಕ ಚಟುವಟಿಕೆಯಲ್ಲಿ ತೊಡಗಿಸಲು ಪ್ರಯತ್ನಿಸಿದರೆ ಅದು ಪ್ರಕೃತಿ ವಿರುದ್ಧವಾದ ಕ್ರಿಯೆಯಾಗುತ್ತದೆ. ಅದೇ ನೀವು ವಯಸ್ಸಿಗೆ ಬಂದ ಹುಡುಗಿಯರು ಬಸುರಿಯಾಗುವುದನ್ನು ನೋಡಬಯಸಿದರೆ ನನ್ನ ಅಭ್ಯಂತರವೇನಿಲ್ಲ, ಅಷ್ಟು ಹೊತ್ತಿಗೆ ಅದಕ್ಕೆ ಕಾಮದ ಬಗ್ಗೆ ತಿಳಿವಳಿಕೆ ಬಂದಿರುತ್ತದೆ.

ನಾವು ಕಾಮದೊಂದಿಗೆ ಸತ್ಯ, ಪಾರದರ್ಶಕತೆ ಮತ್ತು ಜ್ಞಾನವನ್ನು ಜೋಡಿಸಬೇಕು. ಜೀವನದ ಪ್ರತಿಯೊಂದು ಕ್ಷೇತ್ರದಲ್ಲೂ, ಅಂದರೆ ಧರ್ಮ, ಅರ್ಥ, ಕಾಮ ಮೋಕ್ಷಗಳಲ್ಲಿ ಪ್ರಾಮಾಣಿಕತೆ ಅತಿ ಅಗತ್ಯ. ಅರ್ಥಶಾಸ್ತ್ರದ ಬಗ್ಗೆ ಅಜ್ಞಾನವಿದ್ದಾಗ ಅಲ್ಲಿ ಭ್ರಷ್ಟಾಚಾರ, ಬಡತನ ಹಾಗೂ ಅಭಾವ ಉಂಟಾಗುತ್ತದೆ. ಅದೇ ರೀತಿ ಲೈಂಗಿಕತೆಯಲ್ಲಿ ಜ್ಞಾನ ಮತ್ತು ಪ್ರಾಮಾಣಿಕತೆ ಇಲ್ಲದಾಗ ದುರಾಚಾರ ಹಾಗೂ ವ್ಯಭಿಚಾರಗಳು ಉತ್ಪನ್ನವಾಗುತ್ತವೆ. ಪರಿಣಾಮ ಏಡ್ಸ್ ಮತ್ತು ಎಚ್.ಐ.ವಿ. ತನ್ನ ಪಿತೃತ್ವವನ್ನು ಅಂದರೆ ತಂದೆಯನ್ನು ಗುರುತಿಸಲು ಡಿ.ಎನ್.ಎ. ಪರೀಕ್ಷೆ ಮಾಡುವಂಥ ಸನ್ನಿವೇಶ ನಿರ್ಮಾಣವಾಗುವುದನ್ನು ನೀವು ನೋಡಬಯಸುತ್ತೀರಾ? ಆಗ ಅದನ್ನು ನಾಗರಿಕ ಅಥವಾ ಸಭ್ಯ ಸಮಾಜ ಎನ್ನಲಾಗದು.

ಕಾಮದಲ್ಲಿ ಪಾರದರ್ಶಕತೆ ಇಲ್ಲದಿದ್ದರೆ ಮಕ್ಕಳ ಮುಂದೆ ಯಾವ ಆದರ್ಶವೂ ಇರಲಾರದು. ಜನಸಂಖ್ಯಾ ವೃದ್ಧಿ ನಿಯಂತ್ರಣ ತಪ್ಪಬಹುದು ಅಥವಾ ಭ್ರೂಣ ಹತ್ಯೆ ಹೆಚ್ಚಾಗಬಹುದು. ವಿವಾಹಿತ ದಂಪತಿಗಳು ತಾವು ಲೈಂಗಿಕ ಸಮಸ್ಯೆಗಳಿಂದ ಬಳಲುತ್ತಿದ್ದೇವೆಂದು ಹೇಳಿದಾಗ ನಾನು ಅವರಿಗೆ, ಕಾಮದಲ್ಲಿ ಆನಂದ ಕಾಣಬೇಕೆಂದಿದ್ದರೆ ಯೋಗ ಅಭ್ಯಾಸ ಮಾಡಿ ಎನ್ನುತ್ತೇನೆ. ಕಪಾಲಭಾತಿ ಉತ್ತಮ. ಯೋಗರಹಿತ ಭೋಗದಿಂದ ಅನಾರೋಗ್ಯ ಹಾಗೂ ದೌರ್ಬಲ್ಯ ಕಟ್ಟಿಟ್ಟದ್ದು. ಸಂತಾನಹೀನತೆ, ಲೈಂಗಿಕ ಸಮಸ್ಯೆಗಳಿಗೆ ಯೋಗ ಪರಿಹಾರ ನೀಡಬಹುದು.

ಕತ್ತಲೆಕೂಪದಿಂದ ಬೆಳಕಿನ ಶಿಖರಕ್ಕೆ, ಪಶುತ್ವದಿಂದ ದೈವತ್ವಕ್ಕೆ ನಮ್ಮ ಅಂತಃಪ್ರಜ್ಞೆಯನ್ನು ಏರಿಸುವುದೇ ಅಧ್ಯಾತ್ಮದ ಪ್ರಮುಖ ಉದ್ದೇಶ. ಅನಿರ್ಬಂಧಿತ ಲೈಂಗಿಕತೆ ಕ್ರಮೇಣ ಸಾವಿನತ್ತ ಮಾನವನನ್ನು ತಳ್ಳುತ್ತಿರುತ್ತದೆ.

ಬಾಬಾ ಅಧ್ಯಾತ್ಮದ ಬಗ್ಗೆ ದೊಡ್ಡದಾಗಿ ಮಾತನಾಡುತ್ತಾರೆ, ಆದರೆ ಅವರು ವಿಶಾಲವಾದ ಔದ್ಯಮಿಕ ಸಾಮ್ರಾಜ್ಯವನ್ನು ಕಟ್ಟಿದ್ದಾರೆ ಎಂದು ಕೆಲವರು ಹೇಳುವುದುಂಟು. ಅಂಥವರಿಗೆ ನಾನು ಹೇಳುತ್ತೇನೆ - ''ನಿಮ್ಮ ಬಳಿ ನಾನು ಭಿಕ್ಷೆ ಬೇಡುತ್ತಿಲ್ಲ ಎಂಬುದೇ ನಿಮ್ಮ ಈ ಅಸಂತೋಷಕ್ಕೆ ಕಾರಣವಾಗಿದೆ''

ಬಡತನವೇ ಅಧ್ಯಾತ್ಮ ಎಂಬ ನಿಲುವಿಗೆ ಅಂಟಿಕೊಂಡವ ನಾನಲ್ಲ - ನಾನು ಸತ್ಯ ಹಾಗೂ ಪ್ರಾಮಾಣಿಕ ಜೀವನ ನಡೆಸಬೇಕು ಮತ್ತು ತನ್ಮೂಲಕ ಮಾನಸಿಕವಾಗಿ ಮತ್ತು ಆಧ್ಯಾತ್ಮಿಕವಾಗಿ ಬೆಳೆಯಬೇಕೆಂದು ಬಯಸುತ್ತೇನೆ. ಇದು ನಮ್ಮ ಸಂಸ್ಕೃತಿ ಹಾಗೂ ಸಂಪ್ರದಾಯಕ್ಕೆ ಅನುಗುಣವಾಗಿಯೇ ಇದೆ. ಎಲ್ಲ ವಿಧದಿಂದ ಜಗತ್ತನ್ನು ಸಂಪತ್ತು ಹಾಗೂ ಸಮೃದ್ಧಿಯತ್ತ ಕೊಂಡೊಯ್ಯುವ ಅತ್ಯುತ್ತಮ ದಾರಿ ಇದು. ನಾವು ಲೈಂಗಿಕತೆ ಬಗ್ಗೆ ಮುಕ್ತವಾಗಿ ಮಾತನಾಡುವ ಔಚಿತ್ಯದ ಬಗ್ಗೆ ಅನೇಕರು ಅಚ್ಚರಿ ವ್ಯಕ್ತಪಡಿಸುತ್ತಾರೆ. ನನ್ನದು ಓರ್ವ ವೈದ್ಯನ ಕೆಲಸದಂತೆ ಎಂದು ನಾನು ಅವರಿಗೆ ಹೇಳುತ್ತೇನೆ. ಕ್ಯಾನ್ಸರ್‌ಪೀಡಿತ ರೋಗಿಗೆ ಚಿಕಿತ್ಸೆ ನೀಡುವ ವೈದ್ಯ ಸ್ವತಃ ತಾನು ಕ್ಯಾನ್ಸರ್‌ಪೀಡಿತ ರೋಗಿ ಯಾಗಿರಬೇಕೆಂದೇನೂ ಇಲ್ಲ. ಕಾಮ ಮತ್ತು ಅಧ್ಯಾತ್ಮಗಳೆರಡೂ ನಮ್ಮ ಅಂತರಾತ್ಮದ ಭಾಗಗಳೇ ಆಗಿವೆ. ನಾವು ಜೀವನದ ಮಿಕ್ಕೆಲ್ಲ ಸಂಗತಿಗಳನ್ನು ಮರೆತು ಕೇವಲ ಲೈಂಗಿಕತೆಯಲ್ಲೇ ಮುಳುಗಿದ್ದರೆ, ನಮ್ಮ ಜೀವನ ಕ್ರೌರ್ಯ ಹಾಗೂ ದುಃಖದಲ್ಲಿ ಮುಳುಗುತ್ತದೆ -ಅತಿವಾದ ಯಾವಾಗಲೂ ವರ್ಜ್ಯ.

ಈಗ ಸಲಿಂಗ ಕಾಮದತ್ತ ದೃಷ್ಟಿ ಹೊರಳಿಸುವ. ಮನುಷ್ಯ ಸಹಜವಾಗಿ ಬಾಯಿಯಿಂದ ತಿನ್ನುತ್ತಾನೆ, ಉಣ್ಣುತ್ತಾನೆ. ಆದರೆ ಯಾರಾದರೂ ಆಹಾರವನ್ನು ಗುದದ್ವಾರದಿಂದ ಸ್ವೀಕರಿಸಲು ಬಯಸಿದಲ್ಲಿ ನನಗೇನೂ ಸಮಸ್ಯೆ ಇಲ್ಲ, ಆದರೆ ಇಂಥ ವಿಕೃತ ಮನಸ್ಸಿನ ಕೆಲವರು, ವಿದ್ಯಾವಂತ ಬುದ್ಧಿಗೇಡಿಗಳು ಸಮಾಜದಲ್ಲಿದ್ದಾರೆ. ಇಂಥ ಕಟು ಹಾಗೂ ಅಸಭ್ಯ ಭಾಷಾಪ್ರಯೋಗಕ್ಕಾಗಿ ಕ್ಷಮಿಸಿ. ಓರ್ವ ಆರೋಗ್ಯವಂತ ವ್ಯಕ್ತಿ ಯಾವಾಗಲೂ ಬಾಯಿಂದಲೇ ಆಹಾರ ಸ್ವೀಕರಿಸುತ್ತಾನೆ. ನಾನು ಈ ವಿಷಯದ ಬಗ್ಗೆ ಸ್ಪಷ್ಟವಾಗಿ ಹೇಳಿದ್ದೇನೆಂದು ನನಗನ್ನಿಸುತ್ತದೆ.

ಈಗ ಮುಕ್ತ ಲೈಂಗಿಕತೆ ಬಗ್ಗೆ ಜಗತ್ತಿನಲ್ಲಿ ಯಾವುದೂ ಮುಕ್ತ ಅಥವಾ ಸ್ವಚ್ಛಂದ ಎಂಬುದಿಲ್ಲ. ಸೂರ್ಯನಾಗಲೀ, ಭೂಮಿಯಾಗಲೀ, ಎಲ್ಲವೂ ಕೆಲವು ನಿಯಮಗಳಿಗನುಸಾರವಾಗಿಯೇ ನಡೆಯುವುದು ಅನಿವಾರ್ಯ. ಕಿಂಚಿತ್ತು ಕ್ರಮ ತಪ್ಪಿ ಮುಕ್ತವಾಗಿ ತಮಗಿಷ್ಟ ಬಂದಂತೆ ಅವು ಚಲಿಸಿದರೆ ಜಗತ್ತು ಉಳಿಯಲಾರದು. ಅದೇ ರೀತಿ ಮುಕ್ತ ಲೈಂಗಿಕತೆ ಕೂಡಾ. ಪ್ರತಿಯೊಬ್ಬರೂ ಲೈಂಗಿಕತೆ ಅಥವಾ ಕಾಮದ ವಿಷಯದಲ್ಲಿ ಕೆಲವು ನಿಯಮಗಳನ್ನು, ಸ್ವಯಂ ನಿರ್ಬಂಧಗಳನ್ನು ಪಾಲಿಸಬೇಕಾಗುತ್ತದೆ. ಘನತೆಯನ್ನು ಕಾಯ್ದುಕೊಳ್ಳ ಬೇಕಾಗುತ್ತದೆ. ಅದು ಸುದ್ದಿ ಮಾಧ್ಯಮಗಳಾಗಲೀ, ಬಾಬಾ ಆಗಲೀ, ಬಾಬು ಆಗಲಿ, ಪ್ರತಿಯೊಬ್ಬರೂ ನಿಯಮ, ಘನತೆಗಳನ್ನು ಪಾಲಿಸಬೇಕಾಗುತ್ತದೆ. ಒಂದು ಆರೋಗ್ಯಕರ ಸಾಮಾಜಿಕ ವ್ಯವಸ್ಥೆಯ ದೃಷ್ಟಿಯಿಂದ ಇದು ಅನಿವಾರ್ಯವಾಗಿದೆ''.

ಇದು ಬಾಬಾ ರಾಮದೇವ್ ಅವರ ಭಾಷಣದ ಸಾರಾಂಶ. ಸ್ವಾಮಿ ವಿವೇಕಾನಂದರು ಅಮೆರಿಕಾದಲ್ಲಿದ್ದಾಗ ಒಮ್ಮೆ ಓರ್ವ ಯುವತಿ ಅವರಿಂದ ಆಕರ್ಷಿತಗೊಂಡು ಹೇಳಿದಳಂತೆ. ''ನನಗೆ ನಿಮ್ಮಿಂದ ನಿಮ್ಮಂಥವನೇ ಓರ್ವ ಮಗನನ್ನು ಪಡೆಯಬೇಕೆಂಬ ಆಸೆ ಇದೆ''. ಆಕೆಯ ಇಂಗಿತ ಅರ್ಥ ಮಾಡಿಕೊಂಡ ವಿವೇಕಾನಂದರು ತಕ್ಷಣ ಬಗ್ಗಿ ನಮಸ್ಕಾರ ಮಾಡಿ ನನ್ನನ್ನೇ ನಿಮ್ಮ ಮಗನೆಂದು ತಿಳಿಯಿರಿ'' ಎಂದರಂತೆ. ಅಧ್ಯಾತ್ಮದಲ್ಲಿ ಬ್ರಹ್ಮಚರ್ಯಕ್ಕೆ ಬಹಳ ಮಹತ್ವವಿದೆ. ಯಮನಿಯಮಗಳಲ್ಲಿ ಬ್ರಹ್ಮಚರ್ಯ ಅತ್ಯಂತ ಪ್ರಮುಖವಾದದ್ದು. ಸಾಧಕನಿಗೆ ಇದು ಅತೀ ಅಗತ್ಯ. ಏಕಾಂತದಲ್ಲಿದ್ದಾಗಲೂ, ಯಾರೂ ನೋಡದಿದ್ದಾಗಲೂ ಓರ್ವ ವ್ಯಕ್ತಿ ಹೇಗೆ ವರ್ತಿಸುತ್ತಾನೆ ಎಂಬುದು ಆತನ ನಿಜವಾದ ಚಾರಿತ್ರ್ಯವನ್ನು ತೋರಿಸುತ್ತದೆ. ಪ್ರಾಮಾಣಿಕತೆ, ಪಾರದರ್ಶಕತೆ ಅತಿ ಮುಖ್ಯ. ಸನ್ಯಾಸಿಗಳು, ಅನ್ಯಾನ್ಯ ಸಂಘ-ಸಂಸ್ಥೆಗಳಲ್ಲಿ ಸೇವೆ ಸಲ್ಲಿಸುವ ಪೂರ್ಣಾವಧಿ ಕಾರ್ಯಕರ್ತರಿಗೆ ಅಧ್ಯಾತ್ಮ ಸಾಧನೆ, ಬ್ರಹ್ಮಚರ್ಯ ಪಾಲನೆ ಅತೀ ಅಗತ್ಯ. ಕಾಮ ಎಂಬುದು ದೇವರು ಮನುಷ್ಯನಲ್ಲಿ ಹಾಕಿದ್ದು. ಸಂತತಿ ಮುಂದುವರಿಯಲು ಇರುವ ಒಂದು ಸಾಧನ ಅಷ್ಟೆ. ಅದರಿಂದ ದೊರಕುವ ತೃಪ್ತಿ ಬೈ ಪ್ರಾಡಕ್ಟ್ ಅಷ್ಟೆ. ಮನುಷ್ಯರು ಪಾಪದಿಂದ ಹುಟ್ಟಿದ್ದಲ್ಲ. ಅದಕ್ಕೆ ಪವಿತ್ರತೆ ನೀಡಲಾಗಿದೆ. ನಾವು ಪಾಪಿಗಳಲ್ಲ, ಅಮೃತ ಪುತ್ರರು. ಹೀಗೆ ಕಾಮಕ್ಕೂ ಅಧ್ಯಾತ್ಮಕ್ಕೂ ಹತ್ತಿರದ ನಂಟು ಇದೆ.

ಕಳೆದ ಐದು ದಿನಗಳಿಂದ ದಿಲ್ಲಿಯ ಭಾರತ್ ಮಂಟಪಂನಲ್ಲಿಯಶಸ್ವಿಯಾಗಿ ನಡೆದ ಎಐ ಶೃಂಗಸಭೆಗೆ ಹಲವು ಜಾಗತಿಕ ನಾಯಕರು ಸಾಕ್ಷಿಯಾದರು. ಹಲವು ಒಪ್ಪಂದಗಳಿಗೆ ಸಹಿ ಹಾಕುವ ಮೂಲಕ ಭಾರತ ವಿಶ್ವನಾಯಕರ ಜತೆ ಅನೇಕ ವಿಚಾರಗಳ ಬಗ್ಗೆ ಚರ್ಚಿಸಿದೆ. ಅಲ್ಲದೇ 2047ರ ವಿಕಸಿತ ಭಾರತ ಗುರಿ ತಲುಪುವತ್ತ ಮತ್ತೊಂದು ಹೆಜ್ಜೆ ಮುಂದಿಟ್ಟಿದೆ.

ವಿಶ್ವಕ್ಕೆ ಭಾರತದ ಬುದ್ಧಿಮತ್ತೆ ದರ್ಶನ

ಕೊನೆಯ ದಿನದ ಹೈಲೈಟ್ಸ್

- ಅಮೆರಿಕ ನೇತೃತ್ವದ ಪ್ಯಾಕ್ಸ್ ಸಿಲಿಕಾ ಮೈತ್ರಿಕೂಟ ಸೇರಿದ ಭಾರತ
- ಭಾರತ-ಅಮೆರಿಕ ದ್ವಿಪಕ್ಷೀಯ ವ್ಯಾಪಾರ ಸಂಬಂಧಕ್ಕೆ ಉತ್ತೇಜನ
- ಜಾಗತಿಕ ಮಟ್ಟದಲ್ಲಿ ಭಾರತದ ಎಐ ಸಾಮರ್ಥ್ಯ ಮತ್ತು ಟೆಕ್ ಮೂಲಸೌಕರ್ಯ ಮಾರುಕಟ್ಟೆಯಲ್ಲಿ ಅಂದಾಜು 250 ಶತಕೋಟಿ ಡಾಲರ್ ಹೂಡಿಕೆ ಘೋಷಣೆ
- ಪ್ರಧಾನಿಯವರ ನೈತಿಕ, ಮಾನವ ಆಧಾರಿತ ಎಐ ದೃಷ್ಟಿಕೋನ ಮಾನವ್ ದೇಸಿ ಎಐ ಅಭಿವೃದ್ಧಿ ಯೋಜನೆಗೆ ಉತ್ತೇಜನ
- ಸುಮಾರು 10,000 ಎಐ ನವೋದ್ಯಮಗಳ ಸಾಧನೆ ಗುರುತಿಸಿದ್ದು, ಜಾಗತಿಕ ಪರಿಣಾಮ ಎಐ ಚಾಲೆಂಜ್ ಪ್ರಶಸ್ತಿ ಗೆದ್ದ ಇನ್ಫಿಹೀಲ್
- ಆರೋಗ್ಯ ಕ್ಷೇತ್ರದಲ್ಲಿ ಎಐ ಪ್ಲಾಟ್‌ಫಾರಂ ಬೋಧ್ ಅನಾವರಣ
- ಜಾಗತಿಕ ನಾಯಕರೊಂದಿಗೆ ಪ್ರಧಾನಿ ಮೋದಿ ಚರ್ಚೆ ಮತ್ತು ಸತತ 7 ದ್ವಿಪಕ್ಷೀಯ ಸಭೆ
- ಎಐ ಆಡಳಿತ, ಭದ್ರತೆ ಮತ್ತು ಜವಾಬ್ದಾರಿಯುತ ನಿಯೋಜನೆ ಭರವಸೆ ನೀಡಿ ಜಾಗತಿಕ ನಾಯಕರ ಜಂಟಿ ಘೋಷಣೆ

ವ್ಯಾಪಾರ, ತಂತ್ರಜ್ಞಾನ, ಎಐ ಸಹಕಾರಕ್ಕೆ ಒತ್ತು



ಪ್ರಧಾನಿ ನರೇಂದ್ರ ಮೋದಿ ಶುಕ್ರವಾರ ಮಾರಿಷಸ್, ಶ್ರೀಲಂಕಾ ಹಾಗೂ ಸ್ಲೋವಾಕಿಯಾ ರಾಷ್ಟ್ರಗಳ ಉನ್ನತ ನಾಯಕರೊಂದಿಗೆ ದ್ವಿಪಕ್ಷೀಯ ಮಾತುಕತೆ ನಡೆಸಿದರು. ವ್ಯಾಪಾರ ಮತ್ತು ತಂತ್ರಜ್ಞಾನ ಕ್ಷೇತ್ರಗಳಲ್ಲಿ ಸಹಕಾರವನ್ನು ಮತ್ತಷ್ಟು ಬಲಪಡಿಸುವುದು ಈ ಸಭೆಗಳ ಪ್ರಮುಖ ಉದ್ದೇಶವಾಗಿತ್ತು.ಎಐ ಇಂಪ್ಯಾಕ್ಟ್ ಶೃಂಗಸಭೆಯ ಅಂಗವಾಗಿ ನಡೆದ ಈ ಭೇಟಿಗಳ ವೇಳೆ ಮೋದಿ ಅವರು ವಿಶ್ವಸಂಸ್ಥೆಯ ಮಹಾಸಚಿವ ಅಂಟೋನಿಯೊ ಗುಟೆರೆಸ್ ಅವರನ್ನು ಭೇಟಿಯಾಗಿ ಕೃತಕ ಬುದ್ಧಿಮತ್ತೆಯ ಬಳಕೆಯನ್ನು ಎಲ್ಲರನ್ನು ಒಳಗೊಂಡಂತೆ ರೂಪಿಸುವ ಕುರಿತು ಚರ್ಚಿಸಿದರು. ಎಐ ಕ್ಷೇತ್ರದಲ್ಲಿ ವಿಶ್ವಸಂಸ್ಥೆ ರಚನಾತ್ಮಕ ಪಾತ್ರ ವಹಿಸುವ ಅಗತ್ಯವನ್ನು ಅವರು ಉಲ್ಲೇಖಿಸಿದರು.

ಸಾಮಾಜಿಕ ಜಾಲತಾಣದಲ್ಲಿ ತಮ್ಮ ಅಭಿಪ್ರಾಯ ಹಂಚಿಕೊಂಡ ಮೋದಿ, ವಿಶ್ವಸಂಸ್ಥೆಯ ಸುಧಾರಣೆ ಕುರಿತು ಕೂಡ ಚರ್ಚೆ ನಡೆದಿರುವುದಾಗಿ ಹೇಳಿದರು. ವಿಶೇಷವಾಗಿ ಗ್ಲೋಬಲ್ ಸೌತ್ ದೇಶಗಳಿಗೆ ಹೆಚ್ಚಿನ ಪ್ರತಿನಿಧಿತ್ವ ಮತ್ತು ಧ್ವನಿ ನೀಡುವ ಅಗತ್ಯವನ್ನು ಅವರು ಪ್ರಸ್ತಾಪಿಸಿದರು.

ಹಲವು ರಾಷ್ಟ್ರ ನಾಯಕರ ಜತೆಗೆ ಮೋದಿ ದ್ವಿಪಕ್ಷೀಯ ಮಾತುಕತೆ

ಮಾರಿಷಸ್ ಪ್ರಧಾನಿ ಡಾ. ನವೀಂಚಂದ್ರ ರಾಮಗೂಲಾಮ್ ಅವರೊಂದಿಗೆ ನಡೆದ ಮಾತುಕತೆ ಬಳಿಕ, ಪ್ರಾದೇಶಿಕ ಭದ್ರತೆ ಮತ್ತು ಸಮೃದ್ಧಿಗಾಗಿ ಎರಡೂ ದೇಶಗಳು ಸಮೀಪ ಸಹಕಾರ ಮುಂದುವರಿಸಲಿವೆ ಎಂದು ಮೋದಿ ಹೇಳಿದರು. ಎಐ, ತಂತ್ರಜ್ಞಾನ, ಸಂಸ್ಕೃತಿ ಹಾಗೂ ಜನರ ನಡುವಿನ ಬಾಂಧವ್ಯ ಸೇರಿದಂತೆ ಹಲವು ಕ್ಷೇತ್ರಗಳಲ್ಲಿ ತಂತ್ರಾತ್ಮಕ ಪಾಲುದಾರಿಕೆಯನ್ನು ಹೊಸ ಎತ್ತರಗಳಿಗೆ ಕೊಂಡೊಯ್ಯುವ ಬದ್ಧತೆಯನ್ನು ಪುನರುಚ್ಚರಿಸಲಾಗಿದೆ ಎಂದು ಅವರು ತಿಳಿಸಿದರು.

ಶ್ರೀಲಂಕಾ ಅಧ್ಯಕ್ಷ ಅನುರ ಕುಮಾರ ದಿಸ್ಸನಾಯಕೆ ಅವರೊಂದಿಗೆ ನಡೆದ ಸಭೆಯಲ್ಲಿ, ಭಾರತ-ಶ್ರೀಲಂಕಾ ಸಂಬಂಧಗಳ ಇತ್ತೀಚಿನ ಪ್ರಗತಿಯನ್ನು ಪರಿಶೀಲಿಸಲಾಗಿದೆ. ಶಕ್ತಿ, ಸಂಪರ್ಕ ವ್ಯವಸ್ಥೆ, ಮೂಲಸೌಕರ್ಯ, ಆರೋಗ್ಯ, ಕೌಶಲ್ಯಾಭಿವೃದ್ಧಿ, ಸಂಸ್ಕೃತಿ ಹಾಗೂ ನೀಲಿ ಆರ್ಥಿಕತೆ ಸೇರಿದಂತೆ ಹಲವು ಕ್ಷೇತ್ರಗಳಲ್ಲಿ ಸಹಕಾರದ ಅವಕಾಶಗಳ ಕುರಿತು ಚರ್ಚಿಸಲಾಗಿದೆ ಎಂದು ಮೋದಿ ತಿಳಿಸಿದರು.

ಸ್ಲೋವಾಕಿಯಾ ಅಧ್ಯಕ್ಷ ಪೀಟರ್ ಪೆಲ್ಲೆಗ್ರಿನಿ ಅವರೊಂದಿಗೆ ನಡೆದ ಮಾತುಕತೆ ಫಲಪ್ರದವಾಗಿತ್ತು ಎಂದು ಮೋದಿ ಹೇಳಿದ್ದಾರೆ. ರಕ್ಷಣಾ, ಅಂತರಿಕ್ಷ ಹಾಗೂ ಡಿಜಿಟಲ್ ಸಾರ್ವಜನಿಕ ಮೂಲಸೌಕರ್ಯ ಕ್ಷೇತ್ರಗಳಲ್ಲಿ ದ್ವಿಪಕ್ಷೀಯ ಸಹಕಾರ ವಿಸ್ತರಣೆಗೆ ಒತ್ತು ನೀಡಲಾಗಿದೆ. ಭಾರತ-ಯೂರೋಪಿಯನ್ ಒಕ್ಕೂಟ ಮುಕ್ತ ವ್ಯಾಪಾರ ಒಪ್ಪಂದವು ವ್ಯಾಪಾರ ಮತ್ತು ಹೂಡಿಕೆಗಳಿಗೆ ಹೊಸ ಅವಕಾಶಗಳನ್ನು ಸೃಷ್ಟಿಸಲಿದೆ ಎಂದು ಮೋದಿ ಅಭಿಪ್ರಾಯಪಟ್ಟಿದ್ದಾರೆ. ಡಿಜಿಟಲ್ ತಂತ್ರಜ್ಞಾನ, ಸ್ಟಾರ್ಟ್‌ಅಪ್‌ಗಳು, ರಕ್ಷಣಾ ಹಾಗೂ ಅಂತರಿಕ್ಷ ಕ್ಷೇತ್ರಗಳಲ್ಲಿ ಸಹಕಾರ ಕುರಿತೂ ಮಹತ್ವದ ಚರ್ಚೆ ನಡೆದಿದೆ ಎಂದು ತಿಳಿಸಿದ್ದಾರೆ. ಪ್ರಮುಖ ಎಐ ಮತ್ತು ಡೀಪ್ ಟೆಕ್ ನವೋದ್ಯಮಗಳ 16 ಸಿಇಒಗಳ ಜತೆ ಮತ್ತು ಸತತ 7 ದ್ವಿಪಕ್ಷೀಯ ಸಭೆಗಳನ್ನು ನಡೆಸಿದರು.ಭಾರತೀಯ ನವೋದ್ಯಮ ಇಕೋಸಿಸ್ಟಂ, ಬಂಡವಾಳ, ಸಂಶೋಧನೆ ಮತ್ತು ಅಭಿವೃದ್ಧಿ, ಕೌಶಲಾಭಿವೃದ್ಧಿ ಇತ್ಯಾದಿ ವಿಚಾರಗಳ ಬಗ್ಗೆ ಜಾಗತಿಕ ನಾಯಕರ ಜತೆ ಪ್ರಧಾನಿ ಮೋದಿ ಚರ್ಚೆ ನಡೆಸಿದರು. ಆರೋಗ್ಯ, ಕೃಷಿ, ಶಿಕ್ಷಣ ಮತ್ತು ಆಡಳಿತಾತ್ಮಕ ಸವಾಲುಗಳ ಕುರಿತು ಚರ್ಚಿಸಲಾಗಿದೆ.

ವಿಕಸಿತ ಭಾರತಕ್ಕೆ ಎಐ ಪೂರಕ: ಐಎಂಎಫ್

ಎಐಯನ್ನೊಂದು ಒಳಿತಿನ ಅಥವಾ ಕೆಡುಕಿನ ಶಕ್ತಿಯಾಗಿ ಪರಿವರ್ತಿಸಿಕೊಳ್ಳುವುದು ನಮ್ಮ ಕೈಯ್ಯಲ್ಲಿದೆ. ಹಾಗಾಗಿ ಇದರ ಅಭಿವೃದ್ಧಿ ಮತ್ತು ನಿರ್ವಹಣೆಯಲ್ಲಿ ಸಮತೋಲನ ಮುಖ್ಯ. ಜಾಗತಿಕ ಬೆಳವಣಿಗೆ ದರವನ್ನು ಎಐ ಏರುಗತಿಗೆ ಕೊಂಡೊಯ್ಯಬಲ್ಲುದು. ಭಾರತದ ಪಾಲಿಗೆ ಇದು ಧನಾತ್ಮಕ ಅಂಶ, ಅಂದರೆ ಭಾರತದ ವಿಕಸಿತ ಭಾರತ ವಿಷನ್ ಖಂಡಿತ ಸಾಕಾರವಾಗಲಿದೆ ಎಂದು ಐಎಂಎಫ್ ಆಡಳಿತ ನಿರ್ದೇಶಕರಾದ ಕ್ರಿಸ್ಟಲಿನಾ ಜಾರ್ಜಿವಾ ಎಐ ಇಂಪ್ಯಾಕ್ಟ್ ಸಮ್ಮಿಟ್‌ನಲ್ಲಿ ವಿಶ್ವಾಸ ವ್ಯಕ್ತಪಡಿಸಿದ್ದಾರೆ.



ಭಾರತದ ಅಭಿವೃದ್ಧಿ ಶ್ಲಾಘನೀಯ: ಮ್ಯಾಕ್ರಾನ್

ವೇಗವಾಗಿ ಅಭಿವೃದ್ಧಿಯಾಗುತ್ತಿರುವ ಎಐ ತಂತ್ರಜ್ಞಾನಕ್ಕೆ ಸುರಕ್ಷಿತ ಮೇಲ್ವಿಚಾರಣೆಯ ಅಗತ್ಯವಿದೆ . ಈ ಕ್ಷೇತ್ರದ ನಿಯಮಗಳನ್ನು ರೂಪಿಸುವ ಕಾರ್ಯವನ್ನು ಮುಂದುವರಿಸಲು ಬದ್ಧರಾಗಿದ್ದೇವೆ. ಭಾರತಂತಹ ನಮ್ಮ ಮಿತ್ರ ರಾಷ್ಟ್ರಗಳೊಂದಿಗೆ ಸೇರಿ ನಿಯಮ ರೂಪಿಸುತ್ತೇವೆ. ಡಿಜಿಟಲ್ ಸಾರ್ವಜನಿಕ ಮೂಲಸೌಕರ್ಯವನ್ನು ಜನಸಾಮಾನ್ಯರಿಗೆ ತಲುಪಿಸುವಲ್ಲಿ ಭಾರತ ವಹಿಸಿರುವ ಪ್ರಮುಖ ಪಾತ್ರ ಶ್ಲಾಘನೀಯವಾದುದು ಎಂದು ಫ್ರಾನ್ಸ್‌ನ ಅಧ್ಯಕ್ಷ ಇಮಾನ್ಯುಯೆಲ್ ಮ್ಯಾಕ್ರಾನ್ ಹೊಸದಿಲ್ಲಿಯಲ್ಲಿ ನಡೆದ ಜಾಗತಿಕ ಕೃತಕ ಬುದ್ಧಿಮತ್ತೆ (ಎಐ)ಶೃಂಗಸಭೆಯಲ್ಲಿ ಹೇಳಿದ್ದಾರೆ.

ಭಾರತದ ಎಐ ಕಿಡ್

'ಭಾರತದ ಎಐ ಕಿಡ್' ಎಂದೇ ಕರೆಯಲ್ಪಡುವ ಹದಿನಾರು ವರ್ಷದ ರೌಲ್ ಜಾನ್ ಅಜು, ಎಐ ಇಂಪ್ಯಾಕ್ಟ್ ಶೃಂಗಸಭೆಯಲ್ಲಿ ಗಮನ ಸೆಳೆದಿದ್ದಾನೆ. ಅಲ್ಲಿ ಆತ ವಿಶ್ವಸಂಸ್ಥೆಯ ಪ್ರಧಾನ ಕಾರ್ಯದರ್ಶಿ ಆಂಟೋನಿಯೊ ಗುಟೆರೆಸ್ ಅವರನ್ನು ಭೇಟಿಯಾಗಿದ್ದಾನೆ. ಕೃತಕ ಬುದ್ಧಿಮತ್ತೆ ಮತ್ತು ದೊಡ್ಡ ಪ್ರಮಾಣದ ತರಬೇತಿ ಯೋಜನೆಗಳಲ್ಲಿ ಆತನ ಚಟುವಟಿಕೆಯನ್ನು ಗುರುತಿಸಿ ಶೃಂಗಸಭೆಗೆ ಆಹ್ವಾನಿಸಲಾಗಿತ್ತು. ಅನೇಕ ಕಂಪನಿಗಳ ಸಹಯೋಗದೊಂದಿಗೆ, ವೃತ್ತಿಪರರೊಂದಿಗೆ, ಸುಮಾರು 1.5 ಲಕ್ಷ ವಿದ್ಯಾರ್ಥಿಗಳಿಗೆ ಅವರು ತರಬೇತಿ ನೀಡಿದ್ದಾನೆ.



1.5 ಲಕ್ಷ ವಿದ್ಯಾರ್ಥಿಗಳಿಗೆ ತರಬೇತಿ ನೀಡಿದ ಅಜು

ಜವಾಬ್ದಾರಿಯುತ ಎಐ ಮಾತು: ಮಕ್ಕಳಿಗೆ ಸರಳ ಭಾಷೆಯಲ್ಲಿ ಕೃತಕ ಬುದ್ಧಿಮತ್ತೆ ಕಲಿಸಲು ಚಟ್ಬನ್, ನ್ಯಾನೊ ಆಧಾರಿತ ರೋಬೋಟ್ 'ಮೀಬಾಟ್' ಅನ್ನು ಅಭಿವೃದ್ಧಿಪಡಿಸಿದ್ದಾನೆ. ಎಐ ಹಲ್ಯೂಸಿನೇಶನ್‌ಗಳು (ಭ್ರಮೆ) ಮತ್ತು ಅತಿಯಾದ ಬಳಕೆಯ ಬಗೆಗಿನ ಅಪಾಯಗಳ ಬಗ್ಗೆಯೂ ಆತ ಬೆಳಕು ಚೆಲ್ಲಿದ್ದಾನೆ. 1, 700 ಕೋಟಿ ಮೌಲ್ಯದ ಸಂಸ್ಥೆಯನ್ನು ನಡೆಸುತ್ತಿದ್ದರೂ, ಆತ ನಿಯಮಿತ ಶಾಲಾ ಶಿಕ್ಷಣವನ್ನು ಮುಂದುವರಿಸುತ್ತಿದ್ದಾನೆ.

ಭಾರತದಲ್ಲಿ ಶೀಘ್ರ ಮೊದಲ ಏರ್ ಟ್ಯಾಕ್ಸಿ

ಭಾರತದ ಮೊದಲ ಸ್ಥಳೀಯವಾಗಿ ಅಭಿವೃದ್ಧಿಪಡಿಸಿದ ಏರ್ ಟ್ಯಾಕ್ಸಿಯನ್ನು ಶೃಂಗಸಭೆ 2026 ರಲ್ಲಿ ಪ್ರದರ್ಶಿಸಲಾಯಿತು. ಇದು ನಗರಗಳ ಸಂಚಾರ ವ್ಯವಸ್ಥೆಯಲ್ಲಿ ಒಂದು ಪ್ರಮುಖ ಹೆಜ್ಜೆಯೆನಿಸಿದೆ. ಎಲೆಕ್ಟ್ರಿಕ್ ವರ್ಟಿಕಲ್ ಟೇಕ್-ಆಫ್ ಮತ್ತು ಲ್ಯಾಂಡಿಂಗ್ (ಇ-ವಿಟಿಓಎಲ್) ವಿಮಾನವನ್ನು ಇಂಡಿಯನ್ ಇನ್ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ ಮದ್ರಾಸ್ ಸಹಯೋಗದೊಂದಿಗೆ ದಿ ಇಪ್ಲೇನ್ ಕಂಪನಿ ಅಭಿವೃದ್ಧಿಪಡಿಸಿದೆ.



ವಿಮಾನವನ್ನು ಜನನಿಬಿಡ ನಗರಗಳಲ್ಲಿ ಪ್ರಯಾಣದ ಸಮಯವನ್ನು ಕಡಿಮೆ ಮಾಡಲು ವಿನ್ಯಾಸಗೊಳಿಸಲಾಗಿದೆ. ಇದರ ಟೇಕ್-ಆಫ್ ಅಥವಾ ಲ್ಯಾಂಡಿಂಗ್‌ಗೆ ರನ್‌ವೇ ಅಗತ್ಯವಿರುವುದಿಲ್ಲ.

8 ನಿಮಿಷಗಳಲ್ಲಿ 36 ಕಿಮೀ!: ಬೆಂಗಳೂರು ವಿಮಾನ ನಿಲ್ದಾಣದಿಂದ ಯುಬಿ ಸಿಟಿಗೆ ರಸ್ತೆಯ ಮೂಲಕ ಎರಡು ಗಂಟೆಗಳವರೆಗೆ ತೆಗೆದುಕೊಳ್ಳಬಹುದಾದಂತಹ 36 ಕಿಮೀ ಪ್ರಯಾಣವನ್ನು ಈ ಟ್ಯಾಕ್ಸಿ ಎಂಟು ನಿಮಿಷಗಳಲ್ಲಿ ಪೂರ್ಣಗೊಳಿಸುವ ನಿರೀಕ್ಷೆಯಿದೆ. ದರ ಸುಮಾರು 1,700 ರೂ. ಆಗಿರಬಹುದು ಎಂದು ಅಂದಾಜಿಸಲಾಗಿದೆ. ಒಂದು ಬಾರಿ ಬ್ಯಾಟರಿ ಚಾರ್ಜ್ ಮಾಡಿದರೆ ಹಲವೆಡೆ ನಿಂತು ಸಾಗುವ ಸಾಮರ್ಥ್ಯ ಇದಕ್ಕಿದೆ. 2027ರಲ್ಲಿ ಏರ್ ಆಂಬ್ಯುಲೆನ್ಸ್ ಸೇವೆಗಳನ್ನು ಯೋಜಿಸಲಾಗಿದ್ದು, ನಂತರ ಪ್ರಮುಖ ನಗರಗಳಲ್ಲಿ ವಾಣಿಜ್ಯ ಕಾರ್ಯಾಚರಣೆ ಆರಂಭಿಸಲು ಚಿಂತನೆ ನಡೆದಿದೆ.



ಭಾರತ ಕೃತಕ ಬುದ್ಧಿಮತ್ತೆಯ ಕ್ರಾಂತಿ ಕೇಂದ್ರ

2026ರ ಇಂಡಿಯಾ ಎಐ ಇಂಪ್ಯಾಕ್ಟ್ ಶೃಂಗಸಭೆಯಲ್ಲಿ ಉನ್ನತ ತಂತ್ರಜ್ಞಾನದ ದಿಗ್ಗಜರು ಭಾರತದ ಸಾಮರ್ಥ್ಯ, ಪ್ರತಿಭೆ ಮತ್ತು ನೀತಿಗಳ ಬಗ್ಗೆ ಬಲವಾದ ವಿಶ್ವಾಸ ವ್ಯಕ್ತಪಡಿಸಿದ್ದು, ಭಾರತ ಕೃತಕ ಬುದ್ಧಿಮತ್ತೆಯ ಭವಿಷ್ಯದ ಜಾಗತಿಕ ಕೇಂದ್ರವಾಗಿ ಸ್ಥಾನ ಪಡೆದಿದೆ ಎಂದು ಶ್ಲಾಘಿಸಿದ್ದಾರೆ. ಓಪನ್ ಎಐಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಸ್ಯಾಮ್ ಆಲ್ಟ್ಮನ್, ಭಾರತ ಪೂರ್ಣ ಪ್ರಮಾಣದ ಎಐ ನಾಯಕ ಆಗಲು ಬೇಕಾದ ಎಲ್ಲಾ ಅರ್ಹತೆ ಹೊಂದಿದೆ ಎಂದು ಹೇಳಿದ್ದಾರೆ.

ಗೂಗಲ್ ಸಿಇಒ ಸುಂದರ್ ಪಿಚೈ, ಭಾರತ ಕೃತಕ ಬುದ್ಧಿಮತ್ತೆಯಲ್ಲಿ ಅಸಾಧಾರಣವಾಗಿ ಮುನ್ನುಗ್ಗುತ್ತಿದೆ ಎಂದು ಹೇಳಿದ್ದಾರೆ. ಅವರು ಭಾರತದೊಂದಿಗೆ ಗೂಗಲ್‌ನ ದೀರ್ಘಾವಧಿಯ ಪಾಲುದಾರಿಕೆಯನ್ನು ಪುನರುಚ್ಚರಿಸಿದ್ದಾರೆ. ಗೂಗಲ್ ಡೀಪ್ ಮೈಂಡ್‌ನ ಸಿಇಒ ಮತ್ತು ಸಹ-ಸಂಸ್ಥಾಪಕರಾದ ಡೆಮಿಸ್ ಹ್ಯಾಸಾಬಿಸ್, ಸಂಶೋಧನಾ ಪಾಲುದಾರಿಕೆಗಳು ವಿಸ್ತರಿಸಿದಂತೆ ಭಾರತ ಎಐ ಪವರ್‌ಹೌಸ್ ಆಗಲು ಸಜ್ಜಾಗಿದೆ, ಎಂದು ಹೇಳಿದ್ದಾರೆ.

ಮಿಸ್ಟ್ರಲ್ ಎಐಯ ಸಹ-ಸಂಸ್ಥಾಪಕ ಮತ್ತು ಸಿಇಒ ಆರ್ಥರ್ ಮೆನ್ಸ್, ಭಾರತದ ಅಪಾರ ಪ್ರತಿಭೆಯನ್ನು ಉಲ್ಲೇಖಿಸುತ್ತಾ,ತಮ್ಮ ಸಂಸ್ಥೆಯ ನಾಲ್ಕನೇ ಒಂದು ಭಾಗದಷ್ಟು ಸಂಶೋಧಕರು ಭಾರತೀಯರು ಎಂದು ಗಮನಸೆಳೆದರು.

ಎಡಬ್ಲ್ಯೂಎಸ್ ಏಷ್ಯಾ ಪೆಸಿಫಿಕ್ ಮತ್ತು ಜಪಾನ್‌ನ ಉಪಾಧ್ಯಕ್ಷ ಜೈಮ್ ವ್ಯಾಲೆಸ್, ಕ್ಲೌಡ್ ಕಂಪ್ಯೂಟಿಂಗ್ ಅವಕಾಶಗಳನ್ನು ಜನರಿಗೆ ತೆರೆದಿಡುತ್ತಿದೆ, ಮತ್ತು ಭಾರತದ ಎಐ ಬೆಳವಣಿಗೆಯ ಮೂಲಸೌಕರ್ಯ ಪೂರೈಕೆಯಲ್ಲಿ ಬೆನ್ನೆಲುಬಾಗಿ ಕಾರ್ಯನಿರ್ವಹಿಸುತ್ತದೆ, ಎಂದು ಭರವಸೆ ವ್ಯಕ್ತಪಡಿಸಿದರು.

ಮೈಕ್ರೋಸಾಫ್ಟ್‌ನ ಅಧ್ಯಕ್ಷ ಬ್ರಾಡ್ ಸ್ಮಿತ್, ಕೃತಕ ಬುದ್ಧಿಮತ್ತೆ ಜಾಗತಿಕ ದಕ್ಷಿಣಕ್ಕೆ ಹೇಗೆ ಪ್ರಯೋಜನ ನೀಡುತ್ತದೆ ಎಂಬುದನ್ನು ಅನ್ವೇಷಿಸಲು ಜಗತ್ತು ಭಾರತದಲ್ಲಿ ಒಗ್ಗೂಡಿದೆ, ಎಂದು ಹೇಳಿದ್ದಾರೆ. ಆಕ್ಸೆಂಚರ್‌ನ ಅಧ್ಯಕ್ಷೆ ಮತ್ತು ಸಿಇಒ ಜೂಲಿ ಸ್ವೀಟ್, ಪ್ರಾಥಮಿಕ ಶಾಲೆಯಿಂದ ಕೃತಕ ಬುದ್ಧಿಮತ್ತೆ ಶಿಕ್ಷಣವನ್ನು ಅಳವಡಿಸಿಕೊಂಡಿದ್ದಕ್ಕಾಗಿ ಭಾರತವನ್ನು ಶ್ಲಾಘಿಸಿದ್ದಾರೆ.

ಕಿರುಸುದ್ಧಿ


ತರೂರ್ ಪುಸ್ತಕಕ್ಕೆ ಉಪರಾಷ್ಟ್ರಪತಿ ಸಿ.ಪಿ. ರಾಧಾಕೃಷ್ಣನ್ ಶ್ಲಾಘನೆ



ಹೊಸದಿಲ್ಲಿ: ಉಪರಾಷ್ಟ್ರಪತಿ ಸಿ.ಪಿ. ರಾಧಾಕೃಷ್ಣನ್ ಅವರು ಹಿರಿಯ ಕಾಂಗ್ರೆಸ್ ನಾಯಕ ಮತ್ತು ಸಂಸದ ಶಶಿ ತರೂರ್ ಅವರ ಹೊಸ ಪುಸ್ತಕ ದಿ ಸೇಜ್ ಹೂ ರೀಮ್ಯಾಜೈನ್ಡ್ ಹಿಂದುಯಿಸಂ: ದಿ ಲೈಫ್, ಲೆಸನ್ಸ್ ಆ್ಯಂಡ್ ಲೆಗಸಿ ಆಫ್ ಶ್ರೀ ನಾರಾಯಣ ಗುರು ಅನ್ನು ಔಪಚಾರಿಕವಾಗಿ ಬಿಡುಗಡೆ ಮಾಡಿದ್ದಾರೆ. ಇದು ಸುಧಾರಕ ನಾರಾಯಣ ಗುರುಗಳ ಆಧ್ಯಾತ್ಮಿಕ ಮತ್ತು ಸಾಮಾಜಿಕ ಪರಂಪರೆ ಸಂರಕ್ಷಿಸುವ ಹೆಗ್ಗುರುತು ಕೃತಿ ಎಂದು ಶ್ಲಾಘಿಸಿದರು.

ಅಸ್ಸಾಂಗೆ ಕೈ ಅವಧಿಯಲ್ಲಿ ನುಸುಳುಕೋರರ ಪ್ರವೇಶ

ನಾಥನ್‌ಪುರ (ಅಸ್ಸಾಂ): ಕಾಂಗ್ರೆಸ್ ತನ್ನ ಆಡಳಿತಾವಧಿಯಲ್ಲಿ ದೇಶದ ಗಡಿ ತೆರೆದಿಟ್ಟಿರುವುದು ಅಸ್ಸಾಂನಲ್ಲಿ ನುಸುಳುಕೋರರು ಸೇರಿಕೊಳ್ಳಲು ಕಾರಣವೆಂದು ಆರೋಪಿಸಿದ ಕೇಂದ್ರ ಗೃಹ ಸಚಿವ ಅಮಿತ್ ಶಾ, ಹಿಮಂತ ಬಿಸ್ವ ಶರ್ಮಾ ಸರ್ಕಾರ ಪರಿಣಾಮಕಾರಿಯಾಗಿ ಸಮಸ್ಯೆಯನ್ನು ನಿಭಾಯಿಸಿದೆ ಎಂದು ಪ್ರಶಂಸಿಸಿದ್ದಾರೆ.



ವೈಬ್ರೆಂಟ್ ವಿಲೇಜಸ್ ಕಾರ್ಯಕ್ರಮದ ಎರಡನೇ ಹಂತಕ್ಕೆ ಶುಕ್ರವಾರ ಕೇಂದ್ರ ಗೃಹ ಸಚಿವ ಶಾ ಚಾಲನೆ ನೀಡಿದರು. ಗಡಿ ಪ್ರದೇಶಗಳಲ್ಲಿ ಬಾಂಗ್ಲಾ ವಲಸಿಗರ ವಲಸೆ ಮತ್ತು ನುಸುಳುಕೋರರ ಚಟುವಟಿಕೆಗಳನ್ನು ತಡೆಗಟ್ಟಲು ಈ ಯೋಜನೆ ನೆರವಾಗಲಿದೆ.

ಕಾಂಗ್ರೆಸ್ ತನ್ನ ಆಡಳಿತಾವಧಿಯಲ್ಲಿ ಅಸ್ಸಾಂ ಜನರಿಗೆ ಯಾವುದೇ ಅಭಿವೃದ್ಧಿ ಯೋಜನೆಗಳನ್ನು ನೀಡಿಲ್ಲ, ಬಿಜೆಪಿ ಆಡಳಿತದಲ್ಲಿ ದೇಶದಲ್ಲೇ ಅತ್ಯಧಿಕ ದಿನವೊಂದರಲ್ಲಿ 14 ಕಿಮೀ. ರಸ್ತೆ ನಿರ್ಮಾಣ ಮಾಡಲಾಗುತ್ತಿದೆ ಎಂದು ಗೃಹ ಸಚಿವ ಶಾ ಟೀಕಿಸಿದರು.

ಪಾಕಿಸ್ತಾನ ಮತ್ತು ಬಾಂಗ್ಲಾದೇಶ ಜತೆ ಗಡಿ ಹಂಚಿಕೊಳ್ಳುವ 17 ರಾಜ್ಯಗಳ 1,954 ಗ್ರಾಮಗಳು ಯೋಜನೆಯಲ್ಲಿ ಒಳಗೊಂಡಿವೆ.

ಗಡಿ ಪ್ರದೇಶಗಳೆಂದರೆ, ಅವುಗಳನ್ನು ಭೌಗೋಳಿಕವಾಗಿ ಮಾತ್ರವಲ್ಲದೆ ಅಭಿವೃದ್ಧಿ, ಉದ್ಯೋಗ, ಶಿಕ್ಷಣ, ವಿದ್ಯುತ್, ರಸ್ತೆ ಮತ್ತು ದೂರವಾಣಿ ಸಂಪರ್ಕದಲ್ಲೂ ದೇಶದ ಕೊನೆಯ ಗ್ರಾಮಗಳಾಗಿದ್ದವು. ಆದರೆ ಗಡಿ ಗ್ರಾಮಾಭಿವೃದ್ಧಿಗೆ ಪ್ರಧಾನಿ ನರೇಂದ್ರ ಮೋದಿ ಪ್ರಮುಖ ಆದ್ಯತೆ ನೀಡಿದ್ದಾರೆ ಎಂದು ಶಾ ತಿಳಿಸಿದ್ದಾರೆ.

ಲೈಂಗಿಕ ದೌರ್ಜನ್ಯ: ಪತಿ, ಪತ್ನಿಗೆ ಮರಣದಂಡನೆ

ಹೊಸದಿಲ್ಲಿ: 33 ಅಪ್ರಾಪ್ತ ಬಾಲಕರ ಮೇಲಿನ ದಶಕದ ಲೈಂಗಿಕ ದೌರ್ಜನ್ಯ ಪ್ರಕರಣದಲ್ಲಿ ಉತ್ತರ ಪ್ರದೇಶದ ಬಾಂದಾ ವಿಶೇಷ ಪೊಕ್ಸೊ ನ್ಯಾಯಾಲಯವು ಮಾಜಿ ಜೂ. ಎಂಜಿನಿಯರ್ ರಾಮ ಭವನ್ ಹಾಗೂ ಅವರ ಪತ್ನಿ ದುರ್ಗಾವತಿಗೆ ಮರಣದಂಡನೆ ವಿಧಿಸಿದೆ.

2010ರಿಂದ2020ರವರೆಗೆಮಕ್ಕಳ ಮೇಲೆ ವ್ಯವಸ್ಥಿತವಾಗಿ ದೌರ್ಜನ್ಯ ಎಸಗಿದ ಆರೋಪ ಸಾಬೀತಾದ ಹಿನ್ನೆಲೆಯಲ್ಲಿ, ನ್ಯಾಯಾಲಯವು ಈ ಕೃತ್ಯಗಳನ್ನು 'ಅತ್ಯಂತ ಅಪರೂಪದ ಅಪರಾಧ' ಎಂದು ಪರಿಗಣಿಸಿದೆ.

- 33 ಪುಟ್ಟ ಬಾಲಕರ ಮೇಲೆ ಲೈಂಗಿಕ ದೌರ್ಜನ್ಯ
- ವಿಶೇಷ ಪ್ರಕರಣವೆಂದು ಪರಿಗಣಿಸಿದ ಕೋರ್ಟ್

ಆರೋಪಿಗಳು ಪೀಡಿತರ ಅಶ್ಲೀಲ ವಿಡಿಯೋ ಹಾಗೂ ಛಾಯಾಚಿತ್ರಗಳನ್ನು ಎರಡು ಲಕ್ಷಕ್ಕಿಂತ ಹೆಚ್ಚು ಸಂಖ್ಯೆಯಲ್ಲಿ ಸೃಷ್ಟಿಸಿ, ಇಂಟರ್‌ನೆಟ್ ಮೂಲಕ ಅನೇಕ ದೇಶಗಳಿಗೆ ಹಂಚಿಕೆ ಮಾಡಿರುವುದು ತನಿಖೆಯಲ್ಲಿ ಬೆಳಕಿಗೆ ಬಂದಿದೆ.

ಪೊಕ್ಸೊ ಅಡಿಯಲ್ಲಿ ಶಿಕ್ಷೆ ವಿಧಿಸಲಾಗಿದೆ. ಗಂಭೀರ ಲೈಂಗಿಕ ದೌರ್ಜನ್ಯ, ಮಕ್ಕಳನ್ನು ಅಶ್ಲೀಲ ಉದ್ದೇಶಗಳಿಗೆ ಬಳಸಿಕೊಳ್ಳುವುದು, ಅಶ್ಲೀಲ ವಸ್ತುಗಳ ಸಂಗ್ರಹಣೆ ಸೇರಿದಂತೆ ಹಲವು ಆರೋಪಗಳಲ್ಲಿ ಇಬ್ಬರೂ ದೋಷಿಗಳೆಂದು ನ್ಯಾಯಾಲಯ ತೀರ್ಪು ನೀಡಿದೆ.

ಪ್ರತಿಯೊಬ್ಬ ಪೀಡಿತನಿಗೂ ರೂ. 10 ಲಕ್ಷ ಪರಿಹಾರ ನೀಡುವಂತೆ ರಾಜ್ಯ ಸರ್ಕಾರಕ್ಕೆ ನ್ಯಾಯಾಲಯ ನಿರ್ದೇಶಿಸಿದೆ. ಆರೋಪಿಗಳ ಮನೆಯಿಂದ ವಶಪಡಿಸಿಕೊಂಡ ನಗದು ಮೊತ್ತವನ್ನು ಪೀಡಿತರಲ್ಲಿ ಸಮಾನವಾಗಿ ಹಂಚಿಕೆ ಮಾಡುವಂತೆ ಆದೇಶಿಸಲಾಗಿದೆ.

ಲವ್ ಜಿಹಾದ್: ವಿವಾಹ ನೋಂದಣಿಗೆ ಹೊಸ ಕ್ರಮ

ಅಹಮದಾಬಾದ್: ವಿವಾಹ ನೋಂದಣಿ ಪ್ರಕ್ರಿಯೆಯ ದುರುಪಯೋಗ ತಡೆಗಟ್ಟುವ ಉದ್ದೇಶದಿಂದ ಗುಜರಾತ್ ಸರ್ಕಾರ ಹೊಸ ಕ್ರಮಗಳನ್ನು ಘೋಷಿಸಿದೆ.

ಹೊಸ ನಿಯಮದಂತೆ ವಿವಾಹ ನೋಂದಣಿ ಪ್ರಮಾಣಪತ್ರಕ್ಕಾಗಿ ವಧು-ವರರು ಪೋಷಕರಿಗೆ ವಿವಾಹದ ಮಾಹಿತಿ ನೀಡಿರುವುದಾಗಿ ಘೋಷಣಾ ಪತ್ರ ಸಲ್ಲಿಸಬೇಕು. ಜೊತೆಗೆ, ಪೋಷಕರ ಗುರುತುಪತ್ರ, ದೂರವಾಣಿ ಸಂಖ್ಯೆ, ವಾಸಸ್ಥಳದ ದಾಖಲೆ ಸೇರಿದಂತೆ ಅಗತ್ಯ ವಿವರಗಳನ್ನು ಒದಗಿಸುವುದು ಕಡ್ಡಾಯವಾಗಿದೆ.

- ಗುಜರಾತ್ ಸರ್ಕಾರದಿಂದ ಮಹತ್ವದ ನಿರ್ಧಾರ

ರಾಜ್ಯ ಉಪಮುಖ್ಯಮಂತ್ರಿ ಹರ್ಷ ಸಂಗವಿ ವಿಧಾನಸಭೆಯಲ್ಲಿ ಮಾತನಾಡಿ, ಗುರುತು ಮರೆಮಾಡಿ ಹೆಣ್ಣು ಮಕ್ಕಳನ್ನು ಸಿಲುಕಿಸುವ ಘಟನೆಗಳಿಗೆ ಕಡಿವಾಣ ಹಾಕಲು ನಿಯಮಗಳಲ್ಲಿ ಬದಲಾವಣೆ ತರಲಾಗುತ್ತಿದೆ ಎಂದು ತಿಳಿಸಿದರು.

ಅರ್ಜಿಯನ್ನು ಸ್ವೀಕರಿಸಿದ ಬಳಿಕ ಸಹಾಯಕ ನೋಂದಣಾಧಿಕಾರಿ 10 ದಿನಗಳೊಳಗೆ ಪೋಷಕರಿಗೆ ಮಾಹಿತಿ ನೀಡಬೇಕಾಗುತ್ತದೆ. ಪರಿಶೀಲನೆ ಹಾಗೂ ನಿಯಮಗಳ ಪಾಲನೆಯ ನಂತರ, ಅರ್ಜಿ ದಿನಾಂಕದಿಂದ 30 ದಿನಗಳ ಬಳಿಕ ವಿವಾಹ ನೋಂದಣಿ ನಡೆಯಲಿದೆ. ಈ ಎಲ್ಲ ವಿವರಗಳನ್ನು ಸರ್ಕಾರ ಅಭಿವೃದ್ಧಿಪಡಿಸಲಿರುವ ಜಾಲತಾಣ ಪೋರ್ಟಲ್‌ನಲ್ಲಿ ಅಪ್‌ಲೋಡ್ ಮಾಡಲಾಗುತ್ತದೆ. ಪುತ್ರಿಯರ ಸುರಕ್ಷತೆ ಹಾಗೂ ಸಾಮಾಜಿಕ ವ್ಯವಸ್ಥೆ ಕಾಪಾಡುವ ದೃಷ್ಟಿಯಿಂದ ಈ ಕ್ರಮ ಕೈಗೊಳ್ಳಲಾಗಿದೆ ಎಂದು ಸಂಗವಿ ಹೇಳಿದರು.

ಗಾಜಾ ಶಾಂತಿ ಮಂಡಳಿ ಸಭೆಗೆ ಭಾರತ ವೀಕ್ಷಕ

ಹೊಸದಿಲ್ಲಿ: ಗಾಜಾ ಪಟ್ಟಿಯ ಪುನರಾಭಿವೃದ್ಧಿಗಾಗಿ ಅಮೆರಿಕ ಡೊನಾಲ್ಡ್ ಟ್ರಂಪ್ ಸ್ಥಾಪಿಸಿರುವ ಯೋಜನೆಗೆ ಸೇರಿಕೊಳ್ಳದೆ, ಭಾರತವು ವೀಕ್ಷಕ ದೇಶವಾಗಿ ಗಾಜಾ ಕುರಿತ ಟ್ರಂಪ್ ಶಾಂತಿ ಮಂಡಳಿಯ ಉದ್ಘಾಟನಾ ಸಭೆಯಲ್ಲಿ ಭಾಗವಹಿಸಿದೆ. ವಾಷಿಂಗ್ಟನ್ ಡಿಸಿಯಲ್ಲಿರುವ ಡೊನಾಲ್ಡ್ ಜೆ. ಟ್ರಂಪ್ ಇನ್ಸ್ಟಿಟ್ಯೂಟ್ ಆಫ್ ಪೀಸ್‌ನಲ್ಲಿ ನಡೆದ ಸಭೆಯಲ್ಲಿ ಭಾರತವನ್ನು ಭಾರತೀಯ ರಾಯಭಾರ ಕಚೇರಿಯ ಚಾರ್ಜೆ ಡಿ ಅಫೇರ್ಸ್ ನಾಮ್ಗ್ಯ ಖಂಪಾ ಪ್ರತಿನಿಧಿಸಿದ್ದರು. ಹಮಾಸ್ ಮತ್ತು ಇಸ್ರೇಲ್ ನಡುವಿನ ಎರಡು ವರ್ಷಗಳ ಯುದ್ಧದಿಂದ ಬಹುತೇಕ ನಿರ್ನಾಮವಾಗಿರುವ ಗಾಜಾವನ್ನು ಪುನರ್‌ನಿರ್ಮಿಸುವ ಗುರಿಯನ್ನು ಹೊಂದಿರುವ ಯೋಜನೆಗೆ ಅಮೆರಿಕ ಧನಸಹಾಯ ಮಾಡುತ್ತದೆ ಎಂದು ಹೇಳಿ, ಹೊಸ ಬೋರ್ಡ್ ಆಫ್ ಪೀಸ್‌ಗೆ 10 ಬಿಲಿಯನ್ ನೀಡುವುದಾಗಿ ಟ್ರಂಪ್ ಭರವಸೆ ನೀಡಿದರು.

ಅಪರೂಪದ ಖನಿಜ, ಸೆಮಿಕಂಡಕ್ಟರ್, ಎಐ ಪೂರೈಕೆ ಬಲ | ಚೀನಾಗೆ ಭಾರೀ ಹೊಡೆತ

ಪ್ಯಾಕ್ಸ್ ಸಿಲಿಕಾ ಮೈತ್ರಿಕೂಟ ಸೇರಿದ ಭಾರತ

ಹೊಸದಿಲ್ಲಿ: ಅಪರೂಪದ ಖನಿಜಗಳು, ಸೆಮಿಕಂಡಕ್ಟರ್ ಮತ್ತು ಕೃತಕ ಬುದ್ಧಿಮತ್ತೆ (ಎಐ) ಕ್ಷೇತ್ರಗಳಲ್ಲಿನ ಪೂರೈಕೆ ಸಹಯೋಗ ಬಲಗೊಳಿಸುವ ಉದ್ದೇಶದಿಂದ ಅಮೆರಿಕ ನೇತೃತ್ವದ ಪ್ಯಾಕ್ಸ್ ಸಿಲಿಕಾ ಮೈತ್ರಿಕೂಟವನ್ನು ಭಾರತ ಶುಕ್ರವಾರ ಸೇರಿಕೊಂಡಿದೆ. ಇದು ಚೀನಾದ ಖನಿಜ ಮತ್ತು ಸೆಮಿಕಂಡಕ್ಟರ್ ಮಾರುಕಟ್ಟೆಗೆ ಭಾರೀ ಹೊಡೆತ ನೀಡಲಿದೆ.

ದಿಲ್ಲಿಯಲ್ಲಿ ನಡೆದ ಎಐ ಇಂಪ್ಯಾಕ್ಟ್ ಶೃಂಗದ 5ನೇ ಮತ್ತು ಕೊನೆಯ ದಿನವಾದ ಶುಕ್ರವಾರ, ಉಭಯ ರಾಷ್ಟ್ರಗಳ ಉನ್ನತ ಅಧಿಕಾರಿಗಳು ಒಪ್ಪಂದ ಪತ್ರಗಳಿಗೆ ಸಹಿ ಹಾಕಿದರು.

ಭಾರತ ಮತ್ತು ಅಮೆರಿಕ ನಡುವಿನ ವ್ಯಾಪಾರ ಒಪ್ಪಂದ ಮಾತುಕತೆ ಬಹಳ ಸುದೀರ್ಘ ಸಮಯದಿಂದ ನಡೆಯುತ್ತಿದ್ದು, ಒಪ್ಪಂದ ಅಂತಿಮಗೊಳಿಸುವ ಮತ್ತು ಉಭಯ ರಾಷ್ಟ್ರಗಳ ನಡುವಿನ ದ್ವಿಪಕ್ಷೀಯ ಸಂಬಂಧ ಸುಧಾರಿಸುವ ದೃಷ್ಟಿಕೋನದಿಂದ ಪ್ಯಾಕ್ಸ್ ಸಿಲಿಕಾ ಮೈತ್ರಿಕೂಟವನ್ನು ಸೇರುವ ದೃಢ ನಿರ್ಧಾರವನ್ನು ಭಾರತ ತೆಗೆದುಕೊಂಡಿದೆ.

ಆರ್ಥಿಕ ಭದ್ರತೆಯೇ ರಾಷ್ಟ್ರೀಯ ಭದ್ರತೆ:



ವ್ಯಾಪಾರ ಒಪ್ಪಂದ, ಪ್ಯಾಕ್ಸ್ ಸಿಲಿಕಾದಿಂದ ರಕ್ಷಣಾ ಸಹಯೋಗದವರೆಗೆ ನಮ್ಮ ರಾಷ್ಟ್ರಗಳೆರಡೂ ಮಿತಿಯಿಲ್ಲದೆ ಜತೆಗೂಡಿ ಕೆಲಸ ಮಾಡಲಿವೆ. ಭಾರತ ಪ್ರತಿಭೆ ಸಂಪತ್ಭರಿತ ರಾಷ್ಟ್ರವಾಗಿದ್ದು, ಎಂತಹಾ ಪ್ರತಿಸ್ಪರ್ಧಿಗಳಿಗೂ ಸವಾಲೊಡ್ಡಬಲ್ಲ ಸಾಮರ್ಥ್ಯ ಹೊಂದಿದೆ. ಭಾರತದ ಎಂಜಿನಿಯರಿಂಗ್ ಸಾಮರ್ಥ್ಯ ಪ್ಯಾಕ್ಸ್ ಸಿಲಿಕಾ ಮೈತ್ರಿಕೂಟದಲ್ಲಿ ನಿರ್ಣಾಯಕ ಪಾತ್ರ ವಹಿಸಲಿದೆ. ಅಪರೂಪದ ಖನಿಜ ಉತ್ಪಾದನಾ ಸಾಮರ್ಥ್ಯದತ್ತ ಭಾರತ ಪ್ರಮುಖ ಹೆಜ್ಜೆಯಿರಿಸಿದೆ. ಅಪರೂಪದ ಖನಿಜ ಪೂರೈಕೆಯಲ್ಲಿ ನಮ್ಮ ಸ್ನೇಹಿತರು ಆರ್ಥಿಕ ದಬ್ಬಾಳಿಕೆ ಮತ್ತು ಬೆದರಿಕೆಗಳನ್ನು ಎದುರಿಸುತ್ತಿದ್ದಾರೆ (ಚೀನಾ ಕುರಿತು).

ಪ್ಯಾಕ್ಸ್‌ಸಿಲಿಕಾ ಮೈತ್ರಿ ರಾಷ್ಟ್ರಗಳು

ಆಸ್ಟ್ರೇಲಿಯಾ, ಗ್ರೀಸ್, ಇಸ್ರೇಲ್, ಜಪಾನ್, ಕತಾರ್, ದಕ್ಷಿಣ ಕೊರಿಯಾ, ಸಿಂಗಾಪುರ, ಯುಎಇ, ಬ್ರಿಟನ್, ಭಾರತ ಅಧಿಕೃತವಾಗಿ ಪ್ಯಾಕ್ಸ್ ಸಿಲಿಕಾ ಒಪ್ಪಂದಕ್ಕೆ ಸಹಿ ಹಾಕಿವೆ. ಉಳಿದಂತೆ ಕೆನಡಾ, ಜರ್ಮನಿ, ನೆದರ್‌ಲೆಂಡ್ಸ್ ಮತ್ತು ಐರೋಪ್ಯ ಒಕ್ಕೂಟ ಸೇರ್ಪಡೆಯಾಗುವ ಸಾಧ್ಯತೆಯಿದೆ.

ಏನಿದು ಪ್ಯಾಕ್ಸ್ ಸಿಲಿಕಾ ಶೃಂಗ?

ಕಳೆದ ವರ್ಷ ಡಿ.12ರಂದು ಅಮೆರಿಕದ ವಾಷಿಂಗ್ಟನ್‌ನಲ್ಲಿ ಪ್ಯಾಕ್ಸ್ ಸಿಲಿಕಾ ಶೃಂಗ ನಡೆದಿದ್ದು, 12 ರಾಷ್ಟ್ರಗಳು ಸಹಿ ಮಾಡಿದ್ದವು. ಕಚ್ಚಾ ವಸ್ತುಗಳಿಂದ ಸೆಮಿಕಂಡಕ್ಟರ್ ಮತ್ತು ಎಐ ಮೂಲಸೌಕರ್ಯದವರೆಗೂ ಪರಸ್ಪರ ಆರ್ಥಿಕ ಪ್ರಗತಿ ಮತ್ತು ಭದ್ರತೆ ಬದ್ಧತೆಯನ್ನು ಜಂಟಿಯಾಗಿ ಘೋಷಿಸಿದ್ದವು. ಈ ಸದಸ್ಯ ರಾಷ್ಟ್ರಗಳ ಪಟ್ಟಿಗೆ ಭಾರತ ಸೇರಿಕೊಂಡಿದೆ. ಕಳೆದ ತಿಂಗಳು ಅಮೆರಿಕ ರಾಯಭಾರಿ ಗೊರ್ ಮೈತ್ರಿಕೂಟವನ್ನು ಸೇರುವಂತೆ ಭಾರತವನ್ನು ಆಹ್ವಾನಿಸಿದ್ದರು.

ಎಸ್‌ಐಆರ್ ಪರಿಶೀಲನೆ, ದೂರು ಪರಿಹಾರಕ್ಕೆ ಜಡ್ಜ್‌ಗಳ ನೇಮಕ

ಪ.ಬಂಗಾಳ ಸರ್ಕಾರಕ್ಕೆ ಸುಪ್ರೀಂ ಪಾಠ

ಹೊಸದಿಲ್ಲಿ: ಪಶ್ಚಿಮ ಬಂಗಾಳದಲ್ಲಿನ ಮತದಾರರ ಪಟ್ಟಿಯ ಶುದ್ಧೀಕರಣಕ್ಕೆ ಸಂಬಂಧಿಸಿದ ವಿಶೇಷ ತೀವ್ರ ಪರಿಶೀಲನೆ (ಎಸ್‌ಐಆರ್) ಕಾರ್ಯಕ್ಕೆ ನೆರವಾಗುವಂತೆ ನ್ಯಾಯಾಂಗ ಅಧಿಕಾರಿಗಳನ್ನು ನೇಮಿಸಲು ಕಲ್ಕತ್ತಾ ಹೈಕೋರ್ಟ್‌ಗೆ ಸುಪ್ರೀಂ ಕೋರ್ಟ್ ನಿರ್ದೇಶಿಸಿದೆ. ರಾಜ್ಯ ಸರ್ಕಾರ ಮತ್ತು ಚುನಾವಣಾ ಆಯೋಗದ ನಡುವೆ ಆರೋಪ-ಪ್ರತ್ಯಾರೋಪಗಳ ಮುಂದುವರಿದ ಬೆನ್ನಲ್ಲೇ ಅತ್ಯರೂಪವಾದ ನಿರ್ಧಾರ ತೆಗೆದುಕೊಂಡಿದೆ.



ದಾವೆಗಳು ಮತ್ತು ಆಕ್ಷೇಪಣೆಗಳನ್ನು ಪರಿಶೀಲಿಸುವ ಕೆಲಸವನ್ನು ನ್ಯಾಯಾಂಗ ಅಧಿಕಾರಿಗಳು ನೋಡಿಕೊಳ್ಳಬಹುದು ಎಂದು ಸುಪ್ರೀಂ ಕೋರ್ಟ್ ತಿಳಿಸಿದೆ. ಎರಡು ಸಂವಿಧಾನಾತ್ಮಕ ಸಂಸ್ಥೆಗಳಾದ ರಾಜ್ಯ ಸರ್ಕಾರ ಮತ್ತು ಚುನಾವಣಾ ಆಯೋಗದ ನಡುವೆ ನಂಬಿಕೆ ಕೊರತೆ ಕಾಣಿಸುತ್ತಿದೆ. ಜನರ ದಾವೆ-ಆಕ್ಷೇಪಣೆಗಳ ಹಂತದಲ್ಲೇ ಪ್ರಕ್ರಿಯೆ ಕುಂಟುತ್ತಿದೆ,'ಎಂದುಮುಖ್ಯನ್ಯಾಯಮೂರ್ತಿ ಸೂರ್ಯಕಾಂತ್ ಹೇಳಿದ್ದಾರೆ. ಎಸ್‌ಐಆರ್ ಕಾರ್ಯಕ್ಕಾಗಿ ಜಿಲ್ಲಾ ನ್ಯಾಯಾಧೀಶರ ಹುದ್ದೆ ಮಟ್ಟದ ಸೇವೆಯಲ್ಲಿರುವ ಹಾಗೂ ನಿವೃತ್ತ ನ್ಯಾಯಾಂಗ ಅಧಿಕಾರಿಗಳನ್ನು ನಿಯೋಜಿಸುವಂತೆ ಹೈಕೋರ್ಟ್‌ಗೆ ಸುಪ್ರೀಂ ಕೋರ್ಟ್ ಸೂಚಿಸಿದೆ. 'ಅಸಾಮಾನ್ಯ ಪರಿಸ್ಥಿತಿಗಳ ಕಾರಣದಿಂದ ಅಸಾಮಾನ್ಯ ಆದೇಶ' ನೀಡಬೇಕಾಗಿದೆ ಎಂದು ನ್ಯಾಯಾಲಯ ಹೇಳಿದೆ.

ಇಂದು ಸಭೆ: ನ್ಯಾಯಾಂಗ ಅಧಿಕಾರಿಗಳ ಯೋಜನೆಯ ಸೂಕ್ಷ್ಮ ವಿವರಗಳನ್ನು ನಿರ್ಧರಿಸಲು ರಾಜ್ಯ ಚುನಾವಣಾ ಆಯುಕ್ತರು, ಮುಖ್ಯ ಕಾರ್ಯದರ್ಶಿ, ಪೊಲೀಸ್ ಮಹಾನಿರ್ದೇಶಕರು ಸೇರಿದಂತೆ ಹಿರಿಯ ಅಧಿಕಾರಿಗಳು ಶನಿವಾರ ಹೈಕೋರ್ಟ್ ಮುಖ್ಯ ನ್ಯಾಯಮೂರ್ತಿಯವರೊಂದಿಗೆ ಸಭೆ ನಡೆಸುವಂತೆ ನಿರ್ದೇಶಿಸಲಾಗಿದೆ.

ದಾಖಲೆಗಳ ಪರಿಶೀಲನೆ ಮತ್ತು ಮತದಾರರ ಪಟ್ಟಿಯಲ್ಲಿ ಸೇರ್ಪಡೆ- ವಿಲೇವಾರಿ ನ್ಯಾಯ ಸಮ್ಮತವಾಗಿರಲು, ಪ್ರತಿಯೊಂದು ಜಿಲ್ಲೆಯಲ್ಲಿ ನ್ಯಾಯಾಂಗ ಅಧಿಕಾರಿಗಳ ನೆರವು ಅನಿವಾರ್ಯ ಎಂದು ನ್ಯಾಯಾಲಯ ಹೇಳಿದೆ.

ಏನಿದು ವಿವಾದ?: ಎಸ್‌ಐಆರ್ ಕರ್ತವ್ಯಗಳಿಗೆ ಅಧಿಕಾರಿಗಳ ನಿಯೋಜನೆ ಕುರಿತು ಆಯೋಗ ಮತ್ತು ರಾಜ್ಯ ಸರ್ಕಾರದ ನಡುವೆ ವಿವಾದವಿದೆ. ಸರ್ಕಾರದ ಪರ ವಕೀಲರು ಅರ್ಹ ಅಧಿಕಾರಿಗಳನ್ನು ನೀಡಿದ್ದೇವೆ ಎಂದಿದ್ದರೆ, ಆಯೋಗದ ಪರ ವಕೀಲರು ಕೊಟ್ಟಿಲ್ಲ ಎಂದಿದೆ. ಅರ್ಹ ಗುಂಪು ಎ ಅಧಿಕಾರಿಗಳನ್ನು ನೀಡದಿದ್ದರೆ ಜನರ ಭವಿಷ್ಯವನ್ನು ಯಾರು ನಿರ್ಧರಿಸುತ್ತಾರೆ?ಎಂದು ಪ್ರಶ್ನಿಸಿತ್ತು.

ಕಡೆಗೆ, ಉಭಯ ಪಕ್ಷಗಳ ನಡುವಿನ ಜಗಳದಿಂದ ಬೇಸತ್ತು ಕೋರ್ಟ್, ನ್ಯಾಯಾಂಗ ಅಧಿಕಾರಿಗಳನ್ನೇ ನೇಮಕ ಮಾಡುವ ತೀರ್ಮಾನಕ್ಕೆ ಬಂದಿದೆ.

ಬಜೆಟ್ 25 ವರ್ಷಗಳ ಭಾರತದ ಭವಿಷ್ಯದ ನಕಾಶೆ: ಜೋಶಿ

ಕಲಬುರಗಿ: ಜಗತ್ತಿನ ಪ್ರಬಲ ರಾಷ್ಟ್ರಗಳು ಇಂದು ವೃದ್ಧರ ಸಂಖ್ಯೆ ಹೆಚ್ಚಾಗಿ ಕೆಲಸಕ್ಕೆ ಕೈಗಳಿಲ್ಲದೆ ಸಂಕಷ್ಟ ಎದುರಿಸುತ್ತಿದ್ದರೆ, ಭಾರತವು ಅತಿ ಹೆಚ್ಚು ಯುವ ಜನತೆಯನ್ನು ಹೊಂದಿರುವ ದೇಶವಾಗಿ ಮಿಂಚುತ್ತಿದೆ. ಈ ಯುವಶಕ್ತಿಗೆ 'ಸ್ಕಿಲ್, ಸ್ಕೇಲ್ ಮತ್ತು ಸ್ಪೀಡ್' ತರಬೇತಿ ನೀಡುವ ಮೂಲಕ 2047ರ ವೇಳೆಗೆ ಭಾರತವನ್ನು 'ವಿಕಸಿತ ಭಾರತ'ವನ್ನಾಗಿ ಮಾಡುವುದು ಕೇಂದ್ರ ಬಜೆಟ್‌ನ ದೂರದೃಷ್ಟಿಯಾಗಿದೆ ಎಂದು ಕೇಂದ್ರ ಸಚಿವ ಪ್ರಹ್ಲಾದ ಜೋಶಿ ತಿಳಿಸಿದರು.

ಶುಕ್ರವಾರ ನಗರದ ಕಲ್ಯಾಣ ಕರ್ನಾಟಕ ವಾಣಿಜ್ಯ ಮತ್ತು ಕೈಗಾರಿಕೆ ಸಂಸ್ಥೆಯಲ್ಲಿ '2026ರ ಕೇಂದ್ರ ಬಜೆಟ್' ಕುರಿತು ವಿಶೇಷ ಸಂವಾದ ಕಾರ್ಯಕ್ರಮದಲ್ಲಿ ಮಾತನಾಡಿ, ಈ ಬಾರಿಯ ಬಜೆಟ್ ಕೇವಲ ಅಂಕಿ-ಅಂಶಗಳ ಸಂಕಲನವಲ್ಲ, ಬದಲಾಗಿ ಮುಂದಿನ 25 ವರ್ಷಗಳ ಭಾರತದ ಭವಿಷ್ಯದ ನಕಾಶೆಯಾಗಿದೆ ಎಂದರು.

ಜಿಲ್ಲೆಯ ಆರ್ಥಿಕ ಮತ್ತು ಕೈಗಾರಿಕಾ ಅಭಿವೃದ್ಧಿಗೆ ಪೂರಕವಾಗಿ ಕಲಬುರಗಿಯಲ್ಲಿ 'ಮೆಗಾ ಟೆಕ್ಸ್‌ಟೈಲ್ ಪಾರ್ಕ್' ಸ್ಥಾಪಿಸಲು ಕೇಂದ್ರ ಸರ್ಕಾರ ಬದ್ಧವಾಗಿದೆ. ಈ ಕುರಿತು ಈಗಾಗಲೇ ಸಂಬಂಧಪಟ್ಟ ಕೇಂದ್ರ ಸಚಿವರೊಂದಿಗೆ ಪ್ರಾಥಮಿಕ ಚರ್ಚೆ ನಡೆಸಲಾಗಿದೆ.

3 ತಿಂಗಳಲ್ಲಿ ವಿಮಾನಯಾನ
ತಾಂತ್ರಿಕ ಕಾರಣಗಳಿಂದ ಸ್ಥಗಿತಗೊಂಡಿರುವ ಕಲಬುರಗಿ ವಿಮಾನ ನಿಲ್ದಾಣದ ವಿಮಾನ ಹಾರಾಟವನ್ನು ಪುನರಾರಂಭಿಸಲು ವಿಮಾನಯಾನ ಸಚಿವರೊಂದಿಗೆ ಮಾತುಕತೆ ನಡೆಸಿದ್ದೇನೆ. ಮುಂದಿನ 3 ರಿಂದ 4 ತಿಂಗಳಲ್ಲಿ ವಿಮಾನಗಳ ಸಂಚಾರ ಮರು ಪ್ರಾರಂಭವಾಗಲಿದ್ದು, ಈ ಭಾಗದ ಪ್ರಯಾಣಿಕರ ಸಮಸ್ಯೆಗೆ ಮುಕ್ತಿ ಸಿಗಲಿದೆ ಎಂದು ಜೋಶಿ ವಿಶ್ವಾಸ ವ್ಯಕ್ತಪಡಿಸಿದರು.

ರಾಜ್ಯ ಸರ್ಕಾರ ಪಾರ್ಕ್ ಸ್ಥಾಪನೆಗೆ ಬೇಕಾದ ಅಗತ್ಯ ಭೂಮಿ ಹಾಗೂ ಮೂಲಸೌಕರ್ಯಗಳನ್ನು ಒದಗಿಸಿದರೆ, ಶೀಘ್ರವೇ ಯೋಜನೆಯನ್ನು ಕಾರ್ಯಗತಗೊಳಿಸಲು ಅಗತ್ಯ ಕ್ರಮ ಕೈಗೊಳ್ಳಲಾಗುವುದು ಎಂದರು.

ಸಂಸ್ಥೆಯ ಅಧ್ಯಕ್ಷ ಶರಣಬಸಪ್ಪ ಪಪ್ಪಾ ಪ್ರಾಸ್ತಾವಿಕವಾಗಿ ಮಾತನಾಡಿದರು. ಗೌರವ ಕಾರ್ಯದರ್ಶಿ ಶಿವರಾಜ್ ಇಂಗಿನಶೆಟ್ಟಿ ಮಾತನಾಡಿದರು. ಈ ವೇಳೆ ಕಲ್ಯಾಣ ಕರ್ನಾಟಕ ವಾಣಿಜ್ಯ ಮತ್ತು ಕೈಗಾರಿಕೆ ಸಂಸ್ಥೆಯ ವತಿಯಿಂದ ಈ ಭಾಗದ ವಿವಿಧ ಬೇಡಿಕೆಗಳ ಮನವಿ ಪತ್ರ ಕೇಂದ್ರ ಸಚಿವ ಪ್ರಹ್ಲಾದ ಜೋಶಿ ಅವರಿಗೆ ಸಲ್ಲಿಸಿದರು.

ಕಲಬುರಗಿಯಲ್ಲಿ ಜವಳಿ ಪಾರ್ಕ್ ಪ್ರಾರಂಭಕ್ಕಾಗಿ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳಿಗೆ ಮನವಿ ಸಲ್ಲಿಸಲಾಗಿದೆ. ಸಂಬಂಧಪಟ್ಟ ಉಭಯ ಸಚಿವರು ಸಾಕಾರಾತ್ಮಕವಾಗಿ ಸ್ಪಂದಿಸಿದ್ದಾರೆ. ಮೂಲಸೌಕರ್ಯ ಒದಗಿಸಿ, ಬೇಕಾದ ಸಹಕಾರ ನೀಡುವ ಭರವಸೆ ನೀಡಿದ್ದಾರೆ. ಇನ್ನು ಕೆಲ ದಿನಗಳಲ್ಲೇ ಜವಳಿ ಪಾರ್ಕ್ ಪ್ರಾರಂಭ ಆಗುವ ನಿರೀಕ್ಷೆ ವ್ಯಕ್ತವಾಗಿದೆ.
■ ಶರಣಬಸವಪ್ಪ ಪಪ್ಪಾ, ಅಧ್ಯಕ್ಷ ಕೆಕೆಸಿಸಿಐ

ಈ ವೇಳೆ ಸಂಸ್ಥೆಯ ಮಾಜಿ ಅಧ್ಯಕ್ಷ ಶಶಿಕಾಂತ್ ಪಾಟೀಲ್, ಮಾಜಿ ಎಂ.ಎಲ್.ಸಿ ಅಮರನಾಥ್ ಪಾಟೀಲ್, ಉಮಾಕಾಂತ ನಿಗ್ಗುಡಗಿ, ಆನಂದ ದಂಡೋತಿ, ಚಂದು ಪಾಟೀಲ್, ಅಶೋಕ್ ಬಗಲಿ, ರಾಜಕುಮಾರ ಪಾಟೀಲ್ ತೆಲ್ಕೂರ್, ಉತ್ತಮ ಬಜಾಜ್, ಸಂತೋಷ ಲಂಗರ್, ಬಸವರಾಜ್ ಮದ್ರಿಕಿ, ಅಭಿಜಿತ್ ಪಾದಶೆಟ್ಟಿ, ಶಾಂತರೆಡ್ಡಿ ಪೇಟಶಿರೂರ್, ನರಸಿಂಹ ಮೆಂಡನ್, ಪ್ರಶಾಂತ್ ಮಾನಕರ್, ಶಿವಾನಂದ ಪಿಸ್ತಿ, ದಿನೇಶ್ ಪಾಟೀಲ್ ಸೇರಿ ಅನೇಕ ಉದ್ಯಮಿಗಳು, ಮುಖಂಡರು ಇದ್ದರು.

ಕಲಬುರಗಿ ನಾಟಕೋತ್ಸವದ ವಿಶೇಷ ಜಾಥಾಕ್ಕೆ ಚಾಲನೆ


ಕಲಬುರಗಿ: ಕಲಬುರಗಿ ನಾಟಕೋತ್ಸವ-26ರ ಪ್ರಚಾರಕ್ಕಾಗಿ ಹಮ್ಮಿಕೊಳ್ಳಲಾಗಿದ್ದ ವಿಶೇಷ ಜಾಥಾಕ್ಕೆ ಜಿಲ್ಲಾಧಿಕಾರಿಗಳ ಕಚೇರಿ ಆವರಣದಲ್ಲಿಂದು ಕಲಬುರಗಿ ಜಿಲ್ಲಾಧಿಕಾರಿ ಬಿ. ಫೌಜಿಯಾ ತರನ್ನುಮ್, ರಂಗಶಂಕರ ಸಂಸ್ಥಾಪಕರಾದ ಹಿರಿಯ ರಂಗಕರ್ಮಿ ಅರುಂಧತಿ ನಾಗ್ ಅವರು ಚಾಲನೆ ನೀಡಿದರು.

ಜಾಥಾದಲ್ಲಿ ವಿಶೇಷವಾಗಿ ಡೊಳ್ಳು ಕುಣಿತ, ವಿವಿಧ ಶಾಲಾ ಮಕ್ಕಳಿಂದ ವೇಷ-ಭೂಷಣ ಸೇರಿದಂತೆ ನಾಟಕಗಳ ಪಾತ್ರಗಳು ಜನ-ಮನ ಸೆಳೆದವು. ಜಾಥವು ಜಿಲ್ಲಾಧಿಕಾರಿಗಳ ಕಚೇರಿಯಿಂದ ಆರಂಭವಾಗಿ ತಿಮ್ಮಾಪುರಿ ವೃತ್ತ ಬಳಸಿಕೊಂಡು ಜನಸಂದಣಿ ಮುಖ್ಯ ರಸ್ತೆಗಳಲ್ಲಿ ಚಲಿಸುವ ಮೂಲಕ ಮತ್ತೆ ಜಿಲ್ಲಾಧಿಕಾರಿಗಳ ಕಚೇರಿ ಆವರಣದಲ್ಲಿ ಮುಕ್ತಾಯವಾಯಿತು.



ಕಿರುಸುದ್ದಿ

8 ಜನ ವಿದ್ಯಾರ್ಥಿಗಳು ಸಿವಿಲ್ ನ್ಯಾಯಾಧೀಶರಾಗಿ ಆಯ್ಕೆ



ಬೆಳಗಾವಿ: ಇಲ್ಲಿನ ಕೆ.ಎಲ್.ಎಸ್.ರಾಜಾ ಲಖಮಗೌಡ ಕಾನೂನು ಮಹಾವಿದ್ಯಾಲಯದ ಎಂಟು ವಿದ್ಯಾರ್ಥಿಗಳು ಇತ್ತೀಚೆಗೆ ನಡೆದ ಕರ್ನಾಟಕ ನ್ಯಾಯಾಂಗ ಸೇವಾ ನಿಯೋಜನೆಯಲ್ಲಿ ಸಿವಿಲ್ ನ್ಯಾಯಾಧೀಶರಾಗಿ ಆಯ್ಕೆಗೊಂಡಿದ್ದಾರೆ. ಮೌನೇಶ ಬಡಿಗೇರ, ನವೀನ ಕೋಪಾರ್ಡೆ, ಹಳ್ಳ್ಯಾಳಪ್ಪ, ಪ್ರಿಯಂಕಾ ರಾಜಗೊಳ್ಕರ್, ಜಗದೀಶ ಕಿತ್ತೂರು, ಶ್ರೇಯಾ ಉತ್ತೂರೆ, ವಿಜಯಕುಮಾರ ಬುದ್ರಿ ಮತ್ತು ನಾಗರಾಜ ತಳವಾರ ಆಯ್ಕೆಗೊಂಡ ಅಭ್ಯರ್ಥಿಗಳು. ಇವರ ಸಾಧನೆಯು ಸಂಸ್ಥೆಗೆ ಗೌರವ ತಂದಿದ್ದು, ಅದರ ಶೈಕ್ಷಣಿಕ ಶ್ರೇಷ್ಠತೆ ಮತ್ತು ಭವಿಷ್ಯದ ಕಾನೂನು ಜ್ಞಾನಿಗಳನ್ನು ಬೆಳೆಸುವ ಬದ್ಧತೆಯನ್ನು ತೋರಿಸಿದೆ. ವಿದ್ಯಾರ್ಥಿಗಳ ಯಶಸ್ಸು ಅವರ ಶ್ರದ್ಧೆ, ಕಠಿಣ ಪರಿಶ್ರಮ ಮತ್ತು ಕಾಲೇಜು ಅಧ್ಯಾಪಕರ ನಿರಂತರ ಮಾರ್ಗದರ್ಶನದ ಪರಿಣಾಮ ಸಾಧ್ಯವಾಗಿದೆ. ಕರ್ನಾಟಕ ಕಾನೂನು ಸಂಸ್ಥೆ ಅಧ್ಯಕ್ಷ ಪಿ.ಎಸ್.ಸಾಹುಕಾರ, ಕರ್ನಾಟಕ ಕಾನೂನು ಸಂಸ್ಥೆ ನಿರ್ವಹಣಾ ಮಂಡಳಿ ಅಧ್ಯಕ್ಷ ಎ.ಕೆ.ತಗಾರೆ, ಕಾಲೇಜು ಆಡಳಿತ ಮಂಡಳಿ ಅಧ್ಯಕ್ಷ ಆರ್.ಎಸ್.ಮುತಾಲಿಕ್, ನಿರ್ವಹಣಾ ಮಂಡಳಿ ಸದಸ್ಯರು, ಪ್ರಾಂಶುಪಾಲ ಡಾ.ಎ.ಎಚ್. ಹವಾಲ್ದಾರ್, ಸಿಬ್ಬಂದಿ ವರ್ಗ ಮತ್ತು ವಿದ್ಯಾರ್ಥಿಗಳು ಹರ್ಷ ವ್ಯಕ್ತಪಡಿಸಿದ್ದಾರೆ.

ಕೆ.ಎಲ್.ಎಸ್.ಕಾನೂನು ಮಹಾವಿದ್ಯಾಲಯ

ರುಂಡವಿಲ್ಲದ ಮಹಿಳೆ ದೇಹ ಪತ್ತೆ

ಮುಂಡಗೋಡ: ರುಂಡವಿಲ್ಲದ ಮಹಿಳೆಯ ಬೆತ್ತಲೆ ದೇಹವೊಂದು ಶುಕ್ರವಾರ ಸಂಜೆ ತಾಲೂಕಿನ ಕೊಳಗಿ ಗ್ರಾಮದ ಅರಣ್ಯದಲ್ಲಿ ಪತ್ತೆಯಾಗಿದೆ. ತಾಲೂಕಿನ ಮಳಗಿ ಗ್ರಾಮ ಪಂಚಾಯತ ವ್ಯಾಪ್ತಿಯ ಕೊಳಗಿ ಗ್ರಾಮವೊಂದರ ಅರಣ್ಯದಲ್ಲಿ ಸುಮಾರು 35ವರ್ಷ ವಯಸ್ಸಿನ ಮಹಿಳೆಯ ಬೆತ್ತಲೆ ಮೃತದೇಹ ಪತ್ತೆಯಾಗಿದೆ. ಮಹಿಳೆ ಮೃತದೇಹದ ಹತ್ತಿರ ಗುಂಡಗಡಗಿ (ಲಿಂಗ) ಪತ್ತೆಯಾಗಿದೆ. ಮಹಿಳೆ ಅರಣ್ಯದಲ್ಲಿ ಹತ್ಯೆ ಮಾಡಿ ಮೃತದೇಹ ಗೊತ್ತಾಗಬಾರದೆಂದು ಶವದ ಮೇಲೆ ಮರಗಳ ಟೊಂಗಿಗಳ ಸೊಪ್ಪು ಹಾಕಿ ಹೋಗಿದ್ದಾರೆ. ಎರಡು ದಿನದ ಹಿಂದೆ ಹತ್ಯೆ ಮಾಡಿ ಎಸೆದು ಹೋಗಿರುವ ಸಾಧ್ಯತೆ ಇದೆ. ಅರಣ್ಯದಲ್ಲಿ ಕೊಳಗಿ ಗ್ರಾಮದ ಮಹಿಳೆಯೊಬ್ಬರು ಸೌದೆ (ಕಟ್ಟಿಗೆ)ತರಲು ಹೊದಾಗ ಇದು ಬೆಳಕಿಗೆ ಬಂದಿದೆ. ಗಾಬರಿಗೊಂಡ ಮಹಿಳೆ ಗ್ರಾಮಸ್ಥರಿಗೆ ತಿಳಿಸಿದ್ದಾರೆ ಎಂದು ತಿಳಿದು ಬಂದಿದೆ. ಸ್ಥಳೀಯರು ಪೊಲೀಸರಿಗೆ ಮಾಹಿತಿ ನೀಡಿದ್ದಾರೆ. ಸ್ಥಳಕ್ಕೆ ಮುಂಡಗೋಡು ಪೊಲೀಸರು ಭೇಟಿ ನೀಡಿ ಮಾಹಿತಿ ಕಲೆ ಹಾಕಿ ಮೃತ ಮಹಿಳೆಯ ರುಂಡಕ್ಕಾಗಿ ಪೊಲೀಸರು ಶೋಧ ಕಾರ್ಯಾಚರಣೆ ನಡೆಸಿದ್ದಾರೆ ರುಂಡ ಸಿಕ್ಕ ನಂತರವೆ ಮಹಿಳೆ ಯಾರು ಎಲ್ಲಿಯವಳು ಏಕೆ ಕೊಲೆ ಮಾಡಲಾಗಿದೆ ಎಂದು ತಿಳಿಯಬೇಕಾಗಿದೆ.

ಹುಬ್ಬಳ್ಳಿ ಇಂದಿನ ಉತ್ಪನ್ನವಾರು ದರ

ಉತ್ಪನ್ನಗಳು	₹ಕನಿಷ್ಠ (ಕ್ವಿಂ)	₹ಗರಿಷ್ಠ (ಕ್ವಿಂ)
ಅಲಸಂದೆ ಕಾಳು	6200	6200
ಕಡಲೆಕಾಳು	1510	5359
ಉದ್ದಿನಬೇಳೆ	15000	15000
ಉದ್ದಿನಕಾಳು	6200	6250
ತೆಂಗಿನಕಾಯಿ	44000	44000
ಧನಿಯಾ	9999	9999
ಹೆಸರುಕಾಳು	1160	5300
ಹುರುಳಿ ಕಾಳು	3731	3731
ಬೆಲ್ಲ	4100	5238
ಜೋಳ	2452	3366
ಮೆಕ್ಕೆಜೋಳ	1586	1821
ಈರುಳ್ಳಿ	500	2100
ಆಲೂಗಡ್ಡೆ	1100	1700
ಅಕ್ಕಿ	3960	3960
ಸೋಯಾಬಿನ್	1555	5459
ತೊಗರಿ	3025	5511
ತೊಗರಿ ಬೇಳೆ	9400	11200
ಗೋಧಿ	2652	5100

ಗುಣಮಟ್ಟದ ಶಿಕ್ಷಣಕ್ಕೆ ಮಕ್ಕಳನ್ನು ಸರ್ಕಾರಿ ಶಾಲೆಗೆ ಸೇರಿಸಿ



ಮುನಿರಾಬಾದ್: ಸಕ್ರಿಯವಾಗಿ ಕಾಳಜಿ ಹಾಗೂ ಗುಣಮಟ್ಟದ ಶಿಕ್ಷಣ ನೀಡುವಲ್ಲಿ ಸರ್ಕಾರಿ ಶಾಲೆ ಹಾಗೂ ಶಿಕ್ಷಕರು. ಕಾರಣ ಗುಣಮಟ್ಟದ ಶಿಕ್ಷಣಕ್ಕೆ ನಿಮ್ಮ ಮಕ್ಕಳನ್ನು ಸರ್ಕಾರಿ ಶಾಲೆಗೆ ಸೇರಿಸಿ ಎಂದು ಉಪನ್ಯಾಸಕ ಪತ್ರಕರ್ತ ಸಂಘದ ಉಪಾಧ್ಯಕ್ಷ ರಾಜು ಬಿ.ಆರ್. ಪಾಲಕರಿಗೆ ಸಲಹೆ ನೀಡಿದರು.

ಹಳೇ ಬಂಡಿಹರ್ಲಾಪುರ ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಶುಕ್ರವಾರ ಆಯೋಜಿಸಿದ್ದ ಶಾಲಾ ವಾರ್ಷಿಕೋತ್ಸವ ಹಾಗೂ ಬೀಳ್ಕೊಡುಗೆ ಸಮಾರಂಭದಲ್ಲಿ ಮಾತನಾಡಿದರು.

ಯಾವುದೇ ಮಗು ಶಿಕ್ಷಣದಿಂದ ವಂಚಿತರಾಗಬಾರದು. ನಮಗೆ ಜಗತ್ತಿನ ಬಗ್ಗೆ ಜ್ಞಾನ ಬೇಕಾದರೆ ದಿನಪತ್ರಿಕೆಗಳನ್ನು ಓದಬೇಕು. ನಾವು ಸರ್ಕಾರಿ ಶಾಲೆಯಲ್ಲಿ ಓದು ಕಲಿತು ಈಗ ಪತ್ರಿಕಾ ರಂಗದಲ್ಲಿ ಕೆಲಸ ಮಾಡುತ್ತಿರುವುದು ಸರ್ಕಾರಿ ಶಾಲೆನೆ ಹೊರೆತು ಖಾಸಗಿ ಶಾಲೆಗಳಲ್ಲ, ಸರ್ಕಾರಿ ಶಾಲೆನಮ್ಮ ಗಟ್ಟಿತನಕ್ಕೆ ಭೂನಾಧಿಯಾಗುತ್ತದೆ ಎಂದು ಅಭಿಪ್ರಾಯ ವ್ಯಕ್ತಪಡಿಸಿದರು.

ಲಕ್ಷಾಂತರ ರೂ. ಖರ್ಚು ಮಾಡಿ ಮಕ್ಕಳನ್ನು ಖಾಸಗಿ ಶಾಲೆಗೆ ಸೇರಿಸುವ ಬದಲು ಉಚಿತವಾಗಿ ಗುಣಾತ್ಮಕ ಶಿಕ್ಷಣ ನೀಡುವ ಸರ್ಕಾರಿ ಶಾಲೆಗೆ ಸೇರಿಸಿ ಎಂದು ಶಿಕ್ಷಕ ಬೀರಪ್ಪ ಅಂಡಗಿ ಪಾಲಕರಿಗೆ ಕಿವಿಮಾತು ಹೇಳಿದರು.

ಹಿರಿಯ ಮುಖಂಡರಾದ ಕೆ.ವೆಂಕಟಯ್ಯ, ಭೀಮರಾಯ ಪತ್ತೆಪುರ, ಹನುಮಂತಪ್ಪ ಕರಡಿ, ಕರಿಯಪ್ಪ ಶಿವಪುರ, ರೇಣುಕಮ್ಮ ಕಟಗಿ, ಫೈರೋಜ್ ಖಾನ್, ಸರ್ವರ್ ಅಲಿ, ಹನುಮಂತಪ್ಪ ಕಾಟ್ರಳ್ಳಿ, ಖಾಸಿಂ ಪಟಾನ್, ಮಾಜಿ ಸೈನಿಕ ಸಂಜೀವ್ ಎಸ್ ತೋಟಗಂಟಿ, ಸೈನಿಕ ಮೋಹನ್ ರೈತ ಸಂಘದ ಅಧ್ಯಕ್ಷ ಹುಲುಗಪ್ಪ ಬಾಳೆಕಾಯಿ, ಕನಕಪ್ಪ ಮುಂಡರಗಿ, ಕೃಷ್ಣಪ್ಪ, ಮದರಬೀ, ಕಾವ್ಯ, ಆಂಜನೇಯ, ಹನುಮಂತಪ್ಪ ಸಿಂದೋಗಿ, ಸಹದೇವ ಸುಗಸಾನಿ, ಪತ್ರಕರ್ತ ರಾಜು ಬಿ.ಆರ್., ಶಿಕ್ಷಕರಾದ ಸುರೇಶ್ ಬೇವಿನಹಳ್ಳಿ, ಬೀರಪ್ಪ ಅಂಡಗಿ, ಪಾಂಡುರಂಗ, ಶ್ರೀವಲ್ಲಭ, ಮುಖ್ಯ ಶಿಕ್ಷಕ ಗೋಪಾಲ ನಾಯ್ಕ, ಎಸ್‌ಡಿಎಂಸಿ ಅಧ್ಯಕ್ಷ ಹನುಮಂತಪ್ಪ ಪೂಜಾರ, ಸದಸ್ಯ ಬಾಷಾ, ಬಿಸ್ಮಿಲ್ಲ ಸೇರಿದಂತೆ ಅನೇಕರು ಉಪಸ್ಥಿತರಿದ್ದರು.

ಶಿವಾಜಿ ಧೈರ್ಯ, ಸಾಹಸ ಮೈಗೂಡಿಸಿಕೊಳ್ಳಿ

ವಿಜಯಪುರ: ಶಿವಾಜಿ ಮಹಾರಾಜರ ಧೈರ್ಯ, ಶೌರ್ಯ ಹಾಗೂ ಪರಾಕ್ರಮ, ಸಾಹಸಗಳನ್ನು ಇಂದಿನ ಯುವಕರು ಮೈಗೂಡಿಸಿಕೊಳ್ಳಬೇಕು ಎಂದು ಅಪರ ಜಿಲ್ಲಾಧಿಕಾರಿ ಡಾ.ಔದ್ರಾಮ ಹೇಳಿದರು.

ನಗರದ ಕಂದಗಲ್ ಹನಮಂತ್ರಾಯ ರಂಗಮಂದಿರದಲ್ಲಿ ಜಿಲ್ಲಾಡಳಿತ, ಜಿಲ್ಲಾ ಪಂಚಾಯಿತಿ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಆಶ್ರಯದಲ್ಲಿ ಗುರುವಾರ ಹಮ್ಮಿಕೊಂಡ ಛತ್ರಪತಿ ಶಿವಾಜಿ ಮಹಾರಾಜರ ಜಯಂತಿ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು. ಶಿವಾಜಿ ಮಹಾರಾಜ ಸ್ವರಾಜ ಪಡೆಯುತ್ತೇವೆ ಎಂಬದನ್ನು ಪ್ರತಿಪಾದಿಸಿದ್ದರು. ಶತ್ರುಗಳು ಎಷ್ಟೆ ಬಲಿಷ್ಟವಾಗಿದ್ದರು ಅವರನ್ನು ಎದೆಗುಂದದೆ ಎದುರಿಸಿ ಗೆಲ್ಲುವ ಶಕ್ತಿ ನಮ್ಮಲ್ಲಿ ಇರಬೇಕು. ಸಾರ್ವಜನಿಕರ ಬೆಳವಣಿಗೆಯೆ ನಮ್ಮ ರಾಜ ಧರ್ಮ ಎಂದು ತಿಳಿಸಿದವರು ಎಂದರು.

ವ್ಹಿ.ಬಿ. ದರಬಾರ ಪದವಿ ಮಹಾವಿದ್ಯಾಲಯದ ಉಪನ್ಯಾಸಕ ಕಾಶಿನಾಥ ಕೋಣೇನವರ ಉಪನ್ಯಾಸ ನೀಡಿ, ಶಿವಾಜಿ ಅವರಿಗೆ ಪೂರ್ಣಪ್ರಮಾಣದ ಯುದ್ಧ ಕೌಶಲವನ್ನು ಧಾರೆ ಎರೆದವರು ದಾದಾಜಿ ಕೊಂಡದೇವ. ಕತ್ತಿವರಸೆ, ಕುದುರೆ ಸವಾರಿ, ಯುದ್ಧಕಲೆಗಳನ್ನು ಕರಗತ ಮಾಡಿಕೊಂಡ



ಶಿವಾಜಿ ತನ್ನ 17ನೇ ವಯಸ್ಸಿಗೆ ತೋರಣದುರ್ಗ ವಶಪಡಿಸಿಕೊಂಡು ಮಹತ್ವಾಕಾಂಕ್ಷೆಯ ಹೆಜ್ಜೆಗಳನ್ನು ಇಡಲು ಆರಂಭಿಸಿದ್ದರು ಎಂದರು. ಮಹಾನಗರ ಪಾಲಿಕೆ ಉಪ ಆಯುಕ್ತ ಮಹಾವೀರ ಬೋರಣ್ಣವರ ಮಾತನಾಡಿದರು. ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕರಾದ ಸಂತೋಷ ಬೋವಿ ಸ್ವಾಗತಿಸಿದರು.

ಇದಕ್ಕೂ ಮುನ್ನ ಬೆಳಗ್ಗೆ ನಗರದ ಸಿದ್ದೇಶ್ವರ ದೇವಸ್ಥಾನದ ಆವರಣದಲ್ಲಿ ಮಹಾನಗರ ಪಾಲಿಕೆ ಮೇಯರ್ ಸಿದ್ರಾಮಪ್ಪ ಕರಡಿ ಅವರು ಶಿವಾಜಿ ಮಹಾರಾಜರ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಿ ಮೆರವಣಿಗೆಗೆ ಚಾಲನೆ ನೀಡಿದರು. ಜಿಲ್ಲಾಧಿಕಾರಿ ಡಾ. ಆನಂದ ಕೆ., ಜಿಪಂ ಸಿಇಒ ರಿಷಿ ಆನಂದ, ಎಸ್ಪಿ ಲಕ್ಷ್ಮಣ ನಿಂಬರಗಿ, ಪಾಲಿಕೆ ಸದಸ್ಯ ರಾಹುಲ್ ಜಾಧವ, ಜಿಲ್ಲಾ ಪಂಚಾಯತ ಮುಖ್ಯ ಲೆಕ್ಕಾಧಿಕಾರಿ ರಾಮಣ್ಣ ಅಥಣಿ, ಮಹಾನಗರ ಪಾಲಿಕೆ ಆಯುಕ್ತ ವಿಜಯ ಮೆಕ್ಕಳಕಿ, ವಿಜಯಕುಮಾರ ಚವ್ಹಾಣ, ಅಡಿವೆಪ್ಪ ಸಾಲಗಲ್ಲ ಇದ್ದರು.

ಸಾರ್ವಜನಿಕ ಸ್ಥಳದಲ್ಲಿ ಆಯುಧ ಪ್ರದರ್ಶನ: ವ್ಯಕ್ತಿ ಬಂಧನ

ಬೆಳಗಾವಿ: ನಗರದಲ್ಲಿ ಇತ್ತೀಚಿನ ದಿನಗಳಲ್ಲಿ ಸ್ನಾಚಿಂಗ್ ಪ್ರಕರಣಗಳು ಹೆಚ್ಚಾಗುತ್ತಿರುವುದರಿಂದ ಶಾಂತಿ ಸುವ್ಯವಸ್ಥೆ ಕಾಪಾಡುವ ದೃಷ್ಟಿಯಿಂದ ಸಂಶಯಾಸ್ಪದ ವ್ಯಕ್ತಿಗಳನ್ನು ಪರಿಶೀಲನೆ ಮಾಡುತ್ತಿರುವಾಗ ಬೆಳಗಾವಿಯ ಅಶೋಕ ನಗರದ ಹೈವೇ ಅಂಡರ್ ಪಾಸ್ ಹತ್ತಿರ ಸಾರ್ವಜನಿಕ ಸ್ಥಳದಲ್ಲಿ ಆಯುಧ ಹೊಂದಿದ ವ್ಯಕ್ತಿಯನ್ನು ಪೊಲೀಸರು ವಶಕ್ಕೆ ಪಡೆದುಕೊಂಡಿದ್ದಾರೆ. ಆರೋಪಿಯಾದ ಪಾರುಖ ರೆಹಮಾನ್ ಚಜ್ಜು (35) ಬಂಧಿತ ವ್ಯಕ್ತಿ. ಸಾರ್ವಜನಿಕರಲ್ಲಿ ಭಯ ಹುಟ್ಟಿಸುವುದಕ್ಕಾಗಿ ಇನ್ನಾವುದೋ ಕೃತ್ಯದಲ್ಲಿ ಭಾಗಿಯಾಗುವ ಉದ್ದೇಶದಿಂದ ಇಟ್ಟಿದ್ದ ಹರಿತವಾದ ಅಪಾಯಕಾರಿ ತಲ್ವಾರ್‌ನ್ನು ಜಳಪಿಸುತ್ತಾ ತಿರುಗುತ್ತಿದ್ದಾಗ ಆಯುಧವನ್ನು ಜಪ್ತಪಡಿಸಿಕೊಳ್ಳಲಾಗಿದೆ. ಆರೋಪಿ ವಿರುದ್ಧ ಮಾಳಮಾರುತಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಿಸಿಕೊಂಡು ಕಾನೂನು ಕ್ರಮ ಜರುಗಿಸಿ, ಪ್ರಕರಣದ ತನಿಖೆ ಕೈಗೊಳ್ಳಲಾಗಿದೆ.

ಮೋಸ ಮಾಡಿ ಪರಾರಿಯಾಗಿದ್ದ ಹಜರತ್ ಮೌಲ್ವಿ ಬಂಧನ

ಗದಗ: ನಿಧಿ ಹುಡುಕಿ ಕೊಡುವುದಾಗಿ ಹೇಳಿ ಜನರನ್ನು ನಂಬಿಸಿ, ಹಣ ಪಡೆದುಕೊಂಡು ಮೋಸ ಮಾಡಿ ಪರಾರಿಯಾಗಿದ್ದ ಹಜರತ್ ಮೌಲ್ವಿ ಎಂಬುವವನ್ನು ಉತ್ತರಖಂಡದ ಕಾಶಿಪುರದಿಂದ ಬಂಧಿಸಿ ಕರೆ ತರಲಾಗಿದೆ ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ರೋಹನ್ ಜಗದೀಶ್ ತಿಳಿಸಿದ್ದಾರೆ. ನಗರದ ಜಿಲ್ಲಾ ಪೊಲೀಸ್ ಕಚೇರಿಯಲ್ಲಿ ಶುಕ್ರವಾರ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಧಾರವಾಡದ ಬಷೀರಾ ಬಾನು ಎಂಬುವರಿಗೆ ಹಜರತ್ ಮೌಲ್ವಿ ನಿಧಿ ಆಸೆ ತೋರಿಸಿ ಅವರಿಂದ ಹಂತ ಹಂತವಾಗಿ 22 ಲಕ್ಷ ಪಡೆದು ವಂಚಿಸಿದ್ದಾನೆ ಎಂದು ಗದಗ ಗ್ರಾಮೀಣ ಪೊಲೀಸ್ ಠಾಣೆಯಲ್ಲಿ ಫೆ.12ರಂದು ಪ್ರಕರಣ ದಾಖಲಾಗಿತ್ತು. ಇದರ ಜಾಡು ಹಿಡಿದು ಹೊರಟ ಪೊಲೀಸರಿಗೆ ಜನರ ಅಸಹಾಯಕತೆಯನ್ನೇ ಬಂಡವಾಳ ಮಾಡಿಕೊಂಡು ಮೋಸ ಮಾಡುವ ಹಜರತ್ ಮೌಲ್ವಿ ಚತುರ ನಡೆಗಳು ಗೋಚರಿಸಿವೆ. ಅವುಗಳನ್ನು ಒಂದೊಂದಾಗಿ ಭೇದಿಸುತ್ತಾ ಹೋದ ಗದಗ ಪೊಲೀಸರು ಅಂತಿಮವಾಗಿ ಕಾಶಿಪುರದಿಂದ ಹಜರತ್ ಮೌಲ್ವಿಯನ್ನು ಬಂಧಿಸಿ ಕರೆತಂದಿದ್ದಾರೆ.ಸ

ಕೇರಳಕ್ಕೆ ಸಾಗಿಸುತ್ತಿದ್ದ 31 ಗೋವುಗಳ ರಕ್ಷಣೆ



ಮುನಿರಾಬಾದ್: ಹಿಟ್ನಾಳ್ ಟೋಲ್ ಪ್ಲಾಜಾ ಬಳಿ ಶುಕ್ರವಾರ ಬೆಳಗಿನ ಜಾವ ಅಕ್ರಮವಾಗಿ ಸಾಗಾಟ ಮಾಡುತ್ತಿದ್ದ ಬರೋಬ್ಬರಿ 31 ಗೋವುಗಳನ್ನು ಹಿಂದೂ ಪರ ಸಂಘಟನೆಯ ಕಾರ್ಯಕರ್ತರು ಪತ್ತೆ ಹಚ್ಚಿ ಪೊಲೀಸರಿಗೆ ಒಪ್ಪಿಸಿದ ಘಟನೆ ನಡೆದಿದೆ.

ಘಟನೆಯ ವಿವರ: ವಿಜಯಪುರ ಜಿಲ್ಲೆಯ ದೇವರಹಿಪ್ಪರಗಿಯಿಂದ ಕೇರಳದತ್ತ ರಾಷ್ಟ್ರೀಯ ಹೆದ್ದಾರಿ 50ರ ಮೂಲಕ ಗೋವುಗಳನ್ನು ಸಾಗಿಸಲಾಗುತ್ತಿತ್ತು. ಈ ಕುರಿತು ಖಚಿತ ಮಾಹಿತಿ ಪಡೆದ ಹಿಂದೂ ಪರ ಸಂಘಟನೆಯ ಮುಖಂಡ ಪುನೀತ್ ಕೆರೆಹಳ್ಳಿ ನೇತೃತ್ವದ ತಂಡ, ಕೊಪ್ಪಳ ತಾಲೂಕಿನ ಹಿಟ್ನಾಳ್ ಟೋಲ್ ಪ್ಲಾಜಾ ಬಳಿ ಲಾರಿಯನ್ನು ತಡೆದು ತಪಾಸಣೆ ನಡೆಸಿದೆ.

ಒಂದೇ ಕಂಟೇನರ್‌ನಲ್ಲಿ 31 ಗೋವುಗಳು

ಬೃಹತ್ ಕಂಟೇನರ್ ಲಾರಿಯಲ್ಲಿ ಅತ್ಯಂತ ಅಮಾನವೀಯವಾಗಿ ಉಸಿರುಗಟ್ಟುವ ಸ್ಥಿತಿಯಲ್ಲಿ ಒಟ್ಟು 31 ಗೋವುಗಳನ್ನು ತುಂಬಲಾಗಿತ್ತು. ಮೇವು ಮತ್ತು ನೀರಿನ ವ್ಯವಸ್ಥೆಯಿಲ್ಲದೆ ಕಂಟೇನರ್‌ನಲ್ಲಿ ತುರುಕಲಾಗಿದ್ದ ಈ ಗೋವುಗಳನ್ನು ಕಂಡು ಕಾರ್ಯಕರ್ತರು ಆಕ್ರೋಶ ವ್ಯಕ್ತಪಡಿಸಿದರು.

ಸ್ಥಳಕ್ಕೆ ಮುನಿರಾಬಾದ್ ಪೊಲೀಸರು ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ. ಸದ್ಯ ಲಾರಿ ಮತ್ತು ಗೋವುಗಳನ್ನು ವಶಕ್ಕೆ ಪಡೆಯಲಾಗಿದ್ದು, ಗೋವುಗಳನ್ನು ಸುರಕ್ಷಿತವಾಗಿ ಸಮೀಪದ ಗೋಶಾಲೆಗೆ ರವಾನಿಸಲಾಗಿದೆ. ಈ ಸಂಬಂಧ ಮುನಿರಾಬಾದ್ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಗುತ್ತಿಗೆದಾರರ ಸಂಘದ ರಾಜ್ಯಾಧ್ಯಕ್ಷ ಮಂಜುನಾಥ ಹೇಳಿಕೆ

ಮಾ.6ಕ್ಕೆ ಬೆಂಗಳೂರಿನಲ್ಲಿ ಹೋರಾಟಕ್ಕೆ ಕರೆ

ಕೊಪ್ಪಳ: ರಾಜ್ಯದ ಸುಮಾರು 1.50 ಲಕ್ಷ ಗುತ್ತಿಗೆದಾರ ಬರೋಬ್ಬರಿ 37 ಸಾವಿರ ಕೋಟಿ ರೂ. ಬಿಲ್ ಬಾಕಿ ಇದೆ. ರಾಜ್ಯ ಸರಕಾರ ಕೂಡಲೇ ಬಿಲ್ ಪಾವತಿ ಮಾಡಬೇಕು ಎಂದು ಆಗ್ರಹಿಸಿ ಮಾ.6 ರಂದು ಬೆಂಗಳೂರಿನ ಫ್ರೀಡಂ ಪಾರ್ಕ್ ನಲ್ಲಿ ಹೋರಾಟ ಮಾಡುತ್ತಿದ್ದೇವೆ. ಕನಿಷ್ಠ 25 ಸಾವಿರ ಗುತ್ತಿಗೆದಾರರು ಹೋರಾಟದಲ್ಲಿ ಭಾಗವಹಿಸಲಿದ್ದಾರೆ ಎಂದು ಗುತ್ತಿಗೆದಾರರ ಸಂಘದ ರಾಜ್ಯಾಧ್ಯಕ್ಷ ಮಂಜುನಾಥ ಹೇಳಿದರು.

ಕೊಪ್ಪಳದಲ್ಲಿ ಸುದ್ದಿಗೋಷ್ಠಿಯಲ್ಲಿ ಶುಕ್ರವಾರ ಮಾತನಾಡಿ, ಮಾ.6 ರಂದು ರಾಜ್ಯಾದ್ಯಂತ ಎಲ್ಲ ಕಡೆ ಕೆಲಸ ಸ್ಥಗಿತ ಮಾಡಿ, ಹೋರಾಟ ಮಾಡುತ್ತೇವೆ. ಏಪ್ರೀಲ್ ತಿಂಗಳ ಒಳಗೆ ಬಿಲ್ ಪಾವತಿ ಮಾಡಬೇಕು. ಇಲ್ಲವಾದರೆ ಕುಟುಂಬ ಸಮೇತ ಅನಿರ್ಧಿಷ್ಟಾವಧಿ ಧರಣಿ ಆರಂಭಿಸುತ್ತೇವೆ ಎಂದು ಎಚ್ಚರಿಕೆ ನೀಡಿದರು.

ಸಂಘದ ಹಿಂದಿನ ಅಧ್ಯಕ್ಷ ಕೆಂಪಣ್ಣ ಅವರ ನೆರವಿನಿಂದ ಕಾಂಗ್ರೆಸ್ ಅಧಿಕಾರಕ್ಕೆ ಬಂದಿದೆ. ನಮ್ಮ ಪತ್ರ, ಬೇಡಿಕೆಗೆ ಈಗ ಬೆಲೆ ಇಲ್ಲದಾಗಿದೆ. ನಮ್ಮನ್ನು ಬಳಸಿಕೊಂಡು ಅಧಿಕಾರಕ್ಕೆ ಬಂದಿರುವ ಕಾಂಗ್ರೆಸ್ ಗುತ್ತಿಗೆದಾರರನ್ನು ಮರೆತಿದ್ದಾರೆ. ರಾಜ್ಯದ ಎಲ್ಲ ಜಿಲ್ಲೆಯಲ್ಲಿ ಗುತ್ತಿಗೆದಾರರು ಸಂಕಷ್ಟದಲ್ಲಿದ್ದಾರೆ. ಮನೆ, ಚಿನ್ನಾಭರಣ ಅಡವಿಟ್ಟಿದ್ದಾರೆ. ದಿವಾಳಿ ಆಗುತ್ತಿದ್ದಾರೆ. ಹಿಂದೆ ಇದ್ದ ಸಿಎಂಗಳು ನಿಗದಿತ ಸಮಯಕ್ಕೆ ಸಭೆ ಮಾಡುತ್ತಿದ್ದರು. ಸಿಎಂ ಸಿದ್ದರಾಮಯ್ಯ ಸಭೆ ನಡೆಸುತ್ತಿಲ್ಲ, ಅನಿರ್ಧಿಷ್ಟಾವಧಿಗೆ ಮುಂದೂಡುತ್ತಿದ್ದಾರೆ. ಎಲ್ಲಿ ನಮಗೆ ಹಣ ಕೊಡಬೇಕಾಗುತ್ತದೆ ಎಂದು ಜಾರಿಕೊಳ್ಳುತ್ತಿದ್ದಾರೆ ಎಂದು ಆಕ್ರೋಶ ಹೊರ ಹಾಕಿದರು.

ಪ್ಯಾಕೇಜ್ ಟೆಂಡರ್ ಹೊರ ರಾಜ್ಯದ ಗುತ್ತಿಗೆದಾರರಿಗೆ ಕೊಡುತ್ತಾರೆ. ಒಂದು ಕೋಟಿ ರೂ. ಮೇಲೆ ಪ್ಯಾಕೇಜ್ ಮಾಡಬಾರದೆಂದು ಕಾನೂನಿದೆ. ಆದರೂ ಸಿಎಂ ಅನುಮೋದನೆ ಕೊಡುತ್ತಿದ್ದಾರೆ. ಅವರೇ ವಿಪಕ್ಷ ನಾಯಕರಾಗಿದ್ದಾಗ ಇದನ್ನು ವಿರೋಧಿಸಿದ್ದರು. ಈಗ ಅವರೇ ಮಾಡುತ್ತಿದ್ದಾರೆ. ಇದು ಹಣಕಾಸು ವಿಷಯ. ನಾವು ಕೋರ್ಟ್ ಗೆ ಹೋಗಲಿ ಎಂದು ಅವರು ಹೇಳುವುದು ತಪ್ಪು. ಈಗಲೂ ಕಮಿಷ್ ಇದೆ. ಅದನ್ನು ನಿರ್ಮೂಲನೆ ಮಾಡಲು ಸಾಧ್ಯವಿಲ್ಲ, ಹಳೇ ಬಿಲ್‌ಗೆ ಈಗಿರುವ ಸರ್ಕಾರದಲ್ಲಿ ಮೊದಲಿಗಿಂತ ಹೆಚ್ಚು ಕಮಿಷನ್ ತೆಗೆದುಕೊಳ್ಳುತ್ತಾರೆ ಎಂದು ದೂರಿದರು.

ಸರ್ಕಾರದ ವಿರುದ್ಧ ನಮ್ಮ ಸಂಘರ್ಷ ಇಲ್ಲ, ಸಚಿವ, ಸಿಎಂ ವಿರುದ್ಧ ಮಾತನಾಡುವುದಿಲ್ಲ, ಪ್ರತಿಭಟನೆ ಮೂಲಕ ನಮ್ಮ ಬೇಡಿಕೆ ಈಡೇರಿಸಿಕೊಳ್ಳುತ್ತೇವೆ. ಕಾರ್ಮಿಕ ಇಲಾಖೆಯಲ್ಲಿ 10 ಜಿಲ್ಲೆ ನಡುವೆ 700 ಕೋಟಿ ರೂ.ಗೆ ಟೆಂಡರ್ ಮಾಡಿದ್ದಾರೆ. ಸಿಎಂ ಅನುಮೋದನೆ ನೀಡಿದ್ದಾರೆ ಎಂದು ಆರೋಪಿಸಿದರು.

ಸುರೇಶ ಭೂಮರಡ್ಡಿ, ದೇವಪ್ಪ ಅರಕೇರಿ, ಜಗದೀಶ, ಮಧುಸೂದನ್, ಯಮನೂರಪ್ಪ ನಡುವಿನಮನಿ, ಕೃಷ್ಣಾ ಇಟ್ಟಂಗಿ ಇದ್ದರು.

ರೈತರಿಂದ ಸಲಿಕೆ ಹಿಡಿದು ವಿನೂತನ ಪ್ರತಿಭಟನೆ

ಭತ್ತದ ಬೆಳೆಗೆ ನೀರು ಹರಿಸಲು ಆಗ್ರಹ

ಯಾದಗಿರಿ: ಸಾಲಶೂಲ ಮಾಡಿ ಭತ್ತ ಬೆಳೆದ ಬಡ ರೈತರು ಈಗ ಕಂಗಲಾಗಿದ್ದಾರೆ. ನೀರಿನ ಮೂಲಗಳು ಬತ್ತಿ ಹೋದ ಹಿನ್ನಲೆ ಭತ್ತದ ಬೆಳೆಗೆ ನೀರು ಹರಿಸಿಕೊಳ್ಳಲು ಸಾಧ್ಯವಾಗದೇ ಭತ್ತದ ಬೆಳೆಗಳು ಒಣಗುವ ಆತಂಕದಲ್ಲಿದ್ದಾರೆ. ಕೂಡಲೇ ಕಾಲುವೆಗೆ ನೀರು ಹರಿಸಿ ರೈತರ ಬೆನ್ನಿಗೆ ನೀಲಬೇಕು ಎಂದು ಅಖಿಲ ಭಾರತೀಯ ಕೋಲಿ ಸಮಾಜ ರಾಜ್ಯ ಸಂಘಟನಾ ಕಾರ್ಯದರ್ಶಿ ಉಮೇಶ್ ಮುದ್ನಾಳ ನೇತೃತ್ವದಲ್ಲಿ ರೈತರು ಕೈಯಲ್ಲಿ ಸಲಿಕೆ ಹಿಡಿದು ವಿನೂತನ ಪ್ರತಿಭಟನೆ ಮೂಲಕ ಸರ್ಕಾರಕ್ಕೆ ಒತ್ತಾಯಿಸಿದರು.

ನಗರದ ಹೊರವಲಯದಲ್ಲಿರುವ ಬ್ರಿಡ್ಜ್ ಕಂ ಬ್ಯಾರೇಜಿನ ಗೇಟ್‌ಗಳು ತುಕ್ಕು ಹಿಡಿದು ಎಲ್ಲ ನೀರು ಸೋರಿಕೆಯಾಗಿರುವ ಹಿನ್ನೆಲೆಯಲ್ಲಿ ಗಂಗಾನಗರದ ರೈತರ ಭತ್ತ ಒಣಗುವ ಸ್ಥಿತಿಯಲ್ಲಿವೆ. ಹಳ್ಳವು ಸಂಪೂರ್ಣವಾಗಿ ಬತ್ತಿ ಹೋದ ಹಿನ್ನೆಲೆ ಹಳ್ಳದಿಂದ ರೈತರು ಜಮೀನಿಗೆ ನೀರು ಹರಿಸಿಕೊಳ್ಳಲು ಆಗುತ್ತಿಲ್ಲ, ಸುಮಾರು 500 ಎಕರೆ ಭತ್ತ ಮತ್ತು ತರಕಾರಿ ಬೆಳೆಯು ಒಣಗುವ ಪರಿಸ್ಥಿತಿ ನಿರ್ಮಾಣವಾಗಿದೆ ಎಂದು ಆರೋಪಿಸಿದರು.

ಹಳ್ಳ ಬತ್ತಿ ಹೋದ ಹಿನ್ನೆಲೆ ಭತ್ತದ ಬೆಳೆಯು ಒಣಗಿ ರೈತರು ಆರ್ಥಿಕ ನಷ್ಟ ಅನುಭವಿಸುವ ಪರಿಸ್ಥಿತಿ ನಿರ್ಮಾಣವಾಗುತ್ತಿದೆ. ಸರ್ಕಾರ ತಕ್ಷಣ ಹತ್ತಿಕುಣಿ ಮತ್ತು



ಸೌದಾಗರ ಜಲಾಶಯದಿಂದ ಹಳ್ಳಕ್ಕೆ ನೀರು ಹರಿಸಿ ರೈತರಿಗೆ ಜೀವ ಉಳಿಸಬೇಕಿದೆ. ಇಲ್ಲದಿದ್ದರೆ ರೈತರು ಕೃಷಿ ಬಿಟ್ಟು ಬೆಂಗಳೂರು, ಮುಂಬೈಗೆ ವಲಸೆ ಹೋಗುವಂತಾಗುತ್ತದೆ ಪರಿಸ್ಥಿತಿ ನಿರ್ಮಾಣವಾಗಲಿದೆ ಎಂದರು.

ಸಾಮಾಜಿಕ ಹೋರಾಟಗಾರ ಉಮೇಶ್ ಮುದ್ನಾಳ, ರೈತರಾದ ಚಂದ್ರಾಮ್, ಪವನ್, ಆಂಜನೇಯ, ಬೆಳಗೇರಾ ಯಂಕಪ್ಪ ಭೀಮರಾಯ ಮರೆಪ್ಪ ಮಲ್ಲಪ್ಪ ಹಣಮಂತ ದುರ್ಗಪ್ಪ ರಾಜಪ್ಪ ಗೌಸ್ ಭಾಯ್ ವೈಲಾರಿ ಶಂಕರ್ ಮಲ್ಲೇಶಪ್ಪ ಶಾಕಪ್ಪ ಸಾಯಿಕುಮಾರ ಮಲ್ಲಪ್ಪ ನಾಗಪ್ಪ ಶಿವಣ್ಣ ಶರಣಪ್ಪ ಈಶಪ್ಪ ಸಾಬಣ್ಣ ಲಕ್ಷಣ ಆನಂದ್ ಸ ರಾಜಪ್ಪ ಶರತ್ ಮರಗಪ್ಪ ಅಂಜಪ್ಪ ಸಾಬಣ್ಣ ಜುಂಜಾಲಪ್ಪ ಇದ್ದರು.

ರಾಜ್ಯಕ್ಕೆ ಪ್ರಥಮ ರ್‍ಯಾಂಕ್

ಸಿಂದಗಿ: ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾಲಯ ವಿಜಯಪುರ ಅಡಿ ನಡೆಯುವ ಸಿಂದಗಿ ಪದ್ಮರಾಜ ಮಹಿಳಾ ಪದವಿ ಮಹಾವಿದ್ಯಾಲಯವು 2024-25ನೆಯ ಸಾಲಿನ ಪರೀಕ್ಷೆಯಲ್ಲಿ ವಿಶ್ವವಿದ್ಯಾಲಯ ಕೊಡ ಮಾಡುವ ಹತ್ತು ರ್‍ಯಾಂಕಗಳಲ್ಲಿ ಬಿ.ಎಸ್.ಡಬ್ಲ್ಯೂ ವಿಭಾಗದ ವಿದ್ಯಾರ್ಥಿನಿಯರಾದ ಮೀನಾಜ ಗೋಲಗೇರಿ ರಾಜ್ಯಕ್ಕೆ ಪ್ರಥಮ ರ್‍ಯಾಂಕ್, ರೀಯಾನಬೇಗಂ ಬಂಕಲಗಿ ನಾಲ್ಕನೆಯ ರ್‍ಯಾಂಕ್ ಪಡೆದುಕೊಂಡು ಮಹಾವಿದ್ಯಾಲಯದ ಕೀರ್ತಿಯನ್ನು ಹೆಚ್ಚಿಸಿದ್ದಾರೆ.





ವಿದ್ಯಾರ್ಥಿನಿಯರ ಕಠಿಣ ಪರಿಶ್ರಮ, ಕಾಲೇಜಿನ ಉಪನ್ಯಾಸಕರ ಅತ್ಯುತ್ತಮ ಭೋಧನೆ ರ್‍ಯಾಂಕ್‌ಗಳನ್ನು ಪಡೆದುಕೊಳ್ಳಲು ಸಾಧ್ಯವಾಗಿದೆ ಎಂದು ಶ್ರೀಪದ್ಮರಾಜ ವಿದ್ಯಾವರ್ಧಕ ಸಂಸ್ಥೆಯ ಚೇರಮನ್ ಡಾ.ಪ್ರಭುಸಾರಂಗದೇವ ಶಿವಾಚಾರ್ಯರು ಹಾಗೂ ಉತ್ತರಾಧಿಕಾರಿಗಳಾದ ಡಾ.ವಿಶ್ವಪ್ರಭುದೇವ ಶಿವಾಚಾರ್ಯರು ಪ್ರತಿಕ್ರಿಯಿಸಿ, ವಿದ್ಯಾರ್ಥಿನಿಯರಿಗೆ ಶುಭ ಹಾರೈಸಿದ್ದಾರೆ. ವಿದ್ಯಾರ್ಥಿನಿಯರ ಈ ಸಾಧನೆಗೆ ಸಂಸ್ಥೆಯ ಆಡಳಿತ ಮಂಡಳಿಯ ನಿರ್ದೇಶಕರು, ಪ್ರಾಚಾರ್ಯರು, ಸೇರಿದಂತೆ ಕಾಲೇಜಿನ ಬೋಧಕ-ಬೋಧಕೇತರ ಸಿಬ್ಬಂದಿಗಳು ವಿದ್ಯಾರ್ಥಿನಿಯರಿಗೆ ಶುಭ ಕೋರಿದ್ದಾರೆ.

ಮಂತ್ರಕ್ಕೆ ಜೀವನ ಬದಲಾಯಿಸುವ ಶಕ್ತಿಯಿದೆ

ಲೋಕಾಪುರ: ಗುರುರಾಯರ ಸ್ಮರಣೆ ಮತ್ತು ಅವರ ಸ್ತೋತ್ರಗಳ ಪಠಣದಿಂದ ಶಾಂತಿ ಮತ್ತು ಜ್ಞಾನ ಲಭಿಸುತ್ತದೆ. ಮಂತ್ರಗಳು ಕೂಡ ಸಾಕಷ್ಟು ಶಕ್ತಿ ಹೊಂದಿರುತ್ತವೆ. ಮಂತ್ರಗಳು ನಮ್ಮ ಜೀವನವನ್ನೇ ಬದಲಾಯಿಸುವ ಶಕ್ತಿ ಇದೆ ಎಂದು ಬಾಗಲಕೋಟೆ ಪ್ರವಚನಕಾರ ಆದಿಶೇಷ ಯಲಗೂರ ಹೇಳಿದರು.

ಪಟ್ಟಣದ ರಾಘವೇಂದ್ರ ಸ್ವಾಮಿಗಳ ಮಠದಲ್ಲಿ ಗುರುರಾಯರ 405ನೇ ಪಟ್ಟಾಭಿಷೇಕ ನಿಮಿತ್ತ ನಡೆದ ಪ್ರವಚನದಲ್ಲಿ ಮಾತನಾಡಿದ ಅವರು, ಮಂತ್ರಗಳನ್ನು ಪಠಿಸುವುದರಿಂದ ಮನೆಯಲ್ಲಿ ಶಾಂತಿ ಮತ್ತು ಸಂತೋಷ ಇರುತ್ತದೆ. ನೀವು ಎಲ್ಲಾ ತೊಂದರೆಗಳಿಂದ ಮುಕ್ತರಾಗುತ್ತೀರಿ. ಮಂತ್ರಗಳ ಪಠಣವು ದೇವರು ಮತ್ತು ದೇವತೆಗಳನ್ನು ಸಂತೋಷಪಡಿಸುವುದಲ್ಲದೆ ಅದರಿಂದ ನಕಾರಾತ್ಮಕತೆ ತೆಗೆದುಹಾಕುತ್ತದೆ. ಒತ್ತಡ-ಮುಕ್ತ ಜೀವನ ಮತ್ತು ತೊಂದರೆಗಳಿಂದ ಮುಕ್ತಿಗಾಗಿ ಕೆಲವೊಂದು ಮಂತ್ರ ಪಠಿಸುವುದು ಪರಿಣಾಮಕಾರಿ ಎಂದು ಪರಿಗಣಿಸಲಾಗುತ್ತದೆ ಎಂದರು.

ಬೆಳಗ್ಗೆ ರಾಘವೇಂದ್ರ ಸ್ವಾಮಿಗಳ ಭಾವಚಿತ್ರ ಮೆರವಣಿಗೆ ವಿವಿಧ ಬಡಾವಣೆಗಳಲ್ಲಿ



ಸಂಚರಿಸಿ, ಮಠಕ್ಕೆ ಬಂದು ತಲುಪಿತು. ನಂತರ ವಿವಿಧ ಧಾರ್ಮಿಕ ಕಾರ್ಯಕ್ರಮಗಳಿಗೆ ಚಾಲನೆ ದೊರೆಯಿತು. ರಾಘವೇಂದ್ರ ಸ್ವಾಮಿಗಳ ಅಷ್ಟೋತ್ರ, ಪಲ್ಲಕ್ಕಿ ಸೇವೆ, ಅಲಂಕಾರ, ತೀರ್ಥ ಪ್ರಸಾದ, ರಥೋತ್ಸವ ವೇಳೆ ಮಹಿಳೆಯರ ಕೋಲಾಟ, ಯುವಕರ ಭಜನೆ, ವಿವಿಧ ವಾದ್ಯಮೇಳಗಳೊಂದಿಗೆ ಸಂಭ್ರಮದಿಂದ ನಡೆಯಿತು.

ವಿಪ್ರ ಸಮಾಜದ ಮುಖಂಡರಾದ ಶೈಲೇಶಾಚಾರ್ಯ ಗೋಠೆ, ಸುಶೀಲೇಂದ್ರಚಾರ್ಯ ಗೋಠೆ, ಬಿ.ಎಲ್.ಬಬಲಾದಿ, ಬಿ.ಡಿ.ಚಿನಗುಂಡಿ, ಕಾರ್ಯದರ್ಶಿ ಲಕ್ಷ್ಮೀಕಾಂತ ದೇಶಪಾಂಡೆ, ವೆಂಕಟೇಶ ಕಟ್ಟಿ, ಭೀಮಣ್ಣಾ ಜೋಶಿ, ಗೋವಿಂದ ಕುಲಕರ್ಣಿ, ನಿವೃತ್ತ ಶಿಕ್ಷಕ ಪ್ರಲ್ಹಾದ ದೇಶಪಾಂಡೆ, ಅಣ್ಣಾರಾವ ದೇಶಪಾಂಡೆ, ವಿಜಯಕುಮಾರ ದೇಶಪಾಂಡೆ, ಅರ್ಚಕ ಆನಂದಚಾರ್ಯ ಜಂಬಗಿ, ಸಂತೋಷ ದೇಶಪಾಂಡೆ, ಪ್ರವೀಣ ಸೋಮಾಪುರ, ಅಪ್ಪಾರಾವ ದೇಶಪಾಂಡೆ, ವಾದಿರಾಜ ಕುಲಕರ್ಣಿ, ಸಮೀರ ಜೋಶಿ, ಜಯತೀರ್ಥ ಜೋಶಿ, ರಾಹುಲ ಗೂಡುರ, ಸುಶೀಲೇಂದ್ರ ದೇಶಪಾಂಡೆ, ರಾಘವೇಂದ್ರ ಸೇವಾ ಸಮಿತಿ, ಗುರು ಸಾರ್ವಭೌಮ ಯುವಕಮಂಡಳ ಹಾಗೂ ಗಾಯತ್ರಿ ಭಜನಾ ಮಂಡಳದ ಸರ್ವ ಸದಸ್ಯರು ಇದ್ದರು.

CHANGE OF NAME

I, **NIKITHA N BANAKAR** (old name) Resident of 34/1, Veerapur Oni, Near Mahabaleshwar Temple, Konnur Chawl, Hubli, Dharwad, State: Karataka, Pin Code: 580020, have changed my name as **NIKITHA BANAKAR** (new name) henceforth I will be called and recognized by new name for all future purposes, dated: 20/02/2026.

CHANGE OF NAME

I, **AMINABI BALLARY** (old name) Resident of Sonapur 4th Cross, Ward 4 Dharwad, K C Park Dharwad, K.C. Park, Hubli, Dharwad, State: Karnataka, Pin Code: 580008 have changed my name as **AMINABI MEHABOOB JAVALI** (new name) henceforth I will be called and recognized by new name for all future purposes, dated: 20/02/2026.

CHANGE OF NAME

I, **ANJALI SUNIL MAGAJIKONDI** (old name) Resident of Rajeshwari Nagar, Behind Girls College, 1st Cross 2nd Stage, Ranebennur, Dist: Haveri - 581115, Karnataka, India have changed my name as **ANJALI DEEPAK IRKAL** (new name) henceforth I will be called and recognized by new name for all future purposes, dated: 20/02/2026.

CHANGE OF NAME

I, **SIDDHARTH JADI** (old name) Resident of H No: 30, Ambika Nagar, Rajendra Prasad Colony, Bengeri, Keshwapur, Hubballi - Dharwad City - 580023, Karnataka, India have changed my name as **SIDDHARTH VENKATESH JADI** (new name) henceforth I will be called and recognized by new name for all future purposes, dated: 20/02/2026.

ಕರ್ನಾಟಕ ಗೃಹ ಮಂಡಳಿ

Karnataka Housing Board

3ನೇ ಮಹಡಿ, ಕಾವೇರಿ ಭವನ, ಕೆ. ಜಿ. ರಸ್ತೆ, ಬೆಂಗಳೂರು–560009

ಟೆಂಡರ್ ಪ್ರಕಟಣೆ

(ಕರ್ನಾಟಕ ಸಾರ್ವಜನಿಕ ಸಂಗ್ರಹಣಾ ಪೋರ್ಟಲ್ ಮುಖಾಂತರ)

ಕರ್ನಾಟಕ ಗೃಹ ಮಂಡಳಿಯಲ್ಲಿ ಪೂರ್ವಾರ್ಹತೆ ಪಡೆದಿರುವ ಗುತ್ತಿಗೆದಾರರು ಹಾಗೂ ಪಡೆಯಲು ಇಚ್ಛಿಸುವ ಗುತ್ತಿಗೆದಾರರಿಂದ ಕರ್ನಾಟಕ ಸಾರ್ವಜನಿಕ ಸಂಗ್ರಹಣಾ ಪೋರ್ಟಲ್ ಮೂಲಕ ಈ ಕೆಳಕಂಡ ಕಾಮಗಾರಿಗೆ ಟೆಂಡರ್‌ನ್ನು ಕರೆಯಲಾಗಿದೆ. ವಿವರಗಳು ಕೆಳಕಂಡಂತಿವೆ.

ಕಾಮಗಾರಿಯ ಹೆಸರು: ಮಂಡ್ಯ ಜಿಲ್ಲೆ, ಚಿಕ್ಕಮಂಡ್ಯ ಕೆ.ಹೆಚ್.ಬಿ ಬಡಾವಣೆಯಲ್ಲಿ ಜಂಗಲ್ ಕ್ಲಿಯರೆನ್ಸ್ ಮತ್ತು ಇತರೆ ಅಭಿವೃದ್ಧಿ ಕಾಮಗಾರಿ. **Work Indent :** KHB/2025-26/OW/Work_Indent 715 & IFT No.158/2025-26 Date: 20.02.2026. ಟೆಂಡರ್‌ಗಿಟ್ಟ ಮೊತ್ತ: ರೂ.1,71,94,978/-.

ಬಿಡ್ ಸಲ್ಲಿಸಲು ಕೊನೆಯ ದಿನಾಂಕ ಮತ್ತು ವೇಳೆ: 07.03.2026 ಸಂಜೆ 4.00 ಗಂಟೆಗೆ

ಕಾಮಗಾರಿಗಳ ಬಗ್ಗೆ ಹಾಗೂ ಇನ್ನಿತರ ವಿವರಗಳನ್ನು ಈ ಕೆಳಕಂಡ ವಿಳಾಸದಲ್ಲಿ ಕಛೇರಿಯ ವೇಳೆಯಲ್ಲಿ ಪಡೆಯಬಹುದಾಗಿದೆ. ಕಾರ್ಯಪಾಲಕ ಅಭಿಯಂತರರು, ಕರ್ನಾಟಕ ಗೃಹ ಮಂಡಳಿ, ಕಾವೇರಿ ಭವನ, ಬೆಂಗಳೂರು. ದೂರವಾಣಿ: 080–22273511/ 080–22100077 website: https://kppp.karnataka.gov.in

ಸಹಿ/– ಕಾರ್ಯಪಾಲಕ ಅಭಿಯಂತರರು,
ಕರ್ನಾಟಕ ಗೃಹ ಮಂಡಳಿ, ಬೆಂಗಳೂರು

ವಾ.ಸಾ.ಸಂ.ಇ/ವಾಪ್ರ/5795/ಆಕಾರ್/2025–26

ಕರ್ನಾಟಕ ಸರ್ಕಾರ

ಮೈಸೂರು ಅರಮನೆ ಮಂಡಳಿ

ಕಾರ್ಯನಿರ್ವಾಹಕ ಅಧಿಕಾರಿಗಳ ಕಛೇರಿ, ಮೈಸೂರು. ದೂ. ಸಂಖ್ಯೆ: 0821–2421051 ಫ್ಯಾಕ್ಸ್: 2434425, ಇ–ಮೇಲ್: ddmysorepalace@gmail.com

ಟೆಂಡರ್ ಸಂಖ್ಯೆ: ಕಾನಿಅ/ಮೈಅಮಂ/ಉನಿ/ಸಿವಿಲ್/ಟೆಂಡರ್–07/2025–26 ದಿನಾಂಕ: 16.02.2026

ಟೆಂಡರ್ ಪ್ರಕಟಣೆ

ಕರ್ನಾಟಕ ಸರ್ಕಾರದ ರಾಜ್ಯಪಾಲರ ಪರವಾಗಿ ಉಪ–ನಿರ್ದೇಶಕರು, ಮೈಸೂರು ಅರಮನೆ ಮಂಡಳಿ, ಮೈಸೂರು ಇವರಿಂದ ಮೈಸೂರು ಅರಮನೆಯ ಆವರಣದಲ್ಲಿ ಕಾರ್ಯನಿರ್ವಹಿಸಲು ಖಾಸಗಿ ಭದ್ರತಾ ಸಿಬ್ಬಂದಿಗಳ ಸೇವೆಯನ್ನು ಹೊರಗುತ್ತಿಗೆ ಆಧಾರದ ಮೇಲೆ ಒದಗಿಸುವ ಸಂಬಂಧ ಒಟ್ಟು **ರೂ. 92.00 ಲಕ್ಷಗಳ** ಕೆಲಸಕ್ಕೆ ಮತ್ತು ಮೈಸೂರು ಅರಮನೆಯ ಆವರಣದಲ್ಲಿ ಮಾನವ ಸೇವೆಯನ್ನು ಹೊರಗುತ್ತಿಗೆ ಆಧಾರದ ಮೇಲೆ ಒದಗಿಸುವ ಸಂಬಂಧ **ಒಟ್ಟು ರೂ.260.00 ಲಕ್ಷಗಳ** ಕೆಲಸಕ್ಕೆ ಸೂಕ್ಷ್ಮ ಪ್ರದೇಶಗಳಲ್ಲಿ ಸದರಿ ಕೆಲಸಗಳನ್ನು ನಿರ್ವಹಿಸಿ ಹಾಗೂ ಸದರಿ ಕೆಲಸದಲ್ಲಿ ಅನುಭವವಿರುವ ಅರ್ಹ ಗುತ್ತಿಗೆದಾರರು/ ಏಜೆನ್ಸಿ/ ಸಂಸ್ಥೆಗಳಿಂದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಮೂಲಕ ಮಾತ್ರ ಟೆಂಡರ್ ಆಹ್ವಾನಿಸಲಾಗಿದೆ. ಆಸಕ್ತಿವುಳ್ಳ ಅರ್ಜಿದಾರರು (1) ವಿದ್ಯುನ್ಮಾನ (ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್) ವ್ಯವಸ್ಥೆ ಮುಖಾಂತರ ಟೆಂಡರ್ ಸಲ್ಲಿಸಲು ಕ್ರ.ಸಂ 01 ರ ಕೆಲಸಕ್ಕೆ ಕೊನೆಯ ದಿನಾಂಕ ಮತ್ತು ಸಮಯ: **02.03.2026 16:00 ಗಂಟೆಯವರೆಗೆ** ಮತ್ತು ಕ್ರ.ಸಂ. 02 ರ ಕೆಲಸಕ್ಕೆ ಕೊನೆಯ ದಿನಾಂಕ ಮತ್ತು ಸಮಯ: **17.03.2026 16:00 ಗಂಟೆಯವರೆಗೆ (2)** ಕ್ರ.ಸಂ.01 ರ ಕೆಲಸಕ್ಕೆ ಟೆಂಡರ್ ತೆರೆಯುವ ದಿನಾಂಕ ಮತ್ತು ಸಮಯ: **03.03.2026 16:30** ಗಂಟೆಗೆ ಮತ್ತು ಕ್ರ.ಸಂ.02 ರ ಕೆಲಸಕ್ಕೆ ಟೆಂಡರ್ ತೆರೆಯುವ ದಿನಾಂಕ ಮತ್ತು ಸಮಯ: **18.03.2026 16:30 ಗಂಟೆಗೆ**, ಹೆಚ್ಚಿನ ವಿವರಗಳಿಗೆ **https://kppp.karnataka.gov.in** ಅಂತರ್‌ಜಾಲದಲ್ಲಿ ಅಥವಾ ಈ ಕಛೇರಿಯ ಕೆಲಸದ ವೇಳೆಯ ಎಲ್ಲಾ ದಿನಗಳಂದು ಪಡೆಯಬಹುದು.

ಸಹಿ/– ಉಪನಿರ್ದೇಶಕರು,
ಮೈಸೂರು ಅರಮನೆ ಮಂಡಳಿ, ಮೈಸೂರು

ವಾಸಾಸಂಇ/ಮೈಸೂರು/ಶಿರಡಿ ಸಾಯಿ/1710/2025–26

ಕನಾಟಕ ಸರ್ಕಾರ

ಜಿಲ್ಲಾ ಪಂಚಾಯತ್, ಮೈಸೂರು
ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳ ಕಾರ್ಯಾಲಯ, ಮೈಸೂರು.

ದೂರವಾಣಿ:0821–2529205 ಫ್ಯಾಕ್ಸ್:0821–2435575
ಇ–ಮೇಲ್: dhomysore@gmail.com

ಸಂಖ್ಯೆ: ಸರಬ/14/2025–26 ದಿನಾಂಕ: 13.02.2025

ಇ–ಟೆಂಡರ್ ಪ್ರಕಟಣೆ

2025–26 ನೇ ಸಾಲಿನಲ್ಲಿ ರಾಷ್ಟ್ರೀಯ ಮಲೇರಿಯಾ ನಿರೋಧಕ ಕಾರ್ಯಕ್ರಮಕ್ಕೆ ಅಗತ್ಯ ರಾಸಾಯನಿಕ ಮತ್ತು ಪ್ರಯೋಗ ಶಾಲಾ ಉಪಕರಣಗಳನ್ನು ಖರೀದಿಸುವ ಸಂಬಂಧ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕ ಅಧಿನಿಯಮ 1999–2000 ರಂತೆ ಅಧಿಕೃತ ಸಂಸ್ಥೆಗಳಿಂದ ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಟೆಂಡರನ್ನು ಆಹ್ವಾನಿಸಲಾಗಿದೆ. ಟೆಂಡರ್‌ಗೆ ಸಂಬಂಧಿಸಿದ ಹೆಚ್ಚಿನ ವಿವರಗಳನ್ನು http://eproc.karnataka.gov.in/ ಮೂಲಕ ಪಡೆಯಬಹುದಾಗಿದೆ. ಟೆಂಡರ್ ಅಂದಾಜು ಮೊತ್ತ ರೂ.20.00 ಲಕ್ಷ ಮತ್ತು ಟೆಂಡರ್ ಅಪ್‌ಲೋಡ್ ಮಾಡಲು ದಿನಾಂಕ:–13.02.2026 ರಂದು ಮದ್ಯಾಹ್ನ 03.00 ಗಂಟೆಯಿಂದ ದಿನಾಂಕ:–27.02.2026 ರಂದು ಸಂಜೆ 05.00 ಗಂಟೆಯ ವರೆಗೆ ಸಮಯ ನಿಗದಿಪಡಿಸಲಾಗಿದೆ. ಹೆಚ್ಚಿನ ವಿವರಗಳನ್ನು ಈ ಕಚೇರಿ ವೇಳೆಯಲ್ಲಿ ಅಥವಾ ದೂರವಾಣಿ ಮೂಲಕ ಪಡೆಯಬಹುದಾಗಿದೆ.

ಸಹಿ/– ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳು

DIPR/DDMYS/1685/KSMCA/957/2025-26

ಕರ್ನಾಟಕ ಸರ್ಕಾರ

ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆ, ವಿಜಯನಗರ. ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿಗಳ ಕಛೇರಿ, ಟಿ.ಬಿ.ಡ್ಯಾಂ ರಸ್ತೆ ಎಸ್.ಪಿ. ಕಛೇರಿ ಹಿಂಭಾಗ ಅನೆಕ್ಸ್ ಕಟ್ಟಡ ಹೊಸಪೇಟೆ. ಮೇಲ್: ddwovjnr@gmail.com

ಸಂಖ್ಯೆ:ಜಿ.ಅಂ.ಕ.ಅ.ವಿ/ಟೆಂ.ಪ್ರ/ಸಾ.ಸ/ವ್ಯಾ.ಪ್ರ.ವಾ/ಕುರಿತು/02/2025–26
ದಿನಾಂಕ:–19.02.2026

ಇ–ಪ್ರಕ್ಯೂರ್‌ಮೆಂಟ್‌ನಲ್ಲಿ ಮರು ಟೆಂಡರ್ ಪ್ರಕಟಣೆ

2025–26 ನೇ ಸಾಲಿನ ಸನ್ಮಾನ್ಯ ಶ್ರೀ ವೈ.ಎಂ ಸತೀಶ್, ಮಾನ್ಯ ವಿಧಾನ ಪರಿಷತ್ ಸದಸ್ಯರು, ಬಳ್ಳಾರಿ ರವರ ಶಾಸಕರ ಸ್ಥಳೀಯ ಪ್ರದೇಶಾಭಿವೃದ್ಧಿ ಯೋಜನೆಯಡಿ (ಪರಿಶಿಷ್ಟ ಜಾತಿ ಉಪ ಯೋಜನೆ) ವಿಜಯನಗರ ಜಿಲ್ಲೆಯ ಅರ್ಹ ವಿಕಲಚೇತನರ ಫಲಾನುಭವಿಗಳಿಗೆ ಸಾಧನ ಸಲಕರಣೆಗಳನ್ನು ಖರೀದಿಸಲು ಜಿಲ್ಲಾ ಅಂಗವಿಕಲ ಕಲ್ಯಾಣಾಧಿಕಾರಿಗಳ ಕಛೇರಿಯಿಂದ ಇ–ಟೆಂಡರ್ ಪ್ರಕಟಣೆ.

ಇ–ಪ್ರಕ್ಯೂರ್‌ಮೆಂಟ್‌ನಲ್ಲಿ ಮರು ಟೆಂಡರ್ ಪ್ರಕಟಣೆ

1.ಆನ್ ಲೈನ್‌ನಲ್ಲಿ ಸಲ್ಲಿಸಿದ ಮರು ಟೆಂಡರ್ ಸಂಖ್ಯೆ: DEDASC/2025-26/IND0114/CALL-2. 2.ಮರು ಟೆಂಡರ್ ಪ್ರಕಟಣೆ ದಿನಾಂಕ: **19.02.2026.** 3.ಮರು ಟೆಂಡರ್ ಫಾರಂಅಪ್‌ಲೋಡ್ ಮಾಡಲು ಪ್ರಾರಂಭಿಸುವ ದಿನಾಂಕ: **19.02.2026.** 4.ಮರು ಟೆಂಡರ್ ಫಾರಂಅಪ್‌ಲೋಡ್ ಮಾಡಲುಕೊನೆಯ ದಿನಾಂಕ: **26.02.2026–ಸಂಜೆ–4.00ಕ್ಕೆ.** 5.ತಾಂತ್ರಿಕ ಲಕೋಟೆತೆರೆಯುವ ಸ್ಥಳ, ವೇಳೆ ಮತ್ತು ದಿನಾಂಕ: **ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿಗಳ ಕಛೇರಿ–ಸಂಜೆ–4.10ಕ್ಕೆ 27.02.2026.** 6.ಹಣಕಾಸು ಲಕೋಟೆಯನ್ನು ತೆರೆಯುವ ಸ್ಥಳ, ವೇಳೆ ಮತ್ತು ದಿನಾಂಕ: **ಮಾನ್ಯ ಜಿಲ್ಲಾಧಿಕಾರಿಗಳ ಕಛೇರಿ, ವಿಜಯನಗರ ಜಿಲ್ಲೆ– ಸಂಜೆ–4.30ಕ್ಕೆ 02.03.2026.** 7.ಮರು ಟೆಂಡರ್‌ನೊಂದಿಗೆ ಪಾವತಿಸಬೇಕಾದ ಇ.ಎಂ.ಡಿ ಮೊತ್ತ: **27,816/– (2.5% of 11,12,636/–)**

Interested and eligible bidders can submit their bids through E-procurement portal (http://www.kppp.karnataka.gov.in) only

ಸಹಿ/–ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿಗಳು, ವಿಜಯನಗರ ಜಿಲ್ಲೆ.

ವಾ.ಸಾ.ಸಂ.ಇ/ವಿಜಯನಗರ/2025–26/ಕೆಎಸ್‌ಎಂಸಿಎ/ಆರ್.ಓ.ಸಂಖ್ಯೆ/538

ಕರ್ನಾಟಕ ಸರ್ಕಾರ

ಲೋಕೋಪಯೋಗಿ ಇಲಾಖೆ
ಕಾರ್ಯಪಾಲಕ ಇಂಜಿನಿಯರ್‌ರವರ ಕಛೇರಿ, ಮೈಸೂರು ವಿಭಾಗ, ಮೈಸೂರು.

www:eepwdmys21@gmail.com
ದೂರವಾಣಿ ಸಂಖ್ಯೆ/ಫ್ಯಾಕ್ಸ್ ನಂ: 0821–2420810

ಈ ಕಛೇರಿ ಐಟಂವಾರು ಟೆಂಡರ್ ಪ್ರಕಟಣೆ ಸಂ:34/2025–26 ದಿ:16.02.2026

ಕರ್ನಾಟಕ ರಾಜ್ಯಪಾಲರ ಪರವಾಗಿ ಮೈಸೂರು ಲೋಕೋಪಯೋಗಿ ಇಲಾಖೆ ವಿಭಾಗದ ಕಾರ್ಯಪಾಲಕ ಇಂಜಿನಿಯರ್ ರವರಿಂದ ಈ ವಿಭಾಗದಡಿಯಲ್ಲಿನ ನಂ.2 ವಿಶೇಷ ಉಪ ವಿಭಾಗ, ಮೈಸೂರು ವ್ಯಾಪ್ತಿಯಲ್ಲಿ ಲೆಕ್ಕ ಶೀರ್ಷಿಕೆ–8443 ಠೇವಣಿ ವಂತಿಕೆ ಅಡಿಯಲ್ಲಿ ಅನುಮೋದನೆಯಾದ "ಮೈಸೂರು ಜಿಲ್ಲೆ, ನಂಜನಗೂಡು ತಾಲ್ಲೂಕು, ವರುಣ ವಿಧಾನ ಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ತಗಡೂರು ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆಯ ಕಟ್ಟಡ ನಿರ್ಮಾಣ ಕಾಮಗಾರಿಗೆ" ಸ್ಟ್ಯಾಂಡರ್ಡ್ ಬಿಡ್ ಡಾಕ್ಯುಮೆಂಟ್ ಕೆ.ಡಬ್ಲ್ಯೂ–4ರ ಷರತ್ತು ಮತ್ತು ನಿಯಮಗಳನ್ವಯ ಕರ್ನಾಟಕ ಸಾರ್ವಜನಿಕ ಸಂಗ್ರಹಣಾ ಪಾರದರ್ಶಕ ನಿಯಮ 2000 ರಂತೆ ದ್ವಿ–ಲಕೋಟೆ ಪದ್ಧತಿಯಲ್ಲಿ ಐಟಂವಾರು ಟೆಂಡರ್ ಪ್ರಕಟಣೆಯನ್ನು ಹೊರಡಿಸಲಾಗಿದೆ. ಕೆಪಿಪಿ ಪೋರ್ಟ್‌ಲ್‌ನಲ್ಲಿ ನೊಂದಾಯಿಸಿರುವ 1ನೇ ದರ್ಜೆ ಲೋಕೋಪಯೋಗಿ ಗುತ್ತಿಗೆದಾರರು ಕೆಪಿಪಿ ಪೋರ್ಟ್‌ಲ್‌ನಲ್ಲಿ (viz https://kppp.karnataka.gov.in/) ಭಾಗವಹಿಸಬಹುದಾಗಿರುತ್ತದೆ. ಸದರಿ ಕಾಮಗಾರಿಗೆ ದಿ:17.02.2026 ರಿಂದ 20.03.2026, ರ ಸಂಜೆ 17:00ರ ವರೆಗೆ ಟೆಂಡರ್ ಸಲ್ಲಿಸಬಹುದಾಗಿರುತ್ತದೆ. ಟೆಂಡರ್‌ಗಿಟ್ಟ ಮೊತ್ತ ರೂ. 555.69 ಲಕ್ಷಗಳು ಹಾಗೂ ಇ.ಎಂ.ಡಿ ರೂ.8.34 ಲಕ್ಷಗಳಾಗಿರುತ್ತದೆ, ಕಾಮಗಾರಿಗಳನ್ನು ಪೂರ್ಣಗೊಳಿಸುವ ಕಾಲಮಿತಿ:11 ತಿಂಗಳು(ಮಳೆಗಾಲ ಸೇರಿದಂತೆ). ಕಾಮಗಾರಿಗೆ ಸಂಬಂಧಿಸಿದಂತೆ ಹೆಚ್ಚಿನ ವಿವರಗಳು ಬೇಕಾದ್ದಲ್ಲಿ ಈ ಕೆಳಗೆ ಸಹಿ ಮಾಡಿರುವವರ ಕಛೇರಿಯಲ್ಲಿ ಕೆಲಸದ ವೇಳೆಯಲ್ಲಿ ಪಡೆಯಬಹುದಾಗಿದ್ದು, ಯಾವುದೇ ಟೆಂಡರ್‌ನ್ನು ಅಂಗೀಕರಿಸುವ/ತಿರಸ್ಕರಿಸುವ ಹಕ್ಕನ್ನು ಈ ಕೆಳಗೆ ಸಹಿ ಮಾಡಿರುವವರು ಹೊಂದಿರುತ್ತಾರೆ. ಟೆಂಡರ್ ಪ್ರಕಟಣೆಯಲ್ಲಿ ಯಾವುದೇ ತಿದ್ದುಪಡಿ ಅಥವಾ ಮಾರ್ಪಾಡುಗಳಾದಲ್ಲಿ ಕೆಪಿಪಿ ಪೋರ್ಟ್‌ಲ್ ಮೂಲಕ ಮಾತ್ರ ಪ್ರಕಟಿಸಲಾಗುವುದು.

DIPR/DDMYS/1701/KSMCA/964/2025-26 ಸಹಿ/– ಕಾರ್ಯಪಾಲಕ ಇಂಜಿನಿಯರ್

ಕ್ರಿಮಿನಲ್ ಮಿಸಲೆನಿಯಸ್ ನಂ : 162/2026
ಮಾನ್ಯ ಜೆ.ಎಮ್.ಎಫ್.ಸಿ.ಸವಣೂರ ಇವರ ನ್ಯಾಯಾಲಯದಲ್ಲಿ

ಅರ್ಜಿದಾರರು : 1) ಬಸವ್ವ ಕೋಂ ಸಿಂಗಪ್ಪ ಬಾರಕೇರ ಸಾ:ಕಳಲಕೊಂಡ. ತಾ:ಸವಣೂರ ಜಿ:ಹಾವೇರಿ

ವಿರುದ್ಧ

ಎದುರುಗಾರರು: ಜನನ ಮತ್ತು ಮರಣಗಳ ನೋಂದಣಿ ಅಧಿಕಾರಿಗಳು ಸವಣೂರ ಇವರ ಪರವಾಗಿ ತಹಶೀಲ್ದಾರ ಸವಣೂರ ತಾ:ಸವಣೂರ.ಜಿ:ಹಾವೇರಿ

ಸಾರ್ವಜನಿಕ ನೋಟೀಸು

ಇದರಲ್ಲಿ 1ನೇ ಅರ್ಜಿದಾರಳ ಗಂಡ 2ನೇ ಅರ್ಜಿದಾರನ ತಂದೆಯಾದ ಸಿಂಗಪ್ಪ ತಂದೆ ಫಕ್ಕೀರಪ್ಪ ಬಾರಕೇರ ಇವರು ದಿನಾಂಕ:08–05–2024 ರಂದು ಸವಣೂರ ತಾಲೂಕಾ ಪೈಕಿ ಕಳಲಕೊಂಡ ಗ್ರಾಮದ ಅರ್ಜಿದಾರರ ಮನೆಯಲ್ಲಿ ಮರಣವಾಗಿದ್ದು ಇರುತ್ತದೆ.ಸದರಿಯವನ ಮರಣ ಹೊಂದಿದ ಬಗ್ಗೆ ಎದುರುಗಾರರ ಮರಣದ ನೋಂದಣಿ ರಜಿಸ್ಟರದಲ್ಲಿ ನೊಂದಾಯಿಸಿಕೊಳ್ಳಲು ಮೇಲ್ಕಾಣಿಸಿದ ನ್ಯಾಯಾಲಯದಲ್ಲಿ ಅರ್ಜಿಯನ್ನು ಸಲ್ಲಿಸಿದ್ದು ಇರುತ್ತದೆ. ಕಾರಣ ಸದರ ಅರ್ಜಿಗೆ ಯಾರಾದರು ತಕರಾರು ತಗೆದೆ ಮಾಡುವವರಿದ್ದಲ್ಲಿ ಅಂತವರು ದಿನಾಂಕ:25–03–2026 ರಂದು ಮುಂಜಾನೆ 10=30 ಗಂಟೆಗೆ ಮೇಲ್ಕಾಣಿಸಿದ ಮಾನ್ಯ ನ್ಯಾಯಾಲಯದಲ್ಲಿ ತಾವಾಗಲಿ ಇಲ್ಲವೆ ತಮ್ಮ ಪರ ವಕೀಲರ ಮೂಲಕವಾಗಲಿ ಹಾಜರಾಗಿ ತಮ್ಮ ತಕರಾರು ಸಲ್ಲಿಸಬೇಕು.ಇಲ್ಲದೆ ಇದ್ದಲ್ಲಿ ಕಾನೂನ ಪ್ರಕಾರ ಮುಂದಿನ ಆದೇಶ ಮಾಡಲಾಗುತ್ತದೆ.ಈ ದಿನ 19–02–2026 ರಂದು ಮೊಹರನೊಂದಿಗೆ ಕೊಡಲ್ಪಟ್ಟಿರುತ್ತದೆ

ಸಹಿ/–ಶಿರಸ್ತೆದಾರರು
ದಿವಾಣಿ ನ್ಯಾಯಾದೀಶರು ಮತ್ತು ಜೆ.ಎಮ್.ಎಫ್.ಸಿ ಸವಣೂರ ಇವರ ನ್ಯಾಯಾಲಯ.

ಸಹಿ/– ಶ್ರೀ ಬಿ.ಹೆಚ್.ನೆಗಳೂರ
ಅರ್ಜಿದಾರರ ಪರ ವಕೀಲರು

ಕರ್ನಾಟಕ ಸರ್ಕಾರ

ಜಿಲ್ಲಾ ಪಂಚಾಯತ್, ಬಳ್ಳಾರಿ
ಕಾರ್ಯನಿರ್ವಾಹಕ ಅಭಿಯಂತರರವರ ಕಛೇರಿ, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಬಳ್ಳಾರಿ.

ಕ್ರ.ಸಂ/ಕಾನಿಅ/ಗ್ರಾ.ಕು.ನೀ.ನೈ.ವಿ/ಬ/ಸ.ಇಂ/ CMIDP/ಟೆಂಡರ್.ಪ್ರ/2025–26/1684
ದಿನಾಂಕ:19.02.2026

ಇ–ಟೆಂಡರ್ ಪ್ರಕಟಣೆ

(ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅದ್ಯಾದೇಶ–2000 ರಂತೆ)

ಕರ್ನಾಟಕ ಸರ್ಕಾರದ ರಾಜ್ಯಪಾಲರ ಪರವಾಗಿ ಕಾರ್ಯನಿರ್ವಾಹಕ ಅಭಿಯಂತರರು, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಬಳ್ಳಾರಿ ಇವರು ಬಳ್ಳಾರಿ ಜಿಲ್ಲೆಯ ಬಳ್ಳಾರಿ ಜಿಲ್ಲೆಯ ಕಂಪ್ಲಿ ತಾಲ್ಲುಕಿಗೆ ಮಾನ್ಯ ಮುಖ್ಯಮಂತ್ರಿಗಳ ಮೂಲ ಸೌಕರ್ಯ ಅಭಿವೃದ್ಧಿ ಯೋಜನೆಯಡಿಯಲ್ಲಿ **(CMIDP)** ಅನುಮೋದನೆಗೊಂಡ "Construction of an Overhead Tank (OHT) in Korlagundi village OF Ward No. 1 and Ward No. 6, in Shridharagadde, in Jalibenchi, in Shriramarangapura and in Yerangalli villages. (Indent No: RWSSD/ 2025 26/WS/WORK_INDENT9832/CALL-2)" ಕಾಮಗಾರಿಯನ್ನು ಕರ್ನಾಟಕ ಸರ್ಕಾರದ ಲೋಕೋಪಯೋಗಿ ಇಲಾಖೆಯಿಂದ ನೊಂದಾಯಿತ ಅರ್ಹ ಹಾಗೂ ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಪೋರ್ಟಲ್‌ನಲ್ಲಿ ನೊಂದಾಯಿಸಲ್ಪಟ್ಟ ಗುತ್ತಿಗೆದಾರರಿಂದ ಐಟಂವಾರು ಟೆಂಡರ್‌ಗಳನ್ನು ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಪೋರ್ಟಲ್‌ನ ಮೂಲಕ ಇ–ಟೆಂಡರ್ ಆಹ್ವಾನಿಸಲಾಗಿದೆ. ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಪೋರ್ಟಲ್ ಮುಖಾಂತರ ಟೆಂಡರ್‌ಗಳನ್ನು ಸಲ್ಲಿಸಲು ದಿನಾಂಕ:20.02.2026 ರಿಂದ 27.02.2026 ರಂದು ಸಂಜೆ 4.00 ರವರೆಗೆ ಸಲ್ಲಿಸ ಬಹುದಾಗಿರುತ್ತದೆ, ತಾಂತ್ರಿಕ ಬಿಡ್ ದಿನಾಂಕ:02.03.2026 ರಂದು ಸಂಜೆ 5.00 ಗಂಟೆಗೆ ತೆರೆಯಲಾಗುವುದು ಹಾಗೂ ದಿನಾಂಕ 23.02.2026 ರಂದು ಬೆಳಗ್ಗೆ 11.30 ಗಂಟೆಗೆ ಪೂರ್ವಭಾವಿ ಸಭೆಯನ್ನು, ಮಾನ್ಯ ಅಧೀಕ್ಷಕ ಅಭಿಯಂತರರು, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವೃತ್ತ, ಬಳ್ಳಾರಿ ಕಛೇರಿಯಲ್ಲಿ ಕರೆಯಲಾಗಿದೆ. ಕಾಮಗಾರಿಗಾಗಿ ಟೆಂಡರ್ ಸಲ್ಲಿಸಲು ನಿಗಧಿಪಡಿಸಿದ ಅರ್ಹತೆ, ಷರತ್ತುಗಳು, ಕಾಮಗಾರಿ ವಿವರ ಇತ್ಯಾದಿಗಳನ್ನು ದಿನಾಂಕ: 23.02.2026 ರ ಸಂಜೆ 4.00 ಗಂಟೆಯವರಗೆ ವಿಭಾಗ, ಕಛೇರಿಯಲ್ಲಿ ಅಥವಾ "ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಪೋರ್ಟಲ್‌ನಲ್ಲಿ" ಹೆಲ್ಪ್ ಡೆಸ್ಕ್‌ನಿಂದ ಪಡೆಯಬಹುದು. ಇನ್ನೂ ಹೆಚ್ಚಿನ ಮಾಹಿತಿಗಾಗಿ ಈ ವಿಭಾಗ ಕಛೇರಿ ಸಮಯದಲ್ಲಿ ಭೇಟಿ ನೀಡಿ ಮಾಹಿತಿಯನ್ನು ಪಡೆಯ ಬಹುದು.

ಸಹಿ/–ಕಾರ್ಯನಿರ್ವಾಹಕ ಅಭಿಯಂತರರು, ಗ್ರಾಕುನೀ&ನೈ. ವಿಭಾಗ, ಬಳ್ಳಾರಿ.

ಡಿಐಪಿಆರ್/ಬಳ್ಳಾರಿ/1034/ಕೆಎಸ್‌ಎಂಸಿಎ/2025–26

CHANGE OF NAME

I, **GIRIJAKUMARI** (Old Name) Resident of # 275/B, Plot No - 42, Basaveshwar Nagar, B Block, 14th Cross, Beside Lions English Medium School, Haveri - 581110, Karnataka, have changed my name as **SOMPALLI GIRIJAKUMARI** (New Name) for all purposes affidavit Dtd. 16-02-2026 sworn before notary **M. C. Maradi.**

CHANGE OF NAME

I, **SRINIDHI** (Old Name) Resident of # 275/B, Plot No - 42, Basaveshwar Nagar, B Block, 14th Cross, Beside Lions English Medium School, Haveri - 581110, Karnataka, have changed my name as **SRINIDHI AMARENDRA SOMPALLI** (New Name) for all purposes affidavit Dtd. 16-02-2026 sworn before notary **M. C. Maradi.**

ವಾಯವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ

ಕಾಮಗಾರಿ ಇಲಾಖೆ, ಹುಬ್ಬಳ್ಳಿ.

ಸಂ:ವಾಕರಸಾಸಂ:ಕಾನಿಅ:ನಕ್ಷೆ:ಹು:1168:2025–26 ದಿನಾಂಕ: 20–02–2026

ಟೆಂಡರ್ ಪ್ರಕಟಣೆ

KPPP Portal ಪದ್ಧತಿಯಲ್ಲಿ ಕೆ.ಪಿ.ಡಬ್ಲ್ಯೂ.ಡಿ/ಸಿ.ಪಿ.ಡಬ್ಲ್ಯೂ.ಡಿ/ಎಂ.ಇ.ಎಸ್ ನಲ್ಲಿ ನೋಂದಾಯಿತ ಅರ್ಹತೆಯುಳ್ಳ ಸಿವಿಲ್ ಗುತ್ತಿಗೆದಾರರಿಂದ ದ್ವಿ–ಲಕೋಟೆ ಆಧಾರದ ಮೇಲೆ ಈ ಕೆಳಕಂಡ ಕಾಮಗಾರಿಗಳಿಗೆ KPPP Portal ಸ್ಟ್ಯಾಂಡರ್ಡ ಡಾಕ್ಯೂಮೆಂಟ್ ಮುಖಾಂತರ ಐಟಂವಾರು ಟೆಂಡರನ್ನು ಆಹ್ವಾನಿಸಲಾಗಿದೆ. ಈ ಕೆಳಕಂಡ ಕಾಮಗಾರಿಗಳಿಗೆ KPPP Portal ನಲ್ಲಿ ಬಿಡುಗಡೆಯಾಗಿರುವಂತೆ ಅರ್ಹ ದರ್ಜೆ 1 ಹಾಗೂ ಮೇಲ್ಪಟ್ಟ ಗುತ್ತಿಗೆದಾರರು ಇ–ಆಡಳಿತ ಕೇಂದ್ರ ಅಥವಾ ವೆಬ್‌ಸೈಟ್ **http://kppp.karnataka.gov.in** ನಲ್ಲಿ ವಿವರಗಳನ್ನು ಖಚಿತಪಡಿಸಿಕೊಂಡು ಟೆಂಡರ್‌ನಲ್ಲಿ ಭಾಗವಹಿಸಬಹುದು. ಯಾವುದೇ ತಿದ್ದುಪಡಿ/ದಿನಾಂಕಗಳಲ್ಲಿನ ಬದಲಾವಣೆಗಳಿದ್ದಲ್ಲಿ ಕೆ.ಪಿ.ಪಿ ಪೋರ್ಟಲ್ ನಲ್ಲಿ ಮಾತ್ರ ಪ್ರಕಟಿಸಲಾಗುವುದು. ಈ ಕುರಿತು ಪ್ರತ್ಯೇಕ ಪತ್ರಿಕಾ ಪ್ರಕಟಣೆ ಹೊರಡಿಸಲಾಗುವುದಿಲ್ಲ.

ಟೆಂಡರ ಸಲ್ಲಿಸಲು ಕೊನೆಯ ದಿನಾಂಕ ಮತ್ತು ಸಮಯ: 07.03.2026, 16.00 ಘಂಟೆ

ಕಾಮಗಾರಿಯ ಹೆಸರು	ಕಾಮಗಾರಿ ಇಂಡೆಂಟ್ ಸಂಖ್ಯೆ	ಟೆಂಡರಿಗೆ ಇಟ್ಟ ಅಂದಾಜು ಮೊತ್ತ(ರೂ. ಗಳಲ್ಲಿ)	ಮುಂಗಡ ಠೇವಣಿ ಹಣ(ರೂ. ಗಳಲ್ಲಿ)
ಧಾರವಾಡ ಬಸ್ ಘಟಕದಲ್ಲಿ ಅಭಿವೃದ್ಧಿ ಕೆಲಸಗಳನ್ನು ನಿರ್ವಹಿಸುವುದು	NWKRTC/2025-26/BD/WORK_INDENT72	6,77,66,500/-	10,16,500/-

ಹೆಚ್ಚಿನ ವಿವರಗಳಿಗೆ ಸಹಾಯವಾಣಿ (help desk) 91–8046010000, 91–8068948777, 0836–2332383 ಗೆ ಸಂಪರ್ಕಿಸಬಹುದಾಗಿದೆ.

ಸಹಿ/–
ಕಾರ್ಯನಿರ್ವಾಹಕ ಅಭಿಯಂತರರು,
ವಾಕರಸಾಸಂಸ್ಥೆ, ಕಾಮಗಾರಿ ಇಲಾಖೆ, ಕೇಂದ್ರ ಕಛೇರಿ, ಹುಬ್ಬಳ್ಳಿ.

ವಾಸಾಸಂಇ/ಧಾ/ದಿಶಾ/1258/2025–26

ಕರ್ನಾಟಕ ಸರ್ಕಾರ

ಆಡಳಿತ ವೈದ್ಯಾಧಿಕಾರಿಗಳವರ ಕಾರ್ಯಾಲಯ, ಸಾರ್ವಜನಿಕ ಆಸ್ಪತ್ರೆ ಶಿಕಾರಿಪುರ, ಶಿವಮೊಗ್ಗ ಜಿಲ್ಲೆ

E-mail: amoghshikaripura@gmail.com Ph: 08187-222412

ಸಂಖ್ಯೆ:ಸಾಆಶಿ/ಅಭಿವೃದ್ಧಿ(3)/ಪಥ್ಯಾಹಾರ 02/2025–26 ದಿ: 16.02.2026

ಇ–ಟೆಂಡರ್ ಪ್ರಕಟಣೆ

2026–27 ನೇ ಸಾಲಿನಲ್ಲಿ ಸಾರ್ವಜನಿಕ ಆಸ್ಪತ್ರೆ, ಶಿಕಾರಿಪುರ, ಶಿವಮೊಗ್ಗ ಜಿಲ್ಲೆ ಇಲ್ಲಿಗೆ ಸಿದ್ಧಪಡಿಸಿದ ಪಥ್ಯಾಹಾರ ಸರಬರಾಜು ಮಾಡುವ ಕುರಿತು ಕರ್ನಾಟಕ ಪಾರದರ್ಶಕ ಅಧಿನಿಯಮ (KTPP) 1999 ರ ನಿಯಮಗಳು ಹಾಗೂ 2000 ರ ಪ್ರಕಾರ ದ್ವಿ–ದಾಖಲಾತಿ ಸಲ್ಲಿಕೆ ಪದ್ಧತಿಯಲ್ಲಿ, ಇ–ಟೆಂಡರ್ ಪ್ರಕಟಣೆ ನೀಡುತ್ತಿದ್ದು, ಆಸಕ್ತ ಟೆಂಡರ್‌ದಾರರು ಭಾಗವಹಿಸಲು ಕೋರಿದೆ.

ಕ್ರ.ಸಂ. 01. ಟೆಂಡರ್ ಪ್ರಕಟಣೆ ಸಂಖ್ಯೆ: ಸಾಆಶಿ/ಅಭಿವೃದ್ಧಿ(3)/ಪಥ್ಯಾಹಾರ/02/2025–26, ದಿನಾಂಕ 10.02.2026 **ಟೆಂಡರ್ ವಿವರ:** 2026–27 ನೇ ಸಾಲಿನಲ್ಲಿ ಸಾರ್ವಜನಿಕ ಆಸ್ಪತ್ರೆ, ಶಿಕಾರಿಪುರ, ಶಿವಮೊಗ್ಗ ಜಿಲ್ಲೆ, ಇಲ್ಲಿಗೆ ಸಿದ್ಧಪಡಿಸಿದ ಪಥ್ಯಾಹಾರ ಸರಬರಾಜು ಮಾಡುವ ಕುರಿತು **ಟೆಂಡರ್ ದಾಖಲಿಸಲು ನೀಡಲಾದ ಅವಧಿ:** ದಿ:18.02.2026 ರಿಂದ ದಿ: 08.03.2026 ಸಂಜೆ 5–00 ಗಂಟೆಯವರೆಗೆ **ಟೆಂಡರ್ ಅಂದಾಜು ಮೊತ್ತ:** ರೂ.1.00 ಕೋಟಿ **ಇ.ಎಂ.ಡಿ ವಿವರ:** ಇ.ಎಂ.ಡಿ ಮೊತ್ತ ರೂ2,00,000/– ಇ–ಪ್ರಕ್ಯೂರ್‌ಮೆಂಟ್ ನಲ್ಲಿ ಸಲ್ಲಿಸುವುದು.

ಹೆಚ್ಚಿನ ವಿವರಗಳಿಗಾಗಿ ಕಛೇರಿ ವೇಳೆಯಲ್ಲಿ ಆಡಳಿತ ವೈದ್ಯಾಧಿಕಾರಿಗಳು, ಸಾರ್ವಜನಿಕ ಆಸ್ಪತ್ರೆ, ಶಿಕಾರಿಪುರ, ಶಿವಮೊಗ್ಗ ಜಿಲ್ಲೆ ಇವರನ್ನು ಸಂಪರ್ಕಿಸುವುದು ಅಥವಾ (Website: www.eproc.karnataka.gov.in)ನಲ್ಲಿ ಪಡೆಯಬಹುದಾಗಿದೆ.

ಸಹಿ/–ಆಡಳಿತ ವೈದ್ಯಾಧಿಕಾರಿಗಳು, ಸಾರ್ವಜನಿಕ ಆಸ್ಪತ್ರೆ,
ಶಿಕಾರಿಪುರ ಶಿವಮೊಗ್ಗ ಜಿಲ್ಲೆ

ವಾ.ಸಾ.ಸಂ.ಇ/ಕೆಎಸ್‌ಎಂಸಿಎ/ಶಿ/25–26/101/02/1867

ಕಾರ್ಯಪಾಲಕ ಅಭಿಯಂತರರು

ಲೋಕೋಪಯೋಗಿ ಇಲಾಖೆ

ಬೆಂಗಳೂರು ವಿಭಾಗ, 2ನೇ ಮಹಡಿ, ಲೋ.ಇ. ಪೂರಕ ಕಟ್ಟಡ, ಕೆ.ಆರ್. ವೃತ್ತ, ಬೆಂಗಳೂರು–560 001. ದೂರವಾಣಿ: 080–22133370

ಸಂಖ್ಯೆ: 58/2025–26 ದಿನಾಂಕ: 19.02.2026

ಅಲ್ಪಾವಧಿ ಟೆಂಡರ್ ಪ್ರಕಟಣೆ

ಕಾರ್ಯಪಾಲಕ ಅಭಿಯಂತರರು, ಲೋಕೋಪಯೋಗಿ ಇಲಾಖೆ, ಬೆಂಗಳೂರು ವಿಭಾಗ, ಬೆಂಗಳೂರು ರವರು ಕರ್ನಾಟಕ ರಾಜ್ಯಪಾಲರ ಪರವಾಗಿ ಕೆ.ಟಿ.ಪಿ.ಪಿ. 2000 ರನ್ವಯ ಮತ್ತು ಸ್ಟಾಂಡರ್ಡ್ ಟೆಂಡರ್ ಡಾಕ್ಯೂಮೆಂಟ್ ನಿಯಮದಂತೆ ಕರ್ನಾಟಕ ಸರ್ಕಾರದ ಕೆ.ಪಿ.ಪಿ ಪೋರ್ಟಲ್ ಮೂಲಕ ಕರ್ನಾಟಕ ಲೋಕೋಪಯೋಗಿ ಇಲಾಖೆಯಲ್ಲಿ ನೋಂದಣಿ ಮಾಡಿದ ಅರ್ಹ ಟೆಂಡರ್‌ದಾರರಿಂದ ಎರಡು ಲಕೋಟೆ ಪದ್ಧತಿಯಲ್ಲಿ ಟೆಂಡರ್‌ನ್ನು ಆಹ್ವಾನಿಸಲಾಗಿದೆ. ಬೆಂಗಳೂರು ವಿಭಾಗ ವ್ಯಾಪ್ತಿಯಲ್ಲಿನ **ನೆಲಮಂಗಲ ಉಪವಿಭಾಗಕ್ಕೆ** ಸಂಬಂಧಿಸಿದಂತೆ **01 ಸಂಖ್ಯೆಯ (ರೂ. 185.00 ಲಕ್ಷಗಳ)** ಕಾಮಗಾರಿಗೆ ಟೆಂಡರ್ ಪ್ರಕಟಣೆಯನ್ನು ಹೊರಡಿಸಿದ್ದು, ಕಾಮಗಾರಿಯ ವಿವರಗಳನ್ನು ಮೇಲ್ಕಂಡ ಕಛೇರಿಯ ವಿಳಾಸದಲ್ಲಿ ಪಡೆಯಬಹುದಾಗಿರುತ್ತದೆ. ಟೆಂಡರ್ ಪ್ರಕ್ರಿಯೆಗೆ ಈ ಕೆಳಕಂಡಂತೆ ದಿನಾಂಕಗಳನ್ನು ನಿಗದಿಪಡಿಸಲಾಗಿದೆ. ಕಾಮಗಾರಿಯ ಇ.ಎಂ.ಡಿ **ಮೊತ್ತವನ್ನು ಮತ್ತು ಟೆಂಡರ್ ಪ್ರೋಸಸಿಂಗ್ ಶುಲ್ಕವನ್ನು ಕೆಪಿಪಿ–ಪೋರ್ಟಲ್‌ನಲ್ಲಿ ಸೂಚಿಸಲಾಗಿದೆ.**

(1) ಟೆಂಡರ್‌ಗಳನ್ನು ಆನ್‌ಲೈನ್‌ನಲ್ಲಿ ಇ–ಪೋರ್ಟಲ್ ಮೂಲಕ ಸಲ್ಲಿಸಲು ನಿಗದಿಪಡಿಸಿರುವ ಕೊನೆಯ **ದಿನಾಂಕ: 26.02.2026 ಸಂಜೆ 4.00 ಗಂಟೆಯವರೆಗೆ.** (2) ಟೆಂಡರ್‌ಗಳನ್ನು ಇ–ಪೋರ್ಟಲ್ ಮೂಲಕ ತೆರೆಯುವ **ದಿನಾಂಕ: 27.02.2026 ಸಂಜೆ 4.30 ಗಂಟೆಗೆ** ಅಥವಾ ಮುಂದೆ ತಿಳಿಸಬಹುದಾದ ದಿನಾಂಕ ಮತ್ತು ಸಮಯ. **ಹೆಚ್ಚಿನ ವಿವರಗಳಿಗಾಗಿ ಈ ಕಛೇರಿಯನ್ನು ಸಂಪರ್ಕಿಸುವುದು.**

ಸಹಿ/– ಕಾರ್ಯಪಾಲಕ ಅಭಿಯಂತರರು.

ವಾಸಾಸಂಇ/ಉನಿ–ಸಿ.ಪಿ/5768/ಕೆಎಸ್‌ಎಂಸಿಎ/2025–26

ತುಮಕೂರು ಜಿಲ್ಲಾ ಪಂಚಾಯತ್

ಕಾರ್ಯಪಾಲಕ ಅಭಿಯಂತರರವರ ಕಛೇರಿ, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ, ತುಮಕೂರು ವಿಭಾಗ, ತುಮಕೂರು
ದೂರವಾಣಿ ಸಂಖ್ಯೆ: 0816–2252937.

ಸಂ: 22/ ಕಾಪಾಅ/ಗ್ರಾ.ಕು.ನೀ.ನೈ ವಿ/ತುಮ/ಸ.ಇಂ/MVS O&M/2025–26/3594 ದಿನಾಂಕ: 16–02–2026

ಅಲ್ಪಾವಧಿ ಟೆಂಡರ್ ಪ್ರಕಟಣೆ ಸಂ: 22/2025–26

(ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಮುಖಾಂತರ ಮಾತ್ರ)

ಕರ್ನಾಟಕ ರಾಜ್ಯದ ರಾಜ್ಯಪಾಲರ ಪರವಾಗಿ, ಕಾರ್ಯಪಾಲಕ ಅಭಿಯಂತರರು, ಗ್ರಾ.ಕು.ನೀ ಮತ್ತು ನೈರ್ಮಲ್ಯ ವಿಭಾಗ, ತುಮಕೂರು ಇವರು 2025–26 ನೇ ಸಾಲಿಗೆ ದ್ವಿ–ಲಕೋಟೆ ಪದ್ಧತಿಯಲ್ಲಿ ಟೆಂಡರನ್ನು, ಸೂಕ್ತ ನೊಂದಾಯಿತ ಗುತ್ತಿಗೆದಾರರಿಂದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಮುಖಾಂತರ ಆಹ್ವಾನಿಸಲಾಗಿದೆ. ಟೆಂಡರ್‌ನ ವಿವರ ಈ ಕೆಳಕಂಡಂತಿರುತ್ತದೆ.

ತುಮಕೂರು ಜಿಲ್ಲೆ ವ್ಯಾಪ್ತಿಯಲ್ಲಿ ಬಹು ಗ್ರಾಮ ಕುಡಿಯುವ ನೀರಿನ ಯೋಜನೆಯಡಿ ಅನುಮೋದನೆಗೊಂಡಿರುವ ಗುಬ್ಬಿ ತಾಲ್ಲೂಕಿನ 03 ಕಾಮಗಾರಿಗಳಿಗೆ ಕೊರಟಗೆರೆ ತಾಲ್ಲೂಕಿನ 01 ಕಾಮಗಾರಿಗಳಿಗೆ ಮತ್ತು ತುಮಕೂರು ತಾಲ್ಲೂಕಿನ 04 ಕಾಮಗಾರಿಗಳಿಗೆ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಮುಖಾಂತರ **https://kppp.karnataka.gov.in/** ಬಿಡ್ ಸಲ್ಲಿಸಬಹುದು. ಹೆಚ್ಚಿನ ಮಾಹಿತಿಗಾಗಿ ಈ ಕೆಳಗೆ ಸಹಿ ಮಾಡಿರುವವರನ್ನು ಕಛೇರಿ ವೇಳೆಯಲ್ಲಿ ಸಂಪರ್ಕಿಸಬಹುದು. ಅ) ಕಾಮಾರಿ ಕನಿಷ್ಠ ಮೊತ್ತ **ರೂ. 65.56 ಲಕ್ಷಗಳು** ಇ.ಎಂ.ಡಿ ಮೊತ್ತ **ರೂ. 1,31,200/–** ಗಳು ಆ) ಕಾಮಗಾರಿ ಗರಿಷ್ಠ ಮೊತ್ತ **ರೂ. 156.20 ಲಕ್ಷಗಳು,** ಇಎಂಡಿ ಮೊತ್ತ **ರೂ. 2,34,300/–** ಗಳು (1) ಭರ್ತಿ ಮಾಡಿದ ಟೆಂಡರನ್ನು ಸಲ್ಲಿಸುವ ಅಂತಿಮ **ದಿನಾಂಕ: 06–03–2026 ಸಂಜೆ 5:00 ಘಂಟೆವರೆಗೆ** (2) ಪೂರ್ವಭಾವಿ ಸಭೆ **ದಿನಾಂಕ: 27–02–2026** ಕಾರ್ಯಪಾಲಕ ಅಭಿಯಂತರರು ಗ್ರಾ.ಕು.ನೀ & ನೈರ್ಮಲ್ಯ ವಿಭಾಗ ತುಮಕೂರು (3) ತಾಂತ್ರಿಕ ಬಿಡ್ ತೆರೆಯುವ **ದಿನಾಂಕ: 07–03–2026 ಸಂಜೆ 05.30 ಘಂಟೆಯ** ನಂತರ (4) ಆರ್ಥಿಕ ಬಿಡ್ ತೆರೆಯುವ **ದಿನಾಂಕ : 10–03–2026 ಬೆಳಿಗ್ಗೆ 11.00 ಘಂಟೆಯ** ನಂತರ

ಸಹಿ/– ಕಾರ್ಯಪಾಲಕ ಅಭಿಯಂತರರು
ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ, ತುಮಕೂರು ವಿಭಾಗ, ತುಮಕೂರು

DIPR/TUM/RO-276/25-26/Oysters

ಕರ್ನಾಟಕ ಸರಕಾರ
(ಲೋಕೋಪಯೋಗಿ, ಇಲಾಖೆ)

ಕಾರ್ಯನಿರ್ವಾಹಕ ಇಂಜಿನೀಯರ್‌ರವರ ಕಛೇರಿ ಲೋಕೋಪಯೋಗಿ ಇಲಾಖೆ, ಸೇಡಂ ವಿಭಾಗ ಜಿಲ್ಲೆಃ ಕಲಬುರಗಿ.

ಸಂ:ಕಾನಿಇಂ/ಲೋ.ಇ./ಸೇವಿ/ತಾಶಾ–2/2025–26/3186 ದಿನಾಂಕ : 18–02–2026

–:: ಅಲ್ಪಾವಧಿ ಇ–ಪ್ರೊಕ್ಯೂರಮೆಂಟ್ ಟೆಂಡರ್ ಪ್ರಕಟಣೆ ::–

1) ಕಾಮಗಾರಿಯ ವಿವರ : 1. **ಸೇಡಂ ತಾಲೂಕಿನ** 04 ಕಾಮಗಾರಿಗಳ ಇಂಡೆಂಟ್ ಸಂ : 33021, 32859, 33191 (ಪ.ಜಾತಿ), & 33028 (ಪ್ರ–2ಎ), 2. **ಚಿತ್ತಾಪೂರ ತಾಲೂಕಿನ** 12 ಕಾಮಗಾರಿಗಳ ಇಂಡೆಂಟ್ ಸಂ : 32613 (ಪ.ಜಾತಿ), 32615 (ಪ್ರ–2ಎ), 32619 (ಪ್ರ–2ಎ), 32623 (ಪ.ಪಂಗಡ), 31953 (ಪ್ರ–2ಎ), 31947 (ಪ.ಜಾತಿ), 31957 (ಪ.ಪಂಗಡ), 31955 (ಪ್ರ–1), 32612 (ಪ.ಜಾತಿ), 32790, 32818, & 11245, 3. **ಚಿಂಚೋಳಿ ತಾಲೂಕಿನ** 03 ಕಾಮಗಾರಿಗಳ ಇಂಡೆಂಟ್ ಸಂ : 32443, 32676, 32454 (ಪ.ಪಂಗಡ), 2) ಲೆಕ್ಕ ಶೀರ್ಷಿಕೆ: 2025–26ನೇ ಸಾಲಿನ ಕೆ.ಕೆ.ಆರ್.ಡಿ.ಬಿ., 2018–19ನೇ ಸಾಲಿನ ಪ್ರಗತಿ ಕಾಲೋನಿ/ ಕಾಲೋನಿ ಅಭಿವೃದ್ಧಿ, 2025–26ನೇ ಸಾಲಿನ 5054 & 2023–24ನೇ ಸಾಲಿನ 8443 ಯೋಜನೆಯಡಿಯಲ್ಲಿನ ಕಾಮಗಾರಿಗಳು, 3) ಟೆಂಡರಿಗಿಟ್ಟ ಮೊತ್ತ: **ಕನಿಷ್ಠ ರೂ. 18.00 ಲಕ್ಷಗಳು, ಗರಿಷ್ಠ ರೂ. 324.16 ಲಕ್ಷಗಳು,** 4) ಗುತ್ತಿಗೆದಾರರ ಅರ್ಹತೆ: 4ನೇ ದರ್ಜೆ & ಮೇಲ್ಪಟ್ಟು, 5) ಪೂರ್ವಬಾವಿ ಸಭೆ : **25–02–2026 ಬೆಳಿಗ್ಗೆ 11:00 ಗಂಟೆಗೆ,** 6) ಟೆಂಡರ್ ಸ್ಪಷ್ಟೀಕರಣ ಪಡೆಯುವ ದಿನಾಂಕ: **27–02–2026 ಸಾಯಂಕಾಲ 17:30 ಗಂಟೆಯವರೆಗೆ,** 7) ಟೆಂಡರ್ ಅರ್ಜಿ ಬೆಲೆ ಮತ್ತು ಇ.ಎಂ.ಡಿ ಮೊತ್ತ :ಟೆಂಡರ್ ಫಾರಂ ಬೆಲೆ & ಇ.ಎಮ್.ಡಿ ಇ–ಪ್ರೊಕ್ಯೂರಮೆಂಟ್‌ನಲ್ಲಿ ನಮೂದಿಸಿದಂತೆ, 8) ಟೆಂಡರ್ ಸಲ್ಲಿಸುವ ಅಂತಿಮ ದಿನಾಂಕ: **02–03–2026 ರ ಸಾಯಂಕಾಲ 16:00 ಗಂಟೆಯವರೆಗೆ.** 9) ಟೆಂಡರ್ ತಾಂತ್ರಿಕ ಬಿಡ್ ತೆರೆಯುವ ದಿನಾಂಕ : **03–03–2026 ರ ಸಾಯಂಕಾಲ 16:30 ಗಂಟೆಯವರೆಗೆ.** 10) ಟೆಂಡರ್ ಆರ್ಥಿಕ ಬಿಡ್ ತೆರೆಯುವ ದಿನಾಂಕ: **05–03–2026 ರ ಸಾಯಂಕಾಲ 16:30 ಗಂಟೆಯವರೆಗೆ.** 11) ಹೆಚ್ಚಿನ ವಿವರಗಳಿಗೆ ಸಂಪರ್ಕಿಸಬೇಕಾದ ವಿಳಾಸ: ಕಾರ್ಯನಿರ್ವಾಹಕ ಇಂಜಿನೀಯರ್, ಲೋಕೋಪಯೋಗಿ ಇಲಾಖೆ, ವಿಭಾಗ ಸೇಡಂ, 12) ಅಂತರಜಾಲ ತಾಣದ ವಿಳಾಸ: www.kppp.karnataka.gov.in, 13) ಬದಲಾವಣೆಗಾಗಿ ಸಂಪರ್ಕಿಸುವ ಬಗ್ಗೆ: ಯಾವುದೇ ಮಾರ್ಪಾಡು ಬದಲಾವಣೆಗಳನ್ನು www.kppp.karnataka.gov.in ಮಾಡಲಾಗುವುದು.

ಟಿಪ್ಪಣಿ : 1) ಈ ಕೆಳಗೆ ಸಹಿ ಮಾಡಿರುವವರು ಯಾವುದೇ ಕಾರಣಗಳನ್ನು ನೀಡದೆ ಪ್ರಕ್ರಿಯೆಯ ಮುಂದೂಡುವಿಕೆ/ ಸಂಪೂರ್ಣವಾಗಿ ಟೆಂಡರ್ ರದ್ದುಗೊಳಿಸುವ/ಟೆಂಡರ್ ನಿರಾಕರಿಸುವ ಹಕ್ಕನ್ನು ಹೊಂದಿರುತ್ತಾರೆ. 2) ಇನ್ನು ಮುಂದೆ ಟೆಂಡರ್ ಪ್ರಕ್ರಿಯೆಯಲ್ಲಿ ಯಾವುದೇ ಬದಲಾವಣೆಗಳು ಇದ್ದಲ್ಲಿ ದಿನ ಪತ್ರಿಕೆಗಳಲ್ಲಿ ಪ್ರಕಟಿಸಲಾಗುವುದಿಲ್ಲ, ಬದಲಾಗಿ ವಿದ್ಯುನ್ಮಾನ ಸಂಗ್ರಹಣೆ ವೇದಿಕೆಯಲ್ಲಿ ಮಾತ್ರ ಬದಲಾವಣೆಗಳನ್ನು ಪ್ರಕಟಿಸಲಾಗುವುದು.

ಸಹಿ/– ಕಾರ್ಯನಿರ್ವಾಹಕ ಇಂಜಿನೀಯರ್
ಲೋಕೋಪಯೋಗಿ, ಇಲಾಖೆ ವಿಭಾಗ ಸೇಡಂ

ವಾ.ಸಾ.ಸಂ.ಇ/ಕಲಬುರಗಿ/1102/ಕೆ.ಎಸ್.ಎಂ.ಸಿ.&ಎ/2025–26

ಕರ್ನಾಟಕ ಸರ್ಕಾರ ಲೋಕೋಪಯೋಗಿ ಇಲಾಖೆ

ಕಾರ್ಯಪಾಲಕ ಅಭಿಯಂತರವರ ಕಛೇರಿ, ಲೋಕೋಪಯೋಗಿ ಇಲಾಖೆ, ದಾವಣಗೆರೆ ವಿಭಾಗ, ದಾವಣಗೆರೆ.

ಪ್ರಕಟಣೆ ಸಂ: ಐಎಫ್‌ಟಿ–46/ಎಇ–1/2025–26 ದಿನಾಂಕ:– 20.02.2026

ಅಲ್ಪಾವಧಿ ಕೆಪಿಪಿಪಿ ಟೆಂಡರ್ ಪ್ರಕಟಣೆ (2ನೇ ಕರೆ)

ಉಲ್ಲೇಖ: ಈ ಕಚೇರಿ ಟೆಂಡರ್ ಪ್ರಕಟಣೆ ಸಂಖ್ಯೆ : ಕಾಅ/ದಾವಿದಾ/ಐ.ಎಫ್.ಟಿ 46/ ಎಇ–1/2025–26 ದಿನಾಂಕ: 20.02.2026.

ಲೋಕೋಪಯೋಗಿ ಇಲಾಖೆ ವಿಭಾಗ ದಾವಣಗೆರೆ ವಿಭಾಗ ವ್ಯಾಪ್ತಿಯಲ್ಲಿನ ದಾವಣಗೆರೆ ತಾಲ್ಲೂಕಿಗೆ ಸಂಬಂಧಿಸಿದಂತೆ ಕೆಳಗೆ ಸಹಿ ಮಾಡಿರುವವರಿಂದ ಕರ್ನಾಟಕ ರಾಜ್ಯಪಾಲರ ಪರವಾಗಿ ಕೆಟಿಪಿಪಿ–2000ರನ್ವಯ ಮತ್ತು ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯೂಮೆಂಟ್ ನಿಯಮದಂತೆ ಲೆಕ್ಕಶೀರ್ಷಿಕೆ : 4059~80~051~0~60~132~ ಮುಖ್ಯ ಮಂತ್ರಿಗಳ ಮೂಲಸೌಕರ್ಯ ಅಭಿವೃದ್ಧಿ ಕಾರ್ಯಕ್ರಮ ಇತರೆ ಬಂಡವಾಳ ವೆಚ್ಚಗಳು 1 ಕಾಮಗಾರಿಗೆ ಮೊತ್ತ 350.00 ಲಕ್ಷ (ಇಂಡೆಂಟ್ ನಂ. 31680/CALL-2) ಕರ್ನಾಟಕ ಸರ್ಕಾರದ ಕೆಪಿಪಿಪಿ ಪೋರ್ಟಲ್ ಮೂಲಕ ಕರ್ನಾಟಕ ಲೋಕೋಪಯೋಗಿ ಇಲಾಖೆಯಲ್ಲಿ ನೋಂದಣಿ ಮಾಡಿದ ಅರ್ಹ ಟೆಂಡರ್‌ದಾರರಿಂದ ದ್ವಿ ಲಕೋಟೆ ಪದ್ಧತಿಯಲ್ಲಿ ಕೆಪಿಪಿಪಿ ಪೋರ್ಟಲ್ ಮುಖಾಂತರ ಟೆಂಡರ್‌ಅನ್ನು ಆಹ್ವಾನಿಸಲಾಗಿದೆ.

(1) ಟೆಂಡರ್ ಬಗ್ಗೆ ವಿಚಾರಿಸಲು/ಮಾಹಿತಿ ಪಡೆಯಲು ಕೊನೆಯ ದಿನಾಂಕ 20.02.2026 ಸಂಜೆ 4.00 ಗಂಟೆಗೆ

(2) ಪ್ರಿಬಿಡ್ ಮೀಟಿಂಗ್ ಸ್ಥಳ : ಕಾರ್ಯಪಾಲಕ ಇಂಜಿನಿಯರ್, ಲೋ.ಇ ವಿಭಾಗ, ಪಿ.ಬಿ ರಸ್ತೆ, ದಾವಣಗೆರೆ, ದಿನಾಂಕ 23.02.2026 ಬೆಳಗ್ಗೆ 11.30 ಗಂಟೆಗೆ

(3) ಟೆಂಡರ್ ಸ್ವೀಕರಿಸಲು ಕೊನೆಯ ದಿನಾಂಕ : 06.03.2026 ಸಂಜೆ 4.00 ಗಂಟೆಗೆ

(4) ತಾಂತ್ರಿಕ ಬಿಡ್‌ಗಳನ್ನು ತೆರೆಯುವ ದಿನಾಂಕ: 07.03.2026 ಸಂಜೆ 4.30 ಗಂಟೆಗೆ

ಹೆಚ್ಚಿನ ವಿವರಗಳನ್ನು, ಸದರಿ ಕಛೇರಿಯ ಕೆಲಸದ ವೇಳೆಯಲ್ಲಿ (ದೂರವಾಣಿ : 08192 234951, 231530) ಅಥವಾ ವೆಬ್ ಸೈಟ್ https://kppp.karnataka.gov.in ನಲ್ಲಿ ಪಡೆಯಬಹುದು.

ವಾಸಾಇ/ಡಿವಿಜಿ/762/ಕೆಎಸ್‌ಎಂಸಿಎ/2025–26

ಸಹಿ/– ಕಾರ್ಯಪಾಲಕ ಅಭಿಯಂತರರು,
ಲೋಕೋಪಯೋಗಿ ಇಲಾಖೆ ವಿಭಾಗ ದಾವಣಗೆರೆ

ಕರ್ನಾಟಕ ಸರ್ಕಾರ

ಕಾರ್ಯನಿರ್ವಾಹಕ ಇಂಜನೀಯರರವರ ಕಚೇರಿ, ಪಂಚಾಯತ್ ರಾಜ್ ಇಂಜನೀಯರಿಂಗ್ ವಿಭಾಗ, ವಿಶ್ವೇಶ್ವರಯ್ಯಾ ಮಾರ್ಗ, ಧಾರವಾಡ–580 001.

ದೂರವಾಣಿ: 0836–2442316 (ಕ) 0836–2749018 (ಫ್ಯಾಕ್ಸ್) E-mail: zpeddwd@rediffmail.com

ಕ್ರ.ಸಂ.ಪಂ.ರಾ.ಇಂ.ವಿ.ಧಾ/ಸಿ–1/ಸರ್ವಿಸ್/2025–2026/4776 ದಿನಾಂಕ: 18–02–2026

ಅಲ್ಪಾವಧಿ ಟೆಂಡರ್ ಪ್ರಕಟಣೆ-40/2025–26 (ಇ–ಪ್ರೊಕ್ಯೂರಮೆಂಟ್ ಮುಖಾಂತರ)

2026–27 ನೇ ಸಾಲಿಗೆ ಕಾರ್ಯನಿರ್ವಾಹಕ ಇಂಜನೀಯರರು, ಪಂಚಾಯತ್ ರಾಜ್ ಇಂಜನೀಯರಿಂಗ್ ವಿಭಾಗ, ಧಾರವಾಡ ಹಾಗೂ ಉಪ–ವಿಭಾಗ, ಧಾರವಾಡ, ಹುಬ್ಬಳ್ಳಿ, ಕಲಘಟಗಿ, ಕುಂದಗೋಳ ಹಾಗೂ ನವಲಗುಂದ ಕಚೇರಿಗಳಲ್ಲಿ ಕಾರ್ಯನಿರ್ವಹಿಸಲು **ಡಾಟಾ ಎಂಟ್ರಿ ಆಪರೇಟರ್‌ನ್ನು** ಮತ್ತು ಪಂ.ರಾ.ಇಂ.ವಿಭಾಗ, ಧಾರವಾಡ ಮತ್ತು ಪಂ.ರಾ.ಇಂ. ಉಪ ವಿಭಾಗ, ಕಛೇರಿಗಳಿಗೆ **ಸಮೂಹ–ಡಿ** ಹುದ್ದೆಗಳಿಗೆ ಬಾಹ್ಯ ಮೂಲ ಸೇವೆಯನ್ನು ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿ.ಪಂ.ಧಾರವಾಡ ಇವರ ಕಛೇರಿ ಪತ್ರ ಸಂ: 3676 ದಿ:21–01–2026 ರಲ್ಲಿ ಅನುಮೋದಿಸಿದಂತೆ ಮತ್ತು ವಿವಿಧ ಕಾಯ್ದೆಗಳ ಕಾನೂನಿನ ಅಡಿಯಲ್ಲಿ ನೋಂದಾಯಿತ ಸಂಸ್ಥೆಯಿಂದ ನೇಮಿಸಿಕೊಳ್ಳಲು ಕೆ.ಪಿ.ಪಿ.ಪಿ ಕಾಯ್ದೆಯಡಿ ಟೆಂಡರ್ ಆಹ್ವಾನಿಸಲಾಗಿದ್ದು, ಆಸಕ್ತಿವುಳ್ಳವರು ಅರ್ಜಿ ನಮೂನೆ ಹಾಗೂ ನಿಬಂಧನೆಗಳ ವಿವರಗಳನ್ನು, ಇ–ಟೆಂಡರ್ **https://kppp.karnataka.gov.in** ಮುಖಾಂತರ ಪ್ರಕಟಿಸಿರುವ ನಮೂನೆಯಲ್ಲಿರುವ ನಿಬಂಧನೆಗಳ ಪ್ರಕಾರ ಟೆಂಡರ್ ಪ್ರಕಟಿಸಲಾಗಿದೆ.

Indent No: Se3468

ಕ್ಯಾಲೆಂಡರ್ ಆಫ್ ಇವೆಂಟ್ಸ್

1) ಟೆಂಡರ್ ದಾಖಲೆಗಳನ್ನು ದಿನಾಂಕ: **21–02–2026** ರಿಂದ ಡೌನಲೋಡ್ ಮಾಡಿಕೊಂಡು ದಿನಾಂಕ: **28–02–2026** ರ ಸಂಜೆ **4.00** ಘಂಟೆಯವರೆಗೆ ಟೆಂಡರಗಳನ್ನು ಸಲ್ಲಿಸಬಹುದು.
2) ತಾಂತ್ರಿಕ ಬಿಡ್ ತೆರೆಯುವ ದಿನಾಂಕ: **02–03–2026** ರ ಸಂಜೆ **4.30** ಘಂಟೆಗೆ. ಈ ಕೆಳಗೆ ಸಹಿ ಮಾಡಿದವರ ಕಚೇರಿಯಲ್ಲಿ.
3) ಆರ್ಥಿಕ ಬಿಡ್ ತೆರೆಯುವ ದಿನಾಂಕ: **03–03–2026** ರ ಬೆಳಿಗ್ಗೆ 11.00 ಘಂಟೆಗೆ. ಈ ಕೆಳಗೆ ಸಹಿ ಮಾಡಿದವರ ಕಚೇರಿಯಲ್ಲಿ.

ಈ ಮೇಲ್ಕಂಡ ದಿನಾಂಕಗಳಂದು ಸರ್ಕಾರಿ ರಜೆ ಘೋಷಣೆಯಾದಲ್ಲಿ ಅದರ ಮುಂದಿನ ಕೆಲಸದ ದಿನಾಂಕವನ್ನು ಪರಿಗಣಿಸುವುದು.

ಟೆಂಡರ್ ನಿಯಮ/ಟೆಂಡರ್ ಷರತ್ತುಗಳು/ಟೆಂಡರ್ ಪ್ರೋಸೆಸ್ಸಿಂಗ್ ಶುಲ್ಕ/ EMD ಮೊತ್ತ ಇತ್ಯಾದಿ ವಿವರಗಳಿಗೆ **https://kppp.karnataka.gov.in** ಮೂಲಕ ಮಾಹಿತಿ ಪಡೆಯಬಹುದು ಅಥವಾ ಈ ಕೆಳಗೆ ಸಹಿ ಮಾಡಿದವರ ಕಚೇರಿಯಲ್ಲಿ ಸಂಬಂಧಿಸಿದ ವಿಷಯ ನಿರ್ವಾಹಕರನ್ನು ಸಂಪರ್ಕಿಸಬಹುದು.

ಟೆಂಡರಗಳನ್ನು ಸ್ವೀಕರಿಸುವ ಅಧಿಕಾರಿಯು ಯಾವುದೇ ಕಾರಣ ನೀಡದೇ, ಯಾವುದೇ ಟೆಂಡರನ್ನು ಅಥವಾ ಎಲ್ಲಾ ಟೆಂಡರಗಳನ್ನು ತಿರಸ್ಕರಿಸುವ ಅಧಿಕಾರವನ್ನು ಹೊಂದಿರುತ್ತಾರೆ

ಸಹಿ/–
ಕಾರ್ಯನಿರ್ವಾಹಕ ಇಂಜನೀಯರರು,
ಪಂ.ರಾ.ಇಂ.ವಿಭಾಗ, ಧಾರವಾಡ.

ವಾ.ಸಾ.ಇ./ಧಾರವಾಡ/1263/ದೇಶಪಾಂಡೆಪಬ್ಲಿಸಿಟಿ/2025–26

ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ

(ಕರ್ನಾಟಕ ಸರ್ಕಾರದ ಅಧೀನ ಸಂಸ್ಥೆ)

ನಂ.2, 2/1 ಮತ್ತು 2/3, ಕಾಳಿದಾಸ ಮಾರ್ಗ, 1ನೇ ಮುಖ್ಯ ರಸ್ತೆ, ಗಾಂಧಿನಗರ ಬೆಂಗಳೂರು – 560 009. ದೂ.ಸಂಖ್ಯೆ : 080–22265383, website: www.kiadb.in

ನಂ. ಐಎಡಿಬಿ/ಇಎನ್‌ಜಿಜಿ/ಇಟಿಎನ್‌ಡಿ–ಇಪಿ/87/2056/2025–26 ದಿನಾಂಕ : 20.02.2026

ಅಲ್ಪಾವಧಿ ಟೆಂಡರ್ ಆಹ್ವಾನ ಪ್ರಕಟಣೆ

ಕರ್ನಾಟಕ ಸರ್ಕಾರದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಮೂಲಕ

ಕೆಐಎಡಿಬಿಯು ಈ ಕೆಳಕಂಡ ಕಾಮಗಾರಿಗೆ ಸಾಕಷ್ಟು ಆರ್ಥಿಕ ಸಂಪನ್ಮೂಲ, ಸೂಕ್ತ ನಿರ್ಮಾಣ ಉಪಕರಣಗಳು, ತಾಂತ್ರಿಕ ಮಾನವಶಕ್ತಿ ಮತ್ತು ಇದೇ ರೀತಿಯ ಕೆಲಸದಲ್ಲಿ ಸಾಕಷ್ಟು ಅನುಭವ ಹೊಂದಿರುವ ಅರ್ಹ ಗುತ್ತಿಗೆದಾರರಿಂದ, ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕ ಕಾಯ್ದೆ 1999 ಮತ್ತು ನಿಯಮ 2000 ರನ್ವಯ ದ್ವಿ ಲಕೋಟೆ ಪದ್ಧತಿಯಡಿಯಲ್ಲಿ ಐಟಂ ದರ ಆಧಾರದ ಮೇಲೆ ವಿದ್ಯುನ್ಮಾನ ಪೋರ್ಟಲ್ ಮೂಲಕ ಟೆಂಡರ್‌ನ್ನು ಆಹ್ವಾನಿಸಲಾಗಿದೆ.

ಕಾಮಗಾರಿ ಹೆಸರು : ಹಾಸನ ತಾಲ್ಲೂಕು ಮತ್ತು ಜಿಲ್ಲೆ ತಿಮ್ಮನಹಳ್ಳಿ ಕೈಗಾರಿಕಾ ಪ್ರದೇಶಕ್ಕೆ ಹಾಲಿಯಿರುವ 66/11ಕೆವಿ ಕಂಡ್ಲಿ ಉಪ ಕೇಂದ್ರದಿಂದ 11ಕೆವಿ ಎಕ್ಸ್‌ಪ್ರೆಸ್ ಫೀಡರ್ ಅಳವಡಿಸುವುದು ಮತ್ತು ತಿಮ್ಮನಹಳ್ಳಿ ಕೈಗಾರಿಕಾ ಪ್ರದೇಶಕ್ಕೆ 250ಕೆವಿಎ ಪರಿವರ್ತಕಗಳನ್ನು ಒದಗಿಸುವ ಕಾಮಗಾರಿ.

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ : 07.03.2026 ಸಂಜೆ 4.00 ಗಂಟೆಯವರೆಗೆ.

ಅರ್ಜಿದಾರರು ಬಿಡ್ಡಿಂಗ್ ದಸ್ತಾವೇಜುಗಳನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ https://kppp.karnataka.gov.in ಮೂಲಕ ಡೌನ್‌ಲೋಡ್ ಮಾಡಿಕೊಳ್ಳಬಹುದು.

ಸಹಿ/–
ಮುಖ್ಯ ಅಭಿಯಂತರರು–1,
ಕೆಐಎಡಿಬಿ, ಬೆಂಗಳೂರು

DIPR/CP/5792/Zen/2025-26

ಇಂದಿನ ಪಂದ್ಯ

ನ್ಯೂಜಿಲೆಂಡ್ vs ಪಾಕಿಸ್ತಾನ
ಸಂಜೆ 7 (ಕೊಲಂಬೋ)

ಕಿರುಸುದ್ದಿ

ಕೊನೆಯ ಪಂದ್ಯದಲ್ಲಿ ಆಸ್ಟ್ರೇಲಿಯಾಗೆ ಗೆಲುವು



ಪಲ್ಲೆಕೆಲೆ: ಟಿ20 ವಿಶ್ವಕಪ್ ಪಂದ್ಯಾವಳಿಯಲ್ಲಿ ಭಾರೀ ಹಿನ್ನಡೆ ಅನುಭವಿಸಿದ್ದಲ್ಲದೆ, ಲೀಗ್ ಹಂತದಲ್ಲೇ ಬರಿಗೈಯಿಂದ ಹೊರಬಿದ್ದ ಆಸ್ಟ್ರೇಲಿಯಾ ತಂಡವು ತನ್ನ ನೈಜ ಲಯಕ್ಕೆ ಕೊನೆಯ ಪಂದ್ಯದ ವೇಳೆ ಮರಳಿದೆ. ಜಿಂಬಾಬ್ವೆ, ಶ್ರೀಲಂಕಾ ಅಂತಹ ತಂಡಗಳ ವಿರುದ್ಧ ತೀರಾ ಗರ್ವಭಂಗವಾಗುವಂತೆ ಸೋತಿರುವ ಆಸೀಸ್, ಕೊನೆಯ ಲೀಗ್ ಪಂದ್ಯದಲ್ಲಿ ಮಿಂಚಿತು. ಒಂಥರಾ ಆಟ ಮುಗಿದ ಮೇಲೆ ಮೈದಾನಕ್ಕಿಳಿದಂತೆ ಮಾಡಿತು. ಒಮನ್ ವಿರುದ್ಧದ ಪಂದ್ಯದಲ್ಲಿ ಮೊದಲು ಬ್ಯಾಟಿಂಗ್ ಮಾಡಿದ ಒಮನ್ ತಂಡವನ್ನು 104 ರನ್ ಮಾತ್ರಕ್ಕೆ ಆಲೌಟ್ ಮಾಡಿತು. 9.4 ಓವರ್‌ಗಳಲ್ಲೇ ತನ್ನ ಗುರಿಯನ್ನು ಭೇದಿಸಿತು. ಸೋತ ಕಹಿ ನೆನಪಿನೊಂದಿಗೆ ಒಂದು ಸಮಾಧಾನಕರ ಗೆಲುವು ಜೇಬಿಗೆ ಹಾಕಿಕೊಂಡಿರುವ ಮಾರ್ಷ್ ಪಡೆ, ಮುಂದಿನ ಕೂಟಗಳಲ್ಲಿ ವಿಶೇಷ ಕಂಬ್ಯಾಕ್ ಮಾಡುವ ಭರವಸೆ ನೀಡಿತು. ಬೌಲರ್‌ಗಳು ಸಮತೋಲಿತ ಪ್ರದರ್ಶನ ನೀಡಿದರು. ಮೊದಲಿನಿಂದಲೂ ಲೆಗ್ ಸ್ಪಿನ್ನರ್ ಆ್ಯಡಮ್ ಜಂಪಾ 4 ವಿಕೆಟ್ ಕಿತ್ತಿ ಮೆರೆದರು. ಮ್ಯಾಕ್ಸವೆಲ್ 2 ಮತ್ತು ಬಾರ್ಟ್‌ಲೆಟ್ 2 ವಿಕೆಟ್ ಪಡೆದರು. ಬ್ಯಾಟಿಂಗ್ ಮಾಡುವಾಗ ತನ್ನ ಹಳೆಯ ಲಯ ನೆನಪಿಸಿಕೊಂಡ ಆಸ್ಟ್ರೇಲಿಯಾ ಒಮನ್ ಬೌಲರ್‌ಗಳ ಬೆವರಿಳಿಸಿದರು. ಮನಬಂದಂತೆ ದಂಡಿಸಿದರು. ಮಿಚೆಲ್ ಮಾರ್ಷ್ 33 ಬಾಕ್ ಮಾತ್ರದಲ್ಲಿ 7 ಬೌಂಡರಿ ಮತ್ತು 4 ಸಿಕ್ಸರ್‌ಗಳೊಂದಿಗೆ 64 ರನ್ ಗಳಿಸಿದರು. ಅಜೇಯರಾದರು. ಹೆಡ್ 32 ರನ್ ಬಾರಿಸಿ ಭದ್ರ ಬುನಾದಿ ಹಾಕಿಕೊಟ್ಟರು. ಇನ್ನುಳಿದಂತೆ ಇಂಗ್ಲಿಸ್ 8 ರನ್ ಗಳಿಸಿ ಬ್ಯಾಟಿಂಗ್ ಮಾಡುತ್ತಿದ್ದರು. ಅಷ್ಟೊತ್ತಿಗಾಗಲೇ ಪಂದ್ಯ ಮುಗಿಯಿತು. ಇಲ್ಲಿಗೆ ಲೀಗ್ ಹಂತದ ಪಂದ್ಯಗಳು ಮುಕ್ತಾಯಗೊಂಡವು.

ಹಂಡ್ರೆಡ್ ಲೀಗ್ ಹರಾಜಿನಲ್ಲಿ 17 ಭಾರತೀಯರು

ಹೊಸದಿಲ್ಲಿ: ದಿ ಹಂಡ್ರೇಡ್ ಲೀಗ್ ಪಂದ್ಯಾವಳಿಯ ಹರಾಜಿಗಾಗಿ 17ಭಾರತೀಯ ಆಟಗಾರ್ತಿಯರು ನೋಂದಿಸಿಕೊಂಡಿದ್ದು, ದೀಪ್ತಿ ಶರ್ಮ, ರಿಚಾ ಘೋಷ್ ನಮ್ಮ ದೇಶದ ಪ್ರಮುಖ ಆಕರ್ಷಣೆಯಾಗಿದ್ದಾರೆ. ರಿಚಾ ಘೋಷ್ ತಮ್ಮನ್ನು 50 ಸಾವಿರ ಪೌಂಡ್ ಮೂಲ ಬೆಲೆಯ ಬ್ರಾಕೆಟ್‌ನಲ್ಲಿ ನೋಂದಾಯಿಸಿಕೊಂಡಿದ್ದಾರೆ. ದೀಪ್ತಿ ಶರ್ಮ 27,500 ಪೌಂಡ್‌ಗಳ ಪಟ್ಟಿಯಲ್ಲಿ ನೋಂದಾಯಿಸಿಕೊಂಡಿದ್ದಾರೆ. ಇಬ್ಬರೂ ಆಟಗಾರ್ತಿಯರು ಈ ಮೊದಲೇ ಹಂಡ್ರೇಡ್ ಲೀಗ್ ಆಡಿದ್ದರು. ಇವರನ್ನು ಹೊರತುಪಡಿಸಿ ಪ್ರತಿಕಾ ರಾವಲ್, ಚಾರಣಿ, ಪೂಜಾ ವಸ್ತ್ರಕರ್ ಅವರೂ ನೋಂದಾಯಿಸಿಕೊಂಡಿದ್ದಾರೆ.

ನೋಂದಾಯಿಸಿಕೊಂಡ ಭಾರತೀಯರು: ರಿಚಾ ಘೋಷ್,ಪ್ರತೀಕಾ ರಾವಲ್, ದೀಪ್ತಿ ಶರ್ಮ, ಎನ್. ಶ್ರೀ ಚಾರಣಿ, ಪೂಜಾ ವಸ್ತ್ರಕರ್,ಯಾಸ್ತಿಕಾ ಭಾಟಿಯಾ, ವೃಂದಾ ದಿನೇಶ್, ಕಾಶ್ವೀ ಗೌತಮ್, ಶಿಖಾ ಪಾಂಡೆ, ಶ್ರೇಯಾಂಕಾ ಪಾಟೀಲ್, ನಿಕಿ ಪ್ರಸಾದ್, ಅರುಂಧತಿ ರೆಡ್ಡಿ, ಸಜೀವನ್ ಸಜನಾ, ನಂದನಿ ಶರ್ಮ, ಆಶಾ ಸೋಭಾನ, ದೀಯಾ ಯಾದವ್, ರಾಧಾ ಯಾದವ್.

ಒಲಿಂಪಿಕ್ಸ್‌ನ ಅಥ್ಲೆಟಿಕ್ಸ್ ಕಮಿಷನ್‌ಗೆ ಪೌಲ್ ಅಧ್ಯಕ್ಷ

ಹೊಸದಿಲ್ಲಿ: ಸ್ಪೇನ್‌ನ ಬಾಸ್ಕೆಟ್‌ಬಾಲರ್ ಪೌಲ್ ಗ್ಯಾಸಲ್ ಅವರು ಅಂತಾರಾಷ್ಟ್ರೀಯ ಒಲಿಂಪಿಕ್ಸ್ ಸಮಿತಿಯ ಅಥ್ಲೆಟಿಕ್ಸ್ ಸಮಿತಿಯ ಅಧ್ಯಕ್ಷರಾಗಿ ಆಯ್ಕೆಯಾದರು. ಒಲಿಂಪಿಕ್ಸ್ ಸಂಬಂಧಿಸಿದ ಕೆಲಸಗಳು ವಿರಾಮರಹಿತವಾಗಿ ನಡೆಯುತ್ತಿವೆ. ಒಂದು ಕಡೆ ವಿಂಟರ್ ಒಲಿಂಪಿಕ್ಸ್ ಸಿದ್ಧತೆಗಳೂ ನಡೆಯುತ್ತಿವೆ. ಇದೇ ವೇಳೆ ಹೊಸ ತಂಡದ ಆಯ್ಕೆಗಾಗಿ ಚುನಾವಣೆ ನಡೆಸಿದೆ. ಈ ಚುನಾವಣೆಯಲ್ಲಿ ಅವರು ಗೆದ್ದು ಬೀಗಿದರು. ಭಾರತದ ಶೂಟರ್, ಚಿನ್ನದ ಪದಕ ವಿಜೇತ ಅಭಿನವ್ ಬಿಂದ್ರಾ ಅವರು, ತಮ್ಮ ಎರಡನೇ ಉಪಾಧ್ಯಕ್ಷ ಸ್ಥಾನಕ್ಕಾಗಿ ಚುನಾವಣೆಯಲ್ಲಿ ಸ್ಪರ್ಧಿಸಲಿದ್ದಾರೆ. 2018ರಲ್ಲಿ ಅವರು ಉಪಾಧ್ಯಕ್ಷರಾಗಿ ಆಯ್ಕೆಯಾಗಿ ಒಂದು ಅವಧಿ ಮುಗಿಸಿದ್ದಾರೆ. ಒಲಿಂಪಿಕ್ಸ್ ಸಂಸ್ಥೆಯು ಉಪಾಧ್ಯಕ್ಷ ಹುದ್ದೆಗೆ ಎರಡು ಸ್ಥಾನಗಳನ್ನು ಹೊಂದಿದೆ. ಮೊದಲನೇ ಉಪಾಧ್ಯಕ್ಷರಾಗಿ ಕೆನಡಾದ ಸ್ಮಿತ್ ಅವರನ್ನು ಆಯ್ಕೆ ಮಾಡಲಾಗಿದೆ.

ಪ್ರಮುಖ ಹಂತಕ್ಕೆ ಟಿ20 ವಿಶ್ವಕಪ್ | ಎಲ್ಲ ತಂಡಗಳಿಗೂ 3 ಪಂದ್ಯ | ಮೊದಲನೇ ಗುಂಪಿನಲ್ಲಿ ಭಾರತ

ಇಂದಿನಿಂದ ಸೂಪರ್ ಪಂದ್ಯಗಳು

» ದ.ಆಫ್ರಿಕಾ, ಜಿಂಬಾಬ್ವೆ ಹಾಗೂ ವೆಸ್ಟ್ ಇಂಡೀಸ್ ವಿರುದ್ಧ ಭಾರತ ಪಂದ್ಯ

ವಿಶ್ವದ ಕ್ರಿಕೆಟ್ ಅಭಿಮಾನಿಗಳನ್ನು ರಂಜಿಸುತ್ತಿರುವ ಟಿ20 ವಿಶ್ವಕಪ್ ಪಂದ್ಯಾವಳಿಯ ಮುಖ್ಯ ಘಟ್ಟಕ್ಕೆ ತಲುಪಿದೆ. ಹತ್ತಾರು ಬಾರಿ ಅಭಿಮಾನಿಗಳನ್ನು ನಿಬ್ಬೆರಗಾಗಿಸಿ ತುದಿಗಾಲಲ್ಲಿ ನಿಲ್ಲುವಂತೆ ಮಾಡಿದ ನಂತರ ಲೀಗ್ ಹಂತದ ಪಂದ್ಯಗಳು ಶುಕ್ರವಾರ ಮುಕ್ತಾಯಗೊಂಡಿವೆ. ಶನಿವಾರದಿಂದ ಸೂಪರ್ ಪಂದ್ಯಗಳು ಶುರುವಾಗಲಿವೆ.

20 ತಂಡಗಳಲ್ಲಿ 12 ತಂಡಗಳ ಆಟಗಾರರುತಮ್ಮ ಮನೆ ಸೇರಲಿದ್ದಾರೆ. ಇದರಲ್ಲಿ ಆಸ್ಟ್ರೇಲಿಯಾ ತಂಡವೂ ಸೇರಿದೆ ಎಂಬುದು ಆಶ್ಚರ್ಯದಿಂದ ನೋಡಬೇಕಾಗಿರುವ ಸಂಗತಿ. ಫೆಬ್ರವರಿ 7ರಿಂದ ಶುರುವಾದ ಪಂದ್ಯಗಳು ದಿನಕ್ಕೆ ಮೂರರಂತೆ ನಡೆದವು. ಹತ್ತಾರು ಪಂದ್ಯಗಳಲ್ಲಿ ನೂರಾರು ಬ್ಯಾಟರ್‌ಗಳು ಮಿಂಚಿದರು. ತಮ್ಮ ತಂಡಗಳನ್ನು ಗೆಲ್ಲಿಸಿದರು. ಅಭಿಮಾನಿಗಳ ಎದೆಬಡಿತ ಹೆಚ್ಚಿಸಿದರು. ಬೌಲರ್‌ಗಳೂ ಕೂಡ ಅದಕ್ಕೆ ಕಿಕ್ ನೀಡಿ ಪಂದ್ಯಗಳನ್ನು ಗೆಲ್ಲಿಸಿದರು. ಕೆಲವು ದಂಡಿಸಿಕೊಂಡರು. ಇನ್ನು ಕೆಲವರು ಹೀರೋ ಎನಿಸಿಕೊಂಡರು.

ಶನಿವಾರದಿಂದ ನಡೆಯಲಿರುವ ಸೂಪರ್ -8ರ ಪಂದ್ಯಗಳಿಂದ ಅಭಿಮಾನಿಗಳಿಗೆ ಇನ್ನಷ್ಟು ರೋಮಾಂಚನಗೊಳಿಸುವುದು ಸುಳ್ಳಲ್ಲ. ಯಾಕೆಂದರೆ ಇಲ್ಲಿಂದ ನಡೆಯಲಿರುವ ಪಂದ್ಯಗಳು ಸೋತ ತಂಡಗಳಿಗೆ ಮನೆ ಹಾದಿ ತೋರಿಸುತ್ತವೆ. ಗೆದ್ದವರಿಗೆ ಟ್ರೋಫಿ ಇರುವ ಹಾದಿ. ಈ ಬೆನ್ನಲ್ಲೇ ಆಟಗಾರರು ಪ್ರತಿಯೊಂದು ಪಂದ್ಯದಲ್ಲಿ ತಮ್ಮ ಅನುಭವ, ಕೌಶಲ ಮತ್ತು ಉತ್ಸಾಹಕ್ಕೂ ಮೀರಿದ ಕ್ರಿಕೆಟ್ ಆಡಲಿದ್ದಾರೆ. ಹೀಗಾಗಿ ಈ ಆಟ ಅಭಿಮಾನಿಗಳ ಭರವಸೆ, ಎಕ್ಸೈಟ್‌ಮೆಂಡ್ ಮತ್ತು ಆತಂಕಗಳು ಉಲ್ಬಣಗೊಳ್ಳುವುದರಲ್ಲಿ ಸಂಶಯವೇ ಇಲ್ಲ, ಸೂಪರ್-8 ಪಂದ್ಯಗಳೇ ಹಾಗೇ.



11 ಪಂದ್ಯಗಳು

ಸೂಪರ್ 8ರಲ್ಲಿ 11 ಪಂದ್ಯಗಳು ನಡೆಯಲಿವೆ. ವಿಶ್ವಕಪ್‌ನಲ್ಲಿ ಭಾಗವಹಿಸಿದ್ದ 20 ತಂಡಗಳ ಪೈಕಿ ಐದರಂತೆ ನಾಲ್ಕು ಗುಂಪುಗಳಲ್ಲಿ ವಿಂಗಡಿಸಲಾಗಿತ್ತು. ತಲಾ ಎರಡು ತಂಡಗಳು ಈಗ ಸೂಪರ್-8ಕ್ಕೆ ಲಗ್ಗೆ ಹಾಕಿವೆ. ಹಂತಕ್ಕೆ ಬಂದ ಎಲ್ಲ ತಂಡಗಳನ್ನು ಎರಡು ಗುಂಪಿನಲ್ಲಿ ಸೇರಿಸಲಾಗಿದೆ. ಇದರಲ್ಲಿ ಟಾಪ್ ಎರಡು ತಂಡಗಳು ಸೆಮಿಗೆ ಮುನ್ನೆಯುತ್ತವೆ. ಇನ್ನುಳಿದ ತಂಡಗಳು ಮನೆಗೆ ಹೋಗುತ್ತವೆ.

ಭಾರತಕ್ಕೆ ಮೂರು ಪಂದ್ಯ

ಸೂಪರ್ ಎಂಟರಲ್ಲಿ ಭಾರತ ಮೂರು ಪಂದ್ಯಗಳನ್ನಾಡಲಿದೆ. ಮೊದಲನೇ ಗುಂಪಿನಲ್ಲಿರುವ ಭಾರತ ಜಿಂಬಾಬ್ವೆ, ದ.ಆಫ್ರಿಕಾ, ವಿಂಡೀಸ್ ತಂಡಗಳನ್ನೊಮ್ಮೆ ಎದುರಿಸಲಿದೆ. ರನ್‌ರೇಟ್ ಮತ್ತು ಗೆಲುವು ಫೈನಲ್ ಹಾದಿಯಲ್ಲಿಡುತ್ತವೆ. ಭಾನುವಾರದಂದು ಮೊದಲ ಪಂದ್ಯವಾಡಲಿರುವ ಭಾರತ, ದ.ಆಫ್ರಿಕಾ ತಂಡವನ್ನು ಎದುರಿಸಲಿದೆ. ಎರಡನೇ ಪಂದ್ಯದಲ್ಲಿ ಜಿಂಬಾಬ್ವೆ ಹಾಗೂ ಮೂರನೇ ಪಂದ್ಯದಲ್ಲಿ ವಿಂಡೀಸ್ ತಂಡವನ್ನು ಎದುರಿಸಲಿದೆ.

ಮೊದಲ ಪಂದ್ಯದಲ್ಲಿ ಪಾಕ್-ಕಿವೀಸ್ ಫೈಟ್

ಸೂಪರ್-8ರ ಮೊದಲನೇ ಪಂದ್ಯದಲ್ಲಿ ಪಾಕಿಸ್ತಾನ ಮತ್ತು ಕಿವೀಸ್ ಪಂದ್ಯಗಳು ಶನಿವಾರದಂದು ಮುಖಾಮುಖಿಯಾಗಲಿವೆ. ಭಾರತದೊಂದಿಗೆ ಸೋತರೂ ಇನ್ನುಳಿದ ಎಲ್ಲ ಪಂದ್ಯಗಳಲ್ಲಿ ಗೆದ್ದು ನಿಂತಿದೆ ಪಾಕಿಸ್ತಾನ. ಮತ್ತೊಂದೆಡೆ ದ.ಆಫ್ರಿಕಾದೊಂದಿಗೆ ಸೋತರೂ ಇನ್ನುಳಿದ ಪಂದ್ಯಗಳಲ್ಲಿ ಸ್ಪಷ್ಟ ಪ್ರಾಬಲ್ಯ ಸಾಧಿಸಿರಯವ ನ್ಯೂಜಿಲೆಂಡ್ ಸನ್ನದ್ಧವಾಗಿ ನಿಂತಿದೆ. ಕೊಲಂಬೋ ವಿಶ್ವಕಪ್‌ನ ಮೊದಲ ಸೂಪರ್-8 ಪಂದ್ಯಕ್ಕೆ ಸಜ್ಜಾಗಿದೆ. ಮೊದಲ ಪಂದ್ಯದಲ್ಲೇ ಗೆದ್ದು ಮುನ್ನಡೆ ಸಾಧಿಸುವ ತವಕದಲ್ಲಿ ಪಾಕಿಸ್ತಾನ ಕಾಣಿಸಿಕೊಂಡರೆ, ತಮ್ಮ ಸೆಮಿ ಖಚಿತತೆಗೆ ಕಿವೀಸ್ ಸಿದ್ಧವಾಗಿದೆ.



ಬಲಿಷ್ಠ ಜಿಂಬಾಬ್ವೆ ಲಗ್ಗೆ

ವಿಶ್ವ ಕ್ರಿಕೆಟ್ ಅನ್ನೇ ನಿಬ್ಬೆರಗಾಗಿ ನಿಲ್ಲಿಸಿರುವ ಜಿಂಬಾಬ್ವೆ ತಂಡವು ತನ್ನ ಲೀಗ್ ಪಂದ್ಯಗಳಲ್ಲಿ ಆಶ್ಚರ್ಯಗಳೊಂದಿಗೆ ಮಿಂಚಿದೆ. ಸೂಪರ್-8ಕ್ಕೆ ಲೀಲಾಜಾಲವಾಗಿ ಎಂಟ್ರಿಕೊಟ್ಟಿರುವ ಜಿಂಬಾಬ್ವೆ ದೊಡ್ಡ ದೊಡ್ಡ ತಂಡಗಳನ್ನು ಸೋಲಿಸಿದೆ. ಶಾಕ್ ನೀಡಿದೆ ಮತ್ತು ಸಂಪೂರ್ಣ ಪ್ರಾಬಲ್ಯ ಸಾಧಿಸಿದೆ. ಒಂದು ಪಂದ್ಯ ರದ್ದಾಗಿರುವುದನ್ನು ಬಿಟ್ಟರೂ ಶ್ರೀಲಂಕಾ ಮತ್ತು ಆಸ್ಟ್ರೇಲಿಯಾ ತಂಡಗಳನ್ನು ಸೋಲಿಸಿ ಮೆರೆದಿದೆ ಜಿಂಬಾಬ್ವೆ. ಈ ಬೆನ್ನಲ್ಲೇ ಎಲ್ಲಾ ವಿಶ್ವ ಕ್ರಿಕೆಟ್ ಅಭಿಮಾನಿಗಳ ಪ್ರಮುಖ ಆಕರ್ಷಣೆಯಾಗಿದೆ.



ಸೂಪರ್-8ರ ವೇಳಾಪಟ್ಟಿ

ದಿನಾಂಕ	ಪಂದ್ಯ	ಸ್ಥಳ	ಸಮಯ
ಫೆ.21	ನ್ಯೂಜಿಲೆಂಡ್-ಪಾಕ್	ಕೊಲಂಬೋ	ಸಂಜೆ 7
ಫೆ.22	ಇಂಗ್ಲೆಂಡ್-ಶ್ರೀಲಂಕಾ	ಪಲ್ಲೆಕೆಲೆ	ಮಧ್ಯಾಹ್ನ 3
ಫೆ.22	ಭಾರತ-ದ.ಆಫ್ರಿಕಾ	ಅಹಮದಾಬಾದ್	ಸಂಜೆ 7
ಫೆ.23	ಜಿಂಬಾಬ್ವೆ-ವಿಂಡೀಸ್	ಮುಂಬೈ	ಸಂಜೆ 7
ಫೆ.24	ಪಾಕ್-ಇಂಗ್ಲೆಂಡ್	ಪಲ್ಲೆಕೆಲೆ	ಸಂಜೆ 7
ಫೆ.25	ನ್ಯೂಜಿಲೆಂಡ್-ಶ್ರೀಲಂಕಾ	ಕೊಲಂಬೋ	ಸಂಜೆ 7
ಫೆ.26	ದ.ಆಫ್ರಿಕಾ-ವಿಂಡೀಸ್	ಅಹಮದಾಬಾದ್	ಮಧ್ಯಾಹ್ನ 3
ಫೆ.26	ಭಾರತ-ಜಿಂಬಾಬ್ವೆ	ಚೆನ್ನೈ	ಸಂಜೆ 7
ಫೆ.27	ಇಂಗ್ಲೆಂಡ್-ನ್ಯೂಜಿಲೆಂಡ್	ಕೊಲಂಬೋ	ಸಂಜೆ 7
ಫೆ.28	ಶ್ರೀಲಂಕಾ-ಪಾಕ್	ಪಲ್ಲೆಕೆಲೆ	ಸಂಜೆ 7
ಮಾ.1	ಜಿಂಬಾಬ್ವೆ-ದ.ಆಫ್ರಿಕಾ	ದಿಲ್ಲಿ	ಮಧ್ಯಾಹ್ನ 7
ಮಾ.1	ವಿಂಡೀಸ್-ಭಾರತ	ಕೋಲ್ಕತ್ತಾ	ಸಂಜೆ 7

ಕರ್ನಾಟಕ ಶೂಟಿಂಗ್ ಲೀಗ್ | ಬಿಕರಿಯಾದ ಶೂಟರ್‌ಗಳಿಗಿಲ್ಲ ನಯಾ ಪೈಸೆ

ಶೂಟಿಂಗ್ ಹರಾಜು ಅಣಕು ಮಾತ್ರ!

ಬೆಂಗಳೂರು: ಕರ್ನಾಟಕ ಶೂಟಿಂಗ್ ಲೀಗ್‌ಗಾಗಿ ಹರಾಜುಗೊಂಡ ಶೂಟರ್‌ಗಳಿಗೆ ದುಡ್ಡು ಸಿಗಲ್ಲ, ಅದೆಲ್ಲಾ ಒಂದು ಅಣಕು ಪ್ರದರ್ಶನವಷ್ಟೇ ಎಂಬ ಆಘಾತಕಾರಿ ಮಾಹಿತಿ ಹೊರಬಿದ್ದಿದೆ.

ಕರ್ನಾಟಕ ಶೂಟಿಂಗ್ ಲೀಗ್ ಎಂಬ ಕೂಟವೊಂದನ್ನುನಡೆಸುವುದಾಗಿಹೇಳಿದ್ದಕರ್ನಾಟಕ ರಾಜ್ಯ ರೈಫಲ್ ಸಂಸ್ಥೆ, ಮಂಗಳವಾರದಂದು ಕಾರ್ಯಕ್ರಮವೊಂದನ್ನು ಮಾಡಿತ್ತು. ಫ್ರಾಂಚೈಸಿ ಮಾದರಿಯಲ್ಲಿ ನಡೆಯುವ ಕೂಟಕ್ಕಾಗಿ ಹರಾಜು ನಡೆಸುವುದಾಗಿ ಹೇಳಿ ಕಾರ್ಯಕ್ರಮ ಅಚ್ಚುಕಟ್ಟಾಗಿ ನಡೆಸಿತ್ತು. 8 ಫ್ರಾಂಚೈಸಿಗಳ ನಡುವೆ ಐಪಿಎಲ್ ಮಾದರಿಯಲ್ಲಿ ನಡೆದಿದ್ದ ಹರಾಜಿನಲ್ಲಿ ಶೂಟರ್‌ಗಳು ಲಕ್ಷ ರೂ.ಗಳ ಮೊತ್ತದಲ್ಲಿ ಬಿಕರಿಯಾಗಿದ್ದರು. ಒಟ್ಟು 88 ಶೂಟರ್‌ಗಳು ವಿವಿಧ ಫ್ರಾಂಚೈಸಿಗಳಿಗೆ ಬಿಕರಿಯಾಗಿದ್ದರು. ಫ್ರಾಂಚೈಸಿಗಳಿಗೆ ತಲಾ 1.75 ಕೋಟಿ ರೂ. ಪರ್ಸ್ ನೀಡಲಾಗಿತ್ತು. ಈ ಪರ್ಸ್‌ನಿಂದ ಫ್ರಾಂಚೈಸಿಗಳು ಲಕ್ಷಾನುಗಟ್ಟಲೇ ಹಣ ನೀಡಿ ಶೂಟರ್‌ಗಳನ್ನು ಖರೀದಿಸಿದ್ದವು. ಆದರೆ ಶೂಟರ್‌ಗಳಿಗೆ ಯಾವುದೇ ನಯಾ ಪೈಸಾ ನೀಡಲಾಗಲ್ಲ, ಅದು ವರ್ಚುವಲ್ ಹಣವಷ್ಟೇ ಎಂದು ಸಂಸ್ಥೆ ಸುದ್ದಿ ಪ್ರಕಟವಾದ ನಂತರ ಹೇಳುತ್ತಿದೆ.

ಸುದ್ದಿ ಹೊರಬಂದ ನಂತರ ಸಂಸ್ಥೆ ಸ್ಪಷ್ಟನೆ

ಅಣಕು ಹರಾಜಿಗಾಗಿ 136 ಶೂಟರ್‌ಗಳು ನೋಂದಣಿ ಮಾಡಿಕೊಂಡಿದ್ದರು. ಎಲ್ಲ ಶೂಟರ್‌ಗಳ ಮೂಲ ಬೆಲೆ 10 ಲಕ್ಷ. ಫ್ರಾಂಚೈಸಿಗಳ ಮಧ್ಯೆ ನಡೆದಿದ್ದ ಬಿಡ್ಡಿಂಗ್‌ನಲ್ಲಿ ಚಿತಪರಿಚಿತ ಶೂಟರ್ ಕೃಥಾರ್ಥ್ ಸವ್ಯಸಾಚಿ 44 ಲಕ್ಷಕ್ಕೆ ಬಿಕರಿಯಾಗಿದ್ದರು. ಅಕುಷ್ಕಾ 43 ಲಕ್ಷ ರೂ.ಗೆ ಬಿಕರಿಯಾಗಿದ್ದರು. ಈ ಬಗ್ಗೆ ಪ್ರಮುಖ ಮಾಧ್ಯಮಗಳು ಸುದ್ದಿ ಪ್ರಕಟಿಸಿದ್ದವು. ಸುದ್ದಿ ಜನರ ಮನೆ ಮುಟ್ಟಿತ್ತು. ಆದರೆ ಶೂಟರ್‌ಗಳಿಗೆ ದುಡ್ಡು ನೀಡಲಾಗಲ್ಲ ಎಂಬ ನಿಬ್ಬೆರಗಾಗಿಸುವ ಸುದ್ದಿ ಹೊರಬಿದ್ದಿದೆ. ವಿಷಯ ಬೇರೆ ಕಡೆಯಿಂದ ಮಾಧ್ಯಮಗಳಿಗೆ ಮುಟ್ಟಿದ ನಂತರ ಅದೊಂದು ಅಣಕು ಅಷ್ಟೆ, ಇದು ಶೂಟರ್‌ಗಳಿಗೆ ಮೊದಲೇ ಗೊತ್ತಿತ್ತು ಎನ್ನುವ ಮೂಲಕ ವಿವಾದ ಮೈಮೇಲಿಂದ ಜಾಡಿಸಿಕೊಳ್ಳುತ್ತಿದೆ ಕರ್ನಾಟಕ ರೈಫಲ್ ಸಂಸ್ಥೆ.



ವಿಷಯದ ಬಗ್ಗೆ ಹೇಳೇ ಇಲ್ಲ: ಮಂಗಳವಾರದ ಇವೆಂಟಿನಲ್ಲಿ ಅಣಕು ದುಡ್ಡಿನ ಬಗ್ಗೆ ಯಾವುದೇ ಮಾಹಿತಿ ನೀಡಿರಲಿಲ್ಲ, ಹರಾಜಿಗೆ ಬಿಡ್ಡಿಂಗ್ ಮಾಡುವ ವೇಳೆ ಲಕ್ಷ ರೂ. ಮೌಲ್ಯದಲ್ಲೇ ಘೋಷಣೆ ಕೂಗಿದ್ದಾರೆ. ಪತ್ರಕರ್ತರಿಗೆಮಾಹಿತಿನೀಡುವಾಗಲೂ ವರ್ಚುವಲ್ ದುಡ್ಡಿನ ಬಗ್ಗೆ ಪ್ರಸ್ತಾವನೆ ಮಾಡಿಲ್ಲ, ನೈಜ ದುಡ್ಡು ಎಂಬಂತೆ ಮಾಹಿತಿ ನೀಡಿದ್ದಾರೆ. ಅಷ್ಟೇ ಅಲ್ಲದೆತಾವೇನೀಡಿದಮಾಧ್ಯಮಪ್ರಕಟಣೆಯಲ್ಲೂ ಈ ಬಗ್ಗೆ ಉಲ್ಲೇಖಿಸಿಲ್ಲ. ಯಾಮಾರಿಸಿದ ವಿಚಾರ ಬಹಿರಂಗವಾದ ತಕ್ಷಣ, ಎಲ್ಲ ಶೂಟರ್‌ಗಳಿಗೆ ತಿಳಿಸಲಾಗಿತ್ತು, ಮಾಧ್ಯಮದೊಂದಿಗೆ ಮಾತನಾಡುವಾಗ ಮಿಸ್ ಕಮ್ಯೂನಿಕೇಶನ್ ಆಗಿದೆ. ನಾವು ಆಗ ಸ್ಪಷ್ಟನೆ ನೀಡಿಲ್ಲ ಎಂದು ತಪ್ಪು ಒಪ್ಪಿಕೊಂಡು, ಸ್ಪಷ್ಟನೆ ನೀಡಿದೆ.

ಸ್ಪಷ್ಟನೆಯಲ್ಲೇನಿದೆ?: ಶೂಟರ್‌ಗಳಿಗೆ ದುಡ್ಡು ನೀಡಲಾಗಲ್ಲ ಎಂಬ ವಿಚಾರ ಹೇಳದೆ ಸುದ್ದಿಗಾರರನ್ನು ಯಾಮಾರಿಸಿದ ನಂತರ ಪ್ರಮುಖ ಮಾಧ್ಯಮಗಳಲ್ಲಿ ದುಡ್ಡಿನ ಮೌಲ್ಯದಲ್ಲೇ ಖರೀದಿ ಮಾಡಲಾಗಿದೆ ಎಂದು ಪ್ರಕಟವಾಗಿದೆ. ಈ ಬಗ್ಗೆ ಸುದ್ದಿ ನೋಡಿದ ಶೂಟರ್‌ಗಳು ಮತ್ತು ಶೂಟರ್‌ಗಳ ಪಾಲಕರು ಪತ್ರಿಕೆಗಳಿಗೆ ಕರೆ ಮಾಡಿ, ದುಡ್ಡು ನೀಡಲಾಗಿಲ್ಲ ಎಂಬ ವಿಚಾರ ಬಹಿರಂಗಪಡಿಸಿದ್ದಾರೆ. ಈ ಬಗ್ಗೆ ಸ್ಪಷ್ಟನೆ ಕೇಳುದಾಗ ರೈಫಲ್ ಸಂಸ್ಥೆ (ಬಿಡ್ಡಿಂಗ್ ಸಂಪೂರ್ಣ ಅಣಕು ಹಣದ ಮೇಲೆ ಆಧಾರವಾಗಿದೆ. ಅಲ್ಲಿ ಉಲ್ಲೇಖಿಸಲಾದ ಮೊತ್ತ ನೈಜವಾಗಿ ನೀಡಲಾಗಲ್ಲ, ಆದರೆ ಈ ವಿಚಾರ ಶೂಟರ್‌ಗಳಿಗೆ ಮೊದಲೇ ಗೊತ್ತಿತ್ತು) ಎಂದು ಹೇಳಿದೆ.

ಕೂಟ ನಡೆಯುತ್ತೆ: ಕೂಟ ಯಥಾಪ್ರಕಾರ 28 ಫೆ. ಮತ್ತು ಮಾ.1ರಂದು ನಡೆಯಲಿದೆ. ಶೂಟರ್‌ಗಳಿಗೆ ಯಾವುದೇ ಮೊತ್ತ ನೀಡಲಾಗಲ್ಲ, ಬದಲಾಗಿ ಗೆದ್ದ ತಂಡಕ್ಕೆ ಮಾತ್ರ ನಿಗದಿತ ನೀಡಲಾಗುವುದು ಎಂದು ಸಂಸ್ಥೆಗೆ ಸಂಬಂಧಿಸಿದ ಅಧಿಕಾರಿಗಳು ತಿಳಿಸಿದ್ದಾರೆ.

ರೈಸಿಂಗ್ ಏಷ್ಯಾಕಪ್: ಫೈನಲ್‌ಗೆ ಭಾರತ

ಬ್ಯಾಂಕಾಕ್: ಸಮತೋಲಿತ ಪ್ರದರ್ಶನ ನೀಡಿದ ಭಾರತ ಎ ಮಹಿಳೆಯರ ತಂಡವು ಇಲ್ಲಿ ನಡೆದ ರೈಸಿಂಗ್ ಸ್ಟಾರ್ಸ್ ಏಷ್ಯಾಕಪ್ ಪಂದ್ಯಾವಳಿಯ ಫೈನಲ್‌ಗೇರಿದರು. ಶುಕ್ರವಾರದ ಸೆಮಿಫೈನಲ್ ಪಂದ್ಯದಲ್ಲಿ ಶ್ರೀಲಂಕಾ ತಂಡವನ್ನು ಮಣಿಸಿ ಮನೆಗೆ ಕಳುಹಿಸಿದ ಭಾರತ, ಮುಂದಿನ ಪಂದ್ಯದಲ್ಲಿ ಬಾಂಗ್ಲಾದೇಶ ತಂಡವನ್ನು ಎದುರಿಸಲಿದೆ.

ಶ್ರೀಲಂಕಾ ಆಟಗಾರರನ್ನು ನಿಬ್ಬೆರಗಾಗಿ ನಿಲ್ಲುವಂತೆ ಮಾಡಿದ ಭಾರತ, ಕರಾರುವಾಕ್ಕಾಗಿ ಐದು ವಿಕೆಟ್‌ಗಳ ಜಯ ಸಾಧಿಸಿತು. ನಾಯಕಿ ರಾಧಾ ಯಾದವ್ ಸಮರ್ಥ ಪ್ರದರ್ಶನ ನೀಡಿ ಪಂದ್ಯಶ್ರೇಷ್ಠ ಪ್ರಶಸ್ತಿಗೆ ಭಾಜನರಾದರು. ಬೌಲಿಂಗ್‌ನಲ್ಲಿ 4/19 ಅಂಕಿಅಂಶಗಳೊಂದಿಗೆ ಲಂಕಾ ಎ' ಬ್ಯಾಟಿಂಗ್ ಪಂಗಡವನ್ನು ಕುಗ್ಗಿಸಿದ ಅವರು,



ನಂತರ ಕಠಿಣ ಚೇಸ್‌ನಲ್ಲಿ ಕೇವಲ 18 ಎಸೆತಗಳಲ್ಲಿ ಅಜೇಯ 31 ರನ್ ಸಿಡಿಸಿ ತಂಡವನ್ನು ಗುರಿ ದಾಟಿಸಿದರು.

ಟಾಸ್ ಗೆದ್ದು ಮೊದಲು ಬ್ಯಾಟಿಂಗ್ ಮಾಡಿದ ಶ್ರೀಲಂಕಾ ಎ' 118 ರನ್‌ಗಳಿಗೆ ಆಲೌಟ್ ಆಯಿತು. ರಾಧಾ ಯಾದವ್ ಮಾರಕ ದಾಳಿ ನಡೆಸಿದರೆ, ತನೂಜಾ ಕನ್ವರ್ ಹಾಗೂ ಪ್ರೇಮಾ ರಾವತ್ ತಲಾ ಎರಡು ವಿಕೆಟ್ ಪಡೆದು ರನ್ ಮಟ್ಟ ನಿಯಂತ್ರಿಸಿದರು. ಪ್ರತ್ಯುತ್ತರವಾಗಿ ವೃಂದಾ ದಿನೇಶ್ ಆರಂಭದಲ್ಲೇ ದಿಟ್ಟ ಆಟವಾಡಿ 20 ಚೆಂಡುಗಳಲ್ಲಿ 42 ರನ್ ಗಳಿಸಿ ಭದ್ರ ಬುನಾದಿ ಹಾಕಿಕೊಟ್ಟರು. ಮಧ್ಯದಲ್ಲಿ ಕೆಲವು ವಿಕೆಟ್ ಕಳೆದುಕೊಂಡರೂ, ರಾಧಾ ಅವರ ಕೊನೆಯ ಓವರ್‌ಗಳ ಸ್ಫೋಟಕ ಬ್ಯಾಟಿಂಗ್ ಭಾರತ ಎ' ತಂಡಕ್ಕೆ ಸುಲಭ ಜಯ ತಂದಿತು. ಫೆಬ್ರವರಿ 22ರಂದು ನಡೆಯಲಿರುವ ಫೈನಲ್‌ನಲ್ಲಿ ಭಾರತ ಎ ತಂಡವು ಬಾಂಗ್ಲಾದೇಶ ವಿರುದ್ಧ ಸೆಣಸಲಿದೆ.

ಅಂಧರ ಕ್ರಿಕೆಟ್‌ಗೆ ಬೆಂಬಲ



ಬೆಂಗಳೂರು: ಅಂತಾರಾಷ್ಟ್ರೀಯ ಕ್ರಿಕೆಟ್‌ನಲ್ಲಿ ಭಾರತದ ಪಾರುಪತ್ಯ ಇನ್ನಷ್ಟು ಬಲಪಡಿಸಲು ಭಾರತೀಯ ಕ್ರಿಕೆಟ್ ನಿಯಂತ್ರಣ ಮಂಡಳಿ ಮಹತ್ವದ ಹೆಜ್ಜೆ ಇಟ್ಟಿದೆ. ಪುರುಷರ-ಮಹಿಳೆಯರ ಕ್ರಿಕೆಟ್ ನಡೆಸುವ ಅಧಿಕಾರ ಹೊಂದಿರುವ ಬಿಸಿಸಿಐ ಇದೀಗ ಅಂಧರ ಕ್ರಿಕೆಟ್‌ಗೂ ಬೆಂಬಲ ನೀಡುವುದಾಗಿ ಘೋಷಿಸಿದೆ.

ಕಳೆದ ದಶಕದಲ್ಲಿ ಭಾರತದ ದೃಷ್ಟಿವೈಕಲ್ಯ ಕ್ರಿಕೆಟ್ ತಂಡವು ಜಾಗತಿಕ ವೇದಿಕೆಯಲ್ಲಿ ಅದ್ಭುತ ಸಾಧನೆ ಮಾಡಿದೆ. 2012ರಿಂದ ಹಲವು ಪುರುಷರ ವಿಶ್ವಕಪ್ ಪ್ರಶಸ್ತಿಗಳನ್ನು ಗೆದ್ದಿರುವ ಭಾರತ, ಮಹಿಳಾ ವಿಭಾಗದಲ್ಲೂ ಪ್ರಥಮ ವಿಶ್ವಕಪ್ ಜಯ ಸಾಧಿಸಿ ಇತಿಹಾಸ ನಿರ್ಮಿಸಿದೆ. ಭಾರತದಲ್ಲಿ ಕ್ರಿಕೆಟ್ ಅನ್ನು ಬಿಸಿಸಿಐ ನಿಯಂತ್ರಿಸುವುದಾದರೂ ಅಂಧರ ಕ್ರಿಕೆಟ್‌ಗೆ ಬೇರೊಂದು ಸಂಸ್ಥೆಯಿದೆ. ಹಣಕಾಸು ವಿಚಾರದಿಂದ ಹಿಡಿದು, ಟೂರ್ನಿಗಳ ಆಯೋಜನೆ, ಅಭ್ಯಾಸ ಮತ್ತು ಆಟಗಾರರ ಪಾಲನೆ ಕೂಡ ಅದೇ ಬೇರೆ ಸಂಸ್ಥೆ ನೋಡಿಕೊಳ್ಳುತ್ತದೆ. ಇದೀಗ ಬಿಸಿಸಿಐ ಬೆಂಬಲ ನೀಡುವುದಾಗಿ ಹೇಳಿದೆ.

ಶುಕ್ರವಾರದಂದು ಭಾರತೀಯ ಮಹಿಳೆಯರ ತಂಡಕ್ಕೆ ಭೇಟಿ ನೀಡಿದ ಐಸಿಸಿ ಅಧ್ಯಕ್ಷ ಮತ್ತು ಬಿಸಿಸಿಐ ಮಾಜಿ ಕಾರ್ಯದರ್ಶಿ ಜಯ್ ಶಾ ಈ ಬಗ್ಗೆ ಘೋಷಿಸಿದ್ದಾರೆ.

ಕ್ಯಾಬಿ ಅಧ್ಯಕ್ಷ ಡಾ. ಮಹಾಂತೇಶ್ ಜಿ. ಕಿವಾಡಸಣ್ಣನವರ ಹಾಗೂ ಪ್ರಧಾನ ಕಾರ್ಯದರ್ಶಿ ಶೈಲೇಂದ್ರ ಯಾದವ್ ಅವರೊಂದಿಗೆ ಸಮಾಲೋಚನೆ ನಡೆಸಿದ ಅವರು ಕ್ರಿಕೆಟ್‌ಗೆ ಸಂಸ್ಥಾತ್ಮಕ ಬೆಂಬಲ ಒದಗಿಸುವ ಭರವಸೆ ನೀಡಿದ್ದಾರೆ.

ಏನೇನು ಬೆಂಬಲ?

ಬಿಸಿಸಿಐ ಇನ್ನುಮುಂದೆ ಸಿಎಸ್‌ಆರ್ ಅನುದಾನಗಳ ಮೂಲಕ ದೊರಕುತ್ತಿದ್ದ ಸಹಾಯದಲ್ಲಿ ಇರುವ ಕೊರತೆಯನ್ನು ಈ ಸಹಭಾಗಿತ್ವ ಭರ್ತಿ ಮಾಡಲಿದೆ. ವಿಶೇಷವಾಗಿ ವಿದೇಶಿ ಟೂರ್ನಿಗಳ ಆಯೋಜನೆ ಮತ್ತು ಪ್ರವಾಸ ಸರಣಿಗಳಲ್ಲಿ ಭಾಗವಹಿಸುವಿಕೆ ಹೆಚ್ಚಿಸಲು ಇದು ಸಹಕಾರಿ ಆಗಲಿದೆ. ಇದರಿಂದ ಜಾಗತಿಕ ಮಟ್ಟದಲ್ಲಿ ಈ ಮಾದರಿಯ ಕ್ರಿಕೆಟ್ ಪ್ರಚಾರ ಮತ್ತಷ್ಟು ವಿಸ್ತರಿಸಲಿದೆ.

ಪ್ರಮುಖ ಬೆಂಬಲಗಳು

- ಪ್ರತಿ ತಂಡಕ್ಕೂ ವರ್ಷಕ್ಕೆ ಎರಡು ವಿದೇಶಿ ಟೂರ್ನಿಗಳಿಗೆ ಅಂತಾರಾಷ್ಟ್ರೀಯ ಪ್ರಯಾಣ ಹಾಗೂ ವಸತಿ ವ್ಯವಸ್ಥೆ.
- ಭಾರತದಲ್ಲಿ ನಡೆಯುವ ದ್ವಿಪಕ್ಷೀಯ ಸರಣಿಗಳಲ್ಲಿ ಆತಿಥೇಯ ಹಾಗೂ ಅತಿಥಿ ತಂಡಗಳಿಗೆ ವಸತಿ ವ್ಯವಸ್ಥೆ.
- ದೇಶೀಯ ಮತ್ತು ಅಂತಾರಾಷ್ಟ್ರೀಯ ಪಂದ್ಯಗಳಿಗೆ ಬಿಸಿಸಿಐ ಬೆಂಬಲಿತ ಕ್ರೀಡಾಂಗಣಗಳು ಒದಗಿಸುವುದು.
- ವಿಶ್ವದರ್ಜೆಯ ಸೌಲತ್ತಿನ ಮೈದಾನಗಳಲ್ಲಿ ಪಂದ್ಯಗಳನ್ನು ನಡೆಸಿಕೊಡುವುದು.

ಕ್ಯಾಬಿ ಕೃತಜ್ಞತೆ

ನಮ್ಮ ಕ್ರಿಕೆಟಿಗರ ಪ್ರಯಾಣವನ್ನು ಗೌರವಿಸಿ ಬೆಂಬಲ ನೀಡಿದ ಬಿಸಿಸಿಐ ಮತ್ತು ಜಯ್ ಶಾ ಅವರಿಗೆ ನಾವು ಹೃತ್ಪೂರ್ವಕ ಧನ್ಯವಾದಗಳನ್ನು ತಿಳಿಸುತ್ತೇವೆ, ಎಂದು ಕ್ಯಾಬಿ ಅಧ್ಯಕ್ಷ ಡಾ. ಮಹಾಂತೇಶ್ ಜಿ. ಕಿವಾಡಸನ್ನವರ ಹೇಳಿದರು. ಬಿಸಿಸಿಐ ಬೆಂಬಲ ದೊರೆತಿರುವುದು ನಮ್ಮೆಲ್ಲರಿಗೂ ಹೆಮ್ಮೆಯ ಕ್ಷಣ. ಇದು ನಮ್ಮ ಆಟಗಾರರ ತಲೆಗೆ ಮತ್ತೊಂದು ಕಿರೀಟದ ಪಿಂಚು'. ಇನ್ನು ಮುಂದೆ ಅಂಧರ ಕ್ರಿಕೆಟ್ ಇನ್ನಷ್ಟು ಬೆಳೆಯಲಿದೆ ಮತ್ತು ಅನೇಕ ಮಂದಿಗೆ ಪ್ರೇರಣೆಯಾಗಲಿದೆ ಎಂದರು.

ಬೆಂಗಳೂರು ಓಪನ್: ಸೆಮಿಗೆ ವೈಷ್ಣವಿ

ಬೆಂಗಳೂರು: ಇಲ್ಲಿನ ಟೆನಿಸ್ ಕ್ರೀಡಾಂಗಣದಲ್ಲಿದ್ದ ಅಭಿಮಾನಿಗಳು, ಆಟಗಾರರು ಮತ್ತು ಆಯೋಜಕರು ಇತಿಹಾಸ ಆಗುವುದನ್ನ ಪ್ರತ್ಯಕ್ಷವಾಗಿ ಕಂಡರು. ಭಾರತೀಯ ಆಟಗಾರ್ತಿ ತನ್ನ ದೇಶವನ್ನು ಹೆಮ್ಮೆ ಪಡೆಸುವುದನ್ನು ನೋಡಿದರು. ಕರಾರುವಾಕ್ಕಾಗಿ ತನಗಿಂತ ಹೆಚ್ಚು ಶ್ರೇಯಾಂಕಿತ ಆಟಗಾರ್ತಿಯನ್ನು ಸೋಲಿಸುವುದನ್ನು ನಿಬ್ಬೆರಗಾಗಿ ನೋಡುತ್ತ ನಿಂತರು. ಅವರ ಹೆಸರು ವೈಷ್ಣವಿ ಅಡ್ಕರ್.

ಪ್ರತಿಷ್ಠಿತ ಎಸ್.ಎಮ್. ಕೃಷ್ಣ ಟೆನಿಸ್ ಕ್ರೀಡಾಂಗಣದಲ್ಲಿ ನಡೆಯುತ್ತಿರುವ ಬೆಂಗಳೂರು ಓಪನ್ ಪಂದ್ಯಾವಳಿಯ ಕ್ವಾರ್ಟರ್‌ಫೈನಲ್ ಪಂದ್ಯದಲ್ಲಿ ವೈಷ್ಣವಿ ವಿಶ್ವ ಕ್ರಮಾಂಕ 148 ಹಾಗೂ ನಾಲ್ಕನೇ ಸೀಡ್ ತಾಯಲ್ಲಾ ಪ್ರೆಸ್ಟನ್ ಅವರನ್ನು 6-3, 1-6, 6-4 ಅಂಕಗಳಿಂದ ಸೋಲಿಸಿ ಸಂಭ್ರಮ ಪಟ್ಟರು.

21 ವರ್ಷದ ವೈಷ್ಣವಿ ಭಯವಿಲ್ಲದ ಬೇಸ್‌ಲೈನ್ ಆಟ ಹಾಗೂ ಒತ್ತಡದ ಕ್ಷಣಗಳಲ್ಲಿ ತೋರಿದ ಸಮಾಧಾನದಿಂದ ಉನ್ನತ ಕ್ರಮಾಂಕದ ಆಸ್ಟ್ರೇಲಿಯಾ ಆಟಗಾರ್ತಿಯನ್ನು ಮಣಿಸಿದರು. ಮೊದಲ ಸೆಟ್ ಆರಂಭದಲ್ಲೇ ಬ್ರೇಕ್ ಕಳೆದುಕೊಂಡರೂ ತಕ್ಷಣವೇ ಪ್ರತಿಕ್ರಿಯೆ ನೀಡಿ ಪಂದ್ಯಕ್ಕೆ ಮರಳಿದ ಅಡ್ಕರ್, ಆರುನೇ ಗೇಮ್‌ನಲ್ಲಿ ಮತ್ತೊಮ್ಮೆ ಬ್ರೇಕ್ ಸಾಧಿಸಿ 4-2 ಮುನ್ನಡೆ ಪಡೆದರು. ಪ್ರೆಸ್ಟನ್ ಬ್ರೇಕ್ ಮಾಡಿ 4-3ಕ್ಕೆ ಬಂದರೂ, ಅಡ್ಕರ್ ರ್ಯಾಲಿಗಳ ಮೇಲೆ ಹಿಡಿತ ಸಾಧಿಸಿ 6-3ರಿಂದ ಸೆಟ್ ಮುಗಿಸಿದರು. ಎರಡನೇ ಸೆಟ್‌ನಲ್ಲಿ ಪ್ರೆಸ್ಟನ್ ಪ್ರಬಲ ಸರ್ವ್ ಮತ್ತು ಆಕ್ರಮಣಾತ್ಮಕ ಆಟದಿಂದ 3-0 ಮುನ್ನಡೆ ಪಡೆದು 6-1ರಿಂದ ಸೆಟ್ ಕಬಳಿಸಿ ಪಂದ್ಯವನ್ನು ನಿರ್ಣಾಯಕ ಸೆಟ್‌ಗೆ ತಳ್ಳಿದರು.




ನಿರ್ಣಾಯಕ ಸೆಟ್‌ನಲ್ಲಿ: ಮೂರನೇ ಸೆಟ್‌ನಲ್ಲಿ ಆರಂಭಿಕ ಬ್ರೇಕ್ ಕಳೆದುಕೊಂಡ ಅಡ್ಕರ್ ಧೈರ್ಯ ಕಳೆದುಕೊಳ್ಳದೆ 3-3ಕ್ಕೆ ಸಮಬಲ ಸಾಧಿಸಿದರು. ನಂತರ ಪ್ರೆಸ್ಟನ್ ಮಾಡಿದ ಡಬಲ್ ಫಾಲ್ಟ್‌ಗಳನ್ನು ಸದುಪಯೋಗಪಡಿಸಿಕೊಂಡು 5-3 ಮುನ್ನಡೆ ಪಡೆದರು. ಕೊನೆಗೆ ಹತ್ತನೇ ಗೇಮ್‌ನಲ್ಲಿ ಮೂರು ಮ್ಯಾಚ್ ಪಾಯಿಂಟ್ ಗಳಿಸಿ, ಪ್ರೆಸ್ಟನ್ ಬ್ಯಾಕ್‌ಹ್ಯಾಂಡ್ ಔಟ್ ಆಗುತ್ತಿದ್ದಂತೆ ವಿಜಯೋತ್ಸವ ಆಚರಿಸಿದರು.

ಸೆಮಿಫೈನಲ್‌ನಲ್ಲಿ ಅಡ್ಕರ್ ಈಗ ದ್ವಿತೀಯ ಸೀಡ್ ಲಾನ್ಲಾ ಅವರನ್ನು ಎದುರಿಸಲಿದ್ದಾರೆ. ತಾರರುದೀ, ಎಲೆನಾ ಪ್ರಿದಾಂಕಿನಾ ವಿರುದ್ಧ 6-1, 6-3 ಸರಳ ಜಯ ಸಾಧಿಸಿ ಸೆಮಿಫೈನಲ್ ಪ್ರವೇಶಿಸಿದರು.

ಪದಬಂಧ

» ರಾಜಾ ಸಂಗಮೇಶ ಹಿರೇಮಠ



5902

ಎಡದಿಂದ ಬಲಕ್ಕೆ
2.ಮಠದ ನಡುವೆ ಈ ಮಹಾಕಾವ್ಯವಿದೆ (5)
5.ಇದು ತಾತ್ಕಾಲಿಕವಾಗಿ ತಂಗುವ ಸ್ಥಳ (3)
7.ಆಕಾಶವೂ ಹೌದು-ಬಟ್ಟೆಯೂ ಹೌದು (3)
9.ಶಿವನ ಒಂದು ಉಗ್ರವಾದ ನೃತ್ಯ (3)
11.ಕಲದ ನಡುವೆ ಅಂತಿಮ ಸಮಯವಿದೆ (4)
13.ಹೊರತುಪಡಿಸು-ಪ್ರತ್ಯೇಕಗೊಳಿಸುವಿಕೆ (4)
16.ವಿದೂಷಕನಿಲ್ಲಿ ತಿರುಗಿದ್ದಾನೆ (4)
17.ಅರ್ಧಂಬರ್ಧ ಮಾಡುವ ಜಳಕ (4)

ಮೇಲಿನಿಂದ ಕೆಳಕ್ಕೆ
1.ಉತ್ತರಪ್ರದೇಶದಲ್ಲಿರುವ ಪವಿತ್ರ ಕ್ಷೇತ್ರ (2)
2.ಆರಮನೆಯ ನಡುವೆ ಅಡಗಿದ ವೃಕ್ಷ (2)
3.ಕೊನೆ ಎಂಬರ್ಥದ ಸಿನಿಮಾ ತಲೆಕೆಳಗಾಗಿದೆ (2)
4.ಧೈರ್ಯಶಾಲಿ ವ್ಯಕ್ತಿಯೀತ (2)
6.ಬಂಧನದಿಂದ ಮುಕ್ತವಾಗುವಿಕೆ (4)
8.ಅಶಕ್ತ-ನಿರ್ಗತಿಕನೀತ (4)
9.ವೀಲೆಯದೆಲೆ-ಸುಣ್ಣ ಸಮೇತವಾದುದು (3)
10.ಎರಡನೆಯ ಸಂವತ್ಸರ ತಲೆಕೆಳಗಾಗಿದೆ (3)
11.ಕರದ ನಡುವೆ ಅಡಗಿದ ಸಮುದ್ರದ ಅಂಚು (5)
12.ಕಾಜಿನಿಂದ ಮಾಡಿದ ಸೀಸೆ (5)
14.ನಾಕದ ನಡುವೆ ಹಾಳು ಮಾಡುವಂಥಾದ್ದಿದೆ (5)
15.ದೈವಿಕ ವಂಶದಲ್ಲಿ ಜನಿಸಿದವರು (5)

5901 ಉತ್ತರ

ಎಡದಿಂದ ಬಲಕ್ಕೆ:
1.ಗುಂಡಿಗೆ 3.ಸಂಭ್ರಮ
5.ಸಂಗಮವರಿ
10.ಸಂಚಾಲಕ
11.ಮಹೋನ್ನತಿ
12.ಪತ್ರವಾಹನ 16.ವಿಕೃತ
17.ಗುಗ್ಗುಳ

ಮೇಲಿನಿಂದ ಕೆಳಕ್ಕೆ :
1.ಗುಂಗು 2.ಸಂಡಿಗೆ
3.ಸಂಚಾರಿ 4.ಮನ
6.ಗಣಕಯಂತ್ರ
7.ವಸತಿಗೃಹ 8.ಹಾಸಂಗಿ
9.ಡುಮುಕಿ 12.ಪರಾತ
13.ನಜುಗು 14.ಕವಿ
15.ಮೊಳ

ಆರೋಗ್ಯದ ಮೇಲೆ ದುಷ್ಪರಿಣಾಮ | ಗ್ರಾಮಸ್ಥರ ಆತಂಕ

ದಿನದಿಂದ ದಿನಕ್ಕೆ ಕೃಷ್ಣೆ ಕಲುಷಿತ

▸ಗೋಪಾಲ ಪಾಟೀಲ



ದಿಗಂತ ವಿಶೇಷ

•**ಜಮಖಂಡಿ:** ಕೃಷ್ಣೆ ಉತ್ತರ ಕರ್ನಾಟಕದ ಐದು ಜಿಲ್ಲೆಯ ಸಹಿತ ಮೂರು ರಾಜ್ಯಗಳ ಜೀವಜಲ. ರೈತರಿಗೆ ವರದಾನವಾಗಿದ್ದ ನದಿ ಇಂದು ಚರಂಡಿ ನೀರಿನಿಂದ ಕಲುಷಿತಗೊಂಡಿದ್ದಾಳೆ.

ಬೇಸಿಗೆ ಆರಂಭವಾಗುತ್ತಿದ್ದಂತೆ ಕೃಷ್ಣಾ ನದಿ ಪಾತ್ರದಲ್ಲಿ ನೀರಿನ ಹರಿವು ಕಡಿಮೆಯಗುತ್ತದೆ. ವರ್ಷದಲ್ಲಿ ಆರು ತಿಂಗಳು ಮಾತ್ರ ನೀರಿನ ಹರಿವಿದ್ದರೆ ಇನ್ನುಳಿದ ಆರು ತಿಂಗಳು ಹಿನ್ನೀರಿನಿಂದ ನಿಂತು ಮಲೀನವಾಗುವ ಸಾಧ್ಯತೆ ಹೆಚ್ಚಾಗಿರುತ್ತದೆ. ಇಂತಹದ್ದೇ ನೀರನ್ನು ಸೇವಿಸುವ ಜನ ಜಾನುವಾರುಗಳ ಆರೋಗ್ಯದ ಮೇಲೆ ದುಷ್ಪರಿಣಾಮ ಬೀರುತ್ತದೆ.

ಅವಳಿ ತಾಲೂಕಿನ ಅನೇಕ ಗ್ರಾಮ ಮತ್ತು ನಗರ ಸೇರಿದಂತೆ ಸಕ್ಕರೆ ಕಾರ್ಖಾನೆಗಳ ಕಲುಷಿತ ನೀರು ಯಾವುದೇ ಸಂಸ್ಕರಣ ಇಲ್ಲದೇ ನೇರವಾಗಿ ನದಿಗೆ ಸೇರುತ್ತದೆ. ಇಂತಹ ಕಲುಷಿತ ನೀರು ಭೂಮಿಗೆ ಬಿಡುವುದರಿಂದ ಭೂಮಿಯ ಫಲವತ್ತತೆಯೂ ಕಡಿಮೆಯಾಗಿ ಇಳುವರಿಯೂ ಸಹ ಕುಂಠಿತವಾಗುತ್ತದೆ. ಇಂತಹ ನೀರು ಬಳಸಿ ಬೆಳೆದ ಬೆಳೆಯನ್ನು ಸೇವಿಸಿದ ಜನರಿಗೆ ರೋಗಗಳನ್ನು ಆಹ್ವಾನಿಸಿದಂತಾಗುತ್ತದೆ.

ಒಂದೆಡೆ ಏರುತ್ತಿರುವ ತಾಪಮಾನದಿಂದ ಕಲುಷಿತ ನೀರು ಸೇವಿಸಿದರೆ ಅಪಾಯ ಕಟ್ಟಿಟ್ಟ ಬುತ್ತಿ ಎಂದು ನದಿ ತೀರದ ಗ್ರಾಮಗಳ ಮತ್ತು ನದಿಯ ನೀರನ್ನೇ ನಂಬಿದ ನಗರ ವಾಸಿಗಳ ಚಿಂತೆಯಾಗಿದೆ.

ನದಿ ತೀರದ ಗ್ರಾಮಗಳು, ಮತ್ತು ನಗರಗಳು ತಮ್ಮ ಚರಂಡಿ ನೀರನ್ನು ನೇರವಾಗಿ ನದಿಗೆ ಬಿಡದೆ ಶುದ್ಧೀಕರಿಸಿ ಬಿಡಬೇಕು. ಆದರೆ, ಇದು ಈಗ ನಡೆಯುತ್ತಿಲ್ಲ. ಕೊಳಚೆ ನೀರು ನದಿಗೆ ನೇರವಾಗಿ ಸೇರದಂತೆ ಪ್ರತಿಯೊಂದು ಹಂತದಲ್ಲಿ ಶುದ್ಧೀಕರಣ ಘಟಕ ಅಳವಡಿಸುವುದು ಅನಿವಾರ್ಯವಾಗಿದೆ. ಇಂತಹ ಕಲುಷಿತ ನೀರನ್ನು ಸೇವಿಸುವುದರಿಂದ ನದಿ ನೀರನ್ನೇ ಅವಲಂಬಿಸಿದ ನಗರ ಪ್ರದೇಶದವರಿಗೆ ಕ್ಯಾನ್ಸರ್, ಟಿಬಿ, ಥೈರಾಡ್‌ದಂತಹ ಮಾರಕ ಖಾಯಿಲೆಗಳಿಗೆ ತುತ್ತಾಗುತ್ತಿದ್ದಾರೆ.

ಆದಕ್ಕಾಗಿ ಸ್ಥಳೀಯ ಸಂಸ್ಥೆಗಳು, ಕಾರ್ಖಾನೆಗಳು, ನೀರು ಸಂಸ್ಕರಣಾ ಘಟಕಗಳನ್ನು ಸ್ಥಾಪಿಸಬೇಕು. ಸಂಸ್ಕರಿಸಿದ ನೀರನ್ನೇ ನದಿಗೆ ಬಿಡುವ ಹಾಗೆ ಕಟ್ಟುನಿಟ್ಟಿನ ಕ್ರಮ ಜರುಗಿಸುವುದು ಅನಿವಾರ್ಯವಾಗಿದೆ. ಕರ್ನಾಟಕ ಮಾಲಿನ್ಯ ನಿಯಂತ್ರಣ ಮಂಡಳಿಯೂ ಸಹ ಇದಕ್ಕೆ ಹೊರತಾಗಿಲ್ಲ. ಒಮ್ಮೆಯಾದರೂ ಸಹ ನದಿ ತೀರದದಲ್ಲಿ ಬಂದು ಸರ್ವೆ ಮಾಡಿದ್ದು ನಾವು ನೋಡಿಲ್ಲ ಎಂದು ನದಿ ತೀರದ ಜನರು ಹೇಳುತ್ತಾರೆ.

> ಕಾರ್ಖಾನೆಗಳ ಕೊಳಚೆ ನೀರು ಸಂಸ್ಕರಿಸುವ ಬಗ್ಗೆ ಜಲ ಮಾಲಿನ್ಯ ನಿರ್ವಹಣಾ ಮಂಡಳಿ ನಿಗಾವಹಿಸುತ್ತದೆ. ಇನ್ನು ಗ್ರಾಮ ಪಂಚಾಯತಿಗಳಿಂದ ಹೋಗುವ ಚರಂಡಿ ನೀರಿಗಾಗಿ ಬೂದು ನೀರು ನಿರ್ವಹಣೆ ಯೋಜನೆ ಪ್ರಾರಂಭವಾಗಿದ್ದು, ಮೊದಲನೇ ಹಂತದಲ್ಲಿ 2 ಗ್ರಾಮ ಪಂಚಾಯತಿ ಕಾರ್ಯಗತವಾಗಿದೆ. ಶೇ.30ರಷ್ಟು ಕಾಮಗಾರಿ ಮುಗಿದಿದೆ. ಇನ್ನು ಎರಡನೇ ಹಂತದಲ್ಲಿ ಮತ್ತೆರಡು ಗಾಮ ಪಂಚಾಯತಿಗಾಗಿ ಕ್ರಿಯಾಯೋಜನೆ ಮಾಡಲಾಗಿದೆ. ಈ ಯೋಜನೆ ಅತೀ ಹೆಚ್ಚು ವೆಚ್ಚದ್ದಾಗಿದ್ದರಿಂದ ವರ್ಷಕ್ಕೆರಡು ಗ್ರಾಮಗಳನ್ನು ಆರಿಸಿಕೊಳ್ಳುತ್ತೇವೆ.
>
> ■ ಸಚಿನ ಮಾಚಕನೂರ, ತಾಪಂ ಇಒ

> ನದಿ ಮತ್ತು ಕೊಳವೆ ಬಾವಿಗಳ ನೀರನು ಪರೀಕ್ಷಿಸಿ ಸಂಬಂಧಪಟ್ಟ ಇಲಾಖೆಗೆ ವರದಿ ನೀಡುತ್ತೇವೆ. ಆದರೆ, ನಮ್ಮಿಂದ ಯಾವುದೇ ಸಂಸ್ಕರಣಾ ಘಟಕದ ವ್ಯವಸ್ಥೆ ಇರುವುದಿಲ್ಲ. ಆದಕ್ಕೆ ನಗರಸಭೆ ಮತ್ತು ಗ್ರಾಮ ಪಂಚಾಯತಿಯವರೆ ಮಾಡಬೇಕು.
>
> ■ ಡಾ.ಗೈಬುಸಾಬ ಗಲಗಲಿ, ತಾಲೂಕು ಆರೋಗ್ಯಾಧಿಕಾರಿ

ರಾಜ್ಯ ಪೌರಾಡಳಿತದಿಂದ ಪತ್ರ | ಜಿಲ್ಲಾಡಳಿತಕ್ಕೆ ಗ್ರೀನ್ ಸಿಗ್ನಲ್


ದಿವ್ಯಾಂಗರಿಗೆ ರಾಜಕೀಯ ಮನ್ನಣೆ

▸ಮಹಾಂತೇಶ ಕಣವಿ

ದಿಗಂತ ವಿಶೇಷ

•**ಧಾರವಾಡ:** ರಾಜ್ಯದ ದಿವ್ಯಾಂಗರ ಬಹುದಿನಗಳ ರಾಜಕೀಯ ಮೀಸಲಾತಿ ಕನಸು ಕೈಗೂಡುವ ಕಾಲ ಸನ್ನಿಹಿತವಾಗಿದೆ. ಸ್ಥಳೀಯ ಸಂಸ್ಥೆಗಳಲ್ಲಿ ದಿವ್ಯಾಂಗರಿಗೆ ಶೇ.5ರಷ್ಟು ಮೀಸಲಾತಿ ಕಲ್ಪಿಸುವಲ್ಲಿ ರಾಜ್ಯದ ಪೌರಾಡಳಿತ ನಿರ್ದೇಶನಾಲಯವು ಮಹತ್ವದ ಹೆಜ್ಜೆ ಇರಿಸಿದೆ.

ಜಿಲ್ಲೆಯ ಮಹಾನಗರ ಪಾಲಿಕೆ, ನಗರಸಭೆ, ಪುರಸಭೆ ಪಟ್ಟಣ ಪಂಚಾಯತಿ ಚುನಾವಣೆಯಲ್ಲಿ ದಿವ್ಯಾಂಗರಿಗೆ ಶೇ.5ರಷ್ಟು ಮೀಸಲಾತಿ ಕಲ್ಪಿಸುವಲ್ಲಿ ಅಗತ್ಯ ಕ್ರಮ ಕೈಗೊಳ್ಳುವಂತೆ ಪೌರಾಡಳಿತ ನಿರ್ದೇಶನಾಲಯವು ಧಾರವಾಡ ಜಿಲ್ಲಾಧಿಕಾರಿಗೆ ಪತ್ರ ಬರೆದಿದೆ.



ಸಕ್ಷಮ್ ಸಂಘಟನೆ ಮನವಿ: ದಿವ್ಯಾಂಗ ಸಮುದಾಯ ಸಮಾಜದ ಅಂಗವಾಗಿದ್ದರೂ, ರಾಜಕೀಯದಿಂದ ಬಹಳ ದೂರವೇ ಉಳಿದಿರುವುದು ಗಮನಿಸಿ, ಸಕ್ಷಮ್ ಧಾರವಾಡ ಜಿಲ್ಲಾ ಅಧ್ಯಕ್ಷ ಕೇಶವ ತೆಲಗು, ಮೀಸಲಾತಿ ಕೋರಿ ರಾಜ್ಯ ಚುನಾವಣಾ ಇಲಾಖೆಗೆ ಪತ್ರ ಬರೆದು ಮನವಿ ಮಾಡಿದ್ದರು.

ದಿವ್ಯಾಂಗರಲ್ಲಿ ಹೊಸ ಭರವಸೆ: ಸಕ್ಷಮ್‌ದ ಮನವಿಗೆ ಸ್ಪಂದಿಸಿದ ಸರ್ಕಾರ ದಿವ್ಯಾಂಗರ ಕಾಯ್ದೆ 2016ರ ಅಡಿಯಲ್ಲಿ ಅವರಿಗೆ ರಾಜಕೀಯ ಪ್ರಾತಿನಿಧ್ಯ ಕಲ್ಪಿಸಲು ಮುಂದಾಗಿದೆ. ರಾಜ್ಯ ಸರ್ಕಾರದ ಈ ನಡೆಯು, ನಾಡಿನ ದಿವ್ಯಾಂಗ ಸಮುದಾಯದಲ್ಲಿ ಹೊಸ ಭರವಸೆ ಮೂಡಿಸಿರುವುದು ಸುಳ್ಳಲ್ಲ.

ಕ್ರಮಕ್ಕೆ-ಪ್ರಸ್ತಾವನೆಗೆ ಸೂಚನೆ: ಸ್ಥಳೀಯ ಸಂಸ್ಥೆಗಳ ವಾರ್ಡ್‌ವಾರು ಮೀಸಲಾತಿ ನಿಗದಿಪಡಿಸುವುದಾಗಿ ದಿವ್ಯಾಂಗರಿಗೆ ಶೇ.5ರಷ್ಟು ಮೀಸಲಾತಿ ಅವಕಾಶ ಪರಿಶೀಲಿಸುವುದು. ಈ ಮೀಸಲಾತಿ ಜಾರಿಗೆ ತಾಂತ್ರಿಕ ಅಥವಾ ಕಾನೂನಾತ್ಮಕ ಅಡೆತಡೆಗೆ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸುವಂತೆ ನಿರ್ದೇಶಿಸಿದೆ.

ಮುನ್ನಲೆಗೆ ಬರದ ಚರ್ಚೆ: ಜಾತಿ ಹಾಗೂ ಮಹಿಳಾ ಮೀಸಲಾತಿಗಳ ನಡುವೆ ದಿವ್ಯಾಂಗರ ರಾಜಕೀಯ ಪ್ರಾತಿನಿಧ್ಯದ ಚರ್ಚೆ ಅಷ್ಟಾಗಿ ಮುನ್ನೆಲೆಗೆ ಬರುತ್ತಿರಲಿಲ್ಲ. ಚುನಾವಣೆಯಲ್ಲಿ ದಿವ್ಯಾಂಗರ ಪಾಲ್ಗೊಳ್ಳುವಿಕೆ ಖಚಿತಪಡಿಸಿಕೊಳ್ಳಲು ಜಿಲ್ಲಾಡಳಿತವು ಸೂಕ್ತ ತಯಾರಿ ನಡೆಸುವಂತೆ ಸೂಚಿಸಿದೆ.

ರಾಜಕೀಯ ಸಬಲೀಕರಣ: ರಾಜ್ಯದ ಪೌರಾಡಳಿತ ನಿರ್ದೇಶನಾಲಯದ ಈ ಪತ್ರದಿಂದಾಗಿ ದಿವ್ಯಾಂಗರು ಕೇವಲ ಮತದಾರರಾಗಿ ಉಳಿಯದೆ, ಅವರು ನಿರ್ಧಾರ ತೆಗೆದುಕೊಳ್ಳುವ ಜನಪ್ರತಿನಿಧಿಗಳಾಗಿ ಹೊರಹೊಮ್ಮಲು ದಾರಿಯಾಗಿ, ಇದರಿಂದ ದಿವ್ಯಾಂಗರ ರಾಜಕೀಯ ಸಬಲೀಕರಣ ಸಾಧ್ಯವಿದೆ.

ಸಮಾಜದಲ್ಲಿ ದಿವ್ಯಾಂಗರಿಗೆ ಸಮಾನ ಅವಕಾಶ ನೀಡಿದಂತಾಗಲಿದೆ. ದಿವ್ಯಾಂಗ ಜನಪ್ರತಿನಿಧಿಗಳು ಆಯ್ಕೆಯಾದಲ್ಲಿ ನಗರ ಪ್ರದೇಶಗಳಲ್ಲಿ ದಿವ್ಯಾಂಗ ಸ್ನೇಹಿ ಮೂಲಭೂತ ಸೌಕರ್ಯ(ಉದಾ: ಮನೆಗಳು, ವಿಶೇಷ ಶೌಚಾಲಯ) ನಿರ್ಮಾಣಕ್ಕೆ ಹೆಚ್ಚಿನ ಒತ್ತು ಸಿಗಲಿದೆ.

> ದಿವ್ಯಾಂಗರ ರಾಜಕೀಯ ಮೀಸಲಾತಿ ಕುರಿತು ಪೌರಾಡಳಿತ ನಿರ್ದೇಶನಾಲಯವು ಜಿಲ್ಲಾಡಳಿತಕ್ಕೆ ಪತ್ರ ಬರೆದಿರುವುದು ನನ್ನ ಗಮನಕ್ಕೆ ಬಂದಿಲ್ಲ. ಈ ಬಗ್ಗೆ ಪರಿಶೀಲಿಸಿ ಕ್ರಮ ಅಗತ್ಯ ಕೈಗೊಳ್ಳುತ್ತೇನೆ.
>
> ■ ಸ್ನೇಹಲ್ ಆರ್, ಜಿಲ್ಲಾಧಿಕಾರಿ-ಧಾರವಾಡ

ಹೋರಾಟದ ಫಲ

ದಿವ್ಯಾಂಗರ ರಾಜಕೀಯ ಮೀಸಲಾತಿ ಬಹುದಿನದ ಕನಸು. ಅನೇಕ ಹೋರಾಟಗಳು ನಡೆದಿವೆ. ಇದೀಗ ಸರ್ಕಾರ ಐತಿಹಾಸಿಕ ತೀರ್ಮಾನಕ್ಕೆ ಮುಂದಾಗಿದೆ. ಇದು ನಮ್ಮ ಹೋರಾಟದ ಫಲ. ಜಿಲ್ಲಾಡಳಿತ, ಪೌರಾಡಳಿತದ ನಿರ್ದೇಶನದ ಪ್ರಕಾರ ವಾರ್ಡ್‌ಗಳ ಮೀಸಲಾತಿ ಪಟ್ಟಿ ಮರು ಪರಿಶೀಲಿಸಲು ಕೋರಿದ ಸಕ್ಷಮ್ ಅಧ್ಯಕ್ಷ ಕೇಶವ, ಅಗತ್ಯವಿದ್ದರೆ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲು ಕೋರಿದರು.

ಗಾಂಜಾ ಸೇವನೆ: ವ್ಯಕ್ತಿ ಬಂಧನ

•**ಬೆಳಗಾವಿ:** ಇಲ್ಲಿನ ಪಾಟೀಲ ಮಾಳಗಲ್ಲಿಯ ಸಾರ್ವಜನಿಕರಿಗೆ ಅನುಮಾನಸ್ಪದ ರೀತಿಯಲ್ಲಿ ವರ್ತಿಸಿ ತೊಂದರೆ ಕೊಂಡುತ್ತಿದ್ದ ವ್ಯಕ್ತಿಯನ್ನು ಪರಿಕ್ಷೆಗೆ ಒಳಪಡಿಸಿದಾಗ ಆತ ಗಾಂಜಾ ಸೇವನೆ ಮಾಡಿರುವುದು ದೃಢವಾಗಿರುವುದರಿಂದ ಆತನನ್ನು ಪೊಲೀಸರು ಬಂಧಿಸಿದ್ದಾರೆ.

ಬಂಧಿತ ಆರೋಪಿ ಉತ್ಕರ್ಷ ಸುನೀಲ ವರ್ಮಾ (24) ಗಾಂಜಾ ಕೇಸ್ ನಲ್ಲಿ ಲಾಕ್ ಆದ ವ್ಯಕ್ತಿ. ಖಡೇಬಜಾರ ಪೊಲೀಸ್ ಠಾಣೆಯ ಎಎಸ್‌ಐ ವಿ.ಚಿನ್ನಸ್ವಾಮಿ ಹಾಗೂ ಸಿಬ್ಬಂದಿ ಆರೋಪಿಯನ್ನು ವೈದ್ಯಕೀಯ ಪರೀಕ್ಷೆಗೆ ಒಳಪಡಿಸಿ ಅವನ ವಿರುದ್ಧ ಖಡೇಬಜಾರ ಪೊಲೀಸ್ ಠಾಣೆ ಪ್ರಕರಣ ಸಂಖ್ಯೆ 13/2026 ಕಲಂ.27ಎನ್ಡಿಪಿಎಸ್ ಕಾಯ್ದೆ ಅಡಿಯಲ್ಲಿ ಪ್ರಕರಣ ದಾಖಲಿಸಿ, ತನಿಖೆ ಕೈಗೊಂಡಿದ್ದಾರೆ.

ಪವಿತ್ರ ಕ್ಷೇತ್ರ ಗೋಕರ್ಣದ ಪುರಾಣ ಕೃತಿ ಸಮರ್ಪಣೆ



•**ಗೋಕರ್ಣ:** ಮುಂಬಯಿಯ ಸಾಹಿತಿ ಶ್ರೀಪಾದ ಕಾಣೇಕರ್ ಸಂಗ್ರಹಿಸಿ ಮುದ್ರಿಸಿದ ಪವಿತ್ರ ಕ್ಷೇತ್ರ ಗೋಕರ್ಣದ ಪುರಾಣಸೇರಿದಂತೆ ಇಲ್ಲಿರುವ ಪ್ರಾಚೀನ ಶಿವಲಿಂಗಗಳು ಮತ್ತು ತೀರ್ಥಕುಂಡಗಳ ಕುರಿತು ಸಮಗ್ರ ಮಾಹಿತಿಗಳನ್ನು ಒಳಗೊಂಡ ವಿಶೇಷ ಸಂಗ್ರಹ ಗ್ರಂಥ ಗೋಕರ್ಣ ಪುರಾಣವನ್ನು ಶಿವರಾತ್ರಿಯ ಪರ್ವಕಾಲದಲ್ಲಿ ಭಾನುವಾರ ಬೆಳಗಿನ ಜಾವದಲ್ಲಿ ಮಹಾಬಲೇಶ್ವರನ ಸನ್ನಿಧಿಯಲ್ಲಿ ಸಮರ್ಪಣೆ ಮಾಡಲಾಯಿತು.

ಶ್ರೀಪಾದ ಪ್ರಭಾಕರ ಕಾಣೇಕರ್ ಸಂಗ್ರಹಿಸಿರುವ ಈ ಕೃತಿ ಕನ್ನಡ, ಹಿಂದಿ, ಮರಾಠಿ ಮತ್ತು ಇಂಗ್ಲಿಷ್ ನಾಲ್ಕು ಪ್ರಮುಖ ಭಾಷೆಗಳಲ್ಲಿ ಪ್ರಕಟವಾಗುತ್ತಿದೆ. ದಕ್ಷಿಣ ಕಾಶಿ ಎಂದೇ ಪ್ರಸಿದ್ಧಿ ಪಡೆದ ಗೋಕರ್ಣ ಕ್ಷೇತ್ರದ ಪೌರಾಣಿಕ ಮಹತ್ವ, ಇಲ್ಲಿಯ ವಿವಿಧ ಶಿವಲಿಂಗಳ ಮಹತ್ವ ಹಾಗೂ ಲುಪ್ತವಾಗುತ್ತಿರುವ ತೀರ್ಥಕುಂಡಗಳ ವಿವರಗಳನ್ನು ಭಕ್ತರಿಗೆ ಮತ್ತು ಸಂಶೋಧಕರಿಗೆ ತಲುಪಿಸುವ ಉದ್ದೇಶದಿಂದ ಈ ಕೃತಿ ಹೊರ ತರಲಾಗಿದೆ.

ಗ್ರಂಥದೊಂದಿಗೆ ಗೋಕರ್ಣ ಕ್ಷೇತ್ರದ ವಿವಿಧ ಪವಿತ್ರ ಸ್ಥಳಗಳನ್ನು ಸೂಚಿಸುವ ಸಮಗ್ರ ನಕ್ಷೆಯನ್ನೂ ಪ್ರಕಟಿಸಲಾಗಿದೆ. ಇದು ಯಾತ್ರಾರ್ಥಿಗಳಿಗೆ ಸಹಕಾರಿಯಾಗಲಿದೆ. ಡಿಜಿಟಲ್ ಯುಗದ ಅವಶ್ಯಕತೆಯನ್ನು ಮನಗೊಂಡು ಮುದ್ರಿತ ಕೃತಿಯೊಂದಿಗೆ, ಇ-ಪುಸ್ತಕ ರೂಪದಲ್ಲಿಯೂ ಲಭ್ಯವಿದೆ. ಇದರಿಂದ ದೇಶ, ವಿದೇಶಗಳಲ್ಲಿರುವ ಶಿವಭಕ್ತರು ಗೋಕರ್ನದ ಮಹತ್ವ ತಿಳಿಯಲು ಸಾಧ್ಯವಾಗಲಿದೆ ಎಂದು ಅಭಿಪ್ರಾಯಪಟ್ಟಿದ್ದಾರೆ.

ದೇವಸ್ಥಾನದ ಮೇಲ್ವಿಚಾರಣಾ ಸಮಿತಿಯ ಉಪಾಧ್ಯಕ್ಷ ಹಾಗೂ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶ ಪರಮೇಶ್ವರ ಪಿ. ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ದೀಪನ್ ಎಂ.ಎನ್, ಸಮಿತಿಯ ಕಾರ್ಯದರ್ಶಿ ಹಾಗೂ ಕುಮಟಾ ಉಪವಿಭಾಗಾಧಿಕಾರಿ ಪಿ. ಶ್ರವಣಕುಮಾರ್ ಇವರ ಸಮ್ಮುಖದಲ್ಲಿ ಮಹಾಬಲೇಶ್ವರನಿಗೆ ಸಮರ್ಪಿಸಲಾಯಿತು.

ಈ ಸಂದರ್ಭದಲ್ಲಿ ಸಮಿತಿಯ ಸದಸ್ಯರಾದ ವೇ. ಸುಬ್ರಹ್ಮಣ್ಯ ಅಡಿ, ವೇ. ಪರಮೇಶ್ವರ ಪ್ರಸಾದ ರಮಣಿ, ಮಹೇಶ ಹಿರೇಗಂಗೆ ಮತ್ತು ತಾಂತ್ರಿಕ ಗಣಪತಿ ಗಜಾನನ ಹಿರೇ ಉಪಸ್ಥಿತರಿದ್ದರು.

ಭಗವಂತ ಖೂಬಾ ವಿರುದ್ಧ ಎಫ್‌ಐಆರ್

ಅರಣ್ಯ ಸಚಿವ ಖಂಡ್ರೆಗೆ ಅವಾಚ್ಯ ಶಬ್ದಗಳಿಂದ ನಿಂದನೆ

•**ಬೀದರ್:** ಮಾಜಿ ಕೇಂದ್ರ ಸಚಿವ ಭಗವಂತ ಖೂಬಾ ಅವರ ವಿರುದ್ಧ ಎಫ್‌ಐಆರ್ ದಾಖಲಾಗಿದೆ. ಸಚಿವ ಈಶ್ವರ ಖಂಡ್ರೆ ಅವರನ್ನ ನಿಂದಿಸಿದ್ದಾರೆ ಎಂಬ ವಿಚಾರಕ್ಕೆ ಸಂಬಂಧಿಸಿದಂತೆ ಖೂಬಾ ವಿರುದ್ಧ ಪ್ರಕರಣ ದಾಖಲಾಗಿದೆ.

ಭಗವಂತ್ ಖೂಬಾ ವಿರುದ್ಧ ಕಾಂಗ್ರೆಸ್ ಕಾರ್ಯಕರ್ತ ಸುರೇಶ್ ಬಿರಾದಾರ ಎಂಬುವವರು ದೂರು ನೀಡಿದ್ದು, ಹೀಗಾಗಿ ಮಾಜಿ ಕೇಂದ್ರ ಸಚಿವರ ವಿರುದ್ಧ ಭಾಲ್ಕಿ ನಗರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಖೂಬಾ ವಿರುದ್ಧ ದೂರು ನೀಡಿದ ಹಿನ್ನೆಲೆ ಭಾಲ್ಕಿಯ ಸಿವಿಲ್ ಹಾಗೂ ಜೆಎಂಎಫ್‌ಸಿ ನ್ಯಾಯಾಲಯ ಅನುಮತಿ ಪಡೆದು ಪೊಲೀಸರು ಎಫ್‌ಐಆರ್ ದಾಖಲಿಸಿದ್ದಾರೆ.

ಫೆ.7ರಂದು ನಡೆದ ಪಾಪನಾಶ ದೇವಸ್ಥಾನ ಅಭಿವೃದ್ಧಿ ಕಾಮಗಾರಿಗೆ ಚಾಲನೆ ವೇಳೆ ಈಗಾಗಲೇ ಪ್ರಧಾನಿ ನರೇಂದ್ರ ಮೋದಿ ಅವರು ವರ್ಚುವಲ್ ಕಾನ್ಫರೆನ್ಸ್ ಮೂಲಕ ಪಾಪನಾಶ ದೇವಸ್ಥಾನದ 'ಜೀರ್ಣೋದ್ಧಾರ' ಕಾಮಗಾರಿಯನ್ನು ಮಾ.7 2024ರಲ್ಲೇ ಉದ್ಘಾಟನೆ ನಡೆಸಿದ್ದರು. ಅದನ್ನು ಮೀರಿ ಉಸ್ತುವಾರಿ ಸಚಿವ ಈಶ್ವರ ಖಂಡ್ರೆ ಅದೇ ಕಾಮಗಾರಿಯ ಪುನರ್ ಉದ್ಘಾಟನೆ ನಡೆಸಿದ್ದಕ್ಕೆ ಪ್ರತಿಭಟಸಿದ್ದ ಭಗವಂತ್ ಖೂಬಾ ರಾಜ್ಯ ಸರ್ಕಾರದ ವಿರುದ್ಧ ಕಿಡಿಕಾರಿದ್ದರು. ಈ ವೇಳೆ ಭಗವಂತ್ ಖೂಬಾ ಸೇರಿದಂತೆ ಬಿಜೆಪಿ ನಾಯಕರನ್ನ ಪೊಲೀಸರು ವಶಕ್ಕೆ ಪಡೆದಿದ್ದರು. ಪೊಲೀಸರು ವಶಕ್ಕೆ ಪಡೆದ ಬಳಿಕ ಫೇಸ್‌ಬುಕ್ ಲೈವ್‌ನಲ್ಲಿ ಸಂಭಾಷಣೆ ನಡೆಸಿ ಖೂಬಾ ಅವರು ಈಶ್ವರ್ ಖಂಡ್ರೆ ಅವರನ್ನ ಅವಾಚ್ಯ ಶಬ್ದಗಳಿಂದ ನಿಂದಿಸಿದ್ದರು. ಈ ಬಗ್ಗೆ ಖೂಬಾ ವಿರುದ್ಧ ಕ್ರಮ ಕೈಗೊಳ್ಳುವಂತೆ ಕಾಂಗ್ರೆಸ್ ಕಾರ್ಯಕರ್ತ ಸುರೇಶ್ ಬಿರಾದಾರ ಒತ್ತಾಯಿಸಿದ್ದಾರೆ.

ಅಪಘಾತ: ಇಬ್ಬರ ಸಾವು

•**ಹುಬ್ಬಳ್ಳಿ:** ನಗರದ ಹೊರವಲಯದ ರಾಷ್ಟ್ರೀಯ ಹೆದ್ದಾರಿಯ ಅದರಗುಂಚಿ ಬಳಿ ಗುರುವಾರ ರಸ್ತೆ ಬದಿ ನಿಂತಿದ್ದ ಲಾರಿಗೆ ಇನ್ನೊಂದು ಲಾರಿ ಡಿಕ್ಕಿ ಹೊಡೆದು ಸಂಭವಿಸಿದ ಅಪಘಾತದಲ್ಲಿ ಇಬ್ಬರು ಸ್ಥಳದಲ್ಲೇ ಮೃತಪಟ್ಟಿದ್ದಾರೆ. ನಿಂತಿದ್ದ ಲಾರಿ ಚಾಲಕ, ಹರಿಯಾಣದ ಮೊಹಮ್ಮದ್ ಆದಿಲ್ (24) ಹಾಗೂ ಹಿಂಬದಿಯಿಂದ ಬಂದು ಡಿಕ್ಕಿ ಹೊಡೆದ ಲಾರಿಯ ಕ್ಲೀನರ್ ಗೋಕಾಕ್ ತಾಲೂಕಿನ ಲೋಳಸೂರು ಗ್ರಾಮದ ಇಜಾಜ್ ನದಾಫ್ (17) ಮೃತಪಟ್ಟವರು. ಸಾಯಿ ಗಣೇಶ ಹೋಟೆಲ್ ಸಮೀಪ ಘಟನೆ ನಡೆದಿದ್ದು, ಹಿಂಬದಿ ಲಾರಿಯ ಚಾಲಕ ಸರ್ಫೂದ್ದೀನ್ ಗಂಭೀರವಾಗಿ ಗಾಯಗೊಂಡಿದ್ದಾರೆ. ಅವರನ್ನು ಚಿಕಿತ್ಸೆಗಾಗಿ ಕೆಎಂಸಿಆರ್‌ಐ ಆಸ್ಪತ್ರೆಗೆ ದಾಖಲಿಸಲಾಗಿದೆ. ಈ ಬಗ್ಗೆ ಹುಬ್ಬಳ್ಳಿ ಗ್ರಾಮೀಣ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸ ಪೂರ್ಣವೇ ಆದರೂ ಅವುಗಳಲ್ಲಿ ಕೊಡುವ ಮಾಹಿತಿ, ಗುಣಮಟ್ಟ ಮುಂತಾದವುಗಳ ಕುರಿತು ಸಾರ್ವಜನಿಕರು ಜಾಹೀರಾತು ನೀಡಿದವರೊಡನೆ ವ್ಯವಹರಿಸಬೇಕು. ಇದಕ್ಕೆ ಪತ್ರಿಕೆ ಜವಾಬ್ದಾರಿ ಇಲ್ಲಾ.

ಜಾಹೀರಾತು ವ್ಯವಸ್ಥಾಪಕರು

ಕರ್ನಾಟಕ ಸರಕಾರ

ಕರ್ನಾಟಕ ವೈದ್ಯಕೀಯ ಮಹಾವಿದ್ಯಾಲಯ ಮತ್ತು ಸಂಶೋಧನಾ ಸಂಸ್ಥೆ ಹುಬ್ಬಳ್ಳಿ

ಕ್ರಸಂ: ಕೆಎಮ್‌ಸಿಆರ್‌ಐ/ಪೂವಿ(4)/40/2025-26 ದಿನಾಂಕ : 18.02.2026

ಇ-ಟೆಂಡರ ಪ್ರಕಟಣೆ

ಈ ಮೂಲಕ ಅಧಿಕೃತ ಪೂರೈಕೆದಾರರಿಗೆ ತಿಳಿಸುವುದೇನೆಂದರೆ, ಕರ್ನಾಟಕ ವೈದ್ಯಕೀಯ ಮಹಾವಿದ್ಯಾಲಯ ಮತ್ತು ಸಂಶೋಧನಾ ಸಂಸ್ಥೆ, ಹುಬ್ಬಳ್ಳಿ

Supply and Fabrication of Blood Donation Vehicle under CSR Fund

ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಮುಖಾಂತರ ಇ-ಟೆಂಡರ ಕರೆಯಲಾಗಿದೆ. ಈ ಬಗ್ಗೆ ನಿಗಧಿಪಡಿಸಿದ ಹೆಚ್ಚಿನ ವಿವರ ಮತ್ತು ಮಾಹಿತಿಯನ್ನು, www.kppp.karnataka.gov.in ವೆಬ್ ಸೈಟಿನಲ್ಲಿ ಪಡೆಯಬಹುದು.

ನಿರ್ದೇಶಕರು
ಕರ್ನಾಟಕ ವೈದ್ಯಕೀಯ ಮಹಾವಿದ್ಯಾಲಯ
ಮತ್ತು ಸಂಶೋಧನಾ ಸಂಸ್ಥೆ, ಹುಬ್ಬಳ್ಳಿ

CITATION
IN THE COURT OF HON' BLE PRL JMFC AT GANGAVATI
Cri Misc. No. 03/2026

Petitioner; 1. Timmanna s/o Govindappa Bovi age: 42 years, Occ; coolie
2. Anjineppa s/o Govindappa Bovi age: 36years, Occ; coolie
3. Venkatesh s/o Govindappa Bovi age: 39 years, Occ; coolie
4. Hanumantappa s/o Govindappa Bovi age: 31years, Occ coolie All are R/o Ward No 1, Mallapur, Tq Gangavthi, Dist Koppal 5. S Mutaamma w/o Manjappa Yambale aged about,35 years,
6. Gangamma w/o Ragavendra aged about,29 years Occ; coolie Petioners No-5 & 6 R/o Kenchammanahalli, tq & dist: Bellary

V/s

Respondent:-1. The Tashildhar Tahasil office Gangavati
2. All Concern
Claim:- Registration of Death of Govindappa s/o Sanjeevappa.
To
All concern
WHEREAS the above named petitioners have made an application for registration of death of Govindappa s/o Sanjeevappa, who was died on 06-10-2023 in his residence at ward No 1, Mallapur' tq. Gangavati, in the register of deaths maintained by registrar of Births and deaths/Tahasildar Gangavati. All the persons who have got any objection or claim over the above mentioned claim, may appear before this court on day of 3 2026 at 11-00 A.M., with relevant documents in their support of claim either in person or through an advocate, failing which the petition will be heard and determined as per law. Given under my hand and seal of the court this day of 2-2026.

order of the court
CHIEF MINISTRIAL OFFICER
PRL CIVIL JUDGE JMFC Gangavathi
Through: Kanakrayab B
Advocate for Petitioner.

CHANGE OF NAME

I, **AMARENDRA** (Old Name) Resident of # 275/B, Plot No - 42, Basaveshwar Nagar, B Block, 14th Cross, Beside Lions English Medium School, Haveri - 581110, Karnataka, have changed my name as **SOMPALLI AMARENDRA** (New Name) for all purposes affidavit Dtd. 16-02-2026 sworn before notary **M. C. Maradi.**

CHANGE OF NAME

I, Anil V Dyavakkalavar S/o Veera bhadrappa Dyavakkalavar, (new name)aged about 49 years. previously called **Anil Kumar V Dyava kkalavar (old name)** residing at Neharu Nagar Byadgi-5811069 have changed my name as **Anil veerabhadrappa Dyavakkalavar** vide affidavit **dated:14/01/2026** sworn before Notary K.D.Patil Hence forth all my transactions and dealings will be in my new name **Anil veerabhadrappa Dyavakkalavar (new name)**

ಪತ್ರಿಕಾ ಪ್ರಕಟಣೆಗಾಗಿ ಪ್ರತಿ
ಮಾನ್ಯ ಗೌರವಾನ್ವಿತ ಪ್ರಧಾನ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ ಗಂಗಾವತಿ ಇವರ ಸಮಕ್ಷಮದಲ್ಲಿ ಕ್ರಿ. ಮಿ. ನಂ. 1335/2025

ಅರ್ಜಿದಾರರು: 1) ಮಹೆಬೂಬ ಬಾಷಾ ತಂದೆ ದಿ॥ ಕರಿಮ ಸಾಬ ವ: 52 ವರ್ಷ, ಉದ್ಯೋಗ: ಕೂಲಿ, ಸಾ: ಬುಕ್ಕಸಾಗರ, ತಾ: ಹೊಸಪೇಟೆ, ಜಿ: ವಿಜಯನಗರ
2) ರಾಜಾ ಹುಸೇನ್‌ತಂದೆ ದಿ॥ ಕರಿಮ ಸಾಬ ವ: 49 ವರ್ಷ, ಉದ್ಯೋಗ: ಕೂಲಿ, ಸಾ: ಕೊಂಡ ನಾಯಕನಹಳ್ಳಿ-ಹೊಸಪೇಟೆ, ಜಿ: ವಿಜಯನಗರ

ವಿರುದ್ಧ

ಎದುರುದಾರರ: ಮಾನ್ಯ ಪೌರಾಯುಕ್ತರು ಜನನ ಮತ್ತು ಮರಣ ನೊಂದಣಿ ಇಲಾಖೆ ನಗರಸಭೆ ಕಾರ್ಯಾಲಯ-ಗಂಗಾವತಿ, ಜಿ: ಕೊಪ್ಪಳ
ಸಂಬಂಧಪಟ್ಟವರು:
ಈ ಮೇಲೆ ತಿಳಿಸಿದ ಅರ್ಜಿದಾರರು ಕರ್ನಾಟಕ ಜನನ ಮರಣ ನೊಂದಣಿ ಕಾಯ್ದೆ ಕಲಂ 13(3) ನಿಯಮ 9(3) ರಡಿಯಲ್ಲಿ ಅರ್ಜಿದಾರರ ತಂದೆಯಾದ ಕರಿಮ ಸಾಬ ತಂದೆ ಅಲ್ಲಾ ಬಾಷಾ, ಇವರು ದಿನಾಂಕ:30-11-2003ರಂದುಗಂಗಾವತಿ ನಗರದ ಶರಣಬಸವೇಶ್ವರ ಕ್ಯಾಂಪ್ ಏರಿಯಾದ ಸ್ವ-ಗೃಹದಲ್ಲಿ ಮರಣ ಹೊಂದಿದ್ದು, ಸದ್ರಿಯವರ ಮರಣ ನೊಂದಣಿ ಮಾಡಲು ಹಾಗೂ ಮರಣ ಪ್ರಮಾಣ ಪತ್ರ ವಿತರಿಸುವ ಮಾಡಿದ್ದು, ಈ ಪ್ರಕರಣವು ದಿನಾಂಕ:06-03-2026ರಂದು ಮಾನ್ಯ ಪ್ರಧಾನ ದಿವಾಣಿ ನ್ಯಾಯಾಧೀಶರ ನ್ಯಾಯಾಲಯ ಗಂಗಾವತಿಯಲ್ಲಿ ಬೆಳಿಗ್ಗೆ 11-00 ಗಂಟೆಗೆ ವಿಚಾರಣೆ ಇದ್ದ ಪ್ರಯುಕ್ತ ಯಾರಾದರೂ ತಕರಾರು ಸಲ್ಲಿಸುವುದಿದ್ದರೇ ಈ ಮೇಲೆ ತಿಳಿಸಿದ ದಿನಾಂಕದಂದು ನ್ಯಾಯಾಲಯಕ್ಕೆ ಹಾಜರಾಗಿ ತಕರಾರನ್ನು ಸಲ್ಲಿಸತಕ್ಕದ್ದು ಒಂದು ವೇಳೆ ಯಾರಿಂದಲೂ ತಕರಾರು ಬಾರದಿದ್ದ ಪಕ್ಷದಲ್ಲಿ ಮಾನ್ಯ ಘನ ನ್ಯಾಯಾಲಯವು ಈ ಪ್ರಕರಣದ ವಿಚಾರಣೆ ಅಂತಿಮ ಎಂದು ಪರಗಣಿಸಿ, ಅರ್ಜಿದಾರರ ಹೊರಡಿಸಲಿದೆ ಎಂದು ತಿಳಿಯತಕ್ಕದ್ದು, ಪರ ಏಕಪಕ್ಷೀಯಆದೇಶ
ಸ್ಥಳ: ಗಂಗಾವತಿ
ದಿ: 19-02-2026

ನ್ಯಾಯಾಲಯದ ಆದೇಶದ ಮೇರೆಗೆ
ಮುಖ್ಯ ಲಿಪಿಕಾಧಿಕಾರಿಗಳು
ಮಾನ್ಯ ಗೌರವಾನ್ವಿತ ಪ್ರಧಾನ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ, ಗಂಗಾವತಿ
ಮುಖಾಂತರ: IK
ಅರ್ಜಿದಾರರ ಪರ ವಕೀಲರು,

ಪತ್ರಿಕಾ ಪ್ರಕಟಣೆಗಾಗಿ
ಮಾನ್ಯ ಹೆಚ್ಚುವರಿ ದಿವಾಣಿ ನ್ಯಾಯಾಧೀಶರ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ ಗಂಗಾವತಿ (ಸಂಚಾರಿ ಪೀಠ ಕಾರಟಗಿ)
ಕ್ರಿಮಿನಲ್ ಮಿಸಲೇನಿಏಸ್ ನಂ:81/2026

ಅರ್ಜಿದಾರ : ವಿರುಪಾಕ್ಷಯ್ಯ ಎ ತಂದೆ ದಿ॥ ವಿರೇಶಯ್ಯ ಅಂಗಡಿ ವ: 60 ವರ್ಷ, ಉದ್ಯೋಗ: ಒಕ್ಕಲುತನ ಸಾ: ಕುಂದವಾಡ, ತಾ: & ಜಿ: ದಾವಣಗೆರೆ & ಇತರರು

ವಿರುದ್ಧ:

ಎದುರುದಾರರು : ಮಾನ್ಯ ತಹಶೀಲ್ದಾರರು ತಹಶೀಲ್ ಕಾರ್ಯಾಲಯ, ಕಾರಟಗಿ
ಈ ಪ್ರಕರಣದಲ್ಲಿ ಅರ್ಜಿದಾರ ಕರ್ನಾಟಕ ಜನನ ಮತ್ತು ಮರಣ ನೋಂದಣಿ ಕಾಯಿದೆ 1959 ಅಧಿನಿಯಮ ಕಲಂ 13(3)ರಡಿಯಲ್ಲಿ ಈ ನ್ಯಾಯಾಲಯಕ್ಕೆ ಅರ್ಜಿದಾರ ನಂ.01ರಿಂದ 07 ರವರ ತಂದೆಯಾದ ದಿ॥ವಿರೇಶಯ್ಯ ಸ್ವಾಮಿ ತಂದೆ ಅಮರಯ್ಯ ಸ್ವಾಮಿ ಇವರು ದಿನಾಂಕ: 04-02-1988 ರಂದು ಕೊಪ್ಪಳ ಜಿಲ್ಲೆ ಕಾರಟಗಿ ತಾಲೂಕಿನ ಯರಡೋಣ ಗ್ರಾಮದಲ್ಲಿ ಮರಣ ಹೊಂದಿದ ಕುರಿತಂತೆ ಮರಣ ನೋಂದಣೆ ಮತ್ತು ಮರಣ ಪ್ರಮಾಣ ಪತ್ರ ಕೊಡಿಸುವಂತೆ ಕೋರಿ ಎದುರುದಾರ ಕಛೇರಿ ಅಧಿಕಾರಿಯ ವಿರುದ್ಧ ಅರ್ಜಿಯನ್ನು ಸಲ್ಲಿಸಿದ ಪ್ರಯುಕ್ತ, ಅರ್ಜಿದಾರನ ಅರ್ಜಿ ಕುರಿತಂತೆ ಯಾರಾದರೂ ತಕರಾರು/ ಆಕ್ಷೇಪಣೆಗಳನ್ನು ಸಲ್ಲಿಸಬೇಕಾದಲ್ಲಿ ದಿನಾಂಕ :17-03-2026 ರ ಬೆಳಗ್ಗೆ 11.00 ಗಂಟೆ ಒಳಗಾಗಿ ಈ ನ್ಯಾಯಾಲಯಕ್ಕೆ ಸಲ್ಲಿಸತಕ್ಕದ್ದು, ಹಾಗೊಂದು ವೇಳೆ ಯಾರಿಂದಲೂ ಯಾವುದೇ ರೀತಿಯ ತಕರಾರು/ ಆಕ್ಷೇಪಣೆಗಳು ಈ ಮೇಲೆ ತಿಳಿಸಿದ ದಿನಾಂಕ ಮತ್ತು ಸಮಯದೊಳಗಾಗಿ ಈ ನ್ಯಾಯಾಲಯಕ್ಕೆ ಸಲ್ಲಿಸದೇ ಇದ್ದ ಪಕ್ಷದಲ್ಲಿ, ಯಾವುದೇ ತಕರಾರು/ಆಕ್ಷೇಪಣೆಗಳು ಇಲ್ಲವೆಂದು ಭಾವಿಸಿ ಈ ನ್ಯಾಯಾಲಯ ಕೊನೆಯ ತೀರ್ಮಾನ ಕೈಗೊಂಡು ಏಕಪಕ್ಷಿಯ ಆದೇಶವನ್ನು ಜಾರಿ ಮಾಡುತ್ತದೆ. ಈ ದಿವಸ ದಿನಾಂಕ: 19-02-2025 ರಂದು ಸಹಿ ಮಾಡಿ ಈ ನ್ಯಾಯಾಲಯದ ಶೀಲು/ ಮುದ್ರೆಯೊಂದಿಗೆ ಕೊಡಲಾಗಿದೆ.
ದಿ: 19-02-2026

ನ್ಯಾಯಾಲಯದ ಆದೇಶ ಅನುಸಾರ
ಮಾನ್ಯ ಹೆಚ್ಚುವರಿ ದಿವಾಣಿ ನ್ಯಾಯಾಧೀಶರ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ ಗಂಗಾವತಿ
(ಸಂಚಾರಿ ಪೀಠ ಕಾರಟಗಿ)
ಅರ್ಜಿದಾರರ ಪರ ವಕೀಲರು
ರಾಜಶೇಖರ ಕಂಬಳಿ ವಕೀಲರು, ಗಂಗಾವತಿ

ಪ್ರಕಟಣೆ

ದಾಖಲೆಯು ಕಳೆದುಕೊಂಡ ಬಗ್ಗೆ

ಶ್ರೀ ಬಾಲುನಾಯ್ಕ ತಂದೆ ಜಂಬಪ್ಪ ಚೆಂಗೋಲಿ, ವಯಸ್ಸು: 54 ವರ್ಷ, ಉದ್ಯೋಗ: ಕೃಷಿಕರು, ವಿಳಾಸ: ಕುಣಿಕೇರಿ ತಾಂಡಾ, ಪೋಸ್ಟ್: ಕುಣಿಕೇರಾ, ತಾ:ಜಿ: ಕೊಪ್ಪಳ ಆದ ನಾನು ಕುಣಿಕೇರಿ ಗ್ರಾಮದ ಖುಷ್ಕಿ ಜಮೀನು ಸರ್ವೆ ನಂ.283/ ಡಿ, ಕ್ಷೇತ್ರ 04 ಎಕರೆ 19 ಗುಂಟೆ ಜಮೀನಿನ ಮೂಲ /ಅಸಲು ಖರೀದಿ ನೋಂದಣಿ ಪತ್ರ ಸಂ. 778/1998-99ನ್ನು ನಾನು ದಿನಾಂಕ: 05/01/2026 ರಂದು ಕುಣಿಕೇರಿ ಗ್ರಾಮದಲ್ಲಿ ಆಕಸ್ಮಿಕವಾಗಿ ಕಳೆದುಕೊಂಡಿರುತ್ತೇನೆ. ಸದರಿ ದಾಖಲೆಯು ಯಾರಿಗಾದರೂ ಸಿಕ್ಕಲ್ಲಿ ಗ್ರಾಮೀಣ ಪೊಲೀಸ್ ಠಾಣೆ ಕೊಪ್ಪಳ ಅವರಲ್ಲಿ ಅಥವಾ ನನ್ನ ವಿಳಾಸಕ್ಕೆ ತಲುಪಿಸಲು ವಿನಂತಿಸಿರುತ್ತೇನೆ ಅಥವಾ ನನ್ನ ಮೊಬೈಲ್ ನಂ.8971526281 ಕರೆ ಮಾಡಿ ತಿಳಿಸಬೇಕೆಂದು ವಿನಂತಿ. ಸದರಿ ದಾಖಲೆಯು ಕಳೆದುಕೊಂಡ ಬಗ್ಗೆ ಕೋರ್ಟ ನೋಟರಿ ಶ್ರೀ ಓಂಕಾರಪ್ಪ ವಿರುಪಣ್ಣ ಕುಷ್ಟಗಿ, ಕೊಪ್ಪಳ ರವರ ಮುಂದೆ ದಿನಾಂಕ: 19/02/2026 ರಂದು ನನ್ನ ಪ್ರಮಾಣ ಪತ್ರವನ್ನು ಮಾಡಿರುತ್ತೇನೆ.

-ಸಹಿ-
ಶ್ರೀ ಬಾಲುನಾಯ್ಕ ತಂದೆ ಜಂಬಪ್ಪ ಚೆಂಗೋಲಿ

ಕ್ರಿಮಿನಲ್ ಮಿಸಲೇನಿಯಸ್ ನಂ.76/2026
ಮಾನ್ಯ ಪ್ರ.ದ.ನ್ಯಾ ದಂಡಾಧಿಕಾರಿಗಳು ನರಗುಂದ ಇವರ ನ್ಯಾಯಾಲಯದಲ್ಲಿ ನರಗುಂದ.

ಅರ್ಜಿದಾರ: ಶ್ರೀ ಸಿದ್ದಯ್ಯ ತಂ ವೀರಭದ್ರಯ್ಯ @ ವೀರಯ್ಯ ಗದ್ದಗಿಮಠ ಹಾಗೂ ಇತರರು ವಯಾ:68 ವರ್ಷ, ಉದ್ಯೋಗ: ಶೇತ್ಕಿ, ಸಾ:ಕಸಬಾ ಓಣಿ, ಶಂಕರಲಿಂಗ ಗುಡಿಯ ಹತ್ತಿರ, ನರಗುಂದ, ಜಿಲ್ಲಾ ಗದಗ.

ವಿರುದ್ಧ

ಎದುರುಗಾರ : ಜನನ-ಮರಣ ರಜಿಸ್ಟ್ರಾರು ಪುರಸಭೆ ನರಗುಂದ

ಸಾರ್ವಜನಿಕ ತಿಳುವಳಿಕೆ ನೋಟಿಸು

ಈ ಮೂಲಕ ಯಾವತ್ತು ಸಂಬಂಧಪಟ್ಟವರಿಗೆ ಕೊಡುವ ಸಾರ್ವಜನಿಕ ನೋಟೀಸು ಏನೆಂದರೆ, ಈ ಮೇಲ್ಕಾಣಿಸಿದ ಪ್ರಕರಣದಲ್ಲಿ ಅರ್ಜಿದಾರರು ತಮ್ಮ ತಂದೆಯಾದ ವೀರಭದ್ರಯ್ಯ ಗುರುಸಿದ್ದಯ್ಯ ಗದ್ದಗಿಮಠ ಇವರು ನರಗುಂದ ತಾಲೂಕಿನ ನರಗುಂದದ ಕಸಬಾ ಓಣಿಯ ತಮ್ಮ ಮನೆಯಲ್ಲಿ ದಿನಾಂಕ: 25/08/1975 ರಂದು ಮರಣ ಹೊಂದಿದ್ದು, ಇವರ ಮರಣದ ಬಗ್ಗೆ ನೋಂದಾಯಿಸುವ ಕುರಿತು ಮಾನ್ಯ ನ್ಯಾಯಾಲಯಕ್ಕೆ ಅರ್ಜಿ ಸಲ್ಲಿಸಿದ್ದು ಇರುತ್ತದೆ. ಕಾರಣ ಈ ಅರ್ಜಿಗೆ ಯಾರಾದರೂ ತಂಟೆ ವ ತಕರಾರು ಇದ್ದಲ್ಲಿ ನ್ಯಾಯಾಲಯವು ನಿಗದಿಪಡಿಸಿದ ಮುದ್ದತ್ ದಿನದಂದು ಅಂದರೆ ದಿನಾಂಕ:02-04-2026 ರಂದು 11:00 ಘಂಟೆಗೆ ಸ್ವತಃ ನೀವಾಗಲಿ ಅಥವಾ ನಿಮ್ಮ ವಕೀಲರ ಮುಖಾಂತರವಾಗಲಿ ತಮ್ಮ ಆಕ್ಷೇಪಣೆಯನ್ನು ಸಲ್ಲಿಸಬೇಕು. ಇಲ್ಲದಿದ್ದರೆ ನಿಮ್ಮ ಗೈರು ಹಾಜರಾತಿಯಲ್ಲಿ ಏಕಪಕ್ಷೀಯವಾಗಿ ವಿಚಾರಣೆ ನಡೆಸಿ ಮಾನ್ಯ ನ್ಯಾಯಾಲಯವು ಕಾನೂನು ಪ್ರಕಾರ ಮುಂದಿನ ಆದೇಶ ಮಾಡುತ್ತದೆ ಅಂತಾ ಕೊಟ್ಟ ಸಾರ್ವಜನಿಕ ನೋಟೀಸು.
ಈ ದಿವಸ ದಿನಾಂಕ: 18-02-2026 ರಂದು ಕೋರ್ಟಿನ ಮೊಹರಿನೊಂದಿಗೆ ಕೊಡಲಾಗಿದೆ.
ನರಗುಂದ

ನ್ಯಾಯಾಲಯದ ಆದೇಶದ ಮೇರೆಗೆ
ಶಿರಸ್ತೇದಾರರು
ಜೆ.ಎಮ್.ಎಫ್.ಸಿ ನ್ಯಾಯಾಲಯ ನರಗುಂದ ಜಿಲ್ಲಾ ಗದಗ.
(ಪ್ರಿ ಎಸ್ ದೇಶಪಾಂಡೆ) ವಕೀಲರು ನರಗುಂದ

ಕ್ರಿಮಿನಲ್ ಮಿಸಲೇನಿಯಸ್ ನಂ.75/2026
ಮಾನ್ಯ ಪ್ರ.ದ.ನ್ಯಾ ದಂಡಾಧಿಕಾರಿಗಳು ನರಗುಂದ ಇವರ ನ್ಯಾಯಾಲಯದಲ್ಲಿ ನರಗುಂದ.

ಅರ್ಜಿದಾರ: ಶ್ರೀ ಸಿದ್ದಯ್ಯ ತಂ ವೀರಭದ್ರಯ್ಯ @ ವೀರಯ್ಯ ಗದ್ದಗಿಮಠ ಹಾಗೂ ಇತರರು, ವಯಾ:68 ವರ್ಷ, ಉದ್ಯೋಗ: ಶೇತ್ಕಿ, ಸಾ: ಕಸಬಾ ಓಣಿ, ಶಂಕರಲಿಂಗ ಗುಡಿಯ ಹತ್ತಿರ, ನರಗುಂದ, ಜಿಲ್ಲಾ ಗದಗ.

ವಿರುದ್ಧ

ಎದುರುಗಾರ: ಜನನ-ಮರಣ ರಜಿಸ್ಟ್ರಾರರು ಪುರಸಭೆ ನರಗುಂದ.

ಸಾರ್ವಜನಿಕ ತಿಳುವಳಿಕೆ ನೋಟಿಸು

ಈ ಮೂಲಕ ಯಾವತ್ತು ಸಂಬಂಧಪಟ್ಟವರಿಗೆ ಕೊಡುವ ಸಾರ್ವಜನಿಕ ನೋಟೀಸು ಏನೆಂದರೆ, ಈ ಮೇಲ್ಕಾಣಿಸಿದ ಪ್ರಕರಣದಲ್ಲಿ ಅರ್ಜಿದಾರರು ತಮ್ಮ ತಾಯಿಯಾದ ಬಸವಣ್ಣೆವ್ವ ವೀರಭದ್ರಯ್ಯ ಗದ್ದಗಿಮಠ ಇವರು ನರಗುಂದ ತಾಲೂಕಿನ ನರಗುಂದದ ಕಸಬಾ ಓಣಿಯ ತಮ್ಮ ಮನೆಯಲ್ಲಿ ದಿನಾಂಕ:08/12/2006 ರಂದು ಮರಣ ಹೊಂದಿದ್ದು, ಇವರ ಮರಣದ ಬಗ್ಗೆ ನೋಂದಾಯಿಸುವ ಕುರಿತು ಮಾನ್ಯ ನ್ಯಾಯಾಲಯಕ್ಕೆ ಅರ್ಜಿ ಸಲ್ಲಿಸಿದ್ದು ಇರುತ್ತದೆ.
ಕಾರಣ ಈ ಅರ್ಜಿಗೆ ಯಾರಾದರೂ ತಂಟೆ ವ ತಕರಾರು ಇದ್ದಲ್ಲಿ ನ್ಯಾಯಾಲಯವು ನಿಗದಿಪಡಿಸಿದ ಮುದ್ದತ್ ದಿನದಂದು ಅಂದರೆ ದಿನಾಂಕ:02-04-2026 ರಂದು 11:00 ಘಂಟೆಗೆ ಸ್ವತಃ ನೀವಾಗಲಿ ಅಥವಾ ನಿಮ್ಮ ವಕೀಲರ ಮುಖಾಂತರವಾಗಲಿ ತಮ್ಮ ಆಕ್ಷೇಪಣೆಯನ್ನು ಸಲ್ಲಿಸಬೇಕು. ಇಲ್ಲದಿದ್ದರೆ ನಿಮ್ಮ ಗೈರು ಹಾಜರಾತಿಯಲ್ಲಿ ಏಕಪಕ್ಷೀಯವಾಗಿ ವಿಚಾರಣೆ ನಡೆಸಿ ಮಾನ್ಯ ನ್ಯಾಯಾಲಯವು ಕಾನೂನು ಪ್ರಕಾರ ಮುಂದಿನ ಆದೇಶ ಮಾಡುತ್ತದೆ ಅಂತಾ ಕೊಟ್ಟ ಸಾರ್ವಜನಿಕ ನೋಟೀಸು.
ಈ ದಿವಸ ದಿನಾಂಕ:18-02-2026 ರಂದು ಕೋರ್ಟಿನ ಮೊಹರಿನೊಂದಿಗೆ ಕೊಡಲಾಗಿದೆ.
ನರಗುಂದ

ನ್ಯಾಯಾಲಯದ ಆದೇಶದ ಮೇರೆಗೆ
ಶಿರಸ್ತೇದಾರರು
ಜೆ.ಎಮ್.ಎಫ್.ಸಿ ನ್ಯಾಯಾಲಯ ನರಗುಂದ ಜಿಲ್ಲಾ ಗದಗ
(ಪ್ರಿ ಎಸ್ ದೇಶಪಾಂಡೆ) ವಕೀಲರು ನರಗುಂದ

ಪತ್ರಿಕಾ ಪ್ರಕಟಣೆಗಾಗಿ ಪ್ರತಿ
ಮಾನ್ಯ ಗೌರವಾನ್ವಿತ ಪ್ರಧಾನ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ, ಗಂಗಾವತಿ ಇವರ ಸಮಕ್ಷಮದಲ್ಲಿ ಕ್ರಿ. ಮಿ. ನಂ.1334/2025

ಅರ್ಜಿದಾರರು :1) ಅರೀಮಲ್ಲಾ ತಂದೆ ದಿ॥ ಜುಬೇರುಲ್ಲಾ ವ:38, ಸಾ:ಗಂಗಾವತಿ, ತಾ: ಗಂಗಾವತಿ, ಜಿ: ಕೊಪ್ಪಳ
2) ಆದಿಲಾ ಬೇಗಂ ತಂದೆ ದಿ॥ ಜುಬೇರುಲ್ಲಾ ವ: 29 ವರ್ಷ, ಉದ್ಯೋಗ: ಮನೆಕೆಲಸ, ಸಾ: ಗಂಗಾವತಿ, ತಾ: ಗಂಗಾವತಿ, ಜಿ: ಕೊಪ್ಪಳ

ವಿರುದ್ಧ

ಎದುರುದಾರರ: ಮಾನ್ಯ ಪೌರಾಯುಕ್ತರು ಜನನ ಮತ್ತು ಮರಣ ನೊಂದಣಿ ಇಲಾಖೆ ನಗರಸಭೆ ಕಾರ್ಯಾಲಯ-ಗಂಗಾವತಿ, ಜಿ: ಕೊಪ್ಪಳ
ಸಂಬಂಧಪಟ್ಟವರು:
ಈ ಮೇಲೆ ತಿಳಿಸಿದ ಅರ್ಜಿದಾರರು ಕರ್ನಾಟಕ ಜನನ ಮರಣ ನೊಂದಣಿ ಕಾಯ್ದೆ ಕಲಂ 13(3) ನಿಯಮ 9(3) ರಡಿಯಲ್ಲಿ ಅರ್ಜಿದಾರರ ತಂದೆಯಾದ ಜುಬೇರುಲ್ಲಾ ತಂದೆ ಅಬ್ದುಲ್ ರವೂಫ್ ಇವರು 30-11-2013ರಂದು ಗಂಗಾವತಿ ನಗರದ ಶರಣಬಸವೇಶ್ವರ ಕ್ಯಾಂಪ್ ಏರಿಯಾದ ಸ್ವ-ಗೃಹದಲ್ಲಿ ಮರಣ ಹೊಂದಿದ್ದು, ಸದ್ರಿಯವರ ಮರಣ ನೊಂದಣಿ ಮಾಡಲು ಹಾಗೂ ಮರಣ ಪ್ರಮಾಣ ಪತ್ರ ವಿತರಿಸುವ ಸಮಬಂಧ ಎದುರುದಾರರ ಕಾರ್ಯಾಲಯಕ್ಕೆ ಆದೇಶವನ್ನು ಜಾರಿ ಮಾಡಬೇಕೆಂದು ಕೋರಿ ಅರ್ಜಿದಾರರ ಅರ್ಜಿಯನ್ನು ದಾಖಿಲು ಮಾಡಿದ್ದು ಈ ಪ್ರಕರಣವು ಮಾನ್ಯ ಪ್ರಧಾನ ದಿವಾಣಿ ನ್ಯಾಯಾಧೀಶರ ನ್ಯಾಯಾಲಯ ಗಂಗಾವತಿಯಲ್ಲಿ ಬೆಳಿಗ್ಗೆ 11-00 ಗಂಟೆಗೆ ವಿಚಾರಣೆ ಇದ್ದ ಪ್ರಯುಕ್ತ ಯಾರಾದರೂ ತಕರಾರು ಸಲ್ಲಿಸುವುದಿದ್ದರೇ ಈ ಮೇಲೆ ತಿಳಿಸಿದ ದಿನಾಂಕದಂದು ನ್ಯಾಯಾಲಯಕ್ಕೆ ಹಾಜರಾಗಿ ತಕರಾರನ್ನು ಸಲ್ಲಿಸತಕ್ಕದ್ದು ಒಂದು ವೇಳೆ ಯಾರಿಂದಲೂ ತಕರಾರು ಬಾರದಿದ್ದ ಪಕ್ಷದಲ್ಲಿ ಮಾನ್ಯ ಘನ ನ್ಯಾಯಾಲಯವು ಈ ಪ್ರಕರಣದ ವಿಚಾರಣೆ ಅಂತಿಮ ಎಂದು ಪರಗಣಿಸಿ, ಅರ್ಜಿದಾರರ ಪರ ಏಕ ಪಕ್ಷೀಯ ಆದೇಶ ದಿನಾಂಕ: 11-03-2026 ರಂದು ಹೊರಡಿಸಲಿದೆ ಎಂದು ತಿಳಿಯತಕ್ಕದ್ದು,
ಸ್ಥಳ: ಗಂಗಾವತಿ
ದಿನಾಂಕ: 19-02-2026

ನ್ಯಾಯಾಲಯದ ಆದೇಶದ ಮೇರೆಗೆ
ಮುಖ್ಯ ಲಿಪಿಕಾಧಿಕಾರಿಗಳು
ಮಾನ್ಯ ಗೌರವಾನ್ವಿತ ಪ್ರಧಾನ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ, ಗಂಗಾವತಿ
ಮುಖಾಂತರ: IK
ಅರ್ಜಿದಾರರ ಪರ ವಕೀಲರು,

ಪತ್ರಿಕಾ ಪ್ರಕಟಣೆಗಾಗಿ
ಮಾನ್ಯ ಗೌರವಾನ್ವಿತ ಪ್ರಧಾನ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ ಗಂಗಾವತಿ
ಕ್ರಿಮಿನಲ್ ಮಿಸಲೇನಿಏಸ್ ನಂ:215/2026

ಅರ್ಜಿದಾರ : ಸುರೇಶ ಎ ಮಂಗಳೂರು ತಂದೆ ದಿ॥ವಿರುಪಾಕ್ಷಪ್ಪ ವ: 54 ವರ್ಷ, ಉದ್ಯೋಗ: ಒಕ್ಕಲುತನ ಸಾ: ಚಿಕ್ಕಬೆಣಕಲ್, ತಾ: ಗಂಗಾವತಿ, ಜಿ: ಕೊಪ್ಪಳ

ವಿರುದ್ಧ:

ಎದುರುದಾರರು : ಮಾನ್ಯ ತಹಶೀಲ್ದಾರರು, ಜನನ ಮರಣ ನೋಂದಣಾಧಿಕಾರಿಗಳು ತಹಶೀಲ್ ಕಾರ್ಯಾಲಯ, ಗಂಗಾವತಿ
ಈ ಪ್ರಕರಣದಲ್ಲಿ ಅರ್ಜಿದಾರ ಕರ್ನಾಟಕ ಜನನ ಮತ್ತು ಮರಣ ನೋಂದಣಿ ಕಾಯಿದೆ 1969 ಅಧಿನಿಯಮ ಕಲಂ 13(3)ರಡಿಯಲ್ಲಿ ಈ ನ್ಯಾಯಾಲಯಕ್ಕೆ ಅರ್ಜಿದಾರ ತಂದೆಯಾದ ದಿ॥ ವಿರುಪಾಕ್ಷಪ್ಪ ಮಂಗಳೂರು ತಂದೆ ಅಮರಪ್ಪ ಮಂಗಳೂರು ಇವರು ದಿನಾಂಕ: 30-09-1979 ರಂದು ಅರ್ಜಿದಾರರ ಮನೆಯಾದ ಕೊಪ್ಪಳ ಜಿಲ್ಲೆ ಗಂಗಾವತಿ ತಾಲೂಕಿನ ಚಿಕ್ಕಬೆಣಕಲ್ ಗ್ರಾಮದಲ್ಲಿ ಮರಣ ಹೊಂದಿದ ಕುರಿತಂತೆ ಮರಣ ನೋಂದಣಿ ಮತ್ತು ಮರಣ ಪ್ರಮಾಣ ಪತ್ರ ಕೊಡಿಸುವಂತೆ ಕೋರಿ ಎದುರುದಾರ ಕಛೇರಿ ಅಧಿಕಾರಿಯ ವಿರುದ್ಧ ಅರ್ಜಿಯನ್ನು ಸಲ್ಲಿಸಿದ ಪ್ರಯುಕ್ತ, ಅರ್ಜಿದಾರನ ಅರ್ಜಿ ಕುರಿತಂತೆ ಯಾರಾದರೂ ತಕರಾರು/ ಆಕ್ಷೇಪಣೆಗಳನ್ನು ಸಲ್ಲಿಸಬೇಕಾದಲ್ಲಿ ದಿನಾಂಕ: 26-03-2026ರ ಬೆಳಗ್ಗೆ 11.00ಗಂಟೆ ಒಳಗಾಗಿ ಈ ನ್ಯಾಯಾಲಯಕ್ಕೆ ಸಲ್ಲಿಸತಕ್ಕದ್ದು, ಹಾಗೊಂದು ವೇಳೆ ಯಾರಿಂದಲೂ ಯಾವುದೇ ರೀತಿಯ ತಕರಾರು/ ಆಕ್ಷೇಪಣೆಗಳು ಈ ಮೇಲೆ ತಿಳಿಸಿದ ದಿನಾಂಕ ಮತ್ತು ಸಮಯದೊಳಗಾಗಿ ಈ ನ್ಯಾಯಾಲಯಕ್ಕೆ ಸಲ್ಲಿಸದೇ ಇದ್ದ ಪಕ್ಷದಲ್ಲಿ, ಯಾವುದೇ ತಕರಾರು/ಆಕ್ಷೇಪಣೆಗಳು ಇಲ್ಲವೆಂದು ಭಾವಿಸಿ ಈ ನ್ಯಾಯಾಲಯ ಕೊನೆಯ ತೀರ್ಮಾನ ಕೈಗೊಂಡು ಏಕಪಕ್ಷಿಯ ಆದೇಶವನ್ನು ಜಾರಿ ಮಾಡುತ್ತದೆ. ಈ ದಿವಸ ದಿನಾಂಕ: 19-02-2026 ರಂದು ಸಹಿ ಮಾಡಿ ಈ ನ್ಯಾಯಾಲಯದ ಶೀಲು/ ಮುದ್ರೆಯೊಂದಿಗೆ ಕೊಡಲಾಗಿದೆ.
ಸ್ಥಳ: ಗಂಗಾವತಿ
ದಿ:19-02-2026

ನ್ಯಾಯಾಲಯದ ಆದೇಶ ಅನುಸಾರ
ಮಾನ್ಯ ಪ್ರಧಾನ ನ್ಯಾಯಾಲಯ ಮತ್ತು ಜೆಎಮ್. ಎಫ್.ಸಿ, ಗಂಗಾವತಿ
ಅರ್ಜಿದಾರರ ಪರ ವಕೀಲರು
ನಾಗರಾಜ ಜವಳಿ, ವಕೀಲರು, ಗಂಗಾವತಿ

IN THE COURT OF PRINCIPAL CIVIL JUDGE AND J.M.F.C., BALLARI
Cri.M.C. No. 131/2026

1. Smt. Shridevi W/o Hanumathappa, Aged about 39 years
2. Sri. Manjunath Poojari S/o Ambanna @ Poojar Ambanna, Aged about 47 years
3. Smt. Ambeeka W/o Basavaraja, Aged about 34 years
4 Smt. Pallavi W/o Basha, Aged about 34 years ...Petitioners Addresses: Petitioner Nos.1 & 2: Ward No.1. Maremma Temple No.3, Sanapura Village, Kampli Taluk, Ballari District, Petitioner No.3: Metri Village. Kampli Taluk, Ballari District Petitioner No.4: 1st Ward. Janatha Colony, Toranagallu Village, Sandur Taluk, Ballari District

Vs.

The Tahasildar cum Registrar of Births and Deaths, Taluk Office. Kampli. Ballari District – .... Respondent

PUBLIC NOTICETO WHOMSOEVER IT MAY CONCERN

The Petitioners have approached this Hon'ble Court under Section 13(3) of the Registration of Births and Deaths Act, 1969 seeking direction to the Respondent to register the death of late Poojari Ambanna S/o Mariyamma (Devadasi), who died on 17-07-1985 at House No.3. Sanapura Village, Kampli Taluk. Ballari District, as the death was not registered at the time due to ignorance of law.

All persons who have any objection to the registration of the death of the said deceased are hereby called upon to appear in person or through a legal representative before this Hon'ble Court on 23/03/2026 at 11:00 A.M and present their objections. if any. Failure to appear and present objections on the said date shall be deemed as no objection to the prayer of the Petitioners,

Issued by Order of the Court
Chief Ministerial Officer
PCJ& J.M.F.C., Ballali
Kademane Peerbasha
advocate for petitioners

IN THE COURT OF THE CIVIL JUDGE, CUM J.M.F.C. AT SIRUGUPPA
Crl. M.C. NO. 55. OF 2026

BETWEEN:1.B.Basavaraj son of late Gangappa Yadaginahal, aged: 55 years,
2.Sanna Erayya son of late Gangappa Yadaginahal aged: 53 years,
3.Dodda Erayya son of late Gangappa Yadaginahal aged: 57 years, All are residents of Janatha colony, Udegola village, Siruguppa taluk, Ballari district.... PETITIONERS

AND

The Registrar of Births and Deaths, Tahasildar, Siruguppa Ballari district......RESPONDENT

NOTICE

To
1.The Registrar of Births and Deaths, Chief officer, Pattana Panchayathi, Tekkalakote village Siruguppa taluk Ballari district. 2.Other whomsoever it may concern
Whereas the above named petitioner have filed the above case against the respondent before this Hon'ble Court for seeking the Death Certificate of petitioners' father Gangappa Yadaginahal son of Eranna Yadaginahal, the said Gangappa Yadaginahal son of Eranna Yadaginahal died on 04.08.2015 at his residence at Udegola village, Siruguppa taluk. Ballari district.
You are hereby directed to appear before this Honourable court in person or by a pleader duly instructed on 19/02/26 at about 11-00 a.m. in the fore-noon before this court to show cause against the above petition, failingwhich the petition will be heard and determined as ex-parte.
Given under my hand and seal of the court on this 19th day of Feb,-2026.

By Order of the Court,
CHIEF MINISTRIAL OFFICER
Civil Judge & JMFC
SIRUGUPPA
(B.M. Asif)
Advocate for Petitioner

IN THE COURT OF I ADDL. CIVIL JUDGE AND J.M.F.C. COURT AT MANGALORE, D.K.
I.A No. /2026
In O.S. 884/2025

Between:
Bank of Baroda, Ladyhill Branch ...Plaintiff
And
Shivanand Yalaguradappa Divatagi ...Defendants

NOTICE

To Defendant:
Mr. Shivanand Yalaguradappa Divatagi
S/o. Yalaguradappa Divagatagi,
Aged about 36 years,
R/at: Inam Post, Hullikeri,
Hullikeri Inam, Bagalkot,
Karnataka 587201.

Please take notice that the plaintiff named above has filed the above suit against you. You are not available for service of suit notice so far. Hence, the Honourable court has ordered the plaintiff to cause suit notice throughpaperpublicationagainst you. Therefore you are hereby called upon to appear in person or through pleader before the above said Honourable Court at **11.00 A.M. on 01.04.2026.** If you fail to appear the matter will be decided in your absence according the merits of the suit treating you ex-parte by the court.

Given under my hand and the seal of the court on this 20th day of February 2026.

(By order of the Court)
Sd/- Chief Ministerial Officer
Court of the Civil Judge and JMFC, Mangaluru
(Ravichandra P.M)
Advocate for plaintiff
Mangalore, D.K.
Date: 30-01-2026

O.S.NO.4/2015
IN THE COURT OF SENIOR CIVIL JUDGE B BAGEWADI
AT: B BAGEWADI

1) Shankrewwa D/o Yalagurdappa Biradar --- Plaintiff

V/s

1) Yamanawwa w/o Hanamappa Biradar And others ------Defendants

DRAFT NOTICE U/o. 5 RULE 20(1A) OF C.P.C.

To,
1) Shankrewwa W/o Huligeppa Halagodi Age: 90 years, Occ: H H work, R/o: Veeresh Nagar, Muddebihal, Tq: Muddeibhal, Dist: Vijayapur.
2) Basappa S/o Vittappa Jalawadi Age: 60 years, Occ: Agriculture, R/o: Muddapur, Tq: Muddeibhal, Dist: Vijayapur ------Opponents/defendant No. 9 and 10
Whereas, the plaintiff has instituted the suit against you seeking a decree for partition and separate possession in respect of suit property. You all are hereby summoned to appear in this court in person or by pleader duly instructed and able to answer all the material questions relating to the top noted suit on this 16 day of March 2026 to answer the claim and as day fixed for the final disposal of the Suit-you must be prepared to produce on the day all the witnesses upon whose evidence and all the documents upon which you intended to rely in support of your defence.

Take notice that in default of your appearance on the day before mentioned the suit will be heard and determined in your absence.


Given under my hand and the seal of the court on this 20 day of February 2026.
Place: B.Bagewadi
Date: 20-02-2026

Sd/-Shirastedar
Addl. Senior Civil Judge
B.Bagewadi
Sd/- (S.G.Haggad)
Advocate for Plaintiff

ಕಿರುಸುದ್ದಿ

ಕೆಎಲ್‌ಇ ನೂತನ ಚೇರಮನ್‌ರಾಗಿ ಅಮಿತ ಕೋರೆ ಆಯ್ಕೆ

• **ಬೆಳಗಾವಿ:** ಜಾಗತಿಕ ಸುವಿಖ್ಯಾತ ಶಿಕ್ಷಣ ಸಂಸ್ಥೆಯಾದ ಕರ್ನಾಟಕ ಲಿಂಗಾಯತ ಶಿಕ್ಷಣ ಸಂಸ್ಥೆಯ ಆಡಳಿತ ಮಂಡಳಿಯ ನೂತನ ಕಾರ್ಯಾಧ್ಯಕ್ಷರಾಗಿ ಅಮಿತ ಕೋರೆಯವರು ಆಯ್ಕೆಯಾಗಿದ್ದಾರೆ.



ಕೆಎಲ್‌ಇ ಪ್ರಧಾನ ಕಚೇರಿಯಲ್ಲಿ ಜರುಗಿದ ನೂತನ ಆಡಳಿತ ಮಂಡಳಿಯ ಸಭೆಯಲ್ಲಿ ಅಮಿತ ಕೋರೆಯವರಿಗೆ ಕೆಎಲ್‌ಇ ಸಂಸ್ಥೆಯ ಸಾರಥ್ಯವನ್ನು ನೀಡಲಾಯಿತು. ಡಾ.ಪ್ರಭಾಕರ ಕೋರೆ ಅವರು ಸುದೀರ್ಘ 42 ವರ್ಷಗಳ ಅವಧಿಗೆ ಚೇರಮನ್‌ರಾಗಿ ಸಂಸ್ಥೆಯನ್ನು ಜಾಗತಿಕವಾಗಿ ವಿಸ್ತರಿಸಿದ್ದರು. ಇಂದು ಆ ಸ್ಥಾನವನ್ನು ಅಮಿತ ಕೋರೆಯವರಿಗೆ ಆಡಳಿತ ಮಂಡಳಿಯು ನೀಡಿ ಶುಭ ಕೋರಿದೆ. 1916ರಲ್ಲಿ ಸ್ಥಾಪನೆಗೊಂಡ ಕೆಎಲ್‌ಇ ಸೊಸೈಟಿ ದೇಶದ ಪ್ರಮುಖ ಶಿಕ್ಷಣ ಮತ್ತು ಆರೋಗ್ಯ ಸೇವಾ ಸಂಸ್ಥೆಗಳಲ್ಲೊಂದು. ಶಾಲೆಗಳು, ಮಹಾವಿದ್ಯಾಲಯಗಳು, ವೈದ್ಯಕೀಯ ಮತ್ತು ಇಂಜಿನಿಯರಿಂಗ್ ಸಂಸ್ಥೆಗಳು, ಆಸ್ಪತ್ರೆಗಳು ಸೇರಿದಂತೆ 317ಕ್ಕೂ ಹೆಚ್ಚು ಅಂಗಸಂಸ್ಥೆಗಳನ್ನು ಮುನ್ನಡೆಸುತ್ತಿರುವ ಈ ಸಂಸ್ಥೆ ಶತಮಾನಗಳ ಕಾಲ ಸಮಾಜಮುಖಿ ಕಾರ್ಯಗಳಲ್ಲಿ ತೊಡಗಿಸಿಕೊಂಡಿದೆ. ಇಂತಹ ಬೃಹತ್ ಸಂಸ್ಥೆಯ ಕಾರ್ಯಾಧ್ಯಕ್ಷರಾಗಿ 46ರ ಯುವ ನಾಯಕ ಅಮಿತ್ ಕೋರೆ ಅವರು ಆಯ್ಕೆಯಾಗಿರುವುದು ಗಮನಾರ್ಹವಾಗಿದೆ.

ಓರ್ವ ಸಾವು: ಇಬ್ಬರಿಗೆ ಗಾಯ

• **ಬಳ್ಳಾರಿ:** ಕಂಪ್ಲಿ ಪಟ್ಟಣದ ಕೋಟೆಯ ತುಂಗಭದ್ರಾ ನದಿ ಸೇತುವೆ ಬಳಿ ಸ್ವಾಗತ ಕಮಾನು ನವೀಕರಣ ಹಾಗೂ ಮೇಲಕ್ಕೆತ್ತುವ ಕಾಮಗಾರಿ ವೇಳೆ ಚೈನ್ ಕತ್ತರಿಸಿ, ವ್ಯಕ್ತಿಯೊಬ್ಬ ಮೃತಪಟ್ಟು, ಇಬ್ಬರು ಗಾಯಗೊಂಡಿರುವ ಘಟನೆ ಶುಕ್ರವಾರ ನಡೆದಿದೆ. ಕಂಪ್ಲಿಯ ಶೇಕ್ಷಾವಲಿ (35) ಮೃತಪಟ್ಟವರು. ಇನಾಯತ್, ಕರೀಂ ಸೇರಿ ಇಬ್ಬರು ಗಂಭೀರ ಗಾಯಗೊಂಡಿದ್ದು, ಗಂಗಾವತಿ ಸರ್ಕಾರಿ ಆಸ್ಪತ್ರೆಯಲ್ಲಿ ಚಿಕಿತ್ಸೆಗೆ ದಾಖಲಿಸಲಾಗಿದೆ. ಯಾವುದೇ ಅನುಮತಿ ಪಡೆಯದೆ ಕಮಾನು ನವೀಕರಣ ಹಾಗೂ ಎತ್ತರಿಸುವ ಕಾಮಗಾರಿ ಕೈಗೊಂಡಿದ್ದ ಪುರಸಭೆ ಅಧಿಕಾರಿಗಳ ನಿರ್ಲಕ್ಷ್ಯವೇ ಪ್ರಮುಖ ಕಾರಣ ಎನ್ನುವ ಆರೋಪಗಳು ಕೇಳಿಬಂದಿದ್ದು, ಮೃತರ ಕುಟುಂಬದವರ ಆಕ್ರಂದನ ಮುಗಿಲು ಮುಟ್ಟಿತ್ತು. ಯಾವುದೇ ಮುಂಜಾಗ್ರತೆ ಕೈಗೊಳ್ಳದೇ ಕ್ರೇನ್ ಮೂಲಕ ಚೈನ್‌ನಿಂದಾ ಕಮಾನನ್ನು ಮೇಲಕ್ಕೆತ್ತುವ ಕಾರ್ಯ ಮಾಡಲಾಗುತ್ತಿತ್ತು. ಈ ವೇಳೆ ಏಕಾಏಕಿ ಚೈನ್ ಕಟ್ ಆಗಿದ್ದರಿಂದ ಕಮಾನು ಕೆಳಗೆ ಬಿದ್ದು, ಶೇಕ್ಷಾವಲಿ ಎನ್ನುವವರಿಗೆ ತಲೆಗೆ ಪೆಟ್ಟು ಬಿದ್ದಿದೆ. ಕೂಡಲೇ ಗಂಗಾವತಿ ಸರ್ಕಾರಿ ಆಸ್ಪತ್ರೆಗೆ ಚಿಕಿತ್ಸೆಗೆ ದಾಖಲಿಸಲಾಗಿತ್ತು. ಚಿಕಿತ್ಸೆ ಫಲಕಾರಿಯಾಗದೆ ಆಸ್ಪತ್ರೆಯಲ್ಲಿ ಮೃತಪಟ್ಟಿದ್ದಾರೆ ಎಂದು ಕುಟುಂಬಸ್ಥರು ತಿಳಿಸಿದ್ದಾರೆ. ಘಟನಾ ಸ್ಥಳಕ್ಕೆ ಕಂಪ್ಲಿ ಪಿಐ ವಾಸು ಕುಮಾರ್ ಅವರು ಭೇಟಿ ನೀಡಿ ಪರಿಶೀಲಿಸಿದ್ದಾರೆ. ಪ್ರಕರಣ ದಾಖಲಾಗಿದೆ.

ಗಾಂಜಾ ಸರಬರಾಜು ವಿಡಿಯೋ ವೈರಲ್

• **ಹುಬ್ಬಳ್ಳಿ:** ಇಲ್ಲಿನ ನೃಪತುಂಗ ಬೆಟ್ಟದ ಹತ್ತಿರದ ಹುಬ್ಬಳ್ಳಿ ಉಪಕಾರಾಗೃಹದಲ್ಲಿನ ಕೈದಿಗಳಿಗೆ ಗಾಂಜಾ ಸರಬರಾಜು ಆಗುತ್ತಿದೆ ಎಂಬ ವಿಡಿಯೋ ವೈರಲ್ ಆಗಿದೆ. ಹುಬ್ಬಳ್ಳಿ ಉಪಕಾರಾಗೃಹದಲ್ಲಿ ಕೈದಿಗಳ ಸೆಲ್‌ನಲ್ಲಿ ಗಾಂಜಾ ಇರುವ ವಿಡಿಯೋ ವೈರಲ್ ಆಗಿದ್ದು, ಅದು ಸಬ್ ಜೈಲಿನಲ್ಲಿ ನಡೆದಿರುವ ಘಟನೆ ಎಂದು ಹೇಳಲಾಗುತ್ತಿದೆ. ಎಡಿಜಿಪಿ ಅಲೋಕುಮಾರ್ ಅವರು ಸಬ್ ಜೈಲ್‌ಗೆ ಭೇಟಿ ಕೊಟ್ಟು ಪರಿಶೀಲನೆ ನಡೆಸಿ, ಯಾವುದೇ ಗಾಂಜಾ ಪತ್ತೆಯಾಗಿಲ್ಲ ಎಂದು ಹೇಳಿಕೆ ನೀಡಿದ ಬೆನ್ನಲ್ಲಿಯೇ ವಿಡಿಯೋ ವೈರಲ್ ಆಗಿರುವುದರಿಂದ ಎಲ್ಲರೂ ಸಬ್ ಜೈಲ್ ಕಡೆ ನೋಡುವಂತೆ ಮಾಡಿದೆ. ಆದರೆ ಇದನ್ನು ತಳ್ಳಿ ಹಾಕಿರುವ ಉಪಕಾರಾಗೃಹದ ಜೈಲು ಅಧಿಕಾರಿ, ಉಪಕಾರಾಗೃಹದ್ದು ಎನ್ನಲಾದ ವಿಡಿಯೋ ನೋಡಲಾಗಿದೆ. ಅದು ನಮ್ಮ ಜೈಲಿಂದ, ನಮ್ಮ ಜೈಲಿನ ಸೆಲ್‌ಗಳು, ಕೈದಿಗಳಿಗೆ ಹೋಲಿಕೆ ಇದೆಯಾ ಎಂದು ಪರಿಶೀಲನೆ ಮಾಡಲಾಗುವುದು. ಅದರಲ್ಲಿ ಯಾವುದೇ ಕೈದಿಗಳ ಮುಖಗಳು ಇಲ್ಲ. ಸಂಪೂರ್ಣ ಪರಿಶೀಲನೆ ನಂತರ ಮುಂದಿನ ಕ್ರಮ ಕೈಗೊಳ್ಳಲಾಗುವುದು ಎಂದು ತಿಳಿಸಿದರು.

ರಾಷ್ಟ್ರೀಯ ಹಿಂದೂ ಆರ್ಥಿಕ ಮಹಾಸಂಗಮಕ್ಕೆ ಚಾಲನೆ

ಹಿಂದೂ ಆರ್ಥಿಕ ಒಕ್ಕೂಟದ ಕಾರ್ಯ ಶ್ಲಾಘನೀಯ

• **ಹುಬ್ಬಳ್ಳಿ:** ಹಿಂದೂಗಳ ಸಂಘಟಿಸಿ, ಕೈಗಾರಿಕಾ ಹಾಗೂ ವಾಣಿಜ್ಯೋದ್ಯಮ ಕ್ಷೇತ್ರದಲ್ಲಿ ಬದಲಾವಣೆ ತರುತ್ತಿರುವ ಹಿಂದೂ ಆರ್ಥಿಕ ಒಕ್ಕೂಟದ ಕಾರ್ಯ ಶ್ಲಾಘನೀಯ. ಇದರ ಸಲಹೆ, ಸಹಕಾರ ಪಡೆದು ಉದ್ಯಮ ಆರಂಭಿಸುವ ಮೂಲಕ ಆರ್ಥಿಕವಾಗಿ ಸದೃಢರಾಬೇಕು ಎಂದು ಧರ್ಮಸ್ಥಳದ ಧರ್ಮಾಧಿಕಾರಿ ಡಾ.ವೀರೇಂದ್ರ ಹೆಗ್ಗಡೆ ತಿಳಿಸಿದರು.

ಧರ್ಮಸ್ಥಳದ ಧರ್ಮಾಧಿಕಾರಿ ಡಾ.ವೀರೇಂದ್ರ ಹೆಗ್ಗಡೆ ಅಭಿಪ್ರಾಯ

ಶುಕ್ರವಾರ ನಗರದ ಖಾಸಗಿ ಹೋಟೆಲ್‌ನಲ್ಲಿ ಹು-ಧಾ ಚಾಪ್ಟರ್‌ನಿಂದ ನಗರದ ಆಯೋಜಿಸಿದ್ದ ರಾಷ್ಟ್ರೀಯ ಮಟ್ಟದ ಹಿಂದೂ ಆರ್ಥಿಕ ಮಹಾಸಂಗಮ-2026ಕ್ಕೆ ಚಾಲನೆ ನೀಡಿ ಮಾತನಾಡಿದ ಅವರು, ಹಿಂದೂ ಎಕನಾಮಿಕ್ ಫೂರಂ ಸ್ಥಾಪನೆಯು ಅದ್ಭುತ ಆಲೋಚನೆಯಾಗಿದೆ. ಇದರ ಮೂಲಕ ಅದ್ಭುತ ಅಭಿವೃದ್ಧಿ ಸಾಧಿಸುವ ಎಲ್ಲ ಅವಕಾಶಗಳು ಇವೆ. ಸಹಕಾರ ಮನೋಭಾವನೆಯೊಂದಿಗೆ ಎಲ್ಲರೂ ಸಾಗಬೇಕಿದೆ. ನಮ್ಮಲ್ಲಿರುವ ಕೆಲವು ಉದ್ಯಮಿಗಳ ಮಾದರಿಯಾಗಿಟ್ಟುಕೊಂಡು ನವೋದ್ಯಮಿಗಳು ಯಶಸ್ಸು ಕಾಣಬೇಕಿದೆ ಎಂದರು.

ಆರ್ಥಿಕ ತಜ್ಞ ಡಾ.ಆರ್.ವೈದ್ಯನಾಥನ್ ಮಾತನಾಡಿ, ದೇಶದಲ್ಲಿ ತಂತ್ರಜ್ಞಾನ ಬಹಳ ವೇಗವಾಗಿ ಬೆಳೆಯುತ್ತಿದೆ. ಇದರಿಂದ ಭ್ರಷ್ಟಾಚಾರ ಕಡಿಮೆಯಾಗಿದೆ. ಈ ಹಿಂದೆ ರೈಲ್ವೆ ಇಲಾಖೆಯಲ್ಲಿ ಹೆಚ್ಚಾಗಿ ಭ್ರಷ್ಟಾಚಾರ ನಡೆಯುತ್ತಿತ್ತು. ಈಗ ತಂತ್ರಜ್ಞಾನ ಮೂಲಕ ನಿಯಂತ್ರಿಸಲಾಗಿದೆ ಎಂದರು.

ದೇಶದ ರಫ್ತಿಗೆ ಭಾರತ-ಐರೋಪ್ಯ ಮುಕ್ತ ವ್ಯಾಪಾರ ಒಪ್ಪಂದ, ಭಾರತ-ಅಮೆರಿಕ ವ್ಯಾಪಾರ ಒಪ್ಪಂದ ಸೇರಿ ಹಲವು ವ್ಯಾಪಾರ ಒಪ್ಪಂದಗಳು ಬೋಸ್ಟ್ ಆಗಿವೆ. ಆದರೆ, ವಿಭಕ್ತ ಕುಟುಂಬ ವ್ಯವಸ್ಥೆ, ವಿವಾಹ ಪೂರ್ವ ಜನನ ಪ್ರಮಾಣ ಹೆಚ್ಚಳ ಹಾಗೂ ವಸುದೇವ ಕುಟುಂಬಕಂ ಎಂಬ ಕಲ್ಪನೆ ಮರೆಯಾಗುತ್ತಿರುವುದರಿಂದ ಜಿಡಿಪಿಗೆ ಹೊಡೆತ ಬೀಳುತ್ತಿದೆ ಎಂದು ತಿಳಿಸಿದರು.



> ದೇಶದಲ್ಲಿ ಹಿಂದೂಗಳು ಎಲ್ಲಿವರೆಗೆ ಒಗ್ಗೂಡುವುದಿಲ್ಲವೋ ಅಲ್ಲಿವರೆಗೆ ನಮ್ಮ ಬೆಳವಣಿಗೆ ಅಸಾಧ್ಯ. ಹಿಂದೂ ಉದ್ಯಮಿಗಳ ಒಗ್ಗೂಡಿಸುವ ಕೆಲಸ ಹಿಂದೂ ಆರ್ಥಿಕ ಒಕ್ಕೂಟ ಮಾಡುತ್ತಿರುವುದು ಶ್ಲಾಘನೀಯ.
> ■ ಜಿತೇಂದ್ರ ಮಜೇಥಿಯಾ, ಸಂಸ್ಥಾಪಕ, ಮಜೇಥಿಯಾ ಫೌಂಡೇಶನ್

ಉದ್ಯಮಿ ಡಾ.ಆನಂದ ಸಂಕೇಶ್ವರ ಮಾತನಾಡಿ, ಯುವ ಜನತೆ ಹಾಗೂ ನವೋದ್ಯಮಿಗಳು ಹೊಸ ಹೊಸ ಆಲೋಚನೆ, ಅವಿಷ್ಕಾರ ಬಗ್ಗೆ ಯೋಚನೆ ಮಾಡಬೇಕು. ಅಂದಾಗ ತಾವು ಅಭಿವೃದ್ಧಿಯಾಗುವುದರ ಜೊತೆಗೆ ದೇಶ ಬೆಳವಣಿಗೆ ಸಹಕಾರಿಯಾಗಲಿದೆ. ದೇಶದ ಆರ್ಥಿಕ ಕೊಡುಗೆಯಲ್ಲಿ ಈ ಹಿಂದೆ ಶೇ.33ರಷ್ಟು ಹಿಂದೂ ಉದ್ಯಮಿಗಳಿದ್ದರು. ಇತ್ತೀಚಿನ ದಿನಗಳಲ್ಲಿ ಹಿಂದೂ ಉದ್ಯಮಿಗಳ ಸಂಖ್ಯೆ ಶೇ.6ಕ್ಕೆ ಕಡಿತ ಕಂಡಿದೆ ಎಂದರು.

ದೇಶ ಉತ್ಪನ್ನಗಳಿಗೆ ವಿದೇಶದಲ್ಲಿ ಬಾರಿ ಬೇಡಿಕೆ ಇದೆ. ದೇಶ ಸಂಸ್ಕೃತಿಯಾದ ಯೋಗ ಹಾಗೂ ಧ್ಯಾನ ಪ್ರಸಿದ್ಧ ಪಡೆಯುತ್ತಿದೆ. ಆಯುರ್ವೇದಕ್ಕೆ ಮಹತ್ವ ಬಂದಿದ್ದು, ಈ ನಿಟ್ಟಿನಲ್ಲಿ ಉದ್ಯಮ ಸ್ಥಾಪಿಸಬೇಕು. ಈ ವ್ಯವಸ್ಥೆಯನ್ನು ಸುಧಾರಣೆ ಮಾಡಲೆಂದೇ ಹಿಂದೂ ಆರ್ಥಿಕ ಒಕ್ಕೂಟ ಹುಟ್ಟಿಕೊಂಡಿದೆ ಎಂದು ಹೇಳಿದರು.

> ಆರ್ಥಿಕ ಶಿಸ್ತಿನಿಂದ ಸ್ಥಳೀಯ ಮಟ್ಟದಿಂದ ಜಾಗತಿಕ ಮಟ್ಟದ ವರೆಗೆ ಉದ್ಯಮ ಬೆಳೆಸಲು ಸಾಧ್ಯವಾಗಲಿದೆ. ಇದನ್ನು ಆರ್ಥಿಕ ತಜ್ಞರ ಸುದೀರ್ಘ ಯೋಜನೆ ಎನ್ನಲಾಗುತ್ತದೆ. ಉದ್ಯಮಿಗಳಿಗೆ ಯೋಜನೆ ಇದ್ದರೆ ಸಾಲದು, ಸ್ಥಳೀಯ ಸಂಘಟನೆಗಳ ಪರಸ್ಪರ ಸಹಕಾರ ಆವಶ್ಯಕ.
> ■ ಸ್ವಾಮಿ ವಿಗ್ಯಾನಂದಜಿ, ಹಿಂದೂ ಆರ್ಥಿಕ ಒಕ್ಕೂಟದ(ಎಚ್‌ಇಎಫ್)ಮುಖ್ಯಸ್ಥ

ಹಿಂದೂ ಆರ್ಥಿಕ ಒಕ್ಕೂಟದ ಕಾರ್ಯದರ್ಶಿ ಟಿ.ಆರ್.ಶಿವಪ್ರಸಾದ, ಹಿಂದೂ ಆರ್ಥಿಕ ಒಕ್ಕೂಟ ಉದ್ಯಮಿಗಳ ಒಗ್ಗೂಡಿಸುವ ಕೆಲಸ ಮಾಡುತ್ತಿದೆ. 1000 ಸಾವಿರ ಚಾಪ್ಟರ್ ಮಾಡುವ ಗುರಿ ಹೊಂದಿದೆ. ಎರಡು ಮೂರು ವರ್ಷದಲ್ಲಿ ಈ ಒಕ್ಕೂಟ ಜಗತ್ತಿಗೆ ಪ್ರಸಿದ್ಧವಾಗಲಿದೆ ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ಸುವರ್ಣ ಶಕ್ತಿ ಸೌಹಾರ್ದ ಸಹಕಾರಿಯನ್ನು ಉದ್ಘಾಟಿಸಲಾಯಿತು. ಹು-ಧಾ ಚಾಪ್ಟರ್ ಅಧ್ಯಕ್ಷ ವಿಜೇಶ ಸೈಗಲ್ ಹು-ಧಾ ಚಾಪ್ಟರ್ ಸಂಚಾಲಕ ಅರ್ಜನ ಮಹಾಜನ್, ಕಾರ್ಯದರ್ಶಿ ಗಿರೀಶ ಮಾನೆ, ಉಪಾಧ್ಯಕ್ಷ ಗೌತಮ ಬಾಫಣಾ, ಖಜಾಂಚಿ ಮುಖೇಶ ಪಾಂಚಾಲ, ಸ್ವರ್ಣ ಸಮೂಹ ಸಂಸ್ಥೆಗಳ ವ್ಯವಸ್ಥಾಪಕ ನಿರ್ದೇಶಕ ಡಾ. ವಿ.ಎಸ್.ವಿ ಪ್ರಸಾದ್, ಉದ್ಯಮಿ ನಂದಕುಮಾರ್ ಇದ್ದರು.

ಜನಾಂಗೀಯ ಕುಲಶಾಸ್ತ್ರೀಯ ಅಧ್ಯಯನ

ಕವಿವಿಗೆ ರೂ.99.77 ಲಕ್ಷ ಅನುದಾನ

ಕುಲಪತಿ ಡಾ.ಎ.ಎಂ.ಖಾನ್ ಮಾಹಿತಿ

• **ಧಾರವಾಡ:** ಅಲೆಮಾರಿ, ಅರೇ ಅಲೆಮಾರಿ, ಭೈರಾಗಿ ಮತ್ತು ದುರ್ವೇಶ ಜನಾಂಗಗಳ ಕುಲಶಾಸ್ತ್ರೀಯ ಅಧ್ಯಯನಕ್ಕೆ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ವತಿಯಿಂದ ಕರ್ನಾಟಕ ವಿಶ್ವವಿದ್ಯಾಲಯದ ಮಾನವಶಾಸ್ತ್ರ ವಿಭಾಗಕ್ಕೆ ರೂ.99.77 ಲಕ್ಷ ಅನುದಾನ ದೊರೆತಿದೆ.

ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಕುಲಪತಿ ಡಾ.ಎ.ಎಂ. ಖಾನ್, ಸರ್ಕಾರ 2026ನೇ ಸಾಲಿಗೆ ನೇಕಾರ, ದುರ್ಗಮುರ್ಗ, ಭೈರಾಗಿ, ದುರ್ವೇಶ ಜನಾಂಗೀಯದ ಕುಲಶಾಸ್ತ್ರೀಯ ಅಧ್ಯಯನಕ್ಕೆ ಕರ್ನಾಟಕ ವಿಶ್ವವಿದ್ಯಾಲಯ ಆಯ್ಕೆ ಮಾಡಿದ್ದಕ್ಕೆ ಹೆಮ್ಮೆ ವ್ಯಕ್ತಪಡಿಸಿದರು.

ನೇಕಾರ ಮತ್ತು ದುರ್ಗಮುರ್ಗ ಅಲೆಮಾರಿ-ಅರೇ ಅಲೆಮಾರಿ ಜನರ ಕುಲಶಾಸ್ತ್ರೀಯ ಅಧ್ಯಯನಕ್ಕೆ ಮಾನವಶಾಸ್ತ್ರೀಯ ವಿಭಾಗದ ಮುಖ್ಯಸ್ಥ ಡಾ.ಟಿ.ಟಿ.ಬಸನಗೌಡ ಅವರಿಗೆ ಸರ್ಕಾರದ ಹಿಂದುಳಿದ ಇಲಾಖೆಯು ರೂ.75.68 ಲಕ್ಷ ಅನುದಾನ ನೀಡಿದೆ ಎಂದು ತಿಳಿಸಿದರು.

ಇನ್ನೂ ದುರ್ವೇಶ ಮತ್ತು ಭೈರಾಗಿ ಜನಾಂಗದ ಕುಲಶಾಸ್ತ್ರೀಯ ಅಧ್ಯಯನಕ್ಕೂ ಸಹ ವಿಭಾಗದ ಪ್ರಾಧ್ಯಾಪಕ ಪ್ರೊ.ಎಸ್.ಬಿ.ಸುಗಂಧಿ ಅವರಿಗೆ ರೂ.24.09 ಲಕ್ಷ ಅನುದಾನ ನೀಡಿದೆ. ಅಧ್ಯಯನ ಪೂರ್ಣಗೊಳಿಸಲು 12 ತಿಂಗಳ ಗಡುವು ನೀಡಿದ್ದಾಗಿಯೂ ಹೇಳಿದರು.

ಮಾನವಶಾಸ್ತ್ರೀಯ ವಿಭಾಗದ ಮುಖ್ಯಸ್ಥ ಡಾ.ಟಿ.ಟಿ.ಬಸನಗೌಡ,

ಕುಲಪತಿಗೆ ವರದಿ ಸಲ್ಲಿಕೆ

ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಡಿ.ದೇವರಾಜ ಅರಸು ಸಂಶೋಧನಾ ಸಂಸ್ಥೆಯಿಂದ ರಾಜ್ಯದ ನದಾಫ್-ಪಿಂಜಾರ್ ಜನಾಂಗದ ಕುಲಶಾಸ್ತ್ರೀಯ ಅಧ್ಯಯನಕ್ಕೂ 2025ರಲ್ಲಿ ರೂ.45.36 ಲಕ್ಷ ಅನುದಾನ ನೀಡಿತ್ತು. ಅಧ್ಯಯನ ಮುಗಿಸಿದ ಪ್ರೊ.ಟಿ.ಟಿ.ಬಸನಗೌಡ ಅವರು, ಅಧ್ಯಯನದ ವರದಿ ಕುಲಪತಿ ಡಾ.ಖಾನ್ ಅವರಿಗೆ ಸಲ್ಲಿಸಿದರು.

ಈ ಕುಲಶಾಸ್ತ್ರೀಯ ಅಧ್ಯಯನದಿಂದ ಶೈಕ್ಷಣಿಕ, ಸಾಮಾಜಿಕ, ಆರ್ಥಿಕ, ರಾಜಕೀಯವಾಗಿ ಹಿಂದುಳಿದ ಜನಾಂಗಕ್ಕೆ ಅಗತ್ಯ ಸೌಲಭ್ಯಗಳು ಒದಗಿಸಲು ಸರ್ಕಾರಕ್ಕೆ ಶಿಫಾರಸು ಮಾಡಿದೆ ಎಂದು ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಕವಿವಿ ಮೌಲ್ಯಮಾಪನ ಕುಲಸಚಿವ ಪ್ರೊ.ಎನ್.ವೈ.ಮಟ್ಟಿಹಾಳ, ಹಣಕಾಸು ಅಧಿಕಾರಿ ಪ್ರದೀಪಕುಮಾರ, ಪತ್ರಿಕೋದ್ಯಮ ವಿಭಾಗದ ಮುಖ್ಯಸ್ಥ ಡಾ.ಸಂಜಯ ಮಾಲಗತ್ತಿ, ಡಾ.ಜೆ.ಎಂ.ಚಂದುನವರ, ಡಾ.ಪ್ರಭಾಕರ ಕಾಂಬಳೆ ಅನೇಕರು ಇದ್ದರು.



ನಾಳೆ ಬೃಹತ್ ಹಿಂದೂ ಸಮಾವೇಶ: ಕುಲಕರ್ಣಿ



• **ಹುಬ್ಬಳ್ಳಿ:** ನವನಗರದ ಹಿಂದೂ ಸಮ್ಮೇಳನ ಸಮಿತಿ ವತಿಯಿಂದ ಫೆ.22ರಂದು ಸಂಜೆ 5.30ಕ್ಕೆ ನವನಗರದ ಕೆಎಚ್‌ಬಿ ಕಾಲೋನಿ ಬಳಿಯ ಬಜರಂಗಿ ಮೈದಾನದಲ್ಲಿ ಬೃಹತ್ ಹಿಂದೂ ಸಮಾವೇಶ ಆಯೋಜಿಸಲಾಗಿದೆ ಎಂದು ಸಮಿತಿ ಪ್ರಮುಖ ನರೇಂದ್ರ ಕುಲಕರ್ಣಿ ತಿಳಿಸಿದರು.

ನಗರದಲ್ಲಿ ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ನವನಗರ, ಗಾಮನಗಟ್ಟಿ, ಅಮರಗೋಳ, ಸುತಗಟ್ಟಿ, ರಾಯಾಪುರದ ಸುಮಾರು 10 ಸಾವಿರ ಜನರು ಪಾಲ್ಗೊಳ್ಳುವ ನಿರೀಕ್ಷೆ ಇದೆ ಎಂದರು.

ಮಧ್ಯಾಹ್ನ 3.30ಕ್ಕೆ ನವನಗರದ ಮುಖ್ಯದ್ವಾರದ ಮಾರುತಿ ಮಂದಿರದಿಂದ ಭಜರಂಗಿ ಮೈದಾನದವರೆಗೆ ಪೂರ್ಣಕುಂಭ, ಜಾನಪದ ಕಲಾ ತಂಡಗಳು, ವಾದ್ಯಗಳೊಂದಿಗೆ ಶೋಭಾಯಾತ್ರೆ ಆಯೋಜಿಸಲಾಗಿದೆ ಎಂದು ತಿಳಿಸಿದರು. ಗದಗನ ಶ್ರೀ ಶಿವಾನಂದ ಬೃಹನ್ಮಠದ ಜಗದ್ಗುರು ಶ್ರೀ ಸದಾಶಿವಾನಂದ ಸ್ವಾಮೀಜಿ ಸಾನ್ನಿಧ್ಯ ವಹಿಸುವರು. ರಾಷ್ಟ್ರೀಯ ಸ್ವಯಂಸೇವಕ ಸಂಘದ ಅಖಿಲ ಭಾರತೀಯ ವ್ಯವಸ್ಥಾ ಪ್ರಮುಖ ಮಂಗೇಶ ಭೇಂಡೆ ದಿಕ್ಸೂಚಿ ಭಾಷಣ ಮಾಡುವರು. ನಿವೃತ್ತ ಪ್ರಾಧ್ಯಾಪಕ ಡಾ.ಸಿ.ಎಂ.ಮಠ ಅಧ್ಯಕ್ಷತೆ ವಹಿಸುವರು ಎಂದು ಹೇಳಿದರು. ಸಾಮರಸ್ಯ, ಸಂಸ್ಕಾರ, ಸಂಸತಿ, ದೇಶಭಕ್ತಿಗಳು ಹಿಂದೂಗಳ ಮೂಲ ಗುಣ. ಇವುಗಳ ಬಗ್ಗೆ ಈಗಿನ ಪೀಳಿಗೆಗೆ ಜಾಗೃತಿ ಮೂಡಿಸಬೇಕು. ಈ ಹಿನ್ನೆಲೆಯಲ್ಲಿ ಎಲ್ಲ ಸಮಾಜದವರನ್ನು ಒಗ್ಗೂಡಿಸಿ ಹಿಂದೂ ಸಮಾವೇಶ ಆಯೋಜಿಸಲಾಗುತ್ತಿದೆ ಎಂದು ತಿಳಿಸಿದರು.

ಹಿಂದೂ ಸಮಾವೇಶದ ಹಿನ್ನೆಲೆಯಲ್ಲಿ ಪೂರ್ವಭಾವಿಯಾಗಿ ಕಳೆದ ಒಂದು ತಿಂಗಳಿನಿಂದ ನವನಗರ, ರಾಯಾಪುರ, ಸುತಗಟ್ಟಿ, ಗಾಮನಟ್ಟಿ, ಅರಮಗೋಳದಲ್ಲಿ ಸಭೆಗಳನ್ನು ಆಯೋಜಿಸಲಾಗುತ್ತಿದೆ. ಭಾರತ ಮಾತಾ ಪೂಜೆ, ಮಹಿಳೆಯರ ಸಂಕೀರ್ತನ ಯಾತ್ರೆ, ಹನುಮಾನ ಚಾಲಿಸಾ ಪಠಣ, ಮನೆ ಮನೆಗಳಿಗೆ ಸಂಪರ್ಕ, ಹಿಂದೂ ಯುವಕರ ಸಮಾವೇಶಗಳನ್ನು ಮಾಡಲಾಗಿದೆ ಎಂದು ವಿವರಿಸಿದರು. ಪ್ರಶಾಂತ ಪೂಜಾರಿ, ರಾವೇಂದ್ರ ಪೂಜಾರಿ, ಸಚಿನ ಪಾಟೀಲ ಇದ್ದರು.

ಚಿತ್ತೂರು ಜಿಲ್ಲೆಯಲ್ಲಿ ಹಕ್ಕಿ ಜ್ವರ ಪತ್ತೆ

ಕೊಪ್ಪಳ ಜಿಲ್ಲೆಯಲ್ಲಿ ತೀವ್ರ ನಿಗಾ ವಹಿಸಲು ಸೂಚನೆ

• **ಕೊಪ್ಪಳ:** ಪಕ್ಕದ ಆಂಧ್ರಪ್ರದೇಶದ ಚಿತ್ತೂರು ಜಿಲ್ಲೆಯಲ್ಲಿ ಕೋಳಿ ಶೀತ ಜ್ವರ (ಹಕ್ಕಿ ಜ್ವರ) ಪ್ರಕರಣ ದೃಢಪಟ್ಟಿರುವ ಹಿನ್ನೆಲೆಯಲ್ಲಿ ಕೊಪ್ಪಳ ಜಿಲ್ಲೆಯಲ್ಲಿ ಮುಂಜಾಗ್ರತಾ ಕ್ರಮಗಳನ್ನು ಕಟ್ಟುನಿಟ್ಟಾಗಿ ಜಾರಿಗೊಳಿಸಿ ಕೋಳಿ ಫಾರಂ ಮಾಲೀಕರು ಹಾಗೂ ಸಂಬಂಧಿಸಿದ ಅಧಿಕಾರಿಗಳು ಎಚ್ಚರಿಕೆಯಿಂದ ಕಾರ್ಯನಿರ್ವಹಿಸಿ ಎಂದು ಜಿಲ್ಲಾಧಿಕಾರಿ ಸುರೇಶ ಬಿ. ಇಟ್ನಾಳ್ ಸೂಚನೆ ನೀಡಿದರು.

ಶುಕ್ರವಾರ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಪಶುಪಾಲನಾ ಮತ್ತು ಪಶುವೈದ್ಯಕೀಯ ಸೇವಾ ಇಲಾಖೆಯಿಂದ ಕೋಳಿ ಶೀತ ಜ್ವರದ ರೋಗೋದ್ರೇಕದ ಕುರಿತು ಮುಂಜಾಗ್ರತೆ ವಹಿಸುವ ಕುರಿತು ಆಯೋಜಿಸಲಾಗಿದ್ದ ಜಿಲ್ಲಾ ಮಟ್ಟದ ಪ್ರಾಣಿ ಜನ್ಯ ರೋಗಗಳ ತುರ್ತು ನಿರ್ವಹಣಾ ಸಮಿತಿ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.



ಕೊಪ್ಪಳ ಜಿಲ್ಲೆಯಲ್ಲಿ ಒಟ್ಟು 25 ಮೊಟ್ಟೆ ಉತ್ಪಾದನಾ ಕೋಳಿ ಫಾರಂಗಳು ಹಾಗೂ 14 ಮಾಂಸ ಉತ್ಪಾದನಾ ಕೋಳಿ ಫಾರಂಗಳು ಕಾರ್ಯನಿರ್ವಹಿಸುತ್ತಿದ್ದು, ಕೋಳಿ ಶೀತ ಜ್ವರ ಹರಡುವಿಕೆ ತಡೆಯಲು ತೀವ್ರ ನಿಗಾವಹಿಸುವುದು ಅತ್ಯಗತ್ಯವಾಗಿದೆ. ಪಕ್ಕದ ರಾಜ್ಯದಲ್ಲಿ ರೋಗೋದ್ರೇಕ ಕಂಡುಬಂದಿರುವುದರಿಂದ, ಜಿಲ್ಲೆಯ ಪಶುವೈದ್ಯಕೀಯ ಇಲಾಖೆ, ಸ್ಥಳೀಯ ಸಂಸ್ಥೆಗಳು ಹಾಗೂ ಕೋಳಿ ಫಾರಂ ಮಾಲೀಕರು ಪೂರ್ಣ ಎಚ್ಚರಿಕೆಯಿಂದ ಕಾರ್ಯನಿರ್ವಹಿಸಬೇಕು ಎಂದು ಸೂಚಿಸಿದರು. ಗ್ರಾಮಗಳಲ್ಲಿ ಕೋಳಿಗಳು ಅಥವಾ ವಲಸೆ ಪಕ್ಷಿಗಳು ಅಸಹಜವಾಗಿ ಸತ್ತರೆ ತಕ್ಷಣವೇ ಪಶುವೈದ್ಯ ಇಲಾಖೆಗೆ ಮಾಹಿತಿ ನೀಡಬೇಕು. ಕೆರೆ, ಕಟ್ಟೆ, ನದಿ ಹಾಗೂ ನೀರಿನ ತೊರೆಗಳಲ್ಲಿ ಸತ್ತ ಪಕ್ಷಿಗಳು ಕಂಡುಬಂದರೆ ಕೂಡಲೇ ವರದಿ ಮಾಡಬೇಕು ಎಂದು ತಿಳಿಸಿದರು.

ಹಕ್ಕಿ ಜ್ವರ ಅನುಮಾನ ಉಂಟಾದಲ್ಲಿ 24 ಗಂಟೆಗಳೊಳಗೆ ಪಶುವೈದ್ಯರ ತಂಡಗಳನ್ನು ರಚಿಸಿ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಬೇಕು. ಅಗತ್ಯವಿದ್ದಲ್ಲಿ ಹಿಕ್ಕೆ, ರಕ್ತ ಹಾಗೂ ಸತ್ತ ಕೋಳಿಗಳ ಮಾದರಿಗಳನ್ನು ಸಂಗ್ರಹಿಸಿ ಭೋಪಾಲ್‌ನ ರಾಷ್ಟ್ರೀಯ ಉನ್ನತ ಭದ್ರತಾ ಪ್ರಾಣಿ ರೋಗ ಸಂಶೋಧನಾ ಸಂಸ್ಥೆಗೆ ಕಳುಹಿಸಿ ಪರೀಕ್ಷೆ ನಡೆಸಲಾಗುವುದು ಎಂದು ಜಿಲ್ಲಾಧಿಕಾರಿಗಳು ಹೇಳಿದರು.

ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ.ರಾಮ್ ಎಲ್.ಅರಸಿದ್ದಿ, ಡಿಎಫ್‌ಒ ನಿರ್ಮಲಾ, ಕೊಪ್ಪಳ ಪಶು ಪಾಲನಾ ಮತ್ತು ಪಶುವೈದ್ಯ ಸೇವಾ ಇಲಾಖೆಯ ಉಪನಿರ್ದೇಶಕರು(ಆಡಳಿತ) ಡಾ. ಪಿ.ಎಂ.ಮಲ್ಲಯ್ಯ, ಕೊಪ್ಪಳ ಪಶು ಪಾಲನಾ ಮತ್ತು ಪಶು ವೈದ್ಯ ಸೇವಾ ಇಲಾಖೆಯ ಉಪನಿರ್ದೇಶಕರು(ಪಾಲಿಕ್ಲಿನಿಕ್) ಡಾ. ಶರಣಬಸಪ್ಪ ರೋಣ, ಕಾರಟಗಿ ಪಶು ಚಿಕಿತ್ಸಾಲಯ ಬೆನ್ನೂರ ಪಶು ವೈದ್ಯಾಧಿಕಾರಿ ಡಾ.ಲಕ್ಷ್ಮಣ ನಾಯ್ಕ, ಯಲಬುರ್ಗಾ ಮುಖ್ಯ ಪಶು ವೈದ್ಯಾಧಿಕಾರಿ(ಆಡಳಿತ) ಡಾ.ಪ್ರಕಾಶ ಚೂರಿ, ಕೋಳಿ ಫಾರಂಗಳ ಮಾಲೀಕರು ಉಪಸ್ಥಿತರಿದ್ದರು.

ಮಹಾಬಲೇಶ್ವರ ಮಂದಿರದ ಶಿವರಾತ್ರಿ ಮಹೋತ್ಸವ ಸಂಪನ್ನ

• **ಗೋಕರ್ಣ:** ಪುರಾಣ ಪ್ರಸಿದ್ಧ ಮಹಾಬಲೇಶ್ವರ ಮಂದಿರದ ಶಿವರಾತ್ರಿ ಮಹೋತ್ಸವ ಗುರುವಾರ ಸಂಜೆ ಸಂಪನ್ನವಾಯಿತು.

ಒಂಬತ್ತು ದಿನಗಳ ಕಾಲ ದೈವಿಕ ಕಾರ್ಯ, ಹೋಮ, ಹವನ, ಯಾಗಶಾಲೆಯಲ್ಲಿ ವಿಶೇಷ ಪೂಜೆ,ನಿತ್ಯ ಉತ್ಸವ, ಮೂರನೆದಿನದಿಂದ ಪುಷ್ಪರಥೋತ್ಸವ, ಸಣ್ಣ ರಥೋತ್ಸವ, ಮಹಾರಥೋತ್ಸವ ವಿಜೃಂಭಣೆಯಿಂದ ನಡೆಯಿತು. ಕೊನೆಯ ದಿನವಾದ ಗುರುವಾರ ಯಾಗ ಶಾಲೆಯಲ್ಲಿ 9 ಕುಂಡಗಳಲ್ಲಿ ಅಧಿವಾಸ ಹೋಮ, ಚೂರ್ಣೋತ್ಸವ ನಡೆಯಿತು. ಸಂಜೆ ದೇವರ ಉತ್ಸವ ರಥಬೀದಿ ಮೂಲಕ ಕೋಟಿ ತೀರ್ಥಕ್ಕೆ ತೆರಳಿ ಇಲ್ಲಿನ ಪಶ್ಚಿಮ ಭಾಗದ ತೀರ್ಥಕಟ್ಟೆಯಲ್ಲಿ ಚಿತ್ತೈಯಿಸಿತು. ಇಲ್ಲಿ ಅವಭೃತಾಂಗ,ಪುಣ್ಯಾಹ, ವಾರುಣ ಹವನ ಪೂಜೆ ನಡೆದ ನಂತರ ಒಂಬತ್ತು ದಿನ ದೈವಿಕ ಕಾರ್ಯದಲ್ಲಿ ಭಾಗವಹಿಸಿದ ಅರ್ಚಕರು ಕೋಟಿತೀರ್ಥದಲ್ಲಿ ಸ್ನಾನ ಮಾಡಿ ಕಟ್ಟಿದ ಕಂಕಣ ತೆಗೆದು ಪೂಜೆ ನೆರವೇರಿಸಿದ ಬಳಿಕ ಜಲಾನಯನೋತ್ಸವ ಅಂದರೆ ಶ್ರೀದೇವರು ತೆಪ್ಪದಲ್ಲಿ ವಿರಾಜಮಾನರಾಗಿ ಕೋಟಿ ತೀರ್ಥದ ಮಧ್ಯ ಭಾಗದಲ್ಲಿರುವ ಕೋಟೇಶ್ವರನಿಗೆ ಪ್ರದಕ್ಷಿಣೆ(ಸುತ್ತುಹಾಕಿ) ಬಳಿಕ ದೇವರ ಉತ್ಸವ ಮಂದಿರಕ್ಕೆ ಮರಳಿತು.



ಯಾಗಶಾಲೆಯಲ್ಲಿ ಶಿವರಾತ್ರಿ ಪ್ರಾರಂಭದ ದಿನ ಬಿತ್ತಿದ ನವಧಾನ್ಯಗಳಿಂದ ಹೊರ ಬಂದ ಅಂಕುರವನ್ನ (ಮೊಳಕೆ) ಸಾರ್ವಭೌಮನಿಗೆ ಸಮರ್ಪಿಸಿ ಮಹಾಪೂಜೆ ನೆರವೇರಿಸಿದ ಬಳಿಕ ಅಂಕುರ ಪ್ರಸಾದವನ್ನ ಭಕ್ತರಿಗೆ ನೀಡಲಾಯಿತು. ಮುಖ್ಯ ಅರ್ಚಕ ವೇ. ಅನಂತರಾಜ ಅಡಿ ಪೂಜಾ ಕೈಂಕರ್ಯ ನೆರವೇರಿಸಿದರು.

ಮಂದಿರದ ಮೇಲುಸ್ತುವಾರಿ ಸಮಿತಿ ನೇತೃತ್ವದಲ್ಲಿ ನಡೆದ ದೈವಿಕ ಮಹೋತ್ಸವದಲ್ಲಿ ಸಮಿತಿ ಸದಸ್ಯರು, ವ್ಯವಸ್ಥಾಪಕರು, ಸಿಬ್ಬಂದಿ ವರ್ಗದವರು , ಅರ್ಚಕವೃಂದ, ಉಪಾಧಿವಂತರು, ಎಲ್ಲಾ ಸಮಾಜದವರು ಪಾಲ್ಗೊಂಡಿದ್ದರು. ಆರು ಎಕರೆ ಹೆಚ್ಚು ವಿಸ್ತಾರದ ಕೋಟಿತೀರ್ಥ ಕಟ್ಟೆಗೆ ಹಾಗೂ ಇಲ್ಲಿ ಬರುವ ಮಾರ್ಗಕ್ಕೆ ವಿದ್ಯುತ್ ದೀಪಾಲಂಕಾರ ಮಾಡಲಾಗಿತ್ತು. ವೇ.ಪ್ರಕಾಶ ಅಂಬೇಕರ ಆಕರ್ಷಕ ಬೆಳಕಿನ ವ್ಯವಸ್ಥೆ ಕಲ್ಪಿಸಿದ್ದರು. ಇನ್ನೂ ಇದರ ಜೊತೆ ಜಲಾಯನೋತ್ಸವದ ವೇಳೆ ಹಣತೆ ದೀಪದಿಂದ ಬೆಳಗಿದ್ದು ಸಹ ಎಲ್ಲರನ್ನ ಆಕರ್ಷಿಸಿತು.

ಡಾ.ಸಂದೀಪ್ ಶ್ರೀವಾಸ್ತವ್ ಕುಲಪತಿಯಾಗಿ ಅಧಿಕಾರ ಸ್ವೀಕಾರ

• **ಬೆಳಗಾವಿ:** ಇಲ್ಲಿನ ಕೆಎಲ್‌ಇ ಉನ್ನತ ಶಿಕ್ಷಣ ಮತ್ತು ಸಂಶೋಧನಾ ಅಕಾಡೆಮಿ ಡೀಮ್ಡ್-ಟು-ಬಿ ವಿಶ್ವವಿದ್ಯಾಲಯದ ಕುಲಪತಿಗಳಾಗಿ ಡಾ. ಸಂದೀಪ್ ಶ್ರೀವಾಸ್ತವ್ ಅಧಿಕಾರ ಸ್ವೀಕರಿಸಿದರು.

ಶುಕ್ರವಾರ ಡಾ. ಸಂದೀಪ್ ಶ್ರೀವಾಸ್ತವ್ ಅವರು ಶೈಕ್ಷಣಿಕ ನಾಯಕತ್ವ, ಸಂಶೋಧನಾ ನಿರ್ವಹಣೆ ಹಾಗೂ ವೈದ್ಯಕೀಯ ಅಭ್ಯಾಸ ಕ್ಷೇತ್ರಗಳಲ್ಲಿ ಮೂವತ್ತಕ್ಕೂ ಹೆಚ್ಚು ವರ್ಷಗಳ ವಿಶಿಷ್ಟ ಅನುಭವ ಹೊಂದಿದ್ದಾರೆ. ಓಎವಿಲ್ಕುಗೆ ಸೇರುವ ಮೊದಲು, ಅವರು ವಾರ್ಧಾದ ದತ್ತ ಮೆಘೆ ಉನ್ನತ ಶಿಕ್ಷಣ ಮತ್ತು ಸಂಶೋಧನಾ ಸಂಸ್ಥೆ (DMIHER)ಯಲ್ಲಿ ಕಾರ್ಯನಿರ್ವಾಹಕ ನಿರ್ದೇಶಕ ಜಾಗತಿಕ ವ್ಯವಹಾರಗಳು ಹಾಗೂ ಮುಖ್ಯ ವೈಜ್ಞಾನಿಕ ಅಧಿಕಾರಿಯಾಗಿ ಕಾರ್ಯನಿರ್ವಹಿಸಿದ್ದರು.

ಅವರು ಮೇಯೋ ಕ್ಲಿನಿಕ್, ಕ್ಲೀವ್ಲ್ಯಾಂಡ್ ಕ್ಲಿನಿಕ್, ವೈಲ್ ಕಾರ್ನೆಲ್ ಮೆಡಿಕಲ್ ಸ್ಕೂಲ್ ಮತ್ತು ಸಿಡ್ನಿ ವಿಶ್ವವಿದ್ಯಾಲಯ ಸೇರಿದಂತೆ ವಿಶ್ವಪ್ರಸಿದ್ಧ ಸಂಸ್ಥೆಗಳೊಂದಿಗೆ ಅಂತರರಾಷ್ಟ್ರೀಯ ಸಹಕಾರವನ್ನು ಮುನ್ನಡೆಸಿದರು. ಪ್ರತಿಷ್ಠಿತ Orthopaedics Surgeon ಡಾ.ಶ್ರೀವಾಸ್ತವ ಅವರ ಹೆಸರಿನಲ್ಲಿ 125ಕ್ಕೂ ಹೆಚ್ಚು ಸಂಶೋಧನಾ ಪ್ರಕಟಣೆಗಳು, 6 ಪುಸ್ತಕಗಳು, 16 ಕಾಪಿರೈಟ್‌ಗಳು ಮತ್ತು 3 ಪೇಟೆಂಟ್‌ಗಳಿವೆ. ಅವರು ವಾರ್ಧಾದ ಜೆ.ಎನ್.ಮೆಡಿಕಲ್ ಕಾಲೇಜಿನ ಡೀನ್ ಆಗಿ ಹಾಗೂ ಬಹು-ವಿಶೇಷತಾ ಆಸ್ಪತ್ರೆಗಳ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯಾಗಿ ಸಿಇಓಯಾಗಿ ಸೇವೆ ಸಲ್ಲಿಸಿದ್ದಾರೆ. ಡಾ. ಶ್ರೀವಾಸ್ತವ್ ಅವರು ಲೈಫ್ ಟೈಮ್ ಅಚೀವ್ಮೆಂಟ್ ಅವಾರ್ಡ್ 2023, ಎಜುಕೇಶನ್ ಐಕಾನ್ ಅವಾರ್ಡ್ 2023 ಹಾಗೂ ರಾಷ್ಟ್ರೀಯ ಚಿಕಿತ್ಸಕ ಸೇವಾ ಸಮ್ಮಾನ್ 2022 ಸೇರಿದಂತೆ ಅನೇಕ ಪ್ರಶಸ್ತಿಗಳನ್ನು ಪಡೆದಿದ್ದಾರೆ. ಅವರು ಭಾರತ ವೈದ್ಯಕೀಯ ಮಂಡಳಿ, ರಸಾಯನ ಮತ್ತು ರಸಗೊಬ್ಬರ ಸಚಿವಾಲಯ, ಭಾರತ ಸರಕಾರ ಹಾಗೂ ಐಸಿಎಂಆರ್‌ನ ತಜ್ಞ ಸಮಿತಿಗಳಲ್ಲೂ ಸೇವೆ ಸಲ್ಲಿಸಿದ್ದಾರೆ. ಡಾ. ಪ್ರಭಾಕರ ಕೋರೆ ಅವರು ನೂತನ ಕುಲಪತಿಯನ್ನು ಸ್ವಾಗತಿಸಿಕೊಂಡರು.

ಸ್ನೇಹಮಯಿ ವಿರುದ್ಧ ಸೇಡು ತೀರಿಸಿಕೊಳ್ಳಲು ಹೊರಟ ರಾಜ್ಯ ಸರ್ಕಾರ: ಸಚಿವ ಜೋಶಿ

• **ಕಲಬುರಗಿ:** ಸಿಎಂ ಸಿದ್ದರಾಮಯ್ಯನವರ ವಿರುದ್ಧ ಆರೋಪ ಮಾಡಿದರು ಎಂದು ಸ್ನೇಹಮಯಿ ಕೃಷ್ಣ ವಿರುದ್ಧ ರಾಜ್ಯ ಸರ್ಕಾರ ಸೇಡು ತೀರಿಸಿಕೊಳ್ಳಲು ಹೊರಟಿದೆ ಎಂದು ಕೇಂದ್ರ ಸಚಿವ ಪ್ರಹ್ಲಾದ ಜೋಶಿ ಆರೋಪಿಸಿದರು.

ನಗರದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ನಿನ್ನೆ ಮುಖ್ಯ ಕಾರ್ಯದರ್ಶಿ ವಿರುದ್ಧ ಆರೋಪ ಮಾಡಿದ್ದಾರೆ. ಅದು ತಪ್ಪಿದ್ದರೇ ಅವರು ಕೇಸ್ ದಾಖಲಿಸಲಿ. ಅದು ಬಿಟ್ಟು ನಟೇಶ್ ದೂರಿನ ಮೇಲೆ ಸಿಸಿಬಿ ಹೇಗೆ ಅರೆಸ್ಟ್ ಮಾಡುತ್ತೆ. ಅದು ಕಾಗ್ನಿಜಬಲ್ ಅಪರಾಧಾನಾ ಎಂದು ಪ್ರಶ್ನಿಸಿದರು.

ನಿನ್ನೆ ಬಾಗಲಕೋಟೆಯಲ್ಲಿ ಶಿವಾಜಿ ಮೂರ್ತಿಗೆ ಚಪ್ಪಲಿ ಎಸೆದಿದ್ದಾರೆ. ನೀವು ಬ್ರದರ್ಸ್ ಅಂತೀರಿ ಅದಕ್ಕೆ ಹೀಗಾಗುತ್ತೆ. ಆ ಮೇಲೆ ಪೊಲೀಸರ ಮೇಲೆ ಒತ್ತಡ ಹೇರುತ್ತೆ. ಹಿಂದೂ-ಮುಸ್ಲಿಂ ಎರಡೂ ಕಡೆಯವರನ್ನ ಅರೆಸ್ಟ್ ಮಾಡುತ್ತಾರೆ. ಕೇವಲ ತಪ್ಪು ಮಾಡಿದವರನ್ನ ಮಾತ್ರ ಏಕೆ ಅರೆಸ್ಟ್ ಮಾಡೊಲ್ಲ, ಕಾಂಗ್ರೆಸ್‌ನದ್ದು ತುಷ್ಟೀಕರಣ ರಾಜಕೀಯ ಮಾಡುತ್ತಿದೆ ಎಂದು ವಾಗ್ದಾಳಿ ನಡೆಸಿದರು.

ಎಐ ಸಮ್ಮಿಟ್ ಮೇಲೆ ಕಾಂಗ್ರೆಸ್ ಗುಂಡಾಗಳು ದಾಳಿ ಮಾಡಿದ್ದಾರೆ. ಕಾಂಗ್ರೆಸ್‌ನವರು ದೇಶದ ಮರ್ಯಾದೆ ಕಳೆಯುವ ಕೆಲಸ ಮಾಡುತ್ತಿದ್ದಾರೆ. ರಾಹುಲ್ ಗಾಂಧಿ ಅಪ್ರಬುದ್ಧ ರಾಜಕಾರಣಿ. ಅವರ ಬಗ್ಗೆ ಏನನ್ನು ಹೇಳೋಕೆ



ಆಗೊಲ್ಲ. ರಾಹುಲ್ ಒಂದು ರೀತಿ ದಾರಿ ತಪ್ಪಿದ ಮಗ ಆಗಿದ್ದಾರೆ. ಆದರೆ, ಮಲ್ಲಿಕಾರ್ಜುನ ಖರ್ಗೆಯವರ ಹತ್ತಿರ ಸ್ವಲ್ಪನಾದ್ರು ಸೆನ್ಸ್ ಇದ್ರೆ ದೇಶದ ಕ್ಷಮೆ ಕೇಳಬೇಕು ಎಂದು ಆಗ್ರಹಿಸಿದರು.

ಫ್ರಿ ಗ್ಯಾರಂಟಿ ಬಗ್ಗೆ ಸುಪ್ರೀಂಕೋರ್ಟ್ ಕಿಡಿಕಾರಿದ ವಿಚಾರಕ್ಕೆ ಪ್ರತಿಕ್ರಿಯಿಸಿ, ಸ್ವತಃ ಖರ್ಗೆಯವರೇ ಗ್ಯಾರಂಟಿಯಿಂದ ರಸ್ತೆ ಗುಂಡಿ ಮುಚ್ಚೋಕೆ ಹಣ ಇಲ್ಲ ಅಂತ ಹೇಳಿದ್ದರು. ಇನ್ಮೇಲೆಯಾದರು ಯಾರೇ ಆಗಲಿ ಗ್ಯಾರಂಟಿ ನೀಡೋಕು ಮುಂಚೆ ಯೋಚನೆ ಮಾಡಬೇಕು ಎಂದು ಹೇಳಿದರು.

ಮಹಿಳಾ ಅಧಿಕಾರಿಗೆ ಬ್ಲ್ಯಾಕ್ ಮೇಲ್

ನಕಲಿ ಪತ್ರಕರ್ತರ ಬಂಧನ

• **ಬೆಳಗಾವಿ:** ಕಳೆದ ಕೆಲ ದಿನಗಳ ಹಿಂದೆ ಸರ್ಕಾರಿ ಮಹಿಳಾ ಅಧಿಕಾರಿಗೆ ಬ್ಲ್ಯಾಕ್ ಮೇಲ್ ಮಾಡಿದ್ದ ಪತ್ರಕರ್ತರ ಸೋಗಿನಲ್ಲಿದ್ದ ನಕಲಿ ಪತ್ರಕರ್ತರಿಗೆ ಬೆಳಗಾವಿ ಜಿಲ್ಲಾ ನ್ಯಾಯಾಲಯ ಮೂರು ದಿನ ಪೊಲೀಸ್ ಕಸ್ಟಡಿಗೆ ನೀಡಿ ಆದೇಶ ಹೊರಡಿಸಿದೆ.

ಮಹಿಳಾ ಅಧಿಕಾರಿ ಮನೆಯಲ್ಲಿ ರಹಸ್ಯ ಕ್ಯಾಮೆರಾ ಇಟ್ಟು ಖಾಸಗಿ ದೃಶ್ಯ ಸೆರೆ ಹಿಡಿದು, ವೈರಲ್ ಮಾಡುವ ಬೆದರಿಕೆ ಹಾಕಿ ಹಣಕ್ಕೆ ಬೇಡಿಕೆಯಿಟ್ಟಿದ್ದ ಪ್ರಕರಣದಲ್ಲಿ ಈ ಹಿಂದೆ ಬಂಧಿಸಲಾಗಿದ್ದ ಮೂವರು ನಕಲಿ ಪರ್ತಕರ್ತರನ್ನು ಪುನಃ ವಶಕ್ಕೆ ಪಡೆದಿರುವ ಮಾಳಮಾರುತಿ ಠಾಣೆ ಪೊಲೀಸರು ತೀವ್ರ ತನಿಖೆ ಕೈಗೊಂಡಿದ್ದಾರೆ.

ಆರೋಪಿಗಳಾದ ಸಮೀದ್ ನಿಸಾರ್ ಅಹ್ಮದ್ ಶೇಖ್, ಅಬ್ದುಲ್ ರಶೀದ್ ಮಕಾನದಾರ ಹಾಗೂ ಮೊಹಮ್ಮದ್ ಬಾಳೇಕುಂದ್ರಿ ಅವರನ್ನು ಈ ಹಿಂದೆ ಬಂಧಿಸಲಾಗಿತ್ತು. ಇವರಿಂದ ಮಾಹಿತಿ ಪಡೆದು ಕಳೆದ ವಾರ ವಿನೋದನನ್ನು ಬಂಧಿಸಿದ್ದರು. ವಿಚಾರಣೆಯಲ್ಲಿ ವಿನೋದ ಕೆಲ ವಿಷಯಗಳನ್ನು ಹೇಳಿರುವ ಹಿನ್ನೆಲೆ ಈ ಮೊದಲು ಬಂಧಿಸಿದ್ದ ಮೂವರನ್ನು ನ್ಯಾಯಾಲಯದಿಂದ ತಮ್ಮ ವಶಕ್ಕೆ ಪಡೆದು ತೀವ್ರ



ವಿಚಾರಣೆ ಕೈಗೊಂಡಿದ್ದಾರೆ.


ನಕಲಿ ಪತ್ರಕರ್ತರ ಹಿಂದೆ ಇರುವ ಮಾಸ್ಟರ್ ಮೈಂಡ್ ಹೆಡೆಮುರಿ ಕಟ್ಟಿರುವ ಮಾಳಮಾರುತಿ ಪೊಲೀಸರು ಇವರು ಇನ್ನೂ ಯಾವ ಯಾವ ಅಧಿಕಾರಿಗೆ ಬ್ಲ್ಯಾಕ್ ಮೇಲ್ ಮಾಡಿದ್ದಾರೆ ಎನ್ನುವ ಕುರಿತು ಮಾಹಿತಿ ಕಲೆ ಹಾಕಲಾಗುತ್ತಿದ್ದು, ಈ ಆರೋಪಿಗಳನ್ನು ಮೂರು ದಿನ ಮಾಳಮಾರುತಿ ಪೊಲೀಸರು ಕಸ್ಟಡಿಗೆ ತೆಗೆದುಕೊಂಡಿದ್ದಾರೆ.

ಈ ಮೂವರ ಮೊಬೈಲ್ ಡೇಟಾ ಸಹ ಲಭ್ಯವಾಗಿದೆ ಎನ್ನಲಾಗಿದ್ದು, ಕೆಲ ಮಾಹಿತಿಗಳು ಸಿಕ್ಕಿವೆ. ಪುನಃ ಶುಕ್ರವಾರ ಸಂಜೆ ನ್ಯಾಯಾಲಯಕ್ಕೆ ಪೊಲೀಸರು ಹಾಜರು ಪಡಿಸಿದ್ದಾರೆ.

ಪ್ರೀತಿ ಮಾಡುತ್ತಿದ್ದ ಜೋಡಿಗೆ ಮದುವೆ

ಸ್ನೇಹಿತರ ಕಾರು ಅಪಘಾತ: ಯುವತಿ ಪರಾರಿ

• **ಹಾವೇರಿ:** ಪ್ರೀತಿ ಮಾಡುತ್ತಿದ್ದ ಜೋಡಿಗೆ ಮದುವೆ ಮಾಡಿಸಲು ಕಾರಿನಲ್ಲಿ ತೆರಳುತ್ತಿದ್ದ ಸ್ನೇಹಿತರ ಕಾರು ಅಪಘಾತದಿಂದ ಇದೀಗ ಆಸ್ಪತ್ರೆ ಸೇರಿದರೆ, ಇನ್ನು ಮದುವೆಯಾಗಬೇಕಿದ್ದ ಯುವತಿ ಸ್ಥಳದಿಂದ ಪರಾರಿಯಾದ ಘಟನೆ ವರದಿಯಾಗಿದೆ.



ಗಾಯಗೊಂಡರನ್ನ ಇರ್ಫಾನ್, ಚಂದ್ರು ಮತ್ತು ಗುರುರಾಜ್ ಎಂದು ಗುರುತಿಸಲಾಗಿದ್ದು, ಈ ಮೂವರನ್ನೂ ಜಿಲ್ಲಾಸ್ಪತ್ರೆಗೆ ದಾಖಲಿಸಿ ಚಿಕಿತ್ಸೆ ನೀಡಲಾಗುತ್ತಿದೆ. ಜಿಲ್ಲೆಯ ಹಿರೇಕೆರೂರು ತಾಲೂಕಿನ ಚೆನ್ನಹಳ್ಳಿ ಗ್ರಾಮದ ಬಳಿ ಕಾರು ಪಲ್ಟಿಯಾದ ಪರಿಣಾಮ ಅಂತರ್ ಧರ್ಮಿಯ ವಿವಾಹಕ್ಕೆ ಬ್ರೇಕ್ ಬಿದ್ದಂತಾಗಿದೆ. ಬೆಂಗಳೂರಿನಲ್ಲಿ ಕೆಲಸ ಮಾಡುತ್ತಿದ್ದ ಇರ್ಫಾನ್‌ಗೆ ತನ್ನದೇ ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದ ಚೆನ್ನಹಳ್ಳಿ ಗ್ರಾಮದ ಹಿಂದೂ ಹುಡುಗಿಯೊಂದಿಗೆ ಪ್ರೀತಿ ಹುಟ್ಟಿತ್ತು. ಬೆಂಗಳೂರಲ್ಲಿ ಕೆಲಸ ಮಾಡುತ್ತಿದ್ದ ಯುವತಿ ಇತ್ತೀಚಿಗೆ ಜಾತ್ರೆಗೆಂದು ಗ್ರಾಮಕ್ಕೆ ಬಂದಿದ್ದು, ಯುವತಿ ಹಾಗೂ ಇರ್ಫಾನ್ ಇಬ್ಬರೂ ತಮ್ಮ ಪೋಷಕರ ಕಣ್ಣು ತಪ್ಪಿಸಿ ಮದುವೆಯಾಗುವ ಯೋಜನೆಯಲ್ಲಿದ್ದರು.

ಈ ಹಿನ್ನೆಲೆಯಲ್ಲಿ ಚೆನ್ನಹಳ್ಳಿಗೆ ಕಾರಿನಲ್ಲಿ ಬಂದಿದ್ದ ಇರ್ಫಾನ್, ಸಹಾಯಕ್ಕೆಂದು ಚಂದ್ರು ಮತ್ತು ಗುರುರಾಜ್ ಅವರನ್ನು ಕರೆ ತಂದಿದ್ದ. ಇವರೆಲ್ಲರೂ ಸೇರಿ ಯುವತಿಯನ್ನು ಕಾರಿನಲ್ಲಿ ಬೆಂಗಳೂರಿಗೆ ಕರೆದೊಯ್ಯುತ್ತಿದ್ದರು. ಅಲ್ಲದೇ ಯುವತಿ ಪೋಷಕರು ಹುಡುಕುತ್ತಾ ಬರಬಹುದು ಎಂಬ ಆತಂಕದಲ್ಲಿ ವೇಗವಾಗಿ ಸಾಗುತ್ತಿದ್ದ ಸ್ವಿಫ್ಟ್ ಕಾರು ಚನ್ನಹಳ್ಳಿ ತಾಂಡದ ಬಳಿಯೇ ಪಲ್ಟಿಯಾಗಿದ್ದು, ಸಂಪೂರ್ಣ ಜಖಂಗೊಂಡಿದೆ. ಅಪಘಾತದಲ್ಲಿ ಮೂರು ಯುವಕರಿಗೆ ಗಂಭೀರ ಗಾಯವಾಗಿದೆ. ಕಾರು ಪಲ್ಟಿಯಾದ ಬೆನ್ನಲ್ಲೆ ಹಿಂದೆ ಕುಳಿತಿದ್ದ ಯುವತಿ ಸ್ವಲ್ಪದರಲ್ಲೇ ಪ್ರಾಣಾಯಾಮದಿಂದ ಪಾರಾಗಿ, ತಮ್ಮ ಊರ ಬಳಿಯೇ ಕಾರು ಪಲ್ಟಿಯಾದ ಕಾರಣ, ಯುವಕರ ರಕ್ಷಣೆಗಾಗಿ ಜನ ಸೇರಿತ್ತಿದ್ದು, ತನ್ನ ವಿಷಯ ಗ್ರಾಮದವರಿಗೆ ತಿಳಿಯುತ್ತದೆ ಎಂದು ಅಂಜಿದ ಯುವತಿ ಅವರಿವರ ಬಳಿ ಡ್ರಾಪ್ ತಗೊಂಡು ಬೆಂಗಳೂರು ಬಸ್ ಹತ್ತಿ ಅಲ್ಲಿನ ಮನೆ ತಲುಪಿದ್ದಾಳೆ. ಈ ಕುರಿತು ಹಿರೇಕೇರೂರು ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ಪ್ರಕರಣ ದಾಖಲಾಗಿದೆ.

ಹೊಸ ದಿಗಂತ
ರಾಷ್ಟ್ರ ಜಾಗೃತಿಯ ಪತ್ರಿಕೆ
೧೩

ಕಿರುಸುದ್ದಿ

ಅಲಂಕಾರ: ಪೂಜೆ



ನರಗುಂದ: ಪಟ್ಟಣದ ಸುಕ್ಷೇತ್ರ ವೀರಕ್ತಮಠದ ಕರ್ತೃ ಚನ್ನಬಸವೇಶ್ವರ ಗದ್ದುಗೆಯನ್ನು ಮಹಾಶಿವರಾತ್ರಿ ದಿನದಂದು ನಂದಿ ಮೇಲೆ ಕುಳಿತ ಶಿವನ ರೂಪದಲ್ಲಿ ಅಲಂಕಾರಗೊಳಿಸಲಾಗಿತ್ತು. ಶಿವಕುಮಾರ ಸ್ವಾಮೀಜಿ ಪೂಜೆ ಕೈಗೊಂಡರು.

ರಸಪ್ರಶ್ನೆ ಕಾರ್ಯಕ್ರಮ ಇಂದು

ಗಜೇಂದ್ರಗಡ: ಸಮಸ್ತ ಕುರುಹಿನಶೆಟ್ಟಿ ಸಮಾಜದ ವತಿಯಿಂದ ನಗರದ ಹಿರೇಬಜಾರದಲ್ಲಿರುವ ಕುರುಹಿನಶೆಟ್ಟಿ ಸಮುದಾಯ ಭವನದಲ್ಲಿ ಫೆ.21ರಂದು 2025-26 ನೇ ಸಾಲಿನ ಎಸ್‌ಎಸ್‌ಎಲ್‌ಸಿ ವಿದ್ಯಾರ್ಥಿಗಳಿಗಾಗಿ ರಸಪ್ರಶ್ನೆ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ಪ್ರತಿ ಪ್ರೌಢ ಶಾಲೆಯಿಂದ ಗರಿಷ್ಠ ನಾಲ್ಕು ವಿದ್ಯಾರ್ಥಿಗಳು ಭಾಗವಹಿಸಲು ಅವಕಾಶ ವಿರುತ್ತದೆ. ಆಸಕ್ತ ವಿದ್ಯಾರ್ಥಿಗಳು ಭಾಗವಹಿಸಬಹುದು. ಪ್ರಥಮ ಬಹುಮಾನ 5001 ರೂ., ದ್ವಿತೀಯ ಬಹುಮಾನ 3001 ರೂ., ತೃತೀಯ ಬಹುಮಾನ 2001 ರೂ. ಹಾಗೂ ಸಮಾಧಾನಕರ ಬಹುಮಾನ 1001 ರೂಪಾಯಿಗಳು ಮತ್ತು ಪಾರಿತೋಷಕ ನೀಡಲಾಗುವುದು .ರಸಪ್ರಶ್ನೆ ಕಾರ್ಯಕ್ರಮದಲ್ಲಿ ಭಾಗವಹಿಸುವ ಯಾವುದೇ ವಿದ್ಯಾರ್ಥಿಗಳಿಗೆ ಪ್ರವೇಶ ಶುಲ್ಕವಿರುವುದಿಲ್ಲ ಎಂದು ಸಮಸ್ತ ಕುರುಹಿನಶೆಟ್ಟಿ ಸಮಾಜದ ಕಾರ್ಯಕಾರಣಿ ಮಂಡಳಿಯವರು ಪ್ರಕಟಣೆಗೆ ತಿಳಿಸಿದ್ದಾರೆ.

ಇಂದು ತಾಂತ್ರಿಕ ಸಮ್ಮೇಳನ

ಗದಗ: ಜಿಲ್ಲಾ ಪಂಚಾಯತ್, ಪಶುಪಾಲನಾ ಮತ್ತು ಪಶು ವೈದ್ಯಕೀಯ ಸೇವಾ ಇಲಾಖೆ, ಕರ್ನಾಟಕ ಪ್ರಾಣಿ ಕಲ್ಯಾಣ ಮಂಡಳಿ, ಕರ್ನಾಟಕ ಪಶು ವೈದ್ಯಕೀಯ ಸಂಘ ಹಾಗೂ ಹ್ಯೂಮೇನ್ ವರ್ಲ್ಡ್ ಫಾರ್ ಅನಿಮಲ್ ಇಂಡಿಯಾ ಫೌಂಡೇಶನ್ ಪ್ರಸಕ್ತ ಸಾಲಿನ ಪಶು ಸಂಗೋಪನೆ ಹಾಗೂ ಪ್ರಾಣಿ ಕಲ್ಯಾಣ ಮಾಸಾಚರಣೆ ನಿಮಿತ್ತ ಬೆಳಗಾವಿ ವಿಭಾಗ ಮಟ್ಟದ ತಾಂತ್ರಿಕ ಸಮ್ಮೇಳನ ಫೆ.21 ರಂದು ಬೆಳಗ್ಗೆ 10ಕ್ಕೆ ನಾಗಾವಿಯ ಮಹಾತ್ಮಾ ಗಾಂಧಿ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ವಿಶ್ವ ವಿದ್ಯಾಲಯ, ಗ್ರಾಮ ಗಂಗೋತ್ರಿಯಲ್ಲಿ ಹಮ್ಮಿಕೊಳ್ಳಲಾಗಿದೆ. ವಿಧಾನ ಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ ಉಪಸ್ಥಿತಿ ವಹಿಸುವರು. ಜಿಲ್ಲಾ ಉಸ್ತುವಾರಿ ಸಚಿವ ಎಚ್.ಕೆ.ಪಾಟೀಲ ಕಾರ್ಯಕ್ರಮ ಉದ್ಘಾಟಿಸುವರು. ಸರ್ಕಾರಿ ಮುಖ್ಯ ಸಚೇತಕ ಸಲೀಂ ಅಹ್ಮದ್, ಶಾಸಕ ಜಿ.ಎಸ್.ಪಾಟೀಲ, ಸಂಸದ ಬಸವರಾಜ ಬೊಮ್ಮಾಯಿ, ಸಂಸದ ಪಿ.ಸಿ.ಗದ್ದಿಗೌಡ್ರ, ರಾಜ್ಯ ವಿಕೇಂದ್ರೀಕರಣ ಯೋಜನೆ ಮತ್ತು ಅಭಿವೃದ್ಧಿ ಸಮಿತಿ ಉಪಾಧ್ಯಕ್ಷ ಡಿ.ಆರ್ .ಪಾಟೀಲ, ಶಾಸಕರಾದ ಸಿ.ಸಿ.ಪಾಟೀಲ, ಡಾ.ಚಂದ್ರು ಲಮಾಣಿ, ವಿಧಾನ ಪರಿಷತ್ ಶಾಸಕ ಎಸ್.ವಿ.ಸಂಕನೂರ, ಪ್ರದೀಪ ಶೆಟ್ಟರ, ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಅಕ್ಬರಸಾಬ ಬಬರ್ಜಿ ಆಗಮಿಸುವರು ಎಂದು ಪಶುಪಾಲನಾ ಮತ್ತು ಪಶು ವೈದ್ಯಕೀಯ ಸೇವಾ ಇಲಾಖೆಯ ಜಂಟಿ ನಿರ್ದೇಶಕ (ರಾಜ್ಯ ವಲಯ) ಡಾ.ಎಚ್.ನಾಗರಾಜ, ಪಶು ಪಾಲನಾ ಮತ್ತು ಪಶು ವೈದ್ಯಕೀಯ ಸೇವಾ ಇಲಾಖೆಯ ಉಪನಿರ್ದೇಶಕರು (ಆಡಳಿತ) ಡಾ.ಎಚ್ .ಬಿ.ಹುಲಗಣ್ಣವರ, ಕರ್ನಾಟಕ ಪಶು ವೈದ್ಯಕೀಯ ಸಂಘದ ಅಧ್ಯಕ್ಷ ಡಾ.ಆರ್.ವೈ. ಗುರಿಕಾರ ತಿಳಿಸಿದ್ದಾರೆ.

ಕುಂದುಕೊರತೆ ಸಭೆ ಇಂದು

ಗದಗ: ಜಿಲ್ಲಾ ಮಟ್ಟದ ಎಚ್.ಟಿ ಗ್ರಾಹಕರ ಕುಂದು ಕೊರತೆ ಸಭೆ ಫೆ.21 ರಂದು ನಗರದ ಜಿಲ್ಲಾ ವಾಣಿಜ್ಯೋದ್ಯಮ ಸಂಸ್ಥೆಯಲ್ಲಿ ನಡೆಯಲಿದೆ. ಬೆಳಗ್ಗೆ 11 ಕ್ಕೆ ನಡೆಯುವ ಸಭೆಗೆ ಜಿಲ್ಲಾ ವಾಣಿಜ್ಯೋದ್ಯಮ ಸಂಸ್ಥೆಯ ಅಧ್ಯಕ್ಷ ಶರಣಬಸಪ್ಪ ಗುಡಿಮನಿ ಅಧ್ಯಕ್ಷತೆ ವಹಿಸಲಿದ್ದಾರೆ. ಹೆಸ್ಕಾಂನ ಅಧೀಕ್ಷಕ ಎಂಜಿನಿಯರ್ ನಜ್ಮನ್ನಿಸ್ ಕೆ. ಮುಖ್ಯ ಅತಿಥಿಗಳಾಗಿ ಪಾಲ್ಗೊಳ್ಳಲಿದ್ದಾರೆ. ಜಿಲ್ಲೆಯ ಎಲ್ಲಾ ಕೈಗಾರಿಕಾ ಪ್ರದೇಶಗಳ ಎಚ್.ಟಿ. ಗ್ರಾಹಕರು ವಿದ್ಯುತ್‌ಗೆ ಸಂಬಂಧಪಟ್ಟ ತಮ್ಮ ಕುಂದು-ಕೊರತೆಗಳನ್ನು ಲಿಖಿತವಾಗಿ ಅಥವಾ ಖುದ್ದು ಹಾಜರಾಗಿ ಸಲ್ಲಿಸಲು ಹೆಸ್ಕಾಂ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಗದಗ ಮಾರುಕಟ್ಟೆ ಧಾರಣೆ (ಕ್ವಿಂಟಲ್)

ಕಡಲೆಕಾಳು	2000-5509
ಅಲಸಂದೆಕಾಳು	2017-6371
ಹೆಸರುಕಾಳು	1044-6309
ಶೇಂಗಾ	5029-7791
ಕಡಲೆಕಾಳು	10000-10000
ಹುರುಳಿ ಕಾಳು	2647-4239
ಜೋಳ	2244-4421
ಮೆಕ್ಕೆಜೋಳ	1005-1780
ಮಡಿಕೆ	10209-10209
ಸಾಸುವೆ	5169-5570
ಕುಸುಬೆ	5169-5570
ಸೋಯಾಬೀನ್	3044-3044
ಸೂರ್ಯಕಾಂತಿ	5206-6751
ತೊಗರಿ	2847-5744
ಗೋಧಿ	1912-5337



ಲಕ್ಷ್ಮೇಶ್ವರ: ಸೋಮೇಶ್ವರ ದೇವಸ್ಥಾನದಲ್ಲಿ ನಡೆದ ಪುಲಿಗೆರಿ ಉತ್ಸವದ ಮೊದಲ ದಿನದ ಸಂಜೆ ಕಾರ್ಯಕ್ರಮದಲ್ಲಿ ದೇವಸ್ಥಾನದ ಆವರಣದಲ್ಲಿ ಚಿತ್ರಕಲಾವಿದೆ, ಹೊಸರಿತ್ತಿಯ ನಂದಾ ಬಸವರಾಜ ಹತ್ತಿಕೋಟಿ ಅವರು ರಂಗೋಲಿಯಲ್ಲಿ ಸಮಾಜ ಸೇವಕಿ ಡಾ. ಸುಧಾಮೂರ್ತಿ ಅವರ ಭಾವಚಿತ್ರ ಬಿಡಿಸಿದ್ದು, ಗಮನ ಸೆಳೆಯಿತು.

ರೇಣುಕಾಚಾರ್ಯ ಜಯಂತಿ ವ್ಯವಸ್ಥಿತವಾಗಿರಲಿ

ಗದಗ: ರೇಣುಕಾಚಾರ್ಯ ಜಯಂತಿಯನ್ನು ಮಾ.1 ರಂದು ನಗರದ ಜಿಲ್ಲಾಡಳಿತ ಭವನದ ಆಡಿಟೋರಿಯಂ ಹಾಲ್‌ದಲ್ಲಿ ವ್ಯವಸ್ಥಿತವಾಗಿ ಆಚರಿಸಲು ಕ್ರಮ ವಹಿಸಬೇಕೆಂದು ಅಪರ ಜಿಲ್ಲಾಧಿಕಾರಿ ಡಾ.ದುರಗೇಶ್ ಕೆ.ಆರ್. ತಿಳಿಸಿದರು.

ನಗರದ ಜಿಲ್ಲಾಡಳಿತ ಭವನದಲ್ಲಿ ಶುಕ್ರವಾರ ರೇಣುಕಾಚಾರ್ಯ ಜಯಂತಿ ಕುರಿತು ಜರುಗಿದ ಪೂರ್ವ ಸಿದ್ಧತಾ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿ, ರೇಣುಕಾಚಾರ್ಯ ಜಯಂತಿಯನ್ನು ತಾಲೂಕು ಮಟ್ಟದಲ್ಲಿ ತಹಶೀಲ್ದಾರರ ಅಧ್ಯಕ್ಷತೆಯಲ್ಲಿ ಜಯಂತಿ ಆಚರಣೆಗೆ ಕ್ರಮ ವಹಿಸಬೇಕು. ಶಾಲಾ, ಕಾಲೇಜು, ಗ್ರಾಮ ಪಂಚಾಯಿತಿಯಲ್ಲಿ ರೇಣುಕಾಚಾರ್ಯ ಜಯಂತಿಯನ್ನು ಆಚರಿಸಲು ಕ್ರಮ ವಹಿಸಬೇಕು. ಎಸ್‌ಎಸ್‌ಎಲ್‌ಸಿ, ಪಿಯುಸಿ ಪರೀಕ್ಷೆಯಲ್ಲಿ ಅತೀ ಹೆಚ್ಚು ಅಂಕ ಪಡೆದ ಸಮಾಜದ ವಿದ್ಯಾರ್ಥಿಗಳಿಗೆ ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿದ ಸಮಾಜದ ಸಾಧಕರಿಗೆ, ಹಿರಿಯರಿಗೆ ಸನ್ಮಾನ ನಡೆಸುವ ಕಾರ್ಯಕ್ರಮ ಜರುಗಲಿದೆ ಎಂದರು. ರೇಣುಕಾಚಾರ್ಯ ಜಯಂತಿ ಕುರಿತು ಅಧ್ಯಯನ ಮಾಡಿದವರಿಂದ ಉಪನ್ಯಾಸ ಕಾರ್ಯಕ್ರಮ ಜರುಗಲಿದೆ. ಒಟ್ಟಾರೆಯಾಗಿ ರೇಣುಕಾಚಾರ್ಯ ಜಯಂತಿಯನ್ನು ಸುವ್ಯವಸ್ಥಿತವಾಗಿ ಹಾಗೂ ಅರ್ಥಪೂರ್ಣವಾಗಿ ಆಚರಿಸಬೇಕು ಎಂದು ಅಪರ ಜಿಲ್ಲಾಧಿಕಾರಿಗಳು ಸೂಚನೆ ನೀಡಿದರು.

ಸಭೆಯಲ್ಲಿ ವೇದಿಕೆ ವ್ಯವಸ್ಥೆ, ಅಲ್ಪೋಪಹಾರದ ವ್ಯವಸ್ಥೆ, ಬ್ಯಾನರ್ ಅಳವಡಿಕೆ ಕುರಿತು ಚರ್ಚಿಸಲಾಯಿತು. ಸಮಾಜದ ಹಿರಿಯರು, ಗಣ್ಯರು, ಮುಖಂಡರು, ಮಹಿಳೆಯರು ಸೇರಿದಂತೆ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ರಾಜಕುಮಾರ ಸೋಪಡ್ಲ, ವಿವಿಧ ಇಲಾಖೆಯ ಅಧಿಕಾರಿ ಹಾಗೂ ಸಿಬ್ಬಂದಿ ಇದ್ದರು.





ಮುಂಡರಗಿ: ತಾಲೂಕಿನ ವಿರಪಾಪುರ-ಕಲಕೇರಿ ಗ್ರಾಮದಲ್ಲಿ ಬಾಳೆಹೊನ್ನೂರಿನ ರಂಭಾಪುರಿ ಜಗದ್ಗುರುಗಳ ಹಾಗೂ ಉಜ್ಜಯಿನಿ ಜಗದ್ಗುರುಗಳ ಅಡ್ಡಪಲ್ಲಕ್ಕಿ ಮಹೋತ್ಸವವು ಸಡಗರದಿಂದ ಜರುಗಿತು.

ಗಬ್ಬೆದ್ದು ನಾರುತ್ತಿರುವ ತಂಗುದಾಣ | ಪ್ರಯಾಣಿಕರ ಸುರಕ್ಷತೆಗಿಲ್ಲ ಗ್ಯಾರಂಟಿ

13 ಗ್ರಾಮಗಳಲ್ಲಿಲ್ಲ ಬಸ್ ತಂಗುದಾಣ

ಶಿವಲಿಂಗಯ್ಯ ಹೊತಗಿಮಠ


ದಿಗಂತ ವಿಶೇಷ

ಲಕ್ಷ್ಮೇಶ್ವರ: ತಾಲೂಕಿನಲ್ಲಿ ಬರೋಬ್ಬರಿ 13 ಗ್ರಾಮಗಳಲ್ಲಿ ಬಸ್ ತಂಗುದಾಣಗಳಿಲ್ಲ, ಸ್ವಾತಂತ್ರ್ಯ ಬಂದು 79 ವರ್ಷ ಕಳೆದರೂ ಈ ಗ್ರಾಮದ ಜನರಿಗೆ ಬಸ್ ತಂಗುದಾಣ ಭಾಗ್ಯವಿಲ್ಲವಾಗಿದ್ದು, ದಿನನಿತ್ಯ ಒಂದೂರಿನಿಂದ ಮತ್ತೊಂದೂರಿಗೆ ತೆರಳುವ ಪ್ರಯಾಣಿಕರು ಪರದಾಡುವಂತಾಗಿದೆ.

ಇನ್ನುಕೆಲವುಗ್ರಾಮಗಳಲ್ಲಿ ಕಳೆದ 30 ರಿಂದ 40ವರ್ಷದ ಹಿಂದೆ ಕಟ್ಟಿದ ಬಸ್ ತಂಗುದಾಣವಿದ್ದು ಅವುಗಳಿಗೆ ಗ್ಯಾರಂಟಿ ಇಲ್ಲವಾಗಿದ್ದು, ಮಳೆ ಬಂದರೆ ಸಾಕು ಸೋರುವ ತಂಗುದಾಣಗಳು ಬಿರುಕುಬಿಡುತ್ತವೆ. ಕುಳಿತುಕೊಳ್ಳುವ ಕಟ್ಟೆಗಳು ಒಡೆದು ಹೋಗಿದ್ದು ಎಲ್ಲೆಂದರಲ್ಲಿ ಗುಟ್ಕಾ, ಮದ್ಯದ ಟೇಟ್ರಾ ಪ್ಯಾಕೆಟ್‌ಗಳು ಸಿಗುತ್ತವೆ. ಎಲೆ ಅಡಿಕೆ ಉಗುಳಿ ಗಬ್ಬೆದ್ದು ನಾರುತ್ತಿವೆ. ಕೆಲವೊಂದು ತಂಗುದಾಣಗಳು ಕುಡುಕರ ಅಡ್ಡಾಗಳಾಗಿದ್ದು, ಪುಂಡ ಪೋಕರಿಗಳ ತಾಣವಾಗಿವೆ. ಸ್ವಚ್ಛತೆ ಕಾಣದೆ ಸುಣ್ಣ ಬಣ್ಣಕಾಣದೆ ನಿರ್ವಹಣೆ ಕೊರತೆಯಿಂದ ಸೊರಗಿವೆ ಎಂದು ಜನರು ಬೇಸರಿಸುತ್ತಿದ್ದಾರೆ.

- ಭೂತ ಬಂಗಲೆಯಾದ ಯಳವತ್ತಿ ಗ್ರಾಮದ ಬಸ್ ತಂಗುದಾಣ
- ಅಲ್ಲಿ ಹೋಗಲು ಭಯ ಪಡುತ್ತಿರುವ ಜನ
- ಅದನ್ನು ಕೆಡವಿ ಹೊಸ ಕಟ್ಟಡ ನಿರ್ಮಾಣ ಮಾಡಲಿ
- ತಾಲೂಕಿನ ಅನೇಕ ಗ್ರಾಮದ ತಂಗುದಾಣಗಳಲ್ಲಿ ಇದೇ ಪರಿಸ್ಥಿತಿಯಿದ್ದು, ಸಂಬಂಧಪಟ್ಟ ಅಧಿಕಾರಿಗಳು ಗಮನ ಹರಿಸಬೇಕಿದೆ ಎಂಬುದು ಯಳವತ್ತಿ ಗ್ರಾಮಸ್ಥ ಮುತ್ತಣ್ಣ ನವಲಗುಂದ ಒತ್ತಾಯ





ದೇವಸ್ಥಾನಗಳು, ರಸ್ತೆಗಳೇ ಜನರಿಗೆ ಆಶ್ರಯ

ರಾಜ್ಯ ಸರ್ಕಾರ ಇತ್ತ ತಂಗುದಾಣಗಳ ಬಗ್ಗೆ ಯೋಚನೆ ಮಾಡಬೇಕಾಗಿದೆ. ಗ್ರಾಮೀಣ ಭಾಗದಿಂದ ನಗರ ಪ್ರದೇಶಗಳಿಗೆ ಹೋಗುವವರಿಗೆ ಬಸ್‌ಕಾಯಲು ನಿಲ್ದಾಣಗಳಿಲ್ಲದೇ ದೇವಸ್ಥಾನಗಳು, ಕಟ್ಟೆಗಳು, ರಸ್ತೆಯ ಮೇಲೆ ನಿಂತು ಕಾಯುವ ಪರಿಸ್ಥಿತಿಯಿದೆ. ನಿಲ್ದಾಣ ನಿರ್ಮಾಣ ಮಾಡಲು ಗ್ರಾಮೀಣ ಭಾಗದಲ್ಲಿ ಜನಪ್ರತಿನಿಧಿಗಳಿಗೆ, ಅಧಿಕಾರಿಗಳಿಗೆ ಹಲವು ಬಾರಿ ಮನವಿ ಮಾಡಿದರೂ ಸಹ ಸ್ಪಂದನೆ ಸಿಕ್ಕಿಲ್ಲ ಎಂಬುದು ಗ್ರಾಮೀಣ ಭಾಗದ ಜನರ ಆರೋಪ.

> ತಾಲೂಕಿನ ಗ್ರಾಮೀಣ ಬಾಗದ ಬಸ್ ತಂಗುದಾಣಕ್ಕೆ ದುರಸ್ತಿಯ ಅನುದಾನಕ್ಕೆ ಪ್ರಸ್ತಾವನೆ ಸಲ್ಲಿಸಿದ್ದೇನೆ. ಅದೇ ರೀತಿ ಗ್ರಾಮೀಣ ಭಾಗದಲ್ಲಿ ಹೊಸದಾಗಿ ಬಸ್ ತಂಗುದಾಣವನ್ನೂ ನಿರ್ಮಿಸಲು ಜಾಗದ ಸಮಸ್ಯೆಯಿದ್ದು, ತಂಗುದಾಣಕ್ಕೆ ಜಾಗವನ್ನು ತೋರಿಸಿದರೆ ಪ್ರಸ್ತಾವನೆ ಸಲ್ಲಿಸಲಾಗುವುದು.
>
> ■ ಡಾ ಚಂದ್ರು ಲಮಾಣಿ, ಶಾಸಕ, ಶಿರಹಟ್ಟಿಮತಕ್ಷೇತ್ರ

ಬಸ್ ತಂಗುದಾಣ ಯಾವಾಗ?

ಒಂದೆಡೆ ಯಳವತ್ತಿ, ಉಂಡೆನಹಳ್ಳಿ,ಕ್ರಾಸ್, ಬಟ್ಟೂರ, ಸುವರ್ಣಗಿರಿ, ಹರದಗಟ್ಟಿ, ಯಲ್ಲಾಪುರ, ಪುಟಗಿ, ಅಡರಕಟ್ಟಿ, ಸೂರಣಗಿ , ಆದರಹಳ್ಳಿ, ಸೋಗಿವಾಳ, ಹುಲ್ಲೂರ, ಉಳ್ಳಟ್ಟಿ ಗ್ರಾಮ ಹಾಗೂ ಉಳ್ಳಟ್ಟಿ ಕ್ರಾಸ್ ತಂಗುದಾಣಗಳು ನಿರ್ವಹಣೆ ಕೊರತೆಯಿಂದ ಬಳಲುತ್ತಿದ್ದರೆ ಮತ್ತೊಂದೆಡೆ ವಡೆಯರ ಮಲ್ಲಾಪುರ, ಉಂಡೆನಹಳ್ಳಿ, ಬಸಾಪುರ, ವಡ್ಡರಪಾಳ್ಯ, ನಾದಿಗಟ್ಟಿ, ಶ್ಯಾಬಳ, ಮುನಿಯನತಾಂಡಾ, ಕುಂದ್ರಳ್ಳಿ, ಸಂಕದಾಳ, ಅಕ್ಕಿಗುಂದತಾಂಡಾ, ಅಮರಾಪುರ, ಹಿರೇಮಲ್ಲಾಪುರ,ಕೊಂಡಿಕೊಪ್ಪ ಗ್ರಾಮದಲ್ಲಿ ಬಸ್ ತಂಗುದಾಣಗಳೇ ಇಲ್ಲದೇ ಜನರು ಸಮಸ್ಯೆ ಎದುರಿಸುತ್ತಿದ್ದಾರೆ. ಶೀಘ್ರ ಬಸ್ ತಂಗುದಾಣದ ವ್ಯವಸ್ಥೆ ಮಾಡಲು ಜನರ ಆಗ್ರಹ.

ಸಾಮಾಜಿಕ ಸಮಸ್ಯೆಗಳಿಗೆ ವಿಜ್ಞಾನ ಪರಿಹಾರ

ಗಜೇಂದ್ರಗಡ: ವಿಜ್ಞಾನ ವಸ್ತು ಪ್ರದರ್ಶನದಂತ ವೇದಿಕೆಗಳು ವಿದ್ಯಾರ್ಥಿಗಳಲ್ಲಿ ವೈಜ್ಞಾನಿಕ ಮನೋಭಾವನೆಯನ್ನು ಹೆಚ್ಚಿಸುವುದರ ಜೊತೆಗೆ ಸೃಜನಶೀಲತೆ, ಕೌಶಲ್ಯ ಹಾಗೂ ಕ್ರಿಯಾಶಿಲತೆಯನ್ನು ವ್ಯಕ್ತಪಡಿಸಲು ಅವಕಾಶ ಮಾಡಿಕೊಡುತ್ತವೆ ಎಂದು ಗದಗ ಉಪಪ್ರಾದೇಶಿಕ ವಿಜ್ಞಾನ ಕೇಂದ್ರ ಹಾಗೂ ತಾರಾಲಯದ ವಿಷಯ ಪರಿವೀಕ್ಷಕ (ವಿಜ್ಞಾನ) ಮತ್ತು ನೋಡಲ್ ಅಧಿಕಾರಿ ಎಸ್. ಎಚ್. ಬಂಡಿವಡ್ಡರ ಹೇಳಿದರು.

ಗದಗ ಜಿಲ್ಲಾಡಳಿತ, ಕ್ಷೇತ್ರ ಶಿಕ್ಷಣಾಧಿಕಾರಿಗಳು ರೋಣ, ಗದಗ ಉಪಪ್ರಾದೇಶಿಕ ವಿಜ್ಞಾನ ಕೇಂದ್ರ ಹಾಗೂ ತಾರಾಲಯದ ಆಶ್ರಯದಲ್ಲಿ ಗಜೇಂದ್ರಗಡ ತಾಲೂಕಿನ ಗೋಗೇರಿ ಗ್ರಾಮದ ಸರ್ಕಾರಿ ಪ್ರಾಥಮಿಕ ಶಾಲೆಯಲ್ಲಿ ಈಚೆಗೆ ಜರುಗಿದ ವಿಜ್ಞಾನ ವಸ್ತು ಪ್ರದರ್ಶನ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿದರು. ವಿಜ್ಞಾನವನ್ನು ಸಾಮಾಜಿಕ ಸಮಸ್ಯೆಗಳ ಪರಿಹಾರದ ಮಾರ್ಗವಾಗಿ ಬಳಸಿಕೊಳ್ಳಬೇಕು. ಆಧುನಿಕ ಕಾಲದಲ್ಲಿ ವಿಜ್ಞಾನ ಮತ್ತು ತಂತ್ರಜ್ಞಾನ ಅತಿ ಶೀಘ್ರವಾಗಿ ಬೆಳೆಯುತ್ತಿದ್ದು ಮಕ್ಕಳಿಗೆ ಪ್ರಾಯೋಗಿಕ ವಿಜ್ಞಾನ ಅಧ್ಯಯನ ಹಾಗೂ ವೈಜ್ಞಾನಿಕ ಚಟುವಟಿಕೆಗಳು ಅವಶ್ಯಕವಾಗಿದೆ ಎಂದರು.

ವಿದ್ಯಾರ್ಥಿಗಳು ವಿಜ್ಞಾನ, ಗಣಿತ ಮತ್ತು ತಂತ್ರಜ್ಞಾನಕ್ಕೆ ಸಂಬಂಧಿಸಿದ ಅನೇಕ ಮಾದರಿಗಳನ್ನು ಮತ್ತು ಪ್ರಯೋಗಗಳನ್ನು ಪ್ರದರ್ಶಿಸಿದರು. ಮಳೆನೀರನ್ನು ಸಂಗ್ರಹಿಸಿ ಮರುಬಳಕೆಮಾಡುವವಿಧಾನ (ಮಳೆನೀರುಕೊಯ್ಲು), ಕೃಷಿಯಲ್ಲಿನೀರಿನ ಉಳಿತಾಯಕ್ಕಾಗಿ ಬಳಸುವ ತಂತ್ರಜ್ಞಾನ (ಸ್ಮಾರ್ಟ್ ವಾಟರ್), ಕಲುಷಿತ ನೀರನ್ನು ಶುದ್ಧೀಕರಿಸುವ ಮಾದರಿ (ತ್ಯಾಜ್ಯ ನೀರು ಶುದ್ಧೀಕರಣ), ಭೂಮಿಯ ತಾಪಮಾನ ಏರಿಕೆಯ ಪರಿಣಾಮಗಳನ್ನು ತೋರಿಸುವ ಮಾದರಿ (ಹಸಿರುಮನೆ ಪರಿಣಾಮ), ರಾಕೆಟ್ ಉಡಾವಣೆ ಮತ್ತು ಬಾಹ್ಯಾಕಾಶ ಸಂಶೋಧನೆಯ ಮಾದರಿ (ರಾಕೆಟ್ ಮಾಡೆಲ್), ಗ್ರಹಗಳ ಚಲನೆಯನ್ನು ತೋರಿಸುವ ಸ್ಥಿರ ಅಥವಾ ಚಲಿಸುವ ಮಾದರಿ (ಸೌರವ್ಯೂಹ), ಜೀವಕೋಶದ ಒಳರಚನೆಯನ್ನು ತೋರಿಸುವ ಮಾದರಿ (ಸಸ್ಯ ಮತ್ತು ಪ್ರಾಣಿ ಜೀವಕೋಶ), ಸುಲಭವಾಗಿ ರಾಶಿ ಮಾಡುವ ಮಾದರಿ (ಆಟೋಮ್ಯಾಟಿಕ್ ಫಿಲ್ಲಿಂಗ್ ಮಷಿನ್), ಸ್ವಯಂಚಾಲಿತವಾಗಿ ಗೋಶಾಲೆಯ ಶೆಡ್ಡು ಮುಚ್ಚುವ, ತೆರೆಯುವ ಮಾದರಿ (ಸ್ಮಾರ್ಟ್ ಗೋ ಹೌಸ್) ಹೀಗೆ ತಾವೇ ಸಿದ್ಧಪಡಿಸಿದ ಮಾದರಿಗಳ ಬಗ್ಗೆ ವಿದ್ಯಾರ್ಥಿಗಳು ವಿವರಿಸಿದರು. ಕೆ. ಎಸ್. ಕೊಡತಗೇರಿ, ಪ್ರೌಢಶಾಲೆಯ ಮುಖ್ಯ ಶಿಕ್ಷಕ ಟಿ. ಸಿ. ನಾಗನೂರ, ಪ್ರಾಥಮಿಕ ಶಾಲೆಯ ಮುಖ್ಯ ಶಿಕ್ಷಕ ಬಿ. ವಿ. ಅಂಗಡಿ, ಭಾಗ್ಯಶ್ರೀ ಎಂ., ಗವಿ ಭೋಸಲೆ, ದುರಗಪ್ಪ ಬೂದಿಹಾಳ ಇದ್ದರು.



38 ಸಾವಿರ ಕೋಟಿ ಬಿಲ್ ಬಾಕಿ: ಮಂಜುನಾಥ

ಗದಗ: ಕಳೆದ ಎರಡೂವರೆ ವರ್ಷಗಳಿಂದ ವಿವಿಧ ಇಲಾಖೆಗಳಿಂದ ಗುತ್ತಿಗೆದಾರರಿಗೆ ಅಂದಾಜು 38000 ಕೋಟಿ ರೂ. ಬಾಕಿ ಮೊತ್ತವನ್ನು ಸರ್ಕಾರ ತಡೆಹಿಡಿದಿದೆ. ಸರ್ಕಾರಕ್ಕೆ ಹಲವು ಬಾರಿ ಮನವಿ ಮಾಡಿಕೊಂಡರೂ ಸಹ ಸರ್ಕಾರ ಗುತ್ತಿಗೆದಾರರ ನೋವು ಅರ್ಥ ಮಾಡಿಕೊಳ್ಳುತ್ತಿಲ್ಲ, ಹಾಗಾಗಿ ಬಾಕಿ ಮೊತ್ತ ಬಿಡುಗಡೆಗೆ ಆಗ್ರಹಿಸಿ ಬೆಂಗಳೂರಿನ ಫ್ರೀಡಂ ಪಾರ್ಕಿನಲ್ಲಿ ಮಾ.6 ರಂದು ಬೃಹತ್ ಪ್ರತಿಭಟನೆ ಹಮ್ಮಿಕೊಳ್ಳಲಾಗಿದೆ ಎಂದು ಗುತ್ತಿಗೆದಾರ ಸಂಘದ ರಾಜ್ಯಾಧ್ಯಕ್ಷ ಆರ್. ಮಂಜುನಾಥ ಹೇಳಿದರು.

ನಗರದ ಪತ್ರಿಕಾ ಭವನದಲ್ಲಿ ಶುಕ್ರವಾರ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಲೋಕೋಪಯೋಗಿ ಮತ್ತು ಬಿಬಿಎಂಪಿ ಹೊರತುಪಡಿಸಿ, ಉಳಿದ ಇಲಾಖೆಗಳಲ್ಲಿ ಹಣ ಬಿಡುಗಡೆಯ ಪ್ರಕ್ರಿಯೆ ಸಂಪೂರ್ಣ ಸ್ಥಗಿತಗೊಂಡಿದೆ. ಸಿಎಂ ಸಿದ್ದರಾಮಯ್ಯ ವಿರೋಧ ಪಕ್ಷದ ನಾಯಕರಿದ್ದಾಗ ಗುತ್ತಿಗೆದಾರರ ನೋವಿಗೆ ಸ್ಪಂದಿಸಿದ್ದರು. ಸಿಎಂ ಆದ ನಂತರ ಸ್ಪಂದಿಸುತ್ತಿಲ್ಲ, ಗುತ್ತಿಗೆದಾರರ ಜತೆ ಸಭೆ ನಡೆಸಲು ಸಿಎಂಗೆ ಮನವಿ ಮಾಡಿದ್ದೆವು. ಸಭೆ ದಿನಾಂಕವೂ ನಿಗದಿಯಾಗಿತ್ತು. ಆದರೆ ಮೂರು ಬಾರಿ ಸಭೆ ಮುಂದೂಡಲಾಗಿದೆ ಎಂದರು.

ಗುತ್ತಿಗೆದಾರರ ಸಮಸ್ಯೆಗಳ ಬಗ್ಗೆ ಚರ್ಚಿಸಲು ಸರ್ಕಾರ ಹಿಂದೇಟು ಹಾಕುತ್ತಿರುವುದು ವಿಷಾದನೀಯ. ವ್ಯಾಟ್ (ಶೇ.4) ನಿಂದ ಜಿಎಸ್ಟಿ (ಶೇ.12) ಗೆ ಬದಲಾದ ಸಂದರ್ಭದ ವ್ಯತ್ಯಾಸದ ಮೊತ್ತ ಸರ್ಕಾರವೇ ಭರಿಸುವುದಾಗಿ ಹೇಳಿತ್ತು. ಆರ್ಥಿಕ ಇಲಾಖೆಯಿಂದ ಇನ್ನೂ ಅಧಿಕೃತ ಆದೇಶ ಹೊರಬಂದಿಲ್ಲ. ನಗರಾಭಿವೃದ್ಧಿ ಇಲಾಖೆಯ ಚಟುವಟಿಕೆಗಳು ಖಾಸಗಿ ಕಚೇರಿಗಳಿಂದ, ಮಧ್ಯವರ್ತಿಗಳ ಮೂಲಕ ನಡೆಯುತ್ತಿವೆ. ಟೆಂಡರ್ ಅನುಮೋದನೆ ಮತ್ತು ಹಣ ಬಿಡುಗಡೆ ವ್ಯವಸ್ಥೆಯು ಹಿಂದಿನ ಸರ್ಕಾರಗಳಿಗಿಂತಲೂ ಹೆಚ್ಚು ಅಸ್ತವ್ಯಸ್ತಗೊಂಡಿದೆ. ಸಣ್ಣ ಗುತ್ತಿಗೆದಾರರಿಗೆ ಅನ್ಯಾಯ ಆಗುತ್ತಿದೆ ಎಂದು ಆರೋಪಿಸಿದರು.

ಮೊದಲು ಗುತ್ತಿಗೆದಾರರು ಶೇ.4ರಷ್ಟು ವ್ಯಾಟ್ ಪಾವತಿಸುತ್ತಿದ್ದರು. ಜಿಎಸ್‌ಟಿ ಜಾರಿ ನಂತರ ಶೇ.12ರಷ್ಟು ಜಿಎಸ್‌ಟಿಗೆ ಬದಲಾಯಿತು. ಹೆಚ್ಚುವರಿ ಶೇ.8 ರಷ್ಟು ಹಣವನ್ನು ದಸ್ತಾವೇಜುನಲ್ಲಿ ಹೊಂದಾಣಿಕೆ ಮಾಡಿಕೊಂಡು ಸರ್ಕಾರ ನಮಗೆ ಪಾವತಿಸಬೇಕು. ಆದರೆ ಕಳೆದ ಮೂರ್ನಾಲ್ಕು ವರ್ಷದಿಂದ ಜಿಎಸ್ ಟಿ ಹಣ ಪಾವತಿ ಮಾಡದಿರುವ ಕಾರಣ ಜಿಎಸ್ ಟಿ ವಿಭಾಗದಿಂದ ಬಡ್ಡಿ, ಚಕ್ರ ಬಡ್ಡಿ ಸೇರಿದಂತೆ ಕೋಟ್ಯಂತರ ರೂ. ಬಡ್ಡಿ ಪಾವತಿಸುವಂತೆ ಗುತ್ತಿಗೆದಾರರಿಗೆ ನೋಟೀಸ್ ಬರುತ್ತಿವೆ ಎಂದರು.

ಜಿಲ್ಲಾಧ್ಯಕ್ಷ ಸಿದ್ದು ಪಾಟೀಲ, ಆರ್ .ವಿ.ಮುಲ್ಕಿಪಾಟೀಲ, ಆಂಜನೇಯ ಕಟಗಿ, ರಮೇಶ ರಂಗಪ್ಪನ್ನವರ, ಆನಂದಗೌಡ ಪಾಟೀಲ, ಬಸವರಾಜ ಶಿರಗುಂಪಿ, ಸುರೇಶ ತಿರ್ಲಾಪುರ, ಬಸವರಾಜ ಮೇಟಿ, ಸಿ.ಎಸ್. ನಾಗಾವಿ, ಬಿ.ಆರ್. ಹೊಸಮನಿ, ಮಾದನ್ನವರ ಇದ್ದರು.



ಮಠಗಳು ಸಂಸ್ಕಾರ, ಸಂಸ್ಕೃತಿ ಬೆಳೆಸಲಿ



ಮುಂಡರಗಿ: ಭಾರತ ಧರ್ಮ ಭೂಮಿಯಲ್ಲಿ ಧರ್ಮ ಮತ್ತು ಆಧ್ಯಾತ್ಮಿಕ ಚಿಂತನೆಗಳಿಗೆ ಬಹಳಷ್ಟು ಮಹತ್ವದ ಸ್ಥಾನವಿದೆ. ಸಕಲ ಜೀವಾತ್ಮರಿಗೂ ಸದಾ ಒಳಿತನ್ನೇ ಬಯಸಿದ ವೀರಶೈವ ಧರ್ಮ ವಿಶಾಲ ಉತ್ಕೃಷ್ಠ ಧಾರ್ಮಿಕ ಮತ್ತು ಸಾಮಾಜಿಕ ಮೌಲ್ಯಗಳನ್ನು ಹೊಂದಿದೆ. ಈ ನಾಡಿನ ಮಠಗಳು ಸಂಸ್ಕಾರ ಕೊಡುವ ಸಂಸ್ಕೃತಿ ಕಲಿಸುವ ಆಧ್ಯಾತ್ಮಿಕ ಕೇಂದ್ರಗಳಾಗಬೇಕೆಂದು ಬಾಳೆಹೊನ್ನೂರು ರಂಭಾಪುರಿ ಡಾ. ವೀರಸೋಮೇಶ್ವರ ಜಗದ್ಗುರುಗಳು ಅಭಿಪ್ರಾಯಪಟ್ಟರು.

ಅವರು ಶುಕ್ರವಾರ ತಾಲೂಕಿನ ಶ್ರೀಮತ್ಕಾಶೀ ಶಾಖಾ ವಿರುಪಾಪುರ ಕಲಕೇರಿ ಮುದುಕೇಶ್ವರ ಹಿರೇಮಠದ ಶೀ ಗುರು ಪಟ್ಟಾಧಿಕಾರ ಧರ್ಮ ಸಮಾರಂಭದ ಸಾನ್ನಿಧ್ಯ ವಹಿಸಿ ಆಶೀರ್ವಚನ ನೀಡಿದರು. ಸಾನ್ನಿಧ್ಯ ವಹಿಸಿದ್ದ ಉಜ್ಜಯಿನಿ ಸಿದ್ದಲಿಂಗ ಜಗದ್ಗುರುಗಳು ತಮ್ಮ ಆಶೀರ್ವಚನದಲ್ಲಿ, ವಿಜ್ಞಾನ, ತಂತ್ರಜ್ಞಾನ ಬೆಳೆದಂತೆ ಮನುಷ್ಯನಲ್ಲಿ ಭಾವನೆಗಳು ಬೆಳೆಯುತ್ತಿಲ್ಲ, ಸುಖದ ಮೂಲ ಧರ್ಮ ಪರಿಪಾಲನೆಯಲ್ಲಿದೆ ಎಂಬುದನ್ನು ಯಾರೂ ಮರೆಯಬಾರದು. ಸಂಸ್ಕಾರ ಸಂಸ್ಕೃತಿಗಳ ಪುನರುತ್ಥಾನ ಈ ನಾಡಿನ ಮಠಗಳಿಂದ ನಿರಂತರ ನಡೆಯುತ್ತಲೇ ಬಂದಿದೆ. ವೀರಶೈವ ಮಠಗಳು ಜಗತ್ತಿನ ಪೀಠಗಳಾಗಿ ವಿಜೃಂಭಿಸುತ್ತಿವೆ ಎಂದರು. ನೂತನ ಶ್ರೀಗಳಿಗೆ ಉಭಯ ಜಗದ್ಗುರುಗಳು ದಂಡ ಕಮಂಡಲ ಸಮೇತ ಪಂಚ ಮುದ್ರಾ ಅನುಗ್ರಹಿಸಿ ಆಶೀರ್ವದಿಸಿದರು. ಹಿರಿಯ ಪಟ್ಟಾಧ್ಯಕ್ಷ ಮುದುಕೇಶ್ವರ ಶಿವಾಚಾರ್ಯರು ನೇತೃತ್ವ ವಹಿಸಿ ಮಾತನಾಡಿ, ಶ್ರಮದ ಬೆವರಿನ ಫಲ ಶಾಶ್ವತ ಮತ್ತು ಸುಖದಾಯಕ. ಕಾಯಕದಿಂದಲೇ ಮನುಷ್ಯನಿಗೆ ಕಳಾ ಚೈತನ್ಯ ಪ್ರಾಪ್ತಿಯಾಗುತ್ತದೆ ಎಂದರು. ಪಟ್ಟಾಭಿಷಿಕ್ತರಾದ ನೂತನ ಅಭಿನವ ಮುದುಕೇಶ್ವರ ಶಿವಾಚಾರ್ಯರು ಮಾತನಾಡಿ, ಧರ್ಮ ಮಾನವ ಜೀವನದ ಉಸಿರಾಗಬೇಕು. ಅನ್ನ ನೀರು ಗಾಳಿ ಮನುಷ್ಯನಿಗೆ ಎಷ್ಟು ಅವಶ್ಯಕವೋ ಅಷ್ಟೇ ಧರ್ಮ ಪಾಲನೆಯ ಅವಶ್ಯಕತೆಯಿದೆ. ವೀರಶೈವ ಧರ್ಮದ ಆದರ್ಶ ಚಿಂತನ ಮತ್ತು ಗುರು ಪರಂಪರೆಯ ಪಾವಿತ್ರ್ಯತೆಯನ್ನು ಕಾಪಾಡಿಕೊಂಡು ಬರುತ್ತೇವೆ ಎಂದು ಸಂಕಲ್ಪ ತೊಟ್ಟರು.

ಮಾಜಿ ಸಚಿವ ಎಸ್.ಎಸ್.ಪಾಟೀಲ ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು. ವೀರೇಶ ಕೂಗು, ಚಂದ್ರು ಬಾಳಿಹಳ್ಳಿಮಠ ಮೊದಲಾದ ಗಣ್ಯರು ಪಾಲ್ಗೊಂಡಿದ್ದರು. ಶಿವಕುಮಾರಗೌಡ ಪಾಟೀಲ ಸ್ವಾಗತಿಸಿ,ಪ್ರಾಸ್ತಾವಿಸಿದರು. ಸವಣೂರಿನ ಡಾ. ಗುರುಪಾದಯ್ಯ ಸಾಲಿಮಠ ನಿರೂಪಿಸಿದರು.

ಪುಲಿಗೆರ ಉತ್ಸವಕ್ಕೆ ವಿಧ್ಯುಕ್ತ ಚಾಲನೆ

ಲಕ್ಷ್ಮೇಶ್ವರ: ಪಟ್ಟಣದ ಸೋಮೇಶ್ವರ ದೇವಸ್ಥಾನದ ಆವರಣದಲ್ಲಿ ಮೂರು ದಿನಗಳ ಇನ್ಫೋಸಿಸ್ ಪ್ರತಿಷ್ಠಾನ ಪುಲಿಗೆರ ಉತ್ಸವ ಶುಕ್ರವಾರದಿಂದ ವಿಧ್ಯುಕ್ತವಾಗಿ ಆರಂಭಗೊಂಡಿತು.

ಇನ್ಫೋಸಿಸ್ ಪ್ರತಿಷ್ಠಾನ, ಭಾರತೀಯ ವಿದ್ಯಾಭವನ ಮತ್ತು ಸೋಮೇಶ್ವರ ಭಕ್ತರ ಸೇವಾ ಟ್ರಸ್ಟ್ ಕಮಿಟಿ ಇವರ ಸಹಯೋಗದಲ್ಲಿ ಪ್ರಾರಂಭವಾದ ಇನ್ಫೋಸಿಸ್ ಪ್ರತಿಷ್ಠಾನ ಪುಲಿಗೆರೆ ಉತ್ಸವದ ಮೊದಲ ದಿನ ಶುಕ್ರವಾರ ಮುಂಜಾನೆ ಭಾರತೀಯ ವಿದ್ಯಾಭವನದ ಜಂಟಿ ನಿರ್ದೇಶಕಿ ನಾಗಲಕ್ಷ್ಮೀ ಕೆ.ರಾವ್ ಮತ್ತು ಶ್ರೀ ಸೋಮೇಶ್ವರ ಭಕ್ತರ ಸೇವಾ ಟ್ರಸ್ಟ್ ಕಮಿಟಿ ಅಧ್ಯಕ್ಷ ಗುರುರಾಜ ಪಾಟೀಲಕುಲಕರ್ಣಿ ಸೋಮೇಶ್ವರ ದೇವರಿಗೆ ಪುಷ್ಪಗಳನ್ನು ಸಲ್ಲಿಸಿ ದೀಪ ಬೆಳಗುವ ಮೂಲಕ ಚಾಲನೆ ನೀಡಿದರು.

ಈ ಸಂದರ್ಭದಲ್ಲಿ ಮಾತನಾಡಿದ ನಾಗಲಕ್ಷ್ಮೀ ಕೆ.ರಾವ್ ಅವರು, ಇದೊಂದು ಐತಿಹಾಸಿಕ ಪ್ರಸಿದ್ಧ ದೇವಸ್ಥಾನವಾಗಿದ್ದು, ನಮ್ಮ ಸಂಸ್ಕೃತಿ, ಸಂಪ್ರದಾಯಗಳು ಉಳಿಸಿ ಬೆಳೆಸಿಕೊಂಡುಹೋಗುವುದುನಮ್ಮೆಲ್ಲರ ಉದ್ದೇಶವಾಗಿದೆ, ಇನ್ಫೋಸಿಸ್ ಮುಖ್ಯಸ್ಥೆ ಡಾ.ಸುಧಾಮೂರ್ತಿ ಅವರು ಶೈಕ್ಷಣಿಕ, ಧಾರ್ಮಿಕ ಮತ್ತು ಸಾಮಾಜಿಕ ಕಾರ್ಯಗಳನ್ನು ಮಾಡುತ್ತಿದ್ದು, ಸೋಮೇಶ್ವರದ ಸನ್ನಿಧಿಯಲ್ಲಿ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆಯುವಂತಾಗಲಿ ಎನ್ನುವ ಉದ್ದೇಶದಿಂದ ಇಂತಹ ವೈಶಿಷ್ಟಪೂರ್ಣ ಉತ್ಸವವನ್ನು ಕಳೆದ 8 ವರ್ಷಗಳಿಂದ ಸಂಘಟಿಸುತ್ತಾ ಬಂದಿದ್ದು, ಮೂರು ದಿನಗಳ ಕಾಲ ನಡೆಯುವ ಈ ಕಾರ್ಯಕ್ರಮಕ್ಕೆ ಎಲ್ಲರೂ ಸಹಕಾರ ನೀಡುವಂತೆ ಮನವಿ ಮಾಡಿದರು.

ಶ್ರೀ ಸೋಮೇಶ್ವರ ಭಕ್ತರ ಸೇವಾ ಟ್ರಸ್ಟ್ ಕಮಿಟಿ ಅಧ್ಯಕ್ಷ ಗುರುರಾಜ ಪಾಟೀಲಕುಲಕರ್ಣಿ, ಚಂಬಣ್ಣ ಬಾಳಿಕಾಯಿ, ಸಿ.ಆರ್. ಲಕ್ಕುಂಡಿಮಠ, ಬಸವೇಶ ಮಹಾಂತಶೆಟ್ಟರ, ಅಶ್ವಿನಿ ಅಂಕಲಕೋಟಿ, ಮಹಾಬಳೇಶ್ವರಪ್ಪ ಬೇವಿನಮರದ, ಪ್ರವೀಣ ಬಾಳಿಕಾಯಿ, ಸಿದ್ದನಗೌಡ ಬಳ್ಳೊಳ್ಳಿ, ಚನ್ನಪ್ಪ ಜಗಲಿ, ಡಾ.ಪಿ.ಡಿ.ತೋಟದ, ಈಶ್ವರ ಮೆಡ್ಲೇರಿ, ನಾಗರಾಜ ಕಳಸಾಪೂರ, ಸಿ.ಜಿ.ಹಿರೇಮಠ, ಸೋಮನಾಥ ಪೂಜಾರ, ಸಮೀರ ಪೂಜಾರ, ರಾಘವೇಂದ್ರ ಪೂಜಾರ, ಮಾಲಾದೇವಿ ದಂದರಗಿ, ಸುಮಾ ಚೋಟಗಲ್, ಪಾರ್ವತಿ ಕಳ್ಳಿಮಠ, ಪೂರ್ಣಾಜಿ ಖರಾಟೆ, ಸುರೇಶ ರಾಚನಾಯ್ಕರ್, ಬಸವರಾಜ ಮೆಣಸಿನಕಾಯಿ ಮುಂತಾದವರಿದ್ದರು.



ಪ್ರಮುಖ ಬೀದಿಗಳಲ್ಲಿ ಸಾಗಿದ ನೂತನ ರಥ



ನರಗುಂದ: ಪಟ್ಟಣದ ದಂಡಾಪೂರ ಕಲಬುರ್ಗಿ ಶರಣ ಬಸವೇಶ್ವರ ದೇವಸ್ಥಾನದ ನೂತನ ರಥವನ್ನು ರಾಷ್ಟ್ರೀಯ ಹೆದ್ದಾರಿ ಹತ್ತಿರದ ಬಯಲು ಬಸವೇಶ್ವರ ದೇವಸ್ಥಾನದಿಂದ ನಗರದಪ್ರಮುಖಬೀದಿಗಳಲ್ಲಿಸಕಲವಾದ್ಯಮೇಳದೊಂದಿಗೆಹೊರಟು ದೇವಸ್ಥಾನದವರೆಗೂ ಪತ್ರೀವನಮಠದ ಸಿದ್ದವೀರ ಶಿವಾಚಾರ್ಯ ಸ್ವಾಮೀಜಿ ನೇತೃತ್ವದಲ್ಲಿ ಸಾಗಿಬಂದಿತು.

ರಥೋತ್ಸವವು ಮಾ.8ರ ಸಂಜೆ 5 ಗಂಟೆಗೆ ಜರುಗಲಿದೆ. ನೂತನ ರಥವನ್ನು ರೋಣ ತಾಲೂಕಿನ ಹೊಳೆಆಲೂರನಲ್ಲಿ ನಿರ್ಮಿಸಲಾಗಿದೆ. 19 ಅಡಿ ಎತ್ತರವುಳ್ಳ ರಥವು ಗಡ್ಡಿ ತೇರಾಗಿದೆ. 15 ಲಕ್ಷ ರೂ. ವೆಚ್ಚದಲ್ಲಿ ನಿರ್ಮಾಣವಾಗಿದೆ. ಉಮೇಶ ಯಳ್ಳೂರ, ವೀರಬಸಪ್ಪ ಹೂಗಾರ, ಎಸ್.ಎಸ್. ಪಾಟೀಲ, ಬಸವರಾಜ ನೆಗಳೂರ, ರುದ್ರಪ್ಪ ಗುಗ್ಗರಿ, ಈರಣ್ಣ ಕಲಾದಗಿ, ಡಿ.ಆರ್. ಗದ್ದನಕೇರಿ, ಶರಣಪ್ಪ ನವಲಗುಂದ, ಸಂಗಣ್ಣ ಕಳಸಾ, ಮಲ್ಲಿಕಾರ್ಜುನ ಪತ್ರಿ, ಬಸವರಾಜ ಘಾಟಗೆ, ಸಿದ್ದಪ್ಪ ಆಯಟ್ಟಿ, ಶೇಖಪ್ಪ ಹಕಾರಿ, ಚನಬಸಪ್ಪ ಆಯಟ್ಟಿ, ಮಹೇಶ ಹಾರೋಗೇರಿಮಠ ಇತರರಿದ್ದರು.

ಸರ್ವಜ್ಞರ ವಿಚಾರಧಾರೆ ಅಳವಡಿಸಿಕೊಳ್ಳಿ

ಗದಗ: ಸಂತ ಕವಿ ಸರ್ವಜ್ಞರ ವಿಚಾರಧಾರೆಗಳನ್ನು ಪ್ರತಿಯೊಬ್ಬರೂ ಬದುಕಿನಲ್ಲಿ ಅಳವಡಿಸಿಕೊಂಡು ಸಮಾಜ ಸುಧಾರಣೆಗೆ ಶ್ರಮಿಸಬೇಕೆಂದು ಅಪರ ಜಿಲ್ಲಾಧಿಕಾರಿ ದುರಗೇಶ ಕೆ.ಆರ್. ಹೇಳಿದರು.

ನಗರದ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಇವರ ಸಹಯೋಗದಲ್ಲಿ ಜಿಲ್ಲಾಡಳಿತ ಭವನದ ಆಡಿಟೋರಿಯಂ ಹಾಲ್‌ನಲ್ಲಿ ಶುಕ್ರವಾರ ಜರುಗಿದ ಸಂತ ಕವಿ ಸರ್ವಜ್ಞ ಜಯಂತಿ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು. ಈಗಿನ ಮಕ್ಕಳಿಗೆ ಸರ್ವಜ್ಞರ ವಚನಗಳು, ಸಂಸ್ಕೃತಿ ಮತ್ತು ಮೌಲ್ಯಗಳ ಬಗ್ಗೆ ಅರಿವು ಮೂಡಿಸುವ ಕೆಲಸವಾಗಬೇಕು ಎಂದರು.

ಸಂಪನ್ಮೂಲ ವ್ಯಕ್ತಿ ಉಪನ್ಯಾಸಕ ಶಿವಾನಂದ ಚಕ್ರಸಾಲಿ ಮಾತನಾಡಿ, ಸರ್ವಜ್ಞನ ವಿಚಾರಗಳು ಇಂದಿಗೂ ಪ್ರಸ್ತುತ. ಸಮಾಜದಲ್ಲಿನ ಜಾತಿ ಪದ್ಧತಿ, ಧಾರ್ಮಿಕ ಅಸಹಿಷ್ಣುತೆ, ಮತ್ತು ಮೌಲ್ಯಗಳ ಕುಸಿತವನ್ನು ಸರಿಪಡಿಸಲು ಸರ್ವಜ್ಞನ ತ್ರಿಪದಿಗಳು ದಿಕ್ಸೂಚಿಯಂತೆ ಇಂದಿಗೂ ಕೆಲಸ ಮಾಡುತ್ತವೆ ಎಂದರು.

ಎಸ್‌ಎಸ್‌ಎಲ್‌ಸಿ ಪಿಯುಸಿ ಪರೀಕ್ಷೆಯಲ್ಲಿ ಅತೀ ಹೆಚ್ಚು ಅಂಕ ಪಡೆದ ವಿದ್ಯಾರ್ಥಿಗಳಿಗೆ ಹಾಗೂ ವಿವಿಧ ಕ್ಷೇತ್ರಗಳಲ್ಲಿ ಸಾಧನೆಗೈದ ಸಮುದಾಯದ ಸಾಧಕರಿಗೆ ಸನ್ಮಾನಿಸಲಾಯಿತು. ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಅಕ್ಬರಸಾಬ್ ಬಬರ್ಜಿ, ವಿ.ಆರ್. ಕುಂಬಾರ, ಮುರಿಗೆಪ್ಪ ಕೇರಿ, ಯಲ್ಲಪ್ಪ ಕುಂಬಾರ, ನಿಂಗಪ್ಪ ಕುಂಬಾರ, ಶರಣಮ್ಮ, ಈಶ್ವರಪ್ಪ ಕುಂಬಾರ ಇತರರಿದ್ದರು. ವೀರಣ್ಣ ಅಂಗಡಿ ಹಾಗೂ ಸಂಗಡಿಗರು ನಾಡಗೀತೆ ಪ್ರಸ್ತುತ ಪಡಿಸಿದರು.



ಭಾರತದ ಗೌರವ ಕಾಪಾಡಿ: ಸ್ವಾಮೀಜಿ



ನರಗುಂದ: ಭಾರತವು ಸನಾತನ ದೇಶವಾಗಿದೆ. ಈ ನೆಲದ ಪ್ರತಿ ವ್ಯಕ್ತಿಯು ಭಾರತೀಯನಾಗಿದ್ದಾನೆ. ವಿವಿಧ ಜಾತಿ ಜನಾಂಗದವರೆಲ್ಲರೂ ಈ ನೆಲದ ಗೌರವವನ್ನು ಕಾಪಾಡಬೇಕು ಎಂದು ಉಜ್ಜಯಿನಿ ಸದ್ಧರ್ಮ ಪೀಠದ ಸಿದ್ಧಲಿಂಗ ರಾಜದೇಶಿಕೇಂದ್ರ ಶಿವಾಚಾರ್ಯ ಭಗವತ್ಪಾದ ಸ್ವಾಮೀಜಿ ಹೇಳಿದರು.

ಪಂಚಗೃಹ ಗುಡ್ಡದ ಹಿರೇಮಠದ ನಮ್ಮೂರ ಶ್ರೀ ಸಿದ್ದೇಶ್ವರ ಜಾತ್ರಾಮಹೋತ್ಸವದ ಪುರಾಣ ಮಂಗಲೋತ್ಸವ ಹಾಗೂ ಧರ್ಮಸಭೆಯ ವೇದಿಕೆಯಲ್ಲಿ ಮಾತನಾಡಿದರು.

ಉಮೇಶಗೌಡ ಪಾಟೀಲ ಮಾತನಾಡಿ, ಮಠಮಾನ್ಯಗಳು ಈ ನೆಲದ ಸಂಸ್ಕೃತಿಯ ಬಗ್ಗೆ ಭೋದನೆ ಮಾಡಿದ್ದನ್ನು ನಾವು ಕೇಳಿದರಷ್ಟೇ ಸಾಲದು ಅದನ್ನು ಚಾಚು ತಪ್ಪದೇ ಆಚರಣೆಗೆ ತರಲೇಬೇಕು. ನಮ್ಮ ಧರ್ಮದ ವಿಚಾರಗಳು ವಿವಿಧ ಕ್ಷೇತ್ರಗಳಲ್ಲಿ ಕಡ್ಡಾಯವಾಗಿ ಆಚರಣೆಗೆ ಬರುವಷ್ಟು ನಾವೆಲ್ಲ ಒಗ್ಗಟ್ಟಾಗಿರಬೇಕು ಎಂದರು.

ಸಿದ್ಧಲಿಂಗ ಶಿವಾಚಾರ್ಯ ಸ್ವಾಮೀಜಿಗೆ ಬೆಳವಣಿಕೆ ಗ್ರಾಮದ ಚಂದ್ರಯ್ಯ ಸಿದ್ದಯ್ಯ ಕುರ್ಲಗೇರಿ ಹಿರೇಮಠ ಭಕ್ತರು ತುಲಾಭಾರ ಸೇವೆಯನ್ನು ನೆರವೇರಿಸಿದರು. ಧರ್ಮಸಭೆ ನಂತರ ಸಾವಿರಾರು ತಾಯಂದಿರಿಗೆ ಸಿದ್ಧಲಿಂಗ ಶ್ರೀಗಳು ಉಡಿ ತುಂಬಿದರು. ಧರ್ಮಸಭೆಯಲ್ಲಿ ಕುಂದರಗಿ ಚರಂತಿ ಮಠದ ವೀರಸಂಗಮೇಶ್ವರ ಶಿವಾಚಾರ್ಯ ಸ್ವಾಮೀಜಿ, ತುಪ್ಪದ ಕುರಹಟ್ಟಿ ಭೂಸನೂರ ಸಂಸ್ಥಾನಮಠದ ವಾಗೀಶ ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮೀಜಿ, ವೀರಕ್ತಮಠದ ಶಿವಕುಮಾರ ಸ್ವಾಮೀಜಿ, ಮಲ್ಲಿಕಾರ್ಜುನ ಸ್ವಾಮೀಜಿ, ಮಲ್ಲೇಶಪ್ಪ ಪಿಡ್ಡನಾಯ್ಕರ, ಅಪ್ಪಣಗೌಡ ಪಾಟೀಲ, ಮುತ್ತನಗೌಡ ಪಾಟೀಲ, ಎಂ.ಎಸ್. ಕುಸುಗಲ್ಲ, ಮಂಜುನಾಥಗೌಡ ಪಾಟೀಲ, ಮಹಾಂತೇಶ ಹಂಪಣ್ಣವರ, ನಾಗೇಶ ಅಪ್ಪೋಜಿ, ಸತೀಶಗೌಡ ಪಾಟೀಲ ಇತರರಿದ್ದರು.

ಫಲ್ಸರ್ ಗ್ರೇಡರ್ ಯಂತ್ರದ ಪ್ರಾತ್ಯಕ್ಷಿಕೆ

ಲಕ್ಷ್ಮೇಶ್ವರ: ರೈತರಿಗೆ ಒಕ್ಕಣಿ ಕಾರ್ಯಕ್ಕೆ ಅನುಕೂಲ ಆಗಲಿ ಎಂಬ ಉದ್ದೇಶದಿಂದ ಸಂಶೋಧನೆಗೊಂಡಿರುವ ಫಲ್ಸರ್ ಗ್ರೇಡರ್ ಯಂತ್ರದ ಕುರಿತ ಪ್ರಾತ್ಯಕ್ಷಿಕೆ ಕಾರ್ಯಕ್ರಮ ಗುರುವಾರ ಪಟ್ಟಣದ ಸಮೀಪದ ಮಂಜಲಾಪೂರ ವ್ಯಾಪ್ತಿಯಲ್ಲಿ ಕೃಷಿ ಇಲಾಖೆ ವತಿಯಿಂದ ಜರುಗಿತು.

ಉಪಕೃಷಿ ನಿರ್ದೇಶಕಿ ಸ್ಫೂರ್ತಿ ಜಿ.ಎಸ್. ಯಂತ್ರಕ್ಕೆ ಚಾಲನೆ ನೀಡಿ, ಇಲ್ಲಿ ಹೆಸರು, ತೊಗರಿ, ಕಡಲೆ, ಉದ್ದು, ಮಡಿಕೆ, ಸೋಯಾಬಿನ್‌ಗಳನ್ನು ವ್ಯಾಪಕವಾಗಿ ಬೆಳೆಯಲಾಗುತ್ತಿದ್ದು ಇವುಗಳ ಒಕ್ಕಣಿ ಸಮಯದಲ್ಲಿ ರೈತರು ಸಾಕಷ್ಟು ತೊಂದರೆ ಅನುಭವಿಸುತ್ತಾರೆ. ಫಸಲು ಬಂದಾಗ ವಾತಾವರಣದ ಏರುಪೇರಿನಿಂದಾಗಿ ಧಾನ್ಯಗಳ ಒಕ್ಕಣಿಗೆ ಅಡ್ಡಿ ಆಗುತ್ತದೆ. ಈ ಕೆಲಸ ಸುಲಭವಾಗಿ ನಡೆಯಲಿ ಎಂಬ ಉದ್ದೇಶದಿಂದ ಬಸವಾ ಇಂಡಸ್ಟ್ರೀಜ್‌ನವರು ಫಲ್ಸರ್ ಗ್ರೇಡರ್ ಯಂತ್ರವನ್ನು ಸಂಶೋಧನೆ ಮಾಡಿ ರೈತರಿಗೆ ರಿಯಾಯಿತಿ ದರದಲ್ಲಿ ಪೂರೈಸುತ್ತಿದ್ದಾರೆ. ಈ ಯಂತ್ರ ದ್ವಿದಳ ಧಾನ್ಯಗಳನ್ನು ಗ್ರೇಡಿಂಗ್ ಮಾಡುವಲ್ಲಿ ಹೆಚ್ಚು ಅನುಕೂಲ ಆಗಲಿದೆ. ರೈತರು ಕೇವಲ 65 ಸಾವಿರ ರೂಪಾಯಿಗಳನ್ನು ಪಾವತಿಸಿ ಸಬ್ಸಿಡಿಯಲ್ಲಿ ಯಂತ್ರ ಖರೀದಿಸಬಹುದು ಎಂದರು. ಬಸವಾ ಇಂಡಸ್ಟ್ರೀಜ್‌ನ ಸಚಿನ್ ಮಾತನಾಡಿದರು. ಸಹಾಯಕ ಕೃಷಿ ನಿರ್ದೇಶಕ ಶಿವಪ್ಪ ಕಾಶಪ್ಪನವರ, ಸಹಾಯಕ ಕೃಷಿ ಅಧಿಕಾರಿಗಳಾದ ಚಂದ್ರಶೇಖರ ನರಸಮ್ಮನವರ, ಐ.ಕೆ.ಹೊನ್ನಪ್ಪನವರ ರೈತರಾದ ಚನ್ನಪ್ಪ ಹಳೆಮನಿ, ಮಲ್ಲಿಕಾರ್ಜುನ ಕಳಸಾಪುರ, ವಿ.ಎಂ.ಶಿಗ್ಲಿ, ಮುತ್ತಣ್ಣ ಗಡೆಪ್ಪನವರ, ಟಾಕಪ್ಪ ಸಾತಪೂತೆ, ಈರಣ್ಣ ಶೀರನಹಳ್ಳಿ ಮುಂತಾದವರಿದ್ದರು.



ಮಸೀದಿ ಸಮಿತಿ, ಅಧ್ಯಕ್ಷರನ್ನು ಎ-1ಆರೋಪಿಗಳನ್ನಾಗಿ ಮಾಡಿ | ಹಿಂದೂ ಸಂಘಟನೆ ಮುಖಂಡರ ಆಗ್ರಹ

ಮತ್ತೊಮ್ಮೆ ಶಿವಾಜಿ ಮೆರವಣಿಗೆಯಾಗಲಿ

ಬಾಗಲಕೋಟೆ: ಛತ್ರಪತಿ ಶಿವಾಜಿ ಮಹಾರಾಜರ ಜಯಂತಿ ಮೆರವಣಿಯಲ್ಲಿ ಕಲ್ಲು ತೂರಾಟ, ಚಪ್ಪಲಿ ತೂರಿದ್ದರ ಹಿಂದೆ ಇರುವ ಆರೋಪಿಗಳನ್ನು ಫೆ.21ರೊಳಗೆ ಬಂಧನ ಮಾಡಬೇಕು. ಮಸೀದಿ ಸಮಿತಿಯವರು, ಸಮಿತಿ ಅಧ್ಯಕ್ಷರನ್ನು ಕೂಡಲೇ ಬಂಧನ ಮಾಡಿ ಎ-1ಆರೋಪಿಗಳನ್ನಾಗಿ ಮಾಡಬೇಕು. ಮತ್ತೊಮ್ಮೆ ಶಿವಾಜಿ ಮಹಾರಾಜರ ಮೆರವಣಿಗೆ ನಡೆಸಬೇಕು ಎಂದು ಹಿಂದೂ ಸಂಘಟನೆಗಳ ಮುಖಂಡರು ಆಗ್ರಹಿಸಿದರು.

ನಗರದ ಅಂಭಾಭವಾನಿ ದೇವಸ್ಥಾನ ಆವರಣದಲ್ಲಿ ಜಮಾಯಿಸಿದ್ದ ಹಿಂದೂ ಸಂಘಟನೆಗಳ ಮುಖಂಡರು, ಕಾರ್ಯಕರ್ತರು ಮೆರವಣಿಗೆಯಲ್ಲಿ ಕಲ್ಲು ತೂರಾಟ ನಡೆಸಿದ್ದ ಪ್ರಕರಣವನ್ನು ಖಂಡಿಸಿ, ಮಸೀದಿಯೊಳಗಿಂದ ಮೆರವಣಿಗೆಯಲ್ಲಿ ಹೋಗುವವರ ಮೇಲೆ ಕಲ್ಲು ತೂರುವುದು, ಚಪ್ಪಲಿ ಎಸೆತ ಮಾಡಿರುವುದು ವಿಡಿಯೋ ಮೂಲಕ ಬಹಿರಂಗವಾಗಿದೆ. ಇದಕ್ಕೆ ಕಾರಣಿಕರ್ತರಾದವರೆಲ್ಲರನ್ನು ಬಂಧನ ಮಾಡಬೇಕು ಎಂದು ಮುಖಂಡರು ಒತ್ತಾಯಿಸಿದರು.

ಸಭೆಯನ್ನು ಉದ್ದೇಶಿಸಿ ಮಾತನಾಡಿದ ರಾಜ್ಯಸಭೆ ಸದಸ್ಯ ನಾರಾಯಣಸಾ ಭಾಂಡಗೆ, ಛತ್ರಪತಿ ಶಿವಾಜಿ ಮಹಾರಾಜರ ಮೆರವಣಿಗೆಯಲ್ಲಿ ಕಲ್ಲು, ಚಪ್ಪಲಿ ಎಸೆದ ಘಟನೆಗೆ ಎಂಟು ಜನರನ್ನು ಬಂಧಿಸಿದರೆ ಸಾಲದು ಘಟನೆ ನಡೆಯುವಾಗ 200 ಜನ ಮಸೀದಿಯಲ್ಲಿದ್ದರು. ಅಲ್ಲಿ ಸಮಿತಿ ಅಧ್ಯಕ್ಷರು, ಸಮಿತಿಯವರು ಇದ್ದಾರೆ. ಅವರೆಲ್ಲರನ್ನು ಬಂಧಿಸಬೇಕು. ಫೆ.21ರೊಳಗೆ ಆರೋಪಿಗಳನ್ನೆಲ್ಲ ಬಂಧನವಾಗಬೇಕು ಎಂದು ಹೇಳಿದರು.

ಛತ್ರಪತಿ ಶಿವಾಜಿ ಯಾರ ವಿರುದ್ಧ ಹೋರಾಡಿದ್ದ ಅವರು ಇನ್ನೂ ಜೀವಂತ ಇದ್ದಾರೆ ಎಂಬುದಕ್ಕೆ ಬಾಗಲಕೋಟೆಯಲ್ಲಿ ನಡೆದ ಘಟನೆಯೇ ಸಾಕ್ಷಿಯಾಗಿದೆ. ಸರ್ಕಾರ ಓಲೈಕೆ ಮಾಡುತ್ತಿರುವ ಪರಿಣಾಮದಿಂದಲೇ ಕಲ್ಲು ತೂರಾಟದಂತಹ ಧೈರ್ಯವನ್ನು ಮಾಡುತ್ತಿದ್ದಾರೆ. ಮಸೀದಿಯಿಂದ ಆಗಿರುವ ಘಟನೆಯ ತನಿಖೆಯನ್ನು ಮೊಟಕುಗೊಳಿಸಿದರೆ ಮುಂದೊಂದು ದಿನ ಗಂಭೀರ ಉತ್ತರವನ್ನು ಹಿಂದೂ ಸಮಾಜ ಕೊಡಬೇಕಾಗುತ್ತದೆ. ಹಿಂದೂಗಳು ಸಹನೆ ಇರುವವರು. ಆದರೆ, ನಮ್ಮ ಸಹನೆಯನ್ನೇ ದುರುಪಯೋಗಪಡಿಸಿಕೊಂಡರೇ ಹಿಂದೂ ಸಮಾಜ ಹೇಡಿ ಅಲ್ಲ, ತಕ್ಕ ಉತ್ತರವನ್ನುಕೊಡಲು ಸಮಾಜ ಸಿದ್ಧವಾಗಿದೆ ಎಂದು ಹೇಳಿದರು.

ಮುಧೋಳದ ಪ್ರಶಾಂತ ಪವಾರಾ ಮಾತನಾಡಿ, ಮಸೀದಿಯೊಳಗೆ ಪ್ರಾರ್ಥನೆ ಮುಗಿದರೂ 200 ಜನ ಎಲ್ಲಿಂದ ಬಂದು ಸೇರಿದರು. ಮಸೀದಿಯೊಳಗೆ ಕ್ಯಾರಿಬ್ಯಾಗ್ ಒಳಗಡೆ ಏನೇನು ತುಂಬಿಕೊಂಡು ಹೋದರು. ಮಸೀದಿಯಿಂದ ಘಟನೆ ನಡೆದಿದ್ದು ಜಿಹಾದಿ ತುಂಬಿರುವ ಸಮಿತಿ, ಪ್ರಚೋದನೆ ನೀಡುವ ಮಸೀದಿ ಅಧ್ಯಕ್ಷರನ್ನು ಮೊದಲು ಎ-1 ಆರೋಪಿಗಳನ್ನಾಗಿ ಮಾಡಬೇಕು. ಮೊದಲು ಮಸೀದಿ ಮುಖ್ಯಸ್ಥರನ್ನು ಬಂಧನ ಮಾಡಿ, ಹಿಂದೂಗಳಿಗೆ ಸೂಕ್ತ ರಕ್ಷಣೆ ಇಲ್ಲದಂತಾಗಿದೆ.

ನಮ್ಮವರು ಏನಾದರೂ ಸಣ್ಣ ತಪ್ಪು ಮಾಡಿದರೆ ಭರಮಪ್ಪನ ಆಡಿಸುತ್ತೀರಿ ಇವತ್ತು ಎಸ್ಪಿಯವರಿಗೆ, ಮೆರವಣಿಗೆಯಲ್ಲಿ ಮಸೀದಿಯಿಂದ ಕಲ್ಲು ತೂರಾಟ ಮಾಡಿದರೂ ಪೊಲೀಸರು ಏಕೆ ಸುಮ್ಮನೇ ಕೂಡುತ್ತೀದ್ದೀರಿ. ಇದೊಂದು ಕ್ಷುಲ್ಲಕ ಘಟನೆ ಎಂದು ಕೇಸ್ ದಾಖಲು ಮಾಡದೇ ದೇಶದ್ರೋಹ ಕೃತ್ಯ ಎಂದು ಕೇಸ್ ದಾಖಲಿಸಬೇಕು ಎಂದು ಆಕ್ರೋಶ ಹೊರಹಾಕಿದರು.

ಕುಮಾರಸ್ವಾಮಿ ಹಿರೇಮಠ ಮಾತನಾಡಿ, ಕಲ್ಲು ತೂರಾಟ, ಚಪ್ಪಲಿ ಎಸೆತ ಘಟನೆ ಆಕಸ್ಮಿಕವಲ್ಲ ಇದೊಂದು ಪೂರ್ವನಿಯೋಜಿತ ಘಟನೆಯಾಗಿದೆ. ಇದರ ಹಿಂದೆ ಇರುವವರ ಬಂಧನ ಆಗಬೇಕು ಎಂದು ಹೇಳಿದರು.

ಸಭೆಯಲ್ಲಿ ಭಾಗವಹಿಸಿದ್ದ ಹಿಂದೂ ಕಾರ್ಯಕರ್ತರು ಮಾತನಾಡಿ, ಶಿವಾಜಿ ಮೆರವಣಿಗೆಯಲ್ಲಿ ಎಲ್ಲಿ ಅಪಮಾನವಾಗಿದೆ ಅಲ್ಲಿಂದಲೇ ಮತ್ತೊಮ್ಮೆ ಮೆರವಣಿಗೆ ನಡೆಯಬೇಕು. ಮಸೀದಿಯಲ್ಲಿ ಘಟನೆಗೆ ಕುಮ್ಮಕ್ಕು ನೀಡಿರುವವರನ್ನು ಬಂಧಿಸಬೇಕು. ಇಲ್ಲದಿದ್ದೆ ಉಗ್ರವಾದ ಹೋರಾಟ ಮಾಡುತ್ತೇವೆ ಎಂದು ಸಭೆಯಲ್ಲಿ ತಿಳಿಸಿದರು.

ಅಶೋಕ ಲಿಂಬಾವಳಿ, ಗುಂಡೂರಾವ್ ಸಿಂಧೆ, ಡಾ.ಶೇಖರ ಮಾನೆ, ಬಸವರಾಜ ಯಂಕಂಚಿ, ರವಿ ಪಟ್ಟಣದ, ಎಂ.ಆರ್. ಸಿಂಧೆ, ಸುರೇಶ ಮಾಗಿ, ಶ್ರೀನಾಥ ಸಜ್ಜನ, ರವಿ ಧಾಮಜಿ ಸೇರಿದಂತೆ ಅನೇಕರು ಸಭೆಯಲ್ಲಿ ಭಾಗವಹಿಸಿದ್ದರು.



ಕಲ್ಲು ತೂರಾಟ ಪ್ರಕರಣ

ಕಿಡಿಗೇಡಿಗಳ ಬಂಧನಕ್ಕೆ ಇಂದು ಗಡುವು

ನವನಗರದಲ್ಲಿ ಫೆ.21ರಂದು ಹಿಂದೂ ಸಮ್ಮೇಳನ ಹಾಗೂ 23ರಂದು ಬಾಗಲಕೋಟೆಯಲ್ಲಿ ಭವ್ಯ ಶೋಭಾಯಾತ್ರೆ ನಡೆಯಲಿದೆ. ಹಿಂದೂಗಳ ಕಾರ್ಯಕ್ರಮ ನಡೆಯಬಾರದು ಎಂದು 163 ಕಲಂ ಜಾರಿ ಮಾಡಿದ್ದೀರಿ ಇದನ್ನು ವಾಪಸ್ ಪಡೆಯಬೇಕು. ಹಿಂದೂಗಳ ಕಾರ್ಯಕ್ರಮಕ್ಕೆ ಅಡ್ಡಿ ಮಾಡಕೂಡದು. ಹಿಂದೂ ಸಮಾಜ ಜಾಗೃತವಾಗಿದೆ.

■ **ನಾರಾಯಣಸಾ ಭಾಂಡಗೆ, ರಾಜ್ಯಸಭೆ ಸದಸ್ಯ**

ಗೂಂಡಾ ಕಾಯ್ದೆಯಡಿ ಬಂಧಿಸಿ: ಶಾಸಕ ಯತ್ನಾಳ

ವಿಜಯಪುರ: ಬಾಗಲಕೋಟೆಯಲ್ಲಿ ಶಿವಾಜಿ ಭಾವಚಿತ್ರ ಮೆರವಣಿಗೆ ವೇಳೆ ಮುಸ್ಲಿಂ ಕೆಲ ಕಿಡಗೇಡಿಗಳು ಕಲ್ಲು, ಚಪ್ಪಲಿ ತೂರಿ ಅಶಾಂತಿ ಸೃಷ್ಟಿಸಿರುವುದು ಖಂಡನೀಯ ಎಂದು ನಗರ ಶಾಸಕ ಬಸನಗೌಡ ಪಾಟೀಲ ಯತ್ನಾಳ ಆಕ್ರೋಶ ವ್ಯಕ್ತಪಡಿಸಿದ್ದಾರೆ.



ಮೊಘಲರ ಹುಟ್ಟಡಗಿಸಿದ ವೀರ ಪರಾಕ್ರಮಿ, ಅಪ್ರತಿಮ ವೀರ ಛತ್ರಪತಿ ಶಿವಾಜಿ ಮಹಾರಾಜರ ಜಯಂತಿಯನ್ನೇ ಗುರಿಯಾಗಿಸಿಕೊಂಡು ಮಸೀದಿಗಳಿಂದ ಕಲ್ಲು, ಚಪ್ಪಲಿಗಳನ್ನು ಎಸೆದವರ ಮೇಲೆ ಪೊಲೀಸರು ಗೂಂಡಾ ಕಾಯ್ದೆಯಲ್ಲಿ ಬಂಧಿಸಿ ಜೈಲಿಗಟ್ಟಬೇಕು. ಕರ್ತವ್ಯನಿರತ ಪೊಲೀಸ್ ಸಿಬ್ಬಂದಿ ಸೇರಿದಂತೆ ಈ ಪ್ರಚೋದಿತ ಗಲಭೆಯಲ್ಲಿ ಗಾಯಗೊಂಡವರಿಗೆ ಮಸೀದಿಯ ಆಡಳಿತ ಮಂಡಳಿಯೇ ಜವಾಬ್ದಾರಿ ತೆಗೆದುಕೊಂಡು ವೈದ್ಯಕೀಯ ವೆಚ್ಚ ಹಾಗೂ ಪರಿಹಾರ ನೀಡಬೇಕು. ಮತ್ತೊಮ್ಮೆ, ಮಸೀದಿಯಿಂದ ಕಲ್ಲು ತೋರುವ ಘಟನೆಯಾದರೆ ಮಸೀದಿಯ ವಿದ್ಯುತ್ ಹಾಗೂ ನೀರಿನ ಸರಬರಾಜನ್ನು ಸರ್ಕಾರ ಸ್ಥಗಿತಗೊಳಿಸಿ ತಕ್ಕ ಪಾಠ ಕಲಿಸಲಿ ಎಂದು ತಮ್ಮ ಎಕ್ಸ್ ಖಾತೆಯಲ್ಲಿ ಅವರು ಟ್ವಿಟ್ ಮಾಡಿದ್ದಾರೆ.



ಅಕ್ಷಮ್ಯ ಅಪರಾಧ: ಟೆಂಗಿನಕಾಯಿ

ಹುಬ್ಬಳ್ಳಿ: ಬಾಗಲಕೋಟೆಯಲ್ಲಿ ಶಿವಾಜಿ ಜಯಂತಿ ಅಂಗವಾಗಿ ಮೆರವಣಿಗೆ ನಡೆಸುವ ವೇಳೆ ಅನ್ಯಕೋಮಿನವರು ಕಲ್ಲು ತೂರಾಟ ಮಾಡಿದ್ದು, ಅಕ್ಷಮ್ಯ ಅಪರಾಧವಾಗಿದೆ. ರಾಜ್ಯ ಸರ್ಕಾರವೇ ಇದಕ್ಕೆ ಹೊಣೆ ಎಂದು ಶಾಸಕ ಮಹೇಶ ಟೆಂಗಿನಕಾಯಿ ಕಿಡಿಕಾರಿದ್ದಾರೆ.

ಈ ಕುರಿತು ಪತ್ರಿಕಾ ಪ್ರಕಟಣೆಗೆ ತಿಳಿಸಿದ ಅವರು, ದೇಶಾದ್ಯಂತ ಶಿವಾಜಿ ಜಯಂತಿ ಅಂಗವಾಗಿ ಶಾಂತಿಯುತವಾಗಿ ಮೆರವಣಿಗೆ ನಡೆದಿದೆ. ಆದರೆ, ಬಾಗಲಕೋಟೆಯಲ್ಲಿ ಅನ್ಯ ಕೋಮಿನ ಸಮಾಜಘಾತುಕ ಶಕ್ತಿಗಳು ಮಸೀದಿ ಮೇಲೆ ನಿಂತು ಕಲ್ಲು ತೂರಾಟ ನಡೆಸಿದ್ದು ನೋಡಿದರೆ ಸಮಾಜದ ಶಾಂತಿಯನ್ನು ಭಂಗ ತರುವುದಾಗಿದೆ. ಈ ಕೃತ್ಯ ನಡೆಸಿದ ವ್ಯಕ್ತಿಗಳ ವಶಕ್ಕೆ ಪಡೆದು ಕಠಿಣ ಶಿಕ್ಷೆಗೆ ಒಳಪಡಿಸಬೇಕು. ಸರ್ಕಾರ ಅಲ್ಪಸಂಖ್ಯಾತರ ಓಲೈಕೆ ಮಾಡುವುದು ಬಿಡಬೇಕು ಎಂದು ಆಗ್ರಹಿಸಿದ್ದಾರೆ.

ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದಾಗಿನಿಂದ ಮುಸ್ಲಿಮರ ತುಷ್ಟೀಕರಣ ಮಿತಿ ಮೀರಿದೆ. ಹಿಂದು ಸಂಘಟನೆಗಳನ್ನು ಹತ್ತಿಕ್ಕುವ ಕೆಲಸ ವ್ಯವಸ್ಥಿತವಾಗಿ ನಡೆಯುತ್ತಿದೆ.

ಪ್ರತಿನಿತ್ಯ ಒಂದಿಲ್ಲೊಂದು ಘಟನೆಗಳು ರಾಜ್ಯದಲ್ಲಿ ನಡೆಯುತ್ತಿದ್ದು ಕಾನೂನು ಸುವ್ಯವಸ್ಥೆ ಸಂಪೂರ್ಣವಾಗಿ ರಾಜ್ಯದಲ್ಲಿ ಹದಿಗೆಟ್ಟಿದೆ. ಇಲ್ಲಿ ತುಘಲಕ್ ದರ್ಬಾರ್ ನಡೆಯುತ್ತಿದೆ. ಇದೊಂದು ಹಗರಣಗಳ ಸರ್ಕಾರ ಇದರಿಂದ ರಾಜ್ಯದ ಜನರು ಬೇಸತಿದ್ದು, ಈ ಸರ್ಕಾರ ಯಾವಾಗ ತೊಲಗುತ್ತದೆ ಎಂದು ರಾಜ್ಯದ ಜನರು ದಾರಿ ಕಾಯುತ್ತಿದ್ದಾರೆ ಎಂದು ಎಂದು ಹರಿಹಾಯ್ದರು.

ದಿಢೀರ್ ಬಾಗಲಕೋಟೆ ಮಾರುಕಟ್ಟೆ ಬಂದ್



ಬಾಗಲಕೋಟೆ: ಛತ್ರಪತಿ ಶಿವಾಜಿ ಮಹಾರಾಜರ ಜಯಂತಿ ಅಂಗವಾಗಿ ನಗರದಲ್ಲಿ ಗುರುವಾರ ತಡರಾತ್ರಿ ಮೆರವಣಿಗೆಯಲ್ಲಿ ಕಲ್ಲು ತೂರಾಟ, ಚಪ್ಪಲಿ ಎಸೆತ ಘಟನೆ ನಡೆದ ಹಿನ್ನೆಲೆಯಲ್ಲಿ ಮಧ್ಯಾಹ್ನ ಹಳೆ ಬಾಗಲಕೋಟೆ ಮಾರುಕಟ್ಟೆ ಸಂಪೂರ್ಣ ಬಂದ್ ಮಾಡಲಾಯಿತು.

ನಗರದ ಅಂಭಾಭವಾನಿ ದೇವಸ್ಥಾನದ ಆವರಣದಲ್ಲಿ ಹಿಂದೂ ಸಮಾಜದವರು ಸಭೆ ನಡೆಸಿದ ಬಳಿಕ ಹಿಂದೂ ಯುವಕರು ಮಾರುಕಟ್ಟೆಯಲ್ಲಿ ಸಂಚಾರ ಮಾಡುತ್ತಿದ್ದಂತೆ ಅಂಗಡಿ ಮುಗ್ಗಟ್ಟುಗಳು ಸ್ವಯಂ ಪ್ರೇರಣೆಯಿಂದ ಬಂದ್ ಮಾಡಲು ಮುಂದಾದರು.

ಇನ್ನೂ ಮಾರುಕಟ್ಟೆಯಲ್ಲಿ ಹಿಂದೂ ಯುವಕರು ಸಂಚಾರ ಮಾಡುತ್ತಿರುವ ಸಂದರ್ಭದಲ್ಲಿ ಇವರನ್ನು ಚದುರಿಸಲು ಪೊಲೀಸರು ಹರಸಾಹಸ ಪಟ್ಟರು.

ಕಲ್ಲು ತೂರಾಟ ನಡೆದ ಸ್ಥಳಕ್ಕೆ ಐಜಿಪಿ ಚೇತನ್ ಸಿಂಗ್ ರಾಠೋಡ, ಜಿಲ್ಲಾಧಿಕಾರಿ ಸಂಗಪ್ಪ,ಸಿಇಓ ಶಶಿಧರ ಕುರೇರ, ಎಸ್ಪಿ ಸಿದ್ಧಾರ್ಥಗೋಯಲ್ ಭೇಟಿ ನೀಡಿ ಪರಿಶೀಲಿಸಿದರು.

ಗುಂಪು ಗುಂಪಾಗಿ ಸೇರಿದ್ದ ಜನರನ್ನು ಮನೆಗೆ ಕಳುಹಿಸಲು ಮುಂದಾದರೂ ಯುವಕರು ಮಾತ್ರ ಅಲ್ಲಲ್ಲಿ ಸೇರಿಕೊಂಡು ಜೈ ಶ್ರೀರಾಮು ಎಂದು ಘೋಷಣೆ ಕೂಗುತ್ತಿದ್ದ ದೃಶ್ಯ ಕಂಡುಬಂದಿತು.

ರಾಜಕೀಯವಾಗಿ ಬಳಕೆ ತರವಲ್ಲ: ತಿಮ್ಮಾಪುರ

ಬಾಗಲಕೋಟೆ: ಶಿವಾಜಿ ಜಯಂತಿ ಮೆರವಣಿಗೆ ವೇಳೆ ಕಲ್ಲು ತೂರಾಟ ಪ್ರಕರಣಕ್ಕೆ ಸಂಬಂಧಿಸಿದಂತೆ ತಪ್ಪಿತಸ್ಥರಿಗೆ ಕ್ರಮ ತೆಗೆದುಕೊಳ್ಳಲಾಗುವುದು. ಈ ಘಟನೆ ರಾಜಕೀಯವಾಗಿ ಬಳಸಿಕೊಳ್ಳಬಾರದು ಎಂದು ಜಿಲ್ಲಾ ಉಸ್ತುವಾರಿ ಸಚಿವ ಆರ್.ಬಿ.ತಿಮ್ಮಾಪುರ ಹೇಳಿದರು.



ನಗರದ ಹೊಸ ಪ್ರವಾಸಿ ಮಂದಿರದಲ್ಲಿ ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಯಾವುದೇ ಜಾತಿ, ಧರ್ಮ ಆಚರಣೆಗೆ ತೊಡಕು ಉಂಟಗಬಾರದು. ಇಂತಹ ಸಂದರ್ಭದಲ್ಲಿ ಪ್ರಚೋದನೆ, ಉದ್ವೇಗಕ್ಕೆ ಅವಕಾಶ ನೀಡಬಾರದು. ಯಾರಿಗೂ ಧಕ್ಕೆ ಆಗಬಾರದು ಎನ್ನುವುದು ಸರ್ಕಾರದ ಭಾವನೆ. ಘಟನೆ ಮರಳು ಕಳುಹಿಸದಂತೆ ಜಿಲ್ಲಾಡಳಿತ, ಜಿಲ್ಲಾ ಪೊಲೀಸ್ ಇಲಾಖೆ ಎಚ್ಚರಿಕೆ ವಹಿಸಲಾಗಿದೆ. ಉನ್ನತ ಮಟ್ಟದ ಅಧಿಕಾರಿಗಳು ಸಭೆ ನಡೆಸಲಿದ್ದಾರೆ ಎಂದರು.

ಪ್ರಚೋದನಾತ್ಮಕ ಭಾಷಣ ಮಾಡಿ ರಾಜಕೀಯವಾಗಿ ಬೇಳೆ ಬೇಯಿಸಿಕೊಳ್ಳುವುದು ಕೂಡಾ ಸರಿಯಲ್ಲ, ಅದಕ್ಕೆ ಅವಕಾಶ ನೀಡುವುದಿಲ್ಲ, ಈಗಾಗಲೇ ಘಟನೆಗೆ ಸಂಬಂಧಪಟ್ಟಂತೆ ಎಂಟು ಜನರನ್ನು ಬಂಧಿಸಲಾಗಿದೆ. ಇದರಲ್ಲಿ ಜಾತಿ, ಧರ್ಮ ವಿಷಯ ಬರಬಾರದು. ಬಾಗಲಕೋಟೆ ನಗರದ ಶಾಂತಿ ಬಹಳ ಮುಖ್ಯವಾಗಿದೆ. ಕಾನೂನು ಸುವ್ಯವಸ್ಥೆ ಕಾಪಾಡುವಲ್ಲಿ ಕಠಿಣ ಕ್ರಮ ತೆಗೆದುಕೊಳ್ಳುತ್ತೇವೆ ಎಂದು ತಿಳಿಸಿದರು. ಕಾಂಗ್ರೆಸ್ ಮುಖಂಡ ಎಚ್.ಎಂ.ರೇವಣ್ಣ ಇದ್ದರು.

ಮಸೀದಿಯಲ್ಲಿ ಯುವಕರೇ ಹೆಚ್ಚು ಸೇರಿದ್ದರು

ಬಾಗಲಕೋಟೆ: ಛತ್ರಪತಿ ಶಿವಾಜಿ ಮಹಾರಾಜರ ಜಯಂತಿ ಮೆರವಣಿಗೆ ಪಂಕಾ ಮಸೀದಿ ಬಳಿ ಸಾಗುವ ಮಾರ್ಗದಲ್ಲಿ ಮಸೀದಿಯೊಳಗೆ ನೂರಾರು ಸಂಖ್ಯೆಯಲ್ಲಿ ಯುವಕರೇ ಹೆಚ್ಚು ಇದ್ದಿರುವುದು ಡ್ರೋನ್ ಕ್ಯಾಮೆರಾದಲ್ಲಿ ಸೆರೆ ಸಿಕ್ಕಿದೆ.

ಶಿವಾಜಿ ಮಹಾರಾಜರ ಮೆರವಣಿಗೆ ತನ್ನಷ್ಟಕ್ಕೆ ತಾನು ಹೊರಟಾಗ ಮಸೀದಿಯೊಳಗೆ ಯುವಕರು ಹೆಚ್ಚಿನ ಸಂಖ್ಯೆಯಲ್ಲಿ ಸೇರಿದ್ದನ್ನು ಪೊಲೀಸರು ಗಮನಿಸಿ ಕಲ್ಲು ತೂರಾಟ ತಡೆಯಲು ಪ್ರಯತ್ನಿಸಿದರೂ ಗುಂಪು ಗುಂಪಾಗಿ ಸೇರಿದ್ದ ಯುವಕರು ತಾವೇ ತಳ್ಳಾಟ, ನೂಕಾಟ ನಡೆಸಿದ್ದರು ಇದರಿಂದ ಪೊಲೀಸರಿಗೂ ಕೂಡ ಹೆದರದೇ ಕಲ್ಲು ತೂರಾಟ ನಡೆದಿದೆ.

ಮಸೀದಿಯೊಳಗೆ ಡ್ರೋನ್ ಕ್ಯಾಮೆರಾ ವಿಡಿಯೋ ಮೂಲಕ ಸೆರೆ ಹಿಡಿದ ಚಿತ್ರದಲ್ಲಿ ನೋಡಿದಾಗ ಮಸೀದಿಯೊಳಗೆ ನೂರಾರು ಸಂಖ್ಯೆಯ ಯುವಕರು ಗುಂಪು ಇರುವುದು ಕಂಡುಬಂದಿದೆ. ಇದೊಂದು ಪೂರ್ವನಿಯೋಜಿತ ಕೃತ್ಯವಾಗಿದೆ ಎಂದು ಹಿಂದೂ ಸಮಾಜದವರು ಆಕ್ರೋಶದಿಂದ ಹೇಳುತ್ತಿದ್ದಾರೆ.



ದೇವಸ್ಥಾನ ವಿಚಾರಕ್ಕೆ ಗ್ರಾಮಸ್ಥರಿಂದ ಕಲ್ಲು ತೂರಾಟ 22ಕ್ಕೂ ಅಧಿಕ ಜನರ ಮೇಲೆ ದೂರು ದಾಖಲು

ಹಾವೇರಿ: ಜಿಲ್ಲೆಯ ರಟ್ಟಿಹಳ್ಳಿ ತಾಲೂಕಿನ ಹಿರೇಯಡಚಿ ಹಾಗೂ ಕ್ಯಾತನಕೇರಿ ಗ್ರಾಮಗಳ ನಡುವೆ ದೇವಸ್ಥಾನ ನಿರ್ಮಾಣದ ವಿಚಾರವಾಗಿ ಉಭಯ ಗ್ರಾಮಗಳ ನಡುವೆ ಘರ್ಷಣೆ ನಡೆದಿದ್ದು, ಕ್ಯಾತನಕೇರಿ ಗ್ರಾಮಸ್ಥರು ಕಲ್ಲು ತೂರಾಟ ನಡೆಸಿದ್ದರಿಂದ 1 ಜೆಸಿಬಿ, 10 ಬೈಕ್ ಜಖಂಗೊಂಡಿವೆ.

ಹಿರೇಯಡಚಿ ಗ್ರಾಮದ 9ಕ್ಕೂ ಹೆಚ್ಚು ಜನರು ಗಾಯಗೊಂಡಿದ್ದಾರೆ. ಇದರ ಬೆನ್ನಲ್ಲೇ ದೂರು-ಪ್ರತಿದೂರು ದಾಖಲಾಗಿವೆ. ಕ್ಯಾತನಕೇರಿ ಗ್ರಾಮದ 22ಕ್ಕೂ ಅಧಿಕ ಜನರ ಮೇಲೆ ದೂರು ದಾಖಲಾದ ಬೆನ್ನಲ್ಲೇ 11ಜನರನ್ನು ಪೊಲೀಸರು ವಶಕ್ಕೆ ಪಡೆದುಕೊಂಡಿದ್ದಾರೆ.

ಘಟನೆ ಹಿನ್ನೆಲೆ : ರಟ್ಟೀಹಳ್ಳಿ ತಾಲೂಕಿನ ಹಿರೇಯಡಚಿ ಹಾಗೂ ಕ್ಯಾತನಕೇರಿ ಗ್ರಾಮಗಳ ಮಧ್ಯೆ ಗುಡ್ಡವಿದ್ದು ಅಲ್ಲಿ ದುರ್ಗಮ್ಮನ ದೇವಸ್ಥಾನವಿದೆ. ಈ ದೇವಸ್ಥಾನ ನಮ್ಮ ಗ್ರಾಮಕ್ಕೆ ಸೇರಿದ್ದು ಎಂಬ ಕುರಿತು ಉಭಯ ಗ್ರಾಮಗಳ ಮಧ್ಯೆ ಬಹುವರ್ಷಗಳಿಂದ ಗೊಂದಲವಿದೆ.

ಈ ಗುಡ್ಡದ ದುರ್ಗಮ್ಮ ದೇವಸ್ಥಾನದ ವಿಚಾರವಾಗಿ ಮೊದಲಿನಿಂದಲೂ ಎರಡೂ ಗ್ರಾಮಗಳ ನಡುವೆ ಗಲಾಟೆ ನಡೆಯುತ್ತಲೇ ಇದ್ದು, ದೇವಸ್ಥಾನ ನಮ್ಮದು ಎಂದು ಉಭಯ ಗ್ರಾಮಸ್ಥರ ನಡುವೆ ಪರಸ್ಪರ ಗಲಾಟೆ ನಡೆಯುತ್ತಲೇ ಇತ್ತು. ಗುಡ್ಡದಲ್ಲಿರೋ ದುರ್ಗಮ್ಮ ದೇವಿ ಹಳೆ ದೇವಸ್ಥಾನ ಬಿಟ್ಟು ಅದರ ಬಳಿಯೇ ಹೊಸ ದೇವಸ್ಥಾನ ನಿರ್ಮಾಣಕ್ಕೆ ಹಿರೇಯಡಚಿ ಗ್ರಾಮಸ್ಥರು ಮುಂದಾಗಿದ್ದು, ಜಾತ್ರೆಗೆ ಎಂದು ಗುಡ್ಡದಲ್ಲಿ ಮಂಟಪ ನಿರ್ಮಿಸಲು ಹಿರೇಯಡಚಿ ಗ್ರಾಮಸ್ಥರು ಮುಂದಾಗಿದ್ದರು.

ಆದರೆ, ಕ್ಯಾತನಕೇರಿ ಗ್ರಾಮಸ್ಥರ ಒಪ್ಪಿಗೆ ಪಡೆಯದೇ ಈ ಎಲ್ಲಾ ಕಾರ್ಯಕ್ರಮ ಮಾಡಲಾಗುತ್ತಿದೆ ಎಂದು ವಿರೋಧಿಸಿದ ಗ್ರಾಮಸ್ಥರು ಅಲ್ಲಿದ್ದವರ ಜತೆಗೆ ಕೈ ಕೈ ಮಿಲಾಯಿಸಿದ್ದಾರೆ. ಇದು ವಿಕೋಪಕ್ಕೆ ತಿರುಗಿ ಕಲ್ಲು ತೂರಾಟದ ಮೂಲಕ ಉದ್ವಿಗ್ನ ಸ್ಥಿತಿಗೆ ತಿರುಗಿದೆ. ಇದರ ಬೆನ್ನಲ್ಲೇ ಘಟನಾ ಸ್ಥಳಕ್ಕೆ ಹಿರೇಕೆರೂರ ಪೊಲೀಸರು ಧಾವಿಸಿ ಪರಿಸ್ಥಿತಿ ಹತೋಟಿಗೆ ತಂದಿದ್ದಾರೆ.

ಇದೀಗ ಗುಡ್ಡದ ದುರ್ಗಮ್ಮ ದೇವಸ್ಥಾನದ ಸುತ್ತ ಪೊಲೀಸ್ ಸರ್ಪಗಾವಲು ಹಾಕಿದ್ದು, ಈ ದೇವಸ್ಥಾನದತ್ತ ಎರಡೂ ಎರಡು ಗ್ರಾಮದ ಜನರು ಬಾರದಂತೆ ಪೊಲೀಸರು ಸೂಚನೆ ನೀಡಿದ್ದಾರೆ. ಇದೀಗ ಎರಡೂ ಗ್ರಾಮಗಳಲ್ಲಿ ಶಾಂತಿ ನೆಲೆಸಿದ್ದು, ಎರಡೂ ಕಡೆಯವರ ಮೊಬೈಲ್ ರೆಕಾರ್ಡಿಂಗ್ ಪಡೆದು ಪರಿಶೀಲನೆ ನಡೆಸಲಾಗುತ್ತಿದೆ ಎಂದು ಮೂಲಗಳು ತಿಳಿಸಿವೆ. ಈ ಕುರಿತು ಹಿರೇಕೆರೂರು ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿವೆ.

ರಣಜಿ ಫೈನಲ್ ಪಂದ್ಯಕ್ಕೆ ಸಕಲ ಸಿದ್ಧತೆ

ಹುಬ್ಬಳ್ಳಿ: ಇಲ್ಲಿಯ ರಾಜನಗರದ ಕೆಎಸ್‌ಸಿಎ ಮೈದಾನದಲ್ಲಿ ರಣಜಿ ಟ್ರೋಫಿ ಕ್ರಿಕೆಟ್ ಟೂರ್ನಿಯ ಫೈನಲ್ ಪಂದ್ಯಕ್ಕೆ ಸಕಲ ಸಿದ್ಧತೆ ನಡೆದಿದೆ.

ಇದೇ 24ರಿಂದ ಪಂದ್ಯ ನಡೆಯಲಿದೆ. ಜಮ್ಮು ಕಾಶ್ಮೀರ ತಂಡವೂ ಶುಕ್ರವಾರ ನಗರಕ್ಕೆ ಬಂದಿದೆ. ಶನಿವಾರ ಮಧ್ಯಾಹ್ನ ಅಭ್ಯಾಸ ಮಾಡಲಿದ್ದಾರೆ.

ಕ್ರೀಡಾಂಗಣದ ಸ್ಟ್ಯಾಂಡ್, ಗ್ರಿಲ್‌ಗಳಿಗೆ ಬಣ್ಣ ಬಳಿಯಲಾಗುತ್ತಿದ್ದು, ಸ್ವಚ್ಛತಾ ಕಾರ್ಯ ಕೈಗೊಳ್ಳಲಾಗುತ್ತಿದೆ. ಡ್ರೆಸ್ಸಿಂಗ್ ಕೊಠಡಿ ಇರುವ ಕ್ಲಬ್ ಹೌಸ್ ಕಟ್ಟಡದಲ್ಲಿಯೂ ಸಿಬ್ಬಂದಿ ಗುರುವಾರ ಸ್ವಚ್ಛತಾ ಕಾರ್ಯ ಕೈಗೊಂಡರು.

ಹುಬ್ಬಳ್ಳಿ-ಧಾರವಾಡ ಪೊಲೀಸ್ ಕಮಿಷನರ್ ಎನ್. ಶಶಿಕುಮಾರ್ ಅವರು ಗುರುವಾರ ಕ್ರೀಡಾಂಗಣಕ್ಕೆ ಭೇಟಿ ನೀಡಿ ಭದ್ರತಾ ವ್ಯವಸ್ಥೆ ಬಗ್ಗೆ ಪರಿಶೀಲಿಸಿದರು.

ಇಲ್ಲಿನ ಕ್ರೀಡಾಂಗಣದಲ್ಲಿ ಎಂಟು ಜನ ಗ್ರೌಂಡ್ಸ್‌ಮನ್‌ಗಳಿದ್ದು, ಬೆಳಗಾವಿಯಿಂದ ಹೆಚ್ಚುವರಿಯಾಗಿ ಐದು ಜನರನ್ನು ಕರೆಸಿಕೊಳ್ಳಲಾಗಿದೆ. 25ಕ್ಕೂ ಹೆಚ್ಚು ಬಾಲ್‌ಬಾಯ್‌ಗಳು ನಿಯೋಜನೆ ಮಾಡಲಾಗುವುದು ಎಂದು ಕೆಎಸ್‌ಸಿಎ ಧಾರವಾಡ ವಲಯ ನಿಮಂತ್ರಕ ವೀರಣ್ಣ ಸವಡಿ ತಿಳಿಸಿದರು.

ಫೆ.22ರಂದು ಕರ್ನಾಟಕ ತಂಡ ನಗರಕ್ಕೆ ಬರಲಿದೆ. ಎರಡೂ ತಂಡಗಳಿಗೆ ಡ್ರೆಸ್ಸಿಂಗ್ ಕೊಠಡಿಗಳು ಸಜ್ಜುಗೊಳಿಸಲಾಗುತಿದೆ. ಅಲ್ಲಿ ತಂಡದ ಆಟಗಾರರು, ಸಿಬ್ಬಂದಿಗೆ ಮಾತ್ರ ಪ್ರವೇಶ ಇರುತ್ತದೆ ಎಂದರು.

ಪಂದ್ಯ ವೀಕ್ಷಣೆಗೆ ಹೆಚ್ಚಿನ ಜನ ಬರುವ ನಿರೀಕ್ಷೆ ಇರುವುದರಿಂದ ಹೆಚ್ಚಿನ ಸಿಬ್ಬಂದಿಯನ್ನು ನಿಯೋಜಿಸಿ, ಸೂಕ್ತ ಭದ್ರತೆ ಒದಗಿಸುವಂತೆ ಹು-ಧಾ ಪೊಲೀಸ್ ಕಮಿಷನರ್ ಅವರಿಗೆ ಕೋರಲಾಗಿದೆ ಎಂದು ತಿಳಿಸಿದರು.

ಪಂದ್ಯದ ಉದ್ಘಾಟನಾ ಕಾರ್ಯಕ್ರಮದಲ್ಲಿ ಕೇಂದ್ರ ಸಚಿವ ಪ್ರಹ್ಲಾದ ಜೋಶಿ, ಸಂಸದ ಜಗದೀಶ ಶೆಟ್ಟರ್, ಜಿಲ್ಲಾ ಉಸ್ತುವಾರಿ ಸಚಿವ ಸಂತೋಷ್ ಲಾಡ್ ಸೇರಿದಂತೆ ಸ್ಥಳೀಯ ಶಾಸಕರು, ಜನಪ್ರತಿನಿಧಿಗಳು ಭಾಗವಹಿಸಲಿದ್ದಾರೆ ಎಂದು ತಿಳಿಸಿದರು.

ನೇರ ಪ್ರಸಾರ: 'ಸ್ಟಾರ್ ಸ್ಪೋರ್ಟ್ಸ್ ಮತ್ತು ಜಿಯೋ ಹಾಟ್‌ಸ್ಟಾರ್‌ನಲ್ಲಿ ಪಂದ್ಯದ ನೇರ ಪ್ರಸಾರ ನಡೆಯಲಿದೆ. ಅವರ 50 ಜನ ಸಿಬ್ಬಂದಿ ಬರಲಿದ್ದು, ಕ್ಯಾಮೆರಾ ಅಳವಡಿಕೆಗೆ ನಾಲ್ಕು ಕಡೆ ಸ್ಟ್ಯಾಂಡ್ ವ್ಯವಸ್ಥೆ ಮಾಡಲಾಗುವುದು. ಪಂದ್ಯ ವೀಕ್ಷಣೆಗೆ ಬರುವ ಸಾರ್ವಜನಿಕರು, ಕ್ರೀಡಾಪ್ರೇಮಿಗಳಿಗೆ 5 ಸಾವಿರ ಆಸನಗಳ ವ್ಯವಸ್ಥೆ ಮಾಡಲಾಗುವದು. 200 ಜನ ಗಣ್ಯ ವ್ಯಕ್ತಿಗಳು, ಮಾಧ್ಯಮದವರಿಗೆ ಪ್ರತ್ಯೇಕ ವ್ಯವಸ್ಥೆ ಮಾಡಲಾಗುವುದು ಎಂದು ಕೆಎಸ್‌ಸಿಎ ಧಾರವಾಡ ವಲಯ ನಿಮಂತ್ರಕ ವೀರಣ್ಣ ಸವಡಿ ತಿಳಿಸಿದರು.

Hosadigantha Kannada Daily Printed & Published by P.S.Prakash on behalf of Jnanabharathi Prakashana Limited. Printed at M/s Elegant Offset Printers, Pvt.Ltd, Plot no 33/1& 15/1(eastern part) MT Sagar Industrial Estate, Hubballi -580030, Published at Joshi Chambers, 2nd Floor, Near R.M.Joshi Petrol pump, Lamington Road, Hubballi-580020, Ph: 0836-2350942, Editor: P.S.Prakash, Group Editor: Vinayak S. Bhat

ಕಿರುಸುದ್ದಿ

ಉದ್ಯೋಗ ಮೇಳ, ವೃತ್ತಿ ಮಾರ್ಗದರ್ಶನ

ಜೋಯಿಡಾ: ತಾಲೂಕಾ ಕೇಂದ್ರ ಜೋಯಿಡಾದಲ್ಲಿನ ಸರ್ಕಾರಿ ಶ್ರೀರಾಮ ಪ್ರೌಢಶಾಲೆಯಲ್ಲಿ ವಿದ್ಯಾರ್ಥಿಗಳಿಗೆ ಉದ್ಯೋಗ ಮೇಳ ಮತ್ತು ವೃತ್ತಿ ಮಾರ್ಗದರ್ಶನ ಕಾರ್ಯಕ್ರಮ ನಡೆಯಿತು.ಕಾರ್ಯಕ್ರಮದಲ್ಲಿ ವಿವಿಧ ವೃತ್ತಿಗಳ ಪ್ರಾತ್ಯಕ್ಷಿಕೆ, ವಿವಿಧ ಕೋರ್ಸಗಳ ಕುರಿತು ಮಾಹಿತಿ ಹಾಗೂ ಮಕ್ಕಳು ಆಸಕ್ತಿ ದಾಯಕ ವೃತ್ತಿಯ ಮಾದರಿ ಪ್ರದರ್ಶಿಸಲಾಯಿತು.ಮಕ್ಕಳಿಗೆ ಎಸ್‌ಎಲ್‌ಎಲ್‌ಸಿ ನಂತರ ಮುಂದೆ ಯಾವ ರೀತಿಯ ಕೋರ್ಸ್‌ಗಳನ್ನು ಆಯ್ಕೆ ಮಾಡಿಕೊಳ್ಳಬೇಕು ಎಂಬುದರ ಕುರಿತು ಮಾಹಿತಿ ನೀಡಿದರು.

ವಿದ್ಯಾರ್ಥಿಗಳು ಸೂಕ್ತವಾದ ಗುರಿಯನ್ನು ಆಯ್ಕೆ ಮಾಡಿಕೊಂಡು ಅದರಂತೆ ಅಧ್ಯಯನ ಮಾಡಬೇಕೆಂದು ಪ್ರೇರಣೆ, ಮಾರ್ಗದರ್ಶನ ನೀಡಿ ಕಾರ್ಯಕ್ರಮ ಯಶಸ್ವಿಗೊಳಿಸಿದರು. ವಿದ್ಯಾರ್ಥಿಗಳಿಗೆ ವಿವಿಧ ವೃತ್ತಿಗಳಿಗೆ ಸಂಬಂಧಿಸಿದ ರಸಪ್ರಶ್ನೆ ಕಾರ್ಯಕ್ರಮವನ್ನು ನಡೆಸಿ ವಿಜೇತರಿಗೆ ಬಹುಮಾನವನ್ನು ವಿತರಿಸಲಾಯಿತು. ಮುಖ್ಯ ಶಿಕ್ಷಕರಾದ ಆರ್.ಆರ್.ನಾಯ್ಕ ಮಾರ್ಗದರ್ಶನದಲ್ಲಿ ಸಹಶಿಕ್ಷಕರಾದ ಗಿರೀಶ ಕೋಟೆಮನೆ ಉದ್ಯೋಗ ಮೇಳದ ಯಶಸ್ಸಿಗೆ ಸಹಕರಿಸಿದರು. ಮುಖ್ಯ ಅತಿಥಿಗಳಾಗಿ ಅರಣ್ಯ ಅಧಿಕಾರಿ ದಿನೇಶ್ ಕುಮಾರ್ ಬೆಳ್ಳಣ್ಣನವರ್, ಬಿಜಿ ವಿಎಸ್ ಕಾಲೇಜನ ಉಪನ್ಯಾಸಕ ಪ್ರಕಾಶ್ ತಗಡಿನಮನಿ, ಕ್ಷೇತ್ರ ಸಂಪನ್ಮೂಲ ವ್ಯಕ್ತಿ ಶಶಿಕಾಂತ್ ಹೂಲಿ, ಸಿ.ಆರ್.ಪಿ.ಜ್ಯೋತಿ ಗುಡೆ, ಕಸಾಪ ಅಧ್ಯಕ್ಷರು ಪಾಂಡುರಂಗ ಪಟಗಾರ, ವೃತ್ತಿ ಮಾರ್ಗದರ್ಶಕ ಕಿರಣ್ ಕುಮಾರ್, ಬಿಆರ್‌ಸಿ ಜೋಯಿಡಾರವರು ಇದ್ದರು.

ಇಂದು ವಿದ್ಯುತ್ ವ್ಯತ್ಯಯ

ಮುಂಡಗೋಡ: ಮುಂಡಗೋಡ 110/11 ಕೆ.ವಿ. ಉಪಕೇಂದ್ರದ ತುರ್ತು ಕಾಮಗಾರಿ ಕೈಗೊಳ್ಳುವುದರಿಂದ ಫೆ.21ರಂದು ಬೆಳಗ್ಗೆ 10ಘಂಟೆಯಿಂದ ಸಂಜೆ 6 ಘಂಟೆವರೆಗೆ ಮುಂಡಗೋಡ ಪಟ್ಟಣ, ಟಿಬೆಟಿಯನ್ ಕಾಲೊನಿ, ಬಾಚಣಕಿ, ನಂದಿಕಟ್ಟಾ, ಇಂದೂರ, ಹುನಗುಂದ, ಮೈನಳ್ಳಿ, ಚೌಡಳ್ಳಿ, ಗುಂಜಾವತಿ, ಚಿಗಳ್ಳಿ, ನಾಗನೂರು, ಸಾಲಗಾಂವ ಹಾಗೂ ಕಾತೂರ ಗ್ರಾ.ಪಂ ಗಳಿಗೆ ಸಂಬಂಧಪಟ್ಟ ಎಲ್ಲ ಗ್ರಾಮಗಳು ಹಾಗೂ ಸನವಳ್ಳಿ ಕುಡಿಯುವ ನೀರಿನ ಘಟಕ ಪ್ರದೇಶ ಮಾರ್ಗಗಳಲ್ಲಿ ವಿದ್ಯುತ್ ಪೂರೈಕೆಯಲ್ಲಿ ವ್ಯತ್ಯಯವಾಗುವುದರಿಂದ ಸಾರ್ವಜನಿಕರು ಹೆಸ್ಕಾಂನೊಂದಿಗೆ ಸಹಕರಿಸಲು ಹೆಸ್ಕಾಂ ಪ್ರಕಟಣೆಯಲ್ಲಿ ತಿಳಿಸಿದೆ.

ಮಕ್ಕಳ ನಡಿಗೆ ಪರಿಸರದ ಕಡೆ



ಮುಂಡಗೋಡ: ನೇಸರ ಇಕೋ ಕ್ಲಬ್ ವತಿಯಿಂದ ನಡೆದ ರಾಷ್ಟ್ರೀಯ ಹಸಿರು ಪಡೆಯ ಮಕ್ಕಳ ನಡಿಗೆ ಪರಿಸರದ ಕಡೆಗೆ ಕಾರ್ಯಕ್ರಮದಡಿ ತಾಲೂಕಿನ ಬೆಡಸಗಾಂವ ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ಮಕ್ಕಳು ಬೆಡಸಗಾಂವನ ಪ್ರಗತಿಪರ ಕೃಷಿಕ ವಿಜಯ ನಾಯಕ ಅವರ ತೋಟಕ್ಕೆ ತೆರಳಿ ತೋಟದಲ್ಲಿ ವಿವಿಧ ಗಿಡ ಮರಗಳ ಬೆಳೆಯ ಜೇನು ಕೃಷಿ ಹಾಗೂ ಪರಿಸರದ ಮಾಹಿತಿಯನ್ನು ಕೃಷಿಕರಿಂದ ಪಡೆದರು.ಶಾಲೆಯ ಪರವಾಗಿ ಅವರನ್ನು ಸನ್ಮಾನಿಸಲಾಯಿತು. ಈ ಸಂದರ್ಭದಲ್ಲಿ ಬೆಡಸಗಾಂವ ಶಾಲೆಯ ಮುಖ್ಯ ಶಿಕ್ಷಕಿ ಸ್ಮಿತಾ ಕುರ್ಡೇಕರ, ರೂಪಾ ಶೆಟ್ಟಿ, ಯಶೋಧಾ ಎಸ್., ಎಸ್.ಡಿ.ಎಮ್.ಸಿ. ಸದಸ್ಯ ಸಂಜೀವ ನಾಯ್ಕ, ಶಾಲಾ ಬಿಸಿಊಟದ ಸಹಾಯಕಿ ಸುಜಾತಾ ನಾಯ್ಕ ಮತ್ತಿತರರು ಇದ್ದರು.

ಎಪಿಎಂಸಿ ಕೃಷಿ ಧಾರಣೆ

ಶಿರಸಿ	ಕನಿಷ್ಠ	ಗರಿಷ್ಠ
ಕಾಳುಮೆಣಸು	62089	69218
ಬಿಳಿಗೋಟು	29699	43300
ಕೆಂಪುಗೋಟು	28498	38169
ಬೆಟ್ಟೆ	40099	52899
ರಾಶಿ	53069	58018
ಚಾಲಿ	40699	49715
ಬಿ.ಕಾಳುಮೆಣಸು	88099	88099

ಯಲ್ಲಾಪುರ	ಕನಿಷ್ಠ	ಗರಿಷ್ಠ
ಅಪಿ	69199	69199
ರಾಶಿ	48099	62815
ಬೆಟ್ಟೆ	38706	51999
ಕೆಂಪುಗೋಟು	16900	38599
ಬಿಳಿಗೋಟು	16612	41001
ಚಾಲಿ ಹೊಸದು	40511	49499
ಚಾಲಿ	39119	52000
ಕೋಕಾ	16900	32199
ಕಾಳುಮೆಣಸು	60809	67809



ಜೋಯಿಡಾ: ತಾಲೂಕಾ ಕೇಂದ್ರ ಜೋಯಿಡಾದಲ್ಲಿನ ಸರ್ಕಾರಿ ಶ್ರೀರಾಮ ಪ್ರೌಢಶಾಲೆಯಲ್ಲಿ ವಿದ್ಯಾರ್ಥಿಗಳಿಗೆ ಉದ್ಯೋಗ ಮೇಳ ಮತ್ತು ವೃತ್ತಿ ಮಾರ್ಗದರ್ಶನ ಕಾರ್ಯಕ್ರಮ ನಡೆಯಿತು. ಈ ವೇಳೆ ಅರಣ್ಯ ಅಧಿಕಾರಿ ದಿನೇಶ್ ಕುಮಾರ್ ಬೆಳ್ಳಣ್ಣನವರ್, ಬಿಜಿ ವಿಎಸ್ ಕಾಲೇಜಿನ ಉಪನ್ಯಾಸಕ ಪ್ರಕಾಶ್ ತಗಡಿನಮನಿ, ಕ್ಷೇತ್ರ ಸಂಪನ್ಮೂಲ ವ್ಯಕ್ತಿ ಶಶಿಕಾಂತ್ ಹೂಲಿ ಮತ್ತಿತರರಿದ್ದರು.

ಮೂಲಭೂತ ಸೌಕರ್ಯ ಒದಗಿಸಲು ಆಗ್ರಹ

ಮುಂಡಗೋಡ: ತಾಲೂಕಿನಲ್ಲಿ ಆರೋಗ್ಯ ಸೇವೆಗಳ ಬಲವರ್ಧನೆ , ಮೂಲಭೂತ ಸೌಕರ್ಯಗಳ ಪೂರೈಕೆ ಮತ್ತು ಮೈನಳ್ಳಿಗೆ ಪ್ರಾಥಮಿಕ ಆರೋಗ್ಯ ಕೇಂದ್ರ ಮಂಜೂರು ಮಾಡುವಂತೆ ಜನ ವೇದಿಕೆ ಕಾರ್ಯಕರ್ತರು ಹಾಗೂ ವಿವಿಧ ಸಂಘಟನೆಯರು ಜಿಲ್ಲಾಧಿಕಾರಿಗೆ ಮತ್ತು ಜಿಲ್ಲಾ ಆರೋಗ್ಯ ಅಧಿಕಾರಿಗಳಿ ಮನವಿ ಸಲ್ಲಿಸಿದ್ದರು.ಜನ ವೇದಿಕೆ ಕರ್ನಾಟಕ ಜನಾರೋಗ್ಯ ಚಳುವಳಿ ಮೂಲಕ ಕರ್ನಾಟಕ ರಾಜ್ಯದ 17 ಪ್ರಾಥಮಿಕ ಆರೋಗ್ಯ ಕೇಂದ್ರಗಳ ಅಧ್ಯಯನವನ್ನು ಮಾಡಿದ್ದು, ಅದರಲ್ಲಿ ಮುಖ್ಯವಾಗಿ ವೈದ್ಯರು ಸೇರಿದಂತೆ ಸಿಬ್ಬಂದಿ ನೇಮಕದಲ್ಲಿ ಕೊರತೆ ಇದೆ. ಅತಿ ಮುಖ್ಯವಾದ 104 ತರಹದ ಔಷಧಿ ವಿತರಣೆ, ಅಂಬುಲೆನ್ಸ್ ಸೇವೆ, ಹೆರಿಗೆ ಸೇವೆ ಹೀಗೆ ಮುಖ್ಯವಾಗಿ ಸಾರ್ವಜನಿಕರಿಗೆ ಸಿಗಬೇಕಾದ ಆರೋಗ್ಯ ಸೇವೆಯು ಸಮರ್ಪಕವಾಗಿ ದೊರಕಬೇಕೆಂಬ ನಿಟ್ಟಿನಲ್ಲಿ ಹಾಗೂ ಮೈನಳ್ಳಿಗೆ ಪ್ರಾಥಮಿಕ ಆರೋಗ್ಯ ಕೇಂದ್ರ ಬೇಕೆಂದು ಅವರು ನೀಡಿದ ಮನವಿಯಲ್ಲಿ ತಿಳಿಸಿದ್ದಾರೆ. ಮನವಿಯ ಜೊತೆಗೆ ಈ ಹಿಂದೆ 2020 ರಿಂದ ಇಲ್ಲಿಯವರೆಗೆ ಸಲ್ಲಿಸಿದ 42 ಮನವಿಗಳು, ಮುಂಡಗೋಡನ 4 ಪ್ರಾಥಮಿಕ ಆರೋಗ್ಯ ಕೇಂದ್ರಗಳ ಅಧ್ಯಯನ ವರದಿ, ಆರೋಗ್ಯ ವಿಷಯವಾಗಿ ಸಮಸ್ಯೆ ಎದುರಿಸಿ ಸಾವು ನೋವು ಅನುಭವಿಸಿದ 5 ವ್ಯಕ್ತಿ ಅಧ್ಯಯನಗಳನ್ನು ಮನವಿ ಜೊತೆ ನೀಡಿದರು. ಕಾರ್ಯಕ್ರಮದಲ್ಲಿ ಆರೋಗ್ಯ ಅಭಿಯಾನ ಸಮಿತಿಯ ಅಧ್ಯಕ್ಷ ರವಿ ಲಮಾಣಿ ಸದಸ್ಯರಾದ ಫಾತೀಮ ಸುಲೇಮಾನ್, ಮಹಾಲಕ್ಷ್ಮಿ ನಾಯ್ಕ, ಜನ್ನಬಾಯಿ ವಿಠ್ಠವರಕ್, ಮೈಲಾರಿ ಬೆಂಡಿಗೇರಿ, ಮಂಜುನಾಥ ಪಾಟೀಲ್, ಶ್ರೀಧರ್ ಗುತ್ತಲ, ಭರಮಣ್ಣ ಚಕ್ರಸಾಲಿ, ಮಮತಾ ಎಲ್ ಹಾಗೂ ರೂಪಾ ಬಾರ್ಕೇರ್ ಇತರರಿದ್ದರು.



ಮುಂಡಗೋಡ: ತಾಲೂಕಿನಲ್ಲಿ ಆರೋಗ್ಯ ಸೇವೆಗಳ ಬಲವರ್ಧನೆ, ಮೂಲಭೂತ ಸೌಕರ್ಯಗಳ ಪೂರೈಕೆ ಮತ್ತು ಮೈನಳ್ಳಿಗೆ ಪ್ರಾಥಮಿಕ ಆರೋಗ್ಯ ಕೇಂದ್ರ ಮಂಜೂರು ಮಾಡುವಂತೆ ಜನ ವೇದಿಕೆ ಕಾರ್ಯಕರ್ತರು ಹಾಗೂ ವಿವಿಧ ಸಂಘಟನೆಯರು ಜಿಲ್ಲಾಧಿಕಾರಿಗೆ ಮತ್ತು ಜಿಲ್ಲಾ ಆರೋಗ್ಯ ಅಧಿಕಾರಿಗಳಿ ಮನವಿ ಸಲ್ಲಿಸಿದ್ದರು.

ಮಾರಿಕಾಂಬಾ ಜಾತ್ರೆಯ ಪೂರ್ವಸಿದ್ಧತಾ ಸಭೆ | ಚಂದ್ರಶೇಖರ್ ಸೂಚನೆ

ಅಹಿತಕರ ಘಟನೆಗೆ ಆಸ್ಪದ ನೀಡದಿರಿ

ಶಿರಸಿ: ಐತಿಹಾಸಿಕ ಹಿನ್ನೆಲೆಯುಳ್ಳ ಶಿರಸಿಯ ಶ್ರೀ ಮಾರಿಕಾಂಬಾ ದೇವಿಯ ಮಹೋತ್ಸವ ಯಾವುದೇ ಅಹಿತಕರ ಘಟನೆಗಳಿಗೆ ಆಸ್ಪದ ನೀಡದಂತೆ ಅತ್ಯಂತ ವಿಜೃಂಭಣೆಯಿಂದ ಆಚರಿಸಲು ಸಾರ್ವಜನಿಕರು ಹಾಗೂ ಎಲ್ಲಾ ಇಲಾಖೆಗಳ ಅಧಿಕಾರಿಗಳು ಕೈ ಜೋಡಿಸಬೇಕು ಎಂದು ಶಿರಸಿ ಸಹಾಯಕ ಆಯುಕ್ತ ಚಂದ್ರಶೇಖರ್ ಆರ್.ಜಿ.ಅವರು ಹೇಳಿದರು.

ನಗರದ ತಾಲೂಕಾಡಳಿತ ಸೌಧದಲ್ಲಿ ಶುಕ್ರವಾರ ಆಯೋಜಿಸಲಾಗಿದ್ದ ಜಾತ್ರಾ ಪೂರ್ವಸಿದ್ಧತೆಯ ವಿಶೇಷ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿ, ಫೆ.24ರಿಂದ ಆರಂಭವಾಗಲಿರುವ ಈ ಮಹೋತ್ಸವದಲ್ಲಿ ಎಲ್ಲಾ ಸಮುದಾಯದವರು ಸಕ್ರಿಯವಾಗಿ ಪಾಲ್ಗೊಂಡು ಯಶಸ್ವಿಗೊಳಿಸಬೇಕು ಎಂದು ಮನವಿ ಮಾಡಿದರು.

ಜಾತ್ರಾ ಅವಧಿಯಲ್ಲಿ ಭಕ್ತಾದಿಗಳ ಸುರಕ್ಷತೆಗೆ ಹೆಚ್ಚಿನ ಆದ್ಯತೆ ನೀಡಲಾಗುತ್ತಿದ್ದು, ಫೆ.23ರಿಂದ ಜಾತ್ರೆ ಮುಕ್ತಾಯವಾಗುವವರೆಗೆ ಯಾವುದೇ ಅಧಿಕಾರಿಗಳು ಕೇಂದ್ರ ಸ್ಥಾನ ಬಿಟ್ಟು ತೆರಳುವಂತಿಲ್ಲ ಮತ್ತು ರಜೆ ಪಡೆಯುವಂತಿಲ್ಲ ಎಂದು ಎಸಿ ಕಟ್ಟುನಿಟ್ಟಿನ ಆದೇಶ ನೀಡಿದರು.

ಮಾರಿಕಾಂಬಾ ದೇವಸ್ಥಾನದ ಅಧ್ಯಕ್ಷ ಆರ್ .ಜಿ.ನಾಯ್ಕ ಮಾತನಾಡಿ, ವಿಶೇಷ ಚೇತನರಿಗೆ ಹಾಗೂ ಅಂಗವಿಕಲರಿಗೆ ದೇವಿಯ ದರ್ಶನಕ್ಕಾಗಿ ಬೆಳಗ್ಗೆ 10 ರಿಂದ 12.30 ಮತ್ತು ರಾತ್ರಿ 10 ಗಂಟೆಯ ನಂತರ ಪ್ರತ್ಯೇಕ ಸಮಯ ನಿಗದಿಪಡಿಸಲಾಗಿದೆ. ಗಣ್ಯರಿಗಾಗಿ ವಿಶೇಷ ಪ್ರವೇಶ ದ್ವಾರದ ವ್ಯವಸ್ಥೆ ಮಾಡಲಾಗಿದೆ ಎಂದರು.

ನಗರಸಭೆ ಪೌರಾಯುಕ್ತ ಪ್ರಕಾಶ ಚನ್ನಪ್ಪನವರ್ ಮಾತನಾಡಿ, ಭಕ್ತರ ಅನುಕೂಲಕ್ಕಾಗಿ ಪಾರ್ಕಿಂಗ್ ಸ್ಥಳಗಳಲ್ಲಿ ಶೌಚಾಲಯ, ಕುಡಿಯುವ ನೀರು ಹಾಗೂ ನಾಲ್ಕು ಕಡೆ ವಿಶ್ರಾಂತಿ ಕೇಂದ್ರ ಸ್ಥಾಪಿಸಲಾಗಿದೆ. ಸುರಕ್ಷತೆಗಾಗಿ ನಗರದಾದ್ಯಂತ 54ಕ್ಕೂ ಹೆಚ್ಚು ಸಿಸಿಟಿವಿ ಕ್ಯಾಮೆರಾ ಹಾಗೂ ವಾಚ್ ಟವರ್‌ಗಳನ್ನು ಅಳವಡಿಸಲಾಗಿದೆ ಎಂದು ಮಾಹಿತಿ ನೀಡಿದರು.



> ನಗರದ ಪ್ರವೇಶ ರಸ್ತೆಗಳಲ್ಲಿ ಪೊಲೀಸ್ ಕಾವಲು ಇರಲಿದ್ದು, ಪಾರ್ಕಿಂಗ್ ಕುರಿತು ಸಾರ್ವಜನಿಕರಿಗೆ ಶೀಘ್ರವೇ ನಕ್ಷೆ ಬಿಡುಗಡೆ ಮಾಡಲಾಗುವುದು.
> ■ ಗೀತಾ ಪಾಟೀಲ್, ಡಿವೈಎಸ್ಪಿ

ಜಾತ್ರೆಗಾಗಿ ವಿಶೇಷವಾಗಿ 200 ಬಸ್‌ಗಳನ್ನು ಓಡಿಸಲಾಗುವುದು. ಶನಿವಾರ ರಾತ್ರಿಯಿಂದ ಕೇಂದ್ರ ಬಸ್ ನಿಲ್ದಾಣವನ್ನು ಗಣೇಶ ನಗರಕ್ಕೆ ತಾತ್ಕಾಲಿಕವಾಗಿ ವರ್ಗಾಯಿಸಲಾಗುವುದು. ಹನುಮಾನ ವ್ಯಾಯಾಮ ಶಾಲೆಯು ಪಿಕಪ್ ಪಾಯಿಂಟ್ ಆಗಿ ಕಾರ್ಯನಿರ್ವಹಿಸಲಿದೆ ಎಂದು ಅಧಿಕಾರಿಗಳು ಮಾಹಿತಿ ನೀಡಿದರು.

ಅಗ್ನಿಶಾಮಕ ದಳವು ಎರಡು ವಾಹನಗಳು ಹಾಗೂ ಆಯಕಟ್ಟಿನ ಜಾಗಗಳಲ್ಲಿ ಅಗ್ನಿಶಾಮಕ ಬೈಕ್‌ಗಳನ್ನು ನಿಯೋಜಿಸಿದೆ. ಹೆಸ್ಕಾಂ ವತಿಯಿಂದ ನಿರಂತರ ವಿದ್ಯುತ್ ಸಂಪರ್ಕ ಹಾಗೂ ತಾಂತ್ರಿಕ ಅವಘಡ ತಡೆಯಲು ಕ್ರಮ ಕೈಗೊಳ್ಳಲಾಗಿದೆ ಎಂದರು.

ಅಧಿಕಾರಿಗಳಿಗೆ ಸೂಚನೆ
ಕರ್ತವ್ಯದ ಅವಧಿಯಲ್ಲಿ ಕಡ್ಡಾಯವಾಗಿ ಗುರುತಿನ ಚೀಟಿ ಧರಿಸಬೇಕು ಹಾಗೂ ಅಗ್ನಿ ಅವಘಡಗಳನ್ನು ತಡೆಯಲು ವ್ಯಾಪಾರಿ ಮಳಿಗೆಗಳಲ್ಲಿನ ಸಿಲಿಂಡರ್ ಬಳಕೆಯ ಬಗ್ಗೆ ಅಗ್ನಿಶಾಮಕ ದಳ ತೀವ್ರ ನಿಗಾ ವಹಿಸಬೇಕು ಎಂದು ಸೂಚಿಸಿದರು.

ಸಭೆಯಲ್ಲಿ ಮಾತನಾಡಿದ ಪ್ರಮುಖರಾದ ಅನಿಸ್ ತಹಶೀಲ್ದಾರ್, ಶಿರಸಿ ಜಾತ್ರೆಯು ಇಡೀ ಜಿಲ್ಲೆಯ ಹೆಮ್ಮೆಯಾಗಿದ್ದು, ಮುಸ್ಲಿಂ ಸಮುದಾಯದ ವತಿಯಿಂದ ಜಾತ್ರೆಯ ಯಶಸ್ಸಿಗೆ ಸಂಪೂರ್ಣ ಸಹಕಾರ ನೀಡಲಾಗುವುದು ಎಂದು ಭರವಸೆ ನೀಡಿದರು. ತಹಶೀಲ್ದಾರ್ ಪಟ್ಟರಾಜ ಗೌಡ, ಸಿಪಿಐ ಶಶಿಕಾಂತ ವರ್ಮಾ, ನಗರ ಠಾಣೆ ಪಿಎಸ್‌ಐ ನಾಗಪ್ಪ ಬಿ, ಪ್ರಮುಖರಾದ ಖಾದರ್ ಆನವಟ್ಟಿ ಸೇರಿದಂತೆ ವಿವಿಧ ಇಲಾಖೆಯ ಅಧಿಕಾರಿಗಳು ಉಪಸ್ಥಿತರಿದ್ದರು.

ಕನ್ನಡ ಸಾಹಿತ್ಯಕ್ಕೆ ತ್ರಿಪದಿಗಳ ಕೊಡುಗೆ ಅಪಾರ

ಸರ್ವಜ್ಞ ಜಯಂತಿ

ಕಾರವಾರ: ಜಿಲ್ಲಾಡಳಿತ, ಜಿಪಂ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಯೋಗದಲ್ಲಿ ಶುಕ್ರವಾರ ಕಾರವಾರದ ಸರ್ಕಾರಿ ಕಲಾ ಮತ್ತು ವಿಜ್ಞಾನ ಮಹಾವಿದ್ಯಾಲಯದಲ್ಲಿ ನಡೆದ ಸಂತ ಕವಿ ಸರ್ವಜ್ಞ ಜಯಂತಿಯನ್ನು ಸರ್ವಜ್ಞನ ಭಾವ ಚಿತ್ರಕ್ಕೆ ನಮನ ಸಲ್ಲಿಸುವ ಮೂಲಕ ಆಚರಿಸಲಾಯಿತು.

ಜಿಲ್ಲಾಧಿಕಾರಿ ಕಚೇರಿಯ ಚುನಾವಣೆ ಶಾಖೆಯ ತಹಶೀಲ್ದಾರ್ ಪ್ರಮೋದ ನಾಯ್ಕ ಮಾತನಾಡಿ, ಸರ್ವಜ್ಞ 16ನೇ ಶತಮಾನದ ಸಾಲಿನ ದಾರ್ಶನಿಕ ಕವಿಯಾಗಿದ್ದು, ಸಮಾಜದ ಅಂಕು-ಡೊಂಕುಗಳನ್ನು ತ್ರಿಪದಿಗಳ ಮೂಲಕ ತಿದ್ದಿದರು, ಕನ್ನಡ ಸಾಹಿತ್ಯಕ್ಕೆ ತ್ರಿಪದಿಗಳ ಕೊಡುಗೆ ಅಮೂಲ್ಯವಾಗಿದ್ದು, ಇವರು ತ್ರಿಪದಿಗಳ ಬ್ರಹ್ಮ ಎಂದು ಪ್ರಸಿದ್ಧಿ ಪಡೆದಿದ್ದು, ಸರ್ವಜ್ಞನ ತ್ರಿಪದಿಗಳು ಸರ್ವಕಾಲಕ್ಕೂ ಪ್ರಸ್ತುತ ಎಂದರು.

ಸಂತ ಕವಿ ಸರ್ವಜ್ಞರ ಕುರಿತು ಜಿಲ್ಲಾಧಿಕಾರಿಗಳ ಕಚೇರಿಯ ವಿಪತ್ತು ನಿರ್ವಹಣೆ, ಸಾಮಾಜಿಕ ಭದ್ರತೆ ಮತ್ತು ಪಿಂಚಣಿಗಳ ವಿಭಾಗದ ಸಹಾಯಕ ನಿರ್ದೇಶಕ ಪ್ರಶಾಂತ ಎಸ್.ಹೆಚ್ ವಿಶೇಷ ಉಪನ್ಯಾಸ ನೀಡಿ, ಸರ್ವಜ್ಞರು ಲೋಕ ಕಲ್ಯಾಣಕ್ಕಾಗಿ, ಅನುಭವಕ್ಕಾಗಿ ಲೋಕ ಸಂಚಾರ ಮಾಡುತ್ತಾ ಜನರೊಂದಿಗೆ ಬೆರೆತು ಸಮಾಜದಲ್ಲಿನ ವಾಸ್ತವವನ್ನು ಅರಿತು, ಸರಳ ಭಾಷೆಯಲ್ಲಿ ವಾಸ್ತವಿಕ, ಸಾಹಿತ್ಯ, ಜಾತಿ ಪದ್ಧತಿ ವಿರೋಧ, ಜೀವನದ ನೆಮ್ಮದಿಯ, ಸೋಮಾರಿತನ ತೊಲಗಿಸುವ, ಸಂಬಂಧ ವಾಸ್ತವಗಳ ಚಿತ್ರಣ, ಶಿವೈಕ್ಯದ ತ್ರಿಪದಿಗಳನ್ನು ರಚಿಸಿ ಸಮಾಜದಲ್ಲಿನ ಸಮಸ್ಯೆಗಳನ್ನು ನಿರ್ಮೂಲನೆ ಮಾಡಲು ಪ್ರಯತ್ನಿಸಿದರು ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಸರ್ಕಾರಿ ಕಲಾ ಮತ್ತು ವಿಜ್ಞಾನ ಮಹಾವಿದ್ಯಾಲಯ ಕಾಲೇಜಿನ ಸಹಾಯಕ ಪ್ರಾಧ್ಯಾಪಕ ಡಾ.ಮಹೇಂದ್ರ ಕುಮಾರ, ಕಾಲೇಜಿನ ಉಪನ್ಯಾಸಕರು, ವಿದ್ಯಾರ್ಥಿಗಳು ಮತ್ತಿತರರು ಇದ್ದರು.

ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕಿ ಮಂಗಲಾ ವೆಂ, ಭೌತಶಾಸ್ತ್ರ ವಿಭಾಗದ ಸಹಾಯಕ ಪ್ರಾಧ್ಯಾಪಕಿ ಡಾ. ಮುನಿರತ್ನಮ್ಮ ಎಲ್.ಎಂ ನಿರೂಪಿಸಿ ವಂದಿಸಿದರು.



ಸುನೀಲ ಹೆಗಡೆ ಹೇಳಿಕೆಗೆ ಮೋಹನ ಹಲವಾಯಿ ಖಂಡನೆ



ದಾಂಡೇಲಿ: ರಾಜ್ಯದ ಹಿರಿಯ ರಾಜಕಾರಣಿಗಳೂ, ರಾಜ್ಯ ಆಡಳಿತ ಸುಧಾರಣಾ ಆಯೋಗದ ಅಧ್ಯಕ್ಷರೂ ಆಗಿರುವ ಆರ್.ವಿ.ದೇಶಪಾಂಡೆಯವರ ಬಗ್ಗೆ ಮಾಜಿ ಶಾಸಕ ಸುನೀಲ ಹೆಗಡೆ ನೀಡಿರುವ ಹೇಳಿಕೆ ಬಾಲಿಶತನದಿಂದ ಕೂಡಿದ್ದು, ಅದು ಅವರ ರಾಜಕೀಯ ಅಪ್ರಬುದ್ಧತೆಯನ್ನು ಎತ್ತಿ ತೋರಿಸುತ್ತಿದೆ ಎಂದು ದಾಂಡೇಲಿ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಮೋಹನ ಹಲವಾಯಿ ತೀವ್ರವಾಗಿ ಖಂಡಿಸಿದ್ದಾರೆ.

ರಾಜ್ಯ ಸರ್ಕಾರದ ಸಾಧನೆಯ ಬಗ್ಗೆ ಸಂಸದ ವಿಶ್ವೇಶ್ವರ ಹೆಗಡೆ ಕಾಗೇರಿಯವರು ನೀಡಿರುವ ಹೇಳಿಕೆಗೆ ನಮ್ಮ ನಾಯಕರಾದ ಆರ್.ವಿ.ದೇಶಪಾಂಡೆಯವರು ಸರಿಯಾದ ಉತ್ತರವನ್ನು ನೀಡಿದ್ದರು. ಇದೇ ಕಾರಣವನ್ನು ಮುಂದಿಟ್ಟುಕೊಂಡು ಸುನೀಲ ಹೆಗಡೆಯವರು ಸಂಸದರನ್ನು ಮೆಚ್ಚಿಸುವುದಕ್ಕಾಗಿ ಹಾಗೂ ಕೇವಲ ರಾಜಕೀಯ ದುರುದ್ದೇಶಕ್ಕಾಗಿ ದೇಶಪಾಂಡೆಯವರ ವಿರುದ್ಧ ಇಲ್ಲ ಸಲ್ಲದ ಆರೋಪಗಳನ್ನು ಮಾಡಿರುವುದು ಖಂಡನಾರ್ಹ. ಸುನೀಲ ಹೆಗಡೆ ತಮ್ಮ ನಾಯಕರನ್ನು ಮೆಚ್ಚಿಸುವುದಕ್ಕಾಗಿ ದೇಶಪಾಂಡೆಯವರ ವಿರುದ್ಧ ಅದೆಷ್ಟೇ ಸುಳ್ಳುಗಳನ್ನು ಹೇಳಿದರೂ ಕೂಡ ಈ ಜಿಲ್ಲೆಯ ಜನ ಅದನ್ನು ನಂಬಲಾರರು ಎಂದು ಮೋಹನ ಹಲವಾಯಿ ಅವರು ಮಾಧ್ಯಮಕ್ಕೆ ನೀಡಿದ ಹೇಳಿಕೆಯಲ್ಲಿ ತಿಳಿಸಿದ್ದಾರೆ.

9 ಬಾರಿ ಈ ಕ್ಷೇತ್ರದಿಂದ ಗೆದ್ದಿರುವ ಆರ್. ವಿ. ದೇಶಪಾಂಡೆಯವರು ಹಲವು ಇಲಾಖೆಗಳ ಸಚಿವರಾಗಿ ಈ ಜಿಲ್ಲೆಗೆ ಹಾಗೂ ಕ್ಷೇತ್ರಕ್ಕೆ ಕೊಟ್ಟ ಕೊಡುಗೆ ಅಪಾರವಾದದ್ದು. ಈ ಜಿಲ್ಲೆಯಲ್ಲಿ ಅನೇಕ ಯೋಜನೆಗಳನ್ನು ಅನುಷ್ಠಾನಗೊಳಿಸುವಲ್ಲಿ ಆರ್. ವಿ. ದೇಶಪಾಂಡೆಯವರು ಸರ್ಕಾರದ ಮಟ್ಟದಲ್ಲಿ ಪ್ರಯತ್ನಿಸಿರುವುದನ್ನು ಯಾರು ಮರೆಯಲಾರರು. ಮತ್ತೆ ಅವೆಲ್ಲದಕ್ಕೂ ದಾಖಲೆಗಳಿವೆ. ಕೆಲವೊಂದಿಷ್ಟು ಕಾಲ ಸಚಿವರಾಗಿದ್ದ ಉಸ್ತುವಾರಿ ಸಚಿವರಾಗಿದ್ದ ವಿಶ್ವೇಶ್ವರ ಹೆಗಡೆ ಕಾಗೇರಿಯವರು, ಜಿಲ್ಲೆ ವಿಭಜಿಸಿವ ಪ್ರಯತ್ನ ನಡೆಸಿದ್ದನ್ನು ಬಿಟ್ಟರೆ ಜಿಲ್ಲೆಗೆ ಕೊಟ್ಟ ಕೊಡುಗೆಯೇನು ಎನ್ನುವುದರ ಬಗ್ಗೆ ಸುನೀಲ ಹೆಗಡೆ ಹೇಳಬೇಕಿದೆ.ದೇಶಪಾಂಡೆಯವರು ಈ ಕ್ಷೇತ್ರಕ್ಕೆ ತಾಗಿದ ಶನಿ ಎನ್ನುವ ರೀತಿಯಲ್ಲಿ ನಿಂದನೆಯ ಹೇಳಿಕೆಯನ್ನು ನೀಡಿದ ಹೆಗಡೆ ತಮ್ಮ ರಾಜಕೀಯ ಜೀವನದ ಬಗ್ಗೆ ಆತ್ಮಾವಲೋಕನವನ್ನು ಮಾಡಿಕೊಳ್ಳಬೇಕು. ದೇಶಪಾಂಡೆಯವರ ರಾಜಕೀಯ ಗರಡಿಯಲ್ಲಿಯೇ ಬೆಳೆದು ಬಂದ ಸುನೀಲ ಹೆಗಡೆ ಮತ್ತು ಅವರ ತಂದೆ ವಿ.ಡಿ.ಹೆಗಡೆ ಈ ಜಿಲ್ಲೆ ಮತ್ತು ಕ್ಷೇತ್ರದಲ್ಲಿ ಅಧಿಕಾರವನ್ನು ಅನುಭವಿಸಿದವರು. ವಿ.ಡಿ. ಹೆಗಡೆ ವಿಧಾನಪರಿಷತ್ ಸದಸ್ಯರಾಗಿ ಹೇಗೆ ಆಯ್ಕೆಯಾದರು ಎನ್ನುವುದನ್ನು ಹೆಗಡೆ ಒಮ್ಮೆ ಪ್ರಶ್ನೆ ಮಾಡಿಕೊಳ್ಳಲಿ.ಒಮ್ಮೆ ಶಾಸಕರಾಗಿ ಆಯ್ಕೆ ಆಗಿರುವ ಸುನೀಲ ಹೆಗಡೆ ದೇಶಪಾಂಡೆ ವಿರುದ್ಧ ನೀಡಿರುವ ಹೇಳಿಕೆ ಅವರ ಆತ್ಮಸಾಕ್ಷಿಗೆ ವಿರುದ್ಧವಾದದ್ದು. ಈ ಹಿಂದೆ ಬಿಜೆಪಿ ಸರ್ಕಾರ ಇದ್ದಾಗ ದೇಶಪಾಂಡೆ ಯವರಿಗೆ ಅತ್ಯುತ್ತಮ ಶಾಸಕ ಪ್ರಶಸ್ತಿ ನೀಡಿರುವುದನ್ನು ಹೆಗಡೆ ನೆನೆಯಲಿ ಎಂದಿದ್ದಾರೆ.

ಗೋಬ್ಯಾಂಕ್ ಆಲೆಮನೆ ಹಬ್ಬಕ್ಕೆ ಚಾಲನೆ

ಕುಮಟಾ: ತಲೆತಲಾಂತರಗಳಿಂದ ಗೋವಿನ ಮಹತ್ವವನ್ನು ಜನಮನದಲ್ಲಿ ಬಿತ್ತರಿಸಿ ವೈದಿಕ ಧರ್ಮವನ್ನು ಉಳಿಸಿಕೊಂಡು ಬಂದವರು ವೈದಿಕರು. ಆದ್ದರಿಂದಲೇ ಈ ವರ್ಷದ ಆಲೆಮನೆ ಹಬ್ಬದ ಮೊದಲ ದಿನ ವೈದಿಕರಿಂದಲೇ ಉದ್ಘಾಟನೆ ಮತ್ತು ಸಮಾವೇಶ ಆಯೋಜಿಸಲಾಗಿದೆ ಎಂದು ಹೊಸಾಡದ ಅಮೃತಧಾರಾ ಗೋಬ್ಯಾಂಕ್ ಅಧ್ಯಕ್ಷ ಮುರಳೀಧರ ಪ್ರಭು ಅಭಿಪ್ರಾಯಪಟ್ಟರು.

ಅವರು ಹೊಸಾಡಿನ ಅಮೃತಧಾರಾ ಗೋಬ್ಯಾಂಕ್‌ನಲ್ಲಿ ಪ್ರಾರಂಭವಾದ ಆಲೆಮನೆ ಹಬ್ಬದ ಪ್ರಾಸ್ತಾವಿಕ ಮಾತನಾಡಿದರು.

ತಲೆತಲಾಂತರಗಳಿಂದ ಈ ಭೂಮಿಯ ಉಸಿರಿನೊಂದಿಗೆ ಬೆಸೆದುಕೊಂಡಿರುವ ಗೋಮಾತೆಯ ಮಹಿಮೆ ಕೇವಲ ಆಚಾರ-ವಿಚಾರಗಳಲ್ಲಿ ಮಾತ್ರವಲ್ಲ, ನಮ್ಮ ಸಂಸ್ಕೃತಿ, ಸಂಸ್ಕಾರ ಮತ್ತು ಆತ್ಮಜೀವನದಲ್ಲಿಯೂ ಆಳವಾಗಿ ಬೇರೂರಿದೆ. ಈ ಮಹತ್ವವನ್ನು ಕಾಲಚಕ್ರದ ಅಲೆಮಾಲೆಗಳ ನಡುವೆಯೂ ಜನಮನದಲ್ಲಿ ಜೀವಂತವಾಗಿ ಉಳಿಸಿಕೊಂಡವರು ವೈದಿಕರು. ವೇದಘೋಷದ ಮೂಲಕ ಸನಾತನ ಸಂಸ್ಕೃತಿಗೆ ಕಾವಲಾಗಿ ನಿಂತವರು ಇವರು ಎಂದು ಹೇಳಿದರು. ಕಾಮಧೇನುವಿನ ಸನ್ನಿಧಿಯಲ್ಲಿ ಕಾಮಧೇನು ಹವನ ಹಾಗೂ ಪೂಜೆ ನೆರವೇರಿಸುವ ಮೂಲಕ ಹಬ್ಬಕ್ಕೆ ಚಾಲನೆ ನೀಡಲಾಯಿತು.ಶ್ರೀಪಾದ ಭಟ್ಟರು, ವೇದಮೂರ್ತಿ ಪರಮೇಶ್ವರ ಮಾರ್ಕಾಂಡೆ, ವಿಘ್ನೇಶ್ವರ ಭಟ್ಟರು ಮಾತನಾಡಿದರು.ನಿವೃತ್ತ ಇಸ್ರೋ ವಿಜ್ಞಾನಿ ಪಿ.ಜಿ. ಭಟ್ಟರು ತಮ್ಮ ಅನುಭವ ಹಂಚಿಕೊಂಡರು.



ವೈದಿಕರು ಭಾಗವಹಿಸಿ ತಮ್ಮ ಗೋಪ್ರೇಮ ವ್ಯಕ್ತಪಡಿಸಿದರು. ವೇದಮೂರ್ತಿಗಳಿಗೆ ಗೌರವ ಸಮರ್ಪಿಸಲಾಯಿತು.

ಬ್ರಹ್ಮೂರಿನ ಕಲಾಬಳಗದವರು 'ಪುಣ್ಯಕೋಟಿ' ಕಥೆಯಾಧಾರಿತ ತಾಳಮದ್ದಲೆ ಪ್ರಸಂಗವನ್ನು ಪುಸ್ತಕ ಬಿಡುಗಡೆ ಜೊತೆಗೆ ಮೊದಲ ಬಾರಿಗೆ ಪ್ರದರ್ಶಿಸಿದರು. ಪುಣ್ಯಕೋಟಿ, ವ್ಯಾಘ್ರ, ಕರು ಹಾಗೂ ಇತರೆ ಪಾತ್ರಧಾರಿಗಳ ಭಾವಪೂರ್ಣ ಅಭಿನಯ ಪ್ರೇಕ್ಷಕರ ಕಣ್ಣಲ್ಲಿ ನೀರು ತರಿಸಿತು. ಹಿಮ್ಮೇಳವೂ ಮೆಚ್ಚುಗೆ ಪಡೆದಿತು. ಕಾಮಧೇನುವಿನ ಸನ್ನಿಧಿಯಲ್ಲಿ ವೈದಿಕರ ವೇದಘೋಷದೊಂದಿಗೆ ಫಲ ಸಮರ್ಪಿಸಿ ಪೂಜೆ ಸಲ್ಲಿಸಲಾಯಿತು. ಸಮಿತಿಯ ಸಂಚಾಲಕ ಅರುಣ ಹೆಗಡೆ ಸ್ವಾಗತಿಸಿದರು. ಸಭೆಯಲ್ಲಿ ವೇದಮೂರ್ತಿಗಳಾದ ಸುಬ್ರಹ್ಮಣ್ಯ ಭಟ್ಟ (ಗೋಕರ್ಣ), ಪರಮೇಶ್ವರ ಮಾರ್ಕಾಂಡೆ (ಗೋಕರ್ಣ), ವಿಘ್ನೇಶ್ವರ ಭಟ್ಟ (ಕತಗಾಲ), ಶ್ರೀಪಾದ ಭಟ್ಟ (ಮೂರೂರು) ಹಾಗೂ ನಿವೃತ್ತ ಇಸ್ರೋ ವಿಜ್ಞಾನಿ ಪಿ.ಜೆ. ಭಟ್ಟ ಉಪಸ್ಥಿತರಿದ್ದರು.

ಪದ್ಮಾವತಿ ಎನ್.ಮಾದಿಗರವರಿಗೆ ಸನ್ಮಾನ

ದಾಂಡೇಲಿ: ಸಿವಿಲ್ ನ್ಯಾಯಾಧೀಶರಾಗಿ ಆಯ್ಕೆಯಾದ ಪದ್ಮಾವತಿ ಎನ್. ಮಾದಿಗ ಅವರ ಮನೆಗೆ ಹೋಗಿ ಕನ್ನಡ ಸಾಹಿತ್ಯ ಪರಿಷತ್ತು ಸನ್ಮಾನಿಸಿ, ಗೌರವಿಸಿತು.

ಜಿಲ್ಲಾ ಹಾಗೂ ತಾಲೂಕು ಕನ್ನಡ ಸಾಹಿತ್ಯ ಪರಿಷತ್ತಿನ ಆಶ್ರಯದಲ್ಲಿ ಹಮ್ಮಿಕೊಂಡ ಸಾಧಕರ ಮನೆಗೆ ಸಾಹಿತ್ಯ ಪರಿಷತ್ತು ಎನ್ನುವ ಕಾರ್ಯಕ್ರಮದಲ್ಲಿ ಈ ಗೌರವ ಸನ್ಮಾನ ಕಾರ್ಯಕ್ರಮ ನಡೆಯಿತು.

ನೂತನವಾಗಿ ನ್ಯಾಯಾಧೀಶರಾಗಿ ಆಯ್ಕೆಯಾದ ಪದ್ಮಾವತಿಯವರನ್ನು ಸನ್ಮಾನಿಸಿ ಮಾತನಾಡಿದ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಬಿ.ಎನ್ .ವಾಸರೆಯವರು ಪದ್ಮಾವತಿ ಎನ್. ಮಾದಿಗರವರ ಸಾಧನೆ ಇಡೀ ದಾಂಡೇಲಿಗೆ ಹೆಮ್ಮೆ ತರುವಂತದ್ದು. ಪದ್ಮಾವತಿಯವರ ಸಾಧನೆ ಇಂದಿನ ಯುವ ಜನರಿಗೆ ಪ್ರೇರಣೆಯಾಗಬೇಕು ಎಂದರು.

ಲೇಖಕಿ ನಾಗರೇಖಾ ಗಾಂವಕರ, ಕೊಂಕಣಿ ಅಕಾಡೆಮಿಯ ಮಾಜಿ ಅಧ್ಯಕ್ಷ ಆರ್.ಪಿ. ನಾಯ್ಕ, ಕಸಾಪ ಆಜೀವ ಸದಸ್ಯ ಮೋಹನ ಮಾತನಾಡಿದರು.

ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಗೌರವ ಕೋಶಾಧ್ಯಕ್ಷ ಮುರ್ತಜಾ ಹುಸೇನ್ ಆನೆಹೊಸೂರ, ದಾಂಡೇಲಿ ತಾಲೂಕು ಘಟಕದ ಗೌರವ ಕಾರ್ಯದರ್ಶಿಗಳಾದ ಗುರುಶಾಂತ ಜಡೆಹಿರೇಮಠ, ಪ್ರವೀಣ ನಾಯ್ಕ, ಗೌರವ ಕೋಶಾಧ್ಯಕ್ಷ ಶ್ರೀಮಂತ ಮದರಿ, ಕರ್ನಾಟಕ ಸಂಘದ ಪ್ರಧಾನ ಕಾರ್ಯದರ್ಶಿ ಕೀರ್ತಿ ಗಾಂವ್ಕರ, ಸಾಹಿತಿ ಪ್ರವೀಣ್ ನಾಯಕ, ಹಿಚಕಡ, ಪ್ರಮುಖರಾದ ತಸವರ, ಸೌದಾಗರ, ಎನ್. ಆರ್.ನಾಯ್ಕ, ಸುರೇಶ ಕಾಮತ, ಫ್ರಾನ್ಸಿಸ್ ಮಸ್ಕರಿನಸ್, ಅನಿಲ್ ನಾಯ್ಕರ, ಸುಧಾಕರ ಶೆಟ್ಟಿ, ಡಿ. ಸ್ಯಾಮ್ಸನ, ರತ್ನದೀಪ.ಎನ್.ಎಮ್., ಅಡಿವೆಪ್ಪ ಭದ್ರಕಾಳಿ, ಮ್ಯಾಥ್ಯೂ ಕೊಂಡಿಟ್ಟಿ, ಮಾದೇವ ಸಾಂಗ್ಲೀಕರ, ಜಲಜಾ ವಾಸರೆ ಇದ್ದರು.



ಅಂಕೋಲಾ-ಗೋಕರ್ಣ ಸಂಪರ್ಕ ಸೇತುವೆಗೆ ನಾಳೆ ಸಿಎಂ ಚಾಲನೆ

ಅಂಕೋಲಾ: ತಾಲೂಕಿನ ಮಂಜಗುಣಿ ಬಳಿ ಗಂಗಾವಳಿ ನದಿಗೆ ನಿರ್ಮಿಸಿರುವ ಅಂಕೋಲಾ ಗೋಕರ್ಣ ಸಂಪರ್ಕ ಕಲ್ಪಿಸುವ ಸೇತುವೆಗೆ ಫೆ.22ರಂದು ಅಧಿಕೃತ ಚಾಲನೆ ದೊರಕಲಿದ್ದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಸೇತುವೆಯ ಲೋಕಾರ್ಪಣೆ ಮಾಡಲಿದ್ದಾರೆ.

ಮುಖ್ಯಮಂತ್ರಿಗಳ ಆಗಮನದ ಹಿನ್ನೆಲೆಯಲ್ಲಿ ಸೇತುವೆ ಇರುವ ಪ್ರದೇಶಕ್ಕೆ ಉಕ ಜಿಲ್ಲಾ

ಕಾರ್ಯದರ್ಶಿಗಳು ಸೇರಿದಂತೆ ವಿವಿಧ ಅಧಿಕಾರಿಗಳ ತಂಡ ಭೇಟಿ ನೀಡಿ ಕಾರ್ಯಕ್ರಮಕ್ಕೆ ಸಂಬಂಧಿಸಿದಂತೆ ಯೋಜನೆಗಳನ್ನು ರೂಪಿಸುತ್ತಿದ್ದು, ಮುಖ್ಯಮಂತ್ರಿಗಳ ಭದ್ರತೆಯ ಕುರಿತಂತೆ ಪೊಲೀಸ್ ಇಲಾಖೆಯ ಹಿರಿಯ ಅಧಿಕಾರಿಗಳು ಸ್ಥಳದಲ್ಲಿ

ಬೀಡುಬಿಟ್ಟು ರೂಪರೇಶೆಗಳನ್ನು ತಯಾರಿಸುತ್ತಿದ್ದಾರೆ.

ಮುಖ್ಯಮಂತ್ರಿಗಳ ಹೆಲಿಕಾಪ್ಟರ್ ಇಳಿಯುವ ಸ್ಥಳದಲ್ಲಿ ಬದಲಾವಣೆ

ಮಾಡಲಾಗಿದ್ದು, ಬಾಸಗೋಡದ ನಡುಬೇಣ ಮೈದಾನದ ಬದಲು ಇದೀಗ ಸೇತುವೆಗೆ ತೀರ ಸಮೀಪ ಇರುವ ಮಂಜಗುಣಿಯ ಗುರುದಾಸ ಪ್ರೌಢಶಾಲೆಯ ಪಕ್ಕದ ಖಾಲಿ ಜಮೀನಿನಲ್ಲಿ ಹೆಲಿಕಾಪ್ಟರ್ ಇಳಿಯುವಂತೆ ಹೆಲಿಪ್ಯಾಡ್ ನಿರ್ಮಾಣ ಮಾಡಲಾಗುತ್ತಿದೆ.



ಫೆ.22ರಂದು ಬೆಳಗ್ಗೆ 10 ಗಂಟೆಗೆ ಬೆಂಗಳೂರಿನ ಎಚ್‌ಎಎಲ್ ವಿಮಾನ ನಿಲ್ದಾಣದಿಂದ ವಿಶೇಷ ವಿಮಾನದಲ್ಲಿ ಹೊರಟು 11 ಗಂಟೆಗೆ ಹುಬ್ಬಳ್ಳಿ ವಿಮಾನ ನಿಲ್ದಾಣ ತಲುಪಲಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ ಅಲ್ಲಿಂದ 11.10 ಕ್ಕೆ ಹೆಲಿಕಾಪ್ಟರ್ ಮೂಲಕ ಹೊರಟು 11.50 ಕ್ಕೆ ಅಂಕೋಲಾ ತಲುಪಲಿದ್ದು, ಕರ್ನಾಟಕ ರಾಜ್ಯ ರಸ್ತೆ ಅಭಿವೃದ್ಧಿ ನಿಗಮದಿಂದ ನಿರ್ಮಾಣ ಮಾಡಲಾಗಿರುವ ಗಂಗಾವಳಿ ಸೇತುವೆ ಉದ್ಘಾಟಿಸಲಿದ್ದಾರೆ.

ಅಂಕೋಲಾ ಮತ್ತು ಕುಮಟಾ ಎರಡೂ ತಾಲೂಕುಗಳ ವ್ಯಾಪ್ತಿ ಹೊಂದಿರುವ ಸೇತುವೆಯ ಮಧ್ಯಭಾಗದಲ್ಲಿ ಉದ್ಘಾಟನಾ ಕಾರ್ಯಕ್ರಮ ನಡೆಯಲಿದ್ದು, ಮಂಜಗುಣಿಯಲ್ಲಿ ಸಭಾ ಕಾರ್ಯಕ್ರಮ ನಡೆಸಲು ಉದ್ದೇಶಿಸಲಾಗಿದೆ.


ಕಾರವಾರ ಅಂಕೋಲಾ ಕ್ಷೇತ್ರದ ಶಾಸಕ ಸತೀಶ ಸೈಲ್ ಅವರ ಕನಸಿನ ಸೇತುವೆ ಎಂದೇ ಹೇಳಲಾಗುವ ಸುಮಾರು 28.71 ಕೋಟಿ ರೂಪಾಯಿ ವೆಚ್ಚದ ಗಂಗಾವಳಿ ಸೇತುವೆಯ ಕಾಮಗಾರಿ 2018 ರ ಮಾರ್ಚ ತಿಂಗಳಲ್ಲಿ ಆರಂಭವಾದರೂ ನಂತರದ ಕೆಲವು ವರ್ಷ ಕೋವಿಡ್, ಕೂಡು ರಸ್ತೆಯ ಸಮಸ್ಯೆ ಮೊದಲಾದ ಕಾರಣಗಳಿಂದ ಸೇತುವೆ ಕಾಮಗಾರಿ ಅಪೂರ್ಣವಾಗಿ ಉಳಿದುಕೊಳ್ಳುವಂತಾಗಿತ್ತು.

ಐದು ವರ್ಷಗಳ ನಂತರ ಸತೀಶ ಸೈಲ್ ಅವರು ಎರಡನೇ ಬಾರಿಗೆ ಮತ್ತೆ ಶಾಸಕರಾಗಿ ಸೇತುವೆಯನ್ನು ಪೂರ್ಣಗೊಳಿಸಲು ಕೈಗೊಂಡ ಸತತ ಪ್ರಯತ್ನಗಳ ಫಲವಾಗಿ ಸೇತುವೆ ಪೂರ್ಣಗೊಂಡು ಸಂಚಾರಕ್ಕೆ ತೆರೆದುಕೊಂಡಿದ್ದು ಈಗಾಗಲೇ ಪ್ರತಿದಿನ ಹಲವಾರು ವಾಹನಗಳು ಸಂಚರಿಸುತ್ತಿವೆ.

ಅಂಕೋಲಾ ಗೋಕರ್ಣ ನಡುವಿನ ದೂರವನ್ನು ಸುಮಾರು 18 ಕಿಲೋ ಮೀಟರ್ ಗಳಷ್ಟು ಕಡಿಮೆ ಮಾಡುವ ಈ ಸೇತುವೆಯ ನಿರ್ಮಾಣದಿಂದ ಪ್ರವಾಸಿಗರಿಗೆ

ಸಾಕಷ್ಟು ಅನುಕೂಲ ಆಗಿದ್ದು, ಮುಖ್ಯಮಂತ್ರಿಗಳಿಂದ ಅಧಿಕೃತ ಉದ್ಘಾಟನೆಯ ನಂತರ ಸಾರಿಗೆ ಸಂಸ್ಥೆಯ ಬಸ್‌ಗಳು ಸೇತುವೆಯ ಮೂಲಕ ಸಂಚರಿಸಲಿದ್ದು, ಪ್ರಯಾಣಿಕರಿಗೆ ಶಾಲಾ ವಿದ್ಯಾರ್ಥಿಗಳಿಗೆ ಸಾಕಷ್ಟು ಅನುಕೂಲ ಆಗಲಿದೆ.

ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಯಾಗಿ ಅಭಿವೃದ್ಧಿಪಡಿಸಲು ಆರ್‌ವಿಡಿ ಒತ್ತಾಯ



ಹಳಿಯಾಳ: ಉತ್ತರ ಕನ್ನಡ ಜಿಲ್ಲೆ ವಿಶಾಲ ಭೌಗೋಳಿಕ ವ್ಯಾಪ್ತಿಯನ್ನು ಹೊಂದಿರುವ ಜಿಲ್ಲೆ ಯಾಗಿದೆ. ಇತ್ತೀಚಿನ ದಿನಗಳಲ್ಲಿ ಅಪಘಾತಗಳ ಪ್ರಮಾಣ ಹಾಗೂ ಗಂಭೀರ ಆರೋಗ್ಯ ಸಮಸ್ಯೆಗಳು ಹೆಚ್ಚುತ್ತಿರುವ ಹಿನ್ನೆಲೆಯಲ್ಲಿ, ಜಿಲ್ಲೆಯಲ್ಲೇ ಸುಸಜ್ಜಿತ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಯ ಕೊರತೆಯಿಂದ ರೋಗಿಗಳು ಹುಬ್ಬಳ್ಳಿ, ಮಣಿಪಾಲ, ಬೆಳಗಾವಿ, ಗೋವಾ ಹಾಗೂ ಬೆಂಗಳೂರು ನಗರಗಳಿಗೆ ಚಿಕಿತ್ಸೆಗಾಗಿ ತೆರಳಬೇಕಾದ ಅನಿವಾರ್ಯ ಪರಿಸ್ಥಿತಿ ನಿರ್ಮಾಣವಾಗಿದೆ.

ಉತ್ತರಕನ್ನಡ ಜಿಲ್ಲೆಯ ಜನರ ದೀರ್ಘಕಾಲದ ಬೇಡಿಕೆಯನ್ನು ಪರಿಗಣಿಸಿ, ಮುಂಬರುವ ಆಯವ್ಯಯದಲ್ಲಿ ಕಾರವಾರ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯನ್ನು ಹೆಚ್ಚುವರಿ ಮೂಲಸೌಕರ್ಯ ಹಾಗೂ ಸುಧಾರಿತ ಸೌಲಭ್ಯಗಳಿಂದ ಬಲಪಡಿಸಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಯಾಗಿ ಅಭಿವೃದ್ಧಿಪಡಿಸಲು ಅಗತ್ಯ ಅನುದಾನವನ್ನು ಮೀಸಲಿಡುವಂತೆ ಮುಖ್ಯಮಂತ್ರಿಗಳಿಗೆ ಹಾಗೂ ಡಾ.ಶರಣ ಪ್ರಕಾಶ ಪಾಟೀಲ ಅವರಿಗೆ ಪತ್ರ ಬರೆದು, ವೈಯಕ್ತಿಕವಾಗಿ ಕೂಡ ವಿನಂತಿಸಿಕೊಂಡಿದ್ದೇನೆ ಎಂದು ಹಳಿಯಾಳದ ಹಿರಿಯ ಶಾಸಕ ಆರ್. ವಿ.ದೇಶಪಾಂಡೆ ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದಾರೆ.

ಪೊಲೀಸ್ ಇಲಾಖೆ ಸಿಬ್ಬಂದಿಗೆ ಸನ್ಮಾನ



ಯಲ್ಲಾಪುರ: ಗ್ರಾಮದೇವಿ ಜಾತ್ರಾಮಹೋತ್ಸವದ ಅವಧಿಯಲ್ಲಿ ಸಂಚಾರ ವ್ಯವಸ್ಥೆ, ಭದ್ರತಾ ಕ್ರಮ ಮತ್ತು ಸಾರ್ವಜನಿಕ ಶಿಸ್ತು ಕಾಪಾಡುವಲ್ಲಿ ಅತ್ಯಂತ ಅಚ್ಚುಕಟ್ಟಾಗಿ ಕರ್ತವ್ಯ ನಿರ್ವಹಿಸಿದ ಪೊಲೀಸ್ ಇಲಾಖೆಯ ಸಿಬ್ಬಂದಿಗಳನ್ನು ಶಾಸಕ ಶಿವರಾಮ ಹೆಬ್ಬಾರ್ ಪಟ್ಟಣದ ಈಶ್ವರಿ ವಿಶ್ವವಿದ್ಯಾಲಯದ ಸಭಾಂಗಣದಲ್ಲಿ ಸನ್ಮಾನಿಸಿದರು. ಈ ಸಂದರ್ಭದಲ್ಲಿ ಮಾತನಾಡಿದ ಅವರು, ಜಾತ್ರೆ ಯಶಸ್ವಿಯಾಗಿ ನೆರವೇರಲು ಪೋಲಿಸ್ ಇಲಾಖೆಯ ಸಮರ್ಪಿತ ಸೇವೆ ಪ್ರಮುಖ ಕಾರಣವಾಗಿದೆ. ಜನರ ಸುರಕ್ಷತೆಗಾಗಿ ಹಗಲು-ರಾತ್ರಿ ಶ್ರಮಿಸಿದ ಪ್ರತಿಯೊಬ್ಬ ಸಿಬ್ಬಂದಿಗೆ ಅಭಿನಂದನೆ ತಿಳಿಸಿದರು.

ಪೊಲೀಸ್ ಸಿಬ್ಬಂದಿಗೆ ಪ್ರಶಂಸನೆ: ಜಾತ್ರಾ ಕರ್ತವ್ಯಕ್ಕೆ ನಿಯೋಜನೆಗೊಂಡ ಪೊಲೀಸ್ ಸಿಬ್ಬಂದಿಗೆ ಪಟ್ಟಣದ ಈಶ್ವರಿ ವಿಶ್ವವಿದ್ಯಾಲಯದಲ್ಲಿ ಪೊಲೀಸ್ ಇಲಾಖೆಯ ವತಿಯಿಂದ ಪ್ರತಿದಿನ ಏರ್ಪಡಿಸಲಾಗಿದ್ದ ಊಟೋಪಚಾರಕ್ಕೆ ಸಿಬ್ಬಂದಿಗಳು ಮೆಚ್ಚುಗೆ ವ್ಯಕ್ತಪಡಿಸಿದರು. ಪೊಲೀಸ್ ವರಿಷ್ಠರಾದಿಯಾಗಿ ಯಲ್ಲಾಪುರದ ಎಲ್ಲ ಅಧಿಕಾರಿಗಳಿಗೆ ಕೃತಜ್ಞತೆ ಸಲ್ಲಿಸಿದರು.ಜಾತ್ರಾ ಸಮಯದಲ್ಲಿ ಕರ್ತವ್ಯ ನಿರ್ವಹಿಸಿದ ಪೊಲೀಸ್ ಇಲಾಖೆಯ ಅಧಿಕಾರಿಗಳು ಮತ್ತು ಸ್ವಯಂ ಸೇವಕರನ್ನು ದೇವಸ್ಥಾನದ ಆಡಳಿತ ಮಂಡಳಿಯ ವತಿಯಿಂದ ಸನ್ಮಾನಿಸಲಾಯಿತು. ದೇವಸ್ಥಾನದ ಮ್ಯಾನೇಜಿಂಗ್ ಟ್ರಸ್ಟಿ ರಾಜೇಂದ್ರ ಪ್ರಸಾದ ಭಟ್, ಆಯಗಾರ ಸಮಿತಿಯ ಮನೋಹರ ಹೆಗಡೆ, ಪ್ರಮುಖರಾದ ಬಾಲು ನಾಯಕ, ಗೋಪಾಲಕೃಷ್ಣ ಗಾಂವ್ಕರ್, ಅರ್ಚಕ ವೃಂದದವರು ಉಪಸ್ಥಿತರಿದ್ದರು.


ಕಿರುಸುದ್ದಿ



ರಟ್ಟೀಹಳ್ಳಿ: ತಾಲೂಕಾ ಆಡಳಿತ ವತಿಯಿಂದ ಜರುಗಿದ ಶ್ರೀ ಛತ್ರಪತಿ ಶಿವಾಜಿ ಮಹಾರಾಜರ ಜಯಂತಿ ಕಾರ್ಯಕ್ರಮದಲ್ಲಿ ಕಣ್ಮನ ಸೆಳೆದ ಶಿವಾಜಿ ಮಹಾರಾಜರ ವೇಷದಾರಿ ಪೃಥ್ವಿಕ್ ಸುರಗಿಹಳ್ಳಿ.

ನಾಳೆ ಶ್ರೀನಿವಾಸ ಕಲ್ಯಾಣ ಮಹೋತ್ಸವ

ಹಾವೇರಿ: ರಾಯರ ವರ್ಧಂತಿ ಪ್ರಯುಕ್ತ ಹಾವೇರಿ ನಗರದ ದೇಸಾಯಿ ಗಲ್ಲಿಯಲ್ಲಿರುವ ರಾಘವೇಂದ್ರ ಮಠ (ಕಮಲ ಕಲ್ಯಾಣ ಮಂಟಪ)ದಲ್ಲಿ ಲೋಕ ಕಲ್ಯಾಣಾರ್ಥವಾಗಿ ಫೆ.22ರಂದು ಸಂಜೆ 5ಗಂಟೆಗೆ ಶ್ರೀನಿವಾಸ ಕಲ್ಯಾಣ ಮಹೋತ್ಸವ ಕಾರ್ಯಕ್ರಮ ನಡೆಯಲಿದೆ.



ಆದ್ದರಿಂದ ಈ ಮಂಗಲ ಕಾರ್ಯದಲ್ಲಿ ಸಕಲ ಭಕ್ತವೃಂದದವರು ಭಾಗವಹಿಸಿ ಯಶಸ್ವಿಗೊಳಿಸಬೇಕೆಂದು ಆಯೋಜಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ. ಹೆಚ್ಚಿನ ಮಾಹಿತಿಗೆ ರಾಘವೇಂದ್ರಾಚಾರ್ಯ ಹೊಸಳ್ಳಿ ಸಂಪರ್ಕಿಸಬಹುದು ಎಂದು ಪ್ರಕಟಣೆಯಲ್ಲಿ ತಿಳಿಸಿದೆ.

ಶೇಖರಗೌಡ ರಾಮತ್ನಾಳ ಜಿಲ್ಲಾ ಪ್ರವಾಸ

ಹಾವೇರಿ: ಕರ್ನಾಟಕ ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗದ ಸದಸ್ಯ ಶೇಖರಗೌಡ ರಾಮತ್ನಾಳ ಅವರು ಫೆ. 23 ಹಾಗೂ 24 ರಂದು ಹಾವೇರಿ ಜಿಲ್ಲೆಯಲ್ಲಿ ಪ್ರವಾಸ ಕೈಗೊಂಡು ವಿವಿಧ ಕಾರ್ಯಕ್ರಮಗಳಲ್ಲಿ ಭಾಗವಹಿಸಲಿದ್ದಾರೆ. ಫೆ.23ರಂದು ಹಿರೇಅರಳಿಹಳ್ಳಿಯಿಂದ ಹೊರಟು ಸಂಜೆ 5 ಗಂಟೆಗೆ ಹಾವೇರಿಗೆ ಆಗಮಿಸಿ ವಾಸ್ತವ್ಯ ಮಾಡಲಿದ್ದಾರೆ. ಫೆ.24ರಂದು ಬೆಳಗ್ಗೆ 10 ಗಂಟೆಗೆ ಮಕ್ಕಳ ವಿಶೇಷ ಪೊಲೀಸ್ ಘಟಕದ ಅಧಿಕಾರಿಗಳಿಗೆ ಆಯೋಜಿಸಿರುವ ಮಕ್ಕಳ ಹಕ್ಕುಗಳು, ಪೋಕ್ಸೋ ಮತ್ತು ಬಾಲ್ಯವಿವಾಹ ನಿಷೇಧ ಕಾಯ್ದೆ ಕುರಿತು ತರಬೇತಿ ಕಾರ್ಯಾಗಾರದ ಉದ್ಘಾಟನೆ ಮಾಡಲಿದ್ದಾರೆ. ಮಧ್ಯಾಹ್ನ 12 ಗಂಟೆಗೆ ವಸತಿ ನಿಲಯ, ಶಾಲೆ, ಪದವಿ ಪೂರ್ವ ಕಾಲೇಜ್, ಕೋಚಿಂಗ್ ಸೆಂಟರ್, ಜಿಲ್ಲಾ ಆಸ್ಪತ್ರೆ ಮತ್ತು ಮಕ್ಕಳ ಪಾಲನಾ ಸಂಸ್ಥೆಗಳಿಗೆ ಭೇಟಿ ಹಾಗೂ ಪರಿಶೀಲನೆ ನಡೆಸಲಿದ್ದಾರೆ. ಮಧ್ಯಾಹ್ನ 2 ಗಂಟೆಗೆ ತಹಶೀಲ್ದಾರ ಕಚೇರಿಯಲ್ಲಿ ಶಿಗ್ಗಾಂವ ತಾಲೂಕು ಮಕ್ಕಳ ರಕ್ಷಣಾ ಸಮಿತಿಯ ಸದಸ್ಯರುಗಳೊಂದಿಗೆ ಪ್ರಗತಿ ಪರಿಶೀಲನಾ ಸಭೆಯಲ್ಲಿ ಭಾಗವಹಿಸಲಿದ್ದಾರೆ. ಸಂಜೆ 5 ಗಂಟೆಗೆ ಹಿರೇಅರಳಿಹಳ್ಳಿಗೆ ಪ್ರಯಾಣ ಬೆಳೆಸಲಿದ್ದಾರೆ.

3 ಸಂಘಗಳ ನೋಂದಣಿ ರದ್ದತಿಗೆ ಚಿಂತನೆ

ಹಾವೇರಿ: ಜಿಲ್ಲೆಯ ಹಾನಗಲ್ ತಾಲೂಕಿನ ಮೂರು ಗ್ರಾಮಗಳ ಹಾಲು ಉತ್ಪಾದಕರ ಸಹಕಾರ ಸಂಘಗಳು ತಮ್ಮ ಉಪವಿಧಿಯ ಉದ್ದೇಶಗಳನ್ವಯ ಕಾರ್ಯನಿರ್ವಹಿಸಲು ವಿಫಲವಾಗಿ ನಿಷ್ಕ್ರೀಯಗೊಂಡಿವೆ. ಇಂತಹ ಸಂಘಗಳನ್ನು ಸಮಾಪನೆಗೊಳಿಸಿ, ಅವುಗಳ ನೋಂದಣಿ ರದ್ದುಪಡಿಸಲು ಉದ್ದೇಶಿಸಲಾಗಿದೆ ಎಂದು ಸಹಕಾರಿ ಸಂಘಗಳ ಉಪನಿಬಂಧಕರು ತಿಳಿಸಿದ್ದಾರೆ. ಡೊಮ್ಮನಾಳ, ಚಿಕ್ಕಹುಲ್ಲಾಳ ಜಾಗೂ ತಿಳವಳ್ಳಿ ಗ್ರಾಮಗಳ ಹಾಲು ಉತ್ಪಾದಕರ ಸಹಕಾರ ಸಂಘಗಳನ್ನು ರದ್ದುಪಡಿಸಲು ಗುರುತಿಸಲಾಗಿದೆ. ಮೇಲ್ಕಂಡ ಗ್ರಾಮಗಳ ಹಾಲು ಉತ್ಪಾದಕರ ಸಹಕಾರ ಸಂಘಗಳ ಸದಸ್ಯರು ಅಥವಾ ಆಡಳಿತ ಮಂಡಳಿ ಸದಸ್ಯರಿಗೆ ಈ ಕುರಿತು ಆಕ್ಷೇಪಣೆಗಳಿದ್ದಲ್ಲಿ ಈ ಪ್ರಕಟಣೆ ಹೊರಡಿಸಿದ ದಿನಾಂಕದಿಂದ ಏಳು ದಿನದೊಳಗಾಗಿ ಸೂಕ್ತ ದಾಖಲಾತಿಗಳೊಂದಿಗೆ ಲಿಖಿತ ಆಕ್ಷೇಪಣೆಗಳನ್ನು ಸಹಕಾರ ಸಂಘಗಳ ಉಪನಿಬಂಧಕರು, ಹಾವೇರಿ ಜಿಲ್ಲೆ, ಹಾವೇರಿ ಈ ವಿಳಾಸಕ್ಕೆ ಸಲ್ಲಿಸಬೇಕು. ತಪ್ಪಿದಲ್ಲಿ ಯಾವುದೇ ಆಕ್ಷೇಪಣೆಗಳು ಇರುವುದಿಲ್ಲ ಎಂದು ಪರಿಗಣಿಸಿ ಈ ಸಂಘಗಳನ್ನು ಸಮಾಪನೆಗೊಳಿಸಿ ನೋಂದಣಿ ರದ್ದತಿಗೆ ಕ್ರಮವಹಿಸಲಾಗುವುದು ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.



ಹಾನಗಲ್ಲ: ಆರ್‌ಎಸ್‌ಎಸ್ ನೂರು ವರ್ಷದ ಸಂಭ್ರಾಮಾಚರಣೆ ಅಂಗವಾಗಿ ಗುರುವಾರ ಸಂಜೆ ಪಟ್ಟಣದ ಪ್ರಮುಖ ಬೀದಿಗಳಲ್ಲಿ ಬೈಕ್ ರ‍್ಯಾಲಿ ಆಯೋಜಿಸಲಾಗಿತ್ತು.

ಲೋಡ್ ಶೆಡ್ಡಿಂಗ್: ಫೆ.23ರಂದು ಪ್ರತಿಭಟನೆ

ಹಾನಗಲ್ಲ: ತಾಲೂಕಿನಲ್ಲಿ ವಿದ್ಯುತ್ ವ್ಯತ್ಯಯ ವಿರೋಧಿಸಿ ಫೆ.23 ರಂದು ಪಟ್ಟಣದಲ್ಲಿ ರೈತ ರ‍್ಯಾಲಿ ಹಾಗೂ ಮಹಾತ್ಮಾಗಾಂಧಿ ವೃತ್ತದಲ್ಲಿ ಪ್ರತಿಭಟನೆ ನಡೆಸುವುದಾಗಿ ತಾಲೂಕು ರೈತ ಸಂಘ ಹಾಗೂ ಹಸಿರು ಸೇನೆ ಅಧ್ಯಕ್ಷ ಮರಿಗೌಡ ಪಾಟೀಲ ತಿಳಿಸಿದರು.

ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕಳೆದೆರಡು ತಿಂಗಳಿನಿಂದ ತಾಲೂಕಿನಲ್ಲಿ ವಿದ್ಯುತ್ ಸರಬರಾಜು ಹದಗೆಟ್ಟಿದೆ. ಲೋವೋಲ್ಟೇಜ್ ಸಮಸ್ಯೆ, ಟಿಸಿ ಮೇಲಿಂದ ಮೇಲೆ ಸುಡುವುದು, ಸಕಾಲಕ್ಕೆ ಟಿಸಿ ಲಭ್ಯವಿಲ್ಲದಿರುವುದು, 7 ಗಂಟೆ ವಿದ್ಯುತ್ ಸರಬರಾಜು ಇಲ್ಲದಿರುವುದು, ಹೊಸ ಗ್ರಿಡ್‌ಗಳು ಬರಿ ಘೋಷಣೆಯಾಗಿ ಕಾಮಗಾರಿ ಆರಂಭ ಆಗುವುದೇ ಇರುವುದು. ರೈತರ ಹೊಸ ಪಂಪಸೆಟ್‌ಗಳಿಗೆ ಆರ್‌ಆರ್.ನಂಬರ ನೀಡಲು ನಿರಾಕರಿಸುತ್ತಿರುವುದು ರೈತರ ಸಹನೆ ಪರೀಕ್ಷಿಸಿದಂತಾಗುತ್ತಿದೆ. ಕೊಳವೆ ಭಾವಿ ಕೊರೆಯಿಸಿಕೊಳ್ಳುವುದೇ ದುಸ್ತರವಾದ ಈ ಸಂದರ್ಭದಲ್ಲಿ ವಿದ್ಯುತ್ ಸಂಪರ್ಕಕ್ಕಾಗಿ ಲಕ್ಷಾಂತರ ರೂ.ಖರ್ಚು ಮಾಡುವ ಶಕ್ತಿ ರೈತರಿಗಿಲ್ಲ. ಸರ್ಕಾರವೇ ವಿದ್ಯುತ್ ಒದಗಿಸುವ ಎಲ್ಲ ಸಾಮಗ್ರಿ ಒದಗಿಸಬೇಕು. ಇದಕ್ಕೆಲ್ಲ ಒತ್ತಾಯಿಸಿ, ಪ್ರತಿಭಟಿಸಿ ರ‍್ಯಾಲಿ ಸೇರಿದಂತೆ ರಾಸ್ತಾ ರೋಖೋ ನಡೆಸಲು ಉದ್ದೇಶಿಸಲಾಗಿದೆ. ಹುಬ್ಬಳ್ಳಿ ಹೆಸ್ಕಾಂ ಎಂಡಿ ಹಾಗೂ ವಿವಿಧ ಹಂತದ ಅಧಿಕಾರಿಗಳೇ ಈ ಪ್ರತಿಭಟನಾ ಸ್ಥಳಕ್ಕೆ ಬಂದು ರೈತರ ಸಮಸ್ಯೆಗಳಿಗೆ ಪರಿಹಾರವನ್ನು ಒದಗಿಸಬೇಕು ಎಂದರು. ರೈತ ಸಂಘದ ಜಿಲ್ಲಾ ಉಪಾಧ್ಯಕ್ಷ ಆಡಿವೆಪ್ಪ ಆಲದಕಟ್ಟಿ, ಎಂ.ಎಂ.ಬಡಗಿ, ಶ್ರೀಕಾಂತ ದುಂಡಣ್ಣನವರ, ನಿಂಗನಗೌಡ ಕರೆಗೌಡರ ಇದ್ದರು.



ರಟ್ಟೀಹಳ್ಳಿ: ಪ್ರಿಯದರ್ಶಿನಿ ಕಾಲೇಜಿನಲ್ಲಿ ತ್ರಿಪದಿ ಬ್ರಹ್ಮ ವರಕವಿ ಸರ್ವಜ್ಞ ಜಯಂತಿ ಆಚರಿಸಲಾಯಿತು. ಪ್ರಾ. ರಾಘವೇಂದ್ರಎ.ಜಿ, ಹರೀಶ.ಡಿ, ಭಿಮೇಶ.ಆರ್.ಕೆಂಚಳ್ಳಿ, ವಾಯ್.ವಾಯ್.ಮರಳೀಹಳ್ಳಿ, ಸಿ.ಎನ್.ಸೊರಟೂರ, ಸುನೀಲ ಹೆಚ್.ಎಮ್, ನಾಗರಾಜ ನಾಯ್ಕ, ಸತೀಶ ಮಡಿವಾಳರ, ಯಲ್ಲಪ್ಪ ಸುರಗೀಹಳ್ಳಿ, ಸುರೇಶ ಓಲೇಕಾರ ಉಪಸ್ಥಿತರಿದ್ದರು.

ನಾಳೆ ಹಿಂದೂ ಸಮ್ಮೇಳನ

ಹಾನಗಲ್ಲ: ಆರ್‌ಎಸ್‌ಎಸ್ ನೂರು ವರ್ಷದ ಸಂಭ್ರಾಮಾಚರಣೆ ಅಂಗವಾಗಿ ದೇಶದ 84 ಸಾವಿರ ಕಡೆಗಳಲ್ಲಿ ಹಿಂದೂ ಸಮಾವೇಶಗಳನ್ನು ಆಯೋಜಿಸಲಾಗಿದ್ದು, ಹಾನಗಲ್ಲ ಪಟ್ಟಣದಲ್ಲಿ ಫೆ.22ರಂದು ಹಿಂದೂ ಸಮ್ಮೇಳನ ಹಾಗೂ ಶೋಭಾ ಯಾತ್ರೆ ನಡೆಯಲಿದ್ದು, ಐದು ಸಾವಿರ ಜನರು ಕಾರ್ಯಕ್ರಮದಲ್ಲಿ ಪಾಲ್ಗೊಳ್ಳುವರು ಎಂದು ಸಮ್ಮೇಳನದ ಅಧ್ಯಕ್ಷ ರವಿಕಿರಣ ಪಾಟೀಲ ತಿಳಿಸಿದರು.

ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ರಾಷ್ಟ್ರೀಯ ಸ್ವಯಂಸೇವಕ ಸಂಘ ಇಡೀ ದೇಶದಲ್ಲಿ ಸಮಾಜಮುಖಿ ಕಾರ್ಯಗಳ ಜೊತೆಗೆ ಹಿಂದೂ ಸಂಘಟನೆ, ರಾಷ್ಟ್ರೀಯ ಚಿಂತನಗಳನ್ನು ಸಮಾಜದಲ್ಲಿ ಬಿತ್ತಿ ಬೆಳೆಯುವ ಸತ್ಕಾರ್ಯದಲ್ಲಿ ಸಕ್ರೀಯವಾಗಿದೆ. ದೇಶದಲ್ಲಿ ಹಿಂದೂಗಳ ಮತಾಂತರ, ಭಯೋತ್ಪಾದನೆ, ಲವ್ ಜಿಹಾದಿ, ಜಾತಿ ವೈಷಮ್ಯಗಳು ಸಾಮಾಜಿಕ ಪಿಡುಗುಗಳಾಗಿದ್ದು ಇವುಗಳ ವಿರುದ್ಧ ಕಟಿಬದ್ಧವಾಗಿ ಆರ್‌ಎಸ್‌ಎಸ್ ಸಮರ್ಥವಾಗಿ ಹೋರಾಡುತ್ತಿದೆ. ಹಿಂದೂ ಸಂಘಟನೆಯನ್ನು ಬಲಿಷ್ಟಗೊಳಿಸುತ್ತಿದೆ ಎಂದರು.

> **ಶೋಭಾಯಾತ್ರೆ**
> ಮಧ್ಯಾಹ್ನ 3 ಗಂಟೆಗೆ ಪಟ್ಟಣದ ಎಸ್‌ಸಿಜೆಸಿ ಕಾಲೇಜಿನಿಂದ ಟಿಜಿ ರಸ್ತೆ ಮೂಲಕ ಬಿ.ಬಿ.ಪದಕಿ ವೃತ್ತ ಒಳಗೊಂಡು ತಾರಕೇಶ್ವರ ದೇವಸ್ಥಾನದವರೆಗೆ ಶೋಭಾ ಯಾತ್ರೆ ನಡೆಯಲಿದೆ.

ಫೆ.22ರಂದು ನಡೆಯುವ ಹಿಂದೂ ಸಮ್ಮೇಳನದ ಅಂಗವಾಗಿ ಪಟ್ಟಣದ 42ಕ್ಕೂ ಅಧಿಕ ಹಿಂದೂ ಸಮಾಜದ ಧಾರ್ಮಿಕ ಸಮುದಾಯ ಸಂಘಟನೆಗಳನ್ನು ಭೇಟಿ ಮಾಡಿ ವೀಳ್ಯ ನೀಡಿ ಸಮಾವೇಶಕ್ಕೆ ಸ್ವಾಗತಿಸಲಾಗಿದೆ.

ಶೋಭಾ ಯಾತ್ರೆಯಲ್ಲಿ ಮಹಾಪುರುಷರ ಟ್ಯಾಬ್ಲೋ ಸೇರಿದಂತೆ ವಿವಿಧ ಮಹಾಪುರುಷರ ವೇಶಭೂಷಣಗಳನ್ನು ಅಳವಡಿಸಲಾಗಿದೆ. ಸಮ್ಮೇಳನದಲ್ಲಿ ವಿಶೇಷವಾಗಿ ಗದಗ ಜಿಲ್ಲೆ ಹೊಳೆ ಆಲೂರಿನ ಜ್ಞಾನ ಸಿಂಧೂ ಅಂಧ ಮಕ್ಕಳ ವಸತಿ ಶಾಲೆ ಮಕ್ಕಳಿಂದ ಯೋಗ ಹಾಗೂ ಮಲ್ಲಕಂಬ ಪ್ರದರ್ಶನ ನಡೆಯಲಿದೆ. ವಿವಿಧ ಶಾಲಾ ಮಕ್ಕಳಿಂದ ನೃತ್ಯ ಪ್ರದರ್ಶನ ನಡೆಯಲಿದೆ ಎಂದು ತಿಳಿಸಿದರು.

ಸಂಜೆ 6 ಗಂಟೆಗೆ ತಾರೇಕೇಶ್ವರ ದೇವಸ್ಥಾನದ ಪಕ್ಕದ ಮೈದಾನದಲ್ಲಿ ನಡೆಯುವ ಧರ್ಮ ಸಭೆಯಲ್ಲಿ ಹಾವೇರಿ ಬಣ್ಣದ ಮಠದ ಅಭಿನವ ಮಲ್ಲಿಕಾರ್ಜುನ ಶಿವಾಚಾರ್ಯರು ಸಾನಿಧ್ಯವಹಿಸುವರು.

ಬೆಂಗಳೂರಿನ ಪ್ರಶಿಕ್ಷಣ ಭಾರತಿ ರಾಜ್ಯ ಯುವಾ ಬ್ರಿಗೇಡ್ ಪ್ರಕಲ್ಪ ಪ್ರಮುಖ ಹಾಗೂ ಸಂಪನ್ಮೂಲ ವ್ಯಕ್ತಿ ಕಿರಣ ರಆಮ ವಕ್ತಾರರಾಗಿ ಪಾಲ್ಗೊಳ್ಳುವರು. ಹಿಂದೂ ಸಮ್ಮೇಳನ ಅಧ್ಯಕ್ಷ ರವಿಕಿರಣ ಪಾಟೀಲ ಅಧ್ಯಕ್ಷತೆವಹಿಸುವರು.

ಸರ್ವಜ್ಞನ ತ್ರಿಪದಿಯಲ್ಲಿ ಜೀವನ ಸಾರ

ಹಾವೇರಿ: ತ್ರಿಪದಿ ವಚನ ಸಾಹಿತ್ಯದ ಮೂಲಕಸಮಾಜದಅಂಕುಡೊಂಕುಗಳನ್ನು ತಿದ್ದಿದವರು ತ್ರಿಪದಿ ಕವಿ ಸರ್ವಜ್ಞ. ಎಲ್ಲರೂ ಒಂದೇ ಎಂಬ ಸಂದೇಶ ನೀಡಿದ ಅವರು ಸಮ ಸಮಾಜ ನಿರ್ಮಾಣಕ್ಕೆ ಶ್ರಮಿಸಿದರು ಎಂದು ಜಿಲ್ಲಾಮಟ್ಟದ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ ಅಧ್ಯಕ್ಷ ಎಂ.ಎಂ. ಹಿರೇಮಠ ಹೇಳಿದರು.


ನಗರದ ಪ್ರವಾಸಿತಾಣ ಗಾಂಧಿ ಭವನದಲ್ಲಿ ಶುಕ್ರವಾರ ಜಿಲ್ಲಾಡಳಿತ, ಜಿಪಂ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹಾಗೂ ಹಾವೇರಿ ಜಿಲ್ಲಾ ಕುಂಬಾರ ಸಂಘದ ಸಹಯೋಗದಲ್ಲಿ ಜರುಗಿದ ತ್ರಿಪದಿಕವಿ ಸರ್ವಜ್ಞರ ಜಯಂತಿ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಸರ್ವಜ್ಞ ವೈಚಾರಿಕ ತ್ರಿಪದಿಗಳ ಚಕ್ರವರ್ತಿ, ನಾಡು ಕಂಡ ಶ್ರೇಷ್ಠ ಕವಿಯಾಗಿದ್ದು, ಜೀವನದ ಸಾರವನ್ನು ತಮ್ಮ ವಚನಗಳ ಮೂಲಕ ಸರಳವಾಗಿ ತಿಳಿಸಿದ್ದಾರೆ. ಸರ್ವಜ್ಞ ಅವರು ಈ ಜಿಲ್ಲೆಯಲ್ಲಿ ಜನಿಸಿದ್ದರು ಎಂಬುದು ನಮಗೆಲ್ಲ ಹೆಮ್ಮೆಯ, ಸಂತಸದ ವಿಷಯವಾಗಿದೆ. ಇಂದಿನ ಯುವ ಜನತೆ ಇಂತಹ ಮಹಾನ ವ್ಯಕ್ತಿಗಳ ಕುರಿತು ತಿಳಿದುಕೊಳ್ಳಬೇಕು. ಸಮಾಜ ಸುಧಾರಣೆಗೆ ಎಲ್ಲರೂ ಕೈಜೋಡಿಸಬೇಕು ಎಂದು ಹೇಳಿದರು.

ಜಿಲ್ಲಾ ಕುಂಬಾರ ಸಂಘದ ಅಧ್ಯಕ್ಷ ರೇವಣೆಪ್ಪ ಚಕ್ರಸಾಲಿ ಮಾತನಾಡಿ, ಸರ್ವಜ್ಞ ಅವರು ಜಾತಿ ವ್ಯವಸ್ಥೆಯನ್ನು ಕಟುವಾಗಿ ಟೀಕಿಸಿದ್ದರು ಹಾಗೂ ಸಮಾಜದ ಓರೆಕೋರೆಗಳನ್ನು ಎತ್ತಿ ತೋರಿಸಿದ ದಿಟ್ಟ ಕವಿಯಾಗಿದ್ದರು. ಕುಂಬಾರ ಸಮುದಾಯ ಬಹಳ ಹಿಂದುಳಿದ ಸಮುದಾಯವಾಗಿದ್ದು, ಸಮಾಜ ಬಾಂಧವರು ತಮ್ಮ ಮಕ್ಕಳನ್ನು ವಿದ್ಯಾವಂತರನ್ನಾಗಿ ಮಾಡಬೇಕು ಹಾಗೂ ಒಗ್ಗಟ್ಟಿನಿಂದ ಸಮಾಜದ ಏಳ್ಗೆಗಾಗಿ ಶ್ರಮಿಸಬೇಕು ಎಂದು ಹೇಳಿದರು.

ಮಲ್ಲೇಶಪ್ಪ ಗುತ್ತೆಣ್ಣನವರ ಅವರು, ತ್ರಿಪದಿಕವಿ ಸರ್ವಜ್ಞರ ಜೀವನ ಮೌಲ್ಯ, ಸಾಧನೆ ಹಾಗೂ ವಚನಗಳ ಬಗ್ಗೆ ವಿಶೇಷ ಉಪನ್ಯಾಸ ನೀಡಿದರು.

ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ವೀರಯ್ಯಸ್ವಾಮಿ ಹಿರೇಮಠ, ಭೂ ಮಾಪನ ಇಲಾಖೆ ಸಹಾಯಕ ನಿರ್ದೇಶಕ ನಾಗರಾಜ ಚಕ್ರಸಾಲಿ ಮತ್ತು ಸರ್ವಜ್ಞ ಪ್ರಾಧಿಕಾರದ ಸದಸ್ಯರು ಹಾಗೂ ಸಮಾಜದ ಮುಖಂಡರು ಉಪಸ್ಥಿತರಿದ್ದರು.



ತಹಶೀಲ್ದಾರ್ ರೇಣುಕಾಗೆ ಪತ್ರಕರ್ತರ ಸಂಘದಿಂದ ಸನ್ಮಾನ

ಹಾನಗಲ್ಲ: ಮನೆಗಳ ಹಕ್ಕುಪತ್ರ ನೀಡುವ ಮಹಾತ್ವಾಕಾಂಕ್ಷಿ ಯೋಜನೆಯನ್ನು ಸಾಕಾರಗೊಳಿಸುವಲ್ಲಿ ಅತ್ಯುತ್ತಮ ಸೇವೆ ಸಲ್ಲಿಸಿ ದಾಖಲೆಯಾಗಿ ರಾಜ್ಯಕ್ಕೆಪ್ರಥಮಸ್ಥಾನದಲ್ಲಿದ್ದು, ಮುಖ್ಯಂತ್ರಿಗಳಿಂದ ಗೌರವ ಪಡೆದ ಹಾನಗಲ್ಲ ತಾಲೂಕು ತಹಶೀಲ್ದಾರ್ ಎಸ್.ರೇಣುಕಾ ಅವರನ್ನು ತಾಲೂಕು ಕಾರ್ಯನಿರತ ಪತ್ರಕರ್ತರ ಸಂಘ ಗೌರವಿಸಿ ಅಭಿನಂದಿಸಿತು.



ಈ ಸಂದರ್ಭದಲ್ಲಿ ಮಾತನಾಡಿದ ಪತ್ರಕರ್ತರ ಸಂಘದ ಕಾರ್ಯದರ್ಶಿ ಮಾರುತಿ ಪೇಟಕರ, ಆಡಳಿತಾತ್ಮಕ ವಿಷಯದಲ್ಲಿ ಅತ್ಯಂತ ಕಾಳಜಿಯಿಂದ ಸೇವೆ ಸಲ್ಲಿಸುತ್ತಿರುವ ತಹಶೀಲ್ದಾರ ಎಸ್.ರೇಣುಕಾ ಅವರು ಹಕ್ಕುಪತ್ರ ನೀಡುವ ವಿಷಯದಲ್ಲಿ ಹಳ್ಳಿ ಹಳ್ಳಿಗಳ ಸರ್ವೆ, ಜನರ ದಾಖಲೆಗಳನ್ನು ಪರಿಶೀಲಿಸಿದ ಕಚೇರಿ ಸಮಯ ಹೊರತುಪಡಿಸಿ ಕ್ರಿಯಾಶೀಲವಾಗಿದ್ದರಿಂದ ಇಂತಹ ಯಶಸ್ಸ ಸಾಧ್ಯವಾಗಿದೆ. ರಾಜ್ಯ ಸರ್ಕಾರ ಅವರ ಸೇವೆಯನ್ನು ಪರಿಗಣಿಸಿ ಗೌರವಿಸಿದ್ದು, ಕಾರ್ಯನಿರತ ಪತ್ರಕರ್ತರ ಸಂಘದ ಗೌರವವನ್ನುಸಲ್ಲಿಸಲಾಗಿದೆ ಎಂದರು.

ಕಾರ್ಯನಿರತ ಪತ್ರಕರ್ತರ ಸಂಘದ ತಾಲೂಕು ಅಧ್ಯಕ್ಷ ಮಾರುತಿ ಶಿಡ್ಲಾಪೂರ, ಪದಾಧಿಕಾರಿಗಳಾದ ಮಾರುತಿ ಪೇಟಕರ, ಮಂಜುನಾಥ ತಳವಾರ, ಹೊನ್ನಪ್ಪ ಬಾರ್ಕಿ, ಮಲ್ಲಿಕಾರ್ಜುನ ಸುಣಗಾರ, ರಾಜೇಶ ಪಾಟೀಲ, ಇರಫಾನ್ ನಾಗರವಳ್ಳಿ, ಸಂಕನಗೌಡ ದೇವಿಕೊಪ್ಪ ಇದ್ದರು.

ಶಿವಾಜಿ ಧೈರ್ಯ, ಸ್ವರಾಜ್ಯದ ಪ್ರತೀಕ



ರಟ್ಟೀಹಳ್ಳಿ: ದಕ್ಷಿಣ ಭಾರತದಲ್ಲಿ ಪ್ರಬಲ ಆಡಳಿತ ನಡೆಸಿದ ಶಿವಾಜಿ ಮಹಾರಾಜರು ನೌಕಾಪಡೆಯನ್ನು ಸ್ಥಾಪಿಸಿದ ದೂರದೃಷ್ಟಿಯುಳ್ಳವರಾಗಿದ್ದರು. ಭಾರತದ ಇತಿಹಾಸದಲ್ಲಿ ಸ್ವಾತಂತ್ರ್ಯ ಮತ್ತು ಶೌರ್ಯದ ಸಂಕೇತವಾಗಿ ಇಂದಿಗೂ ಸ್ಫೂರ್ತಿಯಾಗಿದ್ದಾರೆ. ನಮ್ಮದೇಶದ ಸಂಸ್ಕೃತಿಯನ್ನುರಕ್ಷಣೆ ಮಾಡಿ, ಧರ್ಮ ರಕ್ಷಣೆಗೆ ತಮ್ಮ ಜೀವವನ್ನೇ ಪ್ರಾಣಾರ್ಪಣೆ ಮಾಡಿಕೊಂಡ ವ್ಯಕ್ತಿ ಶಿವಾಜಿ ಮಹಾರಾಜರು ಎಂದೆಂದಿಗೂ ಸ್ಮರಣೀಯ ಎಂದು ಮಾಜಿ ಶಾಸಕ ಬಿ.ಎಚ್. ಬನ್ನಿಕೋಡ ಹೇಳಿದರು.

ಪಟ್ಟಣದಲ್ಲಿ ಜರುಗಿದ ಶಿವಾಜಿ ಜಯಂತಿ ಮೆರವಣಿಗೆಯನ್ನು ಮಾಜಿ ಶಾಸಕ ಬಿ.ಎಚ್. ಬನ್ನಿಕೋಡ ಉದ್ಘಾಟಿಸಿ ಮಾತನಾಡಿದರು.

ಶಿವಾಜಿ ಮಹಾರಾಜರ ಪುತ್ಥಳಿಯನ್ನು ಮೆರವಣಿಗೆ ಪಟ್ಟಣದಾದ್ಯಂತ ವಿವಿಧ ಕಲಾ ತಂಡಗಳೊಂದಿಗೆ ಮಾಡಲಾಯಿತು.

ಪಪಂ ಆಧ್ಯಕ್ಷರವೀಂದ್ರ ಮುದಿಯಪ್ಪನವರ, ಅಣ್ಣಪ್ಪ ಸಾಳುಂಕೆ, ಕೆ.ವೈ.ಬಾಜೀರಾಯರ, ಶ್ರೀನಿವಾಸ ಬೈರಪ್ಪನವರ, ಬಸಣ್ಣ ಬಾಗೋಡಿ, ವಿನಾಯಕ ಅಂಗಡಿ, ವಸಂತ ದ್ಯಾವಕ್ಕಳವರ, ಯಲ್ಲಪ್ಪ ಮರಾಠೆ, ಸಂತೋಷಕುಮಾರ ಪವಾರ, ನರಸಿಂಹ ಬೇವಿನಕಟ್ಟಿ, ಸಿದ್ದಪ್ಪ ಜಾಧವ, ಮತ್ತಿತರರಿದ್ದರು.



ಬ್ಯಾಡಗಿ: ಇನ್ನರ್‌ವ್ಹಿಲ್ ಕ್ಲಬ್ ಅಧ್ಯಕ್ಷೆ ಪ್ರತಿಭಾ ಮೇಲಗಿರಿ ಪಟ್ಟಣದ ಎಂಡಿಹೆಚ್. ಶಿಕ್ಷಣ ಸಂಸ್ಥೆಯ ಎಸ್‌ಎಸ್‌ಎಲ್‌ಸಿ ವಿದ್ಯಾರ್ಥಿಗಳಿಗೆ ಪರೀಕ್ಷೆ ಬರೆಯಲು ಸಹಾಯಕವಾಗುವ ಪ್ಯಾಡ್ ಹಾಗೂ ಪೆನ್‌ಗಳನ್ನು ವಿತರಿಸಿದರು. ಕ್ಲಬ್ ಕಾರ್ಯದರ್ಶಿ ಲಕ್ಷ್ಮೀ ಉಪ್ಪಾರ, ಸದಸ್ಯರಾದ ಲತಾ ಶೆಟ್ಟರ, ಸಂಧ್ಯಾರಾಣಿ ದೇಶಪಾಂಡೆ, ಪಾರ್ವತಿ ಲೋಕೇಶ್, ಶಾಲೆಯ ಮುಖ್ಯ ಅಧ್ಯಾಪಕಿ ಪಾರ್ವತಿ ಪಾಟೀಲ ಹಾಗೂ ಶಿಕ್ಷಕಿಯರು ಉಪಸ್ಥಿತರಿದ್ದರು.

ಅನುದಾನಗಳ ಸದುಪಯೋಗಪಡಿಸಿಕೊಳ್ಳಿ: ನ್ಯಾ.ಪುರಾಣಿಕ್

ಬ್ಯಾಡಗಿ: ಅಂಗವಿಕಲರು ಬೇರೆಲ್ಲರಂತೆ ಎಲ್ಲ ಕ್ಷೇತ್ರದಲ್ಲೂ ಸಾಧನೆ ಮಾಡುತ್ತಿದ್ದು ಸಮಾಜಕ್ಕೆ ಎಂದಿಗೂ ಹೊರೆಯಾಗುವುದಿಲ್ಲ ಎಂದು ಹಿರಿಯ ಸಿವಿಲ್ ನ್ಯಾಯಾಧೀಶೆ ರಾಜೇಶ್ವರಿ. ಜೆ.ಪುರಾಣಿಕ್ ಹೇಳಿದರು.

ಪಟ್ಟಣದ ಜೆಎಂಎಫ್‌ಸಿ ನ್ಯಾಯಾಲಯದ ಆವರಣದಲ್ಲಿ ತಾಲೂಕು ಕಾನೂನು ಸೇವೆಗಳ ಸಮಿತಿ ತಾಲೂಕು ನ್ಯಾಯವಾದಿಗಳ ಸಂಘ ಹಾಗೂ ಸಮಾಜ ಕಲ್ಯಾಣ ಇಲಾಖೆ ಬ್ಯಾಡಗಿ ಇವರ ಸಂಯುಕ್ತಾಶ್ರದಲ್ಲಿ ವಿಶ್ವ ಅಂಗವಿಕಲರ ದಿನಾಚರಣೆ ಮತ್ತು ಸಾಮಾಜಿಕ ನ್ಯಾಯ ದಿನಾಚರಣೆ ಅಂಗವಾಗಿ ಕಾನೂನು ಸಾಕ್ಷರತಾ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿ, ವಿಶಿಷ್ಟಚೇತನರ ಅಭಿವೃದ್ಧಿಗೆ ಸರ್ಕಾರವು ಹಾಗೂ ವಿಶೇಷಅನುದಾನಗಳನ್ನು ನೀಡುತ್ತಿದೆ ಅವುಗಳನ್ನು ಸದುಪಯೋಗ ಪಡಿಸಿಕೊಂಡು ನಾವು ಎಲ್ಲರಂತೆ ಎಂಬ ಮನೋಭಾವವನ್ನು ವಿಶಿಷ್ಟಚೇತನರು ಬೆಳೆಸಿಕೊಳ್ಳಬೇಕು ಎಂದು ಹೇಳಿದರು.



ಹಿರಿಯ ದಿವಾಣಿ ನ್ಯಾಯಾಧೀಶ ಸುರೇಶ್ ವಗ್ಗನವರ್ ಮಾತನಾಡಿ, ಸಂಪತ್ತಿನ ಸಮಾನ ಹಂಚಿಕೆ ಹಾಗೂ ಬಡತನ ನಿರ್ಮೂಲನೆ ಮತ್ತು ಉದ್ಯೋಗ ದೊರೆತಾಗ ಮಾತ್ರ ದಿನಾಚರಣೆಯ ಅರ್ಥಪೂರ್ಣವಾಗುತ್ತದೆ ಜಗತ್ತಿನ ಎಲ್ಲಾ ಶೋಷಿತರು ಅಸಂಘಟಿತರು ತುಳಿತಕ್ಕೆ ಒಳಗಾದವರಿಗೆ ಸಮಾಜದಲ್ಲಿ ಸರಿಸಮಾನವಾದ ಸ್ಥಾನಮಾನ ಮತ್ತು ಹಕ್ಕುಗಳು ನೀಡುವ ಮೂಲಕ ಮುಖ್ಯ ವಾಹಿನಿಗೆ ತರುವ ಕೆಲಸವನ್ನು ಸರ್ಕಾರ ಮಾಡಬೇಕಿದೆ ಎಂದರು.

ನ್ಯಾಯವಾದಿಗಳ ಸಂಘದ ಉಪಾಧ್ಯಕ್ಷರಾದ ಜಿ.ಬಿ.ಯಲಗಚ್ಚ, ಸರ್ಕಾರಿ ವಕೀಲರಾದ ಟಿ.ಸಿ. ಶಿಗಿಹಳ್ಳಿ ಹಾಗೂ ಸಹಾಯಕ ಸರ್ಕಾರಿ ಅಭಿಯೋಜಕರು ರಾಮಣ್ಣ ನ್ಯಾಮತಿಯಾರ್ ಲಮಾಣಿ, ಸಮಾಜ ಕಲ್ಯಾಣ ಸಹಾಯಕ ನಿರ್ದೇಶಕರು ಮೆಹಬೂಬ್ ಸಾಬ್ ನದಾಫ್, ಹೆಚ್.ಬಿ.ಮುಳಗುಂದ, ಹಿರಿಯ ವಕೀಲರಾದ ಎಂದೆ ಮುಲ್ಲಾ, ಎಸ್. ಎಸ್. ಮೂಡೂರ್, ಭಾರತೀ ಕುಲಕರ್ಣಿ, ಎಸ್.ಕೆ.ನಾಯಕ, ಜಿಬಿ ಬಳಿಗಾರ, ಅರುಣ್ ಹಿತ್ತಲಮನಿ, ನಾಗ ರಾಜ್ ಬಣಕಾರ್ ಹಾಗೂ ಇಲಾಖೆಯ ಸಿಬ್ಬಂದಿ ಕಾನೂನು ಸೇವೆಗಳ ಸಮಿತಿಯ ಸಿಬ್ಬಂದಿ ಇದ್ದರು.

ಉತ್ತಮ ಗುಣ್ಣಮಟ್ಟದ ಶಿಕ್ಷಣ ಸಿಗಲಿ: ಶಾಸಕ ಮಾನೆ

ಹಾನಗಲ್ಲ: ಗ್ರಾಮೀಣ ಭಾಗದ ಮಕ್ಕಳಿಗೂ ಸಹ ಗುಣಮಟ್ಟದ ಶಿಕ್ಷಣ ಸಿಗಬೇಕು, ಸ್ಥಳೀಯವಾಗಿ ಪೂರ್ವ ಪ್ರಾಥಮಿಕ ಶಿಕ್ಷಣ ದೊರಕಬೇಕು. ಈ ನಿಟ್ಟಿನಲ್ಲಿ ಕಾಳಜಿ ವಹಿಸಿ ಕೆಲಸ ಮಾಡಲಾಗುತ್ತಿದೆ ಎಂದು ಶಾಸಕ ಶ್ರೀನಿವಾಸ ಮಾನೆ ಹೇಳಿದರು.

ಶುಕ್ರವಾರ ತಾಲೂಕಿನ ಕೆಲವರಕೊಪ್ಪ ಗ್ರಾಮದ ಸರ್ಕಾರಿ ಹಿರಿಯ ಕನ್ನಡ ಮತ್ತು ಆಂಗ್ಲ ಮಾಧ್ಯಮ ಪ್ರಾಥಮಿಕ ಶಾಲೆಯಲ್ಲಿ ಎಲ್.ಕೆ.ಜಿ., ಯು.ಕೆ.ಜಿ. ತರಗತಿ ಉದ್ಘಾಟಿಸಿ ಅವರು ಮಾತನಾಡಿದರು.

ತಾಲೂಕಿನಲ್ಲಿ 48 ಶಾಲೆಗಳಲ್ಲಿ ಮೊದಲ ಹಂತದಲ್ಲಿ ಎಲ್.ಕೆ.ಜಿ., ಯು.ಕೆ.ಜಿ. ತರಗತಿ, 25ಕ್ಕೂ ಹೆಚ್ಚು ಶಾಲೆಗಳಲ್ಲಿ ಆಂಗ್ಲ ಮಾಧ್ಯಮ ಆರಂಭಿಸಿ ಕಲಿಕೆಗೆ ಉತ್ತೇಜನ ನೀಡಲಾಗಿದೆ. ಪೂರ್ವ ಪ್ರಾಥಮಿಕದಿಂದ ಪದವಿ ಪೂರ್ವದವರೆಗೆ ಒಂದೇ ಸೂರಿನಡಿ ಶಿಕ್ಷಣ ದೊರಲಿಸಲು ಗಮನ ನೀಡಲಾಗಿದೆ ಎಂದು ತಿಳಿಸಿದರು.



ಎಸ್‌ಡಿಎಂಸಿ. ಅಧ್ಯಕ್ಷ ಗುಡ್ಡಪ್ಪ ದೊಡ್ಡಕೋವಿ ಅಧ್ಯಕ್ಷತೆ ವಹಿಸಿದ್ದರು. ಗ್ರಾಪಂ ಉಪಾಧ್ಯಕ್ಷ ಶಾಂತಪ್ಪ ಮ್ಯಾಗಲರ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಮಂಜು ಗೊರಣ್ಣನವರ, ಮುಖಂಡರಾದ ಶಾಂತಪ್ಪ ಬಡಣ್ಣನವರ, ವೀರೇಶ ಕುಪಗಡ್ಡಿ, ಸತೀಶ್ ಬಡಣ್ಣನವರ, ಮಂಜು ದೇವಗಿರಿ, ಕೃಷ್ಣ ಮಾಳಾಪುರ, ಕನ್ನಪ್ಪ ಸುಣಗಾರ, ಮಂಜು ಹಿರೇಬಾಸೂರ, ಮುಖ್ಯೋಪಾಧ್ಯಾಯ ಪರಮೇಶ ಚಿಕ್ಕಳ್ಳಿ, ಸಿ.ಆರ್.ಪಿ. ಹೇಮನಗೌಡ ಪಾಟೀಲ, ಬಸವರಾಜ ಮಾಳಣ್ಣನವರ, ಹೊನ್ನಪ್ಪ ದೊಡ್ಡಕೋವಿ, ಮಾರುತಿ ದೊಡ್ಡಸಿದ್ದಣ್ಣನವರ, ಸಿದ್ದು ದೊಡ್ಡವಡ್ಡರ, ಶಿವಾಜೆಪ್ಪ ಬೆಳ್ಳಿಕಟ್ಟಿ, ಪರಶುರಾಮ ಮಾಳಾಪುರ, ಸವಿತಾ ಮಡ್ಲೂರ, ನಾಗೇಂದ್ರ ಈಳಿಗೇರ, ಪ್ರಭು ಈಳಿಗೇರ ಇದ್ದರು.

ಸಹಕಾರಿ ಸಂಘಗಳ ಬಲವರ್ಧನೆ ಅತ್ಯಗತ್ಯ: ಸಲೀಂ ಅಹ್ಮದ್

ಹಾವೇರಿ: ಸಹಕಾರ ಸಂಘಗಳನ್ನು ಬಲವರ್ಧನೆಗೊಳಿಸಿದರೆ ಮಾತ್ರ, ಅವುಗಳು ಪ್ರತಿಯೊಬ್ಬ ರೈತ ಸದಸ್ಯರಿಗೂ ಸಹಕಾರಿಯಾಗುವಂತೆ ಕಾರ್ಯನಿರ್ವಹಿಸಲು ಸಾಧ್ಯ ಎಂದು ವಿಧಾನ ಪರಿಷತ್ ಮುಖ್ಯ ಸಚೇತಕ ಸಲೀಂ ಅಹ್ಮದ್ ಹೇಳಿದರು.

ಹಾವೇರಿ ನಗರದ ಪ್ರವಾಸಿ ಮಂದಿರದಲ್ಲಿ ಇತ್ತೀಚೆಗೆ ಭದ್ರಾ ಅಚ್ಚುಕಟ್ಟು ಪ್ರದೇಶಾಭಿವೃದ್ಧಿ ಪ್ರಾಧಿಕಾರ (ಕಾಡಾ)ದ ವತಿಯಿಂದ ನೀರು ಬಳಕೆದಾರರ ಸಹಕಾರ ಸಂಘಗಳ ಅಧ್ಯಕ್ಷರು, ಕಾರ್ಯದರ್ಶಿ ಮತ್ತು ರೈತಸದಸ್ಯರುಗಳಿಗೆಆಯೋಜಿಸಲಾದ ತರಬೇತಿ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿ, ಇಂತಹ ನೀರು ಬಳಕೆದಾರರ ಸಹಕಾರ ಸಂಘಗಳನ್ನು ಹೆಚ್ಚು ಉತ್ತೇಜಿಸಬೇಕು. ಆಗ ಸರ್ಕಾರದ ಯೋಜನೆಗಳನ್ನು ಯಶಸ್ವಿಯಾಗುವಂತೆ ಮಾಡಬಹುದು ಎಂದು ಹೇಳಿದರು.



ಅಧ್ಯಕ್ಷತೆ ವಹಿಸಿದ್ದ ಶಾಸಕರು ಹಾಗೂ ವಿಧಾನಸಭೆ ಉಪಸಭಾಧ್ಯಕ್ಷ ರುದ್ರಪ್ಪ ಲಮಾಣಿ ಮಾತನಾಡಿ, ಬಯಲು ಸೀಮೆಯ ಈ ಭಾಗದ ಸಂಘಗಳು ಇನ್ನೂ ಹೆಚ್ಚಿನ ರೀತಿಯಲ್ಲಿ ಚಟುವಟಿಕೆಗಳನ್ನು ಕೈಗೊಂಡು, ಅಚ್ಚುಕಟ್ಟು ಪ್ರದೇಶದ ಕೊನೆಯ ಅಂಚಿನ ರೈತ ಸದಸ್ಯರಿಗೂ ಕೂಡ ನೀರಾವರಿ ಸೌಲಭ್ಯ ಒದಗಿಸಬೇಕು ಹಾಗೂ ಸಂಘಗಳು ಹೆಚ್ಚಿನ ಪ್ರಗತಿಯನ್ನು ಸಾಧಿಸಬೇಕು ಎಂದು ಹೇಳಿದರು.

ಭದ್ರಾ ಕಾಡಾ ಅಧ್ಯಕ್ಷ ಡಾ. ಕೆ.ಪಿ. ಅಂಶುಮಂತ್ ಮಾತನಾಡಿ, ಸಹಕಾರ ಸಂಘಗಳನ್ನು ಬಲವರ್ಧನೆಗೊಳಿಸುವ ನಿಟ್ಟಿನಲ್ಲಿ ಕಳೆದ ಸಾಲಿಗಿಂತಲೂ ಈ ಬಾರಿ 180 ನೀರು ಬಳಕೆದಾರರ ಸಹಕಾರ ಸಂಘಗಳನ್ನು ಕಾರ್ಯನಿರತಗೊಳಿಸಲಾಗಿದೆ. ಇವುಗಳಲ್ಲಿ 150 ನೀರು ಬಳಕೆದಾರರ ಸಹಕಾರ ಸಂಘಗಳು ವಾರ್ಷಿಕ ಕಾರ್ಯಾನುದಾನ ಪಡೆಯಲಿವೆ ಹಾಗೂ ಉಳಿದ 30 ಸಂಘಗಳಿಗೆ ಅವುಗಳ ವ್ಯಾಪ್ತಿಯ ಅಚ್ಚುಕಟ್ಟು ಪ್ರದೇಶದಲ್ಲಿ ಉಪಯೋಗಿಸುವಂತೆ ಕೃಷಿ ಯಂತ್ರೋಪಕರಣಗಳನ್ನು ನೀಡಲಾಗುತ್ತಿದೆ. ಇದರ ಸದುಪಯೋಗ ಪಡಿಸಿಕೊಳ್ಳುವಂತೆ ಕರೆ ನೀಡಿದರು.

ಭೂ ಅಭಿವೃದ್ಧಿ ಅಧಿಕಾರಿ ಡಾ.ನಾಗೇಶ್ ಡೋಂಗರೆ ಅವರು ಮಾತನಾಡಿದರು.

ಜಿಲ್ಲೆಯ ಹಾವೇರಿ ತಾಲೂಕಿನ 18 ಕಾರ್ಯನಿರತ ನೀರು ಬಳಕೆದಾರರ ಸಹಕಾರ ಸಂಘಗಳಿಗೆ ಒಂದು ಲಕ್ಷರೂ.ಗಳ ಕಾರ್ಯಾನುದಾನ ಮತ್ತು 10 ಸಂಘಗಳಿಗೆ ಕೃಷಿ ಯಂತ್ರೋಪಕರಣ ನೀಡಲಾಯಿತು.

ಕಾರ್ಯಕ್ರಮದಲ್ಲಿ ಭದ್ರಾ ಕಾಡಾ ಆಡಳಿತಾಧಿಕಾರಿ ಸತೀಶ್ ಆರ್, ಭೂ ಅಭಿವೃದ್ಧಿ ಅಧಿಕಾರಿ (ತಾಂತ್ರಿಕ) ಹಾಗೂ ಭೂ ಅಭಿವೃದ್ಧಿ ಅಧಿಕಾರಿ (ಕೃಷಿ)(ಪ) ಉಪಆಡಳಿತಾಧಿಕಾರಿ, ಕೆ ಪ್ರಶಾಂತ್, ಸಹಾರ ಸಂಘಗಳ ಸಹಾಯಕ ನಿಬಂಧಕ ಮಂಜುನಾಥ ಎಸ್.ಇ., ಸಹಾಯಕ ನಿರ್ದೇಶಕ ನಾಗೇಂದ್ರ ರಾವ್ ವೈಇತರರು ಉಪಸ್ಥಿತರಿದ್ದರು.

ರಾಜ್ಯ ಬಜೆಟ್‌ನ ಶೇ.30ರಷ್ಟು ಹಣ ಮೀಸಲಿಡಲು ಒತ್ತಾಯ
ಶೈಕ್ಷಣಿಕ ಬೇಡಿಕೆ ಈಡೇರಿಕೆಗೆ ವಿದ್ಯಾರ್ಥಿಗಳ ಆಗ್ರಹ

ಹಾವೇರಿ: ಶಿಕ್ಷಣದ ಸಮಗ್ರ ಅಭಿವೃದ್ಧಿಗೆ ರಾಜ್ಯ ಬಜೆಟ್‌ನ ಶೇ.30ರಷ್ಟು ಹಣ ಮೀಸಲಿಡಬೇಕು ಹಾಗೂ ವಿದ್ಯಾರ್ಥಿಗಳ ಶೈಕ್ಷಣಿಕ ಬೇಡಿಕೆಗಳನ್ನು ಪೂರೈಸಲು ಒತ್ತಾಯಿಸಿ ಶುಕ್ರವಾರ ನಗರದ ತಾಪಂ ಕಚೇರಿ ಆವರಣದ ಶಾಸಕರ ಜನಸಂಪರ್ಕ ಕಚೇರಿ ಎದುರು ಎಸ್‌ಎಫ್‌ಐ ಜಿಲ್ಲಾ ಸಮಿತಿ ನೇತೃತ್ವದಲ್ಲಿ ವಿದ್ಯಾರ್ಥಿಗಳು ಪ್ರತಿಭಟನೆ ನಡೆಸಿದರು.



ಎಸ್‌ಎಫ್‌ಐ ಜಿಲ್ಲಾಧ್ಯಕ್ಷ ಬಸವರಾಜ ಎಸ್. ಮಾತನಾಡಿ, ರಾಜ್ಯದ ಶಿಕ್ಷಣ ವ್ಯವಸ್ಥೆಯನ್ನು ಸಮಗ್ರವಾಗಿ ಅಭಿವೃದ್ಧಿಪಡಿಸಲು ಮಾ.6ರಂದು ಸಿಎಂಸಿದ್ದರಾಮಯ್ಯನವರು ಮಂಡಿಸುವ ಬಜೆಟ್‌ನಲ್ಲಿ ಶಿಕ್ಷಣಕ್ಕಾಗಿ ಕೋಥಾರಿ ಆಯೋಗದ ಶಿಫಾರಸ್ಸಿನಂತೆ ಶೇ.30ರಷ್ಟು ಅನುದಾನ ಶಿಕ್ಷಣ ಕ್ಷೇತ್ರಕ್ಕೆ ಮೀಸಲಿಡಬೇಕು. ಜಿಲ್ಲಾದ್ಯಂತ ಪ್ರತಿ ತಾಲೂಕಿಗೂ ಸರ್ಕಾರಿ ಡಿಪ್ಲೋಮಾ ಕಾಲೇಜು, ಸರ್ಕಾರಿ ಐಟಿಐ ಕಾಲೇಜು, ಸರ್ಕಾರಿ ಜಿಟಿಟಿಸಿ ಕಾಲೇಜುಗಳನ್ನು ಮಂಜೂರು ಮಾಡಬೇಕು. ಪ್ರಸ್ತುತ ಇರುವ ಸರ್ಕಾರಿ ಐಟಿಐ ಕಾಲೇಜಿಗೆ ಸ್ವಂತ ಕಟ್ಟಡ ಸೇರಿದಂತೆ ಮೂಲಭೂತ ಸೌಲಭ್ಯ ಒದಗಿಸಬೇಕು. ವೃತಿಪರ ಶಿಕ್ಷಣ ಪಡೆದವರಿಗೆ ಉದ್ಯೋಗ ಒದಗಿಸಬೇಕು. ಸರ್ಕಾರಿ ವಸತಿ ನಿಲಯಗಳನ್ನು ಬಲಪಡಿಸಬೇಕು. ಹಾಗೂ ಹೆಚ್ಚುವರಿಯಾಗಿ ಕನಿಷ್ಠ 10 ಹಾಸ್ಟೆಲ್ ಮಂಜೂರು ಮಾಡಬೇಕು. ಸಮರ್ಪಕ ಸಾರಿಗೆ ವ್ಯವಸ್ಥೆ ಕಲ್ಪಿಸಲು ಹಾಗೂ ಉನ್ನತ ಶಿಕ್ಷಣದವರೆಗೂ (ಎಲ್.ಕೆ.ಜಿ ಯಿಂದ ಪಿಎಚ್.ಡಿವರೆಗೆ) ಎಲ್ಲಾ ವರ್ಗದ ವಿದ್ಯಾರ್ಥಿಗಳಿಗೆ ಉಚಿತ ಬಸ್ ಪಾಸ್ ನೀಡಬೇಕೆಂದು ಒತ್ತಾಯಿಸಿದರು.

ಈ ವೇಳೆ ಎಸ್‌ಎಫ್‌ಐ ಜಿಲ್ಲಾ ಮುಖಂಡರಾದ ಅರುಣ್ ನಾಗವತ್, ಭರತ ಮಡಿವಾಳರ ಮಾತನಾಡಿದರು. ಬಳಿಕ ಶಾಸಕರ ಆಪ್ತ ಸಹಾಯಕರ ಮೂಲಕ ರಾಜ್ಯ ಸರ್ಕಾರಕ್ಕೆ ಮನವಿ ಸಲ್ಲಿಸಿದರು.

ತನ್ಮಯಿ ನಾಯ್ಕ, ಐಶ್ವರ್ಯ ಎಸ್, ರಿಹಾನ್ ಪಿ, ನಿಶಾ ಎ., ಮಾಳವ್ವ ದೀಪಾ, ಸಾವಿತ್ರಿ ಕೆ., ಸೌಮ್ಯ, ನಾಗಮ್ಮ ವಿ., ದೀಪಾ ವಡ್ಡರ, ಮಹೇಶ್ ಕೊಂಡಜ್ಜಿ, ಪ್ರಭು ಗೌಡ, ಮಲ್ಲಿಕಾರ್ಜುನ್, ಫಕ್ಕೀರೇಶ್, ಮನೋಜ್ ಗಡ್ಡಿ, ನಂಜುಂಡ ಬಳಿಗಾರ, ಸಿದ್ದಪ್ಪ ಪೂಜಾರ, ಸುದೀಪ ಗಾಲಿ ಸೇರಿದಂತೆ ಅನೇಕ ವಿದ್ಯಾರ್ಥಿಗಳು ಪಾಲ್ಗೊಂಡಿದ್ದರು.

ಕಿರುಸುದ್ದಿ

ಶಿಕ್ಷಕರ ಪಾತ್ರ ಅತ್ಯಂತ ಮಹತ್ವದ್ದು: ಶ್ರೀಗಳು

ರಾಯಬಾಗ: ಮಕ್ಕಳ ಭವಿಷ್ಯ ನಿರ್ಮಾಣದಲ್ಲಿ ಶಿಕ್ಷಕರ ಪಾತ್ರ ಅತ್ಯಂತ ಮಹತ್ವದ್ದಾಗಿದೆ. ಶಿಕ್ಷಕರು ಕೇವಲ ಪಾಠ ಬೋಧಿಸುವವರಲ್ಲ, ಅವರು ಮಕ್ಕಳ ವ್ಯಕ್ತಿತ್ವವನ್ನು ರೂಪಿಸುವ ಮಾರ್ಗದರ್ಶಕರಾಗಿದ್ದಾರೆ ಎಂದು ಪರಮಾನಂದವಾಡಿಯ ಡಾ. ಅಭಿನವ ಬ್ರಹ್ಮಾನಂದ ಸ್ವಾಮೀಜಿ ಹೇಳಿದರು.

ರಾಯಬಾಗ ಸ್ಟೇಷನ್‌ನಲ್ಲಿರುವ ಹಾಲಸಿದ್ದೇಶ್ವರ ಪ್ರಾಥಮಿಕ ಹಾಗೂ ಪ್ರೌಢ ಶಾಲೆಯ ವಾರ್ಷಿಕೋತ್ಸವ ಕಾರ್ಯಕ್ರಮದಲ್ಲಿ ಮಾತನಾಡಿ, ಶಿಕ್ಷಕರು ಮಕ್ಕಳಿಗೆ ಜ್ಞಾನವನ್ನು ನೀಡುವುದರ ಜೊತೆಗೆ, ಸದ್ಭಾವನೆ, ಶಿಸ್ತು, ನೈತಿಕ ಮೌಲ್ಯ, ಸಾಮಾಜಿಕ ಜವಾಬ್ದಾರಿಯನ್ನು ಬೆಳೆಸುತ್ತಾರೆ. ಒಬ್ಬ ಉತ್ತಮ ಶಿಕ್ಷಕ ವಿದ್ಯಾರ್ಥಿಯಲ್ಲಿರುವ ಪ್ರತಿಭೆ ಗುರುತಿಸಿ, ಅದನ್ನು ಉತ್ತೇಜಿಸುವ ಮೂಲಕ ಅವರ ಆತ್ಮವಿಶ್ವಾಸವನ್ನು ಹೆಚ್ಚಿಸುತ್ತಾರೆ ಎಂದರು.

ವಕೀಲರ ಸಂಘದ ಅಧ್ಯಕ್ಷ ಕೃಷ್ಣಾ ಕೋಟಿವಾಲೆ ಮಾತನಾಡಿ, ಮಕ್ಕಳು ಶಾಲೆಯಲ್ಲಿ ಶಿಕ್ಷಕರನ್ನು ಮಾದರಿಯಾಗಿ ನೋಡುತ್ತಾರೆ. ಆದ್ದರಿಂದ ಶಿಕ್ಷಕರ ನಡೆ-ನುಡಿ, ಮಾತು, ವರ್ತನೆ ಎಲ್ಲವೂ ಮಕ್ಕಳ ಮೇಲೆ ಗಾಢ ಪ್ರಭಾವ ಬೀರುತ್ತದೆ. ಒಳ್ಳೆಯ ಶಿಕ್ಷಕರು ಮಕ್ಕಳಲ್ಲಿ ಸಕಾರಾತ್ಮಕ ಚಿಂತನೆ ಬೆಳೆಸುವುದರ ಜೊತೆಗೆ, ಸವಾಲುಗಳನ್ನು ಎದುರಿಸುವ ಧೈರ್ಯವನ್ನು ನೀಡುತ್ತಾರೆ.

ಇಂದಿನ ಸ್ಪರ್ಧಾತ್ಮಕ ಯುಗದಲ್ಲಿ ಶಿಕ್ಷಕರ ಪಾತ್ರ ಇನ್ನಷ್ಟು ವಿಸ್ತರಿಸಿದೆ ಎಂದರು.

ಸಂಸ್ಥಾಪಕ ಅಧ್ಯಕ್ಷ ಆರ್.ಎಚ್. ಗೊಂಡೆ ಮಾತನಾಡಿ, ವಿದ್ಯಾರ್ಥಿಗಳಿಗೆ ಕೇವಲ ಪಠ್ಯಜ್ಞಾನವಷ್ಟೇ ಅಲ್ಲ, ಜೀವನ ಕೌಶಲ್ಯಗಳನ್ನು ಕೂಡ ಕಲಿಸಿ, ಅವರನ್ನು ಭವಿಷ್ಯದ ಸಜ್ಜನ ನಾಗರಿಕರಾಗಿ ರೂಪಿಸುತ್ತಾರೆ.

ಒಟ್ಟಿನಲ್ಲಿ, ''ಒಬ್ಬ ಉತ್ತಮ ಶಿಕ್ಷಕ ಸಾವಿರಾರು ಉತ್ತಮ ನಾಗರಿಕರನ್ನು ನಿರ್ಮಿಸುತ್ತಾನೆ'' ಎಂಬ ಮಾತಿನಂತೆ, ಶಿಕ್ಷಕರ ಕೈಯಲ್ಲಿ ಸಮಾಜದ ಭವಿಷ್ಯವೇ ಅಡಕವಾಗಿದೆ ಎಂದರು.

ಚಿಕ್ಕೋಡಿ ಅಬಕಾರಿ ನಿರೀಕ್ಷಕ ರಾಜು ಗೊಂಡೆ, ಮಹಾದೇವಿ ದೀಪಾಳೆ,ಸತ್ಯಪ್ಪ ಗೊಂಡೆ,ಮಹಾದೇವ ಗೇನಾನಿ, ಸಾತಗೌಡ ಪಾಟೀಲ, ಅಂಬರೀಷ್ ಬ್ಯಾಕುಡೆ, ಕುಮಾರ ಗೇನಾನಿ,ಅರ್ಜುನ ವ್ಯಾಪಾರಿ, ಸೇರಿದಂತೆ ಸಂಸ್ಥೆಯ ಆಡಳಿತ ಮಂಡಳಿಯ ಸದಸ್ಯರು, ಗ್ರಾಪಂ ಸದಸ್ಯರು, ಪಾಲಕರು, ಪೋಷಕರು, ಶಿಕ್ಷಕರು ಇದ್ದರು.

ಇಬ್ಬರ ಬಂಧನ

ಬೆಳಗಾವಿ: ನಗರದಲ್ಲಿ ಸಾರ್ವಜನಿಕ ಸ್ಥಳದಲ್ಲಿ ತಾವುಗಳು ಲಾಭ ಮಾಡಿಕೊಳ್ಳುವ ನೆಪದಲ್ಲಿ ಸಾರ್ವಜನಿಕ ಸ್ಥಳದಲ್ಲಿ, ಮಟಕಾ ಆಟದ ಮೇಲೆ ಜನತೆಯಿಂದ ಹಣ



ಹಚ್ಚಿಸಿಕೊಂಡು ಓಸಿ ಜುಗಾರ ಆಟ ಆಡಿಸುತ್ತಿದ್ದ ಇಬ್ಬರನ್ನು ಪೊಲೀಸರು ವಶಪಡಿಸಿಕೊಂಡಿದ್ದಾರೆ.

ಬಂಧಿತ ಆರೋಪಿಗಳಾದ ರಿಯಾಜ ಅಬ್ದುಲ್ ರೆಹಮಾನ್ ಫೀವಾಲೆ (46) ಹಾಗೂ ಅಶೋಕ ಬಾಬು ಜಾಧವ (58) ಎಂಬ ಇವರಿಬ್ಬರು, ಬೆಳಗಾವಿ ನಗರದ ಖಂಜಾರ ಗಲ್ಲಿ ಮೊಡಕಾ ಹತ್ತಿರ ಮಟಕಾ ಆಡುತ್ತಿದ್ದಾಗ ವೇಳೆ ಮಾರ್ಕೆಟ್ ಠಾಣೆಯ ಪಿಎಸ್‌ಐ ವಿಠಲ ಹಾವನ್ನವರ ಹಾಗೂ ಸಿಬ್ಬಂದಿಯವರೊಂದಿಗೆ ದಾಳಿ ನಡೆಸಿದ್ದಾರೆ.ಇಬ್ಬರೂ ಆರೋಪಿಗಳ ವಿರುದ್ಧ ಮಾರ್ಕೆಟ್ ಪೊಲೀಸ್ ಠಾಣೆ ಪ್ರಕರಣ ಸಂಖ್ಯೆ.35/2026 ಕಲಂ.78(111) ಕೆ.ಪಿ ಕಾಯ್ದೆ ಅಡಿಯಲ್ಲಿ ಪ್ರಕರಣ ದಾಖಲಿಸಿ, ತನಿಖೆ ಕೈಗೊಂಡಿದ್ದಾರೆ.

ಅಪರಿಚಿತ ವ್ಯಕ್ತಿ ಶವ ಪತ್ತೆ: ಕೊಲೆ ಶಂಕೆ

ಚನ್ನಮ್ಮನ ಕಿತ್ತೂರು: 45 ವಯಸ್ಸಿನ ಅಪರಿಚಿತ ವ್ಯಕ್ತಿಯ ಕೊಳೆತ ಸ್ಥಿತಿಯಲ್ಲಿ ಶವ ಜಮೀನಿನಲ್ಲಿ ಶುಕ್ರವಾರ ಕಿತ್ತೂರು ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಪತ್ತೆಯಾಗಿದ್ದು ಕೊಲೆ ಶಂಕೆ ವ್ಯಕ್ತಪಡಿಸಲಾಗಿದೆ. ಕಿತ್ತೂರು ಬೈಲಹೊಂಗಲ ರಾಜ್ಯ ಹೆದ್ದಾರಿ ಕಲಬಾಂವಿ ಕ್ರಾಸ್ ಹತ್ತಿರ ಹಿರೇನಂದಿಹಳ್ಳಿ ಗ್ರಾಮಕ್ಕೆ ಸೇರಿದ ಜಮೀನಿನಲ್ಲಿ ರೈತರು ಉಳಮೆ ಮಾಡಲು ತೆರಳಿದ್ದಾಗ ದುರ್ವಾಸನೆ ಬರುವದನ್ನು ಪರಿಶೀಲಿಸಿದಾಗ ಶವ ಬಿದ್ದಿರುವದು ಕಂಡು ಬಂದಿದೆ. ಕೂಡಲೇ ಪೊಲೀಸ್‌ರಿಗೆ ಮಾಹಿತಿ ನೀಡಿದ್ದಾರೆ.

ಗೋವಿನ ಜೋಳದ ಬೆಳೆಯಲ್ಲಿ ಅಪರಿಚಿತ ವ್ಯಕ್ತಿಯ ಕೊಳೆತ ಸ್ಥಿತಿಯಲ್ಲಿ ಶವ ಪತ್ತೆಯಾಗಿದೆ. ಸುಮಾರು 5 6 ದಿನಗಳ ಹಿಂದೆ ಕೊಲೆ ಮಾಡಿ ಎಸೆಯಲಾಗಿದೆ ಎಂದು ಶಂಕೆ ವ್ಯಕ್ತಪಡಿಸಲಾಗಿದೆ.ಘಟನಾ ಸ್ಥಳಕ್ಕೆ ಬೆಳಗಾವಿ ಜಿಲ್ಲಾ ವರಿಷ್ಠಾಧಿಕಾರಿ ಕೆ.ರಾಮರಾಜನ್, ಡಿವೈಎಸ್ಪಿ ವೀರಯ್ಯ ಹಿರೇಮಠ, ಪ್ರೊಬೇಶನರಿ ಐಪಿಎಸ್ ಅಧಿಕಾರಿ ಬಾನುಪ್ರಕಾಶ, ಪಿಎಸ್‌ಐ ಪ್ರವೀಣ ಗಂಗೋಳ, ಜಿ.ಜಿ.ಹಂಪಣ್ಣವರ ಸೇರಿದಂತೆ ಬೆರಳಚ್ಚು ತಜ್ಞರು ಭೇಟಿ ನೀಡಿ ಪರಿಶೀಲಿಸಿದರು. ಕೊಲೆಯ ಶಂಕೆಯ ಕುರಿತು ಕಿತ್ತೂರು ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.



ರಾಯಬಾಗ: ರಾಯಬಾಗ ಸ್ಟೇಷನ್‌ನಲ್ಲಿರುವ ಹಾಲಸಿದ್ಧೇಶ್ವರ ಪ್ರಾಥಮಿಕ ಹಾಗೂ ಪ್ರೌಢ ಶಾಲೆಯ ವಾರ್ಷಿಕೋತ್ಸವ ಕಾರ್ಯಕ್ರಮವನ್ನು ಪರಮಾನಂದವಾಡಿಯ ಡಾ. ಅಭಿನವ ಬ್ರಹ್ಮಾನಂದ ಸ್ವಾಮೀಜಿ ಅವರು ಉದ್ಘಾಟಿಸಿದರು.

ವಿವಿಧ ಯೋಜನೆಗಳ ಅನುಷ್ಠಾನಕ್ಕೆ ಸಹಕರಿಸಿ

ಖಾನಾಪುರ: ಅಂಗನವಾಡಿ ಕಾರ್ಯಕರ್ತೆಯರು ಗರ್ಭಿಣಿ ಮತ್ತು ಬಾಣಂತಿಯರು, ನವಜಾತ ಶಿಶು ಮತ್ತು 6 ವರ್ಷದೊಳಗಿನ ಮಕ್ಕಳ ಆರೋಗ್ಯದ ಬಗ್ಗೆ ಕಾಳಜಿ ವಹಿಸಬೇಕು. ಸರ್ಕಾರದಿಂದ ಸರಬರಾಜುಗೊಳ್ಳುವ ಪೌಷ್ಠಿಕ ಆಹಾರವನ್ನು ಸಮರ್ಪಕವಾಗಿ ವಿತರಿಸಬೇಕು. ತಾಯಿ-ಮಗುವಿನ ಆರೋಗ್ಯ, ಅಪೌಷ್ಠಿಕತೆ ಮತ್ತು ಶಿಶುಮರಣ ತಡೆಗಟ್ಟುವ ಹಿನ್ನೆಲೆಯಲ್ಲಿ ಇಲಾಖೆಯ ವಿವಿಧ ಯೋಜನೆಗಳ ಅನುಷ್ಠಾನಕ್ಕೆ ಸಹಕರಿಸಬೇಕು ಎಂದು ಮಹಿಳಾ ಮತ್ತು ಮಕ್ಕಳ ಇಲಾಖೆಯ ಉಪ ನಿರ್ದೇಶಕ ಚೇತನಕುಮಾರ ಕರೆ ನೀಡಿದರು.

ಪಟ್ಟಣದ ಶನಾಯಾ ಪಾಮ್ ಸಭಾಗೃಹದಲ್ಲಿ ಶುಕ್ರವಾರ ತಾಲೂಕಿನ ಶಿಶು ಅಭಿವೃದ್ಧಿ ಯೋಜನೆಯ ವತಿಯಿಂದ ಅಂಗನವಾಡಿ ಕಾರ್ಯಕರ್ತೆಯರಿಗಾಗಿ ಒಂದು ದಿನದ ಪುನಶ್ಚೇತನ ಕಾರ್ಯಾಗಾರವನ್ನು ಉದ್ಘಾಟಿಸಿದ ಅವರು ಬಳಿಕ ಮಾತನಾಡಿದರು.

ಶಿಶು ಅಭಿವೃದ್ಧಿ ಯೋಜನಾಧಿಕಾರಿ ವಿಕ್ರಮ ಕೆ.ಬಿ ಮಾತನಾಡಿ, ತಾಲೂಕಿನ ಎಲ್ಲ ಅಂಗನವಾಡಿ ಕಾರ್ಯಕರ್ತೆಯರು ಇಲಾಖೆಯ ಕಾರ್ಯಕ್ರಮಗಳ ಬಗ್ಗೆ ಅರಿವು ಹೊಂದಲು ಮತ್ತು ತಮ್ಮ ಕಾರ್ಯಕ್ಷಮತೆಯನ್ನು ಹೆಚ್ಚಿಸಿಕೊಂಡು ಕಾರ್ಯನಿರ್ವಹಿಸಲು ಸೂಚಿಸಿದರು. ಎಸಿಡಿಪಿಒ ಶಾರದಾ ಮರಾಠೆ, ಹಿರಿಯ ಮೇಲ್ವಿಚಾರಕಿ ನಂದಾ ಲೋಕೂರ ಸೇರಿದಂತೆ ವಿವಿಧ ಗಣ್ಯರು ಕಾರ್ಯಾಗಾರವನ್ನು ನಿರ್ವಹಿಸಿದರು. ಕಾರ್ಯಾಗಾರದಲ್ಲಿ ಇಲಾಖೆಯ ಮೇಲ್ವಿಚಾರಕರು ಮತ್ತು ಸಿಬ್ಬಂದಿ ಉಪಸ್ಥಿತರಿದ್ದರು. ಸಂದೀಪ ದೇಶಮುಖ ಸ್ವಾಗತಿಸಿದರು. ಸರಸ್ವತಿ ಬಡಸ ವಂದಿಸಿದರು.



ಖಾನಾಪುರ: ಪಟ್ಟಣದ ಶನಾಯಾ ಪಾಮ್ ಸಭಾಗೃಹದಲ್ಲಿ ಶುಕ್ರವಾರ ತಾಲೂಕಿನ ಶಿಶು ಅಭಿವೃದ್ಧಿ ಯೋಜನೆಯ ವತಿಯಿಂದ ಅಂಗನವಾಡಿ ಕಾರ್ಯಕರ್ತೆಯರಿಗಾಗಿ ಒಂದು ದಿನದ ಪುನಶ್ಚೇತನ ಕಾರ್ಯಾಗಾರವನ್ನು ಮಹಿಳಾ ಮತ್ತು ಮಕ್ಕಳ ಇಲಾಖೆಯ ಉಪ ನಿರ್ದೇಶಕ ಚೇತನಕುಮಾರ ಉದ್ಘಾಟಿಸಿ ಮಾತನಾಡಿದರು. ಶಿಶು ಅಭಿವೃದ್ಧಿ ಯೋಜನಾಧಿಕಾರಿ ವಿಕ್ರಮ ಕೆ.ಬಿ,ಎಸಿಡಿಪಿಒ ಶಾರದಾ ಮರಾಠೆ, ಹಿರಿಯ ಮೇಲ್ವಿಚಾರಕಿ ನಂದಾ ಲೋಕೂರ ಸೇರಿದಂತೆ ವಿವಿಧ ಗಣ್ಯರು ಕಾರ್ಯಾಗಾರವನ್ನು ನಿರ್ವಹಿಸಿದರು. ಇಲಾಖೆಯ ಮೇಲ್ವಿಚಾರಕರು ಮತ್ತು ಸಿಬ್ಬಂದಿ ಉಪಸ್ಥಿತರಿದ್ದರು.

ತ್ರಿಪದಿ ಕವಿ ಸರ್ವಜ್ಞ ಜಯಂತಿ ಉತ್ಸವ
ಸರ್ವಜ್ಞರ ವಿಚಾರಧಾರೆ ಪಾಲಿಸಿ

ಬೆಳಗಾವಿ: ಸರ್ವಜ್ಞ 16ನೇ ಶತಮಾನದ ಕವಿ. ಕ್ಷಣಮಾತ್ರದಲ್ಲಿಕವಿತೆರಚಿಸುವಕವಿಸರ್ವಜ್ಞ.ಸುಮಾರು ಎರಡು ಸಾವಿರ ತ್ರಿಪದಿಗಳನ್ನ ರಚನೆ ಮಾಡಿದ್ದಾರೆ. ಜಾತಿ, ಕುಲ ಎಂಬ ಸಾಮಾಜಿಕ ಶೋಷಣೆಯನ್ನು ತ್ರಿಪದಿಗಳ ಮೂಲಕ ಹೋಗಲಾಡಿಸುವ ಸಾಹಿತ್ಯವನ್ನು ಬರೆದ ಮಹಾನ್ ಕವಿ ಸರ್ವಜ್ಞ ಎಂದು ಹಿರಿಯ ಸಾಹಿತಿ ವೈ.ಎಂ. ಭಜಂತ್ರಿ ಅವರು ತಿಳಿಸಿದರು.

ಶುಕ್ರವಾರ ಜಿಲ್ಲಾಡಳಿತ, ಜಿಪಂ , ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹಾಗೂ ಮಹಾನಗರ ಪಾಲಿಕೆಯ ಇವರ ಸಂಯುಕ್ತ ಆಶ್ರಯದಲ್ಲಿ, ಕುಮಾರ ಗಂಧರ್ವ ಕಲಾ ಮಂದಿರದಲ್ಲಿ ನಡೆದ ತ್ರಿಪದಿ ಕವಿ ಸರ್ವಜ್ಞ ಜಯಂತಿ ಉತ್ಸವ-2026 ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಹಾವೇರಿ ಜಿಲ್ಲೆಯ ಮಾಸೂರು ಗ್ರಾಮದ ಜನಿಸಿದ ಸರ್ವಜ್ಞ ಪುಷ್ಪದತ್ತ ಎಂಬ ಹೆಸರು ಮೊದಲು ಹೊಂದಿದ್ದರು. ಬಹಳ ಚತುರ ಹಾಗೂ ಬುದ್ಧಿವಂತನಾದ ಇವರು ಊರೂರು ಸಂಚಾರ ಮಾಡಿ ಎಲ್ಲರಿಂದ ವಿವಿಧ ವಿಷಯಗಳ ಸಂಗ್ರಹ ಮಾಡುತ್ತ ಕವಿ ಸರ್ವಜ್ಞನಾದರು ಎಂದು ಹೇಳಿದರು.

ತ್ರಿಪದಿಗೆ ದೊಡ್ಡ ಕೊಡುಗೆ ನೀಡಿ ಎಲ್ಲವನ್ನು ತಿಳಿದವನೆ ಸರ್ವಜ್ಞ ಎಂದು ಹೇಳಿದವರು. ಪ್ರತಿಯೊಬ್ಬರಿಂದಲೂ ಒಂದೊಂದು ಅಂಶ ಸಂಗ್ರಹಿಸಿ ವಿದ್ಯೆಯ ಶಿಖರವಾದ ಸರ್ವಜ್ಞ ಕನ್ನಡ ಸಾಹಿತ್ಯಕ್ಕೆ ತನ್ನದೇ ಆದ ಕೊಡುಗೆ ನೀಡಿದವರು. ಸಾಮಾಜಿಕ ಸಂಸ್ಕಾರ, ನೈತಿಕ ಮೌಲ್ಯ ಬೆಳೆಸುವುದು ಸರ್ವಜ್ಞ ಜಯಂತಿ ಮೂಲ ಉದ್ದೇಶವಾಗಿದೆ.

ಸರ್ವಜ್ಞಯಾವಾಗಲೂವಾಸ್ತವದಲ್ಲಿಮಾತನಾಡುವ ವ್ಯಕ್ತಿ ಬದುಕು ಸುಂದರವಾಗಿಸಲು ಧಾನ, ಧರ್ಮ ಮಾಡಬೇಕು ಅಯ್ಯಾ ಎಂದರೆ ಸ್ವರ್ಗ ಎಲವೋ ಎಂದರೆ



> ಸರ್ವಜ್ಞರು ಸಾಮಾಜಿಕ ಸಂಶೋಧಕ ಸಮಾಜದ ಸ್ಥಿತಿ-ಗತಿ ನಿಜ ಸಂಗತಿಯನ್ನು ಕಣ್ಣಾರೆ ಕಂಡು ತ್ರಿಪದಿಗಳನ್ನು ಬರೆದರು. ಸ್ತ್ರೀ ಸಮಾನತೆಯನ್ನು ಪ್ರತಿಪಾದಿಸಿದ ಸರ್ವಜ್ಞ ಪುರುಷ ಮಹಿಳೆ ಎಲ್ಲರೂ ಒಂದೇ ಎಡ-ಬಲ ಮೇಲು ಕೀಳು ಎಂಬುವುದು ಇಲ್ಲ ಎಂದು ತಮ್ಮ ಸೈದ್ಧಾಂತಿಕ ಸಂದೇಶವನ್ನು ಸಮಾಜಕ್ಕೆ ಸಾರಿದವರು.
> ■ ವೈ.ಎಂ. ಭಜಂತ್ರಿ.ಹಿರಿಯ ಸಾಹಿತಿ

ನರಕ ನಾವು ಮಾನವೀಯ ಮೌಲ್ಯಗಳಿಂದ ಬಾಳಿದರೆ ಬದುಕೇ ಸ್ವರ್ಗ, ಕೈಲಾಸವಾಗುವುದು.

''ಕೊಟ್ಟಿದ್ದು ತನಗೆ ಬಚ್ಚಿಟ್ಟಿದ್ದ ಪರರಿಗೆ'' ಕೊಟ್ಟಿದ್ದು ಕೆಟ್ಟಿತೆನಬೇಡ ಮುಂದೆ ಕಟ್ಟಿಟ್ಟ ಬುತ್ತಿ ಸರ್ವಜ್ಞ ಆದರಿಂದ ನಾವು ನೀವು ಎಲ್ಲರೂ ಧಾನ, ಧರ್ಮದಲ್ಲಿ ತೊಡಗಿ ಕೊಂಡು ಒಳ್ಳೆಯ ಕಾರ್ಯಗಳನ್ನು ಮಾಡೋಣ ನಿಸ್ವಾರ್ಥದಿಂದ ಬದುಕೋಣ.

ಸಾಲ ಮಾಡುವಾಗ ಇರುವ ಪ್ರೀತಿ, ವಿಶ್ವಾಸ ಮರಳಿ ಕೊಡುವಾಗ ಇರುವುದಿಲ್ಲ ತೆಗೆದುಕೊಂಡಿದ್ದನ್ನು ನಾವು ಮರಳಿ ಕೊಡುವುದು ನಿಜವಾದ ಮಾನವ ಧರ್ಮ.

ನಾವು ಮಾಡುವ ಸಂಘ ನಡವಳಿಕೆಯಿಂದ ನಮ್ಮ ಜೀವನ ನಿರ್ಮಾಣವಾಗುತ್ತದೆ. ಆದ್ದರಿಂದ ಸರ್ವಜ್ಞ ಹೇಳುತ್ತಾರೆ ''ಸಜ್ಜನರ ಸಂಘ ಸವಿಜೇನು ಸವಿದಂತೆ'' ಎಂದು ಹಿರಿಯ ಸಾಹಿತಿಗಳು ವಾಯ್.ಎಂ. ಭಜಂತ್ರಿ ಅವರು ಉಪನ್ಯಾಸದಲ್ಲಿ ತಿಳಿಸಿದರು.

ಸರ್ವಜ್ಞರ ತ್ರಿಪದಿಗಳನ್ನು ಓದಿ ಅರ್ಥ ಮಾಡಿಕೊಂಡರೆ ಒಳ್ಳೆಯ ಸಮಾಜ ಕಟ್ಟಲು ಸಾಧ್ಯ. ಮಕ್ಕಳು ಯಾವುದೇ ಸಮಾಜದಲ್ಲಿ ಜನಿಸಿದರು ಕೂಡ ಎಲ್ಲಾ ಮಕ್ಕಳಿಗೆ ಪಾಲಕರು ಸರ್ವಜ್ಞರ ವಚನ ಸಾಹಿತ್ಯದ ಬಗ್ಗೆ ಹೆಚ್ಚಿನ ಶಿಕ್ಷಣವನ್ನು ನೀಡಬೇಕು. ಯುವ ಪೀಳಿಗೆ ನಮ್ಮ ಸುತ್ತ ಮುತ್ತಲಿನ ವಿವಿಧ ರೀತಿಯ ಅವಕಾಶಗಳನ್ನು ಸರಿಯಾಗಿ ಪಡೆದುಕೊಳ್ಳಲು ಕೂಡ ಶಿಕ್ಷಣದ ಅವಶ್ಯಕತೆ ಇದೆ ಎಂದು ಮಹಾನಗರ ಪಾಲಿಕೆಯ ಆಯುಕ್ತರಾದ ಎಂ. ಕಾರ್ತಿಕ್ ತಿಳಿಸಿದರು.

ಜಿಪಂ ಉಪ ಕಾರ್ಯದರ್ಶಿ ಬಸವರಾಜ ಹೆಗ್ಗನಾಯಕ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಉಪ ನಿರ್ದೇಶಕಿ ವಿದ್ಯಾವತಿ ಭಜಂತ್ರಿ, ಸಮಾಜದ ಮುಖಂಡರಾದ ಆಯ್. ಎಸ್ ಕುಂಬಾರ, ಸುರೇಶ್ ವೈದ್ಯ ಹಾಗೂ ಕುಂಬಾರ ಸಮಾಜದ ಹಿರಿಯ ಮುಖಂಡರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

ಅರಣ್ಯಸಿದ್ಧೇಶ್ವರ ಜಾತ್ರೆ: ಪೂರ್ವಭಾವಿ ಸಭೆ

ಕುಡಚಿ: ರಾಯಬಾಗ ತಾಲೂಕಿನ ಎರಡನೇಯ ಅತಿದೊಡ್ಡ ಜಾತ್ರೆಗೆ ಖ್ಯಾತಿ ಹೊಂದಿರುವ ಯಲ್ಪಾರಟ್ಟಿ ಶ್ರೀ ಅರಣ್ಯ ಸಿದ್ದೇಶ್ವರ ಜಾತ್ರಾ ಮಹೋತ್ಸವವು ಇದೇ ಫೆ. 22ರಿಂದ ನಡೆಯಲಿರುವ ಹಿನ್ನೆಲೆಯಲ್ಲಿ ತಹಶೀಲ್ದಾರ್ ಮಹಾದೇವ ಸನಮೂರಿ ನೇತೃತ್ವದಲ್ಲಿ ಪೂರ್ವಭಾವಿ ಸಭೆ ನಡೆಯಿತು.

ಸುಕ್ಷೇತ್ರ ಯಲ್ಪಾರಟ್ಟಿ ಗ್ರಾಮದ ಆರಾಧ್ಯ ದೇವರಾದ ಶ್ರೀ ಅರಣ್ಯ ಸಿದ್ದೇಶ್ವರ 2026ನೇ ಸಾಲಿನ ಜಾತ್ರಾ ಮಹೋತ್ಸವವು ಇದೇ ಫೆ.22ರಿಂದ ಮಾ.1ರವರೆಗೆ ಅತ್ಯಂತ ಸಡಗರ ಸಂಭ್ರಮದಿಂದ ಆಚರಿಸುವಂತೆ ನಿರ್ಣಯಿಸಲಾಯಿತು.

ದೇವಸ್ಥಾನದ ಆವರಣದಲ್ಲಿ ನಡೆದ ಸಭೆಯಲ್ಲಿ ತಹಶೀಲ್ದಾರ್ ಮಹಾದೇವ ಸಣ್ಣಮೂರಿ ಅಧ್ಯಕ್ಷತೆ ವಹಿಸಿ ಜಾತ್ರೆಯ ಸುಗಮ ನಿರ್ವಹಣೆಗಾಗಿ ವಿವಿಧ ಇಲಾಖೆಗಳ ಅಧಿಕಾರಿಗಳಿಗೆ ಕಟ್ಟುನಿಟ್ಟಿನ ಸೂಚನೆಗಳನ್ನು ನೀಡಿದರು. ಜಾತ್ರೆಯ ಸಮಯದಲ್ಲಿ ಭಕ್ತರ ಸಂಖ್ಯೆ ಹೆಚ್ಚಿರುವುದರಿಂದ ಯಾವುದೇ ಅಹಿತಕರ ಘಟನೆ ನಡೆಯದಂತೆ ಕಟ್ಟುನಿಟ್ಟಾದ ಸೂಕ್ತ ಬಂದೋಬಸ್ತ್ ಮಾಡಬೇಕು. ಆಯಾ ಕಟ್ಟಿನ ಭಾಗಗಳಲ್ಲಿ ಜನದಟ್ಟಿಯನ್ನು ನಿಯಂತ್ರಿಸಲು ಬ್ಯಾರಿಕೇಡ್ ವ್ಯವಸ್ಥೆ ಹಾಗೂ ಹೆಚ್ಚಿನ ಪೊಲೀಸ್ ಸಿಬ್ಬಂದಿಯೊಂದಿಗೆ ಎರಡು ಡಿ.ಎ.ಆರ್ ತುಕುಡಿ ವಾಹನಗಳನ್ನು ನಿಯೋಜಿಸಿ ಜನದಟ್ಟಣೆಯನ್ನು ನಿಯಂತ್ರಿಸಲು ಪೊಲೀಸರಿಗೆ ನಿರ್ದೇಶನ ನೀಡಲಾಯಿತು.

ಜಾತ್ರೆಯಲ್ಲಿ ಹೆಸ್ಕಾಂ ಅಧಿಕಾರಿಗಳು 24 ಗಂಟೆಗಳ ಕಾಲ ತಡೆ ರಹಿತ ವಿದ್ಯುತ್ ಪೂರೈಕೆ ಮಾಡುವಂತೆ,ಯಾತ್ರಿಕರ ಆರೋಗ್ಯದ ದೃಷ್ಟಿಯಿಂದ ಆರೋಗ್ಯ ಇಲಾಖೆಯು ಅಗತ್ಯ ವೈದ್ಯಕೀಯ ಸೌಲಭ್ಯ ಕೈಗೊಳ್ಳುವುದು, ಜಾತ್ರಾ ಟ್ರಸ್ಟ್ ಕಮಿಟಿ, ಗ್ರಾಪಂ ಅಧ್ಯಕ್ಷರು, ಸದಸ್ಯರು ಹಾಗೂ ಪಿಡಿಒ ಅವರು ಪರಸ್ಪರ ಸಹಕಾರದೊಂದಿಗೆ ವ್ಯವಸ್ಥಿತವಾಗಿ ಜಾತ್ರೆ ನಡೆಸಿಕೊಡಬೇಕೆಂದು ತಿಳಿಸಿದರು.

ಗ್ರಾಪಂ ಅಧ್ಯಕ್ಷ ಮಲಕಾರಿ ದಳವಾಯಿ, ಸುನೀಲ ಪಾಟೀಲ, ಅಮಿತ ಖೋತ, ಚಾಮರಾಜ ವಡೇಯರ, ಅಶೋಕ ಗುಡೋಡಗಿ, ಸಿದ್ದಪ್ಪ ಖೋತ, ಆರ್. ಎಸ್.ಗುಡೋಡಗಿ, ಸತ್ಯಪ್ಪ ಅಥಣಿ, ವಿಠ್ಠಲ ಮಲಕಾರಿ, ಸಿದ್ದು ಸನದಿ, ಶಂಕರ ಸವದಿ, ಸದಾಶಿವ ಖವಟಗೊಪ್ಪ, ಅಶೋಕ ಸವದಿ, ಪಿಡಿಒ ಸುವರ್ಣಾ ಕಲ್ಲೋಳ್ಕರ, ಡಾ. ಸುಮಿತ ಪಾಟೀಲ, ಖೇಮಲಾಪುರ ಮತ್ತು ಯಲ್ಪಾರಟ್ಟಿ ಗ್ರಾಪಂಗಳ ಅಧ್ಯಕ್ಷರು, ಸರ್ವ ಸದಸ್ಯರು, ವಿವಿಧ ಇಲಾಖೆಗಳ ಅಧಿಕಾರಿಗಳು ಹಾಗೂ ಗ್ರಾಮದ ಗುರು ಹಿರಿಯರು ಉಪಸ್ಥಿತರಿದ್ದರು. ಪ್ರೊ. ಆರ್.ಎಸ್. ಗುಡೋಡಗಿ ನಿರೂಪಿಸಿ, ವಂದಿಸಿದರು.



ಒಡೆದ ಮನಸ್ಸು ಒಗ್ಗೂಡಿಸುವ ಸಾಹಿತ್ಯ

ಕುಡಚಿ: ಸಮನ್ವಯ ಬಹಳ ವಿಷಾದ ಸಂಗತಿ ಎಂದರೆ ರಾಜಕಾರಣ ಮನಸ್ಸುಗಳನ್ನು ಒಡೆಯುತ್ತಿವೆ. ಸಾಹಿತ್ಯ ಒಡೆದ ಮನಸ್ಸುಗಳನ್ನು ಕೂಡಿಸುತ್ತವೆ. ನಿಜ ಹೇಳಬೇಕಂದ್ರೆ ರಾಜಕಾರಣವೇ ದೊಡ್ಡದಾಗಿದೆ ಇದರಿಂದ ಒಂದರ ಮುಖ ಉತ್ತರಕ್ಕೆ ಒಂದರ ಮುಖ ದಕ್ಷಿಣಕ್ಕೆ ಆಗಿದೆ 17ನೇ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಸರ್ವಾಧ್ಯಕ್ಷ, ಸಾಹಿತಿ ವಿ.ಎಸ್.ಮಾಳಿ ಎಂದರು.

ರಾಯಬಾಗ ತಾಲೂಕಿನ ಕುಡಚಿ ಪಟ್ಟಣದ ಜುನ್ನೇದಿಯಾ ಶಿಕ್ಷಣ ಸಂಸ್ಥೆ ಸಭಾಂಗಣದಲ್ಲಿ ನಡೆದ ಸಾಹಿತಿ ಎಂ.ಕೆ. ಶೇಖ್ ರವರ ಕಥಾ ಸಂಕಲನ 'ಕೊಳೆ ತೊಳೆದ ಮಳೆ'' ಹಾಗೂ ಅಸ್ಲಂ ಮುಲ್ಲಾ ರವರ 'ಅಕಾಯ ಭಕ್ತಿಯ ಮೊಹರಂ ಪದಗಳು' ಕೃತಿಗಳನ್ನು ಲೋಕಾರ್ಪಣೆ ಮಾಡುವುದರ ಮೂಲಕ ಮಾತನಾಡಿದ ಅವರು, ಹೃದಯಕ್ಕೆ ಯಾವುದು ತಟ್ಟುತ್ತದೆ ಅದೇ ಅತ್ಯುತ್ತಮವಾದ ಸಾಹಿತ್ಯವಾಗಿದೆ. ಕುಡಚಿ ಕನ್ನಡ ಭಾಷೆಯನ್ನು ಕನ್ನಡ ಸಾಹಿತ್ಯದಲ್ಲಿ ಮೊದಲು ಬೆಳೆಸಿದವರು ಕಾಡು ಸಿದ್ದೇಶ್ವರ ಸ್ವಾಮೀಜಿ, ಎರಡನೆಯವರು ಸಾಹಿತಿ ಶೇಖ್ ಅವರಾಗಿದ್ದಾರೆ ಎಂದರು.

ಶೇಖ್ ಅವರ ಕೃತಿ ಕೊಳೆ ಕೊಳೆ ತೊಳೆಯದ ಮಳೆ ಎಂದರೆ ಕಸ ಎಂದರೆ ತಿರಸ್ಕಾರ ಅಲ್ಲ ಕಳೆಯಲ್ಲೇ ಬೆಳೆ ಇರುತ್ತದೆ ಭೂಮಿಗೆ ನಾವು ಕಳೆ ಹಾಕಿದಾಗ ಅದು ಬೆಳೆಯಾಗಿ ಪರಿವರ್ತಿಸುತ್ತದೆ. ಮನುಷ್ಯನ ಮನಸ್ಸಿನಲ್ಲಿನ ಕಳೆಯನ್ನು ಬೆಳೆಯಾಗಿ ಪರಿವರ್ತನೆ ಮಾಡುವ ಬೆಳೆಯನ್ನು ಕೊಟ್ಟವರು ಸಾಹಿತಿ ಶೇಖ ಅವರು ಎಂದರು.

ಸರ್ವಾಧ್ಯಕ್ಷರಾಗಿ ಡಾ. ಜೆ.ಪಿ. ದೊಡಮನಿಯವರು ಮಾತನಾಡಿ, ಕಥಾ ಸಂಕಲನವನ್ನು ಹಿಂದಿ ಹಾಗೂ ಆಂಗ್ಲ ಭಾಷೆಗೆ ಅನುವಾದಗೊಂಡು ಅನ್ಯಭಾಷೆಯ ತಲುಪುವಂತಾಗಬೇಕು ಹೇಳಿದರು.

ನಂತರ ಸಾಹಿತಿ ಶಂಕರ ಕ್ಯಾಸ್ತಿ, ಹ.ಭ.ಪ ಶ್ರೀ ಸುಭಾಷ್ ಶೇವಾಳೆ ಮಾತನಾಡಿದರು. ನಂತರ ಕವಿಗೋಷ್ಠಿಯಲ್ಲಿ ಕವನ ವಾಚನ ಮಾಡಿದ ಕವಿಗಳನ್ನು, ಇತರರನ್ನು ಸತ್ಕರಿಸಿ ಗೌರವಿಸಲಾಯಿತು.

ಈ ಸಂಧರ್ಭದಲ್ಲಿ ಜುನ್ನೇದಿಯಾ ಶಿಕ್ಷಣ ಸಂಸ್ಥೆ ಅಧ್ಯಕ್ಷರು ಇಕ್ಬಾಲ್ ಸತ್ತಾರ, ಶಿವಾನಂದ ಬೆಳಕೂಡ, ಗಣ್ಯರಾದ ಶ್ರೀಶೈಲ ದರೂರೆ, ಅಬ್ದುಲ್ ಮಾರುಫ, ಪ್ರೊ.ವಸಂತ ಬೆಕ್ಕೇರಿ ಇತರರು ಉಪಸ್ಥಿತರಿದ್ದರು.ಕಾರ್ಯಕ್ರಮವನ್ನು ಶಿಕ್ಷಕಿ ರೇಖಾ ಗುಪ್ತಯವರು ನಿರೂಪಣೆ ಮಾಡಿದರು ಮತ್ತು ಯಾಸ್ಮಿನ್ ಅರ್ಕಾಟೆ ವಂದನಾರ್ಪಣೆ ಮಾಡಿದರು.



ಫೆ.22ಕ್ಕೆ ಬಹುಮಾನ ವಿತರಣಾ ಸಮಾರಂಭ



ನಾಗನೂರ ಪಿಎ: ಅಥಣಿ ತಾಲೂಕಿನಲ್ಲಿ ರಾಜ್ಯ ಮಟ್ಟದ ಪರೀಕ್ಷೆ ಡಾ.ಬಿ.ಆರ್. ಅಂಬೇಡ್ಕರ್, ಛತ್ರಪತಿ ಶಾಹು ಮಹಾರಾಜರ ಹಾಗೂ ಭಾರತ ಸಂವಿಧಾನ ಬಗ್ಗೆ ರಾಜ್ಯ ಮಟ್ಟದ ಲಿಖಿತ ಪರೀಕ್ಷೆ ವಿಭಾಗವಾಗಿ ನಡೆಸುತ್ತಿರುವುದು ಕರ್ನಾಟಕ ರಾಜ್ಯ ದಲಿತ ಸಂಘರ್ಷ ಸಮಿತಿ ಅಥಣಿ ಘಟಕ ಮಾತ್ರ ಎಂದು ಬೆಳಗಾವಿ ಜಿಲ್ಲಾ ಸಂಘಟನಾ ಸಂಚಾಲಕ ಸಂಜಯ ತಳವಲಕರ ಹೇಳಿದರು.

ಗುಂಡೇವಾಡಿ ಗ್ರಾಮದಲ್ಲಿ ಮಾತನಾಡಿ ಅವರು, ಈ ಸಂಘಟನೆಯು ನಾಲ್ಕು ವರ್ಷಗಳಿಂದ ಪರೀಕ್ಷೆ ನಡೆಸಿಕೊಂಡು ಬಂದಿರುವುದಕ್ಕೆ ಸಂತಸವಾಗಿದೆ. ಈ ಪರೀಕ್ಷೆಯಿಂದ ಬಡಮಕ್ಕಳಿಗೆ ಅನುಕೂಲವಾಗುತ್ತದೆ. ಪಠ್ಯ ಪುಸ್ತಕ ಬಿಟ್ಟು ಹೆಚ್ಚಿನ ವಿಚಾರಗಳು ತಿಳಿದುಕೊಳ್ಳಲು ಅನುಕೂಲವಾಗುತ್ತದೆ ಎಂದರು.

ಫೆ.22ರಂದು ನಡೆಯಲ್ಲಿರುವ ಬಹುಮಾನ ವಿತರಣಾ ಸಮಾರಂಭಕ್ಕೆ ಉದ್ಘಾಟಕರಾಗಿ ಶಾಸಕ ಲಕ್ಷ್ಮಣ ಸವದಿ ಹಾಗೂ ವಾಯವ್ಯ ಕರಸಾ ಸಂಸ್ಥೆಯ ಅಧ್ಯಕ್ಷರು ಹಾಗೂ ಶಾಸಕ ರಾಜು ಕಾಗೆ, ಮಹಾರಾಷ್ಟ್ರ ರಾಜ್ಯದ ವಿಪ ಸದಸ್ಯ ಇಂದ್ರಿಶ ನಾಯಿಕವಾಡಿ, ಸಾಂಗ್ಲಿ ಮಿರಜ ಕೂಪವಾಡ ಮಹಾನಗರ ಪಾಲಿಕೆ ಸದಸ್ಯೆ ರೇಖಾ ವಿವೇಕ ಕಾಂಬಳೆ, ಬೆಳಗಾವಿ ಅಬಕಾರಿ ಜಂಟಿ ಆಯುಕ್ತರಾದ ಫಕೀರಪ್ಪ ಛಲವಾದಿ, ಡಾ. ಭಾರತಿ ಜಾಧವ, ಡಾ .ಶ್ರೀಮಂತ ಶಿಂಗೆ, ಖ್ಯಾತ ವಕೀಲರಾದ ಕಲ್ಲಪ್ಪ ವನಜೋಳ ಮತ್ತು ಅಮೋಘ ಕೊಬರಿ, ಸರ್ಕಾರಿ ಪ್ರಥಮ ದರ್ಜೆ ಕಾಲೇಜ ಪ್ರಾಂಶುಪಾಲರಾದ ವಿಲಾಸ ಕಾಂಬಳೆ, ರಘುನಾಥ ತೋರವಿ ಹಾಗೂ ರಾವಸಾಬ ಐಹೊಳೆ ಆಗಮಿಸುವರು ಎಂದು ಅಥಣಿ ಸಂಚಾಲಕ ರವಿ ಕಾಂಬಳೆ ಮಾಹಿತಿ ಕೊಟ್ಟರು.

ಈ ವೇಳೆಯಲ್ಲಿ ಜಿಲ್ಲಾ ಸಂಘಟನಾ ಸಂಚಾಲಕಎಂ.ಎಂ. ಕಾಂಡೇಕರ, ಕುಮಾರ ಬನಸೋಡೆ, ತಾಲೂಕು ಸದಸ್ಯರಾದ ದತ್ತು ಕಾಂಬಳೆ, ರಮೇಶ ತಳಕೇರಿ, ಪಾಂಡು ಕಾಂಬಳೆ, ಪಂಡಿತ ಕಾಂಬಳೆ, ವಿಲಾಸ ಕಾಂಬಳೆ, ಚಂದು ಬನಸೋಡೆ, ಅಶೋಕ ಗೇರಡಿ, ಮಹಾವೀರ ಆಚಾರಟ್ಟಿ, ಸಿದ್ದು ಮುಂಡಗನೂರ, ಸುಧಾಕರ ಬಳವಾಡಕರ, ತುಕಾರಾಮ ಭಜೇಂತ್ರಿ, ಅಶೋಕ ಚೌಗಲಾ, ನಿಜಾಮ ಮುಲ್ಲಾ, ಅಮರ ಕಾಂಬಳೆ, ರಮೇಶ ಕಾಂಬಳೆ, ನೀಲಕಂಠ ಕಾಂಬಳೆ, ಸುರೇಶ ಕಾಂಬಳೆ, ತಮ್ಮಣ್ಣ ಶೇಡಬಾಳೆ, ಮಹಾದೇವ ಮಾದರ, ಈಶ್ವರ ದೊಡಮನಿ, ಗೊರಖನಾಥ ಭಂಡಾರೆ, ಮಹಾದೇವ ಮಾದರ, ಬಸವರಾಜ ಮಾದರ, ಅಜಯ ಮರಡಿ ಮಾಯಪ್ಪ ದೊಡಮನಿ ಇದ್ದರು.

8ನೇ ಕನ್ನಡ ಸಾಹಿತ್ಯ ಸಮ್ಮೇಳನ ಇಂದು

ಸವದತ್ತಿ: ಕನ್ನಡ ಸಾಹಿತ್ಯ ಪರಿಷತ್ತು ಬೆಳಗಾವಿ ಜಿಲ್ಲೆಯ ಕಸಾಪ ಸವದತ್ತಿ ತಾಲೂಕು ಎಂಟನೆಯ ಕನ್ನಡ ಸಾಹಿತ್ಯ ಸಮ್ಮೇಳನವು,ಫೆ. 21ರಂದು ಮುನವಳ್ಳಿಯ ಪಂಚಲಿಂಗೇಶ್ವರ ದೇವಸ್ಥಾನ ನಡೆಯಲಿದೆ.

ಬೆಳಗ್ಗೆ 8.30ಕ್ಕೆ ತಹಶೀಲ್ದಾರ್ ಮಲ್ಲಿಕಾರ್ಜುನ ಹೆಗ್ಗನ್ನವರ ಅವರು ರಾಷ್ಟ್ರ ಧ್ವಜಾರೋಹಣ ನೆರವೇರಿಸುವರು. ಕಸಾಪ ಬೆಳಗಾವಿ ಜಿಲ್ಲಾಧ್ಯಕ್ಷೆ ಮಂಗಲಾ ಶ್ರೀ. ಮೆಟಗುಡ್ಡ ಅವರು ನಾಡ ಧ್ವಜಾರೋಹಣವನ್ನು ನೆರವೇರಿಸುವರು.

ಸವದತ್ತಿ ತಾಲೂಕಾಧ್ಯಕ್ಷ ಡಾ.ವೈ.ಎಂ. ಯಾಕೊಳ್ಳಿ ಪರಿಷತ್ತಿನ ಧ್ವಜಾರೋಹಣ ನೆರವೇರಿಸುವರು. ಸಮ್ಮೇಳನವು ಶ್ರೀ ಮುರುಘೇಂದ್ರ ಸ್ವಾಮೀಜಿ ಸ್ವಾಮೀಜಿ ಸೋಮಶೇಖರ ಮಠ ಮುನವಳ್ಳಿ, ಹಾಗೂ ಶ್ರೀ ಮಲ್ಲಿಕಾರ್ಜುನ ಶಿವಾಚಾರ್ಯ, ಮೂಲಿಮಠದ ಮಲ್ಲಿಕಾರ್ಜುನ ಸ್ವಾಮೀಜಿ ಸಾನ್ನಿಧ್ಯದಲ್ಲಿ ನಡೆಯಲಿದೆ. ಶಾಸಕ ವಿಶ್ವಾಸ ವಸಂತ ವೈದ್ಯ ಅವರು ಉದ್ಘಾಟನೆ ಮಾಡಲಿದ್ದಾರೆ. ಮುನವಳ್ಳಿಯ ಹಿರಿಯ ಸಾಹಿತಿಗಳಾದ ಡಾ.ಬಸು ಬೇವಿನಗಿಡದ ಅವರು ಸಮ್ಮೇಳನದ ಸರ್ವಾಧ್ಯಕ್ಷತೆಯನ್ನು ವಹಿಸಲಿದ್ದಾರೆ. ಹಿರಿಯ ಸಾಹಿತಿ ಪಾಂಡುರಂಗ ಯಲಿಗಾರ ಅವರು ಧ್ವಜ ಹಸ್ತಾಂತರ ಮಾಡಲಿದ್ದಾರೆ. ಕಸಾಪ ಬೆಳಗಾವಿ ಜಿಲ್ಲಾಧ್ಯಕ್ಷೆ ಮಂಗಲಾ ಮೆಟಗುಡ್ಡ ಅವರು ಆಶಯ ನುಡಿಗಳನ್ನಾಡಲಿದ್ದಾರೆ.

ಡಾ.ದ.ರಾ.ಬೇಂದ್ರೆ ಟ್ರಸ್ಟ್ ಧಾರವಾಡ ಅಧ್ಯಕ್ಷರು ಹಾಗೂ ಹಿರಿಯ ಕವಿಗಳಾದ ಡಾ.ಸರಜೂ ಕಾಟ್ಕರ ಅವರು ಮುಖ್ಯ ಅತಿಥಿಗಳಾಗಿ ಆಗಮಿಸಲಿದ್ದಾರೆ.

ಡಾ.ವೈ.ಎಂ.ಯಾಕೊಳ್ಳಿಯವರ 'ಶೆಡ್ಡಿ ಬಟ್ಟಲು' .ಶ್ರೀಶೈಲ ಹೆಬ್ಬಳ್ಳಿಯವರ 'ಕಾಡುವ ಕಾಲ್ಗೆಜ್ಜೆ ನಾದ' ಹಾಗೂ ಡಾ.ಮಲ್ಲಿಕಾರ್ಜುನ ಛಬ್ಬಿಯವರ 'ಕ್ಯಾದಿಗಿ ಬನದೊಳಗ' ಸವದತ್ತಿ ತಾಲೂಕಾ ಶರಣ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಉಮೇಶ ಬಾಳಿ ಅವರು ಈ ಪುಸ್ತಕಗಳನ್ನು ಬಿಡುಗಡೆ ಮಾಡಲಿದ್ದಾರೆ. ಸಮ್ಮೇಳನದಲ್ಲಿ ವಿಚಾರಗೋಷ್ಠಿ, ಕವಿಗೋಷ್ಠಿ ಸಾಧಕರಿಗೆ ಸನ್ಮಾನ, ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆಯಲಿವೆ.

ಕಸಾಪ ಬೆಳಗಾವಿ ಜಿಲ್ಲೆಯ ಎಲ್ಲ ತಾಲೂಕು ಅಧ್ಯಕ್ಷರುಗಳು, ಸಾಹಿತಿಗಳು,ಕಲಾವಿದರು, ಬೆಳಗಾವಿ ಜಿಲ್ಲಾ ಕಸಾಪ ಕಾರ್ಯಕಾರಿ ಸಮಿತಿಯ ಸರ್ವ ಸದಸ್ಯರು, ಕಸಾಪ ಸರ್ವ ಸದಸ್ಯರು ಮತ್ತು ಎಲ್ಲ ಕನ್ನಡಪರ ಸಂಘಟನೆಗಳು, ಭಾಗವಹಿಸಬೇಕೆಂದು ಕಸಾಪ ಬೆಳಗಾವಿ ಜಿಲ್ಲಾಧ್ಯಕ್ಷೆ ಮಂಗಲಾ ಶ್ರೀ ಮೆಟಗುಡ್ಡ ಅವರು ಹಾಗೂ ಸವದತ್ತಿ ತಾಲೂಕಾಧ್ಯಕ್ಷರಾದ ಡಾ.ವೈ. ಎಂ.ಯಾಕೊಳ್ಳಿ ತಿಳಿಸಿದ್ದಾರೆ.

ರಾಯಬಾಗ ಗ್ರಾಪಂಗಳಿಗೆ ಆಡಳಿತಾಧಿಕಾರಿಗಳ ನೇಮಕ

ರಾಯಬಾಗ: ತಾಲೂಕಿನ ಗ್ರಾಪಂಗಳ ಚುನಾಯಿತ ಜನ ಪ್ರತಿನಿಧಿಗಳ 5 ವರ್ಷಗಳ ಅವಧಿ ಪೂರ್ಣಗೊಂಡ ಕಾರಣ ಅಲ್ಲಿ ಆಡಳಿತಾಧಿಕಾರಿಗಳನ್ನು ನೇಮಣೂಕಿ ಮಾಡಿ ಜಿಲ್ಲಾಧಿಕಾರಿಗಳು ಈ ಕೆಳಗಿನಂತೆ ಆದೇಶ ಹೊರಡಿಸಿರುತ್ತಾರೆ.

ಹಂದಿಗುಂದ ಹಾಗೂ ಹಿಡಕಲ್ ಗ್ರಾಪಂಗೆ: ಸುಭಾಷ್ ಭಜಂತ್ರಿ ತಾಲೂಕಾ ಪಂಚಾಯತ ಕಾರ್ಯನಿರ್ವಾಹಕ ಅಧಿಕಾರಿಗಳು ರಾಯಬಾಗ. ಮೋ.ನಂ 9902475439

ದಿಗ್ಗೇವಾಡಿ ಮತ್ತು ಭಿರಡಿ ಗ್ರಾಪಂಗೆ: ಬಸವರಾಜಪ್ಪ ಆರ್. ಕ್ಷೇತ್ರ ಶಿಕ್ಷಣಾಧಿಕಾರಿ ರಾಯಬಾಗ (7760211595).

ನಸಲಾಪೂರ ಮತ್ತು ಸವದತ್ತಿ ಗ್ರಾಪಂಗೆ: ರಾಮು ಬಿ. ಮನುವಡ್ಡರ ಸಹಾಯಕ ಕಾರ್ಯಕಾರಿ ಅಭಿಯಂತರರು ಲೋಕೋಪಯೋಗಿ ಇಲಾಖೆ ಉಪವಿಭಾಗ ರಾಯಬಾಗ. (9448854795).

ನಂದಿಕುರಳಿ ಮತ್ತು ಕೆಂಪಟ್ಟಿ ಗ್ರಾಪಂಗೆ: ಉಮೇಶ ಪೋಳ ಸಹಾಯಕ ನಿರ್ದೇಶಕರು ಪಂಚಾಯತ ರಾಜ್ ತಾ.ಪಂ. ರಾಯಬಾಗ. (9590939801).

ನಿಪನಾಳ ಮತ್ತು ಇಟನಾಳಗ್ರಾಪಂಗೆ: ವಿಠ್ಠಲ ಭಜಂತ್ರಿ ಸಹಾಯಕ ಕಾರ್ಯಕಾರಿ ಅಭಿಯಂತರರು ಪಂಚಾಯತ ರಾಜ್ ಎಂಜನೀಯರಿಂಗ್ ಉಪವಿಭಾಗ ರಾಯಬಾಗ (9945250263).

ಮೇಖಳಿ ಮತ್ತು ಹುಬ್ಬರವಾಡಿ ಗ್ರಾಪಂಗೆ: ಹಾಲಪ್ಪ ಪೂಜಾರಿ ಸಹಾಯಕ ಕಾರ್ಯಕಾರಿ ಅಭಿಯಂತರರು ಜಿ.ಎಲ್.ಬಿ.ಸಿ ಉಪವಿಭಾಗ ರಾಯಬಾಗ (9108819486).

ನಿಲಜಿ ಮತ್ತು ಸುಟ್ಟಟ್ಟಿ ಗ್ರಾಪಂಗೆ: ನೇತ್ರಾಂಜಲಿ ಭೋಸಲೆ ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರು ರಾಯಬಾಗ (8904381481).

ನಿಡಗುಂದಿ ಮತ್ತು ಅಳಗವಾಡಿ ಗ್ರಾಪಂಗೆ: ವಿಠ್ಠಲ ಚಂದರಗಿ ಸಹಾಯಕ ನಿರ್ದೇಶಕರು ಸಮಾಜ ಕಲ್ಯಾಣ ಇಲಾಖೆ ರಾಯಬಾಗ (7022813890).

ಮೊರಬ ಮತ್ತು ಬೆಕ್ಕೇರಿ ಗ್ರಾಪಂಗೆ: ಕಲ್ಪನಾ ಕಾಂಬಳೆ ತಾಲೂಕು ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಅಧಿಕಾರಿ ರಾಯಬಾಗ (9535932197).

ರಾಯಬಾಗ ಗ್ರಾಮೀಣ ಪಂಚಾಯತ: ಭಾರತಿ ಕಾಂಬಳೆ ಶಿಶು ಅಭಿವೃದ್ಧಿ ಯೋಜನಾ ಅಧಿಕಾರಿ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ರಾಯಬಾಗ (7337748177).

ಕಪ್ಪಲಗುದ್ದಿ ಮತ್ತು ಪಾಲಭಾಂವಿ ಗ್ರಾಪಂಗೆ: ವಿನೋದ ಮಾವರಕರ ಸಹಾಯಕ ನಿರ್ದೇಶಕರು ಕೃಷಿ ಇಲಾಖೆ ರಾಯಬಾಗ (6362198869).

ಭೆಂಡವಾಡ ಮತ್ತು ಕಟಕಬಾವಿ ಗ್ರಾಪಂಗೆ: ಶೇಖರ ರಾಠೋಡ ಸಹಾಯಕ ಕಾರ್ಯಕಾರಿ ಅಭಿಯಂತರರು ಜಿ.ಎಲ್.ಬಿ.ಸಿ ಉಪವಿಭಾಗ ಕಂಕಣವಾಡಿ (9448036321).

ಯಬರಟ್ಟಿಮತ್ತು ಕೋಳಿಗುಡ್ಡ ಗ್ರಾಪಂಗೆ: ತುಳಜಪ್ಪ ಎಚ್.ಕಟ್ಟಿಮನಿ ಸಹಾಯಕ ಕಾರ್ಯಕಾರಿ ಅಭಿಯಂತರರು ಜಿ.ಎಲ್.ಬಿ.ಸಿ ಉಪವಿಭಾಗ ಹಾರೂಗೇರಿ. (7760757844).

ಆಲಖನೂರ ಮತ್ತು ಶಿರಗೂರ ಗ್ರಾಪಂಗೆ: ಮೊಹಮ್ಮದ ಮುಸ್ತಾಫ್ ಸಹಾಯಕ ಕಾರ್ಯಕಾರಿ ಅಭಿಯಂತರರು ಜಿ.ಎಲ್.ಬಿ.ಸಿ ಉಪವಿಭಾಗ ಕುಡಚಿ (7829867004).

ಸವಸುದ್ದಿ ಮತ್ತು ಖನದಾಳ ಗ್ರಾಪಂಗೆ: ಸುಭಾಷ್ ಭಜಂತ್ರಿ ಸಹಾಯಕ ಕಾರ್ಯಕಾರಿ ಅಭಿಯಂತರರು ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಉಪವಿಭಾಗ ರಾಯಬಾಗ (9986765439).

ಕುಡಚಿ ಗ್ರಾಮೀಣ ಪಂಚಾಯತಿಗೆ: ಮುರುಸಿದ್ದಪ್ಪ ಪಾಟೀಲ ಮುಖ್ಯ ಪಶು ವೈದ್ಯಾಧಿಕಾರಿಗಳು ಪಶು ಆಸ್ಪತ್ರೆ ಮತ್ತು ಸೇವಾ ಇಲಾಖೆ ರಾಯಬಾಗ (944842399).

ಖೆಮಲಾಪೂರ ಮತ್ತು ಪರಮಾನಂದವಾಡಿ ಗ್ರಾಪಂಗೆ: ಅರುಣ ಮಾಚಕನೂರ ಸಹಾಯಕ ನಿರ್ದೇಶಕರು ತಾಪಂ ರಾಯಬಾಗ. (7353420220).

ಬ್ಯಾಕೂಡ ಗ್ರಾಪಂಗೆ: ರವೀಂದ್ರ ಪಾಟೀಲ ಸಹಾಯಕ ನಿರ್ದೇಶಕರು ಮ.ಯು.ಯೋ ರಾಯಬಾಗ (8861810313).

ರೈತರು ಕೃಷಿಯಲ್ಲಿ ಸಾಧನೆ ಮಾಡಲಿ: ಶಾಸಕ ಲಕ್ಷ್ಮಣ ಸವದಿ

ಅಡಹಳ್ಳಿ: ಅಥಣಿ ತಾಲೂಕಿಗೆ ಬೇರೆ ದೇಶ, ರಾಜ್ಯದವರು ಬಂದು ಇಲ್ಲಿಯ ರೈತರು ಮಾಡುವ ಆಧುನಿಕ ಕೃಷಿಯ ಬಗ್ಗೆ ತಿಳಿದುಕೊಳ್ಳಲು ಬರುವ ಹಾಗೆ ಇಲ್ಲಿಯ ರೈತರು ಕೃಷಿಯಲ್ಲಿ ಸಾಧನೆ ಮಾಡಬೇಕು. ಅಂದಾಗ ಮಾತ್ರ ನಾವು ಮಾಡಿದ ನೀರಾವರಿ ಯೋಜನೆಗಳಿಗೆ ಸಾರ್ಥಕತೆ ಬರುತ್ತದೆ ಎಂದು ಅಥಣಿ ಶಾಸಕ ಲಕ್ಷ್ಮಣ ಸವದಿ ಹೇಳಿದರು.

ಅವರು ಸಮೀಪದ ಯಲಿಹಡಲಗಿ ಗ್ರಾಮದಲ್ಲಿ ಸುಮಾರು 18.59 ಕೋಟಿ ವೆಚ್ಚದಲ್ಲಿ 110/11 ಕೆವ್ಹಿ ವಿದ್ಯುತ್ ವಿತರಣಾ ಕೇಂದ್ರ ನಿರ್ಮಾಣ ಹಾಗೂ ಆರೋಗ್ಯ ಇಲಾಖೆಯಿಂದ ಮಂಜೂರಾದ ಆರೋಗ್ಯ ಮತ್ತು ಸ್ವಾಸ್ಥ್ಯ ಕೇಂದ್ರದ ನೂತನ ಕಟ್ಟಡದ ಭೂಮಿ ಪೂಜೆ ನೇರವೇರಿಸಿ ಮಾತನಾಡಿ, ಅಥಣಿ ಮತಕ್ಷೇತ್ರದಲ್ಲಿ ನೀರಾವರಿ ಯೋಜನೆಗಳು ಆಗಿರುವುದ್ದರಿಂದ ವಿದ್ಯುತ್ ಬೇಡಿಕೆ



ಹೆಚ್ಚಾಗಿದೆ ಇದನ್ನು ಮನಗಂಡು ರೈತರಿಗೆ ತೊಂದರೆಯಾಗಬಾರದು ಎಂಬ ಉದ್ದೇಶದಿಂದ ಯಲಿಹಡಲಗಿ, ತೆಲಸಂಗ, ಸವದಿ, ಸಂಕೋನಟ್ಟಿ ಗ್ರಾಮಗಳಲ್ಲಿ ಹೊಸ ವಿದ್ಯುತ್ ವಿತರಣಾ ಕೇಂದ್ರಗಳು ಮಂಜೂರಾಗಿವೆ ಹಾಗೂ ಇನ್ನು ಕೋಹಳ್ಳಿ, ಬಳವಾಡ, ಪಾರ್ಥನಹಳ್ಳಿ, ಝುಂಜರವಾಡ ಗ್ರಾಮಗಳಲ್ಲಿ ಹೊಸ ವಿದ್ಯುತ್ ವಿತರಣಾ ಕೇಂದ್ರಗಳ ಮಂಜೂರಾತಿಗೆ ಸರ್ಕಾರಕ್ಕೆ ಪ್ರಸ್ತಾವಣೆ ಸಲ್ಲಿಸಲಾಗಿದೆ. ಈ ಎಲ್ಲ ಕೇಂದ್ರಗಳು ಸಂಪೂರ್ಣಗೊಂಡ ಮೇಲೆ ಈ ಭಾಗದ ಎಲ್ಲ ರೈತರಿಗೆ ಹಗಲಿನಲ್ಲಿಯೇ ಏಳು ಗಂಟೆ ಉತ್ತಮ ಗುಣಮಟ್ಟದ ವಿದ್ಯುತ್ ಸರಭರಾಜು ಆಗಲಿದೆ. ಹಾಗೂ ಯಲಿಹಡಲಗಿ ಗ್ರಾಮದ ಸುತ್ತಲಿನ ಜನರು ದೂರ ಆರೋಗ್ಯ ಕೇಂದ್ರಕ್ಕೆ ಅಲೆದಾಟ ತಪ್ಪಿಸಲು ಈ ಗ್ರಾಮದಲ್ಲಿ ಸುಮಾರು 65 ಲಕ್ಷ ರೂ, ವೆಚ್ಚದಲ್ಲಿ ಸುಂದರ ಕಟ್ಟಡ ನಿರ್ಮಿಸಿ ಜನರಿಗೆ ಆರೋಗ್ಯ ಸೇವೆ ಒದಗಿಸಲಾಗುವುದು ಎಂದರು.

ಈ ವೇಳೆ ಬೆಳಗಾವಿಯ ಕೆಪಿಟಿಸಿಎಲ್ ಕಾರ್ಯನಿರ್ವಾಹಕ ಅಭಿಯಂತರಮಂಜಪ್ಪಅಪ್ಪಣ್ಣವರ, ಕಾಂಗ್ರೆಸ್ ಮುಖಂಡ ಶಿವು ಗುಡ್ಡಾಪೂರ,ಸಂಜು ಅಮ್ಮಣ್ಣವರ, ತಾಲೂಕಾ ವೈದ್ಯಾಧಿಕಾರಿ ಡಾ. ಬಸಗೌಡ ಕಾಗೆ, ಡಾ. ಎಮ್. ಬಿ. ಬಾಲಪ್ಪಣ್ಣವರ, ಪಿಡಿಒ ಬಸವರಾಜ ಹೊನಕಾಂಬಳೆ, ಇಂಜನಿಯರ್ ಮಹಾನಂದಾ ಹಲಕಿ, ಮಾನಸಿಂಗ್ ಬೋರಾಡೆ, ಸಿ. ಎಸ್. ನೇಮಗೌಡ, ಶಿವು ಗುಡ್ಡಾಪೂರ, ಮಹಾದೇವ ನಾಗನೂರ, ಮಾಳೋಜಿರಾವ್ ಇಂಗೋಲೆ, ಘಟಿವಾಳಪ್ಪ ಗುಡ್ಡಾಪೂರ, ಸಿದರಾಯ ನಾಯಿಕ, ಈರಗೌಡ ಪಾಟೀಲ, ನೂರಅಹ್ಮದ್ ಡೊಂಗರಗಾಂವ, ಆರ್. ಆರ್. ತೆಲಸಂಗ, ಮನೋಜ ಬೋರಾಡೆ, ಸದಾಶಿವ ಹರಪಾಳೆ, ಶಂಕರ ಪೂಜಾರಿ ಮಡಿವಾಳಪ್ಪ ಯಳವರ, ಗುರುದತ್ತ ಕುಲಕರ್ಣಿ, ಮಹಾದೇವ ಬಿರಾದಾರ, ವಿಜಯ ದೊಡಮನಿ, ಗುತ್ತಿಗೆದಾರ ಮಹಾದೇವಯ್ಯಾ ಗಚ್ಚಿನಮಠ, ಮುರಗೆಂದ್ರ ಅಳ್ಳಿಮಟ್ಟಿ ಸೇರಿದಂತೆ ಅನೇಕ ಗ್ರಾಮಸ್ಥರು ಪಾಲ್ಗೊಂಡಿದರು.

ಕಿರುಸುದ್ದಿ

ಶ್ರೀಬ್ರಹ್ಮದೇವರ ದೇವಸ್ಥಾನ, ಮೂರ್ತಿ ಪ್ರತಿಷ್ಠಾಪನೆ



ಯಮಕನಮರಡಿ: ಸಮೀಪದ ಹೆಬ್ಬಾಳ ಗ್ರಾಮದ ಜೈನ ಬಸದಿಯ ಆವರಣದಲ್ಲಿ ನೂತನವಾಗಿ ನಿರ್ಮಿಸಲಾದ ಶ್ರೀಬ್ರಹ್ಮದೇವರ ದೇವಸ್ಥಾನ ಹಾಗೂ ನೂತನ ಮೂರ್ತಿ ಪ್ರತಿಷ್ಠಾಪನೆ ಕಾರ್ಯಕ್ರಮ ಫೆ.21ರಿಂದ ಫೆ.22ರವರೆಗೆ ನಡೆಯಲಿದೆ. ಫೆ.21ರಂದು ಬೆಳಗ್ಗೆ 8 ಗಂಟೆಗೆ ಮಂಗಳವಾದ್ಯದೊಂದಿಗೆ ಪೂರ್ಣಕುಂಭ ಮೇಳದೊಂದಿಗೆ ಮೂರ್ತಿಯ ಭವ್ಯ ಮೆರವಣಿಗೆ ಗ್ರಾಮದ ಪ್ರಮುಖ ಬೀದಿಗಳಲ್ಲಿ ನಡೆಯಲಿದ್ದು, ತದ ನಂತರ ಮಹಾಪ್ರಸಾದ ನಡೆಯಲಿದೆ.ಫೆ.22ರಂದು ಬೆಳಗ್ಗೆ 8ಕ್ಕೆ ಮೂರ್ತಿ ಪ್ರತಿಷ್ಠಾಪನೆ ಹಾಗೂ ಕಳಸಾರೋಹಣ ಕಾರ್ಯಕ್ರಮ, ಮಹಾಪ್ರಸಾದ ನಡೆಯಲಿದ್ದು ಸಾನ್ನಿಧ್ಯವನ್ನು ಉಳ್ಳಾಗಡ್ಡಿ-ಖಾನಾಪೂರದ ಬ್ರಹನ್ಮಠದ ಶ್ರೀಸಿದ್ಧೇಶ್ವರ ಶಿವಾಚಾರ್ಯ ಸ್ವಾಮೀಜಿ ವಹಿಸಲಿದ್ದಾರೆ, ಅಧ್ಯಕ್ಷತೆಯನ್ನು ಬ್ರಹ್ಮದೇವ ಟ್ರಸ್ಟ್ ಕಮೀಟಿಯ ಅಧ್ಯಕ್ಷ ಬಸವರಾಜ ಲ. ಖೋತ ವಹಿಸಲಿದ್ದಾರೆ, ಮುಖ್ಯ ಅತಿಥಿಗಳಾಗಿ ಲೋಕೋಪಯೋಗಿ ಸಚಿವ ಸತೀಶ ಜಾರಕಿಹೊಳಿ, ಸಂಸದೆ ಪ್ರೀಯಾಂಕಾ ಜಾರಕಿಹೊಳಿ, ಮಾಜಿ ಉಪಸಭಾಪತಿ ಸಚ್ಚಿದಾನಂದ ಖೋತ್ನಾದಿನಾಥ ಬ್ಯಾಂಕಿನ ಅಧ್ಯಕ್ಷರಾದ ಭರಮಗೌಡಾ ಪಾಟೀಲ, ಜೈನ ಟ್ರಸ್ಟ್ ಕಮೀಟಿಯ ಅಧ್ಯಕ್ಷ ಜಯಪಾಲ ಹೊನ್ನನ್ನವರ ಉಪಸ್ಥಿತರಿರುವರು ಎಂದು ಬ್ರಹ್ಮದೇವ ಟ್ರಸ್ಟ್‌ಕಮೀಟಿ ತಿಳಿಸಿದ್ದಾರೆ.

ಪಿಎಚ್‌ಡಿ ಪ್ರದಾನ



ಸವದತ್ತಿ: ನಗರದ ಶ್ರೀ ಕೆ.ಎಂ. ಮಾಮನಿ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಆಂಗ್ಲ ಭಾಷಾ ವಿಭಾಗದ ಸಹ ಪ್ರಾಧ್ಯಾಪಕಿ ಡಾ.ಬಸವ್ವ ಚಂದ್ರಪ್ಪ ನಿಡಗುಂದಿ ಅವರಿಗೆ ಆಂಧ್ರಪ್ರದೇಶದ ದ್ರಾವಿಡಿಯನ್ ವಿಶ್ವವಿದ್ಯಾಲಯ ಕುಪ್ಪಂ ಪಿಎಚ್‌ಡಿ ಪ್ರದಾನ ಮಾಡಿದೆ. ಇವರು ಡಾ.ಬಸವರಾಜ ಎಸ್. ತಲ್ಲೂರ ಇವರ ಮಾರ್ಗ ದರ್ಶನದಲ್ಲಿ 'ಫ್ಯಾಮಿಲಿ ಲೈಫ್ ಇನ್ ಜೇನ್ ಆಸ್ಟಿನ್ಸ ನಾವೆಲ್ಸ್ ಎ ಸ್ಟಡಿ' ಎಂಬ ವಿಷಯದ ಮೇಲೆ ಮಂಡಿಸಿದ ಪ್ರಬಂಧಕ್ಕೆ ವಿಶ್ವವಿದ್ಯಾಲಯದವರು ಡಾಕ್ಟರೇಟ್ ಪ್ರದಾನ ಮಾಡಿರುವರು.

ಫೆ.23ರಂದು 'ರೈತಗೋಷ್ಠಿ' ಕಾರ್ಯಕ್ರಮ



ಕಕಮರಿ: ಸ್ಥಳೀಯ ವೇದಾಂತ ಕೇಸರಿ ಶ್ರೀ ಮಲ್ಲಿಕಾರ್ಜುನ ಗುರುದೇವ ಆಶ್ರಮದಲ್ಲಿ ಫೆ.23ರಂದು ಸೋಮವಾರ ಬೆಳಗ್ಗೆ 10ಕ್ಕೆ 'ರೈತಗೋಷ್ಠಿ' ಕಾರ್ಯಕ್ರಮ ಆಯೋಜಿಸಲಾಗಿದೆ. ಕಾರ್ಯಕ್ರಮದಲ್ಲಿ ವಿಚಾರ ಗೋಷ್ಠಿ ನಡೆಯಲಿದೆ. ಪ.ಪೂ. ಆತ್ಮಾರಾಮ್ ಸ್ವಾಮೀಜಿ ಸಾನ್ನಿಧ್ಯ ವಹಿಸಿಕೊಳ್ಳಲಿದ್ದಾರೆ. ಅಧ್ಯಕ್ಷತೆ ಮಾಜಿ ಉಪಮುಖ್ಯಮಂತ್ರಿ ಹಾಗೂ ಅಥಣಿ ಶಾಸಕ ಲಕ್ಷ್ಮಣ ಸವದಿ ವಹಿಸಿಕೊಳ್ಳಲಿದ್ದಾರೆ.

ಉದ್ಘಾಟನೆ ನಂದಗಾಂವ ಪ್ರಗತಿಪರ ರೈತ ಮುತ್ತಣ್ಣ ಕಾತ್ರಾಳ, ಮುಖ್ಯ ಅತಿಥಿಗಳಾಗಿ ಚಿಕ್ಕೋಡಿ ಕೃಷಿ ವಿಜ್ಞಾನಿ ಸುರೇಶ ದೇಸಾಯಿ, ತಿಡಗುಂದಿ ಸಸ್ಯ ಶರೀರ ಕ್ರೀಯಾಶಾಸ್ತ್ರ ಮತ್ತು ಮುಖ್ಯಸ್ಥರು ತೋಟಗಾರಿಕೆ ಸಂಶೋಧನೆ ಮತ್ತು ವಿಸ್ತರಣಾ ಕೇಂದ್ರ ಮಲ್ಲಿಕಾರ್ಜುನ ಅವಟಿ, ಬಾಗಲಕೋಟ ರೋಗಶಾಸ್ತ್ರ ವಿಜ್ಞಾನಿ ಡಾ.ರಾಘವೇಂದ್ರ ಆಚಾರಿ, ಬಾಗಲಕೋಟ ಕೀಟಶಾಸ್ತ್ರ ವಿಜ್ಞಾನಿ ಎ.ಎಂ.ನದಾಫ್, ಬಾಗಲಕೋಟ ಹಣ್ಣುಶಾಸ್ತ್ರ ವಿಜ್ಞಾನಿ ಸಿದ್ದಣ್ಣ ಠೋಕೆ, ಬಾಗಲಕೋಟ ಅರ್ಥಶಾಸ್ತ್ರಜ್ಞರು ಶ್ರೀಪಾದ ವಿಶ್ವೇಶ್ವರ, ನಿರೂಪಣೆ ಉಪನ್ಯಾಸಕ ಎಂ.ಬಿ.ಕರಡಿ, ಹಾಗೂ ಎಂ.ಎ.ಮಠಪತಿ ನಿರ್ವಹಿಸಲಿದ್ದಾರೆ. ಗ್ರಾಮಸ್ಥರು ಹಾಗೂ ಸುತ್ತಮುತ್ತಲಿನ ಗ್ರಾಮಸ್ಥರು ಭಾಗವಹಿಸಲಿದ್ದಾರೆ ಎಂದು ಗುರುದೇವಾಶ್ರಮ ಪ.ಪೂ.ಆತ್ಮಾರಾಮ್ ಸ್ವಾಮೀಜಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಇಂದು ಕುಂದು ಕೊರತೆಗಳ ಸಭೆ

ಬೆಳಗಾವಿ: ವಿದ್ಯುತ್ ಗ್ರಾಹಕರ ಕುಂದು ಕೊರತೆ ನಿವಾರಣಾ ಸಭೆಯನ್ನು ಫೆ. 21 ಬೆಳಿಗ್ಗೆ 10.30 ಗಂಟೆಗೆ ನೆಹರು ನಗರ ಕಛೇರಿಯ ಉಪ ವಿಭಾಗ ನಂ. 3ರಲ್ಲಿ ಆಯೋಜಿಸಲಾಗಿದೆ. ವಿದ್ಯುತ್ ಗ್ರಾಹಕರು ಈ ಸಭೆಯಲ್ಲಿ ಪಾಲ್ಗೊಂಡು ತಮ್ಮ ಸಮಸ್ಯೆ ಅಥವಾ ಕುಂದು ಕೊರತೆಗಳನ್ನು ಪರಿಹರಿಸಿಕೊಳ್ಳಬಹುದಾಗಿದೆ ಎಂದು ಪ್ರಕಟಣೆಯಲ್ಲಿ ತಿಳಿಸಲಾಗಿದೆ.



ಸಂಕೇಶ್ವರ: ಅತ್ಯುತ್ತಮ ಹಾಗೂ ಪ್ರಬುದ್ಧ ಆಡಳಿತಗಾರ ಎಂದೆನಿಸಿದ ಮರಾಠಾ ಸಾಮ್ರಾಜ್ಯ ಸಂಸ್ಥಾಪಕ ಛತ್ರಪತಿ ಶಿವಾಜಿ ಮಹಾರಾಜರ ಜಯಂತಿ ಆಚರಣೆಯನ್ನು ಸಮೀಪದ ಬಾಡ ಗ್ರಾಮದಲ್ಲಿ ಆಚರಿಸಲಾಯಿತು. ಗ್ರಾಮದ ಅಂಬೇಡ್ಕರ್ ಭವನದಲ್ಲಿ ಶಿವಾಜಿ ಮಹಾರಾಜರ ಭಾವ ಚಿತ್ರಕ್ಕೆ ಮುಖಂಡರು ಪೂಜೆ ನೆರವೇರಿಸಿದರು. ಈ ಸಂದರ್ಭದಲ್ಲಿ ಯುವ ಮುಖಂಡರಾದ ವಿಶಾಲ ಒಡ್ಡಗೋಳ, ಅಮರ್ ಕವಳಿಕಟ್ಟಿ, ಪ್ರಶಾಂತ್ ನಾಗಯಿಗೋಳ, ಪ್ರಶಾಂತ್ ಕಾಂಬಳೆ, ಧೀರಜ್ ಕವಳಿಕಟ್ಟಿ, ಪ್ರದೀಪ ಸಂಕಪ್ಪಗೋಳ ಹಾಜರಿದ್ದರು.

ಮಕ್ಕಳಿಗೆ ಗುಣಮಟ್ಟದ ಶಿಕ್ಷಣ ನೀಡಿ: ಶ್ರೀಗಳು

ಯರಗಟ್ಟಿ: ಗ್ರಾಮೀಣ ಭಾಗದ ವಿದ್ಯಾರ್ಥಿಗಳಿಗೆ ಗುಣಮಟ್ಟದ ಶಿಕ್ಷಣ ನೀಡುವುದು ಇಂದಿನ ಅಗತ್ಯವಾಗಿದೆ. ಕೇವಲ ಶಿಕ್ಷಣ ನೀಡುವುದು ನಮ್ಮ ಉದ್ದೇಶ ಆಗಬಾರದು, ಗುಣಮಟ್ಟದ ಶಿಕ್ಷಣ ನೀಡುವುದರ ಕುರಿತೂ ನಾವು ಗಮನಹರಿಸಬೇಕೆಂದು ಸುಣಧೋಳಿ ಜಡಿಸಿದ್ದೇಶ್ವರ ಮಠ ಶಿವಾನಂದ ಸ್ವಾಮೀಜಿ ಹೇಳಿದರು.

ಇತ್ತೀಚೆಗೆ ಇಲ್ಲಿನ ಕರ್ನಾಟಕ ಕನ್ನಡ ಹಿರಿಯ ಪ್ರಾಥಮಿಕ ಶಾಲಾ ಆವರಣದಲ್ಲಿ ಶಾಲಾ ವಾರ್ಷಿಕೋತ್ಸವ ಕಾರ್ಯಕ್ರಮದಲ್ಲಿ ಮಾತನಾಡಿದರು.

ಗ್ರಾಮೀಣ ಭಾಗದ ವಿದ್ಯಾರ್ಥಿಗಳನ್ನು ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಮಟ್ಟದಲ್ಲಿ ಸ್ಪರ್ಧಿಸುವಂತೆ ನಾವು ಬೆಳಸಬೇಕಾದ ಅವಶ್ಯಕತೆ ಇದೆ ಎಂದು ಪ್ರತಿಪಾದಿಸಿದರು.ನಂತರ ಮಕ್ಕಳ ಸಾಂಸ್ಕೃತಿಕ ಕಾರ್ಯಕ್ರಮಗಳು ಗಮನಸೆಳೆಯಿತು. ಸಂಸ್ಥೆಯ ಅಧ್ಯಕ್ಷ ರುದ್ರಪ್ಪ ಹಟ್ಟಿ, ನಳಿನಿ ಮ. ದೇಸಾಯಿ ಉದ್ಘಾಟಿಸಿದರು. ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ಪಿಎಸ್‌ಐ ಎಲ್.ಬಿ. ಮಾಳಿ, ಸಹಾಯಕ ಅಭಿಯಂತರಾದ ಪ್ರಿಯಾಂಕಾ ಹೂಗಾರ, ಡಾ. ಮಹೇಶ ಆರೂಢ ಹಟ್ಟಿ, ರಾಜು ವಾಲಿ, ಬಸವರಾಜ ಗಂಗರಡ್ಡಿ, ಕಿಟ್ಟು ತೋರಗಲ್ಲ, ಸಾತಪ್ಪ ತೋಟಗಿ, ಶಿವಾನಂದ ಕರಿಗೋಣ್ಣವರ, ರಾಮನಗೌಡ ಪಾಟೀಲ, ಅಭಿಜಿತ ಕಾಮತ, ಹನಂತ ಹೂಗಾರ, ಅನಿಕೇತ ಕಾಮತ, ಮಹಾಂತೇಶ ಮಂತ್ರಣ್ಣವರ, ರವಿ ಮಂತ್ರಣ್ಣವರ, ಆನಂದ ಹೊಂಗಲ, ಮಂಜುನಾಥ ಹೊಂಗಲ, ಸಂತೋಷ ಹೂಗಾರ ಸೇರಿದಂತೆ ಅನೇಕರು ಗಣ್ಯ ಮಾನ್ಯರು ಮತ್ತು ಕರ್ನಾಟಕ ಶಿಕ್ಷಣ ಸಂಸ್ಥೆಯ ಪ್ರಾಧನ ಗುರುಗಳು, ಸರ್ವ ಸಿಬ್ಬಂದಿ ಬಳಗ, ಮಕ್ಕಳು ಉಪಸ್ಥಿತರಿದ್ದರು.



ಯರಗಟ್ಟಿ: ಇತ್ತೀಚೆಗೆ ಇಲ್ಲಿನ ಕರ್ನಾಟಕ ಕನ್ನಡ ಹಿರಿಯ ಪ್ರಾಥಮಿಕ ಶಾಲಾ ಆವರಣದಲ್ಲಿ ಶಾಲಾ ವಾರ್ಷಿಕೋತ್ಸವ ಕಾರ್ಯಕ್ರಮದಲ್ಲಿ ಮಕ್ಕಳ ಸಾಂಸ್ಕೃತಿಕ ಕಾರ್ಯಕ್ರಮಗಳು ಗಮನಸೆಳೆಯಿತು. ಸುಣಧೋಳಿ ಜಡಿಸಿದ್ಧೇಶ್ವರ ಮಠ ಶಿವಾನಂದ ಸ್ವಾಮೀಜಿ, ಸಂಸ್ಥೆಯ ಅಧ್ಯಕ್ಷ ರುದ್ರಪ್ಪ ಹಟ್ಟಿ, ನಳಿನಿ ಮ. ದೇಸಾಯಿ, ಪಿಎಸ್‌ಐ ಎಲ್.ಬಿ. ಮಾಳಿ, ಸಹಾಯಕ ಅಭಿಯಂತರಾದ ಪ್ರಿಯಾಂಕಾ ಹೂಗಾರ, ಡಾ. ಮಹೇಶ ಆರೂಢ ಹಟ್ಟಿ, ರಾಜು ವಾಲಿ, ಬಸವರಾಜ ಗಂಗರಡ್ಡಿ, ಕಿಟ್ಟು ತೋರಗಲ್ಲ, ಸಾತಪ್ಪ ತೋಟಗಿ, ಶಿವಾನಂದ ಕರಿಗೋಣ್ಣವರ ಇತರರು ಇದ್ದರು.

ಅಕ್ಕಪಡೆ ಸಿಬ್ಬಂದಿಗೆ ಕಾರ್ಯಾಗಾರ | ಪೊಲೀಸ್ ಆಯುಕ್ತ ಭೋರಸೆ ಹೇಳಿಕೆ

ಮಹಿಳೆಯರ ಪಾತ್ರ ದೊಡ್ಡದು

ಬೆಳಗಾವಿ: ಬೆಳಗಾವಿ ವಿಭಾಗ ಮಟ್ಟದ ಗೃಹ ಇಲಾಖೆ ಸಿಬ್ಬಂದಿ ಮಹಿಳೆಯರ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಸಾಂತ್ವನ ಮತ್ತು ಸಖಿ ಕೇಂದ್ರದ ಸಿಬ್ಬಂದಿಗೆ ಹಾಗೂ ಬೆಳಗಾವಿ ವಿಭಾಗದ 7 ಜಿಲ್ಲೆಯ ಅಕ್ಕ ಪಡೆ ಸಿಬ್ಬಂದಿಗೆ ಮಹಿಳೆಯರ ಮತ್ತು ಮಕ್ಕಳ ಅನೈತಿಕ ಸಾಗಾಣಿಕೆ ತಡೆಯುವುದು ಹಾಗೂ ಅಕ್ಕ ಪಡೆ ಕಾರ್ಯನಿರ್ವಹಣೆ ಬಗ್ಗೆ ಒಂದು ದಿನದ ಕಾರ್ಯಾಗಾರವನ್ನು ಹಮ್ಮಿಕೊಳ್ಳಲಾಗಿತ್ತು.



ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಗೃಹ ಇಲಾಖೆ ಮತ್ತು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಇವರ ಸಂಯುಕ್ತಾಶ್ರಯದಲ್ಲಿ ಬೆಳಗಾವಿ ಜಿಲ್ಲಾ ಪೊಲೀಸ್ ಆಯುಕ್ತರ ಕಛೇರಿಯಲ್ಲಿ ಕಾರ್ಯಕ್ರಮ ನಡೆಯಿತು.

ನಗರ ಪೊಲೀಸ್ ಆಯುಕ್ತ ಭೂಷಣ ಗುಲಾಬರಾವ್ ಭೋರಸೆ, ರಾಜ್ಯ ಮಟ್ಟದ ಅಕ್ಕ ಪಡೆ ಸಂಯೋಜಕರಾದ ಸೈನಿ ರಾಜೇಂದ್ರ ಕುಮಾರ ಹಾಗೂ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿಇಲಾಖೆಯ ಉಪನಿರ್ದೇಶಕ ಚೇತನಕುಮಾರ್ ಎಂ.ಎನ್ ಹಾಗೂ ಬೆಳಗಾವಿ ವಿಭಾಗದ ಎಲ್ಲಾ ಜಿಲ್ಲೆಗಳ ಉಪನಿರ್ದೇಶಕರುಗಳು ಉಪಸ್ಥಿತರಿದ್ದರು.

ಬೆಳಗಾವಿ ಜಿಲ್ಲಾ ಪೊಲೀಸ್ ಆಯುಕ್ತರಾದ ಭೂಷಣ ಗುಲಾಬರಾವ್ ಭೋರಸೆ ಕಾರ್ಯಕ್ರಮವನ್ನು ಉದ್ಘಾಟಿಸಿ, ದೇಶದ ಪ್ರಗತಿ ಸಾಧಿಸಲು ಮಹಿಳೆಯರ ಪಾತ್ರ ದೊಡ್ಡದು ಎಂದು, ಜಪಾನ ದೇಶದ ಎರಡನೇ ಮಹಾಯುದ್ದದ ನಂತರದ ಪರಿಸ್ಥಿತಿಯನ್ನು ಉದಾಹರಣೆ ನೀಡಿದರು. ಮಹಿಳೆ ಕೈ ಕಟ್ಟಿ ಕುಳಿತಿದ್ದರೆ ಜಪಾನ್ ದೇಶ ಇಂದು ಇಷ್ಟು ಪ್ರಗತಿ ಹೊಂದಲು ಸಾಧ್ಯವಾಗುತ್ತಿರಲಿಲ್ಲ ಎಂದು ವಿವರಿಸಿದರು. ನಮ್ಮ ದೇಶದಲ್ಲಿ ಮಹಿಳೆ ಮತ್ತು ಹೆಣ್ಣು ಮಗುವಿನ ಸಂರಕ್ಷಣೆ ಮತ್ತು ಸುರಕ್ಷತೆ ಮಹತ್ವ ತಿಳಿಸಿದರು.

ರಾಜ್ಯ ಸಂಯೋಜಕರಾದ ಶೈನಿ ರಾಜೇಂದ್ರ ಕುಮಾರ ಇವರು ಅಕ್ಕ ಪಡೆಯ ಬಗ್ಗೆ ಪ್ರಸ್ತಾವಿಕವಾಗಿ ವಿವರಿಸಿದರು.

ಕಾರ್ಯಕ್ರಮದ ಮುಖ್ಯ ಅತಿಥಿಗಳಾದ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಉಪನಿರ್ದೇಶಕ ಚೇತನ ಕುಮಾರ್ ಎಂ.ಎನ್. ಮಹಿಳೆಯರ ಶಕ್ತಿಯನ್ನು ಹಾಗೂ ಮಹಿಳೆಯ ಸಾಮರ್ಥ್ಯವನ್ನು ಪುರಾಣದ ಉಲ್ಲೇಖ ನೀಡಿ ತಿಳಿಸಿದರು.

ಇಂದು ವಿದ್ಯುತ್ ವ್ಯತ್ಯಯ

ಬೆಳಗಾವಿ: ಫೆ.21 ರಂದು ಬೆಳಿಗ್ಗೆ 9ರಿಂದ ಸಂಜೆ 5ರವರೆಗೆ ಕ.ವಿ.ಪ್ರ.ನಿ.ನಿ. ವತಿಯಿಂದ ನಾಲ್ಕನೇಯ ತ್ರೈಮಾಸಿಕ ಹಾಗೂ ಇತರೆ ತುರ್ತು ನಿರ್ವಹಣಾ ಕಾರ್ಯಗಳನ್ನು ಕೈಗೊಳ್ಳುತ್ತಿರುವುದರಿಂದ 110 ಕೆ.ವ್ಹಿ. ವಡಗಾಂವ ಉಪಕೇಂದ್ರದಿಂದ ಸರಬರಾಜು ಆಗುವ ಧಾಮನೆ, ಕುರುಬರಹಟ್ಟಿ, ಮಾಸ್ಗ್ಯಾನಟ್ಟಿ, ದೇವಗ್ಯಾನಟ್ಟಿ, ಔಚಾರಟ್ಟಿ, ಯರಮಾಳ, ಯಳ್ಳೂರ, ಸುಳಗಾ, ರಾಜಹಂಸಗಡ, ದೇಸೂರ, ನಂದಿಹಳ್ಳಿ, ಕೊಂಡಸಕೊಪ್ಪ, ಹಲಗಾ ಹಾಗೂ ಬಸ್ತವಾಡ ಗ್ರಾಮಗಳಿಗೆ ಹಾಗೂ ಸದರಿ ಗ್ರಾಮಗಳ ನೀರಾವರಿ ಪಂಪ್‌ಸೆಟ್ಟಗಳ ಏರಿಯಾಗಳಿಗೆ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯವಾಗಲಿದೆ ಎಂದು ಕಾರ್ಯನಿರ್ವಾಹಕ ಇಂಜಿನೀಯರರು (ವಿ), ಕಾ ಮತ್ತು ಪಾ ಗ್ರಾಮೀಣ ವಿಭಾಗ, ಹುವಿಸಕಂನಿ, ಅವರು ಪ್ರಕಟನೆಯಲ್ಲಿ ತಿಳಿಸಿದ್ದಾರೆ.

ಮೃತ ವಿದ್ಯಾರ್ಥಿ ಕುಟುಂಬಕ್ಕೆ ಚೆಕ್ ವಿತರಣೆ

ಸವದತ್ತಿ: ನಮ್ಮ ರಾಜ್ಯ ಸರ್ಕಾರ ಮಕ್ಕಳ ಸರ್ವಾಂಗೀಣ ಅಭಿವೃದ್ಧಿಗಾಗಿ ಸಾಕಷ್ಟು ಶ್ರಮವಹಿಸಿ ಕಾರ್ಯನಿರ್ವಹಿಸುತ್ತಿದೆ ಎಂದು ಶಾಸಕ ವಿಶ್ವಾಸ ವೈದ್ಯ ಹೇಳಿದರು.

ಸಮೀಪದ ಮುರಾರ್ಜಿ ದೇಸಾಯಿ ಮಾದರಿ ವಸತಿ ಶಾಲೆ, ಎಲ್ಲಮ್ಮನ ಗುಡ್ಡ ಶಾಲೆಗೆ ಭೇಟಿ ನೀಡಿ ಮಾತನಾಡಿದ ಅವರು, ಇಂತಹ ಅತ್ಯುತ್ತಮವಾದ ವಸತಿ ಶಾಲೆಗಳಲ್ಲಿ ವ್ಯಾಸಂಗ ಮಾಡಿದ ವಿದ್ಯಾರ್ಥಿ-ವಿದ್ಯಾರ್ಥಿನಿಯರು ಹೆಚ್ಚಿನ ಅಂಕ ಪಡೆದು ಉನ್ನತ ಹುದ್ದೆ ಅಲಂಕರಿಸಿದ್ದಾರೆ.

ಈ ಶಾಲೆಯಲ್ಲಿ ಏಳನೇ ತರಗತಿಯಲ್ಲಿ ವ್ಯಾಸಂಗ ಮಾಡುತ್ತಿದ್ದ ವಿದ್ಯಾರ್ಥಿ ತಾಲೂಕಿನ ಉಗರಗೋಳ ಗ್ರಾಮದ ಯಶವಂತ ಗದಿಗೆಪ್ಪ ಬುಳನ್ನವರ್ ಈತನು ಅಕಾಲಿಕವಾಗಿ ಮನೆಯಲ್ಲಿ ರೇಬೀಸ್ ರೋಗದಿಂದ ಮರಣ ಹೊಂದಿದ ಕಾರಣ ಆತನ ಪಾಲಕರಿಗೆ ಕರ್ನಾಟಕ ವಸತಿ ಶಿಕ್ಷಣ ಸಂಘ ಬೆಂಗಳೂರು ರವರು ಬಿಡುಗಡೆ ಮಾಡಿದ ಸುಮಾರು ಮೂರು ಲಕ್ಷ ರೂ. ಪರಿಹಾರ ಧನದ ಚೆಕ್ ನಾವು ಆತನ ಪಾಲಕರಿಗೆ ನೀಡುತ್ತಿದ್ದೇವೆ ಎಂದರೆ ಇದು ನಮ್ಮ ಸರ್ಕಾರ ಮಕ್ಕಳ ಬಗ್ಗೆ ಇಟ್ಟುಕೊಂಡ ಅಪಾರವಾದ ಕಾಳಜಿ ಹೊಂದಿದೆ ಎನ್ನುವುದಕ್ಕೆ ಇದು ಒಂದು ಉದಾಹರಣೆಯಾಗಿದೆ ಎಂದರು.

ಈ ಸಂದರ್ಭದಲ್ಲಿ ಸಮಾಜ ಕಲ್ಯಾಣ ಇಲಾಖೆಯ ಸಹಾಯಕ ನಿರ್ದೇಶಕ ಆರ್.ಆರ್. ಕುಲಕರ್ಣಿ ಮತ್ತು ಶಾಲೆಯ ಪ್ರಾಂಶುಪಾಲರಾದ ಎಂ.ವಿ.ಕುಂಬಾರ, ಉಪ ಪ್ರಾಂಶುಪಾಲರಾದ ಎನ್.ಡಿ. ಹುಡೇದ ಮತ್ತು ಶಿಕ್ಷಕಿಯರಾದ ಎಸ್.ಎಂ. ಡಂಬಳ, ಎಸ್.ಎಸ್. ಕರಬಶೆಟ್ಟರ, ಕೆ.ಡಿ. ಬೋವಿ, ಎ.ವೈ. ತಳವಾರ, ಶಿಕ್ಷಕರಾದ ಬಿ.ಕೆ. ನಾಯಕ, ಪಿ. ಬಿ. ಉಳವಿ, ಎಸ್.ಎಸ್. ಗೌಡ್ರ, ಬಶಿರಮ್ಮದ್ ಕಮತಗಿ, ನಿಲಯ ಪಾಲಕರಾದ ಬಸವರಾಜ್ ಹೂಗಾರ ಮತ್ತು ಶಿಕ್ಷಕರಾದ ಎಂ.ಎ. ಪಟ್ಟೇದ, ಕುಮಾರಿ ಕೀರ್ತಿ ಶಿಂಧೆ, ಸಂಗೀತ ಶಿಕ್ಷಕಿ ಶರ್ಮಿಳಾ ಹಿರೇಮಠ, ಕರಾಟೆ ಶಿಕ್ಷಕಿ ಸುಮನ್ ಕಮತೆ ಉಪಸ್ಥಿತರಿದ್ದರು.



ಸರ್ಕಾರಿ ಶಾಲೆಗಳಿಗೆ ಮೂಲ ಸೌಕರ್ಯ ಕಲ್ಪಿಸಿ

ಚಿಕ್ಕೋಡಿ: ಮಕ್ಕಳ ಕಲಿಕೆಯಲ್ಲಿ ತೊಡಗಿಕೊಳ್ಳಬೇಕಿದ್ದ ಶಿಕ್ಷಕರು ಶಾಲೆಯ ಸ್ವಚ್ಛತೆ, ಆಸ್ತಿ ರಕ್ಷಣೆ ಜವಾಬ್ದಾರಿಯನ್ನು ವಹಿಸುವುದು ಸರಿಯಲ್ಲ, ಇದಕ್ಕಾಗಿಯೇ ಬೇರೆ ಸಿಬ್ಬಂದಿಯನ್ನು ಸರ್ಕಾರ ನಿಯೋಜನೆ ಮಾಡಿ ಶಿಕ್ಷಕರು ಕಲಿಕೆಯಲ್ಲಿ ತೊಡಗಿಕೊಳ್ಳುವಂತಾಗಬೇಕು ಎಂದು ಕರ್ನಾಟಕ ರಕ್ಷಣಾ ವೇದಿಕೆ ತಾಲೂಕು ಅಧ್ಯಕ್ಷ ಸಂಜು ಬಡಿಗೇರ ಹೇಳಿದರು.

ಪಟ್ಟಣದ ಬಿಇಒ ಕಚೇರಿ ಎದುರಿನಲ್ಲಿ ಶುಕ್ರವಾರ ಪ್ರತಿಭಟನೆ ಮಾಡಿ ಮಾತನಾಡಿದ ಅವರು, ಪ್ರತಿಯೊಂದು ಸರ್ಕಾರಿ ಶಾಲೆಗಳಲ್ಲಿ ಸಿಸಿ ಕ್ಯಾಮರಾ ಅಳವಡಿಸಬೇಕು. ಶಾಲೆಗೆ ಕಾಂಪೌಂಡ್ ನಿರ್ಮಾಣ, ಶುದ್ಧ ಕುಡಿಯುವ ನೀರಿನ ಘಟಕ ಸೇರಿದಂತೆ ಮೂಲ ಸೌಕರ್ಯಗಳನ್ನು ಕಲ್ಪಿಸಿಕೊಡಬೇಕೆಂದು ಒತ್ತಾಯಿಸಿದರು.


ಸಮಾಜ ಸೇವಕ ಚಂದ್ರಕಾಂತ ಹುಕ್ಕೇರಿ ಮಾತನಾಡಿ, ಸರ್ಕಾರಿ ಶಾಲೆಗಳ ಉಳಿವಾಗಿ ಸ್ಥಳೀಯ ಶಾಸಕರ ನಿರ್ಲಕ್ಷ್ಯ ಎದ್ದು ಕಾಣುತ್ತಿದೆ. ಈ ಕುರಿತು ಗಮನ ಹರಿಸಿ ಅನುದಾನ ತಂದು ಸರ್ಕಾರಿ ಶಾಲೆಗಳ ಅಭಿವೃದ್ದಿಗೆ ಒತ್ತು ನೀಡಬೇಕೆಂದು ಆಗ್ರಹಿಸಿದರು.

ಈ ಕುರಿತು ಚಿಕ್ಕೋಡಿ ಉಪವಿಭಾಗಾಧಿಕಾರಿ ಸುಭಾಷ ಸಂಪಗಾವಿ, ಡಿಡಿಪಿಐ ಆರ್.ಎಸ್. ಸೀತಾರಾಮು ಅವರಿಗೆ ಕರ್ನಾಟಕ ರಕ್ಷಣಾ ವೇದಿಕೆ ವತಿಯಿಂದ ಮನವಿ ಸಲ್ಲಿಸಲಾಯಿತು. ಈ ಸಂದರ್ಭದಲ್ಲಿ ಕರವೇ ಪದಾಧಿಕಾರಿಗಳಾದ ಪ್ರತಾಪ ಪಾಟೀಲ, ಸುನೀಲ ತಾರದಾಳೆ, ಸಂಜು ಕಾಂಬಳೆ, ಅನಿಲ ನಾವಿ, ಖಾನಪ್ಪ ಬಾಡಕರ, ರಫೀಕ್ ಪಠಾಣ, ಅಮೂಲ ನಾವಿ, ಶಿವಾಜಿ ಖಾಡೆ, ಮುಂತಾದವರು ಇದ್ದರು.



ಬೇಡಿಕೆ ಈಡೇರಿಕೆಗೆ ಆಗ್ರಹಿಸಿ ಸಿಎಂಗೆ ವಿಪ ಸದಸ್ಯ ಹುಕ್ಕೇರಿ ಮನವಿ

ಚಿಕ್ಕೋಡಿ: ಚಿಕ್ಕೋಡಿ ವಿಭಾಗದಲ್ಲಿ ಕ್ಯಾನ್ಸರ್ ಆಸ್ಪತ್ರೆ ನಿರ್ಮಾಣ ಹಾಗೂ ಕೃಷ್ಣಾ ನದಿಯ ಇಂಗಳಿ-ಜಲಾಲಪೂರ ನಡುವೆ ಸೇತುವೆ ನಿರ್ಮಾಣ ಕಾಮಗಾರಿಗೆ ಅನುದಾನ ಘೋಷಣೆ ಮಾಡುವಂತೆ ಕರ್ನಾಟಕ ಸರ್ಕಾರದ ದೆಹಲಿ ವಿಶೇಷ ಪ್ರತಿನಿಧಿ, ವಿಪ ಸದಸ್ಯ ಪ್ರಕಾಶ ಹುಕ್ಕೇರಿ ಬೆಂಗಳೂರಿನಲ್ಲಿ ಸಿಎಂ ಸಿದ್ದರಾಮಯ್ಯ ಅವರನ್ನು ಗುರುವಾರ ಭೇಟಿ ಮಾಡಿ ಮನವಿ ಸಲ್ಲಿಸಿದರು.




ಕೃಷ್ಣಾ ನದಿ ಪ್ರವಾಹದಿಂದ ಮುಕ್ತರಾಗಲು ಇಂಗಳಿ-ಜಲಾಲಪೂರ ನಡುವೆ ಸೇತುವೆ (ಬ್ರಿಡ್ಜ್ ಕಂ ಬ್ಯಾರೇಜ್) ನಿರ್ಮಾಣ ಕಾಮಗಾರಿಗೆ 71.52 ಕೋಟಿ ರೂ.ಮೊತ್ತಕ್ಕೆ ಆಡಳಿತಾತ್ಮಕ ಅನುಮೋದನೆ ನೀಡಿ ಬಾಕಿ ಉಳಿದ ಕಾಮಗಾರಿಯ ಟೆಂಡರ್ ಕರೆಯಬೇಕು. ಇನ್ನು ಹೆಚ್ಚುವರಿಯಾಗಿ 37 ಕೋಟಿ ರೂ. ಅನುದಾನ ಅವಶ್ಯಕವಾಗಿದ್ದು, ಇದನ್ನು ಆಯವ್ಯಯದಲ್ಲಿ ಮಂಡಿಸುವಂತೆ ವಿನಂತಿಸಿಕೊಂಡರು.

ಚಿಕ್ಕೋಡಿ ವಿಭಾಗ ವ್ಯಾಪ್ತಿಯಲ್ಲಿ ಮಾರಕ ಕ್ಯಾನ್ಸರ್ ರೋಗಿಗಳ ಸಂಖ್ಯೆ ಇತ್ತೀಚಿನ ದಿನಗಳಲ್ಲಿ ಹೆಚ್ಚುತ್ತಿದ್ದು, ನೆರೆಯ ಮಹಾರಾಷ್ಟ್ರದ ದೊಡ್ಡ ದೊಡ್ಡ ನಗರಗಳಿಗೆ ಸ್ಥಳೀಯರು ತೆರಳಿ ಚಿಕಿತ್ಸೆ ಹಾಗೂ ಉಪಚಾರ ಪಡೆಯುದಕ್ಕೆ ತೊಂದರೆಯಾಗುತ್ತಿದೆ. ಚಿಕ್ಕೋಡಿ ವಿಭಾಗ ವ್ಯಾಪ್ತಿಯ ಅಥಣಿ ತಾಲ್ಲೂಕಿನಲ್ಲಿ 2050, ಚಿಕ್ಕೋಡಿ ತಾಲ್ಲೂಕಿನಲ್ಲಿ 2629, ಗೋಕಾಕನಲ್ಲಿ 1348, ಹುಕ್ಕೇರಿಯಲ್ಲಿ 1073, ರಾಯಬಾಗ ತಾಲೂಕಿನಲ್ಲಿ 1195 ಸೇರಿದಂತೆ ಒಟ್ಟು 8295 ಕ್ಯಾನ್ಸರ್ ಪೀಡಿತ ರೋಗಿಗಳು ಇರುವದಾಗಿ ಆರೋಗ್ಯ ಇಲಾಖೆ ಮಾಹಿತಿ ನೀಡಿದೆ. ಹೀಗಾಗಿ ಜನರಿಗೆ ಅನುಕೂಲವಾಗುವಂತೆ ಕಿದ್ವಾಯಿ ಸ್ಮಾರಕ ಗ್ರಂಥಿ ಸಂಸ್ಥೆಯ ಕ್ಯಾನ್ಸರ್ ಆಸ್ಪತ್ರೆ ಶಾಖೆಯನ್ನು ಚಿಕ್ಕೋಡಿ ವಿಭಾಗ ಮಟ್ಟದಲ್ಲಿ ಪ್ರಾರಂಭಿಸುವಂತೆ ಮನವಿ ಮಾಡಿದರು.

ಮಾಜಿ ಶಾಸಕ ಲಿಂ. ರಾಜಣ್ಣ ಮಾಮನಿ ಜನ್ಮದಿನ: ಹಣ್ಣು-ಹಂಪಲು ವಿತರಣೆ

ಸವದತ್ತಿ: ಮಾಜಿ ಶಾಸಕರಾಗಿದ್ದ ಲಿಂ. ರಾಜಣ್ಣ ಕರಬಸಪ್ಪ ಮಾಮನಿ ಅವರ 66ನೇ ಜನ್ಮದಿನದ ನಿಮಿತ್ತ ಅಭಿಮಾನಿ ಬಳಗದವರು ಸವದತ್ತಿ ತಾಲೂಕು ಸಾರ್ವಜನಿಕ ಸರ್ಕಾರಿ ಆಸ್ಪತ್ರೆಯಲ್ಲಿ ರೋಗಿಗಳಿಗೆ ಹಣ್ಣು-ಹಂಪಲು, ಬಿಸ್ಕೆಟ್ ವಿತರಣೆ ಮಾಡಿದರು.

ಈ ಸಂದರ್ಭದಲ್ಲಿ ಕು. ಶ್ರೇಯಸ್ ವಿರೂಪಾಕ್ಷಪ್ಪ ಮಾಮನಿ, ಚೇತನಾ ಆನಂದ ಮಾಮನಿ, ಗಿರಿಶ ಹಂಪಣ್ಣವರ, ಮುನ್ನಾ ಶೆಟ್ಟರ, ಪ್ರಕಾಶ ನರಿ, ಸಂಜೀವಕುಮಾರ ನವಲಗುಂದ, ಸೋಮು ಹದ್ಲಿ, ಮಂಜುನಾಥ ದೊಡಮನಿ, ಚೇತನ ಪಾವಡದ, ಮುತ್ತು ದೇವರೆಡ್ಡಿ, ಕೃಷ್ಣಮೂರ್ತಿ ತೊರಗಲ್ಲ್, ಸದಾನಂದ ಪಾಟೀಲ, ಮಹಾದೇವ ಮುರಗೋಡ, ಬಸವರಾಜ ಸಾಲಿಮಠ, ಸೋಮು ಕುರಿ, ಮಹೇಶ ತಿಗಡಿ, ಮಹಾಂತೇಶ ಸುಬೇದಾರ, ಉದಯ ಹೂಗಾರ, ಹಣಮಂತ ಪಾಟೀಲ, ಮಲ್ಲೇಶ ಸುಳೇಭಾವಿ, ಬಸನಗೌಡ ಪಾಟೀಲ, ವೀರಣ್ಣ ಗುಡೆನ್ನವರ, ಹಸನ ಯಡಳ್ಳಿ, ಗುರು ನರಿ, ಬಸವರಾಜ ಇಂಚಲ, ಸಂತೋಷ ಹೊಂಗಲ, ಫಕ್ಕೀರಪ್ಪ ತಾಂದಳೆ, ವಿನಾಯಕ ಪಾವಡದ, ನವೀನ ಪಾವಡದ, ನಾಗರಾಜ ಹೊಸೂರ, ಉಮೇಶ ಶಿಂಧೋಗಿ, ಶಿವು ಶಿಂತ್ರಿ ಹಾಗೂ ಭಾರತೀಯ ಜನತಾ ಪಕ್ಷದ ಪದಾಧಿಕಾರಿಗಳು, ಮುಖಂಡರು, ಹಿರಿಯರು, ವೈದ್ಯಾಧಿಕಾರಿಗಳು, ಸಿಬ್ಬಂದಿ ವರ್ಗದವರು, ಯುವಕರು ಉಪಸ್ಥಿತಿರಿದ್ದರು.



ಭಾರತೀಯ ಸೇನೆಗೆ ಆಯ್ಕೆ: ಸನ್ಮಾನ



ಹಲ್ಯಾಳ: ಗ್ರಾಮದ ಕಾವೇರಿ ಶಂಕರ ಹುಡೇದ ಇವರು ನಮ್ಮ ಭಾರತೀಯ ಸೇನೆಗೆ ಆಯ್ಕೆಯಾಗಿರುವುದು ಹೆಮ್ಮೆಯ ವಿಷಯವಾಗಿದೆ. ಈ ಬಾಲಕಿ ಸೇನೆಗೆ ಆಯ್ಕೆಯಾಗಿ ನಮ್ಮ ಕನ್ನಡ ಶಾಲೆಯ ಕೀರ್ತಿ ಮತ್ತು ಇನ್ನುಳಿದ ವಿದ್ಯಾರ್ಥಿಗಳಿಗೆ ಸ್ಪೂರ್ತಿಯಾಗಿದ್ದಾಳೆ ಎಂದು ಮುಖ್ಯೋಪಾಧ್ಯಾಯರಾದ ಎ.ಎಸ್. ದೇವಮಾನೆ ಗುರುಮಾತೆ ಹೇಳಿದರು.

ಬಡತನದಲ್ಲಿ ಅರಳಿದ ಪ್ರತಿಭೆ ಎಂದು ಗ್ರಾಮಸ್ಥರು ಪ್ರಶಂಸೆ ಪಟ್ಟರು. ತದನಂತರ ಮಾತನಾಡಿದ ಕಾವೇರಿ, ನಾನು ಕಲಿತಿರುವ ಹೆಮ್ಮೆಯ ಶಾಲೆ ನಾವು ಯಶಸ್ವಿ ಹೊಂದಬೇಕಾದರೆ ತಂದೆ-ತಾಯಿ ಪೋಷಕರ ಪ್ರೀತಿ, ಶಿಕ್ಷಕರ ಮಾರ್ಗದರ್ಶನ, ಹಿರಿಯರ ಆಶೀರ್ವಾದ ಜೊತೆಗೆ ನಮ್ಮ ಪ್ರಯತ್ನ ಇದ್ದರೆ ಎಲ್ಲವನ್ನು ಜಯಿಸಬಹುದು ಎಂದು ವಿದ್ಯಾರ್ಥಿಗಳಿಗೆ ಹೇಳಿದರು.

ಸಾಧನೆ ಮಾಡಿರುವ ಕಾವೇರಿಗೆ ಹಲ್ಯಾಳ ಕ್ರೀಡಾಭಿಮಾನಿಗಳಿಂದ ತಾಯಿ ಮಗಳಿಗೆ ಸನ್ಮಾನ ಮಾಡಿ ಅಭಿನಂದನೆ ತಿಳಿಸಿದರು.

ಈ ವೇಳೆ ಮಾಂತೇಶ ಇಂಗಳಿ, ಪ್ರಭು ಬಾಗಿ, ಶಶಿಕಾಂತ್ ದಳವಾಯಿ, ದೀಪಕ್ ಮುರಗುಂಡಿ, ಕುಶಾಲ್ ಬನಸೋಡೆ, ಪದ್ಮನ್ನ ಕಾಂಬಳೆ, ವಿನಾಯಕ ಕಾಂಬಳೆ, ಗ್ರಾಮದ ಶಿಕ್ಷಕರು, ಎಸ್‌ಡಿಎಂಸಿ ಅಧ್ಯಕ್ಷರು, ಕ್ರೀಡಾಭಿಮಾನಿಗಳು ವಿದ್ಯಾರ್ಥಿಗಳಿದ್ದರು.

ಕಲ್ಪವೃಕ್ಷ ಚಿಣ್ಣರ ಸಂಭ್ರಮ: ಸ್ನೇಹ ಸಮ್ಮೇಳನ

ಕೊಕಟನೂರ: ಗ್ರಾಮದಲ್ಲಿ ಶ್ರೀಮತಿ ಗಿರಿಜಾ ಎಸ್. ಜೋಶಿ ಆಂಗ್ಲ ಮಾಧ್ಯಮ ಪ್ರಾಥಮಿಕ ಶಾಲೆಯಲ್ಲಿ ಗುರುವಾರ ಕಲ್ಪವೃಕ್ಷ ಚಿಣ್ಣರ ಸಂಭ್ರಮ ಹಾಗೂ 10ನೇ ತರಗತಿ ವಾರ್ಷಿಕ ಸ್ನೇಹ ಮತ್ತು ಬಹುಮಾನ ವಿತರಣಾ ಸಮಾರಂಭ ಕಾರ್ಯಕ್ರಮವನ್ನು ನಡೆಯಿತು.

ಈ ಸಂದರ್ಭದಲ್ಲಿ ಅಥಣಿ ಶೆಟ್ಟರ ಮಠದ ಪ. ಪೊ.ಮರುಳಸಿದ್ಧ ಸ್ವಾಮೀಜಿ ಸಾನ್ನಿಧ್ಯ ವಹಿಸಿದ್ದರು. ಶ್ರೀಶೈಲ ಕಡದೇವರಮಠ ಅಧ್ಯಕ್ಷತೆ ವಹಿಸಿದ್ದರು. ಸೋಮೇಶ್ವರ ಜೋಶಿ, ಸುರೇಶ್ ಚಿಕ್ಕಟ್ಟಿ, ಚಿದಂಬರ ಜೋಶಿ, ರಾಮು ಭೋಸಲೆ, ಅಣ್ಣಪ್ಪ ಸವದಿ, ಚೇತನ್ ಜೋಶಿ, ಕಿರಣ ಜೋಶಿ ಹಾಗೂ ಸಂಸ್ಥೆಯ ಸರ್ವ ಸದಸ್ಯರು ಆಡಳಿತಾಧಿಕಾರಿಗಳು ಮುಖ್ಯೋಪಾಧ್ಯಯರು ಮತ್ತು ಪಾಲಕರು ಪ್ರತಿನಿಧಿಗಳು ಬೋಧಕ ಮತ್ತು ಬೋಧಕೇತರ ಸಿಬ್ಬಂದಿ ಹಾಗೂ ವಿದ್ಯಾರ್ಥಿ ವಿದ್ಯಾರ್ಥಿನಿಯರು ಊರಿನ ಗ್ರಾಮಸ್ಥರು ಸೇರಿದಂತೆ ಹಲವರು ಇತರ ಇದ್ದರು.



ಛತ್ರಪತಿ ಶಿವಾಜಿ ಮಹಾನ್ ದೈವಭಕ್ತ: ಪ್ರಭಾಕರ ಚೌಹಾಣ

ಕಾಗವಾಡ: ಛತ್ರಪತಿ ಶಿವಾಜಿ ಮಹಾರಾಜರು ಮುಂದಾಲೋಚನೆ, ಯುದ್ಧ ತಂತ್ರಗಾರಿಕೆ, ರಾಷ್ಟ್ರಭಕ್ತಿ, ಹಾಗೂ ದೈವಭಕ್ತರಾಗಿದ್ದ ಅವರು ಹಿಂದವಿ ಸಾಮ್ರಾಜ್ಯವನ್ನು ಸ್ಥಾಪಿಸಿ ಹಿಂದೂ ಹೃದಯ ಸಾಮ್ರಾಟರಾದರು ಎಂದು ಅಥಣಿ ಮರಾಠಾ ಸಮಾಜ ಮುಖಂಡ ಪ್ರಭಾಕರ ಚೌಹಾಣ ಹೇಳಿದರು.



ಐನಾಪುರ ಪಟ್ಟಣದ ಗಾಂಧಿ ಚೌಕ್‌ದಲ್ಲಿ ಮರಾಠಾ ಸಮಾಜ ವತಿಯಿಂದ ಗುರುವಾರ ಹಮ್ಮಿಕೊಂಡ ಶಿವಾಜಿ ಮಹಾರಾಜರ ಜಯಂತಿ ನಿಮಿತ್ಯ ವಿವಿಧ ಸಾಂಸ್ಕೃತಿಕ ಸಮಾರಂಭವನ್ನು ದೀಪ ಬೆಳಗಿಸುವುದರೊಂದಿಗೆ ಉದ್ಘಾಟಿಸಿ ಮಾತನಾಡಿದ ಅವರು, ಹಿಂದೂ ಜನಾಂಗ ಉಳಿಸುವ ಸಲುವಾಗಿ ಮೌಲವಿ ಜನಾಂಗ ಒಗ್ಗೂಡಿಸಿ ರಾಯಗಡದಲ್ಲಿ ಕೋಟೆ ಕಟ್ಟಿಸಿ ಹಿಂದೂ ಸಾಮ್ರಾಜ್ಯವನ್ನು ಸ್ಥಾಪನೆ ಮಾಡಿದ್ದವರು ಶಿವಾಜಿ ಮಹಾರಾಜರು. ಅವರು ಜಾತ್ಯಾತೀತರಾಗಿದರು, ಹಿಂದೂ ಸಾಮ್ರಾಜ್ಯವನ್ನು ನಾಶ ಮಾಡುವವರ ವಿರುದ್ಧ ಮಾತ್ರ ಯುದ್ಧ ಮಾಡುತ್ತಿದರು ಎಂದರು.

ಇನ್ನೊರ್ವ ಅತಿಥಿ ಪ್ರಕಾಶ ಮೋರೆ ಮಾತನಾಡಿ, ಗೆರಿಲ್ಲಾ ಮಾದರಿಯ ಯುದ್ಧವನ್ನು ಮೊಟ್ಟಮೊದಲ ಬಾರಿಗೆ ಆರಂಭಿಸಿದ ಕೀರ್ತಿ ಶಿವಾಜಿ ಮಹಾರಾಜರಿಗೆ ಸಲ್ಲುತ್ತದೆ. ಅವರ ದೃಢ ನಿರ್ಧಾರ ಹಾಗೂ ಅವರ ಆದರ್ಶಗಳನ್ನು ಪ್ರತಿಯೊಬ್ಬರು ಅಳವಡಿಸಿಕೊಳ್ಳಬೇಕು ಎಂದು ಹೇಳಿದರು.

ಬೆಳಗ್ಗೆ ಸುಮಂಗಲೆಯರಿಂದ ಗಾಂಧಿಚೌಕ್ ವೃತ್ತದಲ್ಲಿ ಪಟ್ಟಣದ ಮಹಿಳೆಯರು ಕೂಡಿಕೊಂಡು ಬಾಲ ಶಿವಾಜಿ ಮಹಾರಾಜರ ಜೊಗುಳ ಹಾಡುವುದರ ಮೂಲಕ ನಾಮಕರಣ ಮಾಡಿ ತೊಟ್ಟಿಲೊತ್ಸವ ಕಾರ್ಯಕ್ರಮ ಮಾಡಿದರು.

ಪಪಂ ಸದಸ್ಯ ತಮ್ಮಣ್ಣಾ ಪಾರಶೆಟ್ಟಿ, ಸಂಜಯ ಭಿರಡಿ ಮಾತನಾಡಿದರು. ಅಧ್ಯಕ್ಷ ತೆಯನ್ನು ಹಿರಿಯರಾದ ದಾದಾ ಪಾಟೀಲ ವಹಿಸಿದ್ದರು.

ವೇದಿಕೆ ಮೇಲೆ ಪಪಂ ಸದಸ್ಯ ಪ್ರವೀಣ ಗಾಣಿಗೇರ, ಉಮೇಶ ಕಾರ್ಚಿ, ಡಾ ಸಚೀನ ನಿಕ್ಕಂ, ಪ್ರಕಾಶ ಮಾನೆ, ಭರತ ಲೋಂಡೆ, ರಾಜೇಂದ್ರ ಪೋತದಾರ, ಇತರರು ಇದ್ದರು.

ಪ್ರಾಸ್ತಾವಿಕವಾಗಿ ಕುಮಾರ ಗಾಣಿಗೇರ ಮಾತನಾಡಿದರು. ಅಣ್ಣಾಸಾಬ ಜಾಧವ ಸ್ವಾಗತಿಸಿದರು ಶಿವಗೌಡ ಚೌಗಲಾ ನಿರೂಪಿಸಿ ವಂದಿಸಿದರು.

ನಂತರ ವಿವಿಧ ಸಾಂಸ್ಕೃತಿಕ (ಡ್ಯಾನ್ಸ್) ಸ್ಪರ್ಧೆಗಳು ಜರುಗಿದವು. ಪ್ರಥಮ ಕೆ.ಆರ್.ಇ ಶಿಕ್ಷಣ ಸಂಸ್ಥೆಯ ಹೈಸ್ಕೂಲ್ ವಿದ್ಯಾರ್ಥಿನಿಯರು, ದ್ವಿತೀಯ ಸರ್ಕಾರಿ ಹೆಣ್ಣು ಮಕ್ಕಳ ಶಾಲೆಯ ವಿದ್ಯಾರ್ಥಿನಿಯರು, ತೃತೀಯ ಅಲ್ಪಸಂಖ್ಯಾತರ ಮುರಾರ್ಜಿ ದೇಸಾಯಿ ವಸತಿ ಶಾಲೆ ಚತುರ್ಥ ಕನ್ನಡ ಗಂಡು ಮಕ್ಕಳ ಶಾಲೆ ಕೃಷ್ಣಾ ಕಿತ್ತೂರ ವಿದ್ಯಾರ್ಥಿನಿಯರು ಹಂಚಿಕೊಂಡರು ಮರಾಠಾ ಸಮಾಜ ಭಾಂದವರು ಪಟ್ಟಣದ ಎಲ್ಲ ನಾಗರಿಕರು ಇತರರು ಇದ್ದರು.

ಕಿರುಸುದ್ದಿ

ವಿದ್ಯಾರ್ಥಿಗಳ ಶುಭಕೋರುವ ಸಮಾರಂಭ ಇಂದು

◆ **ಬೀಳಗಿ:** ತಾಲೂಕಿನ ಕುಂದರಗಿ ಗ್ರಾಮದ ಪ್ರತಿಷ್ಠಿತ ರಾಮಲಿಂಗೇಶ್ವರ ವಿದ್ಯಾವರ್ಧಕ ಸಂಘದ ರಾಮಲಿಂಗೇಶ್ವರ ಸ್ವತಂತ್ರ ಪದವಿ ಪೂರ್ವ ಕಾಲೇಜಿನ 2025-26ನೇ ಶೈಕ್ಷಣಿಕ ಸಾಲಿನ ದ್ವಿತೀಯ ಪಿಯುಸಿ ವಿದ್ಯಾರ್ಥಿಗಳ ಶುಭಕೋರುವ ಸಮಾರಂಭ ಫೆ.21ರಂದು ಬೆಳಗ್ಗೆ 10 ಗಂಟೆಗೆ ಕಾಲೇಜು ಸಭಾಭವನದಲ್ಲಿ ನಡೆಯಲಿದೆ. ರಾಮಲಿಂಗೇಶ್ವರ ವಿದ್ಯಾವರ್ಧಕ ಸಂಘದ ಅಧ್ಯಕ್ಷ ಚರಂತಿಮಠದ ವೀರಸಂಗಮೇಶ್ವರ ಶಿವಾಚಾರ್ಯ ಸ್ವಾಮೀಜಿ ಸಾನ್ನಿಧ್ಯ ವಹಿಸುವರು. ರಾಮಲಿಂಗೇಶ್ವರ ವಿದ್ಯಾವರ್ಧಕ ಸಂಘದ ಚೇರಮನ್ ಬಸವರಾಜ ಮೋತಿ ಅಧ್ಯಕ್ಷತೆ ವಹಿಸುವರು. ಕನ್ನಡ ಜಾನಪದ ಪರಿಷತ್ ಜಿಲ್ಲಾಧ್ಯಕ್ಷ ಡಿ.ಎಂ. ಸಾಹುಕಾರ ಸಮಾರಂಭ ಉದ್ಘಾಟಿಸುವರು. ಅತಿಥಿಗಳಾಗಿ ರಾಮಲಿಂಗೇಶ್ವರ ವಿದ್ಯಾವರ್ಧಕ ಸಂಘದ ಗೌರವ ಕಾರ್ಯದರ್ಶಿ ವಿ.ಎಸ್.ಸಂಕಣ್ಣವರ, ನಿರ್ದೇಶಕರಾದ ಜಿ.ಕೆ.ಪಾಟೀಲ, ಜಿ.ಎಂ.ಕುಬಿ, ಡಾ.ವಿ.ಐ.ಅಕ್ಕಿ, ಡಾ.ಆರ್. ಎಂ.ಜಿಡಿಮಠ, ಆರ್.ಎಸ್.ಗಾಜಿಪ್ಪನವರ, ಬಿ.ವೈ.ನೀರಲ್ಲ, ಎಸ್.ಕೆ.ಮಠಪತಿ, ಎಸ್.ಎಚ್.ವಟವಟಿ, ಕಾರ್ಯದರ್ಶಿ, ಎಸ್.ಐ.ನಿರಾಕಾರಿ, ಪ್ರಭಾರ ಪ್ರಾಚಾರ್ಯ ಕೆ.ಪಿ.ರಾಜಮನಿ ಆಗಮಿಸುವರೆಂದು ಪ್ರಕಟಣೆ ತಿಳಿಸಿದೆ.

ಗಮನಸೆಳೆದ ಮಕ್ಕಳ ನೃತ್ಯೋತ್ಸವ

◆ **ಬೀಳಗಿ:** ತಾಲೂಕಿನ ಚಿಕ್ಕಾಲಗುಂಡಿ ಗ್ರಾಮದ ಮಲ್ಲಿಕಾರ್ಜುನ ಮಠದಲ್ಲಿ ಕಾಶಿಲಿಂಗೇಶ್ವರ ಪೂರ್ವ ಪ್ರಾಥಮಿಕ ಶಾಲೆ ಹಾಗೂ ಕಾಶಿರಿಕತ್ತ ಸಿದ್ಧೇಶ್ವರ ಕಿರಿಯ ಪ್ರಾಥಮಿಕ ಶಾಲೆಯ ವಾರ್ಷಿಕ ಸ್ನೇಹ ಸಮ್ಮೇಳನ ಹಾಗೂ ಪ್ರತಿಭಾ ಪುರಸ್ಕಾರ, ಚಿಣ್ಣರ ನೃತ್ಯೋತ್ಸವ ಅದ್ದೂರಿಯಾಗಿ ನಡೆಯಿತು.



ಬಾಗಲಕೋಟೆ ಬಿವಿವಿ ಸಂಘದ ಸದಸ್ಯ ರವೀಂದ್ರಯ ಸಾವಳಗಿಮಠ ಮಾತನಾಡಿ, ಶಿಕ್ಷಕರು ವರ್ಗದ ಕೊಠಡಿಯಲ್ಲಿ ಮಕ್ಕಳಿಗೆ ವಿದ್ಯೆಯ ಜೊತೆಗೆ ಸಂಸ್ಕಾರವನ್ನು ಕಲಿಸಿ ಕೊಡಬೇಕು. ದೇಶಭಕ್ತಿ ತುಂಬಬೇಕು. ಏಕಾಗ್ರತೆಗಾಗಿ ಯೋಗ, ಧ್ಯಾನ ಕಲಿಸಿ ಕೊಡಬೇಕೆಂದು ಹೇಳಿದರು. ವಿ.ಎಸ್.ಸಾಲಗಾರ, ಕನ್ನಡ ಜಾನಪದ ಪರಿಷತ್ ಜಿಲ್ಲಾಧ್ಯಕ್ಷ ಡಿ.ಎಂ.ಸಾಹುಕಾರ ಮಾತನಾಡಿ, ಮಕ್ಕಳ ಬೆಳವಣಿಗೆಯಲ್ಲಿ ಪಾಲಕರ ಪಾತ್ರ ಬಹುದೊಡ್ಡದು. ಮಕ್ಕಳನ್ನು ಶಾಲೆಗೆ ಕಳಿಸಿದರೆ ಸಾಲದು. ಮಕ್ಕಳ ಮೇಲೆ ಸೂಕ್ತ ನಿಗಾ ಇಡಬೇಕು. ಮಕ್ಕಳ ಕೈಗೆ ಮೊಬೈಲ್ ಕೊಡಬೇಡಿರಿ ಎಂದರು. ಆಚಾರ ಶಿವಾರಾದ ಮಕ್ಕಳಿಂದ ವಿವಿಧ ಸಾಂಸ್ಕೃತಿಕ, ಮನರಂಜನಾ ಕಾರ್ಯಕ್ರಮಗಳ ಯಶಸ್ವಿಯಾದವು. ಮುಖ್ಯಗುರು ಎಚ್.ಎಲ್.ಜೋಗಿ ವರದಿ ವಾಚಿಸಿದರು. ಬುದ್ನಿ ಚಿಕ್ಕು ಶಂಕರಾನಂದ ಸ್ವಾಮಿಗಳು ಸಾನ್ನಿಧ್ಯ ವಹಿಸಿ ಆಶೀರ್ವಚನ ನೀಡಿದರು. ಅರ್ಚಕ ಕಾಶಪ್ಪ ಗಡಾದ ನೇತೃತ್ವ ವಹಿಸಿದ್ದರು. ಕಾಶಿಲಿಂಗೇಶ್ವರ ಗ್ರಾಮೀಣಾಭಿವೃದ್ಧಿ ಶಿಕ್ಷಣ ಸಂಸ್ಥೆಯ ಅಧ್ಯಕ್ಷ ವೆಂಕಪ್ಪ ನೆನ್ನಿ ಅಧ್ಯಕ್ಷತೆ ವಹಿಸಿದ್ದರು. ಮುಖಂಡರಾದ ಮರುಳಸಿದ್ದಯ್ಯ ಮಠಪತಿ, ವೀರೇಶ ಖೋತ, ರುದ್ರಗೌಡ ಗೌಡರ, ಲಕ್ಷ್ಮಣ ಹುದ್ದಾರ, ಸಂಗಮೇಶ ಹೂಗಾರ, ಸದಾಶಿವ ಜುಂಜೂರಿ, ಸದಾಶಿವ ಆಗೋಜಿ, ರಾಮಪ್ಪ ನಾಯ್ಕರ, ರಾಮಣ್ಣ ಜೋಗಿ, ಮತ್ತಿತರಿದ್ದರು. ಎಸ್.ಎಸ್. ಮಟಗಾರ ಸ್ವಾಗತಿಸಿದರು. ಪ್ರವೀಣ ಯಂಗಿ ನಿರೂಪಿಸಿದರು. ಲಕ್ಷ್ಮಣ ನೆನ್ನಿ ವಂದಿಸಿದರು.

ನಿಧನ ಸುದ್ದಿ

ಜ್ಯೋತಿ ಬೀಳಗಿ



◆ **ಕೆರೂರ:** ಪಟ್ಟಣದ ಹೊಸಪೇಟೆ ಬಡಾವಣೆಯ ನಿವಾಸಿ ಜ್ಯೋತಿ ದುಂಡಪ್ಪ ಬೀಳಗಿ(42) ನಿಧನರಾದರು, ಮೃತರಿಗೆ ಪತಿ, ಓರ್ವ ಪುತ್ರ ಇದ್ದಾರೆ.

ರತ್ನಾಬಾಯಿ ರೇವಣಕರ



◆ **ಬಾಗಲಕೋಟೆ:** ಬಿಜೆಪಿ ಮುಖಂಡ ರಾಜು ರೇವಣಕರ ಅವರ ಮಾತೋಶ್ರೀ ರತ್ನಾಬಾಯಿ ಶ್ರೀಧರ ರೇವಣಕರ್(82) ಶುಕ್ರವಾರ ನವನಗರದ ಸೆಕ್ಟರ್ ನಂ.30ರ ನಿವಾಸದಲ್ಲಿ ನಿಧನರಾದರು. ಓರ್ವ ಪುತ್ರಿ, ಮೂವರು ಪುತ್ರರು ಮೃತರು ಇದ್ದಾರೆ.

ಉಮಾಬಾಯಿ ಗೌಡರ(ಲಮಾಣಿ)



◆ **ಕೆರೂರ:** ಸಮೀಪದ ನರೇನೂರ ಎಲ್‌ಟಿ -2 ಗ್ರಾಮದ ಲಂಬಾಣಿ ಸಮುದಾಯದ ಹಿರಿಯ ಮಹಿಳೆ ಉಮಾಬಾಯಿ ಗೋವಿಂದಪ್ಪ ಗೌಡರ/ ಲಮಾಣಿ(61) ನಿಧನರಾದರು. ಅವರಿಗೆ ಮೂವರು ಪುತ್ರರು,ಓರ್ವ ಪುತ್ರಿ,ಪತಿ ಸೇರಿದಂತೆ ಅಪಾರ ಬಂಧು-ಬಳಗವಿದೆ.



ಬಾಗಲಕೋಟೆ: ಜಿಲ್ಲೆಯ ಸಾವಳಗಿ ಪಿಯು ಕಾಲೇಜಿನಲ್ಲಿ ಮಾದಕ ವಸ್ತುಗಳ ನಿರ್ಮೂಲನೆ ಕುರಿತು ಜಾಗೃತಿ ಕಾರ್ಯಕ್ರಮದಲ್ಲಿ ಅಬಕಾರಿ ಇಲಾಖೆಯ ಪಿಎಸ್‌ಐ ತೇಗಿಯಾಳ ಮಾತನಾಡಿದರು. ಜಮಖಂಡಿ ಸಿವಿಲ್ ಹಿರಿಯ ನ್ಯಾಯಾಧೀಶ ರಾಜಶೇಖರ ಹರಸೂರ, ವಕೀಲರ ಸಂಘದ ಅಧ್ಯಕ್ಷ ಎಸ್.ಬಿ.ಕಾಳೆ, ಅಬಕಾರಿ ಇಲಾಖೆಯ ಅಧಿಕಾರಿ ಸುಧಾ ಕರಿಗಾರ ಇದ್ದರು.

ಸಮುದಾಯ ಭವನ ನಿರ್ಮಾಣಕ್ಕೆ ಮನವಿ

◆ **ಬಾದಾಮಿ:** ಪಟ್ಟಣದ ಶ್ರೀ ಶಿವಶರಣ ಹರಳಯ್ಯ ಸಮಾಜದ ತ್ರೈಮಾಸಿಕ ಸಭೆ ಸಮಾಜದ ಅಧ್ಯಕ್ಷ ನಾಗರಾಜ ಹ ಹೊಸಮನಿ ಅಧ್ಯಕ್ಷತೆಯಲ್ಲಿ ಸಭೆ ನಡೆಯಿತು. ಸಭೆಯಲ್ಲಿ ಅಧ್ಯಕ್ಷ ನಾಗರಾಜ ಹೊಸಮನಿ ಮಾತನಾಡಿ, ಸರ್ಕಾರದಿಂದ ಮಂಜೂರಾದ ಶ್ರೀ ಶಿವಶರಣ ಹರಳಯ್ಯ ಸಮುದಾಯ ನಿವೇಶನ ಉಪನೋಂದಣಿ ಅಧಿಕಾರಿಗಳ ಕಾರ್ಯಾಲಯ, ಗ್ರಾಮ ಆಡಳಿತಾಧಿಕಾರಿಗಳ ಕಚೇರಿ ಮತ್ತು ಪುರಸಭೆ ಕಾರ್ಯಾಲಯದಲ್ಲಿ ನೋಂದಣಿಯಾಗಿದ್ದು, ಈಗ ಮುಂದಿನ ಹಂತದಲ್ಲಿ ಪ್ಲಾನ್ ಹಾಗೂ ಎಸ್ಟಿಮೇಟ್ ಮಾಡಿ ಅಗತ್ಯ ದಾಖಲೆಗಳೊಂದಿಗೆ ಪ್ರಸ್ತಾವನೆಯನ್ನು ಮೇಲಾಧಿಕಾರಿಗಳಿಗೆ ಸಲ್ಲಿಸಿದಲ್ಲಿ ಅನುದಾನ ಮಂಜೂರು ಆಗುತ್ತದೆ. ಇದರಿಂದ ಸಮುದಾಯ ಭವನ ನಿರ್ಮಾಣ ಮಾಡಲಾಗುವುದು. ಸಮಾಜ ಬಾಂಧವರು ಎಲ್ಲರೂ ತನು, ಮನ ಧನ ಸಹಾಯ ಮಾಡಿ ಎಂದು ಮನವಿ ಮಾಡಿದರು. ಸಂಜೀವ ಈ ಮಬ್ರುಮಕರ ತಮ್ಮ ತಂದೆ ದಿಂ. ಈರಪ್ಪ ಹುಸೇನಪ್ಪ ಮಬ್ರುಮಕರ ಅವರ ಸ್ಮರಣಾರ್ಥ ರೂ. 10 ಸಾವಿರದ ಒಂದು ರೂ.ದೇಣಿಗೆಯಾಗಿ ನೀಡಿದರು. ಸಮಾಜದ ಪರವಾಗಿ ದೇಣಿಗೆ ನೀಡಿದ ಮಹನೀಯರಿಗೆ ಮುಖಂಡ ರವಿ ಮುಂಡೇವಾಡಿ ಕೃತಜ್ಞತೆ ಸಲ್ಲಿಸಿದರು. ಸಮಾಜ ಬಾಂಧವರೆಲ್ಲರೂ ಮಾ.1 ರೊಳಗೆ ಪ್ರತಿ ಮನೆಯಿಂದ ದೇಣಿಗೆ ಸಲ್ಲಿಸಿ, ಅಧ್ಯಕ್ಷ, ಕಾರ್ಯದರ್ಶಿಯಿಂದ ಪಾವತಿ ಪಡೆಯುವಂತೆ ಸರ್ವಾನುಮತದಿಂದ ತೀರ್ಮಾನಿಸಲಾಯಿತು. ಹಿರಿಯರಾದ ಸಂಜಯ ಮಬ್ರುಮಕರ, ರವಿ ಮುಂಡೇವಾಡಿ, ರಮೇಶ ದೊಡಮನಿ, ಸುರೇಶ ದೊಡ್ಡ, ರಾಜು ಮಬ್ರುಮಕರ, ಶನನಪ್ಪ ಸಾನಕ್ಯಾನವರ, ಶ್ರೀಕಾಂತ ಸನಕ್ಯಾನವರ, ವಿಜಯ ದೊಡಮನಿ, ಮಹಿಳಾ ಸದಸ್ಯೆಯರಾದ ರತ್ನವ್ವ ದುತ್ತರಗಿ, ಡಾ.ಲತಾ ಮಬ್ರುಮಕರ ಉಪಸ್ಥಿತರಿದ್ದರು.



ಬಾದಾಮಿ: ಪಟ್ಟಣದ ಶ್ರೀ ಶಿವಶರಣ ಹರಳಯ್ಯ ಸಮಾಜದ ತ್ರೈಮಾಸಿಕ ಸಭೆ ಸಮಾಜದ ಅಧ್ಯಕ್ಷ ನಾಗರಾಜ ಹ ಹೊಸಮನಿ ಅಧ್ಯಕ್ಷತೆಯಲ್ಲಿ ಸಭೆ ನಡೆಯಿತು. ಅಧ್ಯಕ್ಷ ನಾಗರಾಜ ಹೊಸಮನಿ, ಸಂಜಯ ಮಬ್ರುಮಕರ, ರವಿ ಮುಂಡೇವಾಡಿ, ರಮೇಶ ದೊಡಮನಿ, ಸುರೇಶ ದೊಡ್ಡ, ರಾಜು ಮಬ್ರುಮಕರ, ಶನನಪ್ಪ ಸಾನಕ್ಯಾನವರ, ಶ್ರೀಕಾಂತ ಸನಕ್ಯಾನವರ, ವಿಜಯ ದೊಡಮನಿ, ಮಹಿಳಾ ಸದಸ್ಯೆಯರಾದ ರತ್ನವ್ವ ದುತ್ತರಗಿ, ಡಾ.ಲತಾ ಮಬ್ರುಮಕರ ಉಪಸ್ಥಿತರಿದ್ದರು.

ಮಸೀದಿಯಿಂದ ಚಪ್ಪಲಿ, ಕಲ್ಲು ತೂರಿದ ಘಟನೆ | ಮಸೀದಿ ಮುಖ್ಯಸ್ಥರನ್ನು ಬಂಧಿಸಿ

ಮಸೀದಿಗೆ ಬೀಗ ಹಾಕಿ: ಚರಂತಿಮಠ

◆ **ಬಾಗಲಕೋಟೆ:** ಛತ್ರಪತಿ ಶಿವಾಜಿ ಮಹಾರಾಜರ ಜಯಂತಿ ಮೆರವಣಿಗೆಯಲ್ಲಿ ಕಲ್ಲು ತೂರಾಟ, ಚಪ್ಪಲಿ ಎಸೆದಿರುವುದು ಖಂಡನೀಯ. ಮಸೀದಿಯಿಂದ ತೂರಿ ಬಂದ ಕಲ್ಲು, ಚಪ್ಪಲಿ ಘಟನೆಗೆ ಕಾರಣರಾದ ಮುಖ್ಯಸ್ಥರನ್ನು ಬಂಧಿಸಬೇಕು, ಪ್ರಾರ್ಥನೆ ಮಾಡಲು ಇರುವ ಮಸೀದಿಗಳಲ್ಲಿ ಕಲ್ಲು ಹೊಡೆಯುವುದು, ಚಪ್ಪಲ್ಲಿ ಎಸೆಯುವುದು ಮಾಡುತ್ತಿದ್ದರೆ ಸುಮ್ಮನೇ ಕೂಡಲು ಆಗುವುದಿಲ್ಲ, ಕೂಡಲೇ ಪೊಲೀಸ್ ಇಲಾಖೆ ಇಂತಹ ಮಸೀದಿಗಳಿಗೆ ಬೀಗ ಹಾಕಬೇಕು ಎಂದು ಮಾಜಿ ಶಾಸಕ ವೀರಣ್ಣ ಚರಂತಿಮಠ ಖಾರವಾಗಿ ಹೇಳಿದರು.

ಕಲ್ಲು ತೂರಾಟ ನಡೆಸಿದ ಘಟನಾ ಸ್ಥಳಕ್ಕೆ ಭೇಟಿ ನೀಡಿದ ಸಂದರ್ಭದಲ್ಲಿ ಅವರು ಮಾತನಾಡಿ, ಬೇರೆ ಸಂಸ್ಥೆಯವರ ಕಾರ್ಯಕ್ರಮ ನಡೆದಾಗ ಸಂಘಟಕರ ಮೇಲೆ ಕ್ರಮ ಕೈಗೊಳ್ಳುವ ಪೊಲೀಸ್ ಇಲಾಖೆ ಈಗ ಮಸೀದಿಯಿಂದಲೇ ಘಟನೆ ನಡೆದಿದ್ದು ಬಹಿರಂಗವಾದರೂ ಇನ್ನೂ ಯಾಕೆ ಮಸೀದಿ ಮುಖ್ಯಸ್ಥರನ್ನು ಯಾಕೆ ಬಂಧನ ಮಾಡಲ್ಲ ಎಂದು ಎಸ್ಪಿಯವರನ್ನು ಪ್ರಶ್ನಿಸಿದರು.

ಘಟನೆಗೆ ಸಂಭಂಧಿಸಿದಂತೆ ಎಂಟು ಜನರನ್ನು ಬಂಧಿಸಿದರೆ ಸಾಲದು. ಮಸೀದಿಗಳು ಕಲ್ಲು ಒಗೆಯಲು, ಗಲಾಟೆ ಮಾಡಲು ಇವೆಯಾ. ಮೊದಲು ಮಸೀದಿಗೆ ಕೀಲಿ ಹಾಕಿ. ಹಿಂದೂಗಳು ಕಾರ್ಯಕ್ರಮ ನಡೆದಾಗ ಇಂತಹ ಘಟನೆ ಆಗುತ್ತಿರುವುದು ನಾವು ಎಲ್ಲಿ ಇದ್ದೇವೆ. ಭಾರತದಲ್ಲಿದ್ದೇವೆ. ಪಥಸಂಚಲನ,ಹನುಮಜಯಂತಿ ಇನ್ನೂ ಹಲವಾರು ಹಿಂದೂಗಳ ಮಹಾಪುರುಷರ ಜಯಂತಿ ಕಾರ್ಯಕ್ರಮ ಮಾಡಿಕೊಂಡು ಬರುತ್ತಿದ್ದೇವೆ. ಶಾಂತಿ ಕದಡುವವರನ್ನು ಪೊಲೀಸ್ ಇಲಾಖೆ ಸುಧಾರಿಸದಿದ್ದರೆ ಮುಂದೊಂದು ದಿನ ದೊಡ್ಡ ದುರಂತವನ್ನು ಎದುರಿಸಬೇಕಾಗುತ್ತದೆ.ಮಸೂತಿಗೆ ರಕ್ಷಣೆ ಕೊಡುವುದು ಎಲ್ಲಿ ಇದೆ. ಮಸೂತಿ ಮುಂದೆ ಜನರಿಗೆ ಅಡ್ಡಾಡಲು ನಿರ್ಬಂಧ ಏರುವುದು ಯಾಕೆ ಮಾಡುತ್ತೀರಿ ಎಂದು ಪೊಲೀಸ್‌ರನ್ನು ಪ್ರಶ್ನಿಸಿದರು.

ಹಿಂದೂ ಸಂಘಟನೆ ಮುಖಂಡ ಸುರೇಶ ಮಾಗಿ ಮಾತನಾಡಿ, ಶನಿವಾರ ಸಂಜೆಯೊಳಗೆ ಕಲ್ಲು ತೂರಾಟ ನಡೆಸಲು ಪ್ರಚೋದನೆ ನೀಡಿದವರೆಲ್ಲ ಬಂಧನ ಆಗಬೇಕು. ಕಲ್ಲು, ಚಪ್ಪಲಿ ಎಸೆತ ಘಟನೆ ಪೂರ್ವನಿಯೋಜಿತವಾಗಿದೆ. ಎಸ್ಪಿಯವರು ಹಿಂದೂಗಳ ಮೂಗಿಗೆ ತುಪ್ಪ ಒರೆಸುವ ಕೆಲಸ ಮಾಡುತ್ತಿದ್ದಾರೆ. ಇನ್ನೂ ನೂರಾರು ಜನರ ಬಂಧನ ಆಗಬೇಕು. ಇಲ್ಲದಿದ್ದರೆ ದೊಡ್ಡ ಹೋರಾಟ ಮಾಡಬೇಕಾಗುತ್ತದೆ ಎಂದರು.



> ಬಾಗಲಕೋಟೆಯಲ್ಲಿ ನಡೆದ ಘಟನೆಗೆ ಸಂಬಂಧಿಸಿದಂತೆ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ನಡೆದ ಶಾಂತಿ ಸಭೆಗೆ ಶಾಂತಿ ಕದಡವವರು ಯಾರೂ ಬಂದಿಲ್ಲ, ಹಿಂದೂಗಳು ಮಾತ್ರ ಸಭೆಗೆ ಬಂದಿದ್ದರು. ಮಸೀದಿಯಲ್ಲಿ ಪೊಲೀಸರೂ ತಳ್ಳಿದರೂ ಮಸಿದಿಯಿಂದ ಕಲ್ಲು, ಚಪ್ಪಲಿ ತೂರಿ ಬರುತ್ತಿವೆ ಎಂದರೆ ಇದು ಸಂಪೂರ್ಣ ತನಿಖೆಯಾಗಬೇಕು. ಫೆ.22ಕ್ಕೆ ಹಿಂದೂ ಸಮಾಜದ ಮುಖಂಡರು ಸಭೆ ನಡೆಸಿ ಹಿಂದೂ ಸಮಾಜೋತ್ಸವ ಮಾಡಿಯೇ ತೀರುತ್ತೇವೆ.
> ■ ಶಾಂತಗೌಡ ಪಾಟೀಲ, ಬಿಜೆಪಿ ಜಿಲ್ಲಾಧ್ಯಕ್ಷ

ಕೋಮು ಭಾವನೆ ಸೃಷ್ಟಿಸುವವರ ಬಂಧನವಾಗಲಿ: ಪೂಜಾರ

◆ **ಬಾಗಲಕೋಟೆ:** ಛತ್ರಪತಿ ಶಿವಾಜಿ ಮಹಾರಾಜಯರ ಜಯಂತಿಯ ಮೆರವಣಿಗೆಯಲ್ಲಿ ಕಲ್ಲು, ಚಪ್ಪಲಿ ಎಸೆದವರನ್ನು ಕೂಡಲೇ ಬಂಧನ ಮಾಡಿ ಅವರ ಮೇಲೆ ಕಠಿಣಾತಿ ಕಠಿಣ ಶಿಕ್ಷೆಯಾಗುವಂತಹ ಪ್ರಕರಣ ದಾಖಲಿಸಬೇಕು ಎಂದು ವಿಧಾನ ಪರಿಷತ್ ಶಾಸಕ ಪಿ.ಎಚ್.ಪೂಜಾರ ಹೇಳಿದರು.

ಕಲ್ಲು, ಚಪ್ಪಲಿ ತೂರಿದ ಘಟನಾ ಸ್ಥಳಕ್ಕೆ ಭೇಟಿನೀಡಿ ಅವರು ಮಾತನಾಡಿದರು. ಕಲ್ಲು ತೂರಾಟ ನಡೆಸಿದವರನ್ನು ಜಿಲ್ಲೆಯಿಂದ ಗಡಿಪಾರು ಮಾಡಬೇಕು. ದೇಶದ್ರೋಹಿ, ಕೋಮು ಭಾವನೆ ಸೃಷ್ಟಿಸುವವರನ್ನು ಯಾವುದೇ ಮುಲಾಜಿಲ್ಲದೇ ಬಂಧನ ಮಾಡಬೇಕು. ಹಿಂದೂ ಸಂಘಟನೆಗಳ ಮೇಲೆ ನಡೆಯುವ ದೌರ್ಜನ್ಯ, ಮಹಿಳೆಯರ ಮೇಲೆ ದೌರ್ಜನ್ಯ, ಪಾಕಿಸ್ತಾನ ಜಿಂದಾಬಾದ್ ಘೋಷಣೆ ಕೂಗುವವರು, ಹಿಂದೂ ಅಮಾಯಕರ ಕೊಲೆ, ಸುಲಿಗೆ ನಡೆಯುತ್ತಿದೆ. ಕಾಂಗ್ರೆಸ್ ಸರ್ಕಾರ ಯಾವಾಗ ರಾಜ್ಯದಲ್ಲಿ ಬರುತ್ತಿದೆ. ಅವಾಗ ಇಂತಹ ಘಟನೆಗಳು ಮರುಕಳಿಸುತ್ತಿವೆ. ಮುಂದೆ ಹೋಳಿ ಹಬ್ಬ ಬರಲಿದ್ದು ಸೂಕ್ತ ಪೊಲೀಸ್ ಬಂದೋಬಸ್ತ್ ಪೊಲೀಸ್ ಇಲಾಖೆ ವಹಿಸಬೇಕು ಎಂದು ಹೇಳಿದರು.



ಕಲ್ಲು ತೂರಾಟ: ಖಂಡನೀಯ

◆ **ಬಾಗಲಕೋಟೆ:** ಗುರುವಾರ ನಗರದಲ್ಲಿ ಛತ್ರಪತಿ ಶಿವಾಜಿ ಮಹಾರಾಜರ ಜಯಂತಿ ಮೆರವಣಿಗೆಯ ಸಂದರ್ಭದಲ್ಲಿ ತಡರಾತ್ರಿ ಕಿಡಿಗೇಡಿಗಳು ಉದ್ದೇಶಪೂರ್ವಕವಾಗಿ ಮೆರವಣಿಗೆ ನಿರತ ಕಾರ್ಯಕರ್ತರ ಮೇಲೆ, ಭದ್ರತೆಗೆ ನಿಯೋಜನೆಗೊಂಡ ಪೊಲೀಸರ ಮೇಲೆ ಕಲ್ಲು ತೂರಾಟ ನಡೆಸಿರುವುದನ್ನು ಚರಂತಿಮಠ ಮತ್ತು ವಸ್ತ್ರದ ಫೌಂಡೇಶನ್ ಅಧ್ಯಕ್ಷ ಮಲ್ಲಿಕಾರ್ಜುನ ಚರಂತಿಮಠ ಖಂಡಿಸಿದ್ದಾರೆ. ಸರ್ಕಾರ ಕೂಡಲೇ ಕಿಡಿಗೇಡಿಗಳನ್ನು ಪತ್ತೆ ಹಚ್ಚಿ, ಕಾನೂನು ಕ್ರಮ ಕೈಗೊಳ್ಳಬೇಕು ಹಾಗೂ ನಗರದಲ್ಲಿ ಶಾಂತಿ ನೆಲೆಸುವಂತೆ ಮಾಡಬೇಕು ಎಂದು ಆಗ್ರಹಿಸಿದ್ದಾರೆ.



ನಕಲಿ ಪಿಎಚ್‌ಡಿ ಜಾಲಕ್ಕೆ ಕ್ರಮ ಕೈಗೊಳ್ಳಿ

◆ **ಜಮಖಂಡಿ:** ರಾಜ್ಯಾದ್ಯಂತ ನಕಲಿ ಪಿಎಚ್‌ಡಿ ವಿರುದ್ಧ ಕ್ರಮಕ್ಕೆ ಆಗ್ರಹಿಸಿ ಹಾಗೂ ವಿದ್ಯಾರ್ಥಿಗಳ ತರಗತಿಗಳು ಸುಗಮವಾಗಿ ನಡೆಯುವ ದೃಷ್ಟಿಯಿಂದ ಶಿಕ್ಷಕರನ್ನು ನೇಮಕ ಮಾಡುವಂತೆ ಆಗ್ರಹಿಸಿ ಅಖಿಲ ಭಾರತೀಯ ವಿದ್ಯಾರ್ಥಿ ಪರಿಷತ್ ನಗರದ ದೇಸಾಯಿ ವೃತ್ತದಲ್ಲಿ ಪ್ರತಿಭಟನೆ ನಡೆಸಿ ತಹಶೀಲ್ದಾರ್ ಬಿದರಿ ಅವರಿಗೆ ಮನವಿ ಸಲ್ಲಿಸಿದರು.

ರಾಜ್ಯದ ವಿವಿಧ ಸರ್ಕಾರಿ ಅನುದಾನಿತ ಕಾಲೇಜುಗಳಲ್ಲಿ ನಕಲಿ ಪಿಎಚ್‌ಡಿ ಪದವಿ ಹೊಂದಿರುವ ವ್ಯಕ್ತಿಗಳು ಅತಿಥಿ ಉಪನ್ಯಾಸಕರಾಗಿ ಹಾಗೂ ಉಪನ್ಯಾಸಕರಾಗಿ ಸೇವೆ ಸಲ್ಲಿಸುತ್ತಿದ್ದು, ರಾಜ್ಯದ ಜಮಖಂಡಿ, ಹಾವೇರಿ, ಯಾದಗಿರಿ ಸೇರಿದಂತೆ ಅನೇಕ ಕಡೆಗಳಲ್ಲಿ ಇಂತಹ ಪ್ರಕರಣಗಳು ಬೆಳಕಿಗೆ ಬಂದಿವೆ. ನಕಲಿ ಪಿಎಚ್‌ಡಿ ಪದವಿ ಹೊಂದಿದ ವ್ಯಕ್ತಿಗಳು ಸಿಕ್ಕಿ ಬೀಳುವ ಭಯದಿಂದ ರಾಜೀನಾಮೆ ನೀಡಿ ಪಾರಾಗುತ್ತಿದ್ದಾರೆ. ಆದರೆ ಅವರ ವಿರುದ್ಧ ಯಾವುದೇ ಕಾನೂನು ಕ್ರಮಗಳು ಜರುಗದೇ ಇರುವುದನ್ನು ಅಖಿಲ ಭಾರತಿಯ ವಿದ್ಯಾರ್ಥಿ ಪರಿಷತ್ ಖಂಡಿಸುತ್ತದೆ ಎಂದು ತಿಳಿಸಿದ್ದಾರೆ.

ನಕಲಿ ಪಿಎಚ್‌ಡಿ ಪದವಿ ಹೊಂದಿ ಹುದ್ದೆ ಗಿಟ್ಟಿಸಿಕೊಂಡಿರುವ ವ್ಯಕ್ತಿಗಳಿಂದ ಅರ್ಹ ಅಭ್ಯರ್ಥಿಗಳಿಗೆ ಅನ್ಯಾಯ ಉಂಟಾಗುತ್ತಿದೆ. ಅಲ್ಲದೆ ರಾಜ್ಯ ಹಾಗೂ ಹೊರ ರಾಜ್ಯದಲ್ಲಿ ಈ ರೀತಿಯ ನಕಲಿ ಪಿಎಚ್‌ಡಿ ಪದವಿ ತಯಾರಿಸುವ ಜಾಲ ಪತ್ತೆ ಹಚ್ಚಬೇಕು. ಹಾಗೂ ನಕಲಿ ಪಿಎಚ್‌ಡಿ ಪದವಿ ಹೊಂದಿದವರ ದಾಖಲೆಗಳನ್ನು ಪರಿಶೀಲಿಸಿ ಅವರ ವಿರುದ್ಧ ಶಿಸ್ತು ಕ್ರಮ ತೆಗೆದುಕೊಳ್ಳಬೇಕೆಂದು ಎಂದು ಒತ್ತಯಿಸಿದರು.

ಹೊಸ ವಿಶ್ವವಿದ್ಯಾಲಯಗಳಲ್ಲಿ ಹೊಸದಾಗಿ ನೇಮಕಾತಿ ಆಗದೇ ಇರುವುದರಿಂದ ತಾತ್ಕಾಲಿಕ ಸಿಬ್ಬಂದಿಯಿಂದ ವಿಶ್ವವಿದ್ಯಾಲಯದ ಕಾರ್ಯಗಳು ಹಾಗೂ ತರಗತಿಗಳು ನಡೆಯುತ್ತಿವೆ. ಈ ಸಂಗತಿಗಳು ವಿದ್ಯಾರ್ಥಿಗಳು ವಿಶ್ವವಿದ್ಯಾಲಯ ಹಾಗೂ ಶಿಕ್ಷಣದಿಂದ ದೂರ ಉಳಿಯುವಂತೆ ಮಾಡುತ್ತೇವೆ. ಆದ್ದರಿಂದ ರಾಜ್ಯ ಸರ್ಕಾರ ವಿಶ್ವವಿದ್ಯಾಲಯಗಳಿಗೆ ಸರಿಯಾದ ರೀತಿಯಲ್ಲಿ ಅನುದಾನ ಬಿಡುಗಡೆ ಮಾಡಬೇಕು. ಹಾಗೂ ವಿಶ್ವವಿದ್ಯಾಲಯಗಳು ಸೇರಿದಂತೆ ರಾಜ್ಯದ ಎಲ್ಲಾ ಶಾಲಾ ಕಾಲೇಜುಗಳಲ್ಲಿ ಖಾಲಿಯಿರುವ ಶಿಕ್ಷಕರ ಮತ್ತು ಅಧ್ಯಾಪಕರ ಹುದ್ದೆಗಳನ್ನು ಕೂಡಲೇ ಭರ್ತಿ ಮಾಡಿಕೊಳ್ಳಬೇಕೆಂದು ಅಖಿಲ ಭಾರತೀಯ ವಿದ್ಯಾರ್ಥಿ ಪರಿಷತ್ ಈ ಒಂದು ಹೋರಾಟದ ಮೂಲಕ ರಾಜ್ಯ ಸರ್ಕಾರಕ್ಕೆ ಆಗ್ರಹಿಸುತ್ತದೆ ಎಂದು ತಿಳಿಸಿದ್ದಾರೆ. ಪ್ರತಿಭಟನೆಯಲ್ಲಿ ನೂರಾರು ಕಾರ್ಯಕರ್ತರು ಇದ್ದರು.



ಸ್ವರಾಜ್ಯದ ಕನಸು ಸಾಕಾರಗೊಳಿಸಿದ ಮಹಾನ್ ನಾಯಕ ಶಿವಾಜಿ

◆ **ಲೋಕಾಪುರ:** ಶಿವಾಜಿ ಮಹಾರಾಜ ಕೇವಲ ಒಬ್ಬ ರಾಜನಲ್ಲ, ಅವರು ಸ್ವರಾಜ್ಯದ ಕನಸನ್ನು ಸಾಕಾರಗೊಳಿಸಿದ ಮಹಾನ್ ನಾಯಕ ಎಂದು ಪಿಎಸ್‌ಐ ಕೆ.ಬಿ.ಜಕ್ಕನ್ನವರ ಹೇಳಿದರು.

ಪಟ್ಟಣದ ಯಾದವಾಡ ರಸ್ತೆಯ ಶಿವಾಜಿ ವೃತ್ತದಲ್ಲಿ ಹಮ್ಮಿಕೊಂಡ ಶಿವಾಜಿ ಜಯಂತಿ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು ಛತ್ರಿಪತಿ ಶಿವಾಜಿ ಮಹಾರಾಜರು ಸ್ವರಾಜ್ಯ, ಶಿಸ್ತು, ಧೈರ್ಯ ಮತ್ತು ಸಾಮಾಜಿಕ ನ್ಯಾಯದ ಸಂಕೇತವಾಗಿದ್ದರು, ಶಿವಾಜಿ ಮಹಾರಾಜರ ಜೀವನ ಮತ್ತು ಆದರ್ಶಗಳು ಇಂದಿನ ಪೀಳಿಗೆಗೆ ಪ್ರೇರಣೆಯಾಗಿವೆ ಎಂದರು.

ಮರಾಠಾ ಸಮಾಜದ ಅಧ್ಯಕ್ಷ ವಿನೋದ ಘೋರ್ಪಡೆ ಮಾತನಾಡಿ ಶಿವಾಜಿ ಮಹಾರಾಜರು ಎಲ್ಲ ವರ್ಗಗಳ ಜನರನ್ನು ಒಗ್ಗೂಡಿಸಿ ಸಮಾನತೆಯ ಆಡಳಿತ ನೀಡಿದ ಮಹಾನ್ ನಾಯಕರು, ಅವರ ತತ್ವಗಳು ಇಂದಿಗೂ ಪ್ರಸ್ತುತವಾಗಿವೆ, ಪ್ರಜಾಪ್ರಭುತ್ವ ಮತ್ತು ಸಂವಿಧಾನದ ಮೌಲ್ಯಗಳನ್ನು ಕಾಪಾಡುವಲ್ಲಿ ಎಲ್ಲರೂ ಬದ್ಧರಾಗಬೇಕಿದೆ ಎಂದರು. ಶಿವಾಜಿ ಜಯಂತಿ ನಿಮಿತ್ತ ಮೂರ್ತಿಗೆ ವಿಶೇಷ ಪೂಜೆ, ತೊಟ್ಟಿಲು ಸೇವೆ ಹಾಗೂ ಸಾಯಂಕಾಲ ಶಿವಾಜಿ ಭಾವಚಿತ್ರ ವಿವಿಧ ಕಲಾ ತಂಡಗಳೊಂದಿಗೆ ಅದ್ದೂರಿಯಾಗಿ ಜರುಗಿತು. ವಿವಿಧ ಕಾರ್ಯಕ್ಷೇತ್ರಗಳಲ್ಲಿ ಗಣನೀಯ ಸೇವೆ ಸಲ್ಲಿಸಿದ ಲಾವಣ್ಯ ಪವಾರ ಹಾಗೂ ಕಾಶಿಬಾಯಿ ನಲವಡೆ ಇವರನ್ನು ಸಮಾಜದ ವತಿಯಿಂದ ಸನ್ಮಾನಿಸಲಾಯಿತು.



ಸ್ಥಳೀಯ ಮುಖಂಡರಾದ ಕಾಶಿನಾಥ ಹುಡೇದ, ಮಹೇಶ ಹುಗ್ಗಿ, ಪ್ರಕಾಶ ಚುಳಕಿ, ಡಾ.ಬಸವರಾಜ ಹಿರೇಮಠ, ಪಿಕೆಪಿಎಸ್ ಅಧ್ಯಕ್ಷ ಹೊಳಬಸು ಕಾಜಗಾರ, ಸುರೇಶ ಗಸ್ತಿ, ಭೀಮಶಿ ಆನೆಗುದ್ದಿ, ಮಹೇಶ ಭೋವಿ, ಮಾರುತಿ ರಂಗಣ್ಣವರ, ಶಿವಾನಂದ ಹವಳಖೋಡ, ಬಿ.ಬಿ.ಮಾಯಣ್ಣವರ, ಮರಾಠಾ ಸಮಾಜದ ಮುಖಂಡರಾದ ಶಿವಾಜಿ ಸಿಂಧೆ, ಆರ್.ಎಸ್.ಘಾಟಗೆ, ರತ್ನಾಕರ ಬಾಸುತಕರ, ನಾರಾಯಣ ಶಿಂಧೆ, ಗುರು ಘಾಟಗೆ, ಕೃಷ್ಣಾ ಸಾಳುಂಕಿ ಮಹೇಶ ಪವಾರ, ಡಾ. ಕ್ಷೀರಸಾಗರ, ಪ್ರಕಾಶ ಪಡತಾರೆ, ಮಂಜುನಾಥ ರೇವಡಗಿ, ಸುರೇಶ ನಲವಡೆ, ಸೌರಬ ಘೋರ್ಪಡೆ, ಬಾಬು ಶಿಂಧೆ, ಪ್ರದೀಪ ಪಡತಾರೆ, ಕೃಷ್ಣಾ ಹಂಚಾಟೆ, ಸುರೇಶ ಚವ್ಹಾಣ, ಅಪ್ಪಾಸಿ ಸೂರ್ಯವಂಶಿ ಹಾಗೂ ಮರಾಠಾ ಸಮಾಜದವರು ಇದ್ದರು.

ಜೋಡು ಎತ್ತಿನ ಬಂಡಿ ಸ್ಪರ್ಧೆ



◆ **ಕಲಾದಗಿ:** ಬಬಲಾದಿ ಸದಾಶಿವ ಅಜ್ಜನವರ ಜಾತ್ರಾ ನಿಮಿತ್ತ ಸುಕ್ಷೇತ್ರ ತುಳಸಿಗೇರಿ ಗ್ರಾಮದಿಂದ ಬಬಲಾದಿ ಮಠಕ್ಕೆ ಹೋಗಿ ಮರಳಿ ತುಳಸಿಗೇರಿ ಗ್ರಾಮದ ಬನ್ನಿಕಟ್ಟಿವರೆಗೆ 62 ಕೀ.ಮೀಗಳ ದೂರಕ್ಕೆ ಜೋಡು ಎತ್ತಿನ ಬಂಡಿ ಸ್ಪರ್ಧೆ ಹಮ್ಮಿಕೊಳ್ಳಲಾಗಿತ್ತು. ಪ್ರಥಮ ಬಹುಮಾನವಾಗಿ ವಿಠ್ಠಲ ಲಾಯನ್ನವರ ಎಚ್‌ಎಫ್ ಡಿಲಕ್ಸ್ ಬೈಕ್, ದ್ವಿತೀಯ ಬಹುಮಾನವಾಗಿ ಸಂಜು ದಾಸನ್ನವರ ಎಲೆಕ್ಟ್ರಿಕ್ ಸ್ಕೂಟಿ, ತೃತೀಯ ಬಹುಮಾನವಾಗಿ ಸುರೇಶ ಮಾದರ ಹಾಗೂ ಭೀಮಣ್ಣ ಬೀಳಗಿ ರೇಸಿನ ಚಕ್ಕಡಿ ಬಹುಮಾನ ಪಡೆದುಕೊಂಡರು. ಭೀಮಣ್ಣ ದಾಸನ್ನವರ, ನೂರಲಿ ಬೆನಕಟ್ಟಿ, ಯಮನಪ್ಪ ಲಾಯನ್ನವರ, ತಿಮ್ಮಣ್ಣ ಕೆಂಗಲಗುತ್ತಿ, ಶ್ರೀಶೈಲ ಬಿಷ್ಟನ್ನವರ ಇದ್ದರು.

ವಾರಸುದಾರರಿಗೆ ಮೊಬೈಲ್ ಹಿಂದಿರುಗಿಸಿದ ಪೊಲೀಸರು

◆ **ಗುಳೇದಗುಡ್ಡ:** ಸ್ಥಳೀಯ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಸಾರ್ವಜನಿಕರು 2025-26ನೇ ಸಾಲಿನಲ್ಲಿ ಕಳೆದುಕೊಂಡ ಒಟ್ಟು 16 ಮೊಬೈಲ್‌ಗಳನ್ನು ಸಿಇಐಆರ್ ಪೋರ್ಟಲ್ ಮೂಲಕ ಪತ್ತೆ ಹಚ್ಚಿ ಮೊಬೈಲ್ ಕಳೆದುಕೊಂಡ ವಾರಸುದಾರರಿಗೆ ಹಿಂದಿರುಗಿಸಲಾಯಿತು. ಸ್ಥಳೀಯ ಪೊಲೀಸ್ ಠಾಣೆಯಲ್ಲಿ ಗುರುವಾರ ಸಂಜೆ ಸ್ಥಳೀಯ ಪಿಎಸ್‌ಐ ಸಿದ್ದಪ್ಪ ಯಡಹಳ್ಳಿ ಅವರು ಅಂದಾಜು 2,20,000 ರೂಪಾಯಿ ಮೊತ್ತದ 16 ಮೊಬೈಲ್‌ಗಳನ್ನು ವಾರಸುದಾರರಿಗೆ ಹಸ್ತಾಂತರಿಸಿದರು. ಎಸ್.ಪಿ., ಹೆಚ್ಚುವರಿ ಅಧೀಕ್ಷಕರು, ಡಿಎಸ್‌ಪಿ ಸಂತೋಷ ಬನ್ನಟ್ಟಿ, ಸಿಪಿಐ ಕೆ.ಬಿ.ಬನ್ನೆ, ಪಿಎಸ್‌ಐ ಸಿದ್ದಪ್ಪ ಯಡಹಳ್ಳಿ, ಪಿಎಸ್‌ಐ ಜಗದೀಶ ಸಗರಿ ಅವರ ಮಾರ್ಗದರ್ಶನದಲ್ಲಿ ಸ್ಥಳೀಯ ಠಾಣೆಯ ಸಿಬ್ಬಂದಿಗಳಾದ ವಿಜಯ ತುಂಬದ, ಬಿ.ಎಂ.ಮೊಘಲನ್ನವರ, ಶರಣು ಕೂಡ್ಲೆಪ್ಪನವರ ಅವರು ಸಿಇಐಆರ್ ಪೋರ್ಟ್‌ನಲ್ಲಿ ಕಳೆದುಕೊಂಡ ಮೊಬೈಲ್‌ಗಳನ್ನು ಪತ್ತೆ ಹಚ್ಚಿದ್ದಾರೆ. ಎಎಸ್‌ಐ ಎಸ್.ಐ.ಬೀಳಕುದರಿ, ಮುತ್ತಣ್ಣ ಭಾವಿಕಟ್ಟಿ, ಆನಂದ ಬಿಂಜವಾಡಗಿ, ಹನಮಂತ ಭೋವಿ, ರಮೇಶ ದೊಡಮನಿ, ಎಸ್.ಜೆ. ನಾಗರಬೆಟ್ಟ ಮುತ್ತಿತರರು ಇದ್ದರು.

ಹಿಂದೂ ಧರ್ಮ ರಕ್ಷಣೆಗೆ ಶಿವಾಜಿಯೇ ಸ್ಫೂರ್ತಿ

◆ **ಗುಳೇದಗುಡ್ಡ:** ಯಾವಾಗ ಹಿಂದೂ ಧರ್ಮಕ್ಕೆ ಅಪಾಯ ಬರುತ್ತದೋ ಹಿಂದೂ ಧರ್ಮವನ್ನು ರಕ್ಷಿಸಲು ಒಂಬ ಸಂತ ಈ ದೇಶದಲ್ಲಿ ಜನಿಸುತ್ತಾನೆ. ಮೊಘಲರ ಕಾಲದಲ್ಲಿ ಹಿಂದೂ ಧರ್ಮಕ್ಕೆ ಅಪಾಯ ಬಂದಾಗ ಛತ್ರಪತಿ ಶಿವಾಜಿ ಸೈನ್ಯವನ್ನು ಮೊಘಲರನ್ನು ಸೆದೆಬಡೆದು ಹಿಂದವೀ ಸಾಮ್ರಾಜ್ಯ ಸ್ಥಾಪಿಸಿದರು ಎಂದು ಜಿಲ್ಲಾ ಬಿಜೆಪಿ ಅಧ್ಯಕ್ಷ ಶಾಂತಗೌಡ ಪಾಟೀಲ ಹೇಳಿದರು.

ಶುಕ್ರವಾರ ಪಟ್ಟಣದ ಗುಲಾಬ ಚಿತ್ರಮಂದಿರದ ಹತ್ತಿರ ಸ್ಥಳೀಯ ಹಿಂದೂ ಸಂಘಟನೆಗಳ ವತಿಯಿಂದ ಛತ್ರಪತಿ ಶಿವಾಜಿ ಮಹಾರಾಜರ 396ನೇ ಜಯಂತಿ ಅಂಗವಾಗಿ ಹಮ್ಮಿಕೊಂಡಿದ್ದ ಬೃಹತ್ ಬೈಕ್ ರ‍್ಯಾಲಿಗೆ ಚಾಲನೆ ನೀಡಿ ಮಾತನಾಡಿ, ಭಾರತ ಇಂದು ಜಗತ್ತಿನ ನಾಯಕನಾಗುವತ್ತ ಹೆಜ್ಜೆ ಹಾಕುತ್ತಿದೆ. ಹಿಂದೂ ಸಮಾಜ ಎಚ್ಚರವಾಗಿರಬೇಕು. ರಾಷ್ಟ್ರ ಹಾಗೂ ಧರ್ಮಕ್ಕೆ ಧಕ್ಕೆ ಬಂದಾಗ ನಾವೆಲ್ಲ ಒಂದಾಗಿ, ನಾವೆಲ್ಲಾ ಹಿಂದೂ ಎಂದು ಹೋರಾಡಬೇಕು ಎಂದರು.

ಮಾಜಿ ಶಾಸಕ ರಾಜಶೇಖರ ಶೀಲವಂತ ಮಾತನಾಡಿ, ಛತ್ರಪತಿ ಶಿವಾಜಿಯವರ ಧೈರ್ಯ, ಶೌರ್ಯ, ಪರಾಕ್ರಮ, ಹೋರಾಟ ಮನೋಭಾವ ಅಪ್ರತಿಮವಾಗಿದ್ದು, ದೇಶಕ್ಕೆ ಶಿವಾಜಿಯಂತಹ ಯುವಕರು ಇಂದು ಅವಶ್ಯಕವಾಗಿದ್ದು, ದೇಶ, ಧರ್ಮದ ರಕ್ಷಣೆಗೆ ಯುವಕರು ಮುಂದಾಗಬೇಕು ಎಂದರು.

ಅಮರೇಶ್ವರ ಮಠದ ಡಾ.ನೀಲಕಂಠ ಶಿವಾಚಾರ್ಯರು, ಮರಡಿಮಠದ ಅಭಿನವ ಕಾಡಸಿದ್ದೇಶ್ವರ ಸ್ವಾಮಿಗಳು, ಹಿಂದೂ ಮುಖಂಡ ಭೂವನೇಶ ಪೂಜಾರ ಮಾತನಾಡಿದರು.



ರ‍್ಯಾಲಿಯಲ್ಲಿ ಸಂಪತ್ತಕುಮಾರ ರಾಠಿ, ಕಮಲಕಿಶೋರ ಮಾಲಪಾಣಿ, ಶಂಕ್ರಪ್ಪ ರೂಡಗಿ, ಸಂಗಪ್ಪ ಆಲೂರ, ವಸಂತಸಾ ದೋಂಗಡೆ, ಶಿವಾನಂದ ಯಣ್ಣಿ, ಪ್ರಶಾಂತ ಜವಳಿ, ಭುವನೇಶ ಪೂಜಾರ, ವಿಠಲ ಪತ್ತಾರ, ಶಿವುಕುಮಾರ ಬಾದವಾಡಗಿ, ಭಾಗ್ಯ ಉದ್ನೂರ, ಸಾವಿತ್ರಿ ಜೋಗೂರ, ಸವಿತಾ ಉಂಕಿ, ಮಹೇಶ ಸೂಳಿಭಾವಿ, ಪ್ರಥಮೇಶ ವಾಘಮೋಡೆ, ಪ್ರಭು ಕಳ್ಳಿಗುಡ್ಡ, ಪ್ರವೀಣ ದೇವಗಿಕರ, ರವಿ ಬೀಳಗಿ, ಬಸು ಕಳ್ಳಿಗುಡ್ಡ, ಅಪ್ಪು ಚವ್ಹಾಣ, ಈಶ್ವರ ಕಳ್ಳಿಗುಡ್ಡ, ವಿನಾಯಕ ಹಾನಾಪೂರ, ಮಹಾಗುಂಡಪ್ಪ ಕೊಣ್ಣೂರ ಸೇರಿದಂತೆ ಕಾರ್ಯಕರ್ತರು ಇದ್ದರು.

ವಚನ ಸಾಹಿತ್ಯ ಕನ್ನಡದ ಜೀವನಾಡಿ

◆ **ಕಲಾದಗಿ:** ವಚನ ಸಾಹಿತ್ಯವು ವೈಚಾರಿಕತೆಯ ಮೂಲಕ ಸಾಮಾಜಿಕ ಸಮಾನತೆ ಸಾಧಿಸುವಲ್ಲಿ ಪ್ರಾಮುಖ್ಯವನ್ನು ಪಡೆದುಕೊಂಡಿದೆ. ವಚನ ಸಾಹಿತ್ಯ ಕನ್ನಡದ ಜೀವನಾಡಿ, ಜನನಾಡಿ ಎಂದು ಕೆ.ಗಾದಿಲಿಂಗಪ್ಪ ಹೇಳಿದರು.

ಗ್ರಾಮದ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಐಕ್ಯುಎಸಿ ಅಡಿಯಲ್ಲಿ ಕನ್ನಡ ವಿಶೇಷ ಉಪನ್ಯಾಸ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ವಚನ ಪ್ರಪಂಚ ವಿಶಿಷ್ಟವಾಗಿದ್ದು ಸಮಾನತೆ, ಕಾಯಕ, ಸಂವೀಧಾನ ಪ್ರತೀಕವಾಗಿ ನಡೆ-ನುಡಿಗಳಲ್ಲಿ ಸಾರ್ವತ್ರಿಕ ಮತ್ತು ಸಾರ್ವಕಾಲಿಕ ಚಿಂತನೆಗಳನ್ನು ಒಳಗೊಂಡಿದೆ. ಜಾತಿ, ಧರ್ಮ, ದೇವರು ಇತ್ಯಾದಿ ವಿಚಾರಗಳಲ್ಲಿ ವಿಚಾರಾತ್ಮಕ ಆಲೋಚನೆಗಳನ್ನು ಕಟ್ಟಲಾಗಿದೆ ಎಂದು ಹೇಳಿದರು.

ಅದ್ಯಕ್ಷತೆ ವಹಿಸಿ ಮಾತನಾಡಿದ ಡಾ. ಮಹಾಂತೇಶ ಎಚ್.ಬಿ ಶಿವಶರಣರು ತಮ್ಮ ವಚನಗಳ ಮೂಲಕ ಕಟುಸತ್ಯತನ, ವಿಡಂಬನೆಯ ಜೊತೆಗೆ ವಿವೇಚನೆ ಮತ್ತು ನಿವೇದನೆಗಳು ಈ ಕಾಲದಲ್ಲಿ ಪಚನಗೊಳ್ಳಬೇಕಿದೆ ಎಂದು ಹೇಳಿದರು. ಡಾ.ಯಲ್ಲಪ್ಪ ಐ ಮಾತನಾಡಿದರು. ಐಕ್ಯುಎಸಿ ಸಂಯೋಜಕಿ ಡಾ.ಸರೋಜಿನಿ ಹೊಸಕೇರಿ, ದೈಹಿಕ ಶಿಕ್ಷಣ ಸಂಯೋಜಕ ಕೆ.ಎಂ.ಸಾರವಾನ, ಯಂಕಮ್ಮ, ಡಾ.ಪುಂಡಲೀಕ ಹುನ್ನಳ್ಳಿ, ಡಾ.ವಿಕಾಸ ಕಾಳೆ ಇದ್ದರು.



2028ಕ್ಕೆ ಜೆಡಿಎಸ್ ಅಧಿಕಾರಕ್ಕೆ ತರುವುದೇ ನಮ್ಮ ಗುರಿ

◆ **ಬಾದಾಮಿ:** ಬರುವ 2028 ರ ವಿಧಾನಸಭೆ ಚುನಾವಣೆಯಲ್ಲಿ 150 ಸ್ಥಾನ ಗಳೊಂದಿಗೆ ಕುಮಾರಸ್ವಾಮಿ ನೇತೃತ್ವದಲ್ಲಿ ಜೆಡಿಎಸ್ ಪಕ್ಷ ಅಧಿಕಾರಕ್ಕೆ ತರುವುದೇ ನಮ್ಮ ಗುರಿ ಎಂದು ಜಿಲ್ಲಾ ಜೆಡಿಎಸ್ ಅಧ್ಯಕ್ಷ ಹನಮಂತ ಮಾವಿನಮರದ ಹೇಳಿದರು.

ಶುಕ್ರವಾರ ನಗರದ ಅಕ್ಕಮಹಾದೇವಿ ಅನುಭಾವ ಮಂಟಪದಲ್ಲಿ ಜೆಡಿಎಸ್ ಪಕ್ಷದ 25 ನೇ ವರ್ಷದ ಬೆಳ್ಳಿ ಹಬ್ಬದ ನಿಮಿತ್ತ ಕಿತ್ತೂರು ಕರ್ನಾಟಕ ವಿಭಾಗದ ಕಾರ್ಯಕರ್ತರ ಬೃಹತ್ ಸಮಾವೇಶವನ್ನು ವಿಜಯಪುರದಲ್ಲಿ ಆಯೋಜನೆ ಮಾಡಿದ್ದು ಪೂರ್ವಭಾವಿ ಸಭೆಯಲ್ಲಿ ಕಾರ್ಯಕರ್ತರನ್ನುದ್ದೇಶಿಸಿ ಮಾತನಾಡಿದರು. ಸಮಾವೇಶದಲ್ಲಿ ಸಹಸ್ರ ಸಹಸ್ರ ಸಂಖ್ಯೆಯಲ್ಲಿ ಕಾರ್ಯಕರ್ತರು ಆಗಮಿಸಿ ಯಶಸ್ವಿಗೊಳಿಸಲು ಮನವಿ ಮಾಡಿದರು. ಇದೇ ಸಂದರ್ಭದಲ್ಲಿ ರಾಜ್ಯದ ಜನತೆಗೆ ಮಾಡಿದ ಜೆಡಿಎಸ್ ಸಾಧನೆಗಳನ್ನು ವಿವರಿಸಿದರು.



> ಮುಂಬರುವ ಚುನಾವಣೆಯಲ್ಲಿ ಜೆಡಿಎಸ್ ಬಿಜೆಪಿ ಒಂದಾಗಿ ಚುನಾವಣೆ ಎದುರಿಸಲಿದ್ದು, ಇಬ್ಬರು ಸೇರಿ ಯಾರನ್ನು ಅಭ್ಯರ್ಥಿ ಮಾಡುತ್ತಾರೆ.ಅದಕ್ಕೆ ನಾವು ಬದ್ಧರಾಗಿರೋಣ. ಈಗಲೇ ಚರ್ಚೆ ಮಾಡುವುದು ಬೇಡ.
> ■ ಹನಮಂತ ಮಾವಿನಮರದ, ಜಿಲ್ಲಾ ಜೆಡಿಎಸ್ ಪಕ್ಷದ ಅಧ್ಯಕ್ಷ

ಮುಂದಿನ ದಿನಗಳಲ್ಲಿ ಎನ್‌ಡಿಎ ಅಧಿಕಾರಕ್ಕೆ ಬರಲಿದೆ ಎನ್ನುವ ವಿಶ್ವಾಸ ವ್ಯಕ್ತಪಡಿಸಿದರು.

ಎರಡನೇ ಬಾರಿಗೆ ಜಿಲ್ಲಾಧ್ಯಕ್ಷರನ್ನಾಗಿ ಆಯ್ಕೆ ಮಾಡಿ ಮುಂದುವರಿದಿರುವ ಹನಮಂತ ಮಾವಿನಮರದ ಅವರನ್ನು ಗೌರವಿಸಿದರು. ಬಸವರಾಜ ಕುಂಬಾರ, ಬಸವರಾಜ ಹುಲ್ಲೂರ ಸೇರಿದಂತೆ ಇತರರು ಕಾಂಗ್ರೆಸ್ ಬಿಜೆಪಿ ತೊರೆದು ಜೆಡಿಎಸ್ ಪಕ್ಷಕ್ಕೆ ಸೇರ್ಪಡೆಯಾದರು.

ತಾಲೂಕಾಧ್ಯಕ್ಷ ಹುಚ್ಚೇಶ ಹದ್ದಣ್ಣವರ, ಹಿರಿಯರಾದ ಎಂ.ಎಸ್ .ಹಿರೇಹಾಳ, ನಗರ ಘಟಕದ ಅಧ್ಯಕ್ಷ ಪ್ರಕಾಶ ಕೋಟಿ, ಶರಣಪ್ಪ ಮಾವಿನಮರದ, ಮಲ್ಲಿಕಾರ್ಜುನ ಹಡಪದ ಸೇರಿದಂತೆ ಕಾರ್ಯಕರ್ತರು ಉಪಸ್ಥಿತರಿದ್ದರು.

ಕಿರುಸುದ್ದಿ

ಯತ್ನಾಳರ ಅವಧಿಯಲ್ಲಿ ಭೂ ಅಕ್ರಮ: ಪಟ್ಟಣಶೆಟ್ಟಿ

◆ **ವಿಜಯಪುರ:** ನಗರದಲ್ಲಿ ಭೂ ಅಕ್ರಮ ಆರಂಭವಾಗಿರುವುದೇ ಶಾಸಕ ಬಸನಗೌಡ ಪಾಟೀಲ ಯತ್ನಾಳ ಅವಧಿಯಲ್ಲಿ ಎಂದು ಮಾಜಿ ಸಚಿವ ಅಪ್ಪಾಸಾಹೇಬ ಪಟ್ಟಣಶೆಟ್ಟಿ ಹೇಳಿದರು. ನಗರದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಶಾಸಕ ಯತ್ನಾಳ ಇತ್ತೀಚೆಗೆ ಭೂ ಕಬಳಿಕೆ ವಿಷಯವಾಗಿ ಮಾತನಾಡಿದ್ದಾರೆ. ಇದೇ ವೇಳೆ, ಕೆಲವರನ್ನು ಉದ್ದೇಶಿಸಿ, ಅವರ ಹಿಂದೆ ಮಾಜಿ ಶಾಸಕರಿದ್ದಾರೆ ಎಂದೂ ಹೇಳಿಕೆ ನೀಡಿದ್ದಾರೆ. ಹಾಗಾದರೆ, ಆ ಮಾಜಿ ಶಾಸಕ ಯಾರು ? ಎಂಬುದನ್ನು ಬಹಿರಂಗ ಪಡಿಸಲಿ ಎಂದು ಒತ್ತಾಯಿಸಿದರು. ನಾನು ನಗರ ಮತಕ್ಷೇತ್ರದ ಶಾಸಕನಾಗಿ ಕೆಲಸ ಮಾಡಿದ್ದೆ. ಹೀಗಾಗಿ ಕೇವಲ ಮಾಜಿ ಶಾಸಕ ಎಂದು ಹೇಳಿದರೆ, ಸಾಲದು. ಅವರ ಹೆಸರನ್ನು ಹೇಳಬೇಕು. ಯಾಕೆಂದರೆ, ಇಂತಹ ಭೂ ಅಕ್ರಮದ ವಿರುದ್ಧ ನಾನು ಧ್ವನಿ ಎತ್ತಿದ್ದೆ. ಹೋರಾಟ, ಪ್ರತಿಭಟನೆಗಳನ್ನೂ ಮಾಡಿಕೊಂಡು ಬಂದಿದ್ದೆ. ಈಗ ಕೇವಲ ಮಾಜಿ ಶಾಸಕ ಎಂದರೆ ಜನರಿಗೆ ತಪ್ಪು ಸಂದೇಶ ರವಾನಿಸಿದಂತೆ ಆಗಲಿದೆ. ಹೀಗಾಗಿ ಅವರ ಹೆಸರನ್ನು ಬಹಿರಂಗವಾಗಿ ಹೇಳಬೇಕು ಎಂದರು. ನಗರ ಶಾಸಕ ಯತ್ನಾಳರು ಕಳೆದ 15 ವರ್ಷಗಳಲ್ಲಿ ಕೊಟ್ಯಂತರ ರೂಪಾಯಿ ಆಸ್ತಿ ಮಾಡಿದ್ದು, ಅದಲ್ಲಿ ಹೇಗೆ ಸಂಪಾದನೆ ಮಾಡಿದ್ದಾರೆ?. ಅಲ್ಲದೇ, ಅನೇಕ ಯುವಕರು ಸಹ ಯತ್ನಾಳರಿಂದ ನೊಂದಿದ್ದಾರೆ ಹಾಗೂ ಮೋಸ ಹೋಗಿದ್ದಾರೆ ಎಂದರು. ಹಿಂದೂತ್ವದ ಬಗ್ಗೆ ಮಾತನಾಡುವ ಯತ್ನಾಳ ಕನ್ಹೇರಿ ಶ್ರೀಗಳ ವಿಷಯದಲ್ಲಿ ಯಾಕೆ ಶಾಂತವಾದರು?. ಬಬಲೇಶ್ವರದಲ್ಲಿ ಸಮಾವೇಶ ಮಾಡುತ್ತೇನೆ ಎಂದು ಘೋಷಣೆ ಮಾಡಿದ್ದೇ ಯತ್ನಾಳ. ಆದರೂ, ಬಬಲೇಶ್ವರದಲ್ಲಿ ನಡೆದ ಸಮಾವೇಶಕ್ಕೆ ಯಾಕೆ ಬರಲಿಲ್ಲ?. ಇದಕ್ಕೆ ಕಾರಣವೇನು ಎಂಬುವುದನ್ನೂ ಯತ್ನಾಳ ಬಹಿರಂಗ ಪಡಿಸಲಿ ಎಂದು ಅವರು ಸವಾಲು ಹಾಕಿದರು.



ವಿದ್ಯುತ್ ವ್ಯತ್ಯಯ ಇಂದು

◆ **ತಾಳಿಕೋಟಿ:** ಕಾರ್ಯ ಮತ್ತು ಪಾಲನೆ ಉಪ-ವಿಭಾಗ, ವ್ಯಾಪ್ತಿಯಲ್ಲಿ ಎಜಿಜೆವೈ ಫೀಡರ್ ಗಳ ಮಾಸಿಕ ನಿರ್ವಹಣಾ ಕಾರ್ಯ ಮಾಡಬೇಕಾಗಿರುವುದರಿಂದ ಈ ಕೆಳಕಾಣಿಸಿದ ಗ್ರಾಮಗಳಲ್ಲಿ ಫೆ.21ರಂದು ಬೆಳಗ್ಗೆ 9 ಗಂಟೆಯಿಂದ ಸಂಜೆ 6 ಗಂಟೆಯವರೆಗೆ ವಿದ್ಯುತ್ ವ್ಯತ್ಯಯವಾಗಲಿದೆ. ದೇ-ಹುಲಗಬಾಳ ಐಪಿ,ಪಡೇಕನೂರ ಐಪಿ.ವನಹಳ್ಳಿ ಐಪಿ, ಬಳಗಾನೂರ ಐಪಿ ಹಿರೂರ ಐಪಿ ಕೊಡಗಾನೂರ ಎಪಿ ಬಂಟನೂರ ಐಪಿ, ಮಾಳನೂರ ನೀ.ಸ ಹಾಗೂ ಬಿ.ಸಾಲವಾಡಗಿ ಎನ್.ಜೆ.ವಾಯ್ ಫೀಡರ್‌ಗಳ ರೈತರ ಪಂಪ್ ಸೆಟ್ಟಗಳಿಗೆ, ಹಾಗೂ ಮಾಳೂರ ಕುಡಿಯುವ ನೀರಿನ ಘಟಕ, ಮಿಣಜಗಿ, ಮಾಣಿಹಾಳ, ಶಿವಪುರ, ಹಗರಗುಂಡ, ನಾಗೂರ, ಕಲ್ಲದೇವನಹಳ್ಳಿ, ದೇವರಹುಲಗಬಾಳ, ಮಡಿಕೇಶ್ವರ, ಪಡೇಕನೂರ, ವನಹಳ್ಳಿ, ಕೊಣ್ಣೂರ, ಹಿರೂರ, ಬಳಗಾನೂರ, ಬಳೆಭಾವಿ, ಬಿ.ಸಾಲವಾಡಗಿ, ಮಟಕ್ ದೇವನಹಳ್ಳಿ, ಕಾರಗನೂರ, ಶೆಳ್ಳಗಿ, ನಾವದಗಿ,ಲಕ್ಕುಂಡಿ. ಬಂಟನೂರ ಗೋಟಗುಣಕಿ,ತುಂಬಗಿ ಗ್ರಾಮಗಳಲ್ಲಿ ವಿದ್ಯುತ್ ವ್ಯತ್ಯಯ ಆಗುವುದರಿಂದ ಎಲ್ಲಾ ಗ್ರಾಹಕರು ಸಹಕರಿಸಬೇಕೆಂದು ಹೆಸ್ಕಾಂ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು (ವಿ) ಕೋರಿರುತ್ತಾರೆ.

ವಿದ್ಯಾರ್ಥಿಗಳಿಗೆ ನಗದು ಬಹುಮಾನ: ಯಡ್ರಾಮಿ

◆ **ಸಿಂದಗಿ:** ಆಲಮೇಲ, ಸಿಂದಗಿ ಮತ್ತು ದೇವರ ಹಿಪ್ಪರಗಿ ಕಂದಾಯ ತಾಲೂಕುಗಳಲ್ಲಿ ಬರುವ ಸರಕಾರಿ ಪ್ರೌಢ ಶಾಲೆಗಳಲ್ಲಿ ವ್ಯಾಸಂಗ ಮಾಡುತ್ತಿರುವ 2025-26ನೇಯ ಸಾಲಿನ ಎಸ್ಎಸ್ಎಲ್ಸಿ ಪರೀಕ್ಷೆಯಲ್ಲಿ ತಾಲೂಕಿಗೆ ಅತಿ ಹೆಚ್ಚು ಅಂಕ ಪಡೆದು ಉತ್ತೀರ್ಣರಾಗುವ ವಿದ್ಯಾರ್ಥಿಗಳಿಗೆ ಪ್ರಥಮ ಸ್ಥಾನ ರೂ.25000. ದ್ವಿತೀಯ ಸ್ಥಾನ ರೂ.15000 ಮತ್ತು ತೃತೀಯ ಸ್ಥಾನ ಪಡೆದ ವಿದ್ಯಾರ್ಥಿಗೆ ರೂ.10,000 ಗಳ ಒಟ್ಟು ರೂ.50ಸಾವಿರ ಬಹುಮಾನವನ್ನು ಕ್ಷೇತ್ರ ಶಿಕ್ಷಣಾಧಿಕಾರಿ ಮಹಾಂತೇಶ ಯಡ್ರಾಮಿ ಘೋಷಿಸಿದ್ದಾರೆ. ವಿದ್ಯಾರ್ಥಿಗಳ ಮುಂದಿನ ಶೈಕ್ಷಣಿಕ ಪ್ರೋತ್ಸಾಹಕ್ಕಾಗಿ ಸಿಂದಗಿ, ಆಲಮೇಲ ಹಾಗೂ ದೇವರ ಹಿಪ್ಪರಗಿ ಸರಕಾರಿ ಪ್ರೌಢ ಶಾಲಾ ಹಂತ ಮತ್ತು ತಾಲೂಕು ಹಂತದ ಮಕ್ಕಳಲ್ಲಿ ಸ್ಪರ್ಧಾತ್ಮಕ ಮನೋಭಾವ ಬೆಳೆಸುವ ಉದ್ದೇಶದಿಂದ ಬೇರೆ ಬೇರೆ ಪ್ರೋತ್ಸಾಹಕರಿಗಳಲ್ಲಿ ನಗದು ಬಹುಮಾನ ಘೋಷಣೆ ಮಾಡುವವರು ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಾರ್ಯಾಲಯಕ್ಕೆ ಬಂದು ಮಾಹಿತಿ ಸಲ್ಲಿಸಬೇಕು ಎಂದು ತಿಳಿಸಿದ್ದಾರೆ.

ಫೆ.25ರಿಂದ ಕುಡಿಯುವ ನೀರಿನಲ್ಲಿ ವ್ಯತ್ಯಯ

◆ **ಬಸವನಬಾಗೇವಾಡಿ:** ಪಟ್ಟಣಕ್ಕೆ ಆಲಮಟ್ಟಿಯಿಂದ ಪೂರೈಕೆಯಾಗುವ ಕುಡಿಯುವ ನೀರಿನಲ್ಲಿ ವ್ಯತ್ಯಯವುಂಟಾಗಲಿದ್ದು ಆಲಮಟ್ಟಿ ರೈಲ್ವೆ ಬ್ರಿಜ್ ಹತ್ತಿರ ರೈಲ್ವೆ ಇಲಾಖೆಯಿಂದ ಪೈಪ್‌ಲೈನನ್ನು ಬೇರೆ ಕಡೆ ಸ್ಥಳಾಂತರ ಮಾಡುವುದ್ದರಿಂದ ಫೆ.25ರಿಂದ ಮಾ.1ರ ವರಗೆ 5 ದಿನಗಳ ಕಾಲ ನೀರು ಪೂರೈಕೆಯಲ್ಲಿ ವ್ಯತ್ಯಯವುಂಟಾಗುತ್ತದೆ ಕಾರಣ ಪಟ್ಟಣದ ಸಾರ್ವಜನಿಕರು ಪುರಸಭೆಯೊಂದಿಗೆ ಸಹಕರಿಸಬೇಕೆಂದು ಪುರಸಭೆ ಮುಖ್ಯಾಧಿಕಾರಿ ವಿದ್ಯಾಧರ ಕಲಾದಗಿ ಅವರು ಪ್ರಕಟಣೆ ಮುಖಾಂತರ ವಿನಂತಿಸಿದ್ದಾರೆ.



ಬಸವನಬಾಗೇವಾಡಿ: ತಾಲೂಕಿನ ಮನಗೂಳಿ ಪಟ್ಟಣದಲ್ಲಿ ಛತ್ರಪತಿ ಶಿವಾಜಿ ಜಯಂತಿಯನ್ನು ಪಾಗಾದ ಗಲ್ಲಿಯ ಶಿವಾಜಿ ಭವನದಲ್ಲಿ ಸಂಭ್ರಮದಿಂದ ಆಚರಿಸಲಾಯಿತು. ಪಪಂ ಮುಖ್ಯಾಧಿಕಾರಿ ನಿಖಿಲೇಶ ಪಾಟೀಲ, ಶಿವಾಜಿ ಮೋರೆ, ಸಂತೋಷ ಹೊನ್ನಳ್ಳಿ ರೇವಣಸಿದ್ದ ಮಣೂರ, ಭಾಗ್ಯರಾಜ ಸೊನ್ನದ, ಶೇಖುನಗೌಡ ಬಿರಾದಾರ, ಮಹಾಂತಗೌಡ ಗುಜಗೊಂಡ, ಕೃಷ್ಣಾ ಶಿಂಧೆ, ರಾಜು ಬನಕರ, ಈರಣ್ಣ ಪೊದ್ದಾರ, ವಿಜಯಕುಮಾರ ರಜಪೂತ, ರಾಜಶೇಖರ ವಾಲಿಕಾರ, ದಯಾನಂದ ಹೂಗಾರ, ಹರಿಸಿಂಗ ರಜಪೂತ, ನಿರ್ವಣಿ ಜಾಧವ, ದಿಲೀಪ ಹಜೇರಿ, ಗುರುರಾಜ ಹಟಕಡ, ಮಂಜು ಆಗಸರ, ಗೌಡಪ್ಪ ಗುಜಗೊಂಡ ಇದ್ದರು.

ಕಟ್ಟಡ ಕಾಮಗಾರಿಗೆ ಅನುದಾನ ಬಿಡುಗಡೆ

◆ **ಸಿಂದಗಿ:** ರೈತರ ಬೇಡಿಕೆಯ ಅನುಗುಣವಾಗಿ ಅವರು ಬೆಳೆದ ಬೆಳೆಗಳಿಗೆ ಬೆಂಬಲ ಬೆಲೆ ಸಿಗದ ಕಾರಣ ಕೋಲ್ಡ್ ಸ್ಟೋರೇಜ್ ಅತ್ಯವಶ್ಯಕವಾಗಿತ್ತು. ಇದನ್ನು ಮನಗಂಡಂತ ಸಚಿವ ಶಿವಾನಂದ ಪಾಟೀಲ ಅವರು ಸಿಂದಗಿ ತಾಲೂಕಿನ ಕೃಷಿ ಉತ್ಪನ್ನ ಮಾರುಕಟ್ಟೆಯ ಆವರಣದಲ್ಲಿ ಕೋಲ್ಡ್ ಸ್ಟೋರೇಜ್ ಕಟ್ಟಡ ನಿರ್ಮಾಣ ಕಾಮಗಾರಿಗೆ ರೂ.6 ಕೋಟಿ 65 ಲಕ್ಷ ರೂ.ಅನುದಾನ ಬಿಡುಗಡೆ ಮಾಡಿದ್ದಾರೆ. ಸಿಎಂ, ಡಿಸಿಎಂ ಹಾಗೂ ಸಂಬಂಧಿಸಿದ ಸಚಿವರಿಗೆ ಕ್ಷೇತ್ರದ ರೈತರ ಪರವಾಗಿ ಅಭಿನಂದನೆ ಸಲ್ಲಿಸುತ್ತೇನೆ ಎಂದು ಶಾಸಕ ಅಶೋಕ ಮನಗೂಳಿ ಹೇಳಿದರು. ನಗರದ ಸೋಂಪೂರ ರಸ್ತೆಯ ಹಿರೇಮಠ ಲೇಔಟ್‌ನಲ್ಲಿ ನಗರಸಭೆ ವತಿಯಿಂದ ಅಮೃತ 2.0 ಯೋಜನೆಯಡಿ ರೂ.23ಲಕ್ಷದ 39ಸಾವಿರ ವೆಚ್ಚದ ಉದ್ಯಾನ ಕಾಮಗಾರಿಯ ಭೂಮಿಪೂಜೆ ನೆರವೇರಿಸಿ ಮಾತನಾಡಿದ ಅವರು, ಸಿಂದಗಿ ಜನತೆಯ ಬಹುದಿನಗಳ ಬೇಡಿಕೆಗಳಾದ ಉದ್ಯಾನಗಳ ಜೀರ್ಣೋದ್ಧಾರಕ್ಕಾಗಿ ಅನುದಾನವನ್ನು ಮೀಸಲಿಡಲಾಗಿದೆ. ನಗರದಲ್ಲಿರುವ 80ಕ್ಕೂ ಅಧಿಕ ಉದ್ಯಾನಗಳಲ್ಲಿ 15ಉದ್ಯಾನಗಳನ್ನು ಅಭಿವೃದ್ಧಿ ಪಡಿಸುವ ಮೂಲಕ ಜನರ ಬೇಡಿಕೆಗಳನ್ನು ಈಡೇರಿಸಲಾಗುತ್ತಿದೆ. ನಗರದ ನಿವಾಸಿಗಳಿಗೆ ಉತ್ತಮ ರೀತಿಯ ಸೌಲಭ್ಯಗಳನ್ನು ಒದಗಿಸಿಕೊಡುವ ದಿಸೆಯಲ್ಲಿ ನಗರದ ಉದ್ಯಾನಗಳನ್ನು ಅಭಿವೃದ್ಧಿ ಪಡಿಸಲಾಗುತ್ತಿದೆ. ಮತಕ್ಷೇತ್ರದ ಜನತೆ ಅಭಿವೃದ್ಧಿಗೆ ಸಹಕರಿಸಬೇಕು. ಗುತ್ತಿಗೆದಾರು ಒಳ್ಳೆಯ ರೀತಿಯಿಂದ ಕಾಮಗಾರಿ ಮಾಡಬೇಕು ಎಂದರು. ಗುತ್ತಿಗೆದಾರ ಶಿವು ಬಡಿಗೇರ, ಜೆಇ ಅಜರ್ ನಾಟೀಕಾರ ಇದ್ದರು.



ನಗರದ ಸೋಂಪೂರ ರಸ್ತೆಯ ಹಿರೇಮಠ ಲೇಔಟ್‌ನಲ್ಲಿ ನಗರಸಭೆ ವತಿಯಿಂದ ಅಮೃತ 2.0 ಯೋಜನೆಯಡಿ ರೂ.23ಲಕ್ಷದ 39ಸಾವಿರ ವೆಚ್ಚದ ಉದ್ಯಾನ ಕಾಮಗಾರಿಗೆ ಶಾಸಕ ಅಶೋಕ ಮನಗೂಳಿ ಭೂಮಿಪೂಜೆ ನೇರವೇರಿಸಿದರು. ಬ್ಲಾಕ್ ಕಾಂಗ್ರೆಸ್ ತಾಲೂಕಾಧ್ಯಕ್ಷ ಸುರೇಶ ಪೂಜಾರಿ, ರವಿ ಕಟಕೆ, ಡಾ.ವಿಶ್ವಾರಾಧ್ಯ ಲೋಣಿ, ಪ್ರಭುಲಿಂಗ ಲೋಣಿ, ಪಿ.ಜಿ.ಹಿರೇಮಠ ಇದ್ದರು.

ಮಳೆಗಾಲದಲ್ಲಿ ನದಿಯಂತೆ ಹರಿದಿದ್ದ ರಸ್ತೆಯಲ್ಲಿ ಸಂಚಾರಕ್ಕೆ ತೊಂದರೆ

ದುರಸ್ತಿ ಭಾಗ್ಯ ಕಾಣದ ಬಡಿಕಮಾನ್ ರಸ್ತೆ

▸ **ಪರಶುರಾಮ ಶಿವಶರಣ**

◆ **ವಿಜಯಪುರ:** ಮಳೆಗಾಲದಲ್ಲಿ ನದಿಯಂತಾಗಿ ನೀರು ಹರಿದಿದ್ದ, ನಗರದ ಬಡಿಕಮಾನ್ ರಸ್ತೆ ಹದಗೆಟ್ಟು ಹಳ್ಳ ಹಿಡಿದಿದ್ದು, ಚಳಿಗಾಲ ಕಳೆದು, ಬೇಸಿಗೆ ಪ್ರಾರಂಭಗೊಂಡರೂ ದುರಸ್ತಿ ಭಾಗ್ಯ ಕಾಣದೇ, ವಾಹನ ಸವಾರರು ಪರದಾಡುವಂತಾಗಿದೆ.

ದಿಗಂತ ವಿಶೇಷ

ನಗರದ ಪ್ರಮುಖ ರಸ್ತೆಯಾದ ಬಡಿಕಮಾನ್ ರಸ್ತೆಗೆ ಹೊಂದಿಕೊಂಡಂತೆ ಹತ್ತಾರು ಬಡಾವಣೆಗಳು ಇದ್ದು, ಇಲ್ಲಿನ ಬಡಾವಣೆಗಳ ನಿವಾಸಿಗಳು ಈ ಹಾಳಾದ ರಸ್ತೆಯಲ್ಲಿ ಸಂಚರಿಸಲು ನಿತ್ಯ ಹೆಣಗುವಂತಾಗಿದೆ.

ಕಳೆದ ಮಳೆಗಾಲದ ವೇಳೆ ಜಿಲ್ಲೆಯಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಮಳೆಯಾಗಿದ್ದು, ಹಲವು ರಸ್ತೆಗಳು ಮಳೆಗೆ ಕೊಚ್ಚಿಕೊಂಡು ಹೋಗಿ, ರಸ್ತೆಯ ಮೂಲ ಸ್ವರೂಪವೇ ಕಾಣದಂತಾಗಿದೆ. ಈ ರಸ್ತೆಗಳ ಪೈಕಿ ನಗರದ ಬಡಿಕಮಾನ್ ರಸ್ತೆಯಲ್ಲಿ ಮೊಳಕಾಲುಮಟ ಮಳೆನೀರು ಹರಿದು, ನದಿಯಂತಾಗಿ ಸುದ್ದಿಯಾಗಿತ್ತು. ಇದರಿಂದ ಇಲ್ಲಿನ ರಸ್ತೆಯ ಡಾಂಬರ್ ಕಿತ್ತುಹೋಗಿ, ತಗ್ಗು, ದಿನ್ನೆ ಬಿದಿದ್ದು, ಕಲ್ಲು ಖಡಿ, ಮಣ್ಣಿನ ರಸ್ತೆಯಾಗಿ ಮಾರ್ಪಟ್ಟಿದ್ದು, ಸಂಚಾರಕ್ಕೆ ತೊಂದರೆಯಾಗಿದೆ.

ಇಲ್ಲಿನ ಬಡಿಕಮಾನ್ ರಸ್ತೆ ಮೂಲಕವೇ ಆಸರಗಲ್ಲಿ, ದಿವಟಗೇರಿ ಗಲ್ಲಿ, ಕಮಾನ್‌ಖಾನ್ ಬಜಾರ್, ಜಾಮೀಯಾ ಮಸೀದಿ, ಝಂಡಾ ಕಟ್ಟಿ, ಹಕೀಮ್ ಚೌಕ್, ಶಾಂತಿನಗರ, ಕಸ್ತೂರಿ ಕಾಲೋನಿ ಸೇರಿದಂತೆ ಹಲವು ಬಡಾವಣೆಗೆ ತೆರಳಬೇಕು. ಅಲ್ಲದೆ ಈ ರಸ್ತೆ ಮೂಲಕವೇ ವ್ಹಾಯಾ ಬಸ್‌ಗಳು ಸಾಕಷ್ಟು ಸಂಚರಿಸುತ್ತವೆ. ನಿತ್ಯ ಬಸ್, ಕಾರು, ಆಟೋ, ಬೈಕ್ ಓಡಾಡುವ ಈ ರಸ್ತೆ ಹಾಳಾಗಿದ್ದು, ಸುಗಮ ಸಂಚಾರಕ್ಕೆ ಸಂಚಕಾರ ಬಿದ್ದಿದೆ.



ವಿಜಯಪುರ ನಗರದಲ್ಲಿ ಹಾಳಾದ ರಸ್ತೆಗಳ ಕುರಿತು ಗಮನಕ್ಕೆ ಬಂದಿದ್ದು, ಈ ಎಲ್ಲ ರಸ್ತೆಗಳ ದುರಸ್ತಿ ಕಾರ್ಯವನ್ನು ಮಾರ್ಚ್ ಮೊದಲ ವಾರದಲ್ಲಿ ಕೈಗೊಳ್ಳಲಾಗುತ್ತದೆ. ಸುಗಮ ಸಂಚಾರಕ್ಕೆ ಅನುಕೂಲ ಮಾಡಿಕೊಡಲಾಗುವುದು.

■ **ಎಂ.ಎಸ್. ಕರಡಿ ಮೇಯರ್ ಮಹಾನಗರ ಪಾಲಿಕೆ, ವಿಜಯಪುರ**

ಧೂಳುಗುಳುವ ಕಾರ್ಖಾನೆ: ಈ ರಸ್ತೆಯಲ್ಲಿ ನಿರಂತರ ಧೂಳು ಏಳುವುದರಿಂದ ಇಲ್ಲಿನ ಅಕ್ಕಪಕ್ಕದ ಮನೆಗಳ ನಿವಾಸಿಗಳ ಆರೋಗ್ಯದ ಮೇಲೆ ದುಷ್ಪರಿಣಾಮ ಉಂಟಾಗುತ್ತಿದೆ. ನಿತ್ಯ ಸಾವಿರಾರು ವಾಹನಗಳು ಈ ರಸ್ತೆ ಮೂಲಕ ಸಂಚರಿಸುವುದರಿಂದ ಧೂಳು ಪಕ್ಕದ ಮನೆಗಳಿಗೆ ನುಗ್ಗುತ್ತದೆ. ಈ ರಸ್ತೆಯ ಪಕ್ಕದಲ್ಲಿ ಕೇವಲ ಎರಡು ನಿಮಿಷ ನಿಂತರೆ ಸಾಕು, ಧೂಳಿನ ಮಜ್ಜನವಾಗುತ್ತದೆ. ಇನ್ನು ಇಲ್ಲಿನ ನಿವಾಸಿಗಳು ಧೂಳಿನ ಅಲರ್ಜಿ ಸೇರಿದಂತೆ ಇತರೆ ಆರೋಗ್ಯ ಸಮಸ್ಯೆಯಿಂದ ಬಳಲುವಂತಾಗಿದೆ.

ಬಡವಾಯಿತೆ ಮಹಾನಗರ ಪಾಲಿಕೆ: ನಗರದ ಅಷ್ಟಫೈಲ್ ಬಂಗಲೆಯಿಂದ ಬಡಿಕಮಾನ್‌ಗೆ ತೆರಳುವ ರಸ್ತೆ ಸಂಪೂರ್ಣ ಹಾಳಾಗಿದ್ದರೂ ಈ ರಸ್ತೆ ದುರಸ್ತಿ ಮಾಡಲು ಮಹಾನಗರ ಪಾಲಿಕೆಗೆ ಆಗುತ್ತಿಲ್ಲ. ಆಗೊಮ್ಮೆ, ಈಗೊಮ್ಮೆ ಎನ್ನುವಂತೆ ಪಾಲಿಕೆ ವತಿಯಿಂದ ಹಾಳಾದ ರಸ್ತೆಗೆ ನೀರು ಹೊಡೆಯಲಾಗುತ್ತಿದೆ. ಅಲ್ಲದೆ ಇಲ್ಲಿನ ಮರಾಠಿ ವಿದ್ಯಾಲಯದ ಎದುರು ಕೂಡ ರಸ್ತೆ ಹಳ್ಳ ಹಿಡಿದಿದೆ. ಇನ್ನು ಹಕೀಮ್ ಚೌಕ್ ನಿಂದ ಗೋಳಗುಮ್ಮಟಗೆ ತೆರಳುವ ರಸ್ತೆಯ ಕೆಲ ಭಾಗ ಕೂಡ ಹಾಳಾಗಿದೆ. ಹೀಗೆ ನಗರದ ಕೆಲವು ರಸ್ತೆಗಳು ಹಾಳಾಗಿ, ಸಾರ್ವಜನಿಕರ ಸಂಚಾರಕ್ಕೆ ಸಂಕಷ್ಟ ತರುತ್ತಿವೆ. ಹೀಗಾದರೂ ಮಹಾನಗರ ಪಾಲಿಕೆ ಈ ರಸ್ತೆಗಳನ್ನು ದುರಸ್ತಿ ಮಾಡುತ್ತಿಲ್ಲ. ಹಾಳಾದ ರಸ್ತೆಗಳನ್ನು ದುರಸ್ತಿ ಮಾಡಲಾಗದಷ್ಟು, ಮಹಾನಗರ ಪಾಲಿಕೆ ಬಡವಾಗಿದೆಯೇ? ಎಂದು ಸಾರ್ವಜನಿಕರು ಆಕ್ರೋಶ ವ್ಯಕ್ತಪಡಿಸುತ್ತಿದ್ದಾರೆ.

ಬಿಜೆಪಿ ಅಧಿಕಾರಾವಧಿಯಲ್ಲಿ ಅಭಿವೃದ್ಧಿಗೆ ನಾಂದಿ

◆ **ಬಸವನಬಾಗೇವಾಡಿ:** ಕಾಂಗ್ರೆಸ್ ಸರ್ಕಾರ ಅವಧಿಯಲ್ಲಿ ಅಭಿವೃದ್ಧಿ ಮರಿಚಿಕೆಯಾಗಿದ್ದು, ಈ ಹಿಂದೆ ಬಿಜೆಪಿ ಸರ್ಕಾರದ ಅವಧಿಯಲ್ಲಿ ಬಸವನಬಾಗೇವಾಡಿ ಮತಕ್ಷೇತ್ರ ಸೇರಿದಂತೆ ಜಿಲ್ಲೆಯಲ್ಲಿ ಅಭೂತಪೂರ್ವ ಅಭಿವೃದ್ಧಿಗೆ ನಾಂದಿ ಹಾಡಿದೆ ಎಂದು ಮಾಜಿ ಸಚಿವರಾದ ಎಸ್.ಕೆ.ಬೆಳ್ಳುಬ್ಬಿ ಹೇಳಿದರು.

ತಾಲೂಕಿನ ಯರನಾಳ ಗ್ರಾಮದ ಬೀರಲಿಂಗೇಶ್ವರ ದೇವಾಲಯ ಸಭಾಭವನದಲ್ಲಿ ಬಿಜೆಪಿ ಸಂಘಟನಾ ಸಭೆ ಹಾಗೂ ಮುತ್ತಗಿ ಜಿಪಂ ವ್ಯಾಪ್ತಿಯಲ್ಲಿ ವಿಬಿ ಜಿ-ರಾಮ ಜಿ ಕಾಯ್ದೆ ಕುರಿತಾಗಿ ಹಮ್ಮಿಕೊಂಡ ಜನಜಾಗೃತಿ ಸಭೆಯಲ್ಲಿ ಮಾತನಾಡಿದ ಅವರು, ಸ್ವಾತಂತ್ರ್ಯನಂತರ ಅಧಿಕಾರ ಚುಕ್ಕಾಣಿ ಹಿಡಿದ ಕಾಂಗ್ರೆಸ್ ಸರ್ಕಾರ ಹಲವು ವರ್ಷಗಳ ಕಾಲವರೆಗೂ ಅಭಿವೃದ್ಧಿ ಕಣ್ಮರೆಯಾಗಿತ್ತು. ಬಿಜೆಪಿ ಅಧಿಕಾರಕ್ಕೆ ಬಂದಾಗ ಬದಲಾವಣೆ ಗಾಳಿ ಬೀಸಿ ಮಹತ್ತರ ಅಭಿವೃದ್ಧಿ ಕಾರ್ಯಗಳಿಗೆ ವೇಗ ನೀಡಿ ಜನಸಾಮಾನ್ಯರಿಗೆ ಸಹಾಯಕ ವಾತಾವರಣ ನಿರ್ಮಿಸಿದೆ ಎಂದು ಹೇಳಿದರು.

ಬಿಜೆಪಿ ಜಿಲ್ಲಾ ಕಾರ್ಯದರ್ಶಿ ಮಲ್ಲಿಕಾರ್ಜುನ ದೇವರಮನಿ(ವಕೀಲರು) ಮಾತನಾಡಿ, 2047ಕ್ಕೆ ಸ್ವಾತಂತ್ರ್ಯ ಶತಮಾನೋತ್ಸವ ಹಿನ್ನೆಲೆಯಲ್ಲಿ ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು ಕ್ರಾಂತಿಕಾರಿ ಬದಲಾವಣೆಯಾಗಿ ರಾಷ್ಟ್ರ ಅಭಿವೃದ್ಧಿಪಥದಲ್ಲಿ ಮುನ್ನಡೆಸುವ ನಿಟ್ಟಿನಲ್ಲಿ ವಿಬಿ ಜಿ-ರಾಮ ಜಿ ಕಾಯ್ದೆ ಮಂಡಿಸಿದ್ದಾರೆ. ಆಯಾ ರಾಜ್ಯ ಸರಕಾರ ಶೇ 40ರಷ್ಟು ಅನುದಾನ ನೀಡಬೇಕೆಂಬುವದು ಕಾಂಗ್ರೆಸಗೆ ಸಹಿಕೊಳ್ಳಲಾಗುತ್ತಿಲ್ಲ ಎಂದರು.

ಬಿಜೆಪಿ ಮುಖಂಡರಾದ ರಾಜೇಶ್ವರಿ ಯರನಾಳ ಮಾತನಾಡಿದರು, ಅಲ್ಪಸಂಖ್ಯಾತರ ಮೋರ್ಚಾ ಅಧ್ಯಕ್ಷ ಬಂದೇನವಾಜ ವಾಲಿಕಾರ ನೂತನ ಮತದಾರ ಪಟ್ಟಿ ವಿಶೇಷ ಪರಿಷ್ಕರಣೆ (ಎಸ್‌ಐಆರ್) ಬಗ್ಗೆ ಮಾಹಿತಿ ನೀಡಿದರು, ಬಿಜೆಪಿ ಮಂಡಲ ಅಧ್ಯಕ್ಷ ಸಿದ್ರಾಮ ಕಾಖಂಡಕಿ ಅಧ್ಯಕ್ಷತೆ ವಹಿಸಿದ್ದರು, ಭೀರಪ್ಪ ಪೂಜಾರಿ ಸಾನ್ನಿಧ್ಯ ವಹಿಸಿದ್ದರು, ತಾಪಂ ಮಾಜಿ ಅಧ್ಯಕ್ಷ ಕಲ್ಲು ಸೊನ್ನದ, ಮಲ್ಲನಗೌಡ ರಾಯಗೊಂಡ, ಚಿನ್ನಪ್ಪ ಗಿಡ್ಡಪ್ಪಗೋಳ, ಎಸ್‌ಸಿ ಮೋರ್ಚಾ ಜಿಲ್ಲಾ ಕಾರ್ಯದರ್ಶಿ ಪ್ರಶಾಂತ ಪವಾರ, ವಿಜಯ ಚಿಮ್ಮಲಗಿ, ಉಲ್ಲಾಸ ನಾಗರಾಳ, ಬಸವರಾಜ ಪಡಶೆಟ್ಟಿ ಉಪಸ್ಥಿತರಿದ್ದರು.



ಎಕ್ಸಲೆಂಟ್ ಶಿಕ್ಷಣ ಸಂಸ್ಥೆಗಳಿಂದ ವಿಜಯಪುರದತ್ತ ನೋಡುವಂತಾಗಿದೆ: ಸಂಗಮೇಶ ಬಬಲೇಶ್ವರ


◆ **ವಿಜಯಪುರ:** ಒಂದು ಕಾಲದಲ್ಲಿ ಶಿಕ್ಷಣ ಕಾಶಿ ಎಂದಾಗ ಎಲ್ಲರೂ ಕಡಲ ತಡಿಯೆಡೆಗೆ ದೃಷ್ಟಿ ಹಾಯಿಸುತ್ತಿದ್ದರು. ಆದರೆ ಇಂದು ಬಸವರಾಜ ಕೌಲಗಿ ಅವರು ಎಕ್ಸಲೆಂಟ್ ಸಮೂಹ ಶಿಕ್ಷಣ ಸಂಸ್ಥೆಗಳನ್ನು ಸ್ಥಾಪನೆ ಮಾಡಿ, ಎಲ್ಲರೂ ವಿಜಯಪುರದ ಕಡೆಗೆ ತಿರುಗಿ ನೋಡುವಂತೆ ಮಾಡಿದ್ದಾರೆ ಎಂದು ಕರ್ನಾಟಕ ಬಾಲ ವಿಕಾಸ ಅಕಾಡೆಮಿ ಅಧ್ಯಕ್ಷ ಸಂಗಮೇಶ ಬಬಲೇಶ್ವರ ಹೇಳಿದರು.

ನಗರದ ಎಕ್ಸಲೆಂಟ್ ವಿಜ್ಞಾನ ಪದವಿ ಪೂರ್ವ ಕಾಲೇಜಿನಲ್ಲಿ ಹಮ್ಮಿಕೊಂಡ ದಿಕ್ಸೂಚಿ ಕಾರ್ಯಕ್ರಮ, ಎಕ್ಸಲೆಂಟ್ ಅಮೃತವಾಣಿ ಸರಣಿ ಉಪನ್ಯಾಸ ಮಾಲಿಕೆಯ ಸಮಾರಂಭ ಉದ್ಘಾಟಿಸಿ ಅವರು ಮಾತನಾಡಿದರು.

ಚಾಣಕ್ಯ ಕರಿಯರ್ ಅಕಾಡೆಮಿ ಸಂಸ್ಥಾಪಕ ಎನ್.ಎಂ. ಬಿರಾದಾರ ಮಾತನಾಡಿ, ವಿದ್ಯಾರ್ಥಿ ಜೀವನದಲ್ಲಿ ದೊಡ್ಡದೊಡ್ಡ ಕನಸಿನೆಡೆಗೆ ಹೆಜ್ಜೆ ಹಾಕುವ ಬದಲಾಗಿ, ಅಲ್ಪತೃಪ್ತಿಯಲ್ಲಿಯೇ ಬದುಕು ಕಟ್ಟಿಕೊಳ್ಳುವ ಹಂತಕ್ಕೆ ಇಳಿದಿದ್ದೇವೆ. ಹೀಗಾಗಿ ದೊಡ್ಡ ಸ್ಥಾನ ಪಡೆಯಬೇಕಾದವರು ಅಲ್ಪ ಸ್ಥಾನದಲ್ಲಿಯೇ ಉಳಿಯುವಂತಾಗಿದೆ. ಇಂದು ಮಕ್ಕಳಲ್ಲಿ ಮೌಲ್ಯಗಳನ್ನು ಬಿತ್ತುವ ಮೂಲಕ ವಿಕಾಸದ ಹಾದಿಯಲ್ಲಿ ಸಾಗುವಂತೆ ಪ್ರೋತ್ಸಾಹ ಮಾಡುವುದಕ್ಕೆ ಇಂತಹ ಕಾರ್ಯಕ್ರಮಗಳು ಅಗತ್ಯವಾಗಿವೆ ಎಂದರು.

ಬಾಲಗಾಂವ ಕಾತ್ರಾಳದ ಗುರುದೇವಾಶ್ರಮದ ಡಾ. ಅಮೃತಾನಂದ ಸ್ವಾಮೀಜಿ ಸಾನ್ನಿಧ್ಯ ವಹಿಸಿ ಮಾತನಾಡಿ, ಯಾವ ಸಂಸ್ಥೆಗಳು ಆದರ್ಶಗಳನ್ನು ಇಟ್ಟುಕೊಂಡಿರುತ್ತವೆಯೋ ? ಅಂತಹ ಸಂಸ್ಥೆಗಳು ಮಾತ್ರ ಸಮಾಜಕ್ಕೆ ಏನಾದರು ಕೊಡುಗೆ ನೀಡುವುದಕ್ಕೆ ಸಾಧ್ಯವಾಗುತ್ತದೆ. ಶಿಕ್ಷಣ ಕೊಡುವುದು ಮಾತ್ರ ನನ್ನ ಕೆಲಸ ಎನ್ನುವ ಬದಲು ಸದೃಢ ಸಮಾಜಕ್ಕಾಗಿ ಸ್ವಸ್ಥ ಹಾಗೂ ಶುದ್ಧ ಮನಸ್ಸಿನ ಮಕ್ಕಳನ್ನು ನಿರ್ಮಾಣ ಮಾಡುವುದು ನನ್ನಕಾಯಕ ಎಂದುಕೊಂಡಾಗ, ಮಾತ್ರ ಅದು ಯಶಸ್ವಿ ಸಂಸ್ಥೆಯಾಗುತ್ತದೆ. ಅಂಥ ಯಶಸ್ವಿ ಸಂಸ್ಥೆಯಾಗಿ ಇಂದು ಎಕ್ಸಲೆಂಟ್ ಬೆಳೆದು ನಿಂತಿದೆ ಎಂದು ಹೇಳಿದರು.

ವಿಜಯಪುರ ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಡಾ. ಗಂಗಾಧರ ಸಂಬಣ್ಣಿ ಸೇರಿದಂತೆ ಜೆಇಇ ಮೇನ್ಸ್ ಪರೀಕ್ಷೆಯಲ್ಲಿ ರ್‍ಯಾಂಕ್ ಪಡೆದ ವಿದ್ಯಾರ್ಥಿಗಳನ್ನು ಸನ್ಮಾನಿಸಲಾಯಿತು. ಎಕ್ಸಲೆಂಟ್ ಸಮೂಹ ಶಿಕ್ಷಣ ಸಂಸ್ಥೆಗಳ ಅಧ್ಯಕ್ಷ ಬಸವರಾಜ್ ಕೌಲಗಿ ಅಧ್ಯಕ್ಷತೆ ವಹಿಸಿ ಮಾತನಾಡಿದರು. ಹೋಟೆಲ್ ಉದ್ದಿಮೆದಾರ ಶಾಂತೇಶ ಕಳಸಗೊಂಡ, ರಾಜಶೇಖರ ಕೌಲಗಿ, ವಿ.ಡಿ ಮಾದನಶೆಟ್ಟಿ, ಶಿವಾನಂದ ಕಲ್ಯಾಣಿ, ಪ್ರಾಚಾರ್ಯ ಮಂಜುನಾಥ ಜುನಗೊಂಡ, ಶರಣಗೌಡ ಪಾಟೀಲ, ಮುಸ್ತಾಕ್ ಮಲಘಾಣ, ಶ್ರದ್ಧಾ ಜಾಧವ ಇದ್ದರು.



ಶಿವಾಜಿ ಆಡಳಿತ ಕೌಶಲ್ಯ ಪ್ರೇರಣೆ

◆ **ಚಡಚಣ:** ಚಡಚಣ ಪಟ್ಟಣದ ಶಿವಾಜಿ ವೃತ್ತದಲ್ಲಿ ನಡೆದ ಛತ್ರಪತಿ ಶಿವಾಜಿ ಮಹಾರಾಜರ ಜಯಂತಿ ಸಂಭ್ರಮದಿಂದ ಆಚರಿಸಲಾಯಿತು. ಶಿವಾಜಿ ಮಹಾರಾಜರ ವೃತ್ತದಲ್ಲಿ ಕೇಸರಿ ಧ್ವಜವನ್ನು ಅದ್ದೂರಿಯಾಗಿ ಆರೋಹಣ ಮಾಡಲಾಯಿತು.

ಬಿಜೆಪಿ ಘಟಕದ ಅಧ್ಯಕ್ಷ ಕಾಂತುಗೌಡ ಪಾಟೀಲ ಮಾತನಾಡಿ, ಶಿವಾಜಿ ಮಹಾರಾಜರು ಮಹಾನ್ ದೇಶಭಕ್ತರು ಹಾಗೂ ಧೈರ್ಯಶಾಲಿಗಳಷ್ಟೇ ಅಲ್ಲದೆ ದಕ್ಷ ಆಡಳಿತಗಾರರೂ ಆಗಿದ್ದರು. ಆಡಳಿತ ಕೌಶಲ್ಯ, ದೂರದೃಷ್ಟಿ ಹಾಗೂ ಪ್ರಜಾಹಿತ ಚಿಂತನೆ ಇಂದಿಗೂ ಪ್ರಸ್ತುತವಾಗಿವೆ ಎಂದರು.

ಮುಖಂಡ ಸೋಮಶೇಖರ ಬಡಿಗೇರ ಮಾತನಾಡಿ, ಶಿವಾಜಿ ಮಹಾರಾಜರ 396ನೇ ಛತ್ರಪತಿ ಶಿವಾಜಿ ಮಹಾರಾಜರ ಜಯಂತಿ ಕೇವಲ ಆಚರಣೆ ಮಾಡುವದಷ್ಟೆ ನಮ್ಮ ಕರ್ತವ್ಯ ಅಲ್ಲ ಅವರು ಹಾಕಿಕೊಟ್ಟ ದಾರಿ ನಮ್ಮ ಜೀವನದ ಗುರಿಯಾಗಿರಬೇಕು ಎಂದರು. ನ್ಯಾಯಸಮ್ಮತ ಆಡಳಿತ ಹಾಗೂ ಧಾರ್ಮಿಕ ಸಹಿ?ನ್ಣತೆಗೆ ಹೆಸರುವಾಸಿಯಾದ ಶಿವಾಜಿ ಮಹಾರಾಜರ ಶೌರ್ಯ, ನಾಯಕತ್ವ ಮತ್ತು ದೇಶಭಕ್ತಿ ನಮ್ಮೆಲ್ಲರಿಗೆ ಪ್ರೇರಣೆಯಾಗಿವೆ ಎಂದು ಹೇಳಿದರು.

ಚಡಚಣ ಪಿಎಸ್‌ಐ ಸೋಮೇಶ ಗೆಜ್ಜಿ ಮಾತನಾಡಿ, ಸ್ವತಂತ್ರ ಮರಾಠಾ ಸಾಮ್ರಾಜ್ಯವನ್ನು ಸ್ಥಾಪಿಸಿ, ಗೋರಿಲ್ಲಾ ಮಾದರಿಯ ಯುದ್ಧ ತಂತ್ರಗಳನ್ನು ಕರಗತ ಮಾಡಿಕೊಂಡಿದ್ದ ಶಿವಾಜಿ ಮಹಾರಾಜರು ದಕ್ಷಿಣ ಭಾರತದ ಸುಮಾರು 250ಕ್ಕೂ ಹೆಚ್ಚು ಕೋಟೆಗಳನ್ನು ವಶಪಡಿಸಿಕೊಂಡಿದ್ದರು ಎಂದು ಹೇಳಿದರು.



ಮುಖಂಡ ಮಹಾದೇವ ಹಿರೇಕುರಬರ ಹಾಗೂ ಮಹಾದೇವ ಬನಸೋಡೆ ಅವರು ಶಿವಾಜಿ ಮಹಾರಾಜರ ಶೌರ್ಯ, ಸಾಹಸ ಮತ್ತು ಸಾಧನೆಗಳನ್ನು ಸವಿಸ್ತಾರವಾಗಿ ಹೇಳಿದರು.

ಪಪಂ ಅಧ್ಯಕ್ಷ ಮಲ್ಲಿಕಾರ್ಜುನ ಧೋತ್ರೆ, ಮರಾಠಾ ಸಮಾಜದ ಮುಖಂಡ ಚಿದಾನಂದ ಶಿಂಧೆ, ಮರಾಠಾ ಸಮಾಜದ ಅಧ್ಯಕ್ಷ ದತ್ತು ಶಿಂಧೆ, ಹಣಮಂತ ಕ್ಷತ್ರಿ, ಪತ್ರಕರ್ತ ಲಕ್ಷ್ಮಣ ಶಿಂಧೆ, ಭಿಮಾಶಂಕರ ಶಿಂಧೆ, ರವಿ ಶಿಂಧೆ, ಮಹಾದೇವ ಶಿಂಧೆ, ಚಂದು ಕ್ಷತ್ರಿ, ಅರ್ಜುನ್ ಕ್ಷತ್ರಿ, ದಿಗಂಬರ ಶಿಂಧೆ, ತಮ್ಮಣ್ಣ ಶಿಂಧೆ, ಶೈದು ಕೊಡಹೊನ್ನ, ಷಣ್ಮುಖಯ್ಯ ವಸ್ತ್ರದ, ದೇವಪ್ಪಗೌಡ ಪಾಟೀಲ, ಗುರು ಸಜ್ಜನ ಹಾಗೂ ಮರಾಠಾ ಸಮಾಜದವರು, ಗ್ರಾಮಸ್ಥರು ಇದ್ದರು.

ವಸತಿ ಶಾಲೆಯಲ್ಲಿ ಉತ್ತಮ ಶಿಕ್ಷಣ: ಇಲಕಲ್

◆ **ನಾಲತವಾಡ:** ವಿದ್ಯಾರ್ಥಿ ಜೀವನದಲ್ಲಿ ಮೊದಲು ಸರಸ್ವತಿ ಒಲಿಸಿಕೊಳ್ಳಿ. ಆನಂತರ ನಿಮ್ಮ ಸಾಧನೆಯ ಮೂಲಕ ಲಕ್ಷ್ಮೀ ನಿಮ್ಮ ಜೀವನದಲ್ಲಿ ಬಂದೇ ಬರುತ್ತಾಳೆ ಎಂದು ಪಪಂ ಅಧ್ಯಕ್ಷೆ ವಿಜಯಲಕ್ಷ್ಮೀ ಇಲಕಲ್ ಹೇಳಿದರು.

ಇಲ್ಲಿಯ ಮೊರಾರ್ಜಿ ದೇಸಾಯಿ ವಸತಿ ಶಾಲೆಯಲ್ಲಿ ವಾರ್ಷಿಕ ಸ್ನೇಹ ಸಮ್ಮೇಳನ ಮತ್ತು ಎಸ್ಎಸ್ಎಲ್ಸಿ ವಿದ್ಯಾರ್ಥಿಗಳ ಬಿಳ್ಕೋಡುವ ಸಮಾರಂಭಕ್ಕೆ ದೀಪ ಬೆಳಗಿಸಿ ಚಾಲನೆ ನೀಡಿ ಮಾತನಾಡಿದರು. ಪಾಲಕರಲ್ಲಿ ಖಾಸಗಿ ಶಿಕ್ಷಣ ಸಂಸ್ಥೆಗಳೇ ಮೇಲು ಎನ್ನುವ ಗೀಳು ತಪ್ಪಿಸಿಕೊಳ್ಳಬೇಕು. ರಾಜ್ಯ ವಿವಿಧ ವಸತಿ ನಿಲಯಗಳ ಮಕ್ಕಳೇ ಇಂದಿಗೆ ಶಿಕ್ಷಣದಲ್ಲಿ ಮಹತ್ತರ ಸಾಧನೆ ಮಾಡುತ್ತಿದ್ದಾರೆ. ಪಟ್ಟಣದ ಮೊರಾರ್ಜಿ ದೇಸಾಯಿ ವಸತಿ ಶಾಲೆಯು ಜಿಲ್ಲೆಯಲ್ಲೇ ಉತ್ತಮ ಗುಣಮಟ್ಟದ ಫಲಿತಾಂಶದೊಂದಿಗೆ ಪ್ರಗತಿ ಸಾಧಿಸುತ್ತೀದೆ ಎಂದರು.

ಡಿಎಸ್ಎಸ್ ಮುಖಂಡರಾದ ಗುಂಡಣ್ಣ ಚಲವಾದಿ, ಮಲ್ಲು ತಳವಾರ ಮಾತನಾಡಿ ಯಾವದೇ ಉನ್ನತ ಹುದ್ದೆಗೆ ಪ್ರಾಥಮಿಕ ಶಿಕ್ಷಣವೇ ಮುಖ್ಯವಾಗಿದೆ, ಡಾ.ಬಿ.ಆರ್.ಅಂಬೇಡ್ಕರ್ ಅವರ ಸಂವಿಧಾನದ ಹಕ್ಕುಗಳ ಮೂಲಕ ತಾವು ವಸತಿ ಶಾಲೆಗಳಲ್ಲಿ ಪ್ರವೇಶ ಪಡೆಯುತ್ತೀದ್ದು ಉನ್ನತ ಹುದ್ದೆಯ ಕನಸು ನಿಮ್ಮದಾಗಲಿ ಎಂದರು.



ಪ್ರಾಚಾರ್ಯ ಜಿ.ಎಂ.ಗುಳಗಿ ಮಾತನಾಡಿ, ಮಕ್ಕಳಿಗೆ ಗಣಕಯಂತ್ರದ ಶಿಕ್ಷಣಕ್ಕೆ ಒತ್ತು ಕೊಡಲಾಗುತ್ತೀದ್ದು ನಮ್ಮ ಶಾಲೆಗೆ ಗಣಕ ಯಂತ್ರಗಳ ಅವಶ್ಯವಿದ್ದು ದಾನಿಗಳು ದೇಣಿಗೆ ಕೊಡಲು ಮುಂದೆ ಬರಬೇಕು ಪ.ಪಂ ಅಧ್ಯಕ್ಷೆ, ಉಪಾಧ್ಯಕ್ಷರು ಮತ್ತು ಡಿಎಸ್ಎಸ್ ಮುಖಂಡರಲ್ಲಿ ಮನವಿ ಮಾಡಿಕೊಂಡರು.

ಶಿಕ್ಷಕ ಸಜ್ಜನ ಶಾಲೆಯ ಸಾಧನೆ ಕುರಿತು ಮಾತನಾಡಿದರು. ಪಪಂ ಉಪಾಧ್ಯಕ್ಷ ಬಸವರಾಜ ಗಂಗನಗೌಡ್ರ, ಸದಸ್ಯರಾದ ಬಾಬು ಕ್ಷತ್ರಿ, ಶರಣಬಸವ ಇಲಕಲ, ಪಾಲಕರ ಪ್ರತಿನಿಧಿ ಗುಂಡಪ್ಪ ನಾಯಕ, ರೇಣುಕಾ ತಮದಡ್ಡಿ, ಸರ್ಫರಾಜ ಜಹಗೀರದಾರ್, ವಿದ್ಯಾಸಾಗರ ರಾಠೋಡ್ ಇದ್ದರು.

ಶಿವಾಜಿ ಆದರ್ಶ ಅಳವಡಿಸಿಕೊಳ್ಳಿ



◆ **ಝಳಕಿ:** ಯುವಕರು ಶಿವಾಜಿ ಮಹಾರಾಜರ ಜೀವನದ ಆದರ್ಶಗಳನ್ನು ಅಳವಡಿಸಿಕೊಳ್ಳಿರಿ ಎಂದು ಜಿಲ್ಲಾ ಬಿಜೆಪಿ ಯುವ ಮೋರ್ಚಾ ಅಧ್ಯಕ್ಷ ರಾಘವೇಂದ್ರ ಸಾಹುಕಾರ ಕಾಪಸೆ ಎಂದರು.

ಸ್ಥಳೀಯ ಚಡಚಣ ರಸ್ತೆಯಲ್ಲಿರುವ ಜೈ ಭವಾನಿ ಹೋಟೆಲ ಆವರಣದಲ್ಲಿ ನಡೆದ ಶಿವಾಜಿ ಮಹಾರಾಜರ ಜಯಂತಿ ಉತ್ಸವ ಪ್ರಯುಕ್ತ ಶಿವಾಜಿ ಮಹಾರಾಜರ ಭಾವ ಚಿತ್ರಕ್ಕೆ ಪೂಜೆ ಸಲ್ಲಿಸಿ ಮಾತನಾಡಿದ ಅವರು, ಛತ್ರಪತಿ ಶಿವಾಜಿ ಮಹಾರಾಜರು ಶತ್ರುಗಳ ವಿರುದ್ಧ ಅಜೇಯ ಧೈರ್ಯ ತೋರಿದ ಮಹಾನ್ ನಾಯಕರು. ಹಿಂದೂ ಧರ್ಮ ರಕ್ಷಣೆಯೇ ತನ್ನ ಧ್ಯೆಯವೆಂದು ಅವರು ನ್ಯಾಯ ಸಮ್ಮತ ಆಡಳಿತ ಸ್ಥಾಪಿಸಿ ಪ್ರಜ್ಞೆಗಳ ವಿಶ್ವಾಸಗಳಿಸಿದರು. ಛತ್ರಪತಿ ಶಿವಾಜಿ ಮಹಾರಾಜರ ಆದರ್ಶಗಳನ್ನು ಅನುಸರಿಸುವುದರಿಂದ ಸಮಾಜದಲ್ಲಿ ಶಾಂತಿ ಶಿಸ್ತು ಮತ್ತು ನೈತಿಕತೆ ಬೆಳೆಯುತ್ತದೆ ಎಂದು ಹೇಳಿದರು.

ಗ್ರಾಪಂ ಮಾಜಿ ಅಧ್ಯಕ್ಷ ಶ್ರೀಮಂತ ಸಾಹುಕಾರ ಕಾಪಸೆ, ಗುರುಪ್ಪಾದಗೌಡ ಬಿರಾದಾರ, ಶಂಕರ ಪಾಚಂಗೆ, ಹಣಮಂತ ಕೋಳಿ, ಶಂಕರಗೌಡ ಬಿರಾದಾರ, ತುಕುರಾಮ ಕಾಗರ, ವಿಠ್ಠಲ ಸಾಹುಕಾರ ಮಾವಿನಳ್ಳಿ, ರಮೇಶಗೌಡ ಬಗಲಿ, ಮಾಳಪ್ಪ ಉಮಾರಾಣಿ, ಕಾಸುಗೌಡ ಪಾಟೀಲ, ರಾಘು ಕೆಂಗಾರ, ಪವನ ಪಾಟೀಲ, ಸುನೀಲ ಹೂಗಾರ, ಬೀರಣ್ಣ ಕಾಗರ, ಹುಸೇನಿಭಾಷ ಪಾಚಂಗೆ, ಬಾಲಕೃಷ್ಣ ಭೋಸಲೆ ಹಾಗೂ ಸಮಸ್ತ ಗ್ರಾಮಸ್ಥರು ಉಪಸ್ಥಿತರಿದ್ದರು.

ಶಿವಾಜಿ ವ್ಯಕ್ತಿತ್ವ ಸ್ಫೂರ್ತಿದಾಯಕ

◆ **ಇಂಡಿ:** ಸ್ವಾತಂತ್ರ್ಯಪ್ರಿಯತೆ ಕಷ್ಟ ಸಹಿಷ್ಣುತೆ ರಾಷ್ಟ್ರ ಪ್ರೇಮದ ಅಲೆಯನ್ನು ದೇಶದ ಜನತೆಯ ಹೃದಯದಲ್ಲಿ ಮೂಡಿಸಿದ ಶಿವಾಜಿ ಮಹಾರಾಜರ ವ್ಯಕ್ತಿತ್ವ ಸದಾ ಅಮರ ಎಂದು ಕಂದಾಯ ಉಪವಿಬಾಗಾಧಿಕಾರಿ ಚಿದಾನಂದ ಗುರುಸ್ವಾಮಿ ಹೇಳಿದರು.

ನಗರದ ಆಡಳಿತಸೌಧದಲ್ಲಿ ತಾಲೂಕಾ ಆಡಳಿತ ಮತ್ತು ಮರಾಠಾ ಸಮಾಜ ವತಿಯಿಂದ ನಡೆದ ಶಿವಾಜಿ ಜಯಂತಿ ಕಾರ್ಯಕ್ರಮದಲ್ಲಿ ಮಾತನಾಡಿದರು. ಭಾರತೀಯರ ತುಂಬ ಆದರ ಅಭಿಮಾನ ಮತ್ತು ಗೌರವಗಳಿಗೆ ಪಾತ್ರನಾದ ಛತ್ರಪತಿ ಶಿವಾಜಿ ಮಹಾರಾಜರಾಗಿದ್ದರು. ಅವರ ಹೆಸರು ಪಾವಿತ್ರ್ಯ ಸ್ವಾಭಿಮಾನ ಸಂಘಟನಾ ಬಲಗಳ ಸಂಕೇತವಾಗಿದೆ ಎಂದರು.

ಜೆಡಿಎಸ್ ತಾಲೂಕು ಅಧ್ಯಕ್ಷ ಬಿ.ಡಿ.ಪಾಟೀಲ, ಪುರಸಭೆ ಮಾಜಿ ಅಧ್ಯಕ್ಷ ಯಮನಾಜಿ ಸಾಳುಂಕೆ, ಅನೀಲಗೌಡ ಬಿರಾದಾರ, ಪ್ರಕಾಶ ಬಿರಾದಾರ, ಸೋಮು ನಿಂಬರಗಿಮಠ, ವಿವೇಕ ಹಂಜಗಿ, ವಿನೋದ ಸೂರ್ಯವಂಸಿ ಮಾತನಾಡಿದರು.

ರಾಜು ಪತಂಗೆ, ಆನಂದ ಪವಾರ, ರಾಮಸಿಂಗ ಕನ್ನೊಳ್ಳಿ, ಅಪ್ಪು ಮಾನೆ, ಶ್ರೀಶೈಲಗೌಡ ಪಾಟೀಲ, ಅಪ್ಪು ನರಸಿಂಗ ಪವಾರ, ಬಸವರಾಜ ರಾಹೂರ, ಎಸ್.ಆರ್.ಮುಜಗೊಂಡ, ದೇವೇಂದ್ರ ಕುಂಬಾರ, ಸತೀಶ ಕುಂಬಾರ, ಲಕ್ಕಪ್ಪ ಯಳಮೇಲಿ, ಸಂಜು ಪವಾರ ಮತ್ತಿತರಿದ್ದರು.



ಸರ್ವಜ್ಞನ ಜಯಂತಿ ಆಚರಣೆ



◆ **ತಾಳಿಕೋಟೆ:** ಪಟ್ಟಣದ ಸರ್ವಜ್ಞ ವಿದ್ಯಾಪೀಠ ಕನ್ನಡ ಮತ್ತು ಆಂಗ್ಲ ಮಾಧ್ಯಮ ಪ್ರಾಥಮಿಕ ಹಾಗೂ ಪ್ರೌಢಶಾಲೆ ತಾಳಿಕೋಟೆಯಲ್ಲಿ ಶ್ರೇಷ್ಠವಚನಕಾರ ತ್ರಿಪದಿಯ ಬ್ರಹ್ಮ ಮಹಾನ್ ತತ್ವಜ್ಞಾನಿ ಸರ್ವಜ್ಞನ ಜಯಂತ್ಯುತ್ಸವ ಆಚರಿಸಲಾಯಿತು.

ಅನನ್ಯ ಮಂಗಳೂರ ಸರ್ವಜ್ಞನವರ ಕುರಿತು ಕಿರುಪರಿಚಯ ಮಾಡಿದಳು. ಸಂಸ್ಥಾಪಕ ಅಧ್ಯಕ್ಷ ಸಿದ್ದನಗೌಡ ಮಂಗಳೂರ, ಮುಖ್ಯಗುರು ಸಂತೋಷ ಪವಾರ ಜವಳಗೇರಿ, ದೈಹಿಕ ಶಿಕ್ಷಕರಾದ ಬಸವರಾಜ ಚಳಗಿ, ಶಾಂತಗೌಡ ಬಿರಾದಾರ, ಸಂಜು ಕುಮಾರ ರಾಠೋಡ, ಬಸವರಾಜ ಸವದತ್ತಿ, ರವಿಕುಮಾರ , ರವಿಕುಮಾರ ಮಲಾಬಾದಿ, ರಸೂಲಸಾ ತುರ್ಕಣಗೇರಿ, ಸಿದ್ದನಗೌಡ ಮುದ್ನೂರ, ಭೀಮನಗೌಡ ಸಾಸನೂರ, ಚೇತನ ನಾವದಗಿ, ಸವಿತಾ ಅಸ್ಕಿ,ಶಿವರ್ಲೀಲಾ ಚುಂಚೂರು, ರೂಪ ಪಾಟೀಲ, ಸಂಗಮೇಶ ಬಿರಾದಾರ, ಸಂಗೀತ ಬಿರಾದಾರ, ಮೇಘಾ ಪಾಟೀಲ, ಬೋರಮ್ಮ ಉಕ್ಕಲಿ, ಅನಿತಾ ಚೌದ್ರಿ, ಜ್ಯೋತಿ ಪೋಲಿಸ್ ಪಾಟೀಲ, ಶೃತಿ ಚೌದ್ರಿ,ರಾಜಬಿ ಬಿದರಿ, ನಾಗರತ್ನ ಮೈಲೇಶ್ವರ, ಶಿವಕುಮಾರ ಕುಂಬಾರ, ಹೀನಾ ಸನದಿ, ದೇವೇಂದ್ರ ಗುಳೆದ, ಮುಬಾರಕ ಬನ್ನಟ್ಟಿ,ದೇವರಾಜ ದೇಸಾಯಿ, ಸುಮಾ ಹಿರೇಮಠ, ಪ್ರತಿಭಾ ಗುಬ್ಬೇವಾಡ, ಗುರುದೇವಿ ಮಡಿವಾಳರ, ಜಯಶ್ರೀ ಹದಿಮೂರ, ಜೈರಾಬಿ ಮುಲ್ಲಾ ಸಿಬ್ಬಂದಿ ಮತ್ತು ಮುದ್ದು ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

ಛತ್ರಪತಿ ಶಿವಾಜಿ ಜಯಂತಿ ಆಚರಣೆ

◆ **ಮುದ್ದೇಬಿಹಾಳ:** ತಾಲೂಕು ಆಡಳಿತ ನೇತೃತ್ವದಲ್ಲಿ ನಡೆದ ಛತ್ರಪತಿ ಶಿವಾಜಿ ಮಹಾರಾಜರ 396ನೇ ಜಯಂತ್ಯುತ್ಸವ ಅಂಗವಾಗಿ ಶಿವಾಜಿ ಮಹಾರಾಜರ ಭಾವಚಿತ್ರದ ಮೆರವಣಿಗೆಗೆ ತಹಶೀಲ್ದಾರ್ ಕೀರ್ತಿ ಚಾಲಕ್ ಪುಷ್ಪನಮನ ಸಲ್ಲಿಸಿ ಚಾಲನೆ ನೀಡಿದರು. ತಾಲೂಕು ಅಕ್ಷರ ದಾಸೋಹ ಸಹಾಯಕ ನಿರ್ದೇಶಕ ಎಂ.ಎಂ.ಬೆಳಗಲ್ಲ, ರಾಜನಾರಾಯಣ ನಲವಡೆ, ಸಮಾಜ ಸೇವಕ ಉದಯ ರಾಯಚೂರ, ಮರಾಠಾ ಸಮಾಜದ ಗೌರವಾಧ್ಯಕ್ಷ ರಾಜೇಂದ್ರ ಭೋಸಲೆ, ಉಪಾಧ್ಯಕ್ಷ ಅಣ್ಣಾಜಿ ಪವಾರ, ರಾಘವೇಂದ್ರ ಘಾಟಗೆ, ಖಜಾಂಚಿ ರಮೇಶ ಘೋರಾತ, ರವಿ ಭೋಸಲೆ, ಪ್ರಧಾನ ಕಾರ್ಯದರ್ಶಿ ಕೃಷ್ಣಾಜಿ ಪವಾರ. ಹಣಮಂತ ನಲವಡೆ, ಭರತ ಭೋಸಲೆ, ಮಾರುತಿ ನಲವಡೆ, ರಾಘವೇಂದ್ರ ನಲವಡೆ, ಸಚೀನ ಸಾಳುಂಕೆ, ಕೀರಣ ಪವಾರ, ಅನೀಲ ಜಾಧವ, ಅನೀಲ ಪವಾರ, ಸಂತೋಷ ಚವ್ಹಾಣ, ವಿನಾಯಕ ಘಾಟಗೆ, ವಿನೋದ ಜಾಧವ, ಲೋಹಿತ್ ಘಾಟಗೆ, ಗಣೇಶ ಘಾಟಗೆ, ಕೃಷ್ಣಾ ಭೋಸಲೆ, ಗಜಾನನ ನಲವಡೆ, ಬಸವರಾಜ ಸೂರ್ಯವಂಶಿ, ಸಂತೋಷ ಸಾಳುಂಕೆ, ಈಶ್ವರಪ್ಪ ಪವಾರ, ವಿರೇಶ ಹಾದಿಮನಿ, ಕಾಶಿಬಾಯಿ ರಾಂಪೂರ, ಪ್ರಭು ಕಡಿ, ಭೀಮಾಜಿ ಘಾಟಗೆ, ಕಾಮರಾಜ ಬಿರಾದಾರ, ಮಾಣಿಕ ದಂಡಾವತಿ, ಸುರೇಶ ಪಾಟೀಲ, ವಿಜು ಬಡಿಗೇರ, ನಾಗೇಶ ಲಾತೂರಕರ, ಸಂಗಮ್ಮ ದೇವರಳ್ಳಿ, ಗೌರಿಶಂಕರ ಹಿರೇಠಮಠ, ಪ್ರೀತಿ ದೇಗಿನಾಳ, ತಾಲೂಕು ದೈಹಿಕ ಶಿಕ್ಷಕ ಎ.ಜೆ.ದಖನಿ ಉಪಸ್ಥಿತರಿದ್ದರು.



ಕಿರುಸುದ್ದಿ

ತ್ರಿಪದಿಯ ಬ್ರಹ್ಮ ಸರ್ವಜ್ಞನ ಜಯಂತಿ ಆಚರಣೆ

ಹನಮಸಾಗರ: ಸಮೀಪದ ಕಬ್ಬರಗಿ ಸರ್ಕಾರಿ ಮಾದರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ತ್ರಿಪದಿಗಳ ಕವಿ, ಸರ್ವಜ್ಞನ ಜಯಂತಿ ಆಚರಿಸಲಾಯಿತು. ಸರ್ವಜ್ಞ ಅವರ ಭಾವಚಿತ್ರಕ್ಕೆ ಪುಷ್ಪಾರ್ಪಣೆ ಸಲ್ಲಿಸಿ ನಂತರ ಮುಖ್ಯ ಶಿಕ್ಷಕ ಯಲ್ಲನಗೌಡ ಪಾಟೀಲ ಮಾತನಾಡಿ, ಕವಿ ಸರ್ವಜ್ಞರು ಆದರ್ಶಗಳು ಒಂದು ವರ್ಗ–ಸಮುದಾಯಕ್ಕೆ ಸೀಮಿತವಾಗದೇ ಎಲ್ಲರೂ ಸಮಾನರು ಎಂಬ ಭಾವನೆ ಪ್ರತಿಯೊಬ್ಬರಲ್ಲಿ ಮೂಡಿಸಿದಂತಹ ಮಹನೀಯರು. ಅನುಭವ ಮಂಟಪದಲ್ಲಿ ತನ್ನದೇ ಆದ ಛಾಪು ಮೂಡಿಸಿದವರು. ಜ್ಯೋತಿಯನ್ನು ಬೆಳಗಿದರೇ ಕತ್ತಲು ಹೇಗೆ ಮರೆಯಾಗುವುದೋ, ಅದೇ ರೀತಿ ಜಾತಿ–ಭೇದಭಾವವನ್ನು ಹೊಗಲಾಡಿಸಬೇಕು ಎಂದು ಶ್ರಮಿಸಿದ್ದಾರೆ ಎಂದು ಹೇಳಿದರು. ಶಿಕ್ಷಕರಾದ ಶೇಖರಪ್ಪ ಮೇಟಿ ಮಾತನಾಡಿ, ಸರಳ ಭಾಷೆಯಲ್ಲಿ ವಿಶ್ವರೂಪದ ವಿಚಾರಗಳನ್ನು ಸರ್ವದಿಂದಲೇ ಕಲಿತು, ಸಾಮಾಜಿಕ ಚಿಂತನೆಗಳ ಬಗ್ಗೆ ಸುಮಾರು 2000 ಕ್ಕಿಂತ ಹೆಚ್ಚು ತ್ರಿಪದಿ ರಚಿಸಿ ಕನ್ನಡದ ತ್ರಿಪದಿಯ ಬ್ರಹ್ಮ ಎಂದೇ ಪ್ರಖ್ಯಾತಿಗಳಿಸಿ ತನ್ನ ಆಚಾರ ವಿಚಾರಗಳ ಬಗ್ಗೆ ತಿಳಿಸಿದ್ದಾರೆ. ಸರ್ವವನ್ನು ಅರಿತು ತನ್ನ ವೈಜ್ಞಾನಿಕ ಚಿಂತನೆಗಳ ಮುಖಾಂತರ ಜನಸಾಮಾನ್ಯರಿಗೆ ತಿಳಿಸಿ, ವಚನ ಕ್ರಾಂತಿಯನ್ನು ಸಾಮಾಜಿಕ ಕ್ರಾಂತಿ ಎಂದು ತೋರಿಸಿದ್ದಾರೆ ಎಂದು ತಿಳಿಸಿದರು. ಮಹಾಂತೇಶ, ಆಸಂಗೆಪ್ಪ, ದಾನೇಶ, ಮಾಸಪ್ಪ, ಮೇಘರಾಜ, ಹನಮಂತ, ಕಳಕಪ್ಪ, ಮಂಗಳೇಶ, ಮಾರುತಿ, ನಾಗರತ್ನ, ಸಾವಿತ್ರಿ, ಅಕ್ಷತಾ, ಪೂಜಾ, ಸಾವಿತ್ರಿ, ಮಾಸವ್ವ, ಗಿರಿಜಾ, ಪರಸಪ್ಪ ವಣಗೇರಿ ಮತ್ತು ಶಾಲಾ ಸಿಬ್ಬಂದಿ ಹಾಗೂ ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

ಸರ್ವೋತ್ತಮ ಸೇವಾ ಪ್ರಶಸ್ತಿಗೆ ಅರ್ಜಿ ಆಹ್ವಾನ

ಕನಕಗಿರಿ: 2026ನೇ ಸಾಲಿನ ರಾಜ್ಯ ಸರ್ಕಾರದ ಸರ್ವೋತ್ತಮ ಸೇವಾ ಪ್ರಶಸ್ತಿಗೆ ನಾಮ ನಿರ್ದೇಶನಗಳಿಗೆ ಆಹ್ವಾನಿಸಲಾಗಿದೆ ಎಂದು ತಾಲೂಕು ನೌಕರರ ಸಂಘದ ಅಧ್ಯಕ್ಷೆ ಶಂಶಾದ ಬೇಗ್ಂ ತಿಳಿಸಿದ್ದಾರೆ.



ರಾಜ್ಯ ಸರ್ಕಾರದ ಅಧಿಕಾರಿ, ನೌಕರರಿಗೆ 'ಸರ್ವೋತ್ತಮ ಸೇವಾ ಪ್ರಶಸ್ತಿ' ನೀಡುವ ಯೋಜನೆಯನ್ನು 2012ರಿಂದ ಜಾರಿಗೆ ತರಲಾಗಿದೆ. ಪ್ರಸ್ತುತ 2026ನೇ ಸಾಲಿನಲ್ಲಿ ರಾಜ್ಯ ಮಟ್ಟ ಹಾಗೂ ಜಿಲ್ಲಾ ಮಟ್ಟದ ಸರ್ವೋತ್ತಮ ಸೇವಾ ಪ್ರಶಸ್ತಿಯನ್ನು ಪಡೆಯಲು ರಾಜ್ಯ ಸರ್ಕಾರದ ಅಧಿಕಾರಿ, ನೌಕರರು ತಮ್ಮ ನಾಮ ನಿರ್ದೇಶನಗಳನ್ನು ಆನ್ ಲೈನ್ ಮೂಲಕ ಮಾತ್ರ ಸಲ್ಲಿಸಲು ಅವಕಾಶವನ್ನು ಕಲ್ಪಿಸಲಾಗಿದೆ.

'ಸರ್ವೋತ್ತಮ ಸೇವಾ ಪ್ರಶಸ್ತಿಯು' ರಾಜ್ಯ ಮಟ್ಟ ಹಾಗೂ ಜಿಲ್ಲಾ ಮಟ್ಟದ ಪ್ರಶಸ್ತಿಗಳಿಗೆ ಅರ್ಜಿ ಸಲ್ಲಿಸಬಯಸುವವರು ಪ್ರತಿ ಹಂತಕ್ಕೂ ಪ್ರತ್ಯೇಕವಾಗಿ ತಮ್ಮ ನಾಮ ನಿರ್ದೇಶನವನ್ನು ವೆಬ್‌ಸೈಟ್ https://dparar.karnataka.gov.in/ ಅಥಾವ https://sarvothamaawards.karnataka.gov.in ಕೊನೆಯ ದಿನಾಂಕ ಫೆ.25ರಂದು ಎಂದು ಪ್ರಕಟಣೆಲ್ಲಿ ತಿಳಿಸಿದ್ದಾರೆ.

ಜಮೀನಿನಲ್ಲಿ ಗಾಂಜಾ ಪತ್ತೆ



ಕುಷ್ಟಗಿ: ತಾಲೂಕಿನ ನಾಗರಾಳ ಗ್ರಾಮದ ದೇವಪ್ಪ ನಿಂಗಪ್ಪ ಕಾಮನೂರು ಅವರಿಗೆ ಸೇರಿದ ಜಮೀನಿನಲ್ಲಿ ಎರಡು ಗಾಂಜಾ ಗಿಡಗಳನ್ನು ಬೆಳೆದಿದ್ದು, ಅದರ ಒಟ್ಟು ತೂಕ 1046 ಗ್ರಾಂ ಹಾಗೂ ಅದೇ ಜಮೀನಿನಲ್ಲಿ ಇರುವ ತೋಟದ ಮನೆಯಲ್ಲಿ 34 ಗ್ರಾಂ ಒಣ ಗಾಂಜಾ ಸಂಗ್ರಹಿಸಿಟ್ಟಿದ್ದು, ಮುದ್ದೆಮಾಲನ್ನು ವಶಪಡಿಸಿಕೊಂಡು ಎನ್‌ಡಿಪಿಎಸ್ ಕಾಯ್ದೆಯ ವಿವಿಧ ಕಲಂ ಗಳಡಿಯಲ್ಲಿ ಪ್ರಕರಣ ದಾಖಲಿಸಿದ್ದು ಇರುತ್ತದೆ. ಅಬಕಾರಿ ಅಪರ ಆಯುಕ್ತರು (ಜಾ ಮತ್ತು ತ), ಕೇಂದ್ರಸ್ಥಾನ ಬೆಳಗಾವಿ ನಿರ್ದೇಶನದಂತೆ, ಅಬಕಾರಿ ಜಂಟಿ ಆಯುಕ್ತರು (ಜಾ ಮತ್ತು ತ), ಹೊಸಪೇಟೆ ವಿಭಾಗ ಅವರ ಆದೇಶದಂತೆ ಹಾಗೂ ಅಬಕಾರಿ ಉಪ ಆಯುಕ್ತರು ಕೊಪ್ಪಳ ಜಿಲ್ಲೆ ಅವರ ಮಾರ್ಗದರ್ಶನದಂತೆ ಹಾಗೂ ಅಬಕಾರಿ ಉಪ ಅಧೀಕ್ಷಕರು, ಉಪ ವಿಭಾಗದ ನೇತೃತ್ವದಲ್ಲಿ ದಾಳಿ ನಡೆಸಲಾಗಿತ್ತು.



ಹನಮಸಾಗರ: ಸಮೀಪದ ಕಬ್ಬರಗಿ ಸರ್ಕಾರಿ ಮಾದರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ತ್ರಿಪದಿಗಳ ಕವಿ, ಸರ್ವಜ್ಞನ ಜಯಂತಿ ಆಚರಿಸಲಾಯಿತು.

ತ್ರಿಪದಿ ಕವಿ ಸರ್ವಜ್ಞ ಜಯಂತಿ ಆಚರಣೆ

ಮಾನ್ವಿ: ಪಟ್ಟಣದ ತಹಶಿಲ್ದಾರ್ ಕಚೇರಿಯಲ್ಲಿ ತ್ರಿಪದಿ ಕವಿ ಸರ್ವಜ್ಞ ಜಯಂತಿ ಅಂಗವಾಗಿ ತ್ರಿಪದಿ ಕವಿ ಸರ್ವಜ್ಞ ಭಾವಚಿತ್ರಕ್ಕೆ ಪುಷ್ಪ ಗ್ರೇಡ್–2 ತಹಶೀಲ್ದಾರ್ ಅಬ್ದುಲ್ ವಾಹಿದ್ ಸಮರ್ಪಿಸಿದರು.

ಈ ವೇಳೆ ಮಾತನಾಡಿ, ಕನ್ನಡ ಸಾಹಿತ್ಯ ಲೋಕದಲ್ಲಿ ತಮ್ಮ ಮೂರು ಸಾಲುಗಳ ತ್ರಿಪದಿಗಳ ಮೂಲಕ ಸಮಾಜವನ್ನು ತಿದ್ದುವ ಮೂಲಕ ಸರ್ವಜ್ಞ ಕವಿ ವಿಶೇಷವಾದ ಸ್ಥಾನವನ್ನು ಪಡೆದಿದ್ದಾರೆ. ಸರ್ವಜ್ಞನ ತ್ರಿಪದಿಗಳು ಕನ್ನಡದಲ್ಲಿದ್ದು ಅತ್ಯಂತ ಸರಳವಾಗಿವೆ ಹಾಗೂ ಸಮಾಜದಲ್ಲಿನ ಅನೇಕ ಕಂದಾಚರಗಳನ್ನು ,ಮೌಢ್ಯಾಚರಣೆಗಳನ್ನು ತಮ್ಮ ತ್ರಿಪದಿಗಳ ಮೂಲಕ ಖಂಡಿಸಿದ್ದಾರೆ. ಅವರ ವಚನಗಳು ಇಂದಿಗೂ ಕೂಡ ಪ್ರಸ್ತತವಾಗಿವೆ ಎಂದು ತಿಳಿಸಿದರು.

ತ್ರಿಪದಿ ಕವಿ ಸರ್ವಜ್ಞ ಜಯಂತಿ ಕಾರ್ಯಕ್ರಮದಲ್ಲಿ ಉಪತಹಶೀಲ್ದಾರ್ ವಿರುಪ್ಪಣ್ಣ, ಕಂದಾಯ ಇಲಾಖೆ ಸಿಬ್ಬಂದಿಗಳು ಸೇರಿದಂತೆ ವಿವಿಧ ಇಲಾಖೆಗಳ ಅಧಿಕಾರಿಗಳು ಹಾಗೂ ಕುಂಬಾರ್ ಸಮಾಜದ ತಾ.ಅಧ್ಯಕ್ಷರಾದ ಕೆ,ಮಲ್ಲೇಶ ಕುಂಬಾರ್ ಬಸವರಾಜಪ್ಪ ಕುಂಬಾರ, ಪಂಪಣ್ಣ ಕುಂಬಾರ್ ನೀರಾಮಾನ್ವಿ, ರವಿಕುಮಾರ ಕುಂಬಾರ್, ಪ್ರಹ್ಲಾದ್ ಕುಂಬಾರ್, ಶರಣಪ್ಪ ಕುಂಬಾರ್, ಬಸವ ಕುಂಬಾರ್, ಪ್ರಕಾಶ ಕುಂಬಾರ್, ಡಾ.ಮಲ್ಲಿಕಾರ್ಜುನ ಕುಂಬಾರ್, ಅರಳಪ್ಪ ಕುಂಬಾರ್, ಮಲ್ಲಪ್ಪ ಕುಂಬಾರ್, ಬಸವರಾಜ ಕುಂಬಾರ್ ನೀರಮಾನ್ವಿ, ಸಿದ್ದು ಕುಂಬಾರ್, ಉಮೇಶ ಕುಂಬಾರ್ ಸೇರಿದಂತೆ ಇನ್ನಿತರರು ಭಾಗವಹಿಸಿದ್ದರು.



ಮಾನ್ವಿ: ಪಟ್ಟಣದ ತಹಶಿಲ್ದಾರ್ ಕಚೇರಿಯಲ್ಲಿ ತ್ರಿಪದಿ ಕವಿ ಸರ್ವಜ್ಞ ಜಯಂತಿ ಅಂಗವಾಗಿ ತ್ರಿಪದಿ ಕವಿ ಸರ್ವಜ್ಞ ಭಾವಚಿತ್ರಕ್ಕೆ ಪುಷ್ಪ ಗ್ರೇಡ್–2 ತಹಶೀಲ್ದಾರ್ ಅಬ್ದುಲ್ ವಾಹಿದ್ ಸಮರ್ಪಿಸಿದರು. ತ್ರಿಪದಿ ಕವಿ ಸರ್ವಜ್ಞ ಜಯಂತಿ ಕಾರ್ಯಕ್ರಮದಲ್ಲಿ ಉಪತಹಶೀಲ್ದಾರ್ ವಿರುಪ್ಪಣ್ಣ, ಕಂದಾಯ ಇಲಾಖೆ ಸಿಬ್ಬಂದಿಗಳು ಸೇರಿದಂತೆ ವಿವಿಧ ಇಲಾಖೆಗಳ ಅಧಿಕಾರಿಗಳು ಹಾಗೂ ಕುಂಬಾರ್ ಸಮಾಜದ ತಾ.ಅಧ್ಯಕ್ಷರಾದ ಕೆ,ಮಲ್ಲೇಶ ಕುಂಬಾರ್ ಬಸವರಾಜಪ್ಪ ಕುಂಬಾರ, ಪಂಪಣ್ಣ ಕುಂಬಾರ್ ನೀರಾಮಾನ್ವಿ, ರವಿಕುಮಾರ ಕುಂಬಾರ್, ಪ್ರಹ್ಲಾದ್ ಕುಂಬಾರ್ ಇದ್ದರು.

ಗ್ಯಾರಂಟಿ ಯೋಜನೆ ಪ್ರಚಾರ ವಾಹನಕ್ಕೆ ಚಾಲನೆ

ಹೆಚ್ಚು ಜಾಗೃತಿ ಮೂಡಿಸಿ: ಶ್ರೀನಿವಾಸ

ಕೊಪ್ಪಳ: ಹೆಚ್ಚಿನ ಜನರಿರುವ ಪ್ರದೇಶಗಳಲ್ಲಿ ರಾಜ್ಯ ಸರ್ಕಾರದ ಮಹತ್ವಾಕಾಂಕ್ಷೆ ಯೋಜನೆಗಳಾದ ಶಕ್ತಿ, ಅನ್ನಭಾಗ್ಯ, ಗೃಹಜ್ಯೋತಿ, ಗೃಹಲಕ್ಷ್ಮೀ ಹಾಗೂ ಯುವನಿಧಿ ಸೇರಿ ಪಂಚ ಗ್ಯಾರಂಟಿ ಯೋಜನೆಗಳ ಪ್ರಚಾರ ಹಮ್ಮಿಕೊಳ್ಳುವ ಮೂಲಕ ಮತ್ತಷ್ಟು ಜಾಗೃತಿ ಮೂಡಿಸಬೇಕು ಎಂದು ಜಿಲ್ಲಾ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಅಧ್ಯಕ್ಷ ರೆಡ್ಡಿ ಶ್ರೀನಿವಾಸ ಹೇಳಿದರು.

ಅವರು ಶುಕ್ರವಾರ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ವತಿಯಿಂದ ರಾಜ್ಯ ಸರ್ಕಾರದ ಪಂಚ ಗ್ಯಾರಂಟಿ ಯೋಜನೆಗಳಾದ ಶಕ್ತಿ, ಅನ್ನಭಾಗ್ಯ, ಗೃಹಜ್ಯೋತಿ, ಗೃಹಲಕ್ಷ್ಮೀ ಹಾಗೂ ಯುವನಿಧಿ ಯೋಜನೆ ಕುರಿತಂತೆ ಎಲ್‌ಇಡಿ ವಾಹನದ ಮೂಲಕ ಕಿರುಚಿತ್ರಗಳ ಪ್ರದರ್ಶನ, ಸಂಗೀತ, ಬೀದಿ ನಾಟಕದಿಂದ ಜನಸಾಮಾನ್ಯರಿಗೆ ಮಾಹಿತಿ ಹಾಗೂ ಪ್ರಚಾರ ನೀಡಲು ಕೊಪ್ಪಳ ಜಿಲ್ಲೆಯಲ್ಲಿ ಹಮ್ಮಿಕೊಂಡಿರುವ ಪ್ರಚಾರ ವಾಹನ ಹಾಗೂ ಕಲಾ ಜಾಥಾ ಕಾರ್ಯಕ್ರಮಕ್ಕೆ ಜಿಲ್ಲಾಡಳಿತ ಭವನದ ಆವರಣದಲ್ಲಿ ಹಸಿರು ನಿಶಾನೆ ತೋರುವ ಮೂಲಕ ಚಾಲನೆ ನೀಡಿ, ಮಾತನಾಡಿದರು.

ರಾಜ್ಯದಲ್ಲಿ ಪಂಚ ಗ್ಯಾರಂಟಿ ಯೋಜನೆಗಳು ಅಚ್ಚುಕಟ್ಟಾಗಿ ನಡೆಯುತ್ತಿದ್ದು, ಎಲ್ಲಾ ಅರ್ಹ ಫಲಾನುಭವಿಗಳಿಗೆ ನೇರವಾಗಿ ಈ ಯೋಜನೆಗಳ ಲಾಭವನ್ನು ತಲುಪಿಸುವಂತಹ ಕೆಲಸ ನಮ್ಮ ಸರ್ಕಾರದಿಂದ ಆಗುತ್ತಿದೆ. ಈ ಎಲ್ಲಾ ಐದು ಯೋಜನೆಗಳ ಬಗ್ಗೆ ಪ್ರತಿಯೊಂದು ಗ್ರಾಮ ಮತ್ತು ಪಟ್ಟಣಗಳಲ್ಲಿ ಪ್ರಚಾರ ಆಗಬೇಕೆಂದು ಸರ್ಕಾರವು ಪ್ರಚಾರ ವಾಹನಗಳ ಮೂಲಕ ಸಾರ್ವಜನಿಕರಿಗೆ ಅರಿವು ಮೂಡಿಸುತ್ತಿದೆ. ಈ ಕಾರ್ಯಕ್ರಮದ ಮೂಲಕ ಪಂಚ ಗ್ಯಾರಂಟಿ ಯೋಜನೆಗಳಿಂದ ಜನರಿಗೆ ಸಿಗುತ್ತಿರುವ ಲಾಭಗಳ ಕುರಿತು ಜನರಿಗೆ ಅರ್ಥವಾಗುವ ರೀತಿಯಲ್ಲಿ ಕಲಾವಿದರು ಮಾಹಿತಿ ನೀಡಿ, ಐದು ಗ್ಯಾರಂಟಿ ಯೋಜನೆಗಳ ಪ್ರಚಾರ ಕಾರ್ಯಕ್ರಮವು ಜಿಲ್ಲೆಯಲ್ಲಿ ಅಚ್ಚುಕಟ್ಟಾಗಿ ನಡೆಸಬೇಕೆಂದರು.



> **ಯಾವುದೇ ಒಂದು ಮಾನವನ ಸಬಲೀಕರಣವಾಗಬೇಕಾದರೆ, ಕನಿಷ್ಠ ಮೂಲಭೂತ ಬದುಕುವ ಹಕ್ಕನ್ನು ಕೊಡಬೇಕೆಂದು ಸಂವಿಧಾನ ಹೇಳುತ್ತದೆ. ಅಂತಹ ಹಕ್ಕನ್ನು ಗ್ಯಾರಂಟಿ ಯೋಜನೆಗಳ ಮೂಲಕ ನಮ್ಮ ಸರ್ಕಾರ ನೀಡುತ್ತಿದೆ. ಈ ಎಲ್ಲ ಯೋಜನೆಗಳ ಮೂಲಕ ಯುವ ಜನರಿಗೆ ಮಹಿಳೆಯರಿಗೆ ಮತ್ತು ಎಲ್ಲರಿಗೂ ಶಕ್ತಿ ಕೊಡುವ ಕೆಲಸ ಆಗುತ್ತಿದೆ.**
>
> ■ **ಮಂಜುನಾಥ ಗೊಂಡಬಾಳ, ಜಿಲ್ಲಾ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಉಪಾಧ್ಯಕ್ಷ**

ಜಿಲ್ಲೆಯಲ್ಲಿ ಪಂಚ ಗ್ಯಾರಂಟಿ ಯೋಜನೆಗಳನ್ನು ಸಮರ್ಪಕವಾಗಿ ಅನುಷ್ಠಾನ ಮಾಡಲಾಗುತ್ತಿದ್ದು, ಗೃಹಲಕ್ಷ್ಮೀ ಯೋಜನೆಯಡಿ ಸುಮಾರು 3 ಲಕ್ಷ 19 ಸಾವಿರಕ್ಕೂ ಅಧಿಕ ಫಲಾನುಭವಿಗಳು ಈ ಯೋಜನೆಯ ಸೌಲಭ್ಯ ಪಡೆದುಕೊಳ್ಳುತ್ತಿದ್ದಾರೆ. ಇಲ್ಲಿಯವರೆಗೆ 1581 ಕೋಟಿ ರೂ.ಗಳನ್ನು ಗೃಹಲಕ್ಷ್ಮೀ ಫಲಾನುಭವಿಗಳಿಗೆ ನೀಡಲಾಗಿದೆ. ಶಕ್ತಿ ಯೋಜನೆಯಡಿ ಇಲ್ಲಿಯವರೆಗೆ ಜಿಲ್ಲೆಯಲ್ಲಿ ಸುಮಾರು 11 ಕೋಟಿ ಮಹಿಳಾ ಫಲಾನುಭವಿಗಳು ಉಚಿತ ಬಸ್ ಪ್ರಯಾಣದ ಸೌಲಭ್ಯವನ್ನು ಪಡೆದುಕೊಂಡಿದ್ದಾರೆ. ಅನ್ನಭಾಗ್ಯ ಯೋಜನೆಯು ಪಡಿತರ ಚೀಟಿದಾರರಿಗೆ ತುಂಬಾ ಅನುಕೂಲವಾಗಿದೆ. ಯುವನಿಧಿಯಡಿ 13 ಸಾವಿರಕ್ಕೂ ಅಧಿಕ ಫಲಾನುಭವಿಗಳಿಗೆ ನಿರುದ್ಯೋಗ ಭತ್ಯೆ ಸಿಗುತ್ತಿದೆ. ಗೃಹಜ್ಯೋತಿಯಡಿ ಜಿಲ್ಲೆಯ ಶೇ.98.5ರಷ್ಟು ಪ್ರಗತಿ ಸಾಧಿಸಲಾಗಿದೆ ಎಂದು ಹೇಳಿದರು.

ತಾಲೂಕು ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ ಸದಸ್ಯರಾದ ಮಾನ್ವಿ ಪಾಶಾ, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ಸಹಾಯಕ ನಿರ್ದೇಶಕ ಡಾ.ಸುರೇಶ್ ಜಿ., ಕಾರಟಗಿ ತಾಪಂ ಕೆಡಿಪಿ ಸದಸ್ಯರಾದ ದಾವಲಸಾಬ್, ದೇಸಾಯಿ ಕ್ಯಾಂಪ್ ಗ್ರಾಪಂ ಸದಸ್ಯರಾದ ಮಹೆಬೂಬ್, ಕಲಾವಿದ ಭಾಷು ಹಿರೇಮನಿ, ರಮೇಶ ಸಿಂಧನೂರು, ವಾರ್ತಾ ಇಲಾಖೆಯ ಸಿಬ್ಬಂದಿ ಎನ್.ತಿಪ್ಪಯ್ಯ ನಾಯ್ದು, ಆರೀಫ್ ಅಹ್ಮದ್, ಶಿಬಿರಾರ್ಥಿಗಳಾದ ಪ್ರಕಾಶಮ ಕಿರಣ ಸೇರಿದಂತೆ ಇತರೆ ಸಿಬ್ಬಂದಿ, ಕಲಾವಿದರಾದ ಕಾಳೇಶ್, ಶರಣಪ್ಪ ಮೇಟಿ, ವೀರಯ್ಯ, ಸುಲೋಚನಾ, ಗೌರಮ್ಮ ಸೇರಿದಂತೆ ಮತ್ತಿತರರು ಉಪಸ್ಥಿತರಿದ್ದರು.

ಸರ್ವಜ್ಞ ಜಯಂತಿ: ಮೆರವಣಿಗೆಗೆ ಚಾಲನೆ

ರಾಯಚೂರು: ಜಿಲ್ಲಾಡಳಿತ, ಜಿಲ್ಲಾ ಪಂಚಾಯಿತಿ, ಮಹಾನಗರ ಪಾಲಿಕೆ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಯೋಗದಲ್ಲಿ ಸಂತ ಕವಿ ಸರ್ವಜ್ಞ ಜಯಂತಿ ಆಚರಿಸಲಾಯಿತು.

ನಗರದ ಡಾ.ಬಿ.ಆರ್.ಅಂಬೇಡ್ಕರ ವೃತ್ತದಲ್ಲಿ ಸಂತಕವಿ ಸರ್ವಜ್ಞ ಅವರ ಭಾವಚಿತ್ರದ ಮೆರವಣಿಗೆಗೆ ಸಣ್ಣ ನೀರಾವರಿ, ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವ ಎನ್.ಎಸ್.ಬೋಸರಾಜು ಚಾಲನೆ ನೀಡಿದರು. ಅಲ್ಲಿಂದ ಆರಂಭಗೊಂಡ ಮೆರವಣಿಗೆಯು ನಗರದ ಪ್ರಮುಖ ವೃತ್ತಗಳಲ್ಲಿ ಸಂಚರಿಸಿ ಜಿಲ್ಲಾ ರಂಗಮಂದಿರಕ್ಕೆ ಬಂದು ಸೇರಿತು.

ಡೊಳ್ಳಿನ ಕಲಾ ತಂಡಗಳ ಮೂಲಕ ಮೆರವಣಿಗೆಯು ಅದ್ದೂರಿಯಾಗಿ ನಡೆಯಿತು. ಮೆರವಣಿಗೆಯಲ್ಲಿ ಮುಖಂಡ ಕೆ.ಶಾಂತಪ್ಪ, ಸಹಾಯಕ ಆಯುಕ್ತ ಡಾ.ಹಂಪಣ್ಣ ಸಜ್ಜನ, ತಹಶೀಲ್ದಾರ್ ಸುರೇಶ ವರ್ಮಾ ಸೇರಿದಂತೆ ಸಮಾಜದ ಪ್ರಮುಖರಿದ್ದರು.

ಬಳಿಕ ಜಿಲ್ಲಾ ರಂಗಮಂದಿರದಲ್ಲಿ ನಡೆದ ವೇದಿಕೆ ಕಾರ್ಯಕ್ರಮದಲ್ಲಿ ಯರಮರಸ್‌ನ ನಿವೃತ್ತ ಪ್ರಾಂಶುಪಾಲ ವೈ.ಸುರೇಂದ್ರಬಾಬು ಕುಂಬಾರ ವಿಶೇಷ ಉಪನ್ಯಾಸ ನೀಡಿ, 16ನೇ ಶತಮಾನದ ಶ್ರೇಷ್ಠ ಕವಿಗಳಲ್ಲೊಬ್ಬರಾದ ಸರ್ವಜ್ಞ ತ್ರಿಪದಿ ರಚನೆಗಳ ಮೂಲಕ ಅರ್ಥಪೂರ್ಣ ವಚನಗಳನ್ನು ಜನತೆಗೆ ನೀಡಿದ್ದಾರೆ. ಹರಿತವಾದ ತ್ರಿಪದಿಯ ಸಾಲುಗಳ ಮೂಲಕ ಸಮಾಜದ ಅಂಕುಡೊಂಕುಗಳನ್ನು ತಿದ್ದುವ ಕೆಲಸ ಮಾಡಿದ್ದಾರೆ. ಸರ್ವಜ್ಞ ಕನ್ನಡ ನಾಡಿನ ಸಂಪತ್ತು ಎಂದು ತಿಳಿಸಿದರು.

ಮಹಾನಗರ ಪಾಲಿಕೆಯ ಸಮುದಾಯ ಸಂಘಟನಾಧಿಕಾರಿ ಕೃಷ್ಣ ಕಟ್ಟಿಮನಿ ಮಾತನಾಡಿ, ಸರ್ವಜ್ಞ ಕೇವಲ ಒಂದು ಜಾತಿಗೆ ಸೀಮಿತವಾಗಿಲ್ಲ, ಅವರು ಇಡೀ ಜಗತ್ತಿಗೆ ಉತ್ತಮ ಸಂದೇಶಗಳನ್ನು ನೀಡಿದ ಕವಿಯಾಗಿದ್ದಾರೆ. ಸಮ ಸಮಾಜ ನಿರ್ಮಾಣ ಕುರಿತು ಜನತೆಗೆ ತಮ್ಮ ವಚನಗಳ ಮೂಲಕ ಉತ್ತಮ ಸಂದೇಶ ನೀಡಿದರು. ಸಮಾಜ ಇನ್ನಷ್ಟು ಅಭಿವೃದ್ಧಿಯಾಗಲು ಜನತೆ ತಮ್ಮ ಮಕ್ಕಳಿಗೆ ಉತ್ತಮ ಶಿಕ್ಷಣ ಕೊಡಿಸಬೇಕು ಎಂದರು.

ಸಮಾರಂಭದಲ್ಲಿ ಗ್ರೇಡ್–2 ತಹಶೀಲ್ದಾರ್ ಪರಶುರಾಮ, ಸಮಾಜದ ಪ್ರಮುಖರಾದ ಶಿವರಾಜಪ್ಪ, ವೀರಭದ್ರಪ್ಪ, ಬಸವರಾಜ, ಶಿವಪ್ರಕಾಶ, ಭೀಮಪ್ಪ, ಲಕ್ಷ್ಮಿರೆಡ್ಡಿ, ತಿಮ್ಮಪ್ಪ, ರಮೇಶ, ನರಸಿಂಗಪ್ಪ, ಸಾಯಿಬಾಬಾ ಹಾಗೂ ಇತರರಿದ್ದರು.



ಮೌಢ್ಯಾಚರಣೆಗಳಿಂದ ಮುಕ್ತರಾಗಿ: ಹರ್ತಿ

ಕುಕನೂರು: ವಿದ್ಯಾವಂತರೆ ಮೂಢನಂಬಿಕೆಗಳಿಗೆ ಅತೀ ಹೆಚ್ಚು ಬಲಿಯಾಗುತ್ತಿರುವುದು ನೋವಿನ ಸಂಗತಿ. ಮಕ್ಕಳು ವಿಜ್ಞಾನ ಮತ್ತು ತಂತ್ರಜ್ಞಾನದ ಬೆಳವಣಿಗೆಯನ್ನು ಸದುಪಯೋಗ ಪಡೆದುಕೊಳ್ಳಿ. ಮೌಢ್ಯಾಚರಣೆಗಳಿಂದ ಮುಕ್ತರಾಗಿ ವಿಜ್ಞಾನದ ಅರಿವು ಮೂಡಿಸಿ ಎಂದರು.

ತಾಲೂಕಿನ ಸರ್ಕಾರಿ ಪದವಿ ಪೂರ್ವ ಕಾಲೇಜು (ಪ್ರೌಢ ಶಾಲಾ ವಿಭಾಗ) ತಳಕಲ್ ಗ್ರಾಮದಲ್ಲಿ ಕರ್ನಾಟಕ ಜ್ಞಾನ ವಿಜ್ಞಾನ ಸಮಿತಿ ಜಿಲ್ಲಾ ಘಟಕ, ಮಹಿಳಾ ಧ್ವನಿ ಸಂಸ್ಥೆ, ಹೈಬ್ರೀಡ್ ನ್ಯೂಸ್, ಶಾಲೆಯ ಸಿ.ವಿ.ರಾಮನ್ ಇಕೋ ಕ್ಲಬ್ ವತಿಯಿಂದ ಪವಾಡಗಳ ರಹಸ್ಯ ಬಯಲು ಹಾಗೂ ವಿಜ್ಞಾನ ರಸಪ್ರಶ್ನೆ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು. ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಕರ್ನಾಟಕ ಜ್ಞಾನ ವಿಜ್ಞಾನ ಸಮಿತಿಯ ಕೊಪ್ಪಳ ಜಿಲ್ಲಾಧ್ಯಕ್ಷರಾದ ಸೋಮಶೇಖರ್ ಹರ್ತಿ ಉದ್ಘಾಟಿಸಿ ಮಾತನಾಡಿದರು. ಪ್ರಾಸ್ತವಿಕವಾಗಿ ಪ್ರಿಯದರ್ಶಿನಿ ಮುಂಡರಗಿಮಠ ಮಾತನಾಡಿದರು.

ಮುಖ್ಯ ಗುರುಗಳಾದ ಶಂಕರಗೌಡ ವಣಗೇರಿ ಮಾತನಾಡಿ, ಗ್ರಾಮೀಣ ಪ್ರದೇಶದ ಮಕ್ಕಳು ಇನ್ನೂ ಆ ಮೌಢ್ಯಾಚರಣೆಗಳಿಂದ ಹೊರಬಂದಿಲ್ಲ ಅವರಿಗೆ ಅರಿವು ಮೂಡಿಸುವುದು ಅಗತ್ಯವಿದೆ. ವಿದ್ಯಾರ್ಥಿಗಳಿಗೆ ವಿಜ್ಞಾನ ವಿಷಯವನ್ನು ಸುಲಭವಾಗಿ ಅರ್ಥ ಮಾಡಿಕೊಳ್ಳಲು ಈ ಕಾರ್ಯಕ್ರಮ ಸಹಕಾರಿಯಾಗಲಿದೆ ಎಂದರು. ಇದೇ ವೇಳೆ ಸಂಪನ್ಮೂಲ ವ್ಯಕ್ತಿಗಳಾದ ಅಮರೇಶ ಕಮ್ಮಾರ ಮತ್ತು ರಘುನಾಥ ಸಂಗಳದ ವಿದ್ಯಾರ್ಥಿಗಳಿಗೆ ವಿಜ್ಞಾನ ರಸ ಪ್ರಶ್ನೆ ಕಾರ್ಯಕ್ರಮ ಹಾಗೂ ಪವಾಡಗಳ ರಹಸ್ಯ ಬಯಲು ಕಾರ್ಯಕ್ರಮದ ಪ್ರಾತ್ಯಕ್ಷಿಕೆ ಪ್ರದರ್ಶನ ಮಾಡುವ ಮೂಲಕ ಮಕ್ಕಳಿಗೆ ವಿಚಾರ ಜ್ಞಾನ ಹೆಚ್ಚಿಸಿ ಅದರ ಹಿಂದಿನ ವಿಜ್ಞಾನ ಮತ್ತು ಕೈ ಚಳಕದ ಬಗ್ಗೆ ಮಕ್ಕಳಿಗೆ ತಿಳಿಸಿದರು.

ಬಿಆರ್‌ಸಿ ಸಂಗಮೇಶ ತೋಟದ, ಸಾಹಿತಿ ಬಿ.ಎನ್.ಹೊರಪೇಟಿ, ಶಿಕ್ಷಕರಾದ ಕಲ್ಪನಾ, ಮಲ್ಲಪ್ಪ ಗಟ್ಟಿ, ಡಾ.ವೀಣಾ ದೇವಿ,ಉಮೇಶ ಕಮತರ,ನಾಗರತ್ನಮ್ಮ, ಸತ್ಯಪ್ಪ ಚಲವಾದಿ, ವಾಸವಿ ಹಾಗೂ ವಿದ್ಯಾರ್ಥಿಗಳು ಉಪಸ್ಥಿತಿ ಇದ್ದರು. ಇದೇ ವೇಳೆ ಮುಖ್ಯ ಅತಿಥಿಗಳನ್ನು ಸನ್ಮಾನಿಸಿ ಗೌರವಿಸಲಾಯಿತು.



ಶ್ರೀಶಾರದಾ ಪಿಯು ಕಾಲೇಜು ವಿದ್ಯಾರ್ಥಿಗಳ ಅತ್ಯುತ್ತಮ ಸಾಧನೆ

ಕೊಪ್ಪಳ: ಶ್ರೀಶಾರದಾ ಪಿಯು ಕಾಲೇಜಿನ ವಿದ್ಯಾರ್ಥಿಗಳು ಜನವರಿಯಲ್ಲಿ ನಡೆದ 'ಜೆಇಇ ಮೇನ್ಸ್ ಮೊದಲ ಸ್ಪಾಟ್‌ನ (ರಾಷ್ಟ್ರೀಯ ಅರ್ಹತಾ ಪರೀಕ್ಷೆ) ಫಲಿತಾಂಶದಲ್ಲಿ ಅತ್ಯುತ್ತಮ ಸಾಧನೆಗೈದು ಜಿಲ್ಲಾ ಮಟ್ಟದಲ್ಲಿ ಕಾಲೇಜಿಗೆ ಕೀರ್ತಿ ತಂದಿದ್ದಾರೆ.

ವಿಕ್ರಮ್ ರಾಥೋಡ್ (98.32) ಅಂಕ ಪಡೆದು ದಾಖಲೆ ನಿರ್ಮಿಸಿದ್ದಾರೆ. ಉಳಿದ ವಿದ್ಯಾರ್ಥಿಗಳಾದ ತೊಹಿದ್ ಆಲಿ, ಮಹಮ್ಮದ್ ಜಾಹಿದ್, ರಶ್ಮಿಶ್ರೀ, ತರುಣ್‌ಕುಮಾರ್, ವೈ.ರಂಗನಾಥ್, ನಾಗೇಶ್, ಬಸವರಾಜ್, ಮನೋಜ್, ಗಗನ್‌ದೀಪ್ ಅತ್ಯುತ್ತಮ ಅಂಕ ಪಡೆದು ಹೊಸ ದಾಖಲೆಯೊಂದಿಗೆ ಜೆಇಇ ಅಡ್ವಾನ್ಸ್ ಪರೀಕ್ಷೆ ಬರೆಯಲು ಕ್ವಾಲಿಫೈ ಆಗುವುದರ ಮೂಲಕ ಐಐಟಿನಲ್ಲಿ ಸೀಟು ಪಡೆಯುವ ನಿರೀಕ್ಷೆಯಲ್ಲಿದ್ದಾರೆ.

ಉತ್ತಮ ಫಲಿತಾಂಶ ತಂದ ಪ್ರತಿಭಾನ್ವಿತ ವಿದ್ಯಾರ್ಥಿಗಳಿಗೆ ಶ್ರೀಶಾರದಾ ಫೌಂಡೇಷನ್ ಟ್ರಸ್ಟ್‌ನ ಆಡಳಿತ ಮಂಡಳಿ, ಪ್ರಾಂಶುಪಾಲರು, ಉಪನ್ಯಾಸ ವರ್ಗ, ಸಿಬ್ಬಂದಿ, ಪೋಷಕರು ಹಾಗೂ ಸಂತಸ ವ್ಯಕ್ತಪಡಿಸಿ, ವಿದ್ಯಾರ್ಥಿಗಳಿಗೆ ಶುಭಾಷಯ ಕೋರಿದ್ದಾರೆ.



ಮಾನವರಾಗಿ ಬದುಕಲು ಪ್ರಯತ್ನಿಸೋಣ: ಬಡಿಗೇರ

ಸಿಂಧನೂರು: ನನ್ನ ಮುಟ್ಟಬೇಡ, ನಿನ್ನ ಮುಟ್ಟಬೇಡ ಎನ್ನುವವರು ಎಲ್ಲಿಂದ ಹುಟ್ಟಿದರು? ಎಂಬ ಪ್ರಶ್ನೆಯನ್ನು ಸರ್ವಜ್ಞನು ಹಾಕುತ್ತಾನೆ. ಆದುದರಿಂದ ಮೊದಲು ನಾವೆಲ್ಲರೂ ಮಾನವರು ಆಗಿರುವುದರಿಂದ ಮಾನವರಾಗಿ ಬದುಕಲು ಪ್ರಯತ್ನಿಸೋಣ ಎಂದು ಪ್ರಗತಿಪರ ಮುಖಂಡರು ಹಾಗೂ ಹೋರಾಟಗಾರರಾದ ಎಚ್.ಎನ್.ಬಡಿಗೇರ ತಿಳಿಸಿದರು.

ತಾಲೂಕು ಆಡಳಿತದ ವತಿಯಿಂದ ತಹಶೀಲ್ದಾರ್ ಕಾರ್ಯಲದಲ್ಲಿ ಹಮ್ಮಿಕೊಂಡಿದ್ದ ತ್ರಿಪದಿ ಬ್ರಹ್ಮ ಸರ್ವಜ್ಞ ಅವರ ಜಯಂತಿಯಲ್ಲಿ ಅವರು ಮಾತನಾಡಿದರು. ಸರ್ವಜ್ಞ ರವರು ಜಾತಿಯತೆಯ, ರಾಜಕೀಯ, ಜ್ಯೋತಿಷ್ಯರ ಬಗ್ಗೆ ಮತ್ತು ಸಮಾಜದಲ್ಲಿನ ಮೌಢ್ಯಗಳನ್ನು ವಿರೋಧಿಸಿ ಹಲವಾರು ವಚನಗಳನ್ನು ರಚಿಸಿ ಹಲವಾರು ವಿಚಾರಗಳನ್ನು ಸಮಾಜಕ್ಕೆ ಕೊಟ್ಟಂತಹ ಮಹಾನ್ ವ್ಯಕ್ತಿಯ ಮೂರ್ತಿಯನ್ನು ಸಿಂಧನೂರಿನಲ್ಲಿ ನಿರ್ಮಾಣ ಮಾಡೋಣ ಎಂಬ ಆಶಯವನ್ನು ವ್ಯಕ್ತಪಡಿಸಿದರು.

ಆರ್‌ಡಿಸಿಸಿ ಬ್ಯಾಂಕ್ ನಿರ್ದೇಶಕ ಸೋಮನಗೌಡ ಬಾದರ್ಲಿ ಮಾತನಾಡಿ, ನಮ್ಮ ಸಮಾಜದಲ್ಲಿರುವ ಜಾತಿಯತೆಯನ್ನು ತೊಲಗಿಸಬೇಕು ಅಂದಾಗ ಮಾತ್ರ ಇಂತಹ ಆಚರಣೆಗಳಿಗೆ ಅರ್ಥ ಬರುತ್ತದೆ ಎಂದು ಹೇಳಿದರು.



ನೀರುಪಾದೆಪ್ಪ ಗುಡಿಹಾಳ ವಕೀಲರು ಮಾತನಾಡಿದರು. ಆರ್‌ಡಿಸಿಸಿ ಬ್ಯಾಂಕ್ ನಿರ್ದೇಶಕ ಪಂಪನಗೌಡ ಬಾದರ್ಲಿ, ಬಿಎಲ್‌ಡಿ ಬ್ಯಾಂಕ್ ಅಧ್ಯಕ್ಷ ಎಂ.ದೊಡ್ಡ ಬಸವರಾಜ, ತಹಶೀಲ್ದಾರ್ ಅರುಣ್‌ಕುಮಾರ್ ದೇಸಾಯಿ, ನಗರಸಭೆ ಪೌರಾಯುಕ್ತ ಪಾಂಡುರಂಗ ಇಟಗಿ, ಜೆಡಿಎಸ್ ಮುಖಂಡ ಅಭಿಷೇಕ್ ನಾಡಗೌಡ, ಖಾಜಿ ಮಲಿಕ್, ಮರಾಠ ಸಮಾಜದ ಜಿಲ್ಲಾಧ್ಯಕ್ಷ ನಾಗೋಜಿ ರಾವ್ ಮರಾಠ, ತಾಲೂಕು ಅಧ್ಯಕ್ಷ ವೆಂಕೋಬ ರಾವ್ ದೇಸಾಯಿ, ಜಿಲ್ಲಾ ಉಪಾಧ್ಯಕ್ಷ ರಾಘವೇಂದ್ರ ರಾವ್ ಪವರ್, ಜಿಲ್ಲಾ ಖಜಾಂಚಿ ಸುಭಾಷ್, ತಾಲೂಕು ಉಪಾಧ್ಯಕ್ಷ ಹನುಮೇಶ್ ಜಾದವ್, ತಹಶೀಲ್ದಾರ್ ಕಾರ್ಯಾಲಯದ ಸಿಬ್ಬಂದಿ ಇದ್ದರು.

ರಂಗಭೂಮಿ ಬದುಕಿನ ಪ್ರತಿರೂಪ: ಅರುಂಧತಿ ನಾಗ್

ಕಲಬುರಗಿ: ರಂಗಭೂಮಿಯ ಚಟುವಟಿಕೆಗಳು ಕೇವಲ ಮುಖ್ಯ ನಗರಗಳಿಗೆ ಸೀಮಿತವಾಗಿರುವ ಪ್ರಸ್ತುತ ಸಂದರ್ಭದಲ್ಲಿ ಜಿಲ್ಲಾಡಳಿತದಿಂದ ಕಲಬುರಗಿ ರಾಷ್ಟ್ರೀಯ ನಾಟಕೋತ್ಸವನ್ನು ಹಮ್ಮಿಕೊಳ್ಳುತ್ತಿರುವುದು ಹಾಗೂ ಅದರೊಂದಿಗೆ ನಮ್ಮ ರಂಗಶಂಕರ ಕೆಲಸ ಮಾಡುತ್ತಿರುವುದು ಸಂತಸದ ವಿಷಯ ಎಂದು ಹಿರಿಯ ರಂಗಕರ್ಮಿ ಅರುಂಧತಿ ನಾಗ್ ಅವರು ಅಭಿಪ್ರಾಯ ವ್ಯಕ್ತಪಡಿಸಿದರು.

ಕಲಬುರಗಿ ಜಿಲ್ಲಾಡಳಿತ, ಕಲಬುರಗಿ ನೆಕ್ಸ್ಟ್ ಫೌಂಡೇಷನ್ ಮತ್ತು ರಂಗಶಂಕರ ಸಹಯೋಗದಲ್ಲಿ ಫೆ.21ರಿಂದ 28ರವರೆಗೆ ಹಮ್ಮಿಕೊಳ್ಳಲಾಗಿರುವ ಕಲಬುರಗಿ ನಾಟಕೋತ್ಸವ–26 ರ ಪೂರ್ವ ತಯಾರಿ ಕುರಿತು ಹಮ್ಮಿಕೊಳ್ಳಲಾಗಿದ್ದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ರಂಗಭೂಮಿ ಬದುಕಿನ ಪ್ರತಿರೂಪ, ನಾಟಕ ನೋಡುವುದರಿಂದ ಮನುಷ್ಯರ ಯೋಚಿಸುವ ಲಹರಿ ಬದಲಾಗುತ್ತದೆ ಎಂದು ಹೇಳಿದರು.

ಜಿಲ್ಲಾಧಿಕಾರಿ ಬಿ. ಫೌಜಿಯಾ ತರನ್ನುಮ್ ಮಾತನಾಡಿ, ಕಲಬುರಗಿಯ ಸರ್ವತೋಮುಖ ಅಭಿವೃದ್ಧಿಗಾಗಿ ವಿಭಿನ್ನ ಯೋಜನೆ ಹಮ್ಮಿಕೊಳ್ಳಲಾಗಿದ್ದು,ಸಾಂಸ್ಕೃತಿಕ ವಲಯದಲ್ಲಿ ಕಲಬುರಗಿ ಜನರನ್ನು ಪ್ರೋತ್ಸಾಹಿಸುವ ಉದ್ದೇಶದಿಂದ ಈ ನಾಟಕೋತ್ಸವವನ್ನು ಹಮ್ಮಿಕೊಳ್ಳಲಾಗಿದ್ದು, ಮುಂದೆ ಚಲನಚಿತ್ರೋತ್ಸವ ಹಾಗೂ ಸಾಹಿತ್ಯೋತ್ಸವಗಳನ್ನು ಹಮ್ಮಿಕೊಳ್ಳಲು ಯೋಜಿಸಲಾಗಿದೆ ಎಂದರು.

ಪ್ರತಿದಿನ ಸಂಜೆ 7 ಗಂಟೆಗೆ ಎಸ್.ಎಂಪಂಡಿತ್ ರಂಗಮಂದಿರದಲ್ಲಿ ನಾಟಕ ಪ್ರದರ್ಶನ ಆರಂಭಗೊಳ್ಳುವ



ಮುನ್ನಾ ಬೀದಿನಾಟಕ, ಜಾನಪದ ಹಾಡುಗಳು ಸೇರಿದಂತೆ ವಿವಿಧ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ.

ಡಾ.ಎಸ್.ಎಂ.ಪಂಡಿತ್ ರಂಗಮಂದಿರದಲ್ಲಿ ನಡೆಯುವ ನಾಟಕಗಳಿಗೆ 8 ವರ್ಷದ ಒಳಗಿನ ಮಕ್ಕಳಿಗೆ ಅವಕಾಶವಿಲ್ಲ, ಒಬ್ಬರಿಗೆ ಒಂದು ನಾಟಕಕ್ಕೆ ನೂರು ರೂಪಾಯಿ ಟಿಕೆಟ್ ನಿಗದಿಪಡಿಸಲಾಗಿದ್ದು, ಟಿಕೆಟ್ ಆನ್ ಲೈನ್‌ನಲ್ಲಿ ಸಹ ಖರೀದಿಸಬಹುದಾಗಿದೆ ಹಾಗೂ ಸ್ಥಳದಲ್ಲಿ ಸಹ ಅವಕಾಶ ಕಲ್ಪಿಸಲಾಗಿದೆ. ಮಕ್ಕಳಿಗಾಗಿ ಕಲಬುರಗಿ ರಂಗಾಯಣದಲ್ಲಿ ಬೆಳಿಗ್ಗೆ 11 ಗಂಟೆಗೆ ವಿಶೇಷನಾಟಕಗಳನ್ನು ಹಮ್ಮಿಕೊಳ್ಳಲಾಗಿದೆ. ಜಿಲ್ಲಾ ಕನ್ನಡ ಸಾಹಿತ್ಯ ಭವನದಲ್ಲಿ ರಂಗಭೂಮಿಗೆ ಸಂಬಂಧಿಸಿದಂತೆ ಸಂವಾದಗಳನ್ನು ಪ್ರತಿದಿನ ಬೆಳಿಗ್ಗೆ 11 ಕ್ಕೆ ಆರಂಭವಾಗಲಿವೆ.

ರಂಗಶಂಕರದ ಹಿರಿಯ ಸದಸ್ಯ ಹಾಗೂ ರಂಗಕರ್ಮಿ ಸುರೇಂದ್ರನಾಥ ಮಾತನಾಡಿದರು. ಅಪರ ಜಿಲ್ಲಾಧಿಕಾರಿ ರಾಯಪ್ಪ ಹುಣಸಗಿ, ಸಹಾಯಕ ಆಯುಕ್ತ ಸಾಹಿತ್ಯ,ಕಲಬುರಗಿ ರಂಗಾಯಣದ ನಿರ್ದೇಶಕಿ ಸುಜಾತ ಜಂಗಮಶೆಟ್ಟಿ ಉಪಸ್ಥಿತರಿದ್ದರು.

ಟ್ರಾಫಿಕ್ ಶಿಸ್ತಿಗೆ ಕ್ರಮ: ಸಿಪಿಐ

ಕುಷ್ಟಗಿ: ಅಧಿಕಾರ ಸ್ವೀಕರಿಸಿದ ದಿನವೇ ಕಾರ್ಯಚಟುವಟಿಕೆಗೆ ಇಳಿದ ಸಿಪಿಐ ವಿಶ್ವನಾಥ ಹಿರೇಗೌಡ್ರು, ಪಟ್ಟಣದಲ್ಲಿ ಟ್ರಾಫಿಕ್ ಸುವ್ಯವಸ್ಥೆ ಕಾಪಾಡುವತ್ತ ಕಠಿಣ ಕ್ರಮ ಕೈಗೊಂಡರು. ಅಧಿಕಾರ ಸ್ವೀಕರಿಸಿದ ತಕ್ಷಣವೇ ಪಿಎಸ್‌ಐ ಹನಮಂತಪ್ಪ ತಳವಾರ, ಎಎಸ್‌ಐ ಹಾಗೂ ಪೊಲೀಸ್ ಸಿಬ್ಬಂದಿಯೊಂದಿಗೆ ಪಟ್ಟಣದ ಪ್ರಮುಖ ರಸ್ತೆಗಳಿಗೆ ಭೇಟಿ ನೀಡಿದರು.

ರಸ್ತೆ ಬದಿಯ ಅಂಗಡಿಗಳು ಹಾಗೂ ಬೀದಿ ವ್ಯಾಪಾರಿಗಳಿಂದ ಉಂಟಾಗುತ್ತಿದ್ದ ಟ್ರಾಫಿಕ್ ಅಡಚಣೆ ಕುರಿತು ಪರಿಶೀಲನೆ ನಡೆಸಿ, ಅನಧಿಕೃತ ವ್ಯಾಪಾರಕ್ಕೆ ತಡೆ ಹಾಕಿ, ವ್ಯಾಪಾರಸ್ಥರಿಗೆ ಕಾನೂನು ನಿಯಮಗಳ ಅರಿವು ಮೂಡಿಸಿದರು. ಪಾದಚಾರಿಗಳು ಹಾಗೂ ವಾಹನ ಸವಾರರಿಗೆ ತೊಂದರೆ ಆಗದಂತೆ ಟ್ರಾಫಿಕ್ ಕ್ಲಿಯರ್ ಮಾಡುವಲ್ಲಿ ಯಶಸ್ವಿಯಾದರು. ಸಾರ್ವಜನಿಕರೊಂದಿಗೆ ಮಾತನಾಡಿದ ವಿಶ್ವನಾಥ ಹಿರೇಗೌಡ್ರು, 'ಸರ್ಕಾರದ ಕೆಲಸವನ್ನು ಪ್ರಮಾಣಿಕತೆ ಹಾಗೂ ನಿಷ್ಠೆಯಿಂದ ನಿರ್ವಹಿಸುವುದು ನಮ್ಮ ಮೊದಲ ಕರ್ತವ್ಯ. ಇಲಾಖೆಯ ಎಲ್ಲ ಸಿಬ್ಬಂದಿಯೊಂದಿಗೆ ಸಮನ್ವಯ ಸಾಧಿಸಿ ಸಾರ್ವಜನಿಕರ ಹಿತವನ್ನು ಕಾಪಾಡುವ ಕಾರ್ಯ ಮುಂದುವರಿಸುತ್ತೇವೆ ಎಂದು ಹೇಳಿದರು. ಯಾವುದೇ ಕಾರ್ಯ ಯಶಸ್ವಿಯಾಗಲು ಸಾರ್ವಜನಿಕರ ಸಹಕಾರ ಅಗತ್ಯವಿದ್ದು, ಕಾನೂನು ಮತ್ತು ಸುವ್ಯವಸ್ಥೆ ಕಾಪಾಡುವಲ್ಲಿ ನಾಗರಿಕರು ಪೊಲೀಸರೊಂದಿಗೆ ಕೈಜೋಡಿಸಬೇಕು ಎಂದು ಮನವಿ ಮಾಡಿದರು.



ಶಿಕ್ಷಕರ ನೇಮಿಸುವಂತೆ ಜೆಡಿಎಸ್ ಆಗ್ರಹ

ಯಲಬುರ್ಗಾ: ಕ್ಷೇತ್ರದ ಶಾಸಕ ಬಸವರಾಜ ರಾಯರಡ್ಡಿಯವರುಕಲ್ಯಾಣಕರ್ನಾಟಕಪ್ರದೇಶಾಭಿವೃದ್ಧಿ ಯೋಜನೆಯಡಿ ಉಭಯ ತಾಲೂಕಿಗೆ ಕೊಟ್ಯಾಂತರ ಅನುದಾನ ತಂದು 16 ಪ್ರಾಥಮಿಕ ಶಾಲೆಗಳನ್ನು ಮೇಲ್ದರ್ಜೆಗೆ ಸೇರಿಸಿ ಪ್ರೌಢ ಶಾಲೆಗಳನ್ನಾಗಿ ಮಂಜೂರು ಮಾಡಿಸಿದ್ದಾರೆ ವಿನಃ ಶಿಕ್ಷಕರಿಲ್ಲದೆ ಮಕ್ಕಳ ಶಿಕ್ಷಣಕ್ಕೆ ತೀವ್ರ ತೊಂದರೆಯಾಗಿದೆ. ಇದನ್ನು ನೀಗಿಸುವವರ್‍ಯಾರು ಎಂದು ಜೆಡಿಎಸ್ ಜಿಲ್ಲಾ ವಕ್ತಾರ ಮಲ್ಲನಗೌಡ ಕೋನನಗೌಡ ಆರೋಪಿಸಿದರು.

ಪಟ್ಟಣದ ಸರ್ಕ್ಯೂಟ್ ಹೌಸ್‌ನಲ್ಲಿ ಶುಕ್ರವಾರ ಪತ್ರಿಕಾಗೋಷ್ಠಿ ನಡೆಸಿ ಮಾತನಾಡಿದ ಅವರು ಕೇವಲ ಶಾಲೆಗಳನ್ನು ಮಂಜೂರು ಮಾಡಿಸಿದರೆ ಸಾಲದು ಅವುಗಳಿಗೆ ಪೂರ್ಣ ಪ್ರಮಾಣದ ಶಿಕ್ಷಕರನ್ನು ನೇಮಿಸಿಲ್ಲ, ಹೀಗಾದರೆ ಮಕ್ಕಳ ವಿದ್ಯಾಭ್ಯಾಸಕ್ಕೆ ಹಿನ್ನಡೆಯಾಗುತ್ತಿದೆ. ಇನ್ನೂ ಬಹುತೇಕ ಶಾಲೆಗಳಲ್ಲಿ ಖಾಯಮಾತಿ ಶಿಕ್ಷಕರಿಲ್ಲ, ಸುಮಾರು 66 ಅತಿಥಿ ಶಿಕ್ಷಕರಿದ್ದಾರೆ ಅವರಿಗೆ ಒಂಬತ್ತು ತಿಂಗಳಾದರೂ ಸರ್ಕಾರದಿಂದ ವೇತನ ಪಾವತಿಯಾಗಿಲ್ಲ ಅವರು ಕುಟುಂಬ ನಿರ್ವಹಣೆ ಮಾಡುವುದಾದರೂ ಹೇಗೆ ? ಶಾಸಕರು ಇದರ ಬಗ್ಗೆ ಯಾಕೆ ಗಮನಹರಿಸುತ್ತಿಲ್ಲ ಎಂದು ಪ್ರಶ್ನಿಸಿದರು.

ಈಗಾಗಲೇ 16 ಹೊಸ ಸರ್ಕಾರಿ ಪ್ರೌಢ ಶಾಲೆಗಳಾದ ಹಿರೇವಡ್ರಕಲ್, ಹಿರೇಅರಳಹಳ್ಳಿ, ಹಿರೇವಂಕಲಕುಂಟಾ, ಯಡ್ಡೋಣಿ, ಲಿಂಗನಬಂಡಿ, ಹುಲೇಗುಡ್ಡ, ಮುಧೋಳ,




ಯಲಬುರ್ಗಾ, ದಮ್ಮೂರ, ಚಿಕ್ಕೊಪ–ಹೊಸಳ್ಳಿ, ಚಿಕ್ಕೇನಕೊಪ್ಪ, ವೀರಾಪೂರ, ಕೋಮಲಾಪೂರ, ದ್ಯಾಂಪೂರ, ಸೋಂಪೂರ, ಮಂಗಳೂರ ಈ ಗ್ರಾಮಗಳಲ್ಲಿ ಪ್ರೌಢಶಾಲೆಗಳನ್ನು ಮಂಜೂರು ಮಾಡಿಸಿ ಪ್ರಾರಂಭಿಸಲಾಗಿದ್ದು ಇವುಗಳ ಕಟ್ಟಡ ನಿರ್ಮಾಣಕ್ಕೆ ಜನರು ಅಗತ್ಯ ಭೂಮಿ ನೀಡಿದರೆ ಅಂತಹ ರೈತರಿಗೆ ಎಕರೆಗೆ 8ರಿಂದ 9 ಲಕ್ಷ ರೂ,ಗಳ ನೀಡಲಾಗುವುದು ಜತೆಗೆ ಜಮೀನು ನೀಡಿದ ರೈತರಿಗೆ ಶಾಸಕರು ಬಹುಮಾನ ರೀತಿಯಲ್ಲಿ 1ಲಕ್ಷ ರೂ. ಗಿಫ್ಟ್‌ನ್ನು ನೀಡತ್ತೇನೆಂದು ಹೇಳಿಕೆ ನೀಡಿರುವುದು ಹಾಸ್ಯಸ್ಪದವಾಗಿದೆ.

ಜೆಡಿಎಸ್ ತಾಲೂಕಾಧ್ಯಕ್ಷ ಬಸವರಾಜ ಗುಳಗುಳಿ ಮಾತನಾಡಿ, ಕ್ಷೇತ್ರದಲ್ಲಿ ಯಾವುದೇ ನೀರಾವರಿ ಮೂಲಗಳಿಲ್ಲ,ಸಕಾಲಕ್ಕೆ ಮಳೆಯಿಲ್ಲದೆ ಒಳಬೇಸಾಯದಿಂದ ಪ್ರತಿ ವರ್ಷ ರೈತರು ತೀವ್ರ ಸಂಕಷ್ಟ ಅನುಭವಿಸುತ್ತಿದ್ದಾರೆ ಯಾವ ಬೆಳೆಗಳ ನಷ್ಟಕ್ಕೂ ಸರ್ಕಾರ ಇದುವರೆಗೂ ಶಾಸಕರು ಕ್ಷೇತ್ರದ ರೈತರಿಗೆ ಪರಿಹಾರ ಕೊಡಿಸಿಲ್ಲ ಎಂದು ಗುಡುಗಿದರು.

ಪಕ್ಷದ ಮುಖಂಡರಾದ ಶರಣಪ್ಪ ರಾಂಪೂರ, ಪಿಡ್ಡನಗೌಡ ಪಾಟೀಲ, ದುರಗಪ್ಪ ಕಲ್ಲೂರ ಇದ್ದರು.

ಕಿರುಸುದ್ದಿ

ವರ್ಧಂತ್ಯುತ್ಸವ, ವಿಶೇಷ ಪೂಜೆ



ಬಳ್ಳಾರಿ: ನಗರದ ಸತ್ಯನಾರಾಯಣ ಪೇಟೆ ಶ್ರೀರಾಘವೇಂದ್ರ ಸ್ವಾಮಿ ಶ್ರೀಮಠದಲ್ಲಿ, ಶ್ರೀರಾಘವೇಂದ್ರ ಗುರುಸಾರ್ವಭೌಮರ 405ನೇ ಪಟ್ಟಾಭಿಷೇಕ ಮಹೋತ್ಸವ, 431ನೇ ವರ್ಧಂತ್ಯುತ್ಸವ ನಿಮಿತ್ತ ಗುರುವಾರ ವಿವಿಧ ಪೂಜೆಗಳು ವಿಜೃಂಭಣೆಯಿಂದ ನೆರವೇರಿದವು. ಬೆಳಿಗ್ಗೆ ಶ್ರೀಮಠದ ಆಡಳಿತಾಧಿಕಾರಿಗಳು, ಪಂ.ಪ್ರಸನ್ನಾಚಾರ ಅವರ ನೇತೃತ್ವದಲ್ಲಿ ಶ್ರೀಗುರುರಾಯರಿಗೆ ವಿಶೇಷ ಪೂಜೆ, ಪಂಚಾಮೃತಾಭಿಷೇಕ, ವಿಶೇಷ ಅಲಂಕಾರ, ನೈವೇದ್ಯ, ಮಹಾಮಂಗಳಾರತಿ ಸೇರಿದಂತೆ ವಿವಿಧ ಪೂಜೆಗಳು ನಡೆದವು. ಸಂಜೆ ಶ್ರೀಮಠ ಹಾಗೂ ಮಧ್ವಸಂಘದ ಸಹಯೋಗದೊಂದಿಗೆ ವಿವಿಧ ಪಂಡಿತರಿಂದ ಉಪನ್ಯಾಸ ನಡೆಯಿತು ಹಾಗೂ ಶ್ರೀರಾಘವೇಂದ್ರ ವಿಜಯ ಪ್ರವಚನ ಕಾರ್ಯಕ್ರಮಗಳು ಸೇರಿದಂತೆ ವಿವಿಧ ಪೂಜೆಗಳು ವಿಜೃಂಭಣೆಯಿಂದ ನಡೆದವು. ನಗರ ಸೇರಿದಂತೆ ನಾನಾ ಕಡೆಯಿಂದ ಆಗಮಿಸಿದ್ದ ಸಾವಿರಾರು ಭಕ್ತರು ಆಗಮಿಸಿ, ವಿಶೇಷ ಪೂಜೆ, ಅರ್ಚನೆ ಸಲ್ಲಿಸಿ, ಭಕ್ತಿ ಸಮರ್ಪಿಸಿದರು.

ಅದ್ಧೂರಿಯಾಗಿ ನಡೆದ ಕಲ್ಲೇಶ್ವರ ರಥೋತ್ಸವ

ಹಗರಿಬೊಮ್ಮನಹಳ್ಳಿ: ಪಟ್ಟಣದ ಹಳೇ ಊರಿನ ಶ್ರೀಕಲ್ಲೇಶ್ವರ ಸ್ವಾಮಿ ರಥೋತ್ಸವ ವಿಜೃಂಭಣೆಯಿಂದ ಜರುಗಿತು. ಶುಕ್ರವಾರ ರಥೋತ್ಸವದ ಅಂಗವಾಗಿ ದೇವಸ್ಥಾನದಲ್ಲಿ ಬೆಳಿಗ್ಗೆಯಿಂದ ವಿಶೇಷ ಪೂಜಾ ಕೈಂಕರ್ಯಗಳು ಜರುಗಿದವು. ಸಂಜೆ ರಥೋತ್ಸವಕ್ಕೆ ಮುನ್ನ ಪಟಾಕ್ಷಿ ಹರಾಜಿನಲ್ಲಿ ಎಚ್.ಎಂ.ಗಂಗಾಧರ 101101 ರೂ. ಗಳಿಗೆ ಪಡೆದರು. ಬಳಿಕ ಸಮಾಳ ನಂದಿಕೋಲು ವಿವಿಧ ವಾದ್ಯ ಮೇಳಗಳೊಂದಿಗೆ ಸಹಸ್ರಾರು ಭಕ್ತರ ಜಯಘೋಷಗಳ ಮಧ್ಯೆ ಶ್ರೀಕಲ್ಲೇಶ್ವರ ಸ್ವಾಮಿ ರಥೋತ್ಸವ ಅದ್ಧೂರಿಯಾಗಿ ನಡೆಯಿತು. ರಥೋತ್ಸವಕ್ಕೆ ಸಾವಿರಾರು ಭಕ್ತರು ಬಾಳೆಹಣ್ಣು ಎಸೆಯುವ ಮೂಲಕ ಭಕ್ತಿ ಸಮರ್ಪಿಸಿದರು.



ತಾಲೂಕು ಅಧ್ಯಕ್ಷರಾಗಿ ಮಲ್ಲನಗೌಡ ಪಾಟೀಲ ಆಯ್ಕೆ

ಯಲಬುರ್ಗಾ: ಕೊಪ್ಪಳ ಜಿಲ್ಲಾ ನಾಗರಿಕ ವೇದಿಕೆಯ ತಾಲೂಕ ಅಧ್ಯಕ್ಷರಾಗಿ ಅಪರ ಸರಕಾರಿ ವಕೀಲರಾದ ಮಲ್ಲನಗೌಡ ಪಾಟೀಲ ಹಾಗೂ ಪ್ರಧಾನ ಕಾರ್ಯದರ್ಶಿಯಾಗಿ ಪತ್ರಕರ್ತರಾದ ರವಿಕುಮಾರ ಛಲವಾದಿ ಅವರನ್ನು ನೇಮಕ ಮಾಡಿ ಸಂಸ್ಥಾಪಕ ರಾಜ್ಯಾಧ್ಯಕ್ಷರಾದ ಮಹೇಶಬಾಬು ಸುರ್ವೆ ನೇಮಕ ಮಾಡಿ ಆದೇಶ ಹೊರಡಿಸಿದ್ದಾರೆ. ಜಿಲ್ಲೆಯಾದ್ಯಂತ ನಾಗರಿಕ ವೇದಿಕೆಯ ಸಂಘಟನೆ ಮಾಡುವ ನಿಟ್ಟಿನಲ್ಲಿ ನೇಮಕ ಮಾಡಲಾಗಿದೆ ಎಂದರು.





ಬಳಿಕ ಪತ್ರಿಕೆಯೊಂದಿಗೆ ಮಾತನಾಡಿದ ನೂತನ ಅಧ್ಯಕ್ಷರಾದ ಮಲ್ಲನಗೌಡ್ರ ಪಾಟೀಲ ರಾಜ್ಯಾದ್ಯಂತ ಕನ್ನಡ ನಾಡು ನುಡಿಗಾಗಿ ಸದಾ ಪ್ರತಿಯೊಂದು ಕನ್ನಡ ಕಾರ್ಯಕ್ರಮದಲ್ಲಿ ತನ್ನದೆ ಆದಂತಹ ಕೊಡುಗೆ ನೀಡುತ್ತಿರುವ ಹಾಗೂ ವಿಶೇಷವಾಗಿ ಕೊಪ್ಪಳ ಜಿಲ್ಲಾ ಉತ್ಸವ ಇಟಗಿ ಉತ್ಸವ ಸೇರಿದಂತೆ ಅನೇಕ ಮಹನೀಯರ ಬಗ್ಗೆ ಸದಾ ಒಂದಿಲ್ಲೊಂದು ವಿಶೇಷ ವಿಭಿನ್ನವಾದ ಕಾರ್ಯಕ್ರಮಗಳ ಮೂಲಕ ಮನೆ ಮಾತಾಗಿರುವ ನಮ್ಮ ಕೊಪ್ಪಳ ನಾಗರಿಕ ವೇದಿಕೆಯನ್ನು ಅತ್ಯಂತ ಜನಪ್ರಿಯ ಹಾಗೂ ಪ್ರತಿಯೊಬ್ಬ ಕನ್ನಡದ ಮನಸ್ಸುಗಳು ಒಪ್ಪುವಂತಹ ಕಾರ್ಯಗಳನ್ನು ತಾಲೂಕಿನಲ್ಲಿ ನಿರಂತರವಾಗಿ ಇನ್ನೂ ಮುಂದೆ ಮಾಡಲಾಗುವುದು ಎಂದು ಹೇಳಿದರು.

ಚುಟುಕು ಸಾಹಿತ್ಯ ಪರಿಷತ್ ಅಧ್ಯಕ್ಷ ಶಿವಮೂರ್ತಿ ಇಟಗಿ, ಪತ್ರಕರ್ತರಾದ ಉಮಾಶಂಕರ್ ಹಿರೇಮಠ, ಭೀಮಣ್ಣ ಹವಳಿ, ಶರಣಪ್ಪ ಪಾಟೀಲ, ಶಿವಕುಮಾರ ಮ್ಯಾಗೇರಿ, ವಿರೇಶ ಸ್ಟಾಂಪಿನ್ ಸೇರಿದಂತೆ ಅನೇಕ ಮುಖಂಡರು ಇದ್ದರು.



ಸಿರುಗುಪ್ಪ: ಬೆಂಗಳೂರಿನಲ್ಲಿ 2024-25ನೇ ಸಾಲಿನ ಅಗ್ನಿಶಾಮಕ ಸೇವಾ ಸಪ್ತಾಹ ನಿಮಿತ್ತ ಇತ್ತೀಚೆಗೆ ಅಗ್ನಿಶಾಮಕ ಚಾಲಕ ತಂತ್ರಜ್ಞ ವಿಭಾಗದಲ್ಲಿ ಉತ್ತಮ ಸಾಧನೆಗಾಗಿ 'ಕೇಂದ್ರೀಯ ಗೃಹ ಮಂತ್ರಿ ದಕ್ಷ ಪದಕ'ವನ್ನು ಸಿರುಗುಪ್ಪ ಅಗ್ನಿ ಶಾಮಕ ಸಿಬ್ಬಂದಿ ಮಂಜುನಾಥ್ ಕೆ. ಅವರಿಗೆ ಬೆಂಗಳೂರಿನ ಅಗ್ನಿಶಾಮಕ ಮತ್ತು ತುರ್ತು ಸೇವೆಗಳ ಪೊಲೀಸ್ ಮಹಾ ನಿರ್ದೇಶಕ ಪ್ರಶಾಂತ್ ಕುಮಾರ್ ಠಾಕೂರ್ ಅವರು ನೀಡಿ ಗೌರವಿಸಿದರು.

ಸರ್ವಜ್ಞ ಜಯಂತಿ ಆಚರಣೆ

ಕೊಟ್ಟೂರು: ಕೊಟ್ಟೂರು ತಾಲೂಕು ಕಚೇರಿಯಲ್ಲಿ ಶುಕ್ರವಾರ ಕವಿ ಸರ್ವಜ್ಞ ಜಯಂತಿಯನ್ನು ಆಚರಿಸಲಾಯಿತು. ತಹಶೀಲ್ದಾರ್ ಅಮರೇಶ್ ಜಿ.ಕೆ. ಮಾತನಾಡಿ, ಕವಿ ಸರ್ವಜ್ಞ ಕುಂಬಾರ ಜನಾಂಗಕ್ಕೆ ಸೇರಿದವನು ಎನಿಸಿದರೂ ವರಕವಿ ಬೇಂದ್ರೆಯವರು ಹೇಳಿದಂತೆ 'ಅವನ ಜಾತಿ ಮಾನವಜಾತಿ, ಅವನ ಮತ ದೇವಮತ, ಅವನ ಕಾಲ ಸರ್ವಕಾಲ' ಎನ್ನುವಂತೆ ಒಂದು ಜಾತಿಗೆ ಮೀಸಲಿಲ್ಲ, ಆಡು ಮುಟ್ಟದ ಸೊಪ್ಪಿಲ್ಲ, ಸರ್ವಜ್ಞ ಬಳಸದ ವಸ್ತುವಿಲ್ಲ. ಸರ್ವರ ಹೃದಯವನ್ನು ಅರಿತವನಾಗಿದ್ದು ಸಮಾಜೋದ್ಧಾರಕ್ಕಾಗಿ ಸಂಚಾರ ಕೈಗೊಂಡ ಅಪ್ರತಿಮ ಜಂಗಮ. ಕಂಡದ್ದನ್ನು ಕಂಡಂತೆ ನೇರವಾಗಿ ನುಡಿಯುತ್ತಿದ್ದ. ಹೀಗೆ ಸರ್ವಜ್ಞನು 3 ಸಾಲಿನ ತಮ್ಮ ತ್ರಿಪದಿಯಲ್ಲಿ ದಾರಿ ತಪ್ಪುತ್ತಿದ್ದ ಸಮಾಜವನ್ನು ಸರಿದಾರಿಗೆ ತರಲು ಪ್ರಯತ್ನಿಸಿದ್ದಾರೆ. ಅವರ ಅರಿವಿನ ಬೆಳಕಲ್ಲಿ ನಾವೆಲ್ಲಾ ನಡೆಯಬೇಕಿದೆ ಎಂದರು.

ತಾಲೂಕು ಕುಂಬಾರ ಸಮಾಜದ ಅಧ್ಯಕ್ಷ ಕೊಟ್ರೇಶಪ್ಪ ಎಚ್.ಜಿ., ಮುಖಂಡರಾದ ವಿರೇಶ ಸಿ., ನಾಗರಾಜ ಕೆ., ಕೊಟ್ರೇಶ್ ಸಿ., ಮೂಗಣ್ಣ ಸಿ., ಶಾಂತಲಿಂಗಪ್ಪ ಸಿ., ಕಂದಾಯ ನಿರೀಕ್ಷಕ ಡಿ.ಶಿವಕುಮಾರ್, ಗ್ರಾ.ಆ.ಅ ಶರಣಪ್ಪ, ರಮೇಶ, ಸಿದ್ದೇಶ, ಹರೀಶ್, ಭೂಮಾಪನ ಸೂಪರ್‌ವೈಜರ್ ಬಸವರಾಜ, ಭೂಮಾಪಕ ಭರಮಣ್ಣ, ಹಾಗೂ ಇತರರು ಇದ್ದರು. ಸಿ.ಮ.ಗುರುಬಸವರಾಜ ಸ್ವಾಗತಿಸಿ ನಿರೂಪಿಸಿದರು. ಹೆಚ್ಚಿನ ಅಂಕಗಳಿಸಿ ಸಾಧನೆ ಮಾಡಿದ ಕುಂಬಾರ ಸಮುದಾಯದ ವಿದ್ಯಾರ್ಥಿಗಳನ್ನು ಹಾಗೂ ಮುಖಂಡರನ್ನು ಸನ್ಮಾನಿಸಿ ಗೌರವಿಸಲಾಯಿತು.



ಕೊಟ್ಟೂರು: ಕೊಟ್ಟೂರು ತಾಲೂಕು ಕಚೇರಿಯಲ್ಲಿ ಶುಕ್ರವಾರ ಕವಿ ಸರ್ವಜ್ಞ ಜಯಂತಿಯನ್ನು ಆಚರಿಸಲಾಯಿತು. ತಾಲೂಕು ಕುಂಬಾರ ಸಮಾಜದ ಅಧ್ಯಕ್ಷ ಕೊಟ್ರೇಶಪ್ಪ ಎಚ್.ಜಿ., ಮುಖಂಡರಾದ ವಿರೇಶ ಸಿ., ನಾಗರಾಜ ಕೆ., ಕೊಟ್ರೇಶ್ ಸಿ., ಮೂಗಣ್ಣ ಸಿ., ಶಾಂತಲಿಂಗಪ್ಪ ಸಿ., ಕಂದಾಯ ನಿರೀಕ್ಷಕ ಡಿ.ಶಿವಕುಮಾರ್, ಗ್ರಾ.ಆ.ಅ ಶರಣಪ್ಪ, ರಮೇಶ, ಸಿದ್ದೇಶ, ಹರೀಶ್, ಭೂಮಾಪನ ಸೂಪರ್‌ವೈಜರ್ ಬಸವರಾಜ, ಭೂಮಾಪಕ ಭರಮಣ್ಣ, ಹಾಗೂ ಇತರರು ಇದ್ದರು.

ತಾಯಣ್ಣಗೆ ಅಭಿನಂದನಾ ಸಮಾರಂಭ | ನೇಮಿರಾಜ್ ನಾಯ್ಕ್ ವಾಗ್ದಾಳಿ

ಬಡವರ ರಕ್ತ ಹೀರುವ ಸರ್ಕಾರ

ಬಳ್ಳಾರಿ: ರಾಜ್ಯ ಕಾಂಗ್ರೆಸ್ ಸರ್ಕಾರ ಬುರುಡೆ ಬಿಡುವ ಸರ್ಕಾರ, ಬಡವರ ರಕ್ತ ಹೀರುವ ಸರ್ಕಾರವಿದು, 6 ತಿಂಗಳ ಗೃಹಲಕ್ಷ್ಮೀ ಹಣ, 15 ಸಾವಿರ ಕೋಟಿ ಕೊಳ್ಳೆ ಹೊಡೆದ ಸರ್ಕಾರವಿದು, ಬಡವರ ದುಡ್ಡು ಕೊಳ್ಳೆ ಹೊಡೆದ ಸರ್ಕಾರ, ಇಂತಹ ಕೆಟ್ಟ ಸರ್ಕಾರವನ್ನು ಎಂದು ನೋಡಿಯೇ ಇಲ್ಲ, ಕೈನಾಯಕರು ಮನೆ ಬಾಗಿಲಿಗೆ ಬಂದಾಗ ಇದನ್ನು ಪ್ರಶ್ನಿಸಿ ಎಂದು ಹಗರಿಬೊಮ್ಮನಹಳ್ಳಿ ಕ್ಷೇತ್ರದ ಶಾಸಕ ನೇಮಿರಾಜ ನಾಯ್ಕ್ ಹೇಳಿದರು.



ಕಳೆದ ಸುಮಾರು ವರ್ಷಗಳಿಂದ ಪಕ್ಷದ ಅಭಿವೃದ್ಧಿಗಾಗಿ ಪ್ರಾಮಾಣಿಕವಾಗಿ ಶ್ರಮಿಸುತ್ತಿರುವೆ, ನನ್ನ ಕೊನೆ ಉಸಿರು ಇರೋವರೆಗೂ ಪಕ್ಷದಲ್ಲಿರುವೆ, ಪಕ್ಷ ನನ್ನ ತಾಯಿ ಇದ್ದಂತೆ. ವರಿಷ್ಠರು ನನ್ನನ್ನು ಗುರುತಿಸಿ 3ನೇ ಬಾರಿ ಜೆಡಿಎಸ್ ಜಿಲ್ಲಾಧ್ಯಕ್ಷರನ್ನಾಗಿ ನೇಮಕ ಮಾಡಿದ್ದಾರೆ, ನಮ್ಮ ವರಿಷ್ಠರಿಗೆ, ನಮ್ಮ ಎಲ್ಲ ಗಣ್ಯರಿಗೂ ಅಭಿನಂದನೆಗಳನ್ನು ಸಲ್ಲಿಸುವೆ. ಯುಗಾದಿ ಹಬ್ಬದ ಬಳಿಕ ಗ್ರಾಮೀಣ ಕ್ಷೇತ್ರದಿಂದಲೇ ಪಕ್ಷವನ್ನು ಮತ್ತಷ್ಟು ತಳಮಟ್ಟದಿಂದ ಸಂಘಟಿಸಲು ಒತ್ತು ನೀಡುವೆ.

■ ಮೀನಳ್ಳಿ ತಾಯಣ್ಣ, ಜೆಡಿಎಸ್ ನೂತನ ಜಿಲ್ಲಾಧ್ಯಕ್ಷ

ನಗರದ ಜೆಡಿಎಸ್ ಜಿಲ್ಲಾ ಕಚೇರಿ ಆವರಣದಲ್ಲಿ ಜನತಾದಳ (ಜಾತ್ಯತೀತ) ಪಕ್ಷದ ಜಿಲ್ಲಾ ಘಟಕದ ಅಧ್ಯಕ್ಷರಾಗಿ 3ನೇ ಬಾರಿ ನೇಮಕಗೊಂಡ ಮೀನಳ್ಳಿ ತಾಯಣ್ಣ ಅವರಿಗೆ ಅಭಿನಂದನೆ, ಪದಗ್ರಹಣ ಸಮಾರಂಭಕ್ಕೆ ಚಾಲನೆ ನೀಡಿ ಮಾತನಾಡಿದರು.

5 ಗ್ಯಾರಂಟಿ ಯೋಜನೆಗಳಿಗೆ ಹಣ ಹೊಂದಿಸಲು ಹೆಣಗಾಡುತ್ತಿರುವ ರಾಜ್ಯ ಕಾಂಗ್ರೆಸ್ ಸರ್ಕಾರ, ಬೆಲೆಗಳನ್ನು ಹೆಚ್ಚಳ ಮಾಡುವ ಮೂಲಕ ಬಡವರ ನೆಮ್ಮದಿ ಜೀವನವನ್ನು ಕಸಿದುಕೊಂಡಿದೆ. ಬಡವರ ವಿರೋಧಿ, ರೈತ ವಿರೋಧಿ ಸರ್ಕಾರ ಇದು, ನಮ್ಮ ದುಡ್ಡಲ್ಲಿ ಶಾಸಕರು, ಸಚಿವರು ವಿದೇಶಿ ಪ್ರವಾಸಕ್ಕೆ ಮಾಡುತ್ತಿದ್ದಾರೆ, ನಾಚಿಕೆಯಾಗಬೇಕು ಎಂದರು.

ನಮ್ಮ ಸಂಘಟನೆ ಬಲವಾಗಬೇಕು, ಪ್ರತಿಯೊಬ್ಬರೂ ಪಕ್ಷವನ್ನು ತಳಮಟ್ಟದಿಂದ ಗಟ್ಟಿಗೊಳಿಸಲು ಶ್ರಮಿಸಬೇಕು, ನಮ್ಮ ಕುಮಾರಣ್ಣ, ದೇವೇಗೌಡ ಅವರು, ನಿಖಿಲ್ ಕುಮಾರಸ್ವಾಮಿ ಕಾಲಿಗೆ ಚಕ್ರ ಕಟ್ಟಿಕೊಂಡು ಪ್ರವಾಸ ಮಾಡುತ್ತಿದ್ದು, ಕಾರ್ಯಕರ್ತರಿಗೆ ಶಕ್ತಿ ತುಂಬುವ ಕೆಲಸ ಮಾಡುತ್ತಿದ್ದಾರೆ ಎಂದರು.

ಜೆಡಿಎಸ್ ಎಸ್ಟಿ ಮೋರ್ಚಾ ರಾಜ್ಯಾಧ್ಯಕ್ಷ ರಾಜಾ ವೆಂಕಟಪ್ಪ ನಾಯಕ ಮಾತನಾಡಿ, ರೈತರ ಬಗ್ಗೆ ವಿಶೇಷ ಕಾಳಜಿ ಇರುವ ಪಕ್ಷ ನಮ್ಮದು, ನಮ್ಮ ಕುಮಾರಣ್ಣ ಹಾಗೂ ದೇವೇಗೌಡ ಅವರು ರಾಜ್ಯಕ್ಕೆ ತಮ್ಮದೇ ಆದ ಅನೇಕ ಕೊಡುಗೆಗಳನ್ನು ನೀಡಿದ್ದಾರೆ. ಕುಮಾರಣ್ಣ ಅವರು ಅವಧಿಯಲ್ಲಿ ರೈತರ 25 ಸಾವಿರ ಕೋಟಿ ಸಾಲ ಮನ್ನಾ ಮಾಡುವ ಮೂಲಕ ಇತಿಹಾಸ ಸೃಷ್ಟಿಸಿದ್ದಾರೆ. ಕಾರ್ಯಕರ್ತರೇ ಪಕ್ಷದ ಜೀವಾಳ, ಪ್ರತಿಯೊಬ್ಬ ನಮ್ಮೆಲ್ಲ ಕಾರ್ಯಕರ್ತರು ಹಗಲಿರುಳು ಶ್ರಮಿಸಬೇಕು.

2028ಕ್ಕೆ ನಮ್ಮ ಕುಮಾರಣ್ಣ ಅವರು ಮುಖ್ಯಮಂತ್ರಿಯಾಗಲಿದ್ದಾರೆ ಎಂದು ವಿಶ್ವಾಸ ವ್ಯಕ್ತಪಡಿಸಿದರು. ಯುವ ಘಟಕದ ರಾಜ್ಯ ಕಾರ್ಯದರ್ಶಿ ರಾಜೂ ನಾಯ್ಕ್, ರೈತ ಮೋರ್ಚಾ ಜಿಲ್ಲಾಧ್ಯಕ್ಷ ಲಕ್ಷ್ಮೀಕಾಂತ ರೆಡ್ಡಿ, ವಿಜಯನಗರ ಜಿಲ್ಲಾಧ್ಯಕ್ಷ ಮೃತ್ಯುಂಜಯ ಬಾದಾಮಿ, ತಾಲೂಕು ಅಧ್ಯಕ್ಷ ಮಲ್ಲಿಕಾರ್ಜುನ್, ಕೊಟ್ರೇಶ್ ಹೊಸಪೇಟೆ, ಸೋಮಪ್ಪ ಕುರೆಕೊಪ್ಪ, ಜಂಬುನಾಥ್ ಯಾದವ್, ಹೊನ್ನೂರು ಸ್ವಾಮಿ, ಮೀನಳ್ಳಿ ರಮೇಶ್, ಕಿರಣ್ ಕುಮಾರ್, ಮಹಿಳಾ ಘಟಕದ ಅಧ್ಯಕ್ಷೆ ಜಮಿಲಾ ಸೇರಿದಂತೆ ಇತರರಿದ್ದರು.

ನ್ಯಾಯವಾದಿ ಯಲ್ಲಗೌಡ ಅವರು ಸ್ವಾಗತಿಸಿದರು. ನಂತರ ನೂತನ ಪದಾಧಿಕಾರಿಗಳಿಗೆ ಆದೇಶ ಪತ್ರಗಳನ್ನು ವಿತರಿಸಿ, ಸನ್ಮಾನಿಸಿ ಗೌರವಿಸಲಾಯಿತು.

ಕುಡಿಯುವ ನೀರಿನ ಸಮಸ್ಯೆ ಬಗೆಹರಿಸಿ

ಕೂಡ್ಲಿಗಿ: ಪಟ್ಟಣದಲ್ಲಿ ಕಳೆದ ಒಂದು ವಾರದಿಂದ ಕುಡಿಯುವ ನೀರು ಸಮರ್ಪಕವಾಗಿ ಸರಬರಾಜು ತಲೆದೂರಿರುವ ಕುಡಿಯುವ ನೀರಿನ ಸಮಸ್ಯೆಯನ್ನು ಬಗೆಹರಿಸುವಂತೆ ಒತ್ತಾಯಿಸಿ ಶುಕ್ರವಾರ ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಹಸಿರು-ಸೇನೆ ಹುಚ್ಚವನಹಳ್ಳಿ ಮಂಜುನಾಥ ಬಣದಿಂದ ಪಪಂ ಮುಖ್ಯಾಧಿಕಾರಿಗೆ ಮನವಿ ಸಲ್ಲಿಸಲಾಯಿತು.

ತಾಲೂಕು ಉಪಾಧ್ಯಕ್ಷ ಎಂ.ಡಿ.ಫಯಾಜ್ ಮಾತನಾಡಿ, ಬೇಸಿಗೆ ಪ್ರಾರಂಭದಲ್ಲಿ ನೀರಿನ ಸಮಸ್ಯೆ ಉಂಟಾಗಿದೆ. ಪಟ್ಟಣದಲ್ಲಿ ಕಳೆದ ಒಂದು ವಾರದಿಂದ ಕುಡಿಯುವ ನೀರು ಸಮರ್ಪಕವಾಗಿ ಸರಬರಾಜು ಆಗುತ್ತಿಲ್ಲ, ಈ ಸಲ ಬೇಸಿಗೆ ಪ್ರಾರಂಭದಲ್ಲಿ ಕುಡಿಯುವ ನೀರಿನ ಸಮಸ್ಯೆಯಿಂದ ಪಟ್ಟಣದ ಜನರು ಬಹುತೇಕ ಅನಾನುಕೂಲವಾಗಿದೆ. ಪ್ರತಿದಿನ ಸಾರ್ವಜನಿಕರಿಗೆ ಕುಡಿಯಲು ಹಾಗೂ ಬಳಸಲು ನೀರು ಇಲ್ಲದಂತಾಗಿದೆ. ಅಲ್ಲದೆ ಕೆಲವೊಂದು ವಾರ್ಡ್‌ಗಳಲ್ಲಿ ನೀರು ಬಿಟ್ಟಿದ್ದು ಬೋರ್ ವೆಲ್‌ಗಳು ಕೆಟ್ಟು ಹೋಗಿದ್ದು ಬೇಸಿಗೆಯಲ್ಲಿ ಇನ್ನು ಹೆಚ್ಚಿನ ಸಮಸ್ಯೆ ಉಂಟಾಗುತ್ತದೆ. ಅದು ಕುಡಿಯಲು ಯೋಗ್ಯವಿಲ್ಲದ ನೀರಾಗಿದೆ ಎಂದರು.

ಕೂಡ್ಲಿಗಿಯ ಬಹುತೇಕ ವಾರ್ಡ್‌ಗಳಲ್ಲಿ ಕೂಡಲೇ ಅಧಿಕಾರಿಗಳು ಪರ್ಯಾಯ ವ್ಯವಸ್ಥೆ ಮಾಡಿ ಕುಡಿಯುವ ನೀರಿನ ಸರಬರಾಜಿನಲ್ಲಿ ಯಾವುದೇ ವ್ಯತ್ಯಯ ಉಂಟಾಗದಂತೆ ಸಮರ್ಪಕವಾಗಿ ಬಿಡಬೇಕು. ಇದರಿಂದ ಕುಡಿವ ನೀರಿಗಾಗಿ ಕೆಲಸ ಕಾರ್ಯವನ್ನು ಬಿಟ್ಟು ಬಿಂದಿಗೆ ಹಿಡಿದು ಅಲೆಯುವಂತಹ ಪರಿಸ್ಥಿತಿ ನಿರ್ಮಾಣವಾಗಿದೆ. ನೀರಿನ ಸಮಸ್ಯೆಯಿಂದ ಮಕ್ಕಳನ್ನು ನಿಗದಿತ ಸಮಯಕ್ಕೆ ಶಾಲೆಗೆ ಕಳುಹಿಸಲು ತೊಡಕಾಗಿ ಪರಿಣಮಿಸಿದೆ. ದೈನಂದಿನ ಕೆಲಸಗಳಿಗೆ ನೀರಿಲ್ಲದೆ ಜನರು ದುಬಾರಿ ಬೆಲೆ ತೆತ್ತು ಖಾಸಗಿ ಟ್ಯಾಂಕರ್ ನೀರನ್ನು ಅವಲಂಬಿಸುವಂತಾಗಿದೆ. ಇದರಿಂದ ಪಟ್ಟಣದ ಕೆಲ ವಾರ್ಡುಗಳಲ್ಲಿ ಕುಡಿವ ನೀರಿನದ್ದೇ ಒಂದು ದೊಡ್ಡ ಸಮಸ್ಯೆಯಾಗಿ ಪರಿಣಮಿಸಿದೆ. ಆದ್ದರಿಂದ ಸಂಬಂಧಪಟ್ಟ ಪಪಂ ಅಧಿಕಾರಿಗಳು ಈ ಬಗ್ಗೆ ಗಮನಹರಿಸಿ ಪಟ್ಟಣಕ್ಕೆ ಸಮರ್ಪಕವಾಗಿ ಕುಡಿಯುವ ನೀರು ಪೂರೈಸಬೇಕು. ಇಲ್ಲವಾದಲ್ಲಿ ಪ್ರತಿಭಟನೆಯನ್ನು ಕೈಬಿಡುವುದಿಲ್ಲ ಎಂದು ಎಚ್ಚರಿಸಿದರು.

ರೈತ ಸಂಘದ ತಾಲೂಕು ಅಧ್ಯಕ್ಷ ಬಾಣದ ಮಾರುತಿ, ತಾಲೂಕು ಕಾರ್ಯದರ್ಶಿ ಜಿ.ವಿಜಯಕುಮಾರ್, ಗ್ರಾಮ ಘಟಕ ಉಪಾಧ್ಯಕ್ಷ ಕೋಟೆಶ್, ಶಾರುಖ್ ಅಹಮದ್, ಅಲ್ತಾಫ್ ಹುಸೇನ್, ಮೊಹಮ್ಮದ್ ಕೈಫ್, ಜಮೀರ್, ಯಾಸಿನ್, ನಂದೀಶ್, ದಿಲೀಪ್ ಕುಮಾರ್ ಮತ್ತಿತರರಿದ್ದರು.



ಸಾಮಾಜಿಕ ಕಳಕಳಿ ಕಣ್ಮರೆ: ಪಿಎಸ್ಸೈ ಸುಪ್ರೀತ್

ಕುರುಗೋಡು: ಪ್ರಸಕ್ತವಾಗಿ ಆಧುನಿಕ ಕಂಪ್ಯೂಟರ್ ಸೆಲ್ ಫೋನ್ ಯುಗದಲ್ಲಿ ಯುವಕರು ಅದರಲ್ಲಿಯೇ ಮಗ್ನರಾಗಿದ್ದಾರೆ. ಒತ್ತಡದ ಬದುಕು ಸಾಗಿಸುತ್ತಿದ್ದಾರೆ. ಸಾಮಾಜಿಕ ಕಳಕಳಿ ಹಾಗೂ ಮಾನವೀಯ ಮೌಲ್ಯ ಎಂಬುದು ಕಣ್ಮರೆಯಾಗುತ್ತಿದೆ ಪಿಎಸ್ಸೈ ಸುಪ್ರೀತ್ ವಿರುಪಾಕ್ಷಪ್ಪ ಹೇಳಿದರು.

ತಾಲೂಕಿನ ಎಚ್.ವೀರಾಪುರ ಗ್ರಾಮದ ತ್ರಿವಿಧ ದಾಸೋಹ ಮೂರ್ತಿ ಶ್ರೀಶರಣಬಸವೇಶ್ವರರ ಪುರಾಣ ಪ್ರವಚನ 50ನೇ ವರ್ಷದ ಸುವರ್ಣ ಮಹೋತ್ಸವ ಸಮಾರಂಭದಲ್ಲಿ ಪಾಲ್ಗೊಂಡು ಅವರು ಮಾತನಾಡಿದರು. ಪುರಾಣ ಕೇಳಲು ದೇವಸ್ಥಾನಕ್ಕೆ ಬರದವರು ಮನೆಯಲ್ಲಿ ದಾರಾವಾಹಿ ನೋಡುತ್ತ ಕಾಲ ಕಳೆಯುತ್ತಾರೆ ಇಂತಹ ಧಾರ್ಮಿಕ ಕಾರ್ಯಕ್ರಮಗಳಲ್ಲಿ ಹೆಚ್ಚು ಭಾಗವಹಿಸಿನೆಮ್ಮದಿಜೀವನ ಶೈಲಿ ಬೆಳೆಸಿಕೊಳ್ಳಬಹುದು ಎಂದರು.

ಇಂದಿನ ಯುವಕರು ಕೆಟ್ಟ ಚಟಗಳಿಗೆ ಬಲಿಯಾಗಿತಮ್ಮನೆಮ್ಮದಿಹಾಳುಮಾಡಿಕೊಳ್ಳುವ ಜೊತೆಗೆ ಕುಟುಂಬದ ಶಾಂತಿ ನೆಮ್ಮದಿ ಕಸಿಯುತ್ತಿದ್ದಾರೆ ಹೆಣ್ಣು ಮಕ್ಕಳ ಬಗ್ಗೆ ಬಹಳ ಜಾಗೃತಿ ತೆಗೆದುಕೊಳ್ಳುವ ಪೋಷಕರು ಗಂಡು ಮಕ್ಕಳ ಬಗ್ಗೆ ಗಮನ ಹರಿಸುವುದಿಲ್ಲ ಇದು ಅಪಾಯಕಾರಿ, ಯಾವುದೇ ಹೆಣ್ಣು ಮಕ್ಕಳು ಫೋನ್ ನಲ್ಲಿ ನಗುತಾ ಬಹಳ ಹೊತ್ತು ಮಾತನಾಡಿದರೆ ಗಮನ ಹರಿಸಿ ವರ್ಷಕ್ಕೆ ನೂರಕ್ಕೂ ಅಧಿಕ ಯುವಕ, ಯುವತಿಯರ ದೂರುಗಳು ನಮ್ಮ ಠಾಣೆಗೆ ಬರುತ್ತಿವೆ.

ನಂತರ ಬುಕ್ಕಸಾಗರದ ಕರೀಸಿದ್ದೇಶ್ವರ ಸ್ವಾಮೀಜಿ ಮಾತನಾಡಿ, ದೇವಸ್ಥಾನ ಮಂದಿರಗಳಲ್ಲಿ ನಡೆಯುವ ಧಾರ್ಮಿಕ ಕಾರ್ಯಕ್ರಮಗಳಲ್ಲಿ ಮಕ್ಕಳನ್ನು ಕರೆ ತರುವ ಮೂಲಕ ಉತ್ತಮ ನಾಗರಿಕರನ್ನಾಗಿ ರೂಪಿಸಬಹುದು ಎಂದು ಹೇಳಿದರು.

ಪೂರ್ವದಲ್ಲಿ ಮಹಿಳೆಯಿಂದ ಶ್ರೀಶರಣಬಸವೇಶ್ವರರ ತೊಟ್ಟಿಲು ಕಾರ್ಯಕ್ರಮ ಜರುಗಿತು. ಶರಣಬಸವೇಶ್ವರ ಸ್ವಾಮಿ ಸೇವೆ ಭಕ್ತರು, ಎಮ್ಮಿಗನೂರು, ಚಿಟಿಗಿನಹಾಳ್, ಹಾವಿನಹಾಳ್, ಮುದಟ್ಟನೂರು, ಕಲ್ಲಕಂಭ, ಕೆರೆಕೆರೆ, ಮಣ್ಣೂರು, ಸೂಗೂರು, ಗುತ್ತಿಗನೂರು, ನೆಲ್ಲುಡಿ, ಗ್ರಾಮದ ಇದ್ದರು.



ಜೆಇಇ ಪರೀಕ್ಷೆಯಲ್ಲಿ ಟಿಎಂಎಇಎಸ್ ಕಾಲೇಜು ಸಾಧನೆ

ವಿಜಯನಗರ: ಐಐಟಿ ಸೇರಿದಂತೆ ದೇಶದ ಪ್ರತಿಷ್ಠಿತ ತಾಂತ್ರಿಕ ಕಾಲೇಜುಗಳಲ್ಲಿ ಪ್ರವೇಶ ಪಡೆಯಲು ನೀಡುವ ಜೆಇಇ ಮೇನ್ಸ್ ಪರೀಕ್ಷೆಯಲ್ಲಿ ಟಿಎಂಎಇಎಸ್ ಪಿಯು ಕಾಲೇಜಿನ ವಿದ್ಯಾರ್ಥಿಗಳು ಗಮನಾರ್ಹ ಸಾಧನೆ ಮಾಡಿದ್ದಾರೆ ಎಂದು ಸಂಸ್ಥೆಯ ನಿರ್ದೇಶಕ ಟಿ.ಎಂ.ಚಂದ್ರಶೇಖರ ಹೇಳಿದರು.

ಹೊಸಪೇಟೆಯ ಪತ್ರಿಕಾ ಭವನದಲ್ಲಿ ಶುಕ್ರವಾರ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದಅವರು, ಸೈಯದ್ ಮೊಹಮ್ಮದ್ ಅಫ್ತಾಬ್ ಶೇ.94.86, ಆಕಾಶರಾಜ್ ಪುರೋಹಿತ್ ಶೇ.94.38, ಸುಹಾಸ್ ಎನ್.ಎಂ ಶೇ.93.49, ಭಾಗ್ಯಶ್ರೀ ಕಂದಕೂರ ಶೇ.91.82, ಕುಮಾರ ಸ್ಯಾಮುಯಲ್ ಎಫ್.ಕೆ. ಶೇ.89.51 ಹಾಗೂ ಜೀವಿತಾ ಬಿ. ಶೇ.77 ಅಂಕಗಳೊಂದಿಗೆ ಉತ್ತಮ ಸಾಧನೆ ಮಾಡಿದ್ದಾರೆ.

ಕೋವಿಡ್ ಸಂದರ್ಭದಲ್ಲಿ ವಿಷಮ ಸ್ಥಿತಿಯಲ್ಲಿ ಕಾಲೇಜು ಆರಂಭವಾಗಿದ್ದರೂ, ಪ್ರತೀ ವರ್ಷ ಒಂದಲ್ಲಾ ಒಂದು ಸಾಧನೆ ತೋರುತ್ತಿದ್ದಾರೆ. ಕಳೆದ ವರ್ಷ ಪಿಯುಸಿ ವಿಜ್ಞಾನದಲ್ಲಿ ಕಾಲೇಜಿನ ವಿದ್ಯಾರ್ಥಿ ರಾಜ್ಯಕ್ಕೆ 6ನೇ ರ‍್ಯಾಂಕ್ ಪಡೆದಿದ್ದರು. ಈ ಭಾರಿ ಜೆಇಇ ಪರೀಕ್ಷೆ ಎದುರಿಸಿದ ಕಾಲೇಜಿನಿಂದ 16 ವಿದ್ಯಾರ್ಥಿಗಳ ಪೈಕಿ 11 ಜನ ಅರ್ಹತೆ ಪಡೆದೊದ್ದಾರೆ ಎಂಬುದು ಹೆಮ್ಮೆಯ ಸಂಗತಿ ಎಂದು ಹರ್ಷ ವ್ಯಕ್ತಪಡಿಸಿದರು.



ಪ್ರಾಚಾರ್ಯ ನರಸಿಂಗ್‌ರಾಜ್, ಉಪನ್ಯಾಸಕ ಮಂಜುನಾಥ ಹಾಗೂ ಜೆಇಇಯಲ್ಲಿ ಸಾಧನೆಗೈದ ವಿದ್ಯಾರ್ಥಿಗಳಾದ ಅಫ್ತಾಬ್, ಸುಹಾಸ್, ಪ್ರತಿಭಾ ಉಪಸ್ಥಿತರಿದ್ದರು.

ಶಿವಾಜಿ ಮಹಾರಾಜರ ಜೀವನದ ಮೌಲ್ಯ ಅಳವಡಿಸಿಕೊಳ್ಳಿ

ಹೂವಿನಹಡಗಲಿ: ತಾಲೂಕಿನ ಅಂಗೂರು ಗ್ರಾಮದ ಯುವಕರು ಹಾಗೂ ಗ್ರಾಮಸ್ಥರು ಸೇರಿಕೊಂಡು ಛತ್ರಪತಿ ಶಿವಾಜಿ ಅವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಹಾಗೂ ಪೂಜೆ ಸಲ್ಲಿಸಿ ಶಿವಾಜಿ ಮಹಾರಾಜರ ಜಯಂತಿಯನ್ನು ಅದ್ಧೂರಿಯಾಗಿ ಆಚರಿಸಿದರು.

ಈ ವೇಳೆ ಯುವಕ ಪ್ರದೀಪ್ ಮಾತನಾಡಿ, ಛತ್ರಪತಿ ಶಿವಾಜಿ ಮಹಾರಾಜರು ಎಂದರೆ ಶಕ್ತಿಯ ಸಂಕೇತ ಹಾಗೂ ಸ್ವಾಭಿಮಾನದ ಪ್ರತೀಕ. ಶಿವಾಜಿ ಅವರು ಅಪ್ಪಟ ದೇಶಪ್ರೇಮಿ ಆಗಿದ್ದರು. ದೇಶ ಕಂಡ ಸಂಘಟನಾಕಾರ. ತಾಯಿ ಜೀಜಾಬಾಯಿಯ ಪ್ರೇರಣೆಯಿಂದ ಶಿವಾಜಿ ಮಹಾರಾಜರು ಸಂಸ್ಕಾರವಂತರಾಗಿ ಆದರ್ಶ ಜೀವನ ನಡೆಸಲು ಕಾರಣವಾಯಿತು. ಜೀಜಾಬಾಯಿ ಅವರ ಸ್ವರಾಜ್ಯದ ಕನಸು ನನಸು ಮಾಡಿದ ಅಪ್ರತಿಮ ವೀರ ಶಿವಾಜಿ ಮಹಾರಾಜರು. ಶಿವಾಜಿ ಮಹಾರಾಜರ ಜೀವನ ಮೌಲ್ಯಗಳನ್ನು ಪ್ರತಿಯೊಬ್ಬರೂ ಜೀವನದಲ್ಲಿ ಅಳವಡಿಸಿಕೊಳ್ಳಬೇಕು ಎಂದ ತಿಳಿಸಿದರು.

ಓಂಕಾರಿ ಜಗದೀಶ್ ಮಾತನಾಡಿ, ಶಿವಾಜಿಯುವರ ತತ್ವಗಳು ಒಂದೇ ಸಮುದಾಯಕ್ಕೆ ಅಲ್ಲದೇ ಎಲ್ಲ ಸಮುದಾಯಕ್ಕೆ ಸೀಮಿತವಾಗಿವೆ. ಶಿವಾಜಿ ಮಹಾರಾಜರು ತಮ್ಮ 13 ನೇ ವರ್ಷದಲ್ಲಿ ಸ್ವರಾಜ್ಯ ಸ್ಥಾಪನೆಯ ಕನಸು ಕಂಡು ಮಾವಳಿಯರ, ರೈತರು, ಗುಡ್ಡಗಾಡು ಜನರ ಸಂಟನೆಯೊಂದಿಗೆ ಮೊಲರ ವಶದಲ್ಲಿರುವ ಕೋಟೆಗಳನ್ನು ವಶಪಡಿಸಿಕೊಂಡರು ಎಂದರು. ಅವರು ಸಮರ್ಥ ಆಡಳಿತಗಾರ ಆಗಿದ್ದರು. ಗೆರಿಲ್ಲಾ ಯುದ್ಧನೀತಿ ಅನುಸರಿಸುತ್ತಿದ್ದರು. 1674ರಲ್ಲಿ ರಾಯಗಡದಲ್ಲಿ ಶಿವಾಜಿಯವರಿಗೆ ಪಟ್ಟಾಭಿಷೇಕವಾಯಿತು. ಅವರು 'ಛತ್ರಪತಿ' ಎಂದು ಘೋಷಿಸಿಕೊಂಡರು ಎಂದು ಶಿವಾಜಿ ಮಹಾರಾಜರ ಶೌರ್ಯ ಪರಾಕ್ರಮ ಸೇರಿದಂತೆ ಜೀವನ ಸಾಧನೆ ಕುರಿತು ಅವರು ವಿವರಿಸಿದರು.



ಜೋಳದ ರಾಶಿ ಗುಡ್ಡದ ಅಭಿವೃದ್ಧಿ ಅಪೂರ್ಣ

ವಿಜಯನಗರ: ಹೊಸಪೇಟೆ ನಗರದಲ್ಲಿರುವ ಐತಿಹಾಸಿಕ ಹಾಗೂ ಅತಿ ಎತ್ತರದ ಪ್ರದೇಶವೆಂದೇ ಗುರುತಿಸಲ್ಪಡುವ ಜೋಳದ ರಾಶಿ ಗುಡ್ಡದ ಅಭಿವೃದ್ಧಿ ಕಾರ್ಯಗಳು ಕುಂಠಿತವಾಗಿದ್ದು ಮಾಜಿ ಸಚಿವ ಆನಂದ್ ಸಿಂಗ್ ಅವರ ಮಹತ್ವಾಕಾಂಕ್ಷೆಯ ಯೋಜನೆಯಾಗಿದ್ದ ಜೋಳದ ರಾಶಿ ಗುಡ್ಡದ ಅಭಿವೃದ್ಧಿ ಹಾಗೂ 'ಧ್ಯಾನ ಮಂದಿರ' ನಿರ್ವಹಣೆಯಿಲ್ಲದೆ ಅಕ್ಷರಶಃ ಅವನತಿಯ ಹಾದಿ ಹಿಡಿದಿದೆ.

ಸಮೀಪದ ಹಂಪಿ ಪ್ರವಾಸಕ್ಕೆ ಬರುವ ದೇಶ-ವಿದೇಶಿಗರನ್ನು ಸೆಳೆಯುವುದು ಹಾಗೂ ಸ್ಥಳೀಯರಿಗೆ ವಿಶ್ವದರ್ಜೆ ಧ್ಯಾನ ಮಂದಿರದ ಸೌಲಭ್ಯ ಕಲ್ಪಿಸುವ ಕನಸಿನೊಂದಿಗೆ ಹಿಂದಿನ ಬಿಜೆಪಿ ಸರ್ಕಾರದಲ್ಲಿ ಪ್ರವಾಸೋದ್ಯಮ ಸಚಿವರಾಗಿದ್ದ ಆನಂದ್ ಸಿಂಗ್ ಕೋಟ್ಯಂತರ ರೂ. ಅನುದಾನ ವಿನಿಯೋಗಿಸಿ ಜೋಳದರಾಶಿ ಗುಡ್ಡದ ಅಭಿವೃದ್ಧಿಗೆ ಚಾಲನೆ ನೀಡಿದ್ದರು. ಬೆಟ್ಟದ ಮೇಲೆ ಶ್ರೀಕೃಷ್ಣದೇವರಾಯ ಪ್ರತಿಮೆ ಸ್ಥಾಪಿಸಲು ಉದ್ದೇಶಿಸಿದ್ದರು. ಆದರೆ, ಬದಲಾದ ಸರ್ಕಾರ ಹಾಗೂ ಸರ್ಕಾರದ ಆದ್ಯತೆಗಳಿಂದಾಗಿ ಜೋಳದರಾಶಿ ಗುಡ್ಡದ ಅಭಿವೃದ್ಧಿ ಕಾರ್ಯ ಅರ್ಧಕ್ಕೆ ಸ್ಥಗಿತಗೊಂಡಿದೆ.



ಪರಿಣಾಮ ಜೋಳದ ರಾಶಿಗುಡ್ಡದ ಮೇಲಿನ ಧ್ಯಾನ ಮಂದಿರದ ಮೇಲೆ ಕಳ್ಳರ ಕಣ್ಣು ಬಿದ್ದಿದೆ. ಕೆಲ ದಿನಗಳ ಹಿಂದೆ ಕಿಡಿಗೇಡಿಗಳು ಮಂದಿರದ ಕಿಟಕಿ ಗಾಜುಗಳನ್ನು ಉಡಿಗಟ್ಟಿದ್ದರೆ, ಇದೀಗ ಮಂದಿರಕ್ಕೆ ಅಳವಡಿಸಿರುವ ಲಕ್ಷಾಂತರ ರೂ. ಮೌಲ್ಯದ ಕಟ್ಟಿಗೆಯ ಕಿಟಕಿ, ಬಾಗಿಲುಗಳನ್ನು ಹೊತ್ತೊಯ್ಯುವ ಸಂಚು ನಡೆದಿದೆ. ಬೆಟ್ಟದ ಮೇಲೆ ವಾಯುವಿಹಾರ ನಡೆಸುವವರ ಪ್ರಕಾರ ಕಳೆದೊಂದು ವಾರದಿಂದ ಬಾಗಿಲು, ಕಿಟಕಿಗಳ ಸ್ಕ್ರೂಗಳನ್ನು ಒಂದೊಂದಾಗಿ ಬಿಚ್ಚಲಾಗುತ್ತಿದೆ. ಎರಡು ದಿನಗಳ ಹಿಂದೆ ಅವು ನೆಲದ ಮೇಲೆ ಬಿದ್ದಿರುವಂತೆ ಇಡಲಾಗಿದೆ. ಸಂಬಂಧಿಸಿದವರ ತಕ್ಷಣ ಎಚ್ಚೆತ್ತುಕೊಳ್ಳದಿದ್ದರೆ, ದುಬಾರಿ ಬೆಲೆಯ ಕಿಟಕಿ, ಬಾಗಿಲುಗಳು ಕಳ್ಳರ ಪಾಲಾಗುತ್ತವೆ ಎಂಬುದು ಅವರ ಆತಂಕ.

ನಗರದ ಪ್ರಮುಖ ಪ್ರವಾಸಿ ಕೇಂದ್ರವಾಗಬೇಕಿದ್ದ ಜೋಳದರಾಶಿ ಗುಡ್ಡ ಅಭಿವೃದ್ಧಿ ಕಾರ್ಯ ಅಪೂರ್ಣಗೊಂಡಿದೆ. ಈ ಬಗ್ಗೆ ಆಸಕ್ತಿ ವಹಿಸಬೇಕಿದ್ದ ಸ್ಥಳೀಯ ಶಾಸಕ ಎಚ್.ಆರ್.ಗವಿಯಪ್ಪ ನಿರ್ಲಕ್ಷ್ಯ ತೋರಿದ್ದಾರೆ ಎಂಬುದು ಸಾರ್ವಜನಿಕರ ಆಕ್ರೋಶ.

ಶರಣ ಗಾದಿಲಿಂಗೇಶ್ವರ ರಥೋತ್ಸವ: ಶಾಂತಿ ಸಭೆ

ಗಾದಿಗನೂರು: ಫೆ.22ರಂದು ನಡೆಯುವ ಶ್ರೀಶರಣ ಗಾದಿಲಿಂಗೇಶ್ವರ ಮತ್ತು ಶ್ರೀಗುರು ರೇವಣಸಿದ್ದೇಶ್ವರ ರಥೋತ್ಸವ ಮತ್ತು ಬಯಲು ನಾಟಕ ನಿಮಿತ್ತ ಗಾದಿಲಿಂಗೇಶ್ವರ ದೇವಸ್ಥಾನದಲ್ಲಿ ಶುಕ್ರವಾರ ಸಂಜೆ 6 ಗಂಟೆಗೆ ಶಾಂತಿ ಸಭೆಯನ್ನು ಏರ್ಪಡಿಸಲಾಗಿತ್ತು. ಈ ಸಭೆಗೆ ಆರಕ್ಷಕ ನಿರೀಕ್ಷರು ಮತ್ತು ಆರಕ್ಷಕ ಉಪ ನಿರೀಕ್ಷಕ ಹೊಸಪೇಟೆ ಗ್ರಾಮೀಣ ಠಾಣೆಗೆ ಆಗಮಿಸಿ, ಜಾತ್ರೆ ಆಚರಿಸುವ ಬಗ್ಗೆ ಕೆಲವು ಸಲಹೆ ಸೂಚನೆಗಳನ್ನು ನೀಡಿದರು.

ಬಳ್ಳಾರಿಯಲ್ಲಿ ನಡೆದ ಬ್ಯಾನರ್ ಗಲಾಟೆ ಹಿನ್ನಲೆಯಲ್ಲಿ ಬ್ಯಾನರ್ ಅಳವಡಿಕೆಗೆ ಮೇಲಾಧಿಕಾರಿಗಳು ಅವಕಾಶ ಕೊಟ್ಟಿವುದಿಲ್ಲ ಸಹಕರಿಸಲು ಕೋರಿದೆ. ರಥೋತ್ಸವ ಸಮಯದಲ್ಲಿ ಕಿರಿ ಕಿರಿ ಉಂಟು ಮಾಡುವ ಪೀಪಿಗಳನ್ನು ಊದದಂತೆ ನಿಷೇಧಿಸಲಾಗಿದೆ. ಅಭಿಮಾನಿಗಳ ಪೋಟೊ ಹಿಡಿದು ಕುಣಿಯುವ ಹಾಗಿಲ್ಲ, ರಥೋತ್ಸವ ನಡೆಯುವ ಮೈದಾನದಲ್ಲಿ ಯಾವುದೇ ವಾಹನ / ದಬ್ಬೊ ಬಂಡಿ ಇತ್ಯಾದಿ ನಿಲ್ಲಿಸದಂತೆ ಸೂಚಿಸಲಾಗಿದೆ. ಬಯಲಾಟ ಸಂದರ್ಭದಲ್ಲಿ ಪಟಾಕಿಗಳನ್ನು ಬಿಡದಂತೆ ಸೂಚಿಸಲಾಯಿತು. ಇದೆ ವಿಷಯಕ್ಕೆ, ಕೊಂಡನಾಯಕನಹಳ್ಳಿಯಲ್ಲಿ ಬಣವೆ ಸುಟ್ಟು, ಅಲ್ಲದೆ ಒಬ್ಬ ಮಹಿಳೆಗೆ ಸುಟ್ಟಗಾಯಳಾಗಿದ್ದು ತಾಜಾ ಉದಾಹರಣೆ ಯಾಗಿದೆ ಎಂದು ತಿಳಿಸಿದರು. ಶಾಂತಿ ಸಭೆಯಲ್ಲಿ ಊರಿನ ಮುಖಂಡರು ಭಕ್ತಾದಿಗಳು ಭಾಗವಹಿಸಿದರು.



ಪ್ರವಾಸೋದ್ಯಮ ಅಭಿವೃದ್ಧಿಗೆ ಒತ್ತು: ಡಿಸಿ

ಬಳ್ಳಾರಿ: ಜಿಲ್ಲೆಯ ಐತಿಹಾಸಿಕ ಹಾಗೂ ಸಾಂಪ್ರದಾಯಿಕ ಮಹತ್ವ ಹೊಂದಿರುವ ಪ್ರಸಿದ್ಧ ಪ್ರವಾಸಿ ತಾಣವಾದ ಸಂಗನಕಲ್ಲಿನ ಹಿರೇಗುಡ್ಡಕ್ಕೆ ಜಿಲ್ಲಾಧಿಕಾರಿ ನಾಗೇಂದ್ರ ಪ್ರಸಾದ್ ಕೆ. ಅವರು ಚಾರಣ ಮಾಡಿ, ಪರಿಶೀಲನೆ ನಡೆಸಿದರು.

ಈ ವೇಳೆ ಮಾತನಾಡಿ, ಸಂಗನಕಲ್ಲು ಬಳ್ಳಾರಿ ಜಿಲ್ಲೆಯ ಅತ್ಯಂತ ಪ್ರಮುಖ ಐತಿಹಾಸಿಕ ತಾಣಗಳಲ್ಲಿ ಒಂದಾಗಿದ್ದು, ಸಾವಿರಾರು ವರ್ಷಗಳಿಗೂ ಹೆಚ್ಚು ಹಿಂದೆ ಈ ಕಲ್ಲಿನ ಬೆಟ್ಟಗಳಲ್ಲಿ ವಾಸಿಸುತ್ತಿದ್ದ ನವಶಿಲಾಯುಗದ ಮಾನವರ ಜೀವನದ ಅಪೂರ್ವ ನೋಟಗಳನ್ನು ನೀಡುತ್ತದೆ. ಇದರ ಅಭಿವೃದ್ಧಿಗೆ ಹೆಚ್ಚಿನ ಆದ್ಯತೆ ನೀಡಲಾಗುವುದು ಎಂದು ಹೇಳಿದರು.

ಈ ತಾಣವನ್ನು ಪ್ರವಾಸಿ ಸ್ನೇಹಿಯಾಗಿಸಲು ಮತ್ತು ಇಲ್ಲಿನ ಐತಿಹಾಸಿಕ ಪರಂಪರೆಯನ್ನು ಸಂರಕ್ಷಿಸಲು ಅಗತ್ಯ ಕ್ರಮಗಳನ್ನು ಕೈಗೊಳ್ಳುವ ಬಗ್ಗೆ ಚರ್ಚಿಸಲಾಗುವುದು ಎಂದು ತಿಳಿಸಿದ ಜಿಲ್ಲಾಧಿಕಾರಿಯವರು, ಇಲ್ಲಿ ನಡೆದಿರುವ ವೈಜ್ಞಾನಿಕ ಸಂಶೋಧನೆಗಳು ನಮ್ಮ ಪೂರ್ವಜರ ಜೀವನಶೈಲಿ ಮತ್ತು ಇತಿಹಾಸದ ಮೇಲೆ ಬೆಳಕು ಚೆಲ್ಲುವಲ್ಲಿ ಪ್ರಮುಖ ಪಾತ್ರ ವಹಿಸಿವೆ ಎಂದು ಅಭಿಪ್ರಾಯಪಟ್ಟರು. ಈ ಪ್ರದೇಶದಲ್ಲಿ ಸಂಶೋಧನೆ ನಡೆಸಿ ಇಲ್ಲಿನ ಐತಿಹಾಸಿಕ ಮಹತ್ವವನ್ನು ಪರಿಚಯಿಸಿದ ಇತಿಹಾಸ ತಜ್ಞ ಪ್ರೊ.ಕೋರಿಶೆಟ್ಟರ್, ಸದಸ್ಯ ಅಹಿರಾಜ್ ಮತ್ತು ಅವರ ತಂಡದ ಶ್ರಮವನ್ನು ಡಿಸಿ ನಾಗೇಂದ್ರ ಪ್ರಸಾದ್ ಕೆ. ಅವರು ಶ್ಲಾಘಿಸಿದರು.



ಮೂಲ ಸೌಕರ್ಯಗಳ ಸದ್ಬಳಕೆ ಮತ್ತು ಮುಂದಿನ ಅಭಿವೃದ್ಧಿ ಕಾರ್ಯಗಳ ಕುರಿತು ನೀಲಿನಕ್ಷೆ ಸಿದ್ಧಪಡಿಸಲಾಗುವುದು. ಈ ಕ್ರಮಗಳಿಂದಾಗಿ ಸ್ಥಳೀಯ ಪ್ರವಾಸೋದ್ಯಮಕ್ಕೆ ಹೆಚ್ಚಿನ ಬಲ ಸಿಗಲಿದ್ದು, ಹೆಚ್ಚಿನ ಸಂಖ್ಯೆಯಲ್ಲಿ ಪ್ರವಾಸಿಗರು ಆಗಮಿಸುವಂತೆ ಹಾಗೂ ಇದಕ್ಕೆ ಅಗತ್ಯ ಸೌಲಭ್ಯ, ಸಹಕಾರ ಜಿಲ್ಲಾಡಳಿತದಿಂದ ಒದಗಿಸಲಾಗುವುದು.

■ ನಾಗೇಂದ್ರ ಪ್ರಸಾದ್ ಕೆ., ಜಿಲ್ಲಾಧಿಕಾರಿ

ಜಿಪಂ ಸಿಇಒ ಮಹಮ್ಮದ್ ಹಾರೀಸ್ ಸುಮೇರ್, ಎಡಿಸಿ ಮಹಮ್ಮದ್ ಝುಬೇರ್ ಎನ್., ಸಹಾಯಕ ಆಯುಕ್ತ ರಾಜೇಶ್ ಎಚ್.ಡಿ., ಪ್ರವಾಸೋದ್ಯಮ ಇಲಾಖೆಯ ಉಪನಿರ್ದೇಶಕ ಪ್ರಭುಲಿಂಗ ತಳಕೇರಿ, ಸಿಬ್ಬಂದಿ ಶ್ರೀಹರಿ ಸೇರಿದಂತೆ ಇತರರಿದ್ದರು.